ಅಧ್ಯಾಯ ೧

ಅಧಿಕಾರಪ್ರವೃತ್ತಿ

ಮನುಷ್ಯ ಮತ್ತು ಪ್ರಾಣಿಗಳ ನಡುವೆ ಅನೇಕ ವ್ಯತ್ಯಾಸಗಳಿವೆ: ಅವುಗಳಲ್ಲಿ ಕೆಲವು ಬೌದ್ಧಿಕವಾದವುಗಳು, ಮತ್ತೆ ಕೆಲವು ಭಾವನಾತ್ಮಕವಾದವು. ಭಾವನಾತ್ಮಕವಾದವುಗಳಲ್ಲಿ ಅತ್ಯಂತ ಪ್ರಮುಖವಾದ ವ್ಯತ್ಯಾಸವೆಂದರೆ, ಮನುಷ್ಯನ ಕೆಲವು ಬಯಕೆಗಳಿಗೆ ಕೊನೆಯೆಂಬುದೇ ಇರುವುದಿಲ್ಲ, ಅವುಗಳನ್ನು ಸಂಪೂರ್ಣ ತೃಪ್ತಿಕರವಾಗಿ ಪೂರೈಸಿಕೊಳ್ಳಲು ಸಾಧ್ಯವೇ ಇಲ್ಲ; ಆದರೆ ಈ ಪರಿಸ್ಥಿತಿ ಪ್ರಾಣಿಗಳಲ್ಲಿರುವುದಿಲ್ಲ. ಒಂದು ಹೆಬ್ಬಾವು ತನ್ನ ಆಹಾರವನ್ನು ತಿಂದು ಮುಗಿಸಿದ ಮೇಲೆ, ಮತ್ತೆ ಹಸಿವಾಗುವವರೆಗೂ ನಿದ್ದೆ ಮಾಡುತ್ತಿರುತ್ತದೆ. ಇತರ ಪ್ರಾಣಿಗಳು ಹೀಗೇ ಮಾಡದಿರಲು ಕಾರಣ, ಅವುಗಳಿಗೆ ಸಿಕ್ಕುವ ಆಹಾರವು ಸಾಕಾಗುವಷ್ಟು ಇರುವುದಿಲ್ಲ, ಅಥವಾ ಅವುಗಳನ್ನು ಶತ್ರುಭಯ ಕಾಡುತ್ತಿರುತ್ತದೆ. ಕೆಲವು ಅಪವಾದಗಳನ್ನು ಹೊರತುಪಡಿಸಿದರೆ, ಅವುಗಳ ಚಟುವಟಿಕೆಗಳೆಲ್ಲ ಉಳಿವಿನ ಇಲ್ಲವೆ ಸಂತಾನಾಭಿವೃದ್ಧಿಯಂತಹ ಮೂಲಭೂತ ಆವಶ್ಯಕತೆಗಳಿಂದ ಪ್ರೇರಿತವಾದವು; ಇವುಗಳ ಪೂರೈಕೆಯನ್ನು ಮೀರಿ ಅವುಗಳ ಬಯಕೆ ಮುಂದುವರಿಯುವುದಿಲ್ಲ.

ಆದರೆ ಮನುಷ್ಯರ ವಿಷಯ ಹಾಗಲ್ಲ. ಮಾನವರಲ್ಲಿನ ಬಹುಸಂಖ್ಯಾತ ವ್ಯಕ್ತಿಗಳು ಮೂಲಭೂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಾಡುವ ಶ್ರಮದುಡಿಮೆಯಿಂದ ಬಳಲಿ ತಮ್ಮ ಶಕ್ತಿಯನ್ನೆಲ್ಲ ಕಳೆದುಕೊಂಡು ಇತರ ಚಟುವಟಿಕೆಗಳಲ್ಲಿ ತೊಡಗುವ ಸ್ಥಿತಿಯಲ್ಲಿರುವುದಿಲ್ಲ ಎಂಬುದು ನಿಜವಾದರೂ, ತಮ್ಮ ಇಂತಹ ಆವಶ್ಯಕತೆಗಳನ್ನು ಪೂರೈಸಿಕೊಂಡಿರುವವರು, ಆಯಿತಲ್ಲ ಎಂದು ಸುಮ್ಮನೆ ಕೂತಿರುವುದಿಲ್ಲ. ಅಥೆನ್ಸ್ ಮೇಲೆ ಸರ್ಕ್ಸಸ್ ದಾಳಿ ಮಾಡಿದಾಗ ಅವನಿಗೆ ಉಣ್ಣಲಿಕ್ಕೆ ಉಡಲಿಕ್ಕಾಗಲೀ ಹೆಂಡತಿಯರಿಗಾಗಲೀ ಕೊರತೆಯಿರಲಿಲ್ಲ. ಟ್ರಿನಿಟಿಯ ಫೆಲೋ ಆದ ಕ್ಷಣದಿಂದ ನ್ಯೂಟನ್‌ಗೆ ಜೀವನ ಸೌಲಭ್ಯಗಳು ದೊರಕುವ ಭರವಸೆಯುಂಟಾಯಿತು; ಆದರೆ ಇದಾದ ನಂತರವೇ ಅವನು 'ಪ್ರಿನ್ಸಿಪಿಯ' ಬರೆದದ್ದು. ಸಂತ ಫ್ರಾನ್ಸಿಸ್ ಆಗಲೀ ಇಗ್ನೇಷಿಯಸ್ ಲಯೋಲ ಆಗಲೀ ತಮ್ಮ ಬಯಕೆಗಳಿಂದ ಮುಕ್ತರಾಗಲು ಹೊಸ ಪಾದ್ರಿಶ್ರೇಣಿಗಳನ್ನು ಸ್ಥಾಪಿಸುವ ಆವಶ್ಯಕತೆಯಿರಲಿಲ್ಲ. ಇವರೆಲ್ಲ ಗಣ್ಯ ವ್ಯಕ್ತಿಗಳು, ಆದರೆ

ಇವರಲ್ಲಿನ ಲಕ್ಷಣಗಳನ್ನು, ಬೇರೆ ಬೇರೆ ಪ್ರಮಾಣದಲ್ಲಿ ಎಂದಿಟ್ಟುಕೊಳ್ಳಿ, ಅತ್ಯಂತ ಕಡಿಮೆ ಸಂಖ್ಯೆಯ ಸೋಮಾರಿಗಳಲ್ಲಿಯೂ ಕಾಣಬಹುದು. ಶ್ರೀಮತಿ 'ಎ'ಗೆ ತನ್ನ ಗಂಡ ವ್ಯಾಪಾರದಲ್ಲಿ ಗೆಲವು ಗಳಿಸುವ ಬಗ್ಗೆ ಅನುಮಾನವಿರದಿದ್ದರೂ, ತಾನು ಅನಾಥಾಲಯ ಸೇರಬೇಕಾದ ಪರಿಸ್ಥಿತಿ ಬಂದೀತೆಂಬ ಭಯವಿರದಿದ್ದರೂ, ಶ್ರೀಮತಿ 'ಬಿ'ಗಿಂತ ಚೆನ್ನಾಗಿ ಬಟ್ಟೆಬರೆ ಹಾಕಿಕೊಳ್ಳುತ್ತಾಳೆ. ಹೀಗೆ ಮಾಡುವಾಗ ಕಡಿಮೆ ಬಟ್ಟೆ ಹಾಕಿಕೊಂಡು ಶೀತವುಂಟಾಗಿ ನ್ಯುಮೋನಿಯ ಬಂದೀತೆಂಬ ಅಳುಕೂ ಆಕೆಯನ್ನು ಕಾಡುವುದಿಲ್ಲ. 'ಎ' ಏನಾದರೂ ಸಂಸತ್ತಿಗೆ ಚುನಾಯಿತನಾದರೆ ಅಥವಾ ಲಾರ್ಡ್ ಪದವಿ ಪಡೆದರೆ ಗಂಡಹೆಂಡತಿಯರಿಬ್ಬರಿಗೂ ತುಂಬ ಸಂತಸವುಂಟಾಗುತ್ತದೆ. ಹಗಲುಗನಸುಗಳಲ್ಲಿ ವೈಭವಕ್ಕೆ ಮಿತಿಯೇ ಇರುವುದಿಲ್ಲ; ಅವುಗಳಲ್ಲಿ ಯಾವುದಾದರೂ ಸಾಧ್ಯ ಅನ್ನಿಸಿದರೆ, ಅದನ್ನು ಪಡೆಯಲು ಸರ್ವ ಪ್ರಯತ್ನಗಳನ್ನು ಮಾಡುವುದು ಸಾಮಾನ್ಯ.

ಪ್ರಾಥಮಿಕ ಆವಶ್ಯಕತೆಗಳು ಪೂರ್ಣಗೊಂಡ ನಂತರ ಮಾನವರನ್ನು ನಿರಂತರವಾಗಿ ಕ್ರಿಯಾಶೀಲರನ್ನಾಗಿ ಮುನ್ನಡೆಸುವ ಶಕ್ತಿಯೆಂದರೆ ಕಲ್ಪನಾಶಕ್ತಿ.

"ಈಗ ನಾನು ಸಾಯಬೇಕಾಗಿ ಬಂದರೆ
ನನಗೆ ಅತೀವ ಆನಂದವೇ ಆಗುತ್ತದೆ; ಏಕೆಂದರೆ
ನನ್ನ ಆತ್ಮವೀಗ ತೃಪ್ತಿಯಿಂದ ತುಂಬಿದೆ,
ಮುಂದೆ ಇಂತಹ ಮತ್ತೊಂದು ಕ್ಷಣ ಬರಲಾರದು"

ಎಂಬಂತಹ ಭಾವನೆಯ ಕ್ಷಣ ನಮಗೆ ಬಹುತೇಕ ಬರಲಾರದು. ನಮ್ಮ ಅಪೂರ್ವ ಸುಖದ ಗಳಿಗೆಗಳಲ್ಲಿ, ಒಥೆಲೊನಂತೆ, ಸಾವಿಗೆ ಹಾರೈಸುವುದು ನಮಗೂ ಸಹಜವೇ; ಯಾಕಂದರೆ, ತೃಪ್ತಿ ಹೆಚ್ಚು ಕಾಲ ಉಳಿಯದೆಂಬ ಅರಿವು ನಮಗಿರುತ್ತದೆ. ಸುಖವನ್ನು ಶಾಶ್ವತಗೊಳಿಸುವುದು ಮಾನವರಿಗೆ ಅಸಾಧ್ಯ; ದೇವರಿಗೆ ಮಾತ್ರ ಸಂಪೂರ್ಣ ಆನಂದ ದೊರೆಯಬಹುದೇನೋ. ಯಾಕಂದರೆ, ಅವನದು 'ಸರ್ವಶಕ್ತಿ ಮತ್ತು ವೈಭವಗಳಿಂದ ಕೂಡಿದ ಸಾಮ್ರಾಜ್ಯ'. ಇಹದ ಸಾಮ್ರಾಜ್ಯಗಳಿಗೆ ಇತರ ಸಾಮ್ರಾಜ್ಯಗಳೇ ಮಿತಿಯೊಡ್ಡುತ್ತವೆ; ಇಹದ ಸಾಮರ್ಥ್ಯಕ್ಕೆ ಸಾವು ಕಡಿವಾಣ ಹಾಕುತ್ತದೆ; ನಾವು ಪಿರಮಿಡ್ಡುಗಳನ್ನು ನಿರ್ಮಿಸಿದರೂ, ನಮ್ಮನ್ನು 'ಅಮೃತಕಾವ್ಯಕ್ಕೆ ಅರ್ಪಿಸಿ'ಕೊಂಡಿದ್ದರೂ, ಅವೆಲ್ಲ ಕಾಲಾನುಕ್ರಮದಲ್ಲಿ ಮಸುಕಾಗಿಬಿಡುವಂತಹವು. ಸ್ವಲ್ಪವೇ ಸಾಮರ್ಥ್ಯ ಮತ್ತು ವೈಭವಗಳಿರುವವರಿಗೆ ಇನ್ನೊಂದಷ್ಟು ಹೆಚ್ಚು ದೊರೆತರೆ ಸಾಕು ಅನ್ನಿಸಬಹುದು; ಆದರೆ ಅದು ಸುಳ್ಳು. ಇಂಥ ಆಸೆಗಳಿಗೆ ಮಿತಿಯೇ

ಇರುವುದಿಲ್ಲ; ಅವುಗಳಿಗೆ ಮಿತಿ ಎಂಬುದಿದ್ದರೆ ಅನಂತನಾದ ದೇವರಲ್ಲಿ ಮಾತ್ರವೇ!

ಪ್ರಾಣಿಗಳಿಗೆ ಜೀವಿಸುವುದು ಮತ್ತು ಸಂತಾನಾಭಿವೃದ್ಧಿ ಇಷ್ಟು ಸಾಕು; ಮನುಷ್ಯನಾದರೋ ವಿಸ್ತರಣೆಗೊಳ್ಳುವ ಬಯಕೆಯವನು; ಅಂಥ ಬಯಕೆಗಳು ಅವನ ಕಲ್ಪನಾಶಕ್ತಿ ಕಾರ್ಯಸಾಧ್ಯವೆಂದು ತೋರಿಸುವುದಕ್ಕೆ ಸೀಮಿತವಾಗಿರುತ್ತವೆ. ಪ್ರತಿಯೊಬ್ಬನಿಗೂ ಸಾಧ್ಯವಾದರೆ ದೇವರೇ ಆಗಿಬಿಡುವ ಹಂಬಲ; ಕೆಲವರಿಗೆ ಅಸಾಧ್ಯವಾದುದನ್ನು ಒಪ್ಪಿಕೊಳ್ಳುವುದೂ ಕಷ್ಟಕರವೇ. ಅವರು ಮಿಲ್ಟನ್‌ನ ಸೇಟನ್‌ನಂತಹವರು; ಅವರಲ್ಲಿ ಉದಾತ್ತತೆ ಹಾಗೂ ನಾಸ್ತಿಕತೆಗಳು ಮೇಳೈಸಿರುತ್ತವೆ. ನಾಸ್ತಿಕತೆ ಎಂದರೆ ಶಾಸ್ತ್ರಸಮ್ಮತವಾದ ನಂಬಿಕೆಗಳನ್ನು ಹೊಂದಿಲ್ಲದಿರುವುದು ಎಂದು ನಾನು ಹೇಳುತ್ತಿರುವ ಅರ್ಥ; ಅಂದರೆ ಮಾನವನ ಸಾಮರ್ಥ್ಯಕ್ಕೆ ಮಿತಿಗಳಿವೆ ಎಂಬುದನ್ನು ಒಪ್ಪದ ಮನಸ್ಸು. ಉದಾತ್ತತೆ ಹಾಗೂ ನಾಸ್ತಿಕತೆಗಳ ಈ ದ್ವೈತ್ಯ ಮೇಳೈಸುವಿಕೆಯು ಮಹಾ ಜಯಶಾಲಿಗಳಲ್ಲಿ ಎದ್ದು ಕಾಣುವ ಗುಣ; ಆದರೆ ಅದರ ಅಲ್ಪ ಪ್ರಮಾಣವನ್ನು ಬೇರೆಲ್ಲ ಮನುಷ್ಯರಲ್ಲಿಯೂ ಕಾಣಬಹುದು. ಇದರಿಂದಾಗಿಯೇ ಸಾಮಾಜಿಕ ಸಹಕಾರ ಕಷ್ಟಕರವಾಗುವುದು; ಪ್ರತಿಯೊಬ್ಬ ವ್ಯಕ್ತಿಯೂ ಸಹಕಾರದ ಸ್ವರೂಪವನ್ನು ದೇವರು-ಭಕ್ತರ ಸಂಬಂಧದಂತೆ ಕಲ್ಪಿಸಿಕೊಳ್ಳುತ್ತಾನೆ, ಅಲ್ಲದೆ ತನ್ನನ್ನು ದೇವರ ಸ್ಥಾನದಲ್ಲಿ ಇರಿಸಿಕೊಳ್ಳುತ್ತಾನೆ. ಅದರಿಂದಾಗಿಯೇ ಸ್ಪರ್ಧೆ, ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ, ಸರ್ಕಾರದ ಆವಶ್ಯಕತೆ ಹಾಗೂ ಅಸ್ಥಿರತೆ ಮತ್ತು ಆಗಾಗ ನಡೆಯುವ ಹಿಂಸೆಗಳಿಂದ ನಡೆಯುವ ಪ್ರತಿಭಟನೆಯ ಮನೋಭಾವ – ಇವೆಲ್ಲ ಉಂಟಾಗುವುದು. ಇದರಿಂದಾಗಿಯೇ ನೈತಿಕತೆ ಮತ್ತು ಅಹಮಹಮಿಕೆಯ ಸ್ವೇಚ್ಛ ನಡವಳಿಕೆಗಳ ಮೇಲೆ ನಿಯಂತ್ರಣವೂ ಆವಶ್ಯಕವಾಗುವುದು.

ಮನುಷ್ಯನ ಅಸಂಖ್ಯ ಬಯಕೆಗಳಲ್ಲಿ ಮುಖ್ಯವಾದವುಗಳೆಂದರೆ ಅಧಿಕಾರದಾಹ ಮತ್ತು ವೈಭವದ ಆಕಾಂಕ್ಷೆ. ಇವೆರಡೂ ಹತ್ತಿರವಾದವಾದರೂ ಒಂದೇ ಬಗೆಯವಲ್ಲ; ಪ್ರಧಾನಮಂತ್ರಿಗೆ ವೈಭವಕ್ಕಿಂತ ಹೆಚ್ಚು ಅಧಿಕಾರವಿರುತ್ತದೆ, ಅದೇ ರಾಜನದು ಹೆಚ್ಚು ವೈಭವ, ಕಡಿಮೆ ಅಧಿಕಾರ. ಆದರೆ ವೈಭವವನ್ನು ಗಳಿಸುವ ಅತ್ಯಂತ ಸುಲಭದ ಮಾರ್ಗವೆಂದರೆ ಅಧಿಕಾರವನ್ನು ಹಿಡಿಯುವುದು ಎನ್ನುವುದು ಸತ್ಯ. ಸಾರ್ವಜನಿಕವಾಗಿ ಕಾರ್ಯಶೀಲರಾಗುವವರಲ್ಲಿ ಇದು ಮತ್ತಷ್ಟು ನಿಜ. ಹೀಗಾಗಿ ವೈಭವವನ್ನು ಪಡೆಯಲು ಏನೇನು ಕಾರ್ಯತಂತ್ರಗಳನ್ನು ರೂಪಿಸಬಹುದೋ ಅವುಗಳನ್ನೇ ಅಧಿಕಾರವನ್ನು ಹಿಡಿಯಲೂ

ಅನುಸರಿಸಬೇಕಾಗುತ್ತದೆ. ಈ ಎರಡೂ ಬಯಕೆಗಳನ್ನು ವಾಸ್ತವ ದೃಷ್ಟಿಯಿಂದ ಒಂದೇ ಎಂದೂ ಪರಿಗಣಿಸಬಹುದು.

ಆರ್ಥಿಕ ಹಿತಾಸಕ್ತಿಯೇ ಸಮಾಜವಿಜ್ಞಾನಗಳ ಮೂಲಭೂತ ಪ್ರೇರಕ ಶಕ್ತಿ ಎಂದು ಸನಾತನ ಅರ್ಥಶಾಸ್ತ್ರಜ್ಞರು ತಪ್ಪು ತಿಳಿದರು; ಮಾರ್ಕ್ಸ್ ಕೂಡ ಈ ಅಂಶದಲ್ಲಿ ಅವರ ಅಭಿಪ್ರಾಯವನ್ನು ಅನುಮೋದಿಸಿದ. ಆವಶ್ಯಕ ಸಾಮಗ್ರಿಗಳ ಬಯಕೆಯು, ಅಧಿಕಾರ–ವೈಭವಗಳಿಂದ ಬೇರೆ ಮಾಡಿದಾಗ, ಮಿತಗೊಳ್ಳುತ್ತದೆ, ಸಾಧಾರಣ ಸಾಮರ್ಥ್ಯದಿಂದಲೇ ಅದನ್ನು ಪೂರ್ತಿ ಈಡೇರಿಸಬಹುದು. ನಿಜವಾಗಿಯೂ ದುಬಾರಿಯಾದ ಬಯಕೆಗಳು ಜೀವನ ಸೌಲಭ್ಯಗಳಿಂದ ಪ್ರೇರಿತವಾದವಲ್ಲ. ಭ್ರಷ್ಟತೆಯಿಂದ ನಲುಗಿ ಹೋಗಿರುವ ಶಾಸನಸಭೆಗಳು, ಪರಿಣತರಿಂದ ಆಯ್ದ ಶ್ರೇಷ್ಠಚಿತ್ರಕಾರರ ಕೃತಿಗಳಿರುವ ಖಾಸಗಿ ಗ್ಯಾಲರಿ ಇವುಗಳಲ್ಲಿ ಸ್ಥಾನ ಪಡೆಯಲು ಆಸೆಪಡುವುದು ಅಧಿಕಾರ–ವೈಭವಗಳ ಹಂಬಲದಿಂದಾಗಿಯೇ ಹೊರತು ಇವು ಹಾಯಾಗಿ ಕುಳಿತುಕೊಳ್ಳಬಹುದಾದ ಸ್ಥಳಗಳು ಎಂಬ ಕಾರಣದಿಂದಲ್ಲ. ಒಂದು ಮಟ್ಟದ ಸೌಲಭ್ಯ ದೊರೆತ ಮೇಲೆ ವ್ಯಕ್ತಿಗಳಾಗಲೀ ಸಮುದಾಯಗಳಾಗಲೀ ಪಡೆಯ ಬಯಸುವುದು ಅಧಿಕಾರವನ್ನೇ ಹೊರತು ಹಣವನ್ನಲ್ಲ. ಅಧಿಕಾರವನ್ನು ಹಿಡಿಯಲು ಹಣವನ್ನು ಗಳಿಸಬಹುದು, ಅಥವಾ ಹೆಚ್ಚಿನ ಅಧಿಕಾರ ಪಡೆಯಲು ಸ್ವಲ್ಪ ಹಣವನ್ನು ಬಿಡಬಹುದು; ಆದರೆ ಎರಡೂ ಸಂದರ್ಭಗಳಲ್ಲಿ ಅವರ ಮೂಲ ಉದ್ದೇಶ ಆರ್ಥಿಕವಾದುದಲ್ಲ.

ಸನಾತನ ಅಥವಾ ಮಾರ್ಕ್ಸಿಸ್ಟ್ ಅರ್ಥಶಾಸ್ತ್ರಗಳ ಈ ತಪ್ಪು ತಿಳಿವಳಿಕೆ ಕೇವಲ ಸೈದ್ಧಾಂತಿಕವಾದುದಲ್ಲ, ಇದಕ್ಕೂ ಹೆಚ್ಚಿನ ವಾಸ್ತವಿಕ ಪ್ರಾಮುಖ್ಯವಿದೆ. ಇದರಿಂದಾಗಿ ಈಚಿನ ಹಲವಾರು ಪ್ರಮುಖ ಸಂಗತಿಗಳನ್ನು ತಪ್ಪಾಗಿ ಅರ್ಥವಿಸಲೂ ಕಾರಣವಾಗಿದೆ. ಅಧಿಕಾರದ ಬಯಕೆಯೇ ಪ್ರಮುಖ ಸಾಮಾಜಿಕ ಚಟುಚಟಿಕೆಗಳ ಪ್ರೇರಕಶಕ್ತಿ ಎಂಬುದನ್ನು ಮನವರಿಕೆಮಾಡಿಕೊಂಡಾಗ ಮಾತ್ರವೇ ಹಿಂದಿನ ಅಥವಾ ಇಂದಿನ ಇತಿಹಾಸವನ್ನು ಸರಿಯಾಗಿ ವ್ಯಾಖ್ಯಾನಿಸಲು ಸಾಧ್ಯವಾಗುವುದು.

ಈ ಗ್ರಂಥದುದ್ದಕ್ಕೂ ನಾನು ಪ್ರತಿಪಾದಿಸಲು ಪ್ರಯತ್ನಿಸುವುದು, ಭೌತಶಾಸ್ತ್ರದಲ್ಲಿನ ಬುನಾದಿ *'ಶಕ್ತಿ'* (ಜುಟಿಜೂಥಿ) ಯ ಪರಿಕಲ್ಪನೆ ಹೇಗೆಯೋ ಹಾಗೆ, *'ಅಧಿಕಾರ'* (ಕುಡಿಜೂ) ವೇ ಸಮಾಜವಿಜ್ಞಾನಗಳ ಮೂಲ ಪರಿಕಲ್ಪನೆ ಎಂಬ ಅಂಶವನ್ನು. ಶಕ್ತಿಗಿರುವಂತೆಯೇ ಅಧಿಕಾರಕ್ಕೂ ಅನೇಕ ರೂಪಗಳಿವೆ; ಹಣ, ಶಸ್ತ್ರಾಸ್ತ್ರಗಳು, ನಾಗರಿಕ ವಿಧಾಯಕತೆ, ಅಭಿಪ್ರಾಯವನ್ನು ಬದಲಿಸಬಲ್ಲ ಪ್ರಭಾವ ಹೀಗೆ. ಇವುಗಳಲ್ಲಿ ಯಾವುದೂ ಮತ್ತೊಂದಕ್ಕೆ ಅಧೀನವಲ್ಲ;

ಹಾಗೆಯೇ ಯಾವುದೇ ಒಂದರಿಂದ ಬೇರೆಯವುಗಳು ಸಾಧಿತವಾದವಲ್ಲ. ಅಂತೆಯೇ, ಯಾವುದೋ ಒಂದು ರೂಪದ ಅಧಿಕಾರವನ್ನು, ನಿದರ್ಶನಕ್ಕೆ ಹಣ, ಇತರ ರೂಪಗಳಿಂದ ದೂರವಿಟ್ಟು ಪರಿಗಣಿಸುವುದು ಆಂಶಿಕವಾಗಿ ಸರಿಯಾಗಬಹುದೇ ಹೊರತು ಪೂರ್ಣವಾಗಿ ಅಲ್ಲ; ಒಂದು ಬಗೆಯ ಶಕ್ತಿಯ ಬಗ್ಗೆ ಮಾತ್ರವೇ ಅಧ್ಯಯನ ಮಾಡುವುದು ಹೇಗೆ ದೋಷಪೂರ್ಣವಾಗುವುದೋ ಹಾಗೆ. ಹೀಗಾಗಿ ಇತರ ರೂಪಗಳನ್ನೂ ಪರಿಗಣಿಸುವುದು ಆವಶ್ಯಕ. ಸೈನ್ಯಾಧಿಕಾರದಿಂದಲೋ ಅಭಿಪ್ರಾಯದ ಮೇಲೆ ಪ್ರಭಾವ ಬೀರುವುದರಿಂದಲೋ ಹಣವನ್ನು ಗಳಿಸಬಹುದು; ಹಾಗೆಯೇ ಈ ಎರಡನ್ನೂ ಹಣದ ಬೆಂಬಲದಿಂದ ಪಡೆಯುವುದೂ ಸಾಧ್ಯ. ಸಾಮಾಜಿಕ ಚಲನಶೀಲತೆಯ ನಿಯಮಗಳನ್ನು ಅಧಿಕಾರ ಪರಿಕಲ್ಪನೆಯ ನೆರವಿನಿಂದ ಮಾತ್ರ ಮಂಡಿಸಲು ಸಾಧ್ಯ, ಅಧಿಕಾರದ ಯಾವುದೋ ಬಿಡಿ ರೂಪದಿಂದ ಅಲ್ಲ. ಹಿಂದೆ ಸೈನ್ಯಾಧಿಕಾರವನ್ನು ಬೇರೆಲ್ಲದರಿಂದ ಹೊರತುಪಡಿಸಿ ನೋಡಲಾಗುತ್ತಿತ್ತು; ಇದರಿಂದಾಗಿ ಯುದ್ಧದ ಗೆಲವು ಅಥವಾ ಸೋಲು ಸೇನಾಧಿಪತಿಗಳ ಸಾಮರ್ಥ್ಯವನ್ನವಲಂಬಿಸುವಂತೆ ತೋರುತ್ತಿತ್ತು. ಆದರೆ ಈಗ, ಆರ್ಥಿಕ ಅಧಿಕಾರದಿಂಲೇ ಮಿಕ್ಕೆಲ್ಲ ಬಗೆಗಳು ಸಾಧಿತವಾಗುತ್ತವೆ ಎಂದು ಪರಿಗಣಿಸುವುದು ಸಾಮಾನ್ಯವಾಗಿದೆ. ಇದನ್ನು ನಾನು ಪ್ರಶ್ನಿಸುತ್ತೇನೆ; ಸೇನಾ ಇತಿಹಾಸಕಾರರ ತಪ್ಪಿನಷ್ಟೇ ಇದು ದೊಡ್ಡದು. ಹಾಗೆಯೇ, ಕೆಲವರು ಪ್ರಚಾರವೇ ಅಧಿಕಾರದ ಮೂಲ ರೂಪ ಎಂದು ಭಾವಿಸುವವರಿದ್ದಾರೆ. ಇದೇನೂ ಹೊಸ ವಿಚಾರವಲ್ಲ; 'ಸತ್ಯ ದೊಡ್ಡದು, ಅದಕ್ಕೆ ಗೆಲವು ನಿಶ್ಚಿತ' ಅಥವಾ 'ಚರ್ಚ್‌ನ ಬೀಜದಲ್ಲಿ ಹುತಾತ್ಮರ ರಕ್ತ ಸೇರಿಹೋಗಿದೆ' ಎಂಬಂತಹ ಹೇಳಿಕೆಗಳಲ್ಲಿ ಈ ಅಭಿಪ್ರಾಯ ಹುದುಗಿದೆ. ಸೇನಾದೃಷ್ಟಿ ಅಥವಾ ಆರ್ಥಿಕದೃಷ್ಟಿಯಲ್ಲಿರುವುದೂ ಅಷ್ಟೇ ಸತ್ಯ ಅಥವಾ ಸುಳ್ಳು. ಪ್ರಚಾರದಿಂದ ಸುಮಾರು ಏಕಾಭಿಪ್ರಾಯವನ್ನು ಮೂಡಿಸಲು ಸಾಧ್ಯವಾಗುವುದಾದರೆ, ಅದರಿಂದ ದುರ್ದಮನೀಯ ಅಧಿಕಾರ ಉಂಟಾಗುತ್ತದೆ; ಯಾರಲ್ಲಿ ಸೈನ್ಯಾಧಿಕಾರ ಅಥವಾ ಆರ್ಥಿಕ ಬಲವಿರುವುದೋ ಅವರು ಅದನ್ನು ಬೇಕಾದರೆ ಪ್ರಚಾರಕ್ಕೆ ಬಳಸಿಕೊಳ್ಳಬಹುದು. ಭೌತಶಾಸ್ತ್ರದ ಹೋಲಿಕೆಯನ್ನು ಮುಂದುವರೆಸುವುದಾದರೆ, ಅಧಿಕಾರವು ಶಕ್ತಿಯಂತೆಯೇ ಒಂದು ರೂಪದಿಂದ ಮತ್ತೊಂದು ರೂಪವನ್ನು ಧರಿಸುತ್ತ ನಿರಂತರವಾಗಿ ಸಾಗುತ್ತದೆ. ಇಂಥ ರೂಪಾಂತರ ನಿಯಮಗಳನ್ನು ಗುರುತಿಸುವುದು ಸಮಾಜವಿಜ್ಞಾನಗಳ ಕೆಲಸವಾಗಬೇಕು. ಹೀಗಾಗಿ ಒಂದು ರೂಪದ ಅಧಿಕಾರವನ್ನು ಮಾತ್ರ ಬೇರ್ಪಡಿಸಿ ನೋಡುವುದು ವಾಸ್ತವಿಕ ಮಹತ್ವದ ದೃಷ್ಟಿಯಿಂದ ತಪ್ಪಾಗುತ್ತದೆ; ಈಗಿನ ಸನ್ನಿವೇಶದಲ್ಲಿ ಆರ್ಥಿಕ ಅಧಿಕಾರವನ್ನು ಬೇರ್ಪಡಿಸಿ ನೋಡುವುದು ಅಂತಹ ಒಂದು ತಪ್ಪು.

ಅಧಿಕಾರದ ವಿಷಯದಲ್ಲಿ ವಿವಿಧ ಸಮಾಜಗಳಲ್ಲಿ ವ್ಯತ್ಯಾಸಗಳಿವೆ. ಮೊದಲಿಗೆ, ಅವುಗಳಲ್ಲಿನ ವ್ಯಕ್ತಿಗಳು ಹಾಗೂ ಸಂಘಟನೆಗಳ ಅಧಿಕಾರದ ನಡುವಣ ವ್ಯತ್ಯಾಸ; ಉದಾಹರಣೆಗೆ, ಈಗ ಸಂಘಟನೆಯು ಬಲಗೊಂಡಿರುವುದರಿಂದಾಗಿ ಸರ್ಕಾರದ ಅಧಿಕಾರ ಹೆಚ್ಚಾಗಿರುವುದು ಸ್ಪಷ್ಟ. ಮತ್ತೆ, ಅತ್ಯಂತ ಪ್ರಭಾವಶಾಲೀ ಸಂಘಟನೆ ಯಾವುದು ಎಂಬ ವಿಷಯದಲ್ಲಿಯೂ ಅವುಗಳಲ್ಲಿ ವ್ಯತ್ಯಾಸವಿದೆ; ಸೈನ್ಯಪ್ರಭುತ್ವ, ಪುರೋಹಿತಪ್ರಭುತ್ವ ಶ್ರೀಮಂತಪ್ರಭುತ್ವ ಇವುಗಳಲ್ಲಿನ ಭಿನ್ನತೆ ಬಹಳ. ಮೂರನೆಯದಾಗಿ, ಅಧಿಕಾರವನ್ನು ಹಿಡಿಯುವ ಮಾರ್ಗಗಳಲ್ಲಿನ ವ್ಯತ್ಯಾಸ; ಆನುವಂಶಿಕ ರಾಜಪ್ರಭುತ್ವದಿಂದ ಒಂದು ಬಗೆಯ ಗಣ್ಯರು ನಿರ್ಮಾಣಗೊಂಡರೆ, ದೊಡ್ಡ ಧರ್ಮಗುರುವೆನಿಸಿಕೊಳ್ಳಲು ಬೇಕಾಗುವ ಅರ್ಹತೆಗಳು ಮತ್ತೊಂದು ಬಗೆಯ ವ್ಯಕ್ತಿಗಳನ್ನು ಸೃಷ್ಟಿಸುತ್ತವೆ, ಪ್ರಜಾಪ್ರಭುತ್ವದಲ್ಲಿನ ರೀತಿಯೇ ಬೇರೆ, ಯುದ್ಧವು ನಿರ್ಮಿಸುವ ವ್ಯಕ್ತಿ ಮತ್ತೊಂದೇ ಬಗೆ.

ಅಧಿಕಾರಗ್ರಹಣವು ಸಾಧ್ಯವಾಗುವ ವ್ಯಕ್ತಿಗಳ ಸಂಖ್ಯೆಯನ್ನು ಮಿತಗೊಳಿಸುವ ಶ್ರೀಮಂತಪ್ರಭುತ್ವ ಅಥವಾ ಆನುವಂಶಿಕ ರಾಜಪ್ರಭುತ್ವದಂತಹ ಸಾಮಾಜಿಕ ಸಂಸ್ಥೆಗಳು ಇಲ್ಲದಿರುವ ಕಡೆಗಳಲ್ಲಿ ಅಧಿಕಾರಕ್ಕಾಗಿ ಹಂಬಲಿಸುವ ಜನರು ಸಾಮಾನ್ಯವಾಗಿ ಅದನ್ನು ಪಡೆಯಬಲ್ಲವರೇ ಆಗಿರುತ್ತಾರೆ. ಅಂದರೆ ಎಲ್ಲಿ ಅಧಿಕಾರವನ್ನು ಯಾರು ಬೇಕಾದರೂ ಗಳಿಸುವ ಅವಕಾಶವಿರುತ್ತದೋ ಅಲ್ಲಿ ಅಧಿಕಾರಯುಕ್ತ ಹುದ್ದೆಗಳನ್ನು ಪಡೆಯುವವರು ಸಾಮಾನ್ಯವಾಗಿ ಅಧಿಕಾರದಾಹವುಳ್ಳ ವ್ಯಕ್ತಿಗಳಿಗಿಂತ ಭಿನ್ನರಾಗಿರುತ್ತಾರೆ. ಅಧಿಕಾರಲಾಲಸೆಯು ಮನುಷ್ಯನ ಪ್ರಮುಖ ಪ್ರೇರಕಶಕ್ತಿಯಾದರೂ ಅದು ಕಂಡುಬರುವುದು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾಗಿ; ಅಲ್ಲದೆ ಅದನ್ನು ಸೌಲಭ್ಯದ ಆಸೆ, ಸುಖಲಾಲಸೆ, ಕೆಲವು ವೇಳೆ ಒಪ್ಪಿಗೆಯಾಗುವ ಬಯಕೆ ಮುಂತಾದ ಇನ್ನಿತರ ಪ್ರೇರಣೆಗಳು ಮಿತಿಗೊಳಿಸಿರುತ್ತವೆ. ಪುಕ್ಕಲರಲ್ಲಿ ಅದು ನಾಯಕತ್ವಕ್ಕೆ ತನ್ನನ್ನು ಅರ್ಪಿಸಿಕೊಳ್ಳುವ ಮನೋಭಾವವಾಗಿ ಮಾರುವೇಷದಲ್ಲಿರುತ್ತದೆ; ಇದು ದಾರ್ಷ್ಟೀಕರ ಅಧಿಕಾರ ಹಂಬಲದ ವ್ಯಾಪ್ತಿಯನ್ನು ಹೆಚ್ಚುಮಾಡುತ್ತದೆ. ಯಾರ ಅಧಿಕಾರದ ಬಯಕೆಯು ತೀವ್ರವಾಗಿಲ್ಲವೋ ಅವರು ಘಟನೆಗಳ ಸ್ವರೂಪದ ಮೇಲೆ ಹೆಚ್ಚು ಪ್ರಭಾವ ಬೀರಲಾರರು. ಸಾಮಾಜಿಕ ಬದಲಾವಣೆಯನ್ನುಂಟುಮಾಡುವವರು ಸಾಮಾನ್ಯವಾಗಿ ಅಂತಹ ಹಂಬಲವುಳ್ಳವರೇ. ಹೀಗಾಗಿ ಅಧಿಕಾರದ ಹಂಬಲವು ಪ್ರಾಸಂಗಿಕವಾಗಿ ಮುಖ್ಯನಾಗುವ ವ್ಯಕ್ತಿಗಳ ಲಕ್ಷಣವಾಗಿರುತ್ತದೆ. ಆದರೆ ಅದನ್ನು ಏಕೈಕ

ಪ್ರೇರಣೆಯೆಂದು ಭಾವಿಸುವುದು ದೊಡ್ಡ ತಪ್ಪು. ಆದರೆ ಈ ತಪ್ಪು ಸಾಮಾಜಿಕವಿಜ್ಞಾನಗಳಲ್ಲಿ ಪ್ರಾಸಂಗಿಕ ನಿಯಮಗಳನ್ನು ಗುರುತಿಸುವಾಗ ಆಗುವ ತಪ್ಪಿನಂತೆ ತೀರ ತಪ್ಪುದಾರಿಗೆ ಒಯ್ಯಲಾರದು. ಏಕೆಂದರೆ, ಅಧಿಕಾರಲಾಲಸೆ ಎಂಬುದು ಬದಲಾವಣೆಗಳನ್ನು ತರುವುದರ ಹಿಂದಿರುವ ಪ್ರಮುಖ ಪ್ರೇರಕಶಕ್ತಿ; ಅದನ್ನು ಸಮಾಜವಿಜ್ಞಾನವು ಅಭ್ಯಸಿಸಬೇಕು.

ಸಾಮಾಜಿಕ ಚಾಲಕ ನಿಯಮಗಳು ಯಾವುವೆಂದರೆ, ಅದರ ವಿವಿಧ ರೂಪಗಳ ಮೂಲಕ ಮಾತ್ರವೇ ನಿರ್ವಚಿಸಬಹುದಾದ ಅಧಿಕಾರ ಎಂದು ನಾನು ಪ್ರತಿಪಾದಿಸತ್ತೇನೆ. ಈ ನಿಯಮಗಳನ್ನು ಗುರುತಿಸುವ ದಿಸೆಯಲ್ಲಿ ಅದರ ವಿವಿಧ ಬಗೆಗಳನ್ನು ನಾವು ಮೊದಲು ವರ್ಗೀಕರಿಸಬೇಕಾಗುತ್ತದೆ; ಆನಂತರ, ಇತರ ಮಾನವರ ಮೇಲಿನ ಹಿಡಿತ ಸಾಧಿಸಲು ವಿವಿಧ ಮಾರ್ಗೋಪಾಯಗಳನ್ನು ಅನುಸರಿಸಿದ ಮುಖ್ಯ ಐತಿಹಾಸಿಕ ಸಂಘಟನೆಗಳು ಹಾಗೂ ವ್ಯಕ್ತಿಗಳ ನಿದರ್ಶನಗಳ ಮೂಲಕ ಅವುಗಳನ್ನು ಪರಿಶೀಲಿಸಬೇಕಾಗುತ್ತದೆ.

ಇಡೀ ಗ್ರಂಥದುದ್ದಕ್ಕೂ ಎರಡು ಉದ್ದೇಶಗಳಿಂದ ನನ್ನ ದೃಷ್ಟಿಕೋನವನ್ನು ಪ್ರತಿಪಾದಿಸುತ್ತೇನೆ: ಒಂದು, ಸಾಮಾಜಿಕ ಬದಲಾವಣೆಗಳನ್ನು ಅರ್ಥಶಾಸ್ತ್ರಜ್ಞರು ಮಾಡುವುದಕ್ಕಿಂತ ಭಿನ್ನವಾದ ಮತ್ತು ಹೆಚ್ಚು ವ್ಯಾಪಕವಾದ ವಿಶ್ಲೇಷಣೆಯನ್ನು ಮಾಡುವುದು; ಮತ್ತು ಎರಡು, ಹದಿನೆಂಟು–ಹತ್ತೊಂಬತ್ತನೆಯ ಶತಮಾನಗಳ ಗುಂಗಿನಲ್ಲಿರುವವರಿಗೆ ಇಂದಿನ ಮತ್ತು ಅನತಿ ಭವಿಷ್ಯದ ಸಾಧ್ಯತೆಗಳನ್ನು ಮನವರಿಕೆಮಾಡಿಕೊಡುವುದು. ಆ ಶತಮಾನಗಳು ಅನೇಕ ದೃಷ್ಟಿಗಳಿಂದ ಅನನ್ಯವಾದವು; ಅದಕ್ಕೂ ಮುಂಚೆ ಇದ್ದ ಆಲೋಚನೆ ಮತ್ತು ಜೀವನವಿಧಾನಗಳ ಕಡೆಗೆ ನಾವು ನಿಧಾನವಾಗಿ ವಾಪಸಾಗುತ್ತಿದ್ದೇವೆಂದು ನನಗನ್ನಿಸುತ್ತದೆ. ನಮ್ಮ ಕಾಲದ ಸ್ವರೂಪ ಮತ್ತು ಆವಶ್ಯಕತೆಗಳನ್ನು ಅರ್ಥಮಾಡಿಕೊಳ್ಳಲು ಪ್ರಾಚೀನ ಹಾಗೂ ಮಧ್ಯಕಾಲೀನ ಇತಿಹಾಸದ ಜ್ಞಾನವು ತೀರ ಅನಿವಾರ್ಯ. ಅದರ ನೆರವಿನಿಂದ ಮಾತ್ರ ಹತ್ತೊಂಬತ್ತನೆಯ ಶತಮಾನದ ಅನವಶ್ಯಕ ನಿಲವುಳಿಂದ ಜಗ್ಗಿಹೋಗಿರದ ಪ್ರಗತಿಯತ್ತ ಮಾರ್ಗದಲ್ಲಿ ಸಾಗಬಹುದು.

–೦–೦–೦–

ಅಧ್ಯಾಯ ೨

ಮುಂದಾಳುಗಳು – ಹಿಂಬಾಲಕರು

ಅಧಿಕಾರದ ಹಂಬಲಕ್ಕೆ ಎರಡು ಮುಖಗಳು: ಸುವೇದ್ಯ, ಮುಂದಾಳುಗಳಲ್ಲಿ; ಅಂತರ್ನಿಹಿತ, ಅವರ ಹಿಂಬಾಲಕರಲ್ಲಿ. ಸ್ವಇಚ್ಛೆಯಿಂದ ಒಬ್ಬ ನಾಯಕನ್ನು ಅನುಸರಿಸುವ ಜನರಲ್ಲಿ ಅವನು ನಿಯಂತ್ರಿಸುವ ಗುಂಪಿನ ಮೂಲಕ ಅಧಿಕಾರವನ್ನು ಹಿಡಿಯುವ ಹಂಬಲವಿರುತ್ತದೆ; ಆದ್ದರಿಂದಲೇ ನಾಯಕನ ಗೆಲವು ತಮ್ಮದೇ ಎಂದು ಅವರು ಭಾವಿಸುತ್ತಾರೆ. ತಮ್ಮ ಗುಂಪನ್ನು ಗೆಲವಿನತ್ತ ಕೊಂಡೊಯ್ಯುವ ಸಾಮರ್ಥ್ಯ ತಮಗಿದೆಯೆಂಬ ವಿಶ್ವಾಸ ಬಹಳ ಜನರಿಗೆ ಇರುವುದಿಲ್ಲ; ಹಾಗಾಗಿ ಗೆಲವನ್ನು ಸಾಧಿಸಬಲ್ಲ ಧೈರ್ಯ ಮತ್ತು ಜಾಣತನಗಳಿರುವ ಒಬ್ಬ ಮುಂದಾಳನ್ನು ಅವರು ಹುಡುಕುತ್ತಾರೆ. ಮತಧರ್ಮಗಳಲ್ಲಿಯೂ ಈ ಮನೋಭಾವ ಕಾಣುತ್ತದೆ. ಕ್ರಿಶ್ಚಿಯನ್ ಮತವು ದಾಸ್ಯ ಮನೋಭಾವವನ್ನು ತುಂಬುತ್ತದೆ ಎಂದು ನೀಷೆ ಆರೋಪಿಸಿದ; ಆದರೆ ಎಲ್ಲ ಕಾಲಕ್ಕೂ ಗೆಲವೇ ಅಂತಿಮ ಗುರಿಯಾಗಿರುತ್ತದೆ. "ವಿನೀತ ಮನೋಭಾವದವರು ಪುಣ್ಯವಂತರು, ಅವರೇ ಭೂಮಿಯ ವಾರಸುದಾರರು". ಅಥವಾ ಇದೇ ಭಾವನೆಯನ್ನು ಒಂದು ಹಾಡು ಮತ್ತಷ್ಟು ವಿಶದವಾಗಿ ನಿರೂಪಿಸುತ್ತದೆ:

ಸೂರ್ಯಪುತ್ರನು ತಾನು ನಡೆಯುವನು ಯುದ್ಧಕ್ಕೆ,
ರಾಜಕಿರೀಟವನು ಗೆದ್ದು ಬರಲು;
ಅವನ ನೆತ್ತರುಗೆಂಪು ಬಾವುಟ ದೂರ ಹಾರುತ್ತದೆ.
ಅವನನ್ನು ಅನುಸರಿಸಿ ಸಾಗುವವರಾರು?
ಯಾರವನ ಸಂಕಟದ ಬಟ್ಟಲನು ಹೀರುವರೊ,
ನೋವಿನಲೆ ಗೆಲವನ್ನು ಕಾಣಬಹುದೊ,
ತಾಳ್ಮೆಯಲಿ ತಾವವನ ಶಿಲುಬೆಯನು ಹೊರುವರೊ
ಅವರು ಮಾತ್ರವೆ ಹಿಂದೆ ಸಾಗಬಹುದು

ಇದನ್ನು ದಾಸ್ಯ ಮನೋಭಾವ ಎನ್ನುವುದಾದರೆ, ಯುದ್ಧದಲ್ಲಿಯೇ ತನ್ನ ಅದೃಷ್ಟವನ್ನು ಕಾಣಹೋಗುವ ಯೋಧ, ಚುನಾವಣೆಯಲ್ಲಿ ಪ್ರಚಾರ ಮಾಡುವ ಸಣ್ಣಪುಟ್ಟ ರಾಜಕಾರಣಿಗಳು ದಾಸ್ಯಮನೋಭಾವದವರು ಎಂದೇ ಹೇಳಬೇಕಾಗುತ್ತದೆ. ಹಾಗೆ ನೋಡಿದರೆ, ಎಲ್ಲ ನಿಜವಾದ ಸಹಕಾರ ಪ್ರಯತ್ನಗಳಲ್ಲಿಯೂ ಹಿಂಬಾಲಕರು ಮಾನಸಿಕವಾಗಿ ಮುಂದಾಳಿಗಿಂತ

ಹೆಚ್ಚಿನ ದಾಸ್ಯವನ್ನು ತೋರ್ಪಡಿಸುವುದಿಲ್ಲ. ಇದರಿಂದಾಗಿಯೇ ಅಧಿಕಾರದ ಅಸಮಾನತೆಯು ಸಂಘಟನೆಯ ಮೂಲಕ ಸಹ್ಯವಾಗುವುದು. ಸಮಾಜವು ಹೆಚ್ಚು ಹೆಚ್ಚು ಸಾವಯವವಾಗುತ್ತ ಸಾಗಿದಂತೆ ಈ ಪರಿಯು ಕಡಿಮೆಯಾಗುವುದರ ಬದಲು ಹೆಚ್ಚೇ ಆಗುತ್ತದೆ.

ಅಧಿಕಾರದ ಹಂಚಿಕೆಯಲ್ಲಿನ ಅಸಮಾನತೆಯು ಮಾನವ ಸಮುದಾಯಗಳಲ್ಲಿ ನಮಗೆ ತಿಳಿದಿರುವಂತೆ ಎಲ್ಲ ಕಾಲಗಳಲ್ಲೂ, ಇತ್ತು. ಇದಕ್ಕೆ ಭಾಗಶಃ ಬಾಹ್ಯ ಪರಿಸ್ಥಿತಿ ಕಾರಣವಾದರೆ, ಮತ್ತೆ ಕೆಲ ಸಂದರ್ಭಗಳಲ್ಲಿ ಮಾನವನ ಸ್ವಭಾವದ ಕಾರಣದಿಂದಲೇ ಹೀಗಾಗಿದೆ. ಎಲ್ಲ ಸಹಕಾರೀ ಪ್ರಯತ್ನಗಳು ಸಾಧ್ಯವಾಗುವುದು ಅವುಗಳನ್ನು ನಿರ್ದೇಶಿಸುವ ಒಂದು ಕಾರ್ಯನಿರ್ವಾಹಕ ವ್ಯವಸ್ಥೆ ಇದ್ದಾಗ ಮಾತ್ರ. ಒಂದು ಮನೆ ಕಟ್ಟುವ ನಿದರ್ಶನವನ್ನೇ ತೆಗೆದುಕೊಳ್ಳಿ: ಅದರ ವಿನ್ಯಾಸವನ್ನು ನಿರ್ಧರಿಸುವ ಒಬ್ಬನಿರಬೇಕು; ರೈಲುಗಳು ಸರಿಯಾಗಿ ಹಳಿಯ ಮೇಲೆ ಓಡಾಡಬೇಕಾದರೆ, ವೇಳಾಪಟ್ಟಿಯನ್ನು ಇಂಜಿನ್ ಡ್ರೈವರ್‌ಗಳ ಲಹರಿಗೆ ಬಿಡುವಂತಿಲ್ಲ, ಹೊಸ ರಸ್ತೆಯೊಂದನ್ನು ನಿರ್ಮಿಸಬೇಕಾದರೆ ಅದು ಸಾಗಬೇಕಾದ ಮಾರ್ಗವನ್ನು ಯಾರಾದರೂ ನಿರ್ಧರಿಸಬೇಕು. ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವೂ ಕೇವಲ ಒಂದು ಕಾರ್ಯನಿರ್ವಾಹಕ ವ್ಯವಸ್ಥೆ, ಅಷ್ಟೆ. ಹೀಗಾಗಿ ಒಂದು ಸಾಮುದಾಯಿಕ ಕಾರ್ಯ ನೆರವೇರಬೇಕಾದರೆ, ಮನಃಸ್ಥಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಕೆಲವರು ಆಜ್ಞೆಗಳನ್ನು ನೀಡಬೇಕು, ಅದಕ್ಕನುಗುಣವಾಗಿ ಕೆಲಸ ಮಾಡುವ ಇನ್ನು ಕೆಲವರಿರಬೇಕು. ಆದರೆ ಇದು ಸಾಧ್ಯವಾಗುವ ಬಗೆಯನ್ನಾಗಲೀ, ಅಥವಾ ತಾಂತ್ರಿಕ ಕಾರಣಗಳಿಂದಾಗಿ ಇರಬೇಕಾದುದಕ್ಕಿಂತ ಅಧಿಕಾರದ ಅಸಮಾನತೆಯು ವಾಸ್ತವವಾಗಿ ಹೆಚ್ಚಾಗಬಹುದು ಎಂಬುದನ್ನಾಗಲೀ ವಿವರಿಸಲು ವೈಯಕ್ತಿಕ ಮನಃಸ್ಥಿತಿ ಮತ್ತು ದೇಹಸ್ಥಿತಿಗಳ ಮೂಲಕ ಮಾತ್ರವೇ ಸಾಧ್ಯವಾಗುವುದು. ಕೆಲವರು ತಮ್ಮ ಸ್ವಭಾವದಿಂದಾಗಿ ಸದಾ ಆಜ್ಞಾಪಿಸುತ್ತಿರುತ್ತಾರೆ, ಮತ್ತೆ ಕೆಲವರು ಸದಾ ಆಜ್ಞಾನುಸಾರ ನಡೆಯುವವರಾಗಿರುತ್ತಾರೆ. ಈ ಎರಡೂ ತುದಿಗಳ ನಡುವೆ ಅತ್ಯಧಿಕ ಪ್ರಮಾಣದ ಸಾಧಾರಣ ಮಾನವರಿರುತ್ತಾರೆ. ಅವರು ಕೆಲವೊಮ್ಮೆ ಆಜ್ಞಾಪಿಸಲು ಬಯಸಿದರೆ, ಮತ್ತೆ ಕೆಲವೊಮ್ಮೆ ಮುಂದಾಳನ್ನು ಅನುಸರಿಸಲು ಬಯಸುತ್ತಾರೆ.

'ಮಾನವ ಸ್ವಭಾವವನ್ನು ಅರಿಯುವತ್ತ' ('ಅಂಡರ್‌ಸ್ಟಾಂಡಿಂಗ್ ಹ್ಯೂಮನ್ ನೇಚರ್') ಎಂಬ ತಮ್ಮ ಗ್ರಂಥದಲ್ಲಿ ಆಡ್ಲರ್ ಅವರು ಮನುಷ್ಯರನ್ನು ವಿಧೇಯ ಹಾಗೂ ದರ್ಪಿಷ್ಟ ಎಂಬ ಎರಡು ವರ್ಗಗಳಾಗಿ ವಿಂಗಡಿಸುತ್ತಾರೆ. "ವಿಧೇಯ ಸ್ವಭಾವದ ವ್ಯಕ್ತಿಯು ಇತರರು ಹಾಕುವ

ನಿಯಮ ನಿಬಂಧನೆಗಳಿಗೆ ಅನುಗುಣವಾಗಿ ನಡೆಯುತ್ತಾನೆ; ಅವನು ಅನಿವಾರ್ಯವೆಂಬಂತೆ ಅನುಸರಣೆಯ ಮಾರ್ಗವನ್ನೇ ಹುಡುಕಿಕೊಳ್ಳುತ್ತಾನೆ" ಎಂಬುದು ಅವರ ವಿಶ್ಲೇಷಣೆ. ಮುಂದುವರೆದು ಅವರು ಹೇಳುತ್ತಾರೆ: "ಎಲ್ಲರಿಗಿಂತ ನಾನು ಹೇಗೆ ಉತ್ತಮನಾಗಬಲ್ಲೆ" ಎಂದು ಕೇಳಿಕೊಳ್ಳುವ ದರ್ಪಿಷ್ಟ ಸ್ವಭಾವದ ವ್ಯಕ್ತಿಯು ಮಾರ್ಗದರ್ಶಿಯ ಆವಶ್ಯಕತೆಯಿರುವಾಗ ಕಾಣಿಸಿಕೊಳ್ಳುತ್ತಾನೆ, ಕ್ರಾಂತಿಯ ಸನ್ನಿವೇಶಗಳಲ್ಲಿ ತುತ್ತತುದಿಗೇರುತ್ತಾನೆ. ಆಡ್ಲರ್ ಅವರ ಪ್ರಕಾರ ಈ ಎರಡೂ ಅತಿರೇಕಗಳು ಅನಪೇಕ್ಷಣೀಯವಾದವು, ಕನಿಷ್ಠ ಪಕ್ಷ ತಮ್ಮ ಅತಿರೇಕದ ರೂಪದಲ್ಲಿ. ಇವೆರಡೂ ಶಿಕ್ಷಣದ ಪರಿಣಾಮವಾಗಿ ಆದವು ಎಂದು ಅವರು ಭಾವಿಸುತ್ತಾರೆ. "ಅಧಿಕಾರಯುಕ್ತ ಶಿಕ್ಷಣದ ದೊಡ್ಡ ಅನನುಕೂಲತೆಯೆಂದರೆ ಅದು ಅಧಿಕಾರದ ಆದರ್ಶವನ್ನು ಮಗುವಿನ ಮನಸ್ಸಿನಲ್ಲಿ ತುಂಬಿ, ಅದನ್ನು ಗಳಿಸಿದ ಬಳಿಕ ದೊರೆಯುವ ಸೌಖ್ಯಗಳ ಬಗ್ಗೆ ತಿಳಿಸುವುದು." ಇದರೊಡನೆ ನಾವು ಮತ್ತೊಂದು ಮಾತನ್ನು ಸೇರಿಸಬಹುದು: ಅಧಿಕಾರಯುಕ್ತ ಶಿಕ್ಷಣವು ದಾಸ್ಯವಗದ ಜೊತೆಗೆ ದರ್ಪಿಷ್ಟವರ್ಗವನ್ನೂ ಸೃಷ್ಟಿಸುತ್ತದೆ ಎಂದು. ಏಕೆಂದರೆ, ಮಾನವ ಸಹಕಾರದ ಸನ್ನಿವೇಶದಲ್ಲಿ ಇಬ್ಬರು ವ್ಯಕ್ತಿಗಳ ನಡುವಣ ಸಂಬಂಧವು ಒಬ್ಬನು ಆಜ್ಞೆಗಳನ್ನು ನೀಡುವ ಮತ್ತೊಬ್ಬನು ಅದನ್ನು ಅದಕ್ಕನುಗುಣವಾಗಿ ನಡೆಯುವ ರೀತಿಯಲ್ಲಿ ಮಾತ್ರ ಇರಬಲ್ಲದು ಎಂಬುದನ್ನೂ ಇಂಥ ಶಿಕ್ಷಣವು ತಲೆಯಲ್ಲಿ ತುಂಬಿರುತ್ತದೆ.

ಅಧಿಕಾರದ ಹಂಬಲವು, ಕೆಲವು ರೂಪಗಳಲ್ಲಿ, ಸರ್ವವ್ಯಾಪಿಯಾದುದು; ಆದರೆ ಅದರ ಆತ್ಯಂತಿಕ ರೂಪದಲ್ಲಿ ಮಾತ್ರ ತುಂಬ ಅಪರೂಪ. ತನ್ನ ಮನೆಯ ನಿರ್ವಹಣೆಯಲ್ಲಿ ಅಧಿಕಾರವನ್ನು ಹೊಂದಿರುವ ಮಹಿಳೆಯು ಪ್ರಧಾನ ಮಂತ್ರಿಯ ಅಧಿಕಾರವನ್ನು ಪಡೆಯುವ ಹಂಬಲವನ್ನು ಹೊಂದದೆ ಇರುವ ಸಂಭವವೇ ಹೆಚ್ಚು. ಇದಕ್ಕೆ ವ್ಯತಿರಿಕ್ತವಾಗಿ ಏಬ್ರಹಾಂ ಲಿಂಕನ್, ಇಡೀ ಸಂಯುಕ್ತ ಸಂಸ್ಥಾನಗಳ ಸರ್ಕಾರದ ಆಡಳಿತವನ್ನು ನಿಭಾಯಿಸುವುದಕ್ಕೆ ಹೆದರದವನು, ತಮ್ಮ ಪ್ರಾಂತದಲ್ಲಿನ ಅಂತರ್ಯುದ್ಧವನ್ನು ಎದುರಿಸುವಲ್ಲಿ ವಿಫಲನಾದ. ಪ್ರಾಯಶಃ ನೆಪೋಲಿಯನ್, *'ಬೆಲೆರೋಫೋನ್'* ನೌಕೆಯೇನಾದರೂ ಆಘಾತಕ್ಕೊಳಗಾಗಿದ್ದರೆ, ದೋಣಿಯ ಮೂಲಕ ಪಾರಾಗಲು ಬ್ರಿಟಿಷ್ ಅಧಿಕಾರಿಗಳ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸುತ್ತಿದ್ದ. ತಾವು ನಿರ್ವಹಿಸಬೇಕಾದ ಕಾರ್ಯವನ್ನು ನಿಭಾಯಿಸುವ ಆತ್ಮವಿಶ್ವಾಸವಿರುವವರೆಗೂ ಅದರ ಮೇಲಿನ ಅಧಿಕಾರಕ್ಕಾಗಿ ಜನರು

ಹಂಬಲಿಸುತ್ತಾರೆ; ತಮಗೆ ಆ ಸಾಮರ್ಥ್ಯ ಸಾಲದೆಂದು ಮನವರಿಕೆಯಾದ ಕೂಡಲೇ ನಾಯಕನೊಬ್ಬನನ್ನು ಹಿಂಬಾಲಿಸಲು ಬಯಸುತ್ತಾರೆ.

ಈ ವಿಧೇಯ ಮನೋಭಾವ ಆಳುವ ಮನೋಭಾವದಷ್ಟು ಸತ್ಯವೂ ಅಲ್ಲ, ಸಾಮಾನ್ಯವೂ ಅಲ್ಲ; ಅದರ ಆಳದಲ್ಲಿ ಭಯದ ಬೇರುಗಳಿರುತ್ತವೆ. ಹಿಡಿತಕ್ಕೆ ಸಿಕ್ಕದ ಅಸಾಧ್ಯರಾದ ತುಂಟ ಹುಡುಗರ ದಂಡು, ಬೆಂಕಿಯಂತಹ ಆತಂಕದ ಸನ್ನಿವೇಶವೊದಗಿದಾಗ, ಸಮರ್ಥ ಹಿರಿಯನೊಬ್ಬನ ಆಜ್ಞೆಗಳನ್ನು ಪರಿಪಾಲಿಸುತ್ತದೆ; ಯುದ್ಧವೊದಗಿದಾಗ ಪ್ಯಾಂಕ್‌ಹರ್ಸ್ಟ್‌ರು ಲಾಯ್ಡ್ ಜಾರ್ಜ್‌ನ ಜೊತೆ ಶಾಂತಿಸಂಧಾನ ಮಾಡಿಕೊಂಡರು. ತೀವ್ರ ಅಪಾಯದ ಪರಿಸ್ಥಿತಿ ಉಂಟಾದಾಗ ಬಹುಸಂಖ್ಯಾತ ಜನರು ಹೊಂದುವ ಸಹಜ ಪ್ರವೃತ್ತಿಯೆಂದರೆ ಯಾವುದಾದರೊಂದು ಆಜ್ಞೆಗೆ ತಮ್ಮನ್ನು ಒಪ್ಪಿಸಿಕೊಳ್ಳುವುದು. ಅಂತಹ ಸನ್ನಿವೇಶದಲ್ಲಿ ಯಾರೂ ಕ್ರಾಂತಿಯ ಕನಸು ಕಾಣಲಾರರು. ಯುದ್ಧ ಸಂಭವಿಸಿದಾಗ ಜನರು ಸರ್ಕಾರದ ಬಗ್ಗೆ ಹೊಂದುವ ಪ್ರವೃತ್ತಿಯು ಇಂತಹುದೇ ಆಗಿರುತ್ತದೆ.

ಅಪಾಯಗಳನ್ನೆದುರಿಸುವ ಉದ್ದೇಶದಿಂದಲೇ ಸಂಘಟನೆಗಳು ರೂಪುಗೊಳ್ಳುವುದಿಲ್ಲ. ಕೆಲವೊಮ್ಮೆ, ನಿದರ್ಶನಕ್ಕೆ ಕಲ್ಲಿದ್ದಲ ಗಣಿಯಂತಹ ಆರ್ಥಿಕ ಸಂಸ್ಥೆಗಳು, ಅಪಾಯಗಳನ್ನೆದುರಿಸುತ್ತವೆ; ಆದರೆ ಇಂತಹ ಸಂದರ್ಭ ಒದಗುವುದು ಯಾವಾಗಲೋ ಒಮ್ಮೆ. ಅಂತಹ ಸಂದರ್ಭಗಳನ್ನು ನಿವಾರಿಸಿಕೊಂಡು ಬಿಟ್ಟರೆ ಅವೂ ಚೆನ್ನಾಗಿಯೇ ಕಾರ್ಯ ನಿರ್ವಹಿಸುತ್ತವೆ. ಅಂದರೆ, ಅಪಾಯವನ್ನೆದುರಿಸುವುದೇ ಆರ್ಥಿಕ ಸಂಸ್ಥೆಗಳ ಮೂಲ ಉದ್ದೇಶವಲ್ಲ ಎನ್ನಬಹುದು. ಹಾಗೆಯೇ ಆಂತರಿಕ ವ್ಯವಹಾರಗಳ ಜವಾಬ್ದಾರಿ ಹೊತ್ತ ಸರ್ಕಾರೀ ಸಂಸ್ಥೆಗಳು. ಆದರೆ ಸೈನ್ಯ-ನೌಕಾಪಡೆಗಳಂತೆಯೇ ಜೀವರಕ್ಷಕ ದೋಣಿಗಳು ಮತ್ತು ಅಗ್ನಿಶಾಮಕ ದಳಗಳು ಇರುವುದು ಅಥವಾ ನಿರ್ಮಾಣಗೊಳ್ಳುವುದು ಅಪಾಯಗಳನ್ನೆದುರಿಸುವ ಉದ್ದೇಶದಿಂದಲೇ. ಸ್ವಲ್ಪ ಕಡಿಮೆ ತುರ್ತಿನ ರೀತಿಯಲ್ಲಿ ಧಾರ್ಮಿಕ ಸಂಸ್ಥೆಗಳ ಉದ್ದೇಶವೂ ಇದೇನೇ; ನಮ್ಮ ಪ್ರವೃತ್ತಿಯ ಆಳದಲ್ಲಿ ಹುದುಗಿರುವ ಪರಾಭೌತಿಕ ಭಯಗಳನ್ನು ನಿವಾರಿಸಲು. ಈ ಅಭಿಪ್ರಾಯವನ್ನು ಒಪ್ಪದ ಯಾರಾದರೂ ಮುಂದಿನ ಹಾಡಿನಂತಹುದನ್ನು ನೆನಪಿಸಿಕೊಳ್ಳುವುದು ಒಳಿತು:

ಯುಗಗಳ ಬಂಡೆಗಳು ಬಿರುಕು ಬಿಡಲಿ
ನಾನಲ್ಲಿ ಅಡಗಿಕೊಳ್ಳುವೆನು;

ಸುತ್ತಲಿನ ನೆರೆ ತಾನು ಮೈಯನಾವರಿಸುತಿರೆ,
ಬಿರುಗಾಳಿ ನನ್ನನ್ನು ಜರ್ಜರಿಸಿರೆ,
ನನ್ನ ಆತ್ಮದ ಪ್ರಿಯತಮನೆ, ಏಸುವೇ,
ಹಾರುವೆನು ನಾ ನಿನ್ನ ಎದೆಗೆ.

ದೈವಸಂಕಲ್ಪಕ್ಕೆ ತನ್ನನ್ನು ಒಪ್ಪಿಸಿಕೊಂಡುಬಿಡುವುದು ಅತ್ಯಂತ ಸುರಕ್ಷಿತವಾದುದು ಎಂಬ ಭಾವನೆಯಿದೆ. ಆ ಕಾರಣದಿಂದಲೇ ಬೇರಾವ ಲೌಕಿಕ ಜೀವಿಗೂ ವಿಧೇಯರಾಗದ ಅನೇಕ ಸಾರ್ವಭೌಮರು ಧರ್ಮದೆದುರು ಬಾಗಿದುದು. ಎಲ್ಲ ವಿಧೇಯತೆಯ ಹಿಂದೆ ಭಯವಿದೆ; ನಾವು ಅನುಸರಿಸುವ ನಾಯಕ ಮಾನವನಾಗಿರಬಹುದು ಅಥವಾ ದೈವವಾಗಿರಬಹುದು.

ಆಕ್ರಮಣಕಾರಿತನದ ಬೇರುಗಳೂ ಭಯದಲ್ಲಿಯೇ ಇದೆ ಎಂಬುದು ಈಗಾಗಲೇ ಅನೇಕ ಬಾರಿ ಹೇಳಿರುವ ಸಂಗತಿ. ಆದರೆ ಈ ಸಿದ್ಧಾಂತವನ್ನು ಅತಿರೇಕಕ್ಕೆ ಕೊಂಡೊಯ್ಯಲಾಗಿದೆ ಎಂಬುದು ನನ್ನ ಭಾವನೆ. ಕೆಲವು ಬಗೆಯ ಆಕ್ರಮಣಕಾರಿತನದ ವಿಷಯದಲ್ಲಿ ಈ ಮಾತು ನಿಜವಿರಬಹುದು; ನಿದರ್ಶನಕ್ಕೆ ಡಿ.ಎಚ್ . ಲಾರೆನ್ಸ್‌ನ ವಿಷಯದ್ದು. ದರೋಡೆಕೋರ ಮುಖಂಡರಲ್ಲಿ ತಮ್ಮ ತಂದೆಯರು ಹಿಂದೆ ಮೂಡಿಸಿದ ಭಯ ತುಂಬಿರುತ್ತದೆ ಎಂಬುದನ್ನು ನಾನು ನಂಬಲಾರೆ; ಹಾಗೆಯೇ, ನೆಪೋಲಿಯನ್ ಆಸ್ಟೆರಿಲಿಟ್ಜ್‌ನಲ್ಲಿ ಮೇಡಂ ಮೆಯಿರ್ ಜೊತೆ ಭಯದಿಂದ ನಡೆದುಕೊಂಡಿರಬಹುದು ಎಂಬ ಬಗ್ಗೆ. ನನಗೆ ಆಟ್ಟಿಲ ತಾಯಿಯ ಬಗ್ಗೆ ಏನೂ ತಿಳಿಯದು, ಆದರೆ ಆಕೆ ತನ್ನ ಮಗನನ್ನು ಹಾಳುಮಾಡಿದಳು ಎಂಬುದರ ಬಗ್ಗೆ ನಂಬಿಕೆ ಬಾರದು; ಮುಂದೆ ಜಗತ್ತು ತನ್ನ ಆಸೆಗಳಿಗೆ ವಿರುದ್ಧವಾಗಿದೆ ಎಂಬುದಕ್ಕಾಗಿ ಅವನು ಕಿರಿಕಿರಿ ಅನುಭವಿಸಿದ. ಪುಕ್ಕಲುತನದ ಕಾರಣದಿಂದಾಗುವ ಆಕ್ರಮಣಕಾರಿತನವು ದೊಡ್ಡ ನಾಯಕರುಗಳ ಪ್ರೇರಕಶಕ್ತಿ ಎಂಬುದನ್ನು ನಾನು ಒಪ್ಪಲಾರೆ. ಅವರಲ್ಲಿ ಅಪರೂಪವಾದ ಆತ್ಮವಿಶ್ವಾಸ ತುಂಬಿರುತ್ತದೆ, ಅದು ಕೇವಲ ಮೇಲ್ಪದರದ್ದಾಗಿರದೆ, ಸುಪ್ತಪ್ರಜ್ಞೆಯ ಆಳಕ್ಕೂ ಇಳಿದಿರುತ್ತದೆ ಎಂಬುದು ನನ್ನ ಅನಿಸಿಕೆ.

ದೊಡ್ಡ ನಾಯಕರುಗಳಿಗೆ ಆವಶ್ಯಕವಾದ ಆತ್ಮವಿಶ್ವಾಸವು ನಾನಾ ಬಗೆಯಲ್ಲಿ ಮೈಗೂಡಿರಬಹುದು. ಐತಿಹಾಸಿಕವಾಗಿ, ಅತ್ಯಂತ ಸಾಮಾನ್ಯ ಬಗೆಯೆಂದರೆ ಆನುವಂಶಿಕವಾಗಿ ದತ್ತವಾದ ಹುದ್ದೆ. ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಎಲಿಜಬೆತ್ ಮಹಾರಾಣಿ ಮಾಡಿದ ಭಾಷಣಗಳನ್ನು

ನಿದರ್ಶನಕ್ಕೆ ತೆಗೆದುಕೊಳ್ಳಿ. ಅಲ್ಲಿ ಹೆಂಗಸನ್ನು ಮೀರಿದ ರಾಜಪ್ರಭುತ್ವವು ಎದ್ದು ತೋರುತ್ತದೆ; ದೇಶಕ್ಕೆ ಬೇಕಾದುದೇನು ಎಂಬ ಬಗ್ಗೆ ಅದು ಆಕೆಯನ್ನು, ಆಕೆಯ ಮೂಲಕ ದೇಶವನ್ನು ಒಲಿಸಿಕೊಳ್ಳುವ ಬಗೆಯಲ್ಲಿ ಆಕ್ರಮಿಸಿಕೊಂಡಿದೆ. ಇದು ಬರಿ ವ್ಯವಹಾರಜ್ಞಾನದಿಂದ ಆಗುವ ಕೆಲಸವಲ್ಲ. ದೇಶದ ಹಿತ ಮತ್ತು ಸಾರ್ವಭೌಮತೆ ಆಕೆಯಲ್ಲಿ ಹದವಾಗಿ ಬೆರೆತುಕೊಂಡಿದೆ; ಹಾಗಾಗಿಯೇ ಆಕೆ 'ಒಳ್ಳೆಯ ಬೆಸ್ ಮಹಾರಾಣಿ' (ಗುಡ್ ಕ್ವೀನ್ ಬೆಸ್) ಆದದ್ದು. ಇತರರನ್ನು ರೇಗಿಸದ ರೀತಿಯಲ್ಲಿ ಆಕೆ ತನ್ನ ತಂದೆಯ ಹೊಗಳಬಲ್ಲವಳಾಗಿದ್ದಳು. ಆಜ್ಞಾಪಿಸುವ ಅಭ್ಯಾಸದಿಂದಾಗಿ ಜವಾಬ್ದಾರಿಗಳನ್ನು ನಿಭಾಯಿಸುವ ಹಾಗೂ ಕ್ಷಿಪ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೆಲಸವು ಸುಗಮಗೊಳ್ಳುತ್ತದೆ ಎಂಬುದರಲ್ಲಿ ನನಗೆ ಅನುಮಾನವಿಲ್ಲ. ಆನುವಂಶಿಕ ಮುಂದಾಳನ್ನು ಅನುಸರಿಸುವ ಸಮುದಾಯವು ನಾಯಕನ್ನು ಆಯ್ಕೆಮಾಡಿಕೊಳ್ಳುವ ಸಮುದಾಯಕ್ಕಿಂತ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ, ತನ್ನ ಮುಂದಾಳನ್ನು ಹೊರನೋಟದ ಅರ್ಹತೆಗಳ ಆಧಾರದ ಮೇಲೆ ಆಯ್ಕೆಮಾಡಿ, ಆತನಿಗೆ ಸಾಕಷ್ಟು ದೀರ್ಘ ಕಾಲ ಆಡಳಿತಾನುಭವವಾದ ನಂತರ ಉತ್ತಮ ಫಲಿತಾಂಶಗಳನ್ನು ಕಾಣುತ್ತಿದ್ದ ಮಧ್ಯಕಾಲೀನ ಚರ್ಚ್‌ನಂತಹ ಒಂದು ಸಂಸ್ಥೆಗಿಂತ ಅದೇ ಕಾಲದ ಆನುವಂಶಿಕ ರಾಜಪ್ರಭುತ್ವಗಳಲ್ಲಿ ಸಾಮಾನ್ಯವಾಗಿ ಹೆಚ್ಚು ಉತ್ತಮ ಫಲಿತಾಂಶವು ಕಾಣುತ್ತಿದ್ದವು.

ಇತಿಹಾಸದಲ್ಲಿ ಕಂಡುಬರುವ ಅನೇಕ ಮಂದಿ ಅತ್ಯುನ್ನತ ನಾಯಕರು ಕ್ರಾಂತಿಕಾಲದಲ್ಲಿ ಮೈದಳೆದವರು. ಕ್ರಾಮ್‌ವೆಲ್, ನೆಪೋಲಿಯನ್ ಹಾಗೂ ಲೆನಿನ್‌ರು ಯಶಸ್ವಿಗಳಾಗಲು ಕಾರಣವಾದ ಗುಣಗಳನ್ನು ಒಂದು ಕ್ಷಣ ಪರಿಶೀಲಿಸೋಣ. ಬಿಕ್ಕಟ್ಟಿನ ಕಾಲಗಳಲ್ಲಿ ಈ ಮೂವರೂ ತಮ್ಮ ತಮ್ಮ ದೇಶಗಳಲ್ಲಿ ಪ್ರಭಾವಶಾಲಿಗಳಾಗಿದ್ದರು, ವಿನೀತರಲ್ಲದ ಆದರೆ ಸಮರ್ಥರಾದ ಹಲವು ಮಂದಿಯ ಸ್ವಇಚ್ಛೆಯ ನೆರವನ್ನು ಪಡೆದರು. ಈ ಮೂವರಿಗೂ ಇದ್ದದ್ದು ಅಪರಿಮಿತ ಧೈರ್ಯ ಮತ್ತು ಆತ್ಮವಿಶ್ವಾಸ, ಜೊತೆಗೆ ಕಷ್ಟಕರ ಸನ್ನಿವೇಶಗಳಲ್ಲಿ ಅವರ ಸಹವರ್ತಿಗಳು ಸಮಂಜಸವೆಂದು ಭಾವಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ. ಈ ಮೂವರಲ್ಲಿ ಕ್ರಾಮ್‌ವೆಲ್ ಮತ್ತು ಲೆನಿನ್ ಒಂದು ಬಗೆಯವರಾದರೆ, ನೆಪೋಲಿಯನ್ ಮತ್ತೊಂದು ಬಗೆಯವನು. ಕ್ರಾಮ್‌ವೆಲ್ ಮತ್ತು ಲೆನಿನ್‌ರಿಗೆ ಆಳವಾದ ಧಾರ್ಮಿಕ ನಂಬಿಕೆಯಿತ್ತು, ಯಾವುದೋ ಮಾನವಾತೀತ ಉದ್ದೇಶವನ್ನು ನೆರವೇರಿಸಲು ತಾವು

ನೇಮಕಗೊಂಡಿರುವುದಾಗಿ ಭಾವಿಸಿದ್ದವರು ಅವರು. ಹೀಗಾಗಿ ತಮ್ಮ ಅಧಿಕಾರದ ಹಂಬಲು ನಿಸ್ಸಂಶಯವಾಗಿ ಧಾರ್ಮಿಕವಾದದ್ದು ಎಂಬ ಭಾವನೆ ಅವರದ್ದು; ಅದರಿಂದಾಗಿಯೇ ಅವರಿಗೆ, ತಮಗಿದೆಯೆಂದು ಭಾವಿಸಿದ್ದ ಅಲೌಕಿಕ ಉದ್ದೇಶದೊಂದಿಗೆ ಸಮೀಕರಿಸಲು ಸಾಧ್ಯವಾಗದ ಅಧಿಕಾರದ ಫಲಗಳಾದ ವೈಭವ ಮತ್ತು ಸೌಲಭ್ಯಗಳ ಬಗ್ಗೆ ಗಮನವಿರಲಿಲ್ಲ. ಇದು ಲೆನಿನ್ ವಿಚಾರದಲ್ಲಿ ಹೆಚ್ಚು ಸತ್ಯ; ಕ್ರಾಮ್‌ವೆಲ್‌ಗಾದರೆ ತಾನು ಪಾಪಕೂಪದಲ್ಲಿ ಬೀಳುತ್ತಿರುವಂತೆ ಕೊನೆಗಾಲದಲ್ಲಿ ಭಾಸವಾಗಿತ್ತು. ಅದೇನೇ ಆದರೂ, ಈ ಎರಡೂ ಬಗೆಗಳವರಲ್ಲಿ ನಂಬಿಕೆಯೊಂದಿಗೆ ಮಹಾ ಸಾಮರ್ಥ್ಯವೂ ಸೇರಿಕೊಂಡಿತ್ತು; ಅದರಿಂದಾಗಿಯೇ ಅವರು ಧೈರ್ಯ ತುಂಬಿಕೊಂಡು ಅನುಯಾಯಿಗಳಲ್ಲಿ ತಮ್ಮ ನಾಯಕತ್ವದ ಬಗ್ಗೆ ಸ್ಫೂರ್ತಿದಾಯಕವಾದ ಭರವಸೆ ಹುಟ್ಟಿಸಲು ಸಾಧ್ಯವಾದುದು.

ಕ್ರಾಮ್‌ವೆಲ್ ಮತ್ತು ಲೆನಿನ್‌ರಿಗೆ ವ್ಯತಿರಿಕ್ತವಾಗಿ, ನೆಪೋಲಿಯನ್ ಅದೃಷ್ಟಕುವರನ ಮಹಾ ನಿದರ್ಶನವಾಗಿದ್ದಾನೆ. ಕ್ರಾಂತಿ ಅವನ ಮನೋಭಾವಕ್ಕೆ ಸರಿಹೊಂದಿತು, ಅದರಿಂದ ಅವನಿಗೆ ಸೂಕ್ತ ಅವಕಾಶ ಒದಗಿತು, ಇಲ್ಲದಿದ್ದರೆ ಅವನು ಆ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಫ್ರೆಂಚ್ ದೇಶಪ್ರೇಮವನ್ನು ಅವನು ಬಡಿದೆಬ್ಬಿಸಿ ಅದನ್ನೇ ಅವಲಂಬಿಸಿದರೂ, ಅವನಿಗೆ ಫ್ರಾನ್ಸ್, ಕ್ರಾಂತಿಯಂತೆಯೇ, ಒಂದು ಸದವಕಾಶವನ್ನೊದಗಿಸಿತ್ತು; ಕೋರ್ಸಿಕಾ ಜೊತೆ ಸೇರಿ ಫ್ರಾನ್ಸ್ ವಿರುದ್ಧ ಹೋರಾಡುವ ಆಲೋಚನೆಯೂ ಚಿಕ್ಕಂದಿನಲ್ಲಿ ಅವನ ಮನಸ್ಸಿನಲ್ಲಿ ಸುಳಿದಿತ್ತು. ಅವನಿಗೆ ಯಶಸ್ಸು ದೊರೆತದ್ದಕ್ಕೆ ಕಾರಣ ಅವನ ವ್ಯಕ್ತಿತ್ವದಲ್ಲಿನ ಯಾವುದೇ ಅಪ್ರತಿಮ ಗುಣಗಳು ಎಂಬುದಕ್ಕಿಂತ ಹೆಚ್ಚಾಗಿ, ಯುದ್ಧದ ಬಗೆಗಿನ ಅವನಿಗಿದ್ದ ತಾಂತ್ರಿಕ ಕೌಶಲ; ಇದರಿಂದಾಗಿಯೇ ಇತರರು ಸೋಲು ಕಾಣುವ ಸಂದರ್ಭದಲ್ಲಿ ಅವನಿಗೆ ಗೆಲವು ದೊರೆಯಿತು. ೧೮ ಬ್ರೂಮೇರ್[೧] ಮತ್ತು ಮಾರೆಂಗೋ[೨] ಅಂತಹ ಸಂದಿಗ್ಧ ಸನ್ನಿವೇಶಗಳಲ್ಲಿ ಅವನು ಗೆಲವಿಗಾಗಿ ಇತರರನ್ನು ಅವಲಂಬಿಸಿದ್ದ; ತನ್ನ ಸಹಾಯಕರ ಸಾಧನೆಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವ ಜಾಣ್ಮೆ ಅವನಲ್ಲಿ ತುಂಬಿತ್ತು. ಫ್ರಂಚ್ ಸೈನ್ಯದ ತುಂಬ ಮಹತ್ವಾಕಂಕ್ಷೆಯ ಯುವಕರು ತುಂಬಿದ್ದರು; ಇತರರು ಸೋಲುವೆಡೆ ಗೆಲವು ಸಾಧಿಸುವುದಕ್ಕೆ ನೆಪೋಲಿಯನ್‌ಗೆ ಸ್ವಭಾವಕ್ಕಿಂತ ಜಾಣ್ಮೆಯೇ ನೆರವಿಗೆ ಬಂದುದು. ಕೊನೆಯಲ್ಲಿ ಅವನ ಅಧಃಪತನಕ್ಕೆ ಮೂಲಕಾರಣವಾದ ಅದೃಷ್ಟದಲ್ಲಿನ

೧ ೧೭೯೯ ರ ನವೆಂಬರ್ ೯ ರಂದು ನಡೆದ ದಂಗೆ

೨ ೧೮೮೦ ರಲ್ಲಿ ಮಾರೆಂಗೋದಲ್ಲಿ ನಡೆದ ಕದನದಲ್ಲಿ ಫ್ರಾನ್ಸ್ ಆಸ್ಟ್ರಿಯ ವಿರುದ್ಧ ಗೆಲವು ಪಡೆಯಿತು

ನಂಬಿಕೆಯು ಅವನು ಪಡೆದ ವಿಜಯಗಳ ಪರಿಣಾಮವೇ ಹೊರತು ಅವುಗಳ ಕಾರಣಗಳಲ್ಲ. ಮನಃಸ್ಥಿತಿಯ ಆಧಾರದ ಮೇಲೆ ವರ್ಗೀಕರಿಸಿ ನಮ್ಮದೇ ಕಾಲದ ನಿದರ್ಶನಗಳನ್ನು ನೀಡಬೇಕೆಂದರೆ, ಹಿಟ್ಲರ್ ಅನ್ನು ಕ್ರಾಮ್‌ವೆಲ್ ಮತ್ತು ಲೆನಿನ್‌ರ ಜೊತೆಗೂ, ಮುಸೋಲಿನಿಯನ್ನು ನೆಪೋಲಿಯನ್ ಜೊತೆಗೂ ಸೇರಿಸಬೇಕು.

ಅದೃಷ್ಟಕುವರ ಅಥವಾ ದರೋಡೆಕೋರ ಮುಖಂಡರ ವರ್ಗವು ಇತಿಹಾಸದಲ್ಲಿ 'ವೈಜ್ಞಾನಿಕ' ಇತಿಹಾಸಕಾರರು ಭಾವಿಸುವುದಕ್ಕಿಂತ ಹೆಚ್ಚು ಮುಖ್ಯವಾದ ವರ್ಗಕ್ಕೆ ಸೇರಿದವರು. ನೆಪೋಲಿಯನ್‌ನಂತೆ ಕೆಲವೇಳೆ ಅವನು ಭಾಗಶಃ ವ್ಯಕ್ತ್ಯತೀತ ಆದರ್ಶಗಳನ್ನು ಹೊಂದಿದ ಜನರ ಗುಂಪಿನ ನಾಯಕತ್ವವನ್ನು ವಹಿಸುವುದರಲ್ಲಿ ಯಶಸ್ವಿಯಾಗುತ್ತಾನೆ. ತಾವು ಯೂರೋಪಿನ ವಿಮೋಚಕರು ಎಂದೇ ಫ್ರೆಂಚ್ ಕ್ರಾಂತಿದಳಗಳು ಭಾವಿಸಿದ್ದವು; ಇಟಲಿಯೂ ಪಶ್ಚಿಮ ಜರ್ಮನಿಯಲ್ಲಿ ಹಲವರೂ ಅದೇ ಭಾವನೆಯನ್ನು ಹೊಂದಿದ್ದರು; ಆದರೆ ಸ್ವತಃ ನೆಪೋಲಿಯನ್‌ಗೆ ಮಾತ್ರ ವೈಯಕ್ತಿಕ ಹಿತಾಸಕ್ತಿಯನ್ನು ನೆರವೇರಿಸಿಕೊಳುವುದಕ್ಕಿಂತ ಹೆಚ್ಚಿನ ವಿಮೋಚನೆಯ ಅಂಶವನ್ನು ಅದರಲ್ಲಿ ಕಾಣಲಿಲ್ಲ. ಹಲವಾರು ಸಂದರ್ಭಗಳಲ್ಲಿ ವ್ಯಕ್ತ್ಯತೀತ ಆದರ್ಶಗಳ ಸೋಗನ್ನು ಕೂಡ ಅವನು ಹಾಕಲಿಲ್ಲ. ಅಲೆಕ್ಸಾಂಡರ್ ಜಗತ್ತಿನ ಪೂರ್ವಭಾಗವನ್ನು ಗ್ರೀಕ್‌ತನದನ್ನಾಗಿ ಮಾಡಲು ಪ್ರಯತ್ನಿಸಿರಬಹುದು, ಆದರೆ ಮೆಸಿಡೋನಿಯನ್ನರಿಗೆ ಈ ರೀತಿಯ ದಂಡಯಾತ್ರೆಗಳಲ್ಲಿ ನಂಬಿಕೆ ಇದ್ದುದು ಮಾತ್ರ ಅನುಮಾನಾಸ್ಪದ. ಸಾಮ್ರಾಜ್ಯದ ಕೊನೆಯ ನೂರು ವರ್ಷಗಳಲ್ಲಿ ರೋಮನ್ ಸೇನಾನಾಯಕರು ಹಣ ಸಂಪಾದನೆಗಾಗಿ ಮುಂದಾದರು; ಭೂಮಿ-ಹಣಗಳನ್ನು ಕೊಟ್ಟು ಸೈನಿಕರ ನಿಷ್ಠೆಯನ್ನು ಗಳಿಸಲು ಪ್ರಯತ್ನಿಸಿದರು. ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಸೆಸಿಲ್ ರೋಡ್ಸ್‌ಗೆ[೧] ಒಂದು ಬಗೆಯ ನಿಗೂಢ ನಂಬಿಕೆಯಿತ್ತು, ಅದು ಒಳ್ಳೆಯ ಫಲಗಳನ್ನೂ ನೀಡಿತು; ಮಾಟಬೆಲೆಲ್ಯಾಂಡ್ ಅನ್ನು ಗೆಲ್ಲಲು ಅವನು ನೇಮಿಸಿಕೊಂಡ ಸೈನಿಕರಿಗೆ ರಾಜಾರೋಷವಾಗಿಯೇ ಹಣದ ಆಮಿಷವನ್ನು ಒಡ್ಡಲಾಯಿತು. ಅಲ್ಪಸ್ವಲ್ಪ ಅಥವಾ ಗೌಪ್ಯತೆಯೇ ಇಲ್ಲದ ಸುಸಂಘಟಿತ ದುರಾಸೆ ಜಗತ್ತಿನ ಯುದ್ಧಗಳಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿತು.

---

[೧] ಬ್ರಿಟಿಷ್ ಮೂಲದ ದಕ್ಷಿಣ ಆಫ್ರಿಕದ 'ದ ಬಿಯರ್ಸ್' ಎಂಬ ವಜ್ರದ ಕಂಪೆನಿಯ ಸ್ಥಾಪಕ (೧೮೫೩-೧೯೦೨)

ಸಾಮಾನ್ಯ ನಾಗರಿಕನು ನಾಯಕತ್ವಕ್ಕೆ ಮಣಿಯುವುದು ಮುಖ್ಯವಾಗಿ ಭಯದ ಕಾರಣದಿಂದಲೇ ಎಂದು ನಾವು ಹಿಂದೆಯೇ ಹೇಳಿದೆವು. ಆದರೆ ಇದನ್ನು ದರೋಡೆಕೋರರ ಗುಂಪಿಗೆ ಅನ್ವಯಿಸಲು ಸಾಧ್ಯವಿಲ್ಲ; ಅದಕ್ಕಿಂತ ಕಡಿಮೆ ಹಿಂಸಾತ್ಮಕ ಆಯ್ಕೆ ಅವರ ಮುಂದಿದ್ದರೆ ಮಾತ್ರ ಈ ಮಾತನ್ನು ಅನ್ವಯಿಸಬಹುದು, ಅಷ್ಟೆ. ನಾಯಕನೊಬ್ಬನ ಅಧಿಕಾರವು ಸ್ಥಿರಗೊಂಡ ಮೇಲೆ ಅವನು ಬಂಡಾಯಗಾರ ಹಿಂಬಾಲಕರಲ್ಲಿ ಭಯವನ್ನು ಬಿತ್ತಬಹುದು. ಆದರೆ ಅವನು ನಾಯಕನಾಗುವವರೆಗೆ, ಅವನನ್ನು ನಾಯಕನೆಂದು ಬಹುಸಂಖ್ಯಾತರು ಪರಿಗಣಿಸುವವರೆಗೆ, ಅವನು ಭಯವನ್ನುಂಟುಮಾಡಲಾರ. ನಾಯಕನೆಂದು ಒಪ್ಪಿತವಾಗುವವರೆಗೆ ಅವನು ಅಧಿಕಾರಗಳಿಕೆಗೆ ಆವಶ್ಯಕವಾದ ಗುಣಗಳನ್ನು ಇತರರಿಗಿಂತ ಹೆಚ್ಚು ಪ್ರಮಾಣದಲ್ಲಿ ಹೊಂದಿರಬೇಕು. ಅವುಗಳೆಂದರೆ, ಆತ್ಮವಿಶ್ವಾಸ, ಶೀಘ್ರನಿರ್ಧಾರಸಾಮರ್ಥ್ಯ ಮತ್ತು ಸೂಕ್ತ ಕ್ರಮನಿರ್ಧಾರಕೌಶಲ. ನಾಯಕತ್ವ ಎಂಬುದು ಸಾಪೇಕ್ಷ: ಸೀಸರ್ ಆಂಟೋನಿಯನ್ನು ತನಗೆ ವಿಧೇಯನಾಗಿ ಮಾಡಿಕೊಂಡಿರಬಹುದು, ಆದರೆ ಮತ್ತಾರೂ ಹಾಗೆ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ. ರಾಜಕೀಯ ಕಷ್ಟಕರ ಎಂಬುದು ಬಹುಜನರ ಅನಿಸಿಕೆ; ಅದರಿಂದಾಗಿ ನಾಯಕನೊಬ್ಬನನ್ನು ಅನುಸರಿಸುವುದೇ ಉತ್ತಮ ಎಂಬುದು ಅವರ ಭಾವನೆ. ಇದು ಅವರಲ್ಲಿ ಸಹಜವಾಗಿರುವಂಥದೇ ಹೊರತು ಪ್ರಜ್ಞಾಪೂರ್ವಕವಾದುದಲ್ಲ, ನಾಯಿಗಳಿಗೆ ತಮ್ಮ ಯಜಮಾನರ ಬಗ್ಗೆ ಇದ್ದ ಹಾಗೆ. ಹೀಗಲ್ಲದಿದ್ದರೆ, ಸಾಮೂಹಿಕ ರಾಜಕಾರಣವು ಸಾಧ್ಯವಾಗುತ್ತಿರಲಿಲ್ಲ.

ಅಂದರೆ, ಸಹಜ ಅಧಿಕಾರದ ಹಂಬಲವು ಪುಕ್ಕಲುತನದಿಂದ ಪರಿಮಿತಗೊಳ್ಳುತ್ತದೆ ಎಂದಂತಾಯಿತು; ಇದರಿಂದಲೇ ಸ್ವಯಂನಿರ್ಧಾರಕ ಶಕ್ತಿಯೂ ಮಿತಿಗೊಳ್ಳುತ್ತದೆ. ಅನ್ಯತ್ರ ಅಸಾಧ್ಯವಾದ ಬಯಕೆಗಳನ್ನು ಅಧಿಕಾರದಿಂದ ಈಡೇರಿಸಕೊಳ್ಳಲು ಆಗುವುದರಿಂದ, ಹಾಗೂ ಇತರರಿಂದ ತನಗೆ ರಕ್ಷಣೆಯೊದಗುವುದರಿಂದ, ಪುಕ್ಕಲುತನ ಮಸುಳಿಸುವವರೆಗೂ ಅಧಿಕಾರಕ್ಕಾಗಿ ಹಂಬಲಿಸುವುದು ಸಹಜವೇ ಆಗಿರುತ್ತದೆ. ಈ ಬಗೆಯ ಪುಕ್ಕಲತನವು ಜವಾಬ್ದಾರಿಗಳಿಂದಾಗಿ ಕಡಿಮೆಯಾಗುತ್ತದೆ; ಹಾಗೆಯೇ ಜವಾಬ್ದಾರಿ ನಿರ್ವಹಣೆಯು ಅಧಿಕಾರದಾಹವನ್ನು ಹೆಚ್ಚಿಸುತ್ತದೆ ಕೂಡ. ಕ್ರೌರ್ಯ ಮತ್ತು ನಿಷ್ಠುರತೆಗಳು ಎರಡು ದೆಸೆಗಳಲ್ಲಿ ಕಾರ್ಯಶೀಲವಾಗಬಹುದು: ಕಣ್ಣಿಗೆ ಬೀಳುವುದರಿಂದ ಪಾರಾಗಲು ಪ್ರಯತ್ನಿಸುವಂತೆ ಅವು ಶೀಘ್ರಭಯಿಗಳನ್ನು ಪ್ರೇರಿಸಬಹುದು, ಅದೇ ಧೈರ್ಯಸ್ಥರಲ್ಲಿ ತಾವೇ ಅನುಭವಿಸುವುದಕ್ಕಿಂತ ಹೆಚ್ಚಾಗಿ ಇತರರ ಬಗ್ಗೆ ಕ್ರೂರವಾಗಿ ವರ್ತಿಸುವಂತೆ ಮಾಡಬಹುದು.

ಅನಾಯಕತ್ವದ ನಂತರದ ಮೊದಲ ಸಹಜ ಹೆಜ್ಜೆ ಎಂದರೆ ನಿರಂಕುಶ ಮನೋಭಾವ; ಇದಕ್ಕೆ ಕಾರಣ ಸಹಜ ಮನೋವೃತ್ತಿಗಳಾದ ದರ್ಪ ಮತ್ತು ವಿಧೇಯತೆಗಳು; ಇದನ್ನು ಕುಟುಂಬ, ಸರ್ಕಾರ ಹಾಗೂ ವ್ಯವಹಾರಕ್ಷೇತ್ರಗಳಲ್ಲಿ ಕಾಣಬಹುದು. ಸಮಾನ ಸಹಕಾರವು ದರ್ಪಕ್ಕಿಂತ ತುಂಬ ಕಷ್ಟಕರವಾದುದು, ಅಲ್ಲದೆ ಅದು ಸಹಜ ಪ್ರವೃತ್ತಿಯಲ್ಲ. ವ್ಯಕ್ತಿಗಳು ಸಮಾನ ಸಹಕಾರಕ್ಕಾಗಿ ಹವಣಿಸಿದಾಗ, ಅವರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪೂರ್ಣ ನಿಯಂತ್ರಣಕ್ಕಾಗಿ ಪ್ರಯತ್ನಿಸುತ್ತಾನೆ; ಇದಕ್ಕೆ ಕಾರಣ ಅಲ್ಲಿ ವಿಧೇಯತೆಗೆ ಸ್ಥಾನವಿಲ್ಲದಿರುವುದು. ಸಹಕಾರಪ್ರಯತ್ನದಲ್ಲಿ ಭಾಗಿಗಳಾದ ಎಲ್ಲರೂ ತಮ್ಮೆಲ್ಲರ ಹೊರತಾದ ಯಾವುದೋ ಒಂದು ವಸ್ತುವಿನ ಬಗ್ಗೆ ಸಮಾನ ನಿಷ್ಠೆಯನ್ನು ಹೊಂದಿರುವುದು ಆವಶ್ಯಕವಾಗುತ್ತದೆ. ಚೈನಾದಲ್ಲಿ ಹಲವೊಮ್ಮೆ ಕೌಟುಂಬಿಕ ವ್ಯವಹಾರವು ಯಶಸ್ವಿಯಾಗುವುದು, ಕುಟುಂಬದ ಬಗ್ಗೆ ಅಲ್ಲಿರುವ ಕನ್‌ಫ್ಯೂಷಿಯನ್ ನಿಷ್ಠೆ; ಅದೇ ವ್ಯಕ್ತ್ಯತೀತ ಪ್ರಯತ್ನವಾದ ಜಾಯಿಂಟ್ ಸ್ಟಾಕ್ ಕಂಪೆನಿಗಳ ಕಾರ್ಯನಿರ್ವಹಣೆ ಕಷ್ಟಕರವಾಗುತ್ತದೆ; ಯಾರಿಗೂ ಇತರ ಪಾಲುದಾರರ ಬಗ್ಗೆ ಪ್ರಾಮಾಣಿಕವಾದ ಸಹಜ ಒತ್ತಡ ಇರುವುದಿಲ್ಲ. ಸ್ವಯಂಪ್ರೇರಿತವಾದ ಒಂದು ಸರ್ಕಾರ ಇರುವೆಡೆಯಲ್ಲಿ, ಅದು ಯಶಸ್ವಿಯಾಗಬೇಕಾದರೆ ಎಲ್ಲರೂ ಕಾನೂನನ್ನೋ, ದೇಶವನ್ನೋ, ಯಾವುದಾದರೊಂದು ಸಮಾನ ತತ್ವವನ್ನೋ ಗೌರವಿಸಬೇಕಾಗುತ್ತದೆ. ಒಂದು ಅನುಮಾನಾಸ್ಪದ ವಿಷಯದಲ್ಲಿ ನಿರ್ಧಾರವನ್ನು ಕೈಗೊಳ್ಳಬೇಕಾದಾಗ 'ಸೊಸೈಟಿ ಆಫ್ ಫ್ರೆಂಡ್ಸ್' ಮತದಾನ ನಡೆಸಿ ಬಹುಮತದಂತೆ ನಡೆಯುವುದಿಲ್ಲ; ಬದಲು, 'ಸಭೆಯ ಒಮ್ಮತ' ಮೂಡುವವರೆಗೂ ಚರ್ಚಿಸಿ ಅದರಂತೆ ನಡೆಯುತ್ತಾರೆ, ಅದು ದೈವಪ್ರಜ್ಞೆಯಿಂದ ಪ್ರೇರಿತವಾದುದೆಂಬ ನಂಬಿಕೆಯಿರುತ್ತಿತ್ತು. ನಮಗೆ ಇಲ್ಲಿ ಮುಖ್ಯವಾದುದು ಅವರ ನಡುವಣ ವಿರಳವಾದ ಏಕಾಭಿಪ್ರಾಯ; ಸ್ವಲ್ಪ ಮಟ್ಟಿಗಿನ ಏಕಾಭಿಪ್ರಾಯವಿಲ್ಲದೆ ಚರ್ಚೆಯ ಮೂಲಕ ನಿರ್ಧಾರಸಾಧ್ಯತೆಯುಂಟಾಗದು.

ಹೀಗೆ ಆವಶ್ಯಕವಾದ ವ್ಯವಹಾರಸಾಧ್ಯ ಒಮ್ಮತವನ್ನು ಚರ್ಚೆಯ ಮೂಲಕ ಕೈಗೊಳ್ಳುವುದು ಕೌಟುಂಬಿಕ ನೆಲೆಯಲ್ಲಿ ಕಷ್ಟವಾಗಲಾರದು. ಇದಕ್ಕೆ ನಿದರ್ಶನಗಳೆಂದರೆ, ಕ್ವೇಕರ್ಸ್‌ನಂತಹ ಧಾರ್ಮಿಕ ಬುಡಕಟ್ಟುಗಳಲ್ಲಿನ ಫಗರ್ಸ್ ಅಥವಾ ರಾತ್‌ಶಿಲ್ಡ್ಸ್ ಅಂತಹ ಗುಂಪುಗಳು, ನಾಗರಿಕ ಬುಡಕಟ್ಟಿನ ಕ್ವಾಕರ್ಸ್ ಅಂತಹ ಸಣ್ಣ ಮತಧಾರ್ಮಿಕ ಗುಂಪು ಅಥವಾ ಯುದ್ಧದಲ್ಲಿ ತೊಡಗಿರುವ ಅಥವಾ ಯುದ್ಧಭೀತಿಯನ್ನು ಎದುರಿಸುತ್ತಿರುವ ದೇಶ. ಆದರೆ ಇದಕ್ಕೆ ಬಾಹ್ಯ ಒತ್ತಡ ಅನಿವಾರ್ಯವೇ ಆಗುತ್ತದೆ; ಒಂದು ಗುಂಪಿನ ಸದಸ್ಯರು ಅಪಾಯವೊಂದರಲ್ಲಿ ಬೇರೆ ಬೇರೆಯಾಗಿರುವುದರ

ಬದಲು ಒಟ್ಟಾಗಿ ಸಿಲುಕಿಕೊಳ್ಳಲು ಬಯಸುತ್ತಾರೆ. ಅತ್ಯಂತ ಸುಲಭ ರೀತಿಯಲ್ಲಿ ಒಮ್ಮತವನ್ನು ಮೂಡಿಸುವದರಲ್ಲಿ ಅಪಾಯದ ಭಯ ಯಶಸ್ವಿಯಾಗುತ್ತದೆ. ಆದರೆ ಇದರಿಂದ ಜಗತ್ತಿನ ಅಧಿಕಾರದಾಹದ ಸಮಸ್ಯೆಯನ್ನು ಪರಿಹರಿಸುವ ಯಾವ ದಾರಿಯೂ ಕಾಣುವುದಿಲ್ಲ. ಐಕ್ಯಸಾಧನೆಗೆ ಪ್ರಸ್ತುತ ಭೂಮಿಕೆಯಾಗುವ ಯುದ್ಧದಂತಹ ಅಪಾಯವನ್ನು ನಿವಾರಿಸಬೇಕೆನ್ನುವುದು ನಮ್ಮ ಇರಾದೆ, ಹಾಗೆಯೇ ನಮಗೆ ಸಾಮಾಜಿಕ ಹೊಂದಾಣಿಕೆಯನ್ನು ನಾಶಮಾಡುವ ಇಷ್ಟವಿಲ್ಲ. ಇದು ಮಾನಸಿಕವಾಗಿಯೂ ರಾಜಕೀಯವಾಗಿಯೂ ಸವಾಲೆನಿಸುವ ಸಮಸ್ಯೆಯೇ. ಸಾಮ್ಯದ ಮೂಲಕ ವಿಶ್ಲೇಷಿಸುವುದಾದರೆ, ಸಾಧ್ಯವೇ ಆಗುವುದಾದರೆ, ಯಾವುದಾದರೊಂದು ದೇಶವು ಆರಂಭಕ್ಕೆ ದರ್ಪದಿಂದ ತರರ ಮೇಲೆ ನಿಯಂತ್ರಣ ಹೊಂದುವುದರಿಂದ ಮಾತ್ರ. ಮುಕ್ತ ವಿರೋಧದ ಹವ್ಯಾಸವಿರುವ ದೇಶಗಳ ನಡುವಣ ಮುಕ್ತ ಹೊಂದಾಣಿಕೆಯ ಸಾಧನೆಯು ವಿಭಜನೆಗೆ ಮುಂಚಿನ ಪೋಲಿಶ್ ಶ್ರೀಮಂತಪ್ರಭುತ್ವಗಳ ನಡುವೆ ಇದ್ದಷ್ಟೇ ಕಷ್ಟಕರವಾದುದು. ಈ ನಿದರ್ಶನದಲ್ಲಿಯಂತೆ, ಸಾಮಾನ್ಯ ತಿಳಿವಳಿಕೆಗಿಂತ ವಿನಾಶವೇ ಉತ್ತಮ ಎಂದು ತಿಳಿಯುವ ಸಾಧ್ಯತೆಯೇ ಹೆಚ್ಚು. ಮಾನವಜನಾಂಗಕ್ಕೆ ಸರ್ಕಾರ ಆವಶ್ಯಕ, ಆದರೆ ಹಿಂದೆ ಎಲ್ಲೆಲ್ಲಿ ಅನಾಯಕತ್ವವು ತಾಂಡವವಾಡುತ್ತತ್ತೋ ಅಂತಹ ಕ್ಷೇತ್ರಗಳಲ್ಲಿನ ಜನತೆಯು ಮೊದಲು ದರ್ಪಿಷ್ಟ ಆಡಳಿತಕ್ಕೆ ಮಾತ್ರ ಮಣಿಯುತ್ತಾರೆ. ಹೀಗಾಗಿ ದರ್ಪಿಷ್ಟವಾದರೂ ಪರವಾಗಿಲ್ಲ, ಮೊದಲು ನಾವು ಸರ್ಕಾರವನ್ನು ಹೊಂದುವಂತಾಗಬೇಕು; ಒಮ್ಮೆ ಸರ್ಕಾರ ರಚಿತವಾದರೆ ಆನಂತರ ಕ್ರಮೇಣವಾಗಿ ಪ್ರಜಾಪ್ರಭುತ್ವವನ್ನು ಅನುಷ್ಠಾನಗೊಳಿಸಬಹುದು. "ಸಂಘಟನೆಯನ್ನು ಕಟ್ಟಲು ಗರಿಷ್ಠ ಅಧಿಕಾರ ಆವಶ್ಯಕ. ಆಮೇಲೆ ಅಧಿಕಾರವನ್ನು ಎಲ್ಲರ ಹಿತಕ್ಕಾಗಿ ಬಳಸಬೇಕೆಂಬ ಸಾಮಾಜಿಕ ಒತ್ತಡ ನಿಧಾನವಾಗಿಯಾದರೂ ಬರುವುದು ಖಂಡಿತ. ಧಾರ್ಮಿಕ ಹಾಗೂ ರಾಜಕೀಯ ಇತಿಹಾಸಗಳಲ್ಲಿ ನಿರಂತರವಾಗಿರುವ ಈ ಒತ್ತಡವು ಈಗಾಗಲೇ ಆರ್ಥಿಕರಂಗದಲ್ಲಿಯೂ ಕಾಣಿಸಿಕೊಳ್ಳಲು ಪ್ರಾರಂಭಿಸಿದೆ"[೧]

---

೧. ಎ.ಎ. ಬರ್ಲಿ ಮತ್ತು ಜಿ.ಸಿ. ಮೇನ್ಸ್, 'ದ ಮಾಡರ್ನ್ ಕಾರ್ಪೋರೇಷನ್ ಅಂಡ್ ಪ್ರೈವೇಟ್ ಪ್ರಾಪರ್ಟಿ', ಪು. ೩೫೩. (ಈ ಪುಸ್ತಕದಲ್ಲಿ ಲೇಖಕರು ಚರ್ಚಿಸುತ್ತಿರುವುದು ಕೈಗಾರಿಕಾ ಸಂಘಟನೆಗಳ ಕುರಿತು).

ಇದುವರೆಗೆ ನಾನು ಆಜ್ಞೆ ನೀಡುವವರ ಮತ್ತು ಅದನ್ನು ಪಾಲಿಸುವವರ ಬಗ್ಗೆ ಮಾತನಾಡಿದ್ದೇನೆ. ಆದರೆ ಇನ್ನೊಂದು ಗುಂಪಿದೆ; ಅದೆಂದರೆ, ಇದರಿಂದ ದೂರವಿರುವವರು. ದರ್ಪಕ್ಕೆ ಮಣಿಯದ ಧೈರ್ಯ ಹೊಂದಿದ್ದರೂ ಇತರರನ್ನು ದರ್ಪದಿಂದ ಕಾಣುವ ಚಾಪಲ್ಯಕ್ಕೊಳಗಾಗದ ಜನ ಇವರು. ಇಂಥವರು ಸಾಮಾಜಿಕ ಸಂಘಟನೆಯಲ್ಲಿ ಸರಳವಾಗಿ ಹೊಂದಿಕೊಳ್ಳಲಾರರು, ಅವರು ಏಕಾಂತದಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ಏನಾದರೊಂದು ಆಶ್ರಯತಾಣವನ್ನು ಹುಡುಕುತ್ತಿರುತ್ತಾರೆ. ಕೆಲವೊಮ್ಮೆ ಈ ಮನೋಭಾವವರು ಐತಿಹಾಸಿಕವಾಗಿ ಬಹು ಮುಖ್ಯವಾಗುತ್ತಾರೆ; ಆರಂಭದ ಕ್ರಿಶ್ಚಿಯನ್ನರು ಮತ್ತು ಅಮೆರಿಕದ ಮೂಲಪುರುಷರು ಇದರ ಎರಡು ಪಂಗಡಗಳನ್ನು ಪ್ರತಿನಿಧಿಸುತ್ತಾರೆ. ಇವರ ಆಶ್ರಯತಾಣವು ಕೆಲವೊಮ್ಮೆ ಮಾನಸಿಕವಾದುದು, ಮತ್ತೆ ಕೆಲವು ಸಲ ಭೌತಿಕವಾದುದು. ಕೆಲವು ಸಲ ಅದು ಆಶ್ರಮದಂತಹ ಕಟ್ಟೇಕಾಂತವನ್ನು ಬೇಡಬಹುದು; ಮತ್ತೆ ಕೆಲವೊಮ್ಮೆ ಮಠಗಳ ಸಾಮಾಜಿಕ ಏಕಾಂತತೆಯನ್ನು ಬಯಸಬಹುದು. ಮಾನಸಿಕ ಏಕಾಂತಿಗರಲ್ಲಿ ಅಸ್ಪಷ್ಟ ಪಂಥಗಳವರು ಸೇರುತ್ತಾರೆ; ಅವರನ್ನು ಮುಗ್ಧ ಗೀಳುಗಳು ಆವರಿಸಿರುತ್ತವೆ, ನಿಗೂಢವೂ ಅಮುಖ್ಯವೂ ಆದ ತಿಳಿವಳಿಕೆಯನ್ನು ಸಂಪಾದಿಸುವುದರಲ್ಲಿ ಅವರು ಮುಳುಗಿಬಿಟ್ಟಿರುತ್ತಾರೆ. ಭೌತಿಕ ಏಕಾಂತತೆಯನ್ನು ಬಯಸುವವರು ನಾಗರಿಕತೆಯ ಎಲ್ಲೆಯ ಬೆನ್ನುಹತ್ತಿದವರು. ಹದಿನೈದು ವರ್ಷಗಳಷ್ಟು ಕಾಲ ಇಂಡಿಯನ್ ಸಮಾಜವನ್ನು ಹೊರತಾದ ಮತ್ತೊಂದರ ಸಂಪರ್ಕವನ್ನು ಪಡೆಯದಿದ್ದ 'ಅಮೆಜಾನ್ ದಡದ ಮೇಲಿನ ಪ್ರಕೃತಿವಾದಿ' ಎನಿಸಿದ ಬೇಟ್ಸ್ ಅಂಥವರು. ಕೆಲವು ಬಗೆಗಳಲ್ಲಿ ಶ್ರೇಷ್ಠತೆಯನ್ನು ಸಂಪಾದಿಸಲು ಋಷಿಸದೃಶ ಮನೋಭಾವವು ತೀರ ಆವಶ್ಯಕ; ಇದು ಜನರನ್ನು ಜನಪ್ರಿಯತೆಯ ಚಾಪಲ್ಯದಿಂದ ದೂರವಿರಿಸುತ್ತದೆ, ಬಹುಜನರ ಇಷ್ಟಕ್ಕೆ ವಿರುದ್ಧವಾದ ಅಥವಾ ಅವಜ್ಞೆಗೊಳಗಾದ ಪ್ರಮುಖ ಅನ್ವೇಷಣೆಯಲ್ಲಿ ತೊಡಗುವಂತೆ ಮಾಡುತ್ತದೆ, ಸಮಕಾಲೀನ ತಪ್ಪು ತಿಳಿವಳಿಕೆಗಳಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗಿಸುತ್ತದೆ.

ತಮ್ಮದೇ ಚಿಪ್ಪಿನಲ್ಲಿ ಹುದುಗಿಕೊಳ್ಳುವ ಸ್ವಭಾವದವರಲ್ಲಿ ಕೆಲವರಿಗೆ ಅಧಿಕಾರವೆಂದರೆ ಸಹಜ ವಿರೋಧವೇನೂ ಇರುವುದಿಲ್ಲ, ಆದರೆ ಸಾಂಪ್ರದಾಯಿಕ ಮಾರ್ಗಗಳಲ್ಲಿ ಅದನ್ನು ಪಡೆಯಲು ಅವರು ಅಸಮರ್ಥರು. ಅಂಥವರು ಸಂತರಾಗಬಹುದು, ಇಲ್ಲ ಪಾಷಂಡಿಗಳಾಗಬಹುದು; ಆಶ್ರಮಸ್ಥಾಪಕರಾಗಬಹದು, ಅಥವಾ ಕಲೆಸಾಹಿತ್ಯಗಳಲ್ಲಿ ಅವರು ಹೊಸ ಪಂಥವನ್ನು ಸೃಷ್ಟಿಸಬಹುದು. ಅಂಥವರ

ಸುತ್ತ ತಮ್ಮಲ್ಲಿ ಬಂಡಾಯಸ್ವಭಾವ ಮತ್ತು ವಿಧೇಯತೆಗಳನ್ನು ಮೇಳೈಸಿಕೊಂಡ ಅನುಯಾಯಿಗಳ ಗುಂಪೊಂದು ಇರುತ್ತದೆ; ಬಂಡಾಯಪ್ರವೃತ್ತಿಯಿಂದ ಅವರಲ್ಲಿ ಸಂಪ್ರದಾಯಶರಣತೆ ದೂರವಾಗಿದ್ದರೆ, ವಿಧೇಯತೆಯು ಹೊಸ ತಾತ್ವಿಕತೆಯನ್ನು ಪ್ರಶ್ನೆಯಿಲ್ಲದೆ ಒಪ್ಪಿಕೊಳ್ಳುವ ಮನೋಭಾವವನ್ನು ಅವರಲ್ಲಿ ಉಂಟುಮಾಡಿರುತ್ತದೆ. ಟಾಲ್ಸ್‌ಟಾಯ್ ಮತ್ತವನ ಹಿಂಬಾಲಕರು ಇದಕ್ಕೆ ಅತ್ಯುತ್ತಮ ಉದಾಹರಣೆ. ಅಪ್ಪಟ ಏಕಾಂತಪ್ರಿಯತೆ ಇದಕ್ಕೆ ಭಿನ್ನವಾದದ್ದು. ಈ ರೀತಿಗೆ 'ಮೆಲಂಕಲಿ ಜಾಕ್ಸ್' ಒಳ್ಳೆಯ ನಿದರ್ಶನ. ಒಳ್ಳೆಯ ಡ್ಯೂಕ್ ಜೊತೆ ಗಡೀಪಾರಿನಲ್ಲಿ ಭಾಗಿಯಾಗುವುದು ಗಡೀಪಾರಿನ ಸ್ಥಿತಿಯನ್ನು ಅವರು ಇಷ್ಟಪಡುವುದರಿಂದ; ಆಮೇಲೆ ಅವರು ದುಷ್ಟ ಡ್ಯೂಕ್ ಜೊತೆ ಅಲ್ಲಿಯೇ ಉಳಿದಾರೇ ಹೊರತು ಮತ್ತೆ ಊರಿಗೆ ಮರಳಲಾರರು. ಅನೇಕ ಮಂದಿ ಅಮೆರಿಕನ್ ಮೂಲಪುರುಷರು, ದೀರ್ಘಕಾಲದ ವೇದನೆ ಮತ್ತು ಒಂಟಿತನವನ್ನು ಅನುಭವಿಸಿದ ನಂತರ, ನಾಗರಿಕತೆಯ ಬಲೆಗೆ ಬಿದ್ದು ತಮ್ಮ ಜಮೀನುಗಳನ್ನು ಮಾರಿ ಇನ್ನೂ ಪಶ್ಚಿಮದತ್ತ ಸಾಗಿದರು. ಈ ಮನಃಪ್ರವೃತ್ತಿಯವರಿಗೆ ಜಗತ್ತಿನಲ್ಲಿ ದೊರೆಯುವ ಅವಕಾಶಗಳು ಅತ್ಯಲ್ಪ. ಕೆಲವರು ಅಪರಾಧಪ್ರವತ್ತಿಯನ್ನು ಮೈಗೂಡಿಸಿಕೊಂಡರೆ, ಮತ್ತೆ ಕೆಲವರು ಖಿನ್ನತೆ ಮತ್ತು ಸಮಾಜವಿರೋಧಿ ತಾತ್ವಿಕತೆಯನ್ನು ಅವಲಂಬಿಸಬಹುದು. ಸಹಜೀವಿಗಳೊಂದಿಗೆ ಹೆಚ್ಚು ಒಡನಾಡಿದರೆ ಅವರಲ್ಲಿ ಮನುಷ್ಯವಿರೋಧಿ ನಿಲವುಂಟಾಗುತ್ತದೆ; ಏಕಾಂತತೆಯನ್ನು ಸಾಧಿಸಿಕೊಳ್ಳದಾದಾಗ ಇದು ಸಹಜವಾಗಿ ಅವರಲ್ಲಿ ಹಿಂಸಾಪ್ರವೃತ್ತಿಯನ್ನು ಉದ್ದೀಪಿಸುತ್ತದೆ.

ಪುಕ್ಕಲು ಸ್ವಭಾವದವರಲ್ಲಿ ಸಂಘಟನೆ ಸುಲಭಸಾಧ್ಯ; ಇದಕ್ಕೆ ಕಾರಣ ಅವರು ನಾಯಕರನ್ನು ಅನುಸರಿಸುತ್ತಾರೆ ಎಂಬುದು ಮಾತ್ರವಲ್ಲ, ಒಂದೇ ಮನೋಭಾವದವರೆಲ್ಲ ಒಟ್ಟಿಗೆ ಇರುವುದು ಕ್ಷೇಮಕರ ಎಂಬ ಭಾವನೆ ಅವರಲ್ಲಿ ಪ್ರಬಲವಾಗಿರುವುದು. ಉತ್ಸಾಹಕರವಾದ ಒಂದು ಸಾರ್ವಜನಿಕ ಸಭೆಯ ಬಗ್ಗೆ ಸಹಾನುಭೂತಿ ಹೊಂದಿರುವವನ ಮನಸ್ಸಿನಲ್ಲಿಯೂ ಒಂದು ಬಗೆಯ ಉಲ್ಲಾಸ ಮನೆ ಮಾಡಿಕೊಳ್ಳುತ್ತದೆ, ಜೊತೆಗೆ ಆತ್ಮೀಯತೆ ಮತ್ತು ಸುಭದ್ರತೆಯ ಭಾವನೆಗಳು ಕೂಡ. ಎಲ್ಲರಿಗೂ ಸಮಾನವಾದ ಭಾವನೆಗಳು ಹೆಚ್ಚಾಗುತ್ತ ಕೊನೆಗೆ ಮಿಕ್ಕೆಲ್ಲ ಭಾವನೆಗಳನ್ನು ಹೊಡೆದಟ್ಟುತ್ತವೆ; ಕೊನೆಗೆ ಉಳಿಯುವುದು ಸಮಷ್ಟಿ ಅಹಮಹಮಿಕೆಯಿಂದ ಮೂಡುವ ಅಧಿಕಾರದ ಸಂಭ್ರಮದ ಭಾವನೆ. ಸಾಮೂಹಿಕ ಉದ್ರೇಕ ಎಂಬುದು ಒಂದು ಬಗೆಯ ರೋಚಕ ಮಾದಕತೆ; ಇದರಿಂದ ವಿವೇಕ, ಮಾನವೀಯತೆ ಹಾಗೂ ಸ್ವರಕ್ಷಣೆಯನ್ನು ಕೂಡ ಸುಲಭವಾಗಿ

ಮರೆಯುವಂತಾಗುತ್ತದೆ; ಹಾಗೆಯೇ ಇದರಿಂದಾಗಿ ಕ್ರೌರ್ಯ ತುಂಬಿದ ಮಾರಣಹೋಮ ಮತ್ತು ವೀರಾತ್ಮಕ ಬಲಿದಾನಗಳೂ ಅಷ್ಟೇ ಸುಲಭವಾಗಿ ಸಾಧ್ಯವಾಗುತ್ತವೆ. ಒಮ್ಮೆ ಇದರ ಆನಂದವು ಅನುಭವಕ್ಕೆ ಬಂದರೆ, ಮಿಕ್ಕವುಗಳಂತೆಯೇ ಈ ಬಗೆಯ ಮಾದಕತೆ ಸಹ ಅದಮ್ಯವಾದುದಾಗಿಬಿಡುತ್ತದೆ; ಆದರೆ ಕೊನೆಗೆ ಇದರಿಂದ ಸಂವೇದನಾರಾಹಿತ್ಯ ಹಾಗೂ ದಣಿವುಗಳು ಉಂಟಾಗುತ್ತವೆ. ಮುಂಚಿನ ಉತ್ಸಾಹವನ್ನು ಮತ್ತೆ ಮೂಡಿಸಲು ಬರಬರುತ್ತ ಹೆಚ್ಚು ಹೆಚ್ಚು ತೀವ್ರವಾದ ಚೋದನೆಗಳು ಆವಶ್ಯಕವಾಗುತ್ತದೆ.

ನಾಯಕನು ಇಂತಹ ಭಾವನೆಗಳನ್ನು ಹೊಂದದಿರಬಹುದಾದರೂ, ಅಂಥವನ್ನು ಜನಸಂದಣಿಯು ಸಂಗೀತದ ಮೂಲಕ ಅಥವಾ ಉದ್ದೀಪಕ ಸನ್ನಿವೇಶಗಳನ್ನು ನೋಡುವ ಮೂಲಕವೂ ಉಂಟುಮಾಡಬಹುದು, ಆದರೆ ಅದನ್ನು ಪ್ರಚೋದಿಸಲು ಅತ್ಯಂತ ಸುಲಭವೂ ಸಾಮಾನ್ಯವೂ ಆದ ಸಾಧನವೆಂದರೆ ವಾಗ್ಮಿಯ ಮಾತುಗಾರಿಕೆ. ಹೀಗಾಗಿ ಸಾಮೂಹಿಕ ಉದ್ರೇಕಕಾರಿತನವೇ ನಾಯಕನೊಬ್ಬನ ಅಧಿಕಾರದ ಮುಖ್ಯ ಅಂಶಗಳಲ್ಲೊಂದಾಗುತ್ತದೆ. ತಾನು ಉದ್ರೇಕಿಸುವ ಭಾವನೆಗಳನ್ನು ನಾಯಕನು ಅನುಭವಿಸದಿರಬಹುದು; ಶೇಕ್ಸ್‌ಪಿಯರ್ ಹೇಳುವಂತೆ ಅವನು ಹೀಗೆಂದುಕೊಳ್ಳಬಹುದು:

ಈಗದು ಕಾರ್ಯಶೀಲವಾಗಲಿ; ಕೀಟಲೆಯೇ,
ನಡೆದು ಬರುವೆ ನೀನು
ನಿನಗೆ ಸರಿತೋರಿದ ಹಾದಿಯಲ್ಲಿಯೇ
ನೀನಿನ್ನು ಮುಂದೆ ಸಾಗು!

ಹಿಂಬಾಲಕರ ಮೇಲಿನ ಅಧಿಕಾರವನ್ನು ನಾಯಕನೊಬ್ಬನು ಸವಿಯಲಾಗದಿದ್ದರೆ ಅವನು ಯಶಸ್ಸನ್ನು ಕಾಣುವುದು ಕಷ್ಟ. ಆದ್ದರಿಂದ ತನ್ನ ಯಶಸ್ಸು ಯಾವುದರಿಂದ ಸುಲಭವೋ, ಅಂಥ ಸನ್ನಿವೇಶ ಅಥವಾ ಜನಸಮೂಹವನ್ನು ಅವನು ಬಯಸುವಂತಾಗುತ್ತದೆ. ಇಂಥ ಅತ್ಯಂತ ಸೂಕ್ತವಾದುದೆಂದರೆ, ಜನರು ಧೈರ್ಯವನ್ನು ತುಂಬಿಕೊಂಡು ಅದನ್ನೆದುರಿಸಲು ಸಿದ್ಧರಾಗುವಷ್ಟು ಗಂಭೀರ ಅಪಾಯವುಂಟಾಗಿರುವ ಸನ್ನಿವೇಶ, ಆದರೆ ಅಂತಹುದು ಬರೀ ಭಯವೇ ಆವರಿಸಿಬಿಡುವಷ್ಟು ಭೀಕರವಾಗಿರಬಾರದು. ನಿದರ್ಶನಕ್ಕೆ, ಗೆಲ್ಲಲು ಕಷ್ಟಕರವಾದ ಆದರೆ ಅಸಾಧ್ಯನಲ್ಲದ ಶತ್ರುವಿನ ಜೊತೆಗಿನ ಯುದ್ಧ. ಯುದ್ಧೋತ್ಸಾಹವನ್ನು ತುಂಬುವಂತೆ ಮಾತಾಡಬಯಸುವ ಕುಶಲ ವಾಗ್ಮಿಯು ಕೇಳುಗರಲ್ಲಿ ಎರಡು ನೆಲೆಗಳ ನಂಬಿಕೆಯನ್ನು ಮೂಡಿಸುತ್ತಾನೆ: ಅದರಲ್ಲಿ ಒಂದು, ಶತ್ರುವಿನ

ಸಾಮರ್ಥ್ಯವನ್ನು ಉತ್ಪ್ರೇಕ್ಷೆ ಮಾಡಿ ಧೈರ್ಯ ವಹಿಸುವುದು ಆವಶ್ಯಕ ಎಂಬ ಭಾವನೆಯನ್ನು ಮೂಡಿಸುವ ಮೇಲ್ಪದರದ್ದು; ಇನ್ನೊಂದು, ತಮಗೆ ಗೆಲವು ನಿಶ್ಚಿತ ಎಂಬ ಭರವಸೆಯನ್ನು ಉಂಟುಮಾಡುವ ಆಳದ್ದು. 'ಧರ್ಮಕ್ಕೇ ಜಯ' ಎಂಬಂತಹ ಘೋಷಣೆಗಳಲ್ಲಿ ಇವೆರಡೂ ನೆಲೆಗಳು ಹುದುಗಿರುತ್ತವೆ.

ವಾಗ್ಮಿಯು ಇಷ್ಟಪಡುವ ಕೇಳುಗ ಸಮುದಾಯವೆಂದರೆ, ಚಿಂತನೆಗಿಂತ ಹೆಚ್ಚಾಗಿ ಭಾವನೆಗಳಿಗೆ ಒಳಗಾಗುವಂಥದು, ಭಯ ಮತ್ತು ಅದರ ಪರಿಣಾಮವಾದ ದ್ವೇಷವನ್ನು ತುಂಬಿಕೊಳ್ಳಬಹುದಾದುದು, ನಿಧಾನವೂ ಹಂತ ಹಂತದ್ದೂ ಆದ ಮಾರ್ಗದ ಬಗ್ಗೆ ಅಸಹನೆಯನ್ನು ಹೊಂದಿರುವಂಥದು, ಉದ್ರೇಕ ಮತ್ತು ನಿರೀಕ್ಷೆಗಳನ್ನು ಕೂಡಿಯೇ ಮೈಗೂಡಿಸಿಕೊಂಡಿರುವಂಥದ್ದು. ತೀರ ಸಿನಿಕನಲ್ಲದ ವಾಗ್ಮಿಯು ತನ್ನ ಕಾರ್ಯಗಳನ್ನು ಸಮರ್ಥಿಸುವ ನಂಬಿಕೆಗಳನ್ನು ಹೊಂದಿರುತ್ತಾನೆ. ಚಿಂತನಶೀಲತೆಗಿಂತ ಭಾವನಾತ್ಮಕತೆಯೇ ಸಮರ್ಥವಾದ ಚಾಲಕಶಕ್ತಿ ಎಂಬ ನಂಬಿಕೆ; ನಮ್ಮ ಅಭಿಪ್ರಾಯಗಳನ್ನು ಹೃದಯದಲ್ಲಿ ರೂಪಿಸಿಕೊಳ್ಳಬೇಕೇ ಹೊರತು ಮೆದುಳಿನಲ್ಲಲ್ಲ ಎಂಬ ನಂಬಿಕೆ; ಮನುಷ್ಯನ ಉತ್ಕೃಷ್ಟ ಅಂಶಗಳಿರುವುದು ಸಮುದಾಯದಲ್ಲಿಯೇ ಹೊರತು ವ್ಯಕ್ತಿಯಲ್ಲಲ್ಲ ಎಂಬ ನಂಬಿಕೆ ಅವನದು. ಅವನೇನಾದರೂ ಶಿಕ್ಷಣಕ್ರಮವನ್ನು ನಿಯಂತ್ರಿಸುವನಾದರೆ, ಅದರಲ್ಲಿ ಕಠಿಣ ನಿಯಮ ಮತ್ತು ಸಾಮೂಹಿಕ ಪರವಶತೆಗಳ ಪರ್ಯಾಯವಿರುತ್ತದೆ, ಜ್ಞಾನ ಮತ್ತು ವಿವೇಚನೆಗಳನ್ನು ಅಮಾನವೀಯ ವಿಜ್ಞಾನದ ಅನ್ವೇಷಕರಿಗೆ ಬಿಡಲಾಗುತ್ತದೆ.

ಅಧಿಕಾರಕ್ಕಾಗಿ ಹಂಬಲಿಸುವವರೆಲ್ಲ ವಾಗ್ಮಿಯ ಸ್ವಭಾವದವರಲ್ಲ. ಬೇರೆಯ ಬಗೆಯವರೂ ಇರುತ್ತಾರೆ; ಅವರ ಅಧಿಕಾರದಾಹಕ್ಕೆ ಪೋಷಕವಾದುದು ವ್ಯವಸ್ಥೆಯ ಮೇಲಿನ ಹಿಡಿತ. ನಿದರ್ಶನಕ್ಕೆ, ಅಬಿಸೀನಯ ಯುದ್ಧದಲ್ಲಿ ಬ್ರೂನೋ ಮುಸೋಲಿನಿ ಆಕಾಶದ ಮೇಲಿಂದ ಕೈಗೊಂಡ ಸಾಹಸಕೃತ್ಯಗಳು. "ಕಾಡುಗಳಿಂದ ತುಂಬಿದ ಬೆಟ್ಟಗಳಿಗೆ, ಹೊಲಗದ್ದೆಗಳು ಹಾಗೂ ಹಳ್ಳಿಗಳಿಗೆ ನಾವು ಬೆಂಕಿ ಹಚ್ಚಬೇಕಾಗಿತ್ತು....ಇವೆಲ್ಲ ತುಂಬ ರೋಚಕವಾದ ಕೆಲಸಗಳು....ಬಾಂಬುಗಳು ನೆಲಕ್ಕೆ ತಗುಲುವ ಮೊದಲೇ ಅವುಗಳು ಸಿಡಿದು ಬಿಳಿಯ ಹೊಗೆಯನ್ನು ತುಂಬಿಕೊಂಡು ಭೀಕರ ಬೆಂಕಿಯನ್ನುಂಟುಮಾಡಿ ಒಣಹುಲ್ಲು ಹತ್ತಿಕೊಂಡು ಉರಿಯುವಂತೆ ಮಾಡುತ್ತಿದ್ದವು. ನನಗೆ ಆಗ ಪ್ರಾಣಿಗಳ ಯೋಚನೆ ಬರುತ್ತಿತ್ತು: ಅಬ್ಬಾ, ಅವು ಹೇಗೆ ಓಡುತ್ತಿದ್ದವು! ...ಬಾಂಬುಗಳ ರ್‍ಯಾಕುಗಳು ಬರಿದಾದ ಮೇಲೆ ನಾನು ಕೈಯಿಂದಲೇ ಬಾಂಬುಗಳನ್ನು ಎಸೆಯುತ್ತಿದ್ದೆ....ಅದೆಷ್ಟು ವಿನೋದಭರಿತ! ಮರಗಳಿಂದ ಸುತ್ತುವರಿದ ಒಂದು ದೊಡ್ಡ ಸುತ್ತುಬೇಲಿ(ಜ಼ರೀಬ)ಯನ್ನು

ನಾಶಮಾಡುವುದು ಎಷ್ಟು ಕಠಿಣವಾಗಿತ್ತು! ಅದರ ಹುಲ್ಲು ಛಾವಣಿಗೆ ಎಚ್ಚರಿಕೆಯಿಂದ ಗುರಿಯಿಡಬೇಕಾಗಿತ್ತು; ಅದರಲ್ಲಿ ನಾನು ಯಶಸ್ವಿಯಾದುದು ಮೂರನೆಯ ಪ್ರಯತ್ನದಲ್ಲಿ ಮಾತ್ರವೇ. ಛಾವಣಿ ಹತಿಕೊಂಡ್ತು ಉರಿಯುವುದನ್ನು ಕಂಡು ಒಳಗಿದ್ದ ಬಡಪಾಯಿಗಳು ಹೊರಕ್ಕೆ ಹಾರಿ ಹುಚ್ಚು ಹಿಡಿದವರಂತೆ ಓಡಿದರು. ಬೆಂಕಿಯ ಜ್ವಾಲೆಯ ವರ್ತುಲದಿಂದ ಸುತ್ತವರಿದ ಸುಮಾರು ಐದು ಸಾವಿರ ಮಂದಿ ಅಬಿಸೀನಿಯನ್ನರು ಚಿತ್ರಹಿಂಸೆಯ ಕೊನೆ ಕಂಡರು. ಅದು ನರಕಸದೃಶ."

ವಾಗ್ಮಿಯು ಯಶಸ್ವಿಯಾಗಲು ಅವನಿಗೆ ಸಾಕಷ್ಟು ಸೂಕ್ಷ್ಮವಾದ ಮನಸ್ಸಿರಬೇಕು; ಅದೇ ಬ್ರೂನೋ ಮುಸೋಲಿನಿಯಂತಹ ವೈಮಾನಿಕನಿಗೆ ಸಂತೋಷವುಂಟುಮಾಡಲು ಜನರನ್ನು ಸುಟ್ಟು ಸಾಯಿಸುವುದು ಅನಿಷ್ಟಕರವಾದುದು ಎಂದು ತಿಳಿಯುವುದಕ್ಕಿಂತ ಹೆಚ್ಚಿನ ಸೂಕ್ಷ್ಮ ಮನಸ್ಸು ಬೇಕಾಗುವುದಿಲ್ಲ. ವಾಗ್ಮಿ ಪ್ರಾಚೀನ ಮಾದರಿ; ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿ ಅಧಿಕಾರ ಪಡೆಯುವವನು ಆಧುನಿಕ ಮಾದರಿ. ಇದು ಪರಿಪೂರ್ಣ ವಿಂಗಡಣೆಯೇನಲ್ಲ. ಉದಾಹರಣೆಗೆ, ಮೊದಲ ಪ್ಯೂನಿಕ್ ಯುದ್ಧದ ಕೊನೆಗೆ ದಂಗೆಕೋರ ಸಂಬಳದಾರ ಸೈನಿಕರನ್ನು ಸದೆಬಡಿಯಲು ಕಾರ್ತೆಜ್‌ನ ಆನೆಗಳನ್ನು ಬಳಸಿದ ರೀತಿಯನ್ನು ಓದಿ; ಅಲ್ಲಿನ ಮನೋಭಾವ ಬ್ರೂನೋ ಮುಸೋಲಿನಿಯದಕ್ಕಿಂತ ಭಿನ್ನವಾದುದಲ್ಲ.[೧] ಆದರೆ ಇವರಡನ್ನೂ ಹೋಲಿಸಿದರೆ, ವ್ಯವಸ್ಥೆಯ ಮೇಲಿನ ಹಿಡಿತವು ಹಿಂದಿಗಿಂತ ಹೆಚ್ಚಾಗಿ ನಮ್ಮ ಕಾಲಕ್ಕೆ ಅನ್ವಯಿಸುವಂಥದು ಎಂದು ಹೇಳಬಹುದು.

ವ್ಯವಸ್ಥೆಯ ಮೇಲಿನ ಹಿಡಿತವನ್ನು ಅವಲಂಬಿಸುವ ಸ್ವಲ್ಪಜನಾಧಿಪತ್ಯದ ನಾಯಕನ ಮನೋಭಾವವು ಇನ್ನೂ ಪೂರ್ಣವಾಗಿ ಎಲ್ಲಿಯೂ ವಿಕಸನಗೊಂಡಂತೆ ಕಾಣುವುದಿಲ್ಲ. ಇದು ಅನತಿ ಭವಿಷ್ಯದಲ್ಲಿ ಸಂಭವಿಸಬಹುದು; ಅಲ್ಲದೆ, ಇದು, ಗುಣಾತ್ಮಕತೆಯಲ್ಲಲ್ಲದಿದ್ದರೂ ಪ್ರಮಾಣದಲ್ಲಿ ಸಾಕಷ್ಟು ಅಪರೂಪವಾದುದು. ತಾಂತ್ರಿಕಪರಿಣತಿಯುಳ್ಳ ಸ್ವಲ್ಪಜನಾಧಿಪತ್ಯಕ್ಕೆ ಈಗ ವಿಮಾನದಳ, ನೌಕಾದಳ, ವಿದ್ಯುತ್ ಸ್ಥಾವರಗಳು, ಸ್ವಯಂಚಾಲಕ ವಾಹನಗಳು, ಮುಂತಾದವುಗಳ ಮೇಲೆ ಹಿಡಿತವಿರಿಸಿಕೊಂಡು ಜನರ ಅಸಮಾಧಾನವನ್ನೂ ಮೀರಿ ನಿರಂಕುಶಪ್ರಭುತ್ವವನ್ನು ಸ್ಥಾಪಿಸುವುದು ಕಷ್ಟವಾಗಲಾರದು. ತನ್ನ ಮತ್ತು ದಂಗೆಕೋರ ಪ್ರಾಂತ್ಯದ ನಡುವೆ ಸೂರ್ಯನನ್ನು ಇರಿಸುವ

---

[೧] ಡಿಯೋಡರಸ್ ಸಿಕಲಸ್: ಸಂಪುಟ ೨೫, (ಭಾಗಶಃ). ಫ್ಲಾಬರ್ಟ್‌ನ 'ಸಾಲಂಬೋ' ಅನ್ನೂ ನೋಡಿ.

ಸಾಮರ್ಥ್ಯದಿಂದಾಗಿಯೇ ಲಾಪ್ಯುಟ ಸಾಮ್ರಾಜ್ಯವು ನಿಂತಿತ್ತು. ಪ್ರಚಂಡ ವೈಜ್ಞಾನಿಕ–ತಾಂತ್ರಿಕ ಪರಿಣತಿಯ ಕಾರಣದಿಂದಾಗಿ ಇಂಥದೇ ಒಂದು ಸಾಮರ್ಥ್ಯ ಈಗ ಸಾಧ್ಯವಾಗಿದೆ. ಯಾವುದಾರೊಂದು ಪ್ರದೇಶವು ತನಗೆ ವಿಧೇಯವಾಗಿರದಿದ್ದರೆ ಆಡಳಿತವು ಅದನ್ನು ಉಪವಾಸ ಬೀಳುವಂತೆಯೋ, ಮೊದಲು ಬೆಳಕು–ಶಾಖ–ವಿದ್ಯುತ್ತು ಮುಂತಾದ ಸೌಲಭ್ಯಮೂಲಗಳ ಮೇಲೆ ಮೇಲೆ ಅವಲಂಬಿಸುವಂತೆ ಮಾಡಿ ಆನಂತರ ಅವುಗಳು ಸರಬರಾಜಾಗದಂತೆಯೋ ಮಾಡಿಬಿಡಬಹುದು; ಅಥವಾ ರೋಗಾಣು ಮತ್ತು ವಿಷಾನಿಲಗಳನ್ನು ಅಲ್ಲಿ ಹಬ್ಬಿಸಬಹುದು. ಆಗ ಪ್ರತಿರೋಧವು ಹತಾಶೆಗೆಡೆಮಾಡಿಬಿಡುತ್ತದೆ. ಅಲ್ಲದೆ, ವ್ಯವಸ್ಥೆಯ ಸ್ವರೂಪದ ಬಗ್ಗೆ ತರಬೇತಿ ಹೊಂದಿದ ಅಧಿಕಾರಶಾಹಿಯು ಮಾನವನನ್ನು ಯಂತ್ರದಂತೆ ಭಾವಿಸುತ್ತದೆ, ತನ್ನ ಅನುಕೂಲಕ್ಕೆ ತಕ್ಕಂತೆ ಕಾರ್ಯನಿರ್ವಹಿಸುವಂತೆ ಅದನ್ನು ಮಾರ್ಪಡಿಸುತ್ತದೆ. ಅಂಥ ಆಡಳಿತಯಂತ್ರವು ಇತಿಹಾಸದ ಯಾವುದೇ ದೌರ್ಜನ್ಯಕ್ಕಿಂತ ಹೆಚ್ಚು ಅಮಾನವೀಯವಾಗಿ ನಡೆದುಕೊಳ್ಳುತ್ತದೆ.

ಮಾನವರ ಮೇಲೆ, ವಸ್ತುಗಳ ಮೇಲಲ್ಲ, ಅಧೀನತೆಯನ್ನು ಸ್ಥಾಪಿಸಿಕೊಳ್ಳುವ ಅಧಿಕಾರದ ಮೀಮಾಂಸೆಯೇ ನನ್ನ ಈ ಗ್ರಂಥದ ವಸ್ತು. ಆದರೆ ವಸ್ತುಗಳ ಮೇಲಿನ ಅಧಿಕಾರದ ಮೂಲಕ ಮಾನವರ ಮೇಲೆಯೂ ಅಧಿಕಾರವನ್ನು ಸಾಧಿಸಿಕೊಳ್ಳುವುದೂ ಸಾಧ್ಯ. ಪ್ರಬಲ ವ್ಯವಸ್ಥೆಯನ್ನು ನಿಯಂತ್ರಿಸಿ ಆ ಮೂಲಕ ಮಾನವರ ಮೇಲೆ ಹಿಡಿತವನ್ನು ಸಾಧಿಸುವ ಅಭ್ಯಾಸವಿರುವವರು ತಮ್ಮ ಪ್ರಜೆಗಳ ಬಗ್ಗೆ ವಿಶಿಷ್ಟ ದೃಷ್ಟಿಕೋನವನ್ನು ಹೊಂದಿರುವವರೆಂದು ನಿರೀಕ್ಷಿಸಬಹುದು; ಎಷ್ಟೇ ಅಪ್ರಾಮಾಣಿಕರಾದರೂ ಮನವೊಲಿಕೆಯ ಮಾರ್ಗವನ್ನು ಅನುಸರಿಸುವವರದಕ್ಕಿಂತ ಅದು ಸಂಪೂರ್ಣ ಭಿನ್ನವಾಗಿರುತ್ತದೆ. ಒಂದಲ್ಲ ಒಂದು ಬಾರಿ ನಮ್ಮಲ್ಲಿ ಬಹುಮಂದಿ ಇರುವೆಯ ಗೂಡನ್ನು ಕೆದಕಿ, ಅದರಿಂದ ಅವುಗಳಲ್ಲಾಗುವ ಗೊಂದಲ ಗಾಬರಿಗಳನ್ನು ಮೋಜಿನಿಂದ ನೋಡಿರುತ್ತೇವೆ. ಬಹುಮಹಡಿ ಕಟ್ಟಡದ ಮೇಲಿನಿಂದ ನ್ಯೂಯಾರ್ಕ್‌ನ ವಾಹನಸಾಲನ್ನು ಗಮನಿಸಿದರೆ, ಕೆಳಗಿರುವ ಜನರು ಮನುಷ್ಯರಂತೆ ಕಾಣದೆ ವಿಚಿತ್ರ ಜಂತುಗಳಂತೆ ಕಾಣಿಸುತ್ತಾರೆ. ಇಂದ್ರನು ಹಿಡಿದ ಸಿಡಿಲಿನಂತಹ ಯಾವುದಾದರೂ ಆಯುಧ ನಮ್ಮ ಹತ್ತಿರವಿದ್ದರೆ, ಇರುವೆಯ ಗೂಡಿಗೆ ಮಾಡಿದುದರ ಹಿಂದಿನ ಮನೋಭಾವದಂತೆಯೇ, ಅದನ್ನು ಆ ಜಂತುಗಳ ಮೇಲೆ ಬೀಸುವ ಇಚ್ಛೆ ನಮ್ಮನ್ನಾವರಿಸುತ್ತದೆ. ತನ್ನ ವಿಮಾನದಿಂದ ಅಬಿಸೀನಿಯನ್ನರನ್ನು ಕಂಡ ಬ್ರೂನೋ ಮುಸೋಲಿನಿಗಿದ್ದುದೂ ಇದೇ ಮನೋಭಾವವೇ. ಕೊಲೆಗೀಡಾಗಬಹುದೆಂಬ ಭಯದಿಂದಾಗಿ, ಅನಿವಾರ್ಯವಾದಾಗ ಮಾತ್ರ

ಗಿರಿಶೀಖರ ಅಥವಾ ಎತ್ತರದ ಗೋಪುರದ ಮೇಲೆ ಇಳಿಯುತ್ತ, ಮಿಕ್ಕುಳಿದಂತೆ ಸದಾ ವಿಮಾನಗಳಲ್ಲಿಯೇ ವಾಸಿಸುತ್ತ ಇರುವ ವೈಜ್ಞಾನಿಕ ಸರ್ಕಾರದ ಪ್ರಭುವನ್ನು ಕಲ್ಪಿಸಿಕೊಳ್ಳಿ. ಅಂಥವನಿಗೆ ಅಥವಾ ಅವನ ಸರ್ಕಾರಕ್ಕೆ ತನ್ನ ಪ್ರಜೆಗಳ ಹಿತದ ಬಗ್ಗೆ ಆಳವಾದ ಕಾಳಜಿ ಇರಲು ಸಾಧ್ಯವೇ? ಅದರ ಬದಲು, ತನ್ನ ಲೆಕ್ಕಾಚಾರವೆಲ್ಲ ಸರಿಯಾದರೆ, ಪ್ರಜೆಗಳನ್ನೂ ಯಂತ್ರಗಳಂತೆಯೇ ಕಾಣುವ ಮನೋಭಾವವನ್ನು ಹೊಂದುವುದು ಖಚಿತವೇ ಅಲ್ಲವೇ? ಅವರು ಕೇವಲ ಯಂತ್ರಗಳಲ್ಲ ಎಂಬ ಅನಿಸಿಕೆಯುಂಟಾಗುವಂತೆ ಮಾಡುವ ಏನಾದರೂ ಸಂಭವಿಸಿ ಕೈಕೆಳಗಿನವರ ಕೋಪಕ್ಕೆ ಒಳಗಾಗುವಂತಾದರೆ, ತನ್ನ ಕೂದಲು ಕೊಂಕದಂತೆ ಮಾಡಿಕೊಳ್ಳಲು ಸಾಧ್ಯವಿರುವ ಎಲ್ಲ ಮಾರ್ಗಗಳಿಂದ ಪ್ರತಿರೋಧವನ್ನು ಹತ್ತಿಕ್ಕುವ ಪ್ರಯತ್ನ ಮಾಡುವುದೂ ಅಷ್ಟೇ ಖಚಿತವಲ್ಲವೇ?

ಇವೆಲ್ಲ ಅನವಶ್ಯಕ ದುಃಸ್ವಪ್ನಗಳ ಕಲ್ಪನೆ ಎಂದು ಓದುಗರು ಭಾವಿಸಬಹುದು. ಈ ಅಭಿಪ್ರಾಯ ನನಗೂ ಇದ್ದಿದ್ದರೆ ಚೆನ್ನಾಗಿತ್ತೆಂದು ಅನ್ನಿಸುತ್ತದೆ. ವ್ಯವಸ್ಥೆಯ ಮೇಲಿನ ಹಿಡಿದಿಂದ ದೊರೆಯುವ ಅಧಿಕಾರವು ಹೊಸತೊಂದು ಮನೋಭಾವವನ್ನೇ ಸೃಷ್ಟಿಸುತ್ತದೆ ಎಂಬುದು ನನಗೆ ಮನವರಿಕೆಯಾಗಿದೆ; ಸರ್ಕಾರಗಳ ಮೇಲಿನ ಹತೋಟಯನ್ನು ಸಾಧಿಸಲು ಇಂಥ ಅಧಿಕಾರವು ಹಿಂದೆಂದಿಗಿಂತಲೂ ಈಗ ಹೆಚ್ಚು ಆವಶ್ಯಕ ಎಂಬ ಭಾವನೆಯನ್ನು ಮೂಡಿಸುತ್ತದೆ. ತಂತ್ರಜ್ಞಾನದ ಬೆಳವಣಿಗೆಯು ಪ್ರಜಾಪ್ರಭುತ್ವವನ್ನು ಹೆಚ್ಚು ಕಷ್ಟಕರವಾಗಿಸಿರಬಹುದು, ಆದರೆ ಇದು ಹಿಂದಿಗಿಂತ ಹೆಚ್ಚು ಪ್ರಾಮುಖ್ಯವನ್ನೂ ಪಡೆದಿದೆ. ವ್ಯವಸ್ಥೆಯ ಮೇಲೆ ಹೆಚ್ಚು ಹಿಡಿತವನ್ನು ಸಾಧಿಸಿರುವ ವ್ಯಕ್ತಿಯು, ನಿಯಂತ್ರಣಕ್ಕೊಳಗಾಗದಿದ್ದರೆ, ತಾನೇ ದೇವರು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬಹುದು, ಅದು ಪ್ರೀತಿಯ ಸಾಕಾರವಾದ ದೇವರಲ್ಲ, ಸಿಡಿಲೊಡೆಯ ಥೋರ್ ಅಥವಾ ಬೆಂಕಿಯುಗುಳುವ ವಲ್ಕನ್.

ವೆಸೂವಿಯಸ್‌ನ ಇಳಿಜಾರುಗಳಲ್ಲಿ ಜ್ವಾಲಾಮುಖಿಯ ಸಿಡಿತಗಳು ಏನನ್ನು ಸಾಧಿಸಿದವು ಎಂಬುದನ್ನು ಲಿಯೋಪಾರ್ಡಿ ಹೀಗೆ ವರ್ಣಿಸುತ್ತಾನೆ:

ಕರಿಕುಮಾಡುವ ಕೆಂಡದುಂಡೆಗಳು,
ಯಾತ್ರಿಕನ ಕಾಲುಗಳಲ್ಲಿ ಮರುದನಿಗುಡುವಂತೆ
ಗಟ್ಟಿಗೊಂಡು ಕಲ್ಲಾಗಿ ಉಬ್ಬಿಕೋಡಿರುವ ಲಾವಾ –
ಈ ಭೂಮಿಯನ್ನೆಲ್ಲ ವ್ಯಾಪಿಸಿವೆ;
ಸೂರ್ಯಗೂಡಿನಲ್ಲಿ ಸುರುಳಿಗೊಂಡು ಹುದುಗಿದೆ ಸರ್ಪ,

ಗವಿಗಳಿಂದ ಕೂಡಿದ ಬಂಡೆಗಳ ಯಾವುದೋ ಬಿರುಕಿನಲ್ಲಿ
ಮನೆಯ ಕಡೆ ಧಾವಿಸುತ್ತಿದೆ ಮೊಲ;
ಹಿಂದೊಮ್ಮೆ ಈ ಎಡೆಯಲ್ಲಿ ತುಂಬಿದ್ದವು –
ನಳನಳಿಸುವ ತೋಟಗಳು, ಉತ್ತ ನೆಲ,
ಹೊಂಬಣ್ಣದ ತೆನೆಗಳ ಸಾಲು, ಮಂದೆಗಳ ಕೆಲೆತ,
ಉದ್ಯಾನಗಳು, ಅರಮನೆಗಳು;
ಇಲ್ಲಿದ್ದವು ಪ್ರಭಾವಶಾಲೀ ಪ್ರಭುಗಳ
ಪ್ರಿಯವಾದ ವಿಶ್ರಾಂತಿಧಾಮಗಳು;
ಜೊತೆಗೆ ಹೆಸರಾಂತ ನಗರಗಳು ಕೂಡ.
ಈ ಎಲ್ಲವನ್ನ ತಣಿವಿರದ ಈ ಪರ್ವತ
ತನ್ನ ಬೆಂಕಿಬಾಯ್ದೆರೆದು
ದಡದಡ ಹರಿವ ಶಿಲಾದ್ರವಝುರಿಗಳನ್ನುಗುಳಿ
ಜನರ ಸಮೇತ ನಾಶಗೊಳಿಸಿಬಿಟ್ಟಿತು;
ಈ ನಾಶರಾಶಿಯ ಕೆಳಗೆ ಎಲ್ಲ ಹುದುಗಿಕೊಂಡಿದೆ ಈಗ.[೧]

ಇಂಥದೇ ಪರಿಣಾಮಗಳನ್ನು ಈಗ ಜನ ಮಾಡಬಲ್ಲರು. ಈಗಾಗಲೇ ಇದು ಗೆರ್ನಿಕಾದಲ್ಲಿ ನಡೆದಿದೆ; ಈಗ ಲಂಡನ್ ಇರುವ ಜಾಗದಲ್ಲಿಯೂ ಅಂಥದು ಆಗುವ ದಿನ ದೂರವಿಲ್ಲ. ವಿನಾಶದ ಮಾರ್ಗದಲ್ಲಿಯೇ ಅಧಿಕಾರಶಿಖರವೇರಿರುವ ಸ್ವಲ್ಪಜನಾಧಿಪತ್ಯದಿಂದ ಒಳಿತಾದುದೇನನ್ನು ನಾವು ನಿರೀಕ್ಷಿಸಬಹುದು? ಲಂಡನ್–ಪ್ಯಾರಿಸ್‌ಗಳನ್ನು ಬಿಡಿ, ಬರ್ಲಿನ್–ರೋಮ್ ಈಗಾಗಲೇ ಹೊಸದೇವರುಗಳಿಂದ ನಾಶಗೊಂಡಿವೆಯಲ್ಲ. ಇಂಥ ವಿನಾಶಕೃತ್ಯವೆಸಗುವವರಿಂದ ಮಾನವಕುಲ ಉಳಿದೀತೇ? ಮೊದಲು ಮಾನವ ಸಂವೇದನೆಗಳನ್ನು ಹೊಂದಿದ್ದವರು ತಮ್ಮ ಅನುಕಂಪವನ್ನು ಮರೆಮಾಚಿಕೊಂಡು ಹುಚ್ಚರಾಗರೇ, ತಮ್ಮ ಮರುಕವನ್ನು ಮರೆಸಿಕೊಂಡಿದ್ದ ಜನರಿಗಿಂತ ಹೆಚ್ಚು ಕ್ರೂರಿಗಳಾಗರೇ?

ಹಿಂದಾದರೆ ಮಾಂತ್ರಿಕ ಶಕ್ತಿಯನ್ನು ಗಳಿಸಬಯಸುವ ಜನರು ದೆವ್ವಗಳಿಗೆ ಶರಣಾಗುತ್ತಿದ್ದರು; ಈಗಾದರೆ ವಿಜ್ಞಾನದಿಂದ ಅಂತಹ ಶಕ್ತಿಯನ್ನು ಗಳಿಸುತ್ತಾರೆ, ತಾವೇ ದೆವ್ವಗಳಾಗುವ ಒತ್ತಡಕ್ಕೆ ಒಳಗಾಗುತ್ತಾರೆ. ಈ ಅಧಿಕಾರವನ್ನು ಕೈವಶಮಾಡಿಕೊಂಡು, ಅದು ಯಾವುದೋ ಒಂದು ಅಂಧಾಭಿಮಾನೀ ಕ್ರೂರ ಗುಂಪಿನ ಅಡಿಯಾಳಾಗಲು ಅವಕಾಶವೀಯದೆ,

---

[೧] ಈ ಇಂಗ್ಲಿಷ್ ಅನುವಾದವು ನನಗೆ ದೊರೆತುದು ನನ್ನ ಗೆಳೆಯರಾದ ಶ್ರೀಮಾನ್ ಆರ್.ಸಿ. ಟ್ರೆವೆಲ್ಯಾನ್ ಅವರ ಕೃಪೆಯಿಂದ.

ಇಡೀ ಮಾನವಕುಲದ, ಬಿಳಿ-ಕರಿ-ಹಳದಿ, ನಿರಂಕುಶ-ಕಮ್ಯುನಿಸ್ಟ್-ಪ್ರಜಾಪ್ರಭುತ್ವವಾದಿ ಈ ಎಲ್ಲರ ಒಳಿತಿಗೆ ಬಳಸಿಕೊಳ್ಳಲಾಗದಿದ್ದರೆ ಜಗತ್ತಿನಲ್ಲಿ ಯಾವ ಭರವಸೆಯೂ ಉಳಿಯದು. ಯಾಕೆಂದರೆ ವಿಜ್ಞಾನದಿಂದಾಗಿ ನಮ್ಮ ಮುಂದಿರುವುದು ಎರಡೇ ಆಯ್ಕೆಗಳು: ಎಲ್ಲ ಉಳಿಯಬೇಕು, ಇಲ್ಲ ಎಲ್ಲ ನಾಶಗೊಳ್ಳಬೇಕು.

-೦-೦-೦-

ಅಧ್ಯಾಯ ೩

ಅಧಿಕಾರದ ವಿಭಿನ್ನ ರೂಪಗಳು

ಇಚ್ಛೆಗನುಗುಣವಾದ ಪರಿಣಾಮಗಳನ್ನು ಉತ್ಪಾದಿಸುವುದೇ ಅಧಿಕಾರ ಎಂದು ವ್ಯಾಖ್ಯಾನಿಸಬಹುದು. ಹೀಗಾಗಿ ಅದೊಂದು ಪರಿಣಾಮಾತ್ಮಕ ಪರಿಕಲ್ಪನೆ: ಒಂದೇ ಬಗೆಯ ಆಸೆಗಳನ್ನುಳ್ಳ ಇಬ್ಬರಿದ್ದಾರೆಂದು ಭಾವಿಸೋಣ. ಒಬ್ಬ ಇನ್ನೊಬ್ಬನಂತೆಯೇ ಆಸೆಗಳನ್ನು ಪೂರೈಸಿಕೊಳ್ಳುವುದರ ಜೊತೆಗೆ ಬೇರೆಯವುಗಳನ್ನೂ ನೆರವೇರಿಸಿಕೊಂಡರೆ, ಅವನಿಗೆ ಆ ಇನ್ನೊಬ್ಬನಿಗಿಂತ ಹೆಚ್ಚು ಅಧಿಕಾರವಿದೆ ಎಂದು ಹೇಳಬಹುದು. ಆದರೆ ಒಂದು ಬಗೆಯ ಆಸೆಗಳನ್ನು ಪೂರೈಸಿಕೊಳ್ಳುವ ಒಬ್ಬ ಮತ್ತು ಮತ್ತೊಂದು ಬಗೆಯ ಆಸೆಗಳನ್ನು ನೆರವೇರಿಸಕೊಳ್ಳುವ ಇನ್ನೊಬ್ಬ – ಈ ಇಬ್ಬರ ಅಧಿಕಾರಪ್ರಮಾಣವನ್ನು ಖಚಿತವಾಗಿ ಅಳೆಯಬಲ್ಲ ಯಾವುದೇ ಸಾಧನವಿಲ್ಲ. ಉದಾಹರಣೆಗೆ, ಒಳ್ಳೆಯ ಚಿತ್ರಗಳನ್ನು ರಚಿಸಿ ಹಣ ಗಳಿಸುವ ಆಸೆಯುಳ್ಳ ಇಬ್ಬರು ಚಿತ್ರಕಾರರಿದ್ದಾರೆಂದು ತಿಳಿಯೋಣ. ಅವರಲ್ಲಿ ಒಬ್ಬ ಸುಂದರ ಚಿತ್ರಗಳನ್ನು ರಚಿಸುತ್ತಾನೆ, ಇನೊಬ್ಬ ಹಣ ಗಳಿಸುತ್ತಾನೆ. ಆಗ ಅವರಿಬ್ಬರಲ್ಲಿ ಯಾರು ಹೆಚ್ಚು ಅಧಿಕಾರ ಹೊಂದಿದ್ದಾರೆ ಎಂದು ನಿರ್ಧರಿಸುವುದು ಸಾಧ್ಯವಿಲ್ಲ. ಆದರೂ, ಎ ಹೆಚ್ಚು ಆಸೆಗಳನ್ನೂ, ಬಿ ಕೇವಲ ಕೆಲವು ಆಸೆಗಳನ್ನೂ ಪೂರೈಸಿಕೊಂಡರೆ, ಆಗ ಎ ಬಿ ಗಿಂತ ಹೆಚ್ಚು ಅಧಿಕಾರ ಪಡೆದವನೆಂದು ನಿರ್ಧರಿಸುವುದು ಸುಲಭ.

ಅಧಿಕಾರದ ವಿಭಿನ್ನ ರೂಪಗಳನ್ನು ವರ್ಗೀಕರಿಸಲು ಅನೇಕ ವಿಧಾನಗಳಿವೆ, ಪ್ರತಿಯೊಂದಕ್ಕೂ ತನ್ನದೇ ಆದ ಉಪಯುಕ್ತತೆಯಿದೆ. ಮೊದಲನೆಯದಾಗಿ, ಮನುಷ್ಯರ ಮೇಲಿನ ಅಧಿಕಾರ ಮತ್ತು ನಿರ್ಜೀವ ವಸ್ತುಗಳ ಮೇಲಿನ ಅಧಿಕಾರ. ನನ್ನ ಮುಖ್ಯ ಗಮನವಿರುವುದು ಮಾನವರ ಮೇಲಿನ ಅಧಿಕಾರದ ಬಗ್ಗೆ. ಆದರೆ ಆಧುನಿಕ ಜಗತ್ತಿನಲ್ಲಾಗುವ ಬದಲಾವಣೆಗಳಿಗೆ ಕಾರಣ ವಿಜ್ಞಾನದಿಂದಾಗಿ ಸಾಧ್ಯ ಮಾಡಿಕೊಂಡಿರುವ ವಸ್ತುಗಳ ಮೇಲಿನ ಅಧಿಕಾರ ಎಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು.

ಮಾನವರ ಮೇಲಿನ ಅಧಿಕಾರವನ್ನು ಜನರ ಮೇಲೆ ಪ್ರಭಾವವನ್ನು ಬೀರುವ ವಿಧಾನದ ಆಧಾರದ ಮೇಲೆ ಅಥವಾ ಇದಕ್ಕಾಗಿ ಬಳಸಿಕೊಳ್ಳುವ ಸಂಘಟನೆಯ ಸ್ವರೂಪದ ಮೇಲೆ ವರ್ಗೀಕರಿಸಬಹುದು. ಒಬ್ಬ ವ್ಯಕ್ತಿಯ ಈ

ಬಗೆಗಳಲ್ಲಿ ಪ್ರಭಾವ ಬೀರಬಹುದು: (ಅ) ಅವನ ಮೇಲೆ ನೇರವಾದ ದೈಹಿಕ ಬಲವನ್ನು ಪ್ರಯೋಗಿಸುವುದರ ಮೂಲಕ; ನಿದರ್ಶನಕ್ಕೆ, ಬಂಧನದಲ್ಲಿಡುವುದು ಅಥವಾ ಕೊಲ್ಲುವುದು. (ಆ) ಪ್ರತಿಫಲವಾಗಿ ಬಹುಮಾನಗಳನ್ನೋ ಶಿಕ್ಷೆಯನ್ನೋ ನೀಡುವ ಮೂಲಕ; ಉದಾಹರಣೆಗೆ, ಉದ್ಯೋಗವನ್ನು ಕೊಡುವುದು ಅಥವಾ ತಿರಸ್ಕರಿಸುವುದು. (ಇ) ಅವನ ಅಭಿಪ್ರಾಯದ ಮೇಲೆ ಪ್ರಭಾವ ಬೀರುವುದು; ಉದಾಹರಣೆಗೆ, ಅತ್ಯಂತ ವಿಶಾಲವಾದ ಅರ್ಥದ ಪ್ರಚಾರ. ಈ ಕೊನೆಯ ವರ್ಗದಲ್ಲಿ ಇತರರಲ್ಲಿ ಅಪೇಕ್ಷಣೀಯ ಅಭ್ಯಾಸಗಳನ್ನು ಉಂಟುಮಾಡುವ ಅವಕಾಶವನ್ನೂ ಸೇರಿಸಬೇಕು. ನಿದರ್ಶನಕ್ಕೆ ಸೈನ್ಯದ ಕವಾಯತು. ಇದರಲ್ಲಿನ ಒಂದು ವ್ಯತ್ಯಾಸವೆಂದರೆ, ಇದರಲ್ಲಿ ಅಭಿಪ್ರಾಯ ಎನ್ನಬಹುದಾದ ಯಾವುದೇ ಮಧ್ಯವರ್ತಿಯಿಲ್ಲದೆ ಕ್ರಿಯೆಯು ನಡೆಯುತ್ತದೆ.

ನಾವು ಪ್ರಾಣಿಗಳನ್ನು ನಡೆಸಿಕೊಳ್ಳುವ ಸಂದರ್ಭದಲ್ಲಿ ಈ ಎಲ್ಲ ಬಗೆಯ ಅಧಿಕಾರಗಳು ನೇರವಾಗಿ ಪ್ರಕಟಗೊಳ್ಳುತ್ತವೆ; ಅಲ್ಲಿ ಯಾವುದನ್ನೂ ಮರೆಮಾಚಬೇಕೆಂಬ ಆಲೋಚನೆಯಿರುವುದಿಲ್ಲ. ಹಂದಿಯೊಂದರ ಸೊಂಟಕ್ಕೆ ಹಗ್ಗ ಕಟ್ಟಿ ಅದು ಅರಚಾಡುತ್ತಿದ್ದರೂ ಹಡಗಿಗೆ ಸಾಗಿಸುವ ಸಂದರ್ಭದಲ್ಲಿ ಅದು ನೇರವಾದ ದೈಹಿಕ ಬಲಪ್ರಯೋಗಕ್ಕೆ ಒಳಗಾಗುತ್ತದೆ. ಅದಲ್ಲದೆ, ಕತ್ತೆಯೊಂದರ ಮುಂದೆ ಹುಲ್ಲುಕಂತೆ ಕಟ್ಟಿ ಅದು ಓಡುವಂತೆ ಮಾಡಿದಾಗ, ಅದರ ಮನಸ್ಸಿನಲ್ಲಿ ತಾನು ಓಡುತ್ತಿರುವುದು ತನ್ನ ಹಿತಕ್ಕಾಗಿಯೇ ಎಂಬ ಭಾವನೆಯನ್ನುಂಟುಮಾಡಿರುತ್ತೇವೆ. ಇವೆರಡರ ನಡುವೆ ಇರುವುದು ಪ್ರದರ್ಶನಕ್ಕೆ ಸಿದ್ಧಗೊಳಿಸಿದ ಪ್ರಾಣಿಗಳು; ಅವುಗಳಲ್ಲಿ ಕೊಡುಗೆ–ಶಿಕ್ಷೆಗಳ ಮೂಲಕ ಕೆಲವು ಅಭ್ಯಾಸಗಳನ್ನುಂಟುಮಾಡಲಾಗಿರುತ್ತದೆ. ಇದರಲ್ಲೇ ಮತ್ತೊಂದು ಬಗೆಯಿದೆ: ಹಡಗಿಗೆ ಕುರಿಮಂದೆಯನ್ನು ಹತ್ತಿಸುವಾಗ, ಮುಂದಿರುವುದನ್ನು ಬಲವಂತವಾಗಿ ಎಳೆದು ಸೇತುವೆದಾರಿಯಲ್ಲಿ ಸಾಗುವಂತೆ ಮಾಡುವುದು, ಉಳಿದ ಕುರಿಗಳು ಅದನ್ನು ಸ್ವಇಚ್ಛೆಯಿಂದ ಅನುಸರಿಸುತ್ತವೆ.

ಈ ಎಲ್ಲ ಬಗೆಗಳನ್ನೂ ಮನುಷ್ಯರಲ್ಲಿಯೂ ಕಾಣಬಹುದು: ಹಂದಿಯ ಉದಾಹರಣೆಯಂತೆಯೇ ಪೋಲಿಸ್ ಮತ್ತು ಸೈನ್ಯಗಳ ಅಧಿಕಾರ; ಹುಲ್ಲುಕಂತೆ–ಕತ್ತೆಗಳ ನಿದರ್ಶನದಂತೆಯೇ ಪ್ರಚಾರದ ಬಲ; ಆಟದ ಪ್ರಾಣಿಗಳ ರೀತಿಯಲ್ಲಿರುವುದೇ 'ಶಿಕ್ಷಣ'ದ ಅಧಿಕಾರ. ಇಷ್ಟವಿಲ್ಲದ ಮುಂದಿನ ಕುರಿಯನ್ನು ಅನುಸರಿಸುವುದರಂತೆಯೇ ಪಕ್ಷದ ವರಿಷ್ಠರ ಅಥವಾ ಪ್ರಭಾವೀ ಬಣದ ಒತ್ತಡದಂತೆ ಗಣ್ಯ ನಾಯಕನೊಬ್ಬನು ಬಲವಂತವಾಗಿ ನಡೆಯಬೇಕಾದ ಸಂದರ್ಭದಲ್ಲಿನ ಪಕ್ಷ ರಾಜಕೀಯ.

ಕತೆಗಳಲ್ಲಿನ ಈ ನಿದರ್ಶನಗಳನ್ನು ಹಿಟ್ಲರ್ ಉನ್ನತಿಗೇರಿದುದಕ್ಕೆ ಅನ್ವಯಿಸೋಣ. ನಾಝಿ ಪ್ರಣಾಳಿಕೆಯೇ (ನಿದರ್ಶನಕ್ಕೆ, ಆಸ್ತಿಯ ಹಕ್ಕು ನಿಷೇಧದಂತಹ ಕಾರ್ಯಕ್ರಮ) ಹುಲ್ಲುಕಂತೆ; ಕೆಳಮಧ್ಯಮವರ್ಗವೇ ಕತ್ತೆ; ಕುರಿಮಂದೆ ಮತ್ತದರ ಮುಂದಾಳುಗಳೆಂದರೆ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು (ಸೋಷಿಯಲ್ ಡೆಮೊಕ್ರಾಟ್ಸ್) ಮತ್ತು ಹಿಂಡೆನ್‌ಬರ್ಗ್; ಹಂದಿಗಳೆಂದರೆ (ನರಳುವಿಕೆಗೆ ಸಂಬಂಧಿಸಿದಂತೆ ಮಾತ್ರ) ಶ್ರಮಶಿಬಿರಗಳಲ್ಲಿನ ಕೈದಿಗಳು; ಆಟ ತೋರಿಸುವ ಪ್ರಾಣಿಗಳೆಂದರೆ ನಾಝಿ ಸೆಲ್ಯೂಟ್ ಹೊಡೆಯುವ ಲಕ್ಷಾಂತರ ಜನತೆ.

ಬಹು ಮುಖ್ಯವಾದ ಸಂಘಟನೆಗಳನ್ನು ಅವು ಚಲಾಯಿಸುವ ಅಧಿಕಾರದ ಆಧಾರದ ಮೇಲೆ ಗುರುತಿಸಬಹುದು. ಪೋಲಿಸ್ ಮತ್ತು ಸೈನ್ಯಗಳು ದೈಹಿಕಹಿಂಸೆ ನೀಡುವ ಅಧಿಕಾರವನ್ನು ಪ್ರಯೋಗಿಸುತ್ತವೆ; ಉತ್ತೇಜನ ಮತ್ತು ನಿರೋಧಕವೆಂದು ಮುಖ್ಯವಾಗಿ ಆರ್ಥಿಕ ಸಂಸ್ಥೆಗಳು ಬಹುಮಾನ ಮತ್ತು ಶಿಕ್ಷೆಗಳನ್ನು ನೀಡುತ್ತವೆ. ಶಾಲೆಗಳು, ಚರ್ಚ್‌ಗಳು ಹಾಗೂ ರಾಜಕೀಯ ಪಕ್ಷಗಳು ಅಭಿಪ್ರಾಯವನ್ನು ರೂಪಿಸುವ ಗುರಿಯನ್ನು ಹೊಂದಿರುತ್ತವೆ. ಆದರೆ ಈ ವಿಂಗಡಣೆ ಕಡ್ಡಿ ಮುರಿದಂತೆ ಖಚಿತವಾದವೇನೂ ಅಲ್ಲ. ಯಾಕೆಂದರೆ ಇವುಗಳಲ್ಲಿ ಪ್ರತಿಯೊಂದೂ ತನಗೆ ವಿಶಿಷ್ಟವಾದ ಬಗೆಯೊಂದಿಗೆ ಇನ್ನಿತರ ಮಾರ್ಗಗಳನ್ನೂ ಅನುಸರಿಸತ್ತವೆ.

ಕಾನೂನಿನ ಅಧಿಕಾರ ಇಂತಹ ಸಂಕೀರ್ಣತೆಗೆ ನಿದರ್ಶನ. ಸರ್ಕಾರಕ್ಕಿರುವ ಆತ್ಯಂತಿಕ ಅಧಿಕಾರವೆಂದರೆ ಬಲಪ್ರಯೋಗದ್ದು. ನಾಗರಿಕ ಸಮಾಜಗಳ ವಿಶಿಷ್ಟ ಲಕ್ಷಣವೆಂದರೆ ನೇರ ದೈಹಿಕ ಬಲಪ್ರಯೋಗಕ್ಕೆ (ಕೆಲವು ಮಿತಿಗಳನ್ನೊಳಗೊಂಡಂತೆ) ಸರ್ಕಾರವು ನೀಡುವ ಮೊದಲ ಆದ್ಯತೆ. ಕಾನೂನು ಎಂದರೆ ತನ್ನ ಪ್ರಜೆಗಳೊಂದಿಗೆ ವ್ಯವಹರಿಸುವಾಗ ಸರ್ಕಾರವು ಈ ಆದ್ಯತೆಯನ್ನು ಚಲಾಯಿಸಲು ಬಳಸುವ ನಿಯಮಗುಚ್ಛ. ಆದರೆ ಕಾನೂನು ಶಿಕ್ಷೆಯನ್ನು ಬಳಸುವುದು ಕೆಲವು ಅನಪೇಕ್ಷಣೀಯ ಕಾರ್ಯಗಳನ್ನು ದೈಹಿಕವಾಗಿ ಮಾಡುವುದನ್ನು ಅಸಾಧ್ಯವಾಗಿಸುವ ಉದ್ದೇಶದಿಂದ; ಮಾತ್ರವಲ್ಲ ಒಂದು ಪ್ರೋತ್ಸಾಹಕ ಸಾಧನವಾಗಿ. ಉದಾಹರಣಗೆ ಜುಲ್ಮಾನೆ ಹಾಕುವುದು; ಇದರಿಂದ ಮಾಡುವುದನ್ನೇನೂ ಅಸಾಧ್ಯಗೊಳಿಸುವುದಿಲ್ಲ, ಆದರೆ ಅದನ್ನು ಅನಾಕರ್ಷಕವಾಗಿಸುತ್ತದೆ, ಅಷ್ಟೆ. ಅದಕ್ಕಿಂತ ಮಿಗಿಲಾಗಿ – ಇದು ಮತ್ತಷ್ಟು ಮುಖ್ಯವಾದ ಅಂಶ – ಜನರು ಪಾಲಿಸದಿದ್ದರೆ ಕಾನೂನು ಹಲ್ಲಿಲ್ಲದ ಹಾವಾಗುತ್ತದೆ. ಉದಾಹರಣೆಗೆ, ಅಮೆರಿಕದಲ್ಲಿ ಮತ್ತು ಎಂಬತ್ತರ ದಶಕದ ಐರ್ಲಂಡ್‌ನಲ್ಲಿ ಜಾರಿಯಾದ ಪಾನನಿರೋಧ ಕಾನೂನಿನ ಗತಿ ಏನಾಯಿತು? ಬಹುಸಂಖ್ಯಾತ ಜನರು ಕಳ್ಳ

ವ್ಯವಹಾರವನ್ನು ಬೆಂಬಲಿಸಿದರು. ಹೀಗಾಗಿ ಕಾನೂನು ಪ್ರಬಲ ಅಸ್ತ್ರವಾಗುವುದು, ಪೋಲಿಸ್ ಬಲಕ್ಕಿಂತ ಹೆಚ್ಚಾಗಿ ಜನರ ಅಭಿಪ್ರಾಯ ಮತ್ತು ಭಾವನೆಗಳ ಬೆಂಬಲದಿಂದ. ಕಾನೂನಿಗೆ ಜನತೆ ನೀಡುವ ಬೆಂಬಲದ ಪ್ರಮಾಣವು ಒಂದು ಸಮಾಜದ ಪ್ರಮುಖ ಅಂಶ.

ಇದರಿಂದಾಗಿ ಸಾಂಪ್ರದಾಯಿಕ ಅಧಿಕಾರ ಮತ್ತು ಹೊಸದಾಗಿ ಗಳಿಸಿಕೊಂಡ ಅಧಿಕಾರ ಇವುಗಳ ನಡುವೆ ಎದ್ದು ಕಾಣುವ ವ್ಯತ್ಯಾಸವಿರುವುದು ತಿಳಿಯುತ್ತದೆ. ಸಾಂಪ್ರದಾಯಿಕ ಅಧಿಕಾರದ ಬೆನ್ನಿಗಿರುವುದು ಅಭ್ಯಾಸಬಲ; ಪ್ರತಿ ಹಂತದಲ್ಲೂ ಅದು ಸಮರ್ಥನೆಗೊಳ್ಳುತ್ತಿರಬೇಕಾದುದಿಲ್ಲ; ಅಲ್ಲದೆ ವಿರೋಧ ಎಷ್ಟೇ ಇದ್ದರೂ ಅದನ್ನು ಕಿತ್ತೆಸೆಯಲು ಸಾಧ್ಯವಿಲ್ಲ ಎಂಬುದನ್ನು ಸತತವಾಗಿ ಸಾಬೀತುಗೊಳಿಸಬೇಕಾದುದಿಲ್ಲ. ಅದಕ್ಕೂ ಮಿಗಿಲಾಗಿ ಅದರ ಆಧಾರವಾರುವುದು ಧಾರ್ಮಿಕ ಅಥವಾ ಧರ್ಮಪ್ರೇರಿತ ನಂಬಿಕೆಗಳು, ಇವುಗಳಿಂದಾಗಿ ಪ್ರತಿರೋಧ ಪಾಪಕರ ಎಂಬ ಭಾವನೆ ಜನರಲ್ಲಿ ನೆಲೆಯೂರಿಬಿಟ್ಟಿರುತ್ತದೆ. ಹೀಗಾಗಿ ಅದು ಕ್ರಾಂತಿಯಿಂದ ಅಥವಾ ಪದಚ್ಯುತಿಯಿಂದ ದೊರೆತ ಅಧಿಕಾರಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನಾಭಿಪ್ರಾಯವನ್ನು ಅವಲಂಬಿಸಬಹುದು. ಇದರಲ್ಲಿ ಪರಸ್ಪರ ವಿರುದ್ಧವೆನ್ನಬಹುದಾದ ಇನ್ನೆರಡು ಪರಿಣಾಮಗಳಿವೆ: ಒಂದು, ಸಾಂಪ್ರದಾಯಿಕ ಅಧಿಕಾರವು ಹೆಚ್ಚು ಸುಭದ್ರವಾದುದರಿಂದ ಅದರಲ್ಲಿ ದೇಶದ್ರೋಹಿಗಳ ದಮನಕಾರ್ಯ ಆವಶ್ಯಕವಲ್ಲ, ಹೀಗಾಗಿ, ಹೆಚ್ಚು ರಾಜಕೀಯ ಕ್ರೌರ್ಯ ಅಲ್ಲಿರುವುದಿಲ್ಲ; ಎರಡು, ಪ್ರಾಚೀನ ಸಂಸ್ಥೆಗಳು ಎಲ್ಲಿರುತ್ತವೋ ಅಲ್ಲಿ ಅಧಿಕಾರಸ್ಥರು ಎಲ್ಲ ಸಂದರ್ಭಗಳಲ್ಲೂ ಮಾಡಬಹುದಾದ ಅನ್ಯಾಯಗಳಿಗೆ ಲಾಗಾಯ್ತಿನಿಂದ ಬಂದ ಸಂಪ್ರದಾಯಗಳ ಒಪ್ಪಿಗೆಯೂ ಇರುತ್ತದೆ, ಆದ್ದರಿಂದಲೇ ಜನಬೆಂಬಲವನ್ನು ಗಳಿಸಲು ಹಂಬಲಿಸುವ ಹೊಸ ಬಗೆಯ ಸರ್ಕಾರದ ಆಡಳಿತದಲ್ಲಿಗಿಂತ ಅವು ಹೆಚ್ಚು ಎದ್ದು ಕಾಣುತ್ತವೆ. ಫ್ರಾನ್ಸ್‌ನ ಭಯೋತ್ಪಾದಕ ಆಡಳಿತವು ಕ್ರಾಂತಿಕಾರಕ ನಿರಂಕುಶತ್ವದ ನಿದರ್ಶನವಾದರೆ, 'ಮೂವಿಟ್ಟಿ'ಯು ('ಕಾರ್ವೀ") ಸಾಂಪ್ರದಾಯಿಕ ರೂಪದ ನಿದರ್ಶನ.

ಸಂಪ್ರದಾಯ ಅಥವಾ ಒಪ್ಪಿಗೆಯ ಮೇಲೆ ಅವಲಂಬಿತವಲ್ಲದುದನ್ನು ನಾನು 'ನಗ್ನ' ಅಧಿಕಾರವೆಂದು ಕರೆಯುತ್ತೇನೆ. ಅದರ ಲಕ್ಷಣಗಳು ಸಾಂಪ್ರದಾಯಿಕ ಅಧಿಕಾರದವಕ್ಕಿಂತ ತುಂಬ ಭಿನ್ನವಾಗಿರುತ್ತವೆ. ಸಾಂಪ್ರದಾಯಿಕ ಅಧಿಕಾರವು ಎಲ್ಲಿ ನೆಲೆಗೊಂಡಿದೆಯೋ ಅಲ್ಲಿನ ಆಡಳಿತದ ಸ್ವರೂಪವು ಪೂರ್ತಿ ಎನ್ನುವಷ್ಟರಮಟ್ಟಿಗೆ ಅದು

ಹೊಂದಿರುವ ಸುಭದ್ರತೆ ಅಥವಾ ಅಭದ್ರತೆಯ ಭಾವನೆಯನ್ನು ಅವಲಂಬಿಸಿರುತ್ತದೆ. 'ನಗ್ನ' ಅಧಿಕಾರವು ಸಾಮಾನ್ಯವಾಗಿ ಸೇನಾಡಳಿತದ್ದು; ಇದು ಆಂತರಿಕ ನಿರಂಕುಶಪ್ರಭುತ್ವದಿಂದಾಗಿರಬಹುದು ಅಥವಾ ಬಾಹ್ಯ ಆಕ್ರಮಣದ ಕಾರಣದಿಂದಾಗಿರಬಹುದು. ವಿಶೇಷವಾಗಿ ಅದರ ಎರಡನೆಯ ಬಗೆಯು ಹೆಚ್ಚು ಪ್ರಮುಖವಾದುದು, ಅನೇಕ ಆಧುನಿಕ 'ವೈಜ್ಞಾನಿಕ' ಇತಿಹಾಸಕಾರರು ಒಪ್ಪಿಕೊಳ್ಳಲು ಸಿದ್ಧವಾಗಿರುವುದಕ್ಕಿಂತ ಹೆಚ್ಚು ಎಂಬುದು ನನ್ನ ಭಾವನೆ. ಅಲೆಕ್ಸಾಂಡರ್ ಮತ್ತು ಜೂಲಿಯಸ್ ಸೀಸರ್ ತಮ್ಮ ಯುದ್ಧಗಳ ಕಾರಣದಿಂದಾಗಿ ಇತಿಹಾಸದ ದಿಕ್ಕನ್ನೇ ಬದಲಾಯಿಸಿದರು. ಅಲೆಕ್ಸಾಂಡರ್ ಇಲ್ಲದಿದ್ದರೆ ಗಾಸ್ಪೆಲ್‌ಗಳನ್ನು ಗ್ರೀಕ್ ಭಾಷೆಯಲ್ಲಿ ರಚಿಸುತ್ತಲೇ ಇರಲಿಲ್ಲ, ರೋಮನ್ ಸಾಮ್ರಾಜ್ಯದುದ್ದಗಲಕ್ಕೂ ಕ್ರಿಶ್ಚಿಯನ್ ಮತವನ್ನು ಪ್ರಚಾರಮಾಡಲು ಸಾಧ್ಯವಾಗುತ್ತಲೇ ಇರಲಿಲ್ಲ. ಸೀಸರ್ ಇರದೇ ಹೋಗಿದ್ದರೆ ಫ್ರೆಂಚ್ ಜನರು ಲ್ಯಾಟಿನ್‌ನಿಂದ ಹುಟ್ಟಿದ ಭಾಷೆಯನ್ನು ಮಾತನಾಡುತ್ತಿರಲಿಲ್ಲ, ಕ್ಯಾಥೋಲಿಕ್ ಚರ್ಚ್ ಅಸ್ತಿತ್ವಕ್ಕೆ ಬರುವುದೂ ಕಷ್ಟಕರವಾಗುತ್ತಿತ್ತು. ಅಮೆರಿಕನ್ ಇಂಡಿಯನ್ನರದಕ್ಕಿಂತ ಬಿಳಿಯ ಜನಾಂಗದ ಸೇನಾಶಕ್ತಿ ಮಿಗಿಲಾಗಿರುವುದು ಖಡ್ಗದ ಸಾಮರ್ಥ್ಯಕ್ಕೆ ನೀಡಬಹುದಾದ ಮತ್ತು ಅಲ್ಲಗಳೆಯಲಾಗದ ನಿದರ್ಶನ. ನಾಗರಿಕತೆಯ ಹರಡುವಿಕೆಗೆ ಮಿಕ್ಕಾವುದೇ ಒಂದು ಸಾಧನಕ್ಕಿಂತ ಶಸ್ತ್ರಬಲದಿಂದ ಪಡೆದ ವಿಜಯವೇ ಹೆಚ್ಚು ಕಾರಣವಾಗಿರುವುದು. ಇಷ್ಟಾದರೂ, ಸೈನ್ಯಾಧಿಕಾರವು ಹಣ, ತಂತ್ರಜ್ಞಾನ, ಮತಾಂಧತೆ ಮುಂತಾದ ಇನ್ನಿತರ ಬಲಗಳನ್ನಾಶ್ರಯಿಸಿರುವುದೇ ಹೆಚ್ಚು. ಇದು ಎಲ್ಲ ಸಂದರ್ಭಗಳಲ್ಲಿ ಸತ್ಯವೆಂದು ನಾನು ವಾದಿಸುತ್ತಿಲ್ಲ; ಉದಾಹರಣೆಗೆ, ಸ್ಪಾನಿಶ್ ಉತ್ತರಾಧಿಕಾರಿತ್ವಕ್ಕಾಗಿ ನಡೆದ ಯುದ್ಧದಲ್ಲಿ ಮಾರ್ಲ್‌ಬರೋನ ಬುದ್ಧಿಶಕ್ತಿಯೇ ಅದು ಯಶಸ್ವಿಯಾಗಲು ಕಾರಣವಾದುದು. ಆದರೆ ಇನ್ನು ವ್ಯಾಪಕ ನಿಯಮವೊಂದರ ಅಪವಾದವೆಂದು ಮಾತ್ರ ಪರಿಗಣಿಸಬೇಕು.

ಸಾಂಪ್ರದಾಯಿಕ ಅಧಿಕಾರವೊಂದು ಕೊನೆಗೊಂಡಾಗ, ಆನಂತರ ಪಟ್ಟವೇರುವುದು ನಗ್ನ ಅಧಿಕಾರವಲ್ಲ, ಬಹುಸಂಖ್ಯಾತರ ಅಥವಾ ದೊಡ್ಡ ಪ್ರಮಾಣದ ಅಲ್ಪಸಂಖ್ಯಾತರ ಒಪ್ಪಿಗೆಯಿಂದ ಮೂಡಿದ ಕ್ರಾಂತಿಕಾರಿ ಆಡಳಿತ. ಅಮೆರಿಕದ ಸ್ವಾತಂತ್ರ್ಯಸಮರದಲ್ಲಿ ಆದುದು ಇದೇ. ವಾಷಿಂಗ್‌ಟನ್‌ನ ಅಧಿಕಾರದಲ್ಲಿ ನಗ್ನ ಅಧಿಕಾರದ ಯಾವ ಲಕ್ಷಣಗಳೂ ಇರಲಿಲ್ಲ. ಅಂತೆಯೇ, ಸುಧಾರಣೆಯ ಕಾಲದಲ್ಲಿ ಕ್ಯಾಥೋಲಿಕ್ ಚರ್ಚ್‌ಗಳ ಬದಲು ಹೊಸ ಚರ್ಚ್‌ಗಳು ಅಸ್ತಿತ್ವಕ್ಕೆ ಬಂದವು, ಅವುಗಳ ಯಶಸ್ಸಿಗೆ ಕಾರಣವಾದುದು ಜನರ ಸಮ್ಮತಿಯೇ ಹೊರತು ಬಲವಂತವಲ್ಲ.

ಕ್ರಾಂತಿಕಾರಿ ಆಡಳಿತವೊಂದು ನಗ್ನ ಬಲವನ್ನು ಹೆಚ್ಚು ಪ್ರಯೋಗಿಸದೆಯೇ ಸ್ಥಿರಗೊಳ್ಳಬೇಕಾದರೆ ಸಾಂಪ್ರದಾಯಿಕ ಆಡಳಿತಕ್ಕಿರುವುದಕ್ಕಿಂತ ಹೆಚ್ಚಿನ ಪ್ರಮಾಣದ ಮತ್ತು ಹೆಚ್ಚು ತೀವ್ರವಾದ ಜನಬೆಂಬಲವು ಆವಶ್ಯಕ. ೧೯೧೧ ರಲ್ಲಿ ಚೀನಾದ ಗಣರಾಜ್ಯವು ಘೋಷಿತವಾದಾಗ, ವಿದೇಶೀ ಶಿಕ್ಷಣ ಪಡೆದವರು ಸಂಸದೀಯ ಅಧಿಕಾರದ ಸಂವಿಧಾನವೊಂದನ್ನು ಜಾರಿಗೊಳಿಸಿದರು, ಜನ ಅದಕ್ಕೆ ವಿರೋಧ ವ್ಯಕ್ತಪಡಿಸಿದಾಗ ಬಹು ಬೇಗ ಸೇನಾಡಳಿತಗಾರರ ಮೂಲಕ ನಗ್ನ ಅಧಿಕಾರವನ್ನು ಚಲಾಯಿಸಲು ಮುಂದಾದರು. ಮುಂದೆ ಕ್ವಮಿನ್‌ಟಾಂಗ್ ಸಾಧಿಸಿದ ಐಕ್ಯವು ರಾಷ್ಟ್ರೀಯತೆಯ ಮೇಲೆ ಅವಲಂಬಿಸಿತ್ತು, ಸಂಸದೀಯ ಅಧಿಕಾರದ ಮೇಲಲ್ಲ. ಲ್ಯಾಟಿನ್ ಅಮೆರಿಕದಲ್ಲಿಯೂ ಮತ್ತೆ ಮತ್ತೆ ಹೀಗೆಯೇ ಸಂಭವಿಸಿದೆ. ಈ ಎಲ್ಲ ಸಂದರ್ಭಗಳಲ್ಲಿಯೂ, ಯಶಸ್ವಿಯಾಗಲು ಆವಶ್ಯಕವಾದ ಜನಬೆಂಬಲವಿದ್ದಿದ್ದರೆ ಸಂಸತ್ತಿನ ಅಧಿಕಾರವು ಕ್ರಾಂತಿಕಾರಿಯಾಗುತ್ತಿತ್ತು; ಆದರೆ ಗೆಲವು ಸಾಧಿಸಿದ ಶುದ್ಧ ಸೇನಾಡಳಿತವು ಹೆಚ್ಚು ನಗ್ನತೆಯನ್ನು ಪ್ರದರ್ಶಿಸಿತು.

ಸಾಂಪ್ರದಾಯಿಕ, ಕ್ರಾಂತಿಕಾರಿ ಮತ್ತು ನಗ್ನ ಅಧಿಕಾರಗಳ ನಡುವಣ ವ್ಯತ್ಯಾಸವು ಮಾನಸಿಕವಾದುದು. ಹಳೆಯ ಪದ್ಧತಿಯನ್ನು ಹೊಂದಿದೆ ಎಂಬ ಕಾರಣಕ್ಕಾಗಿಯೇ ಅದನ್ನು ನಾನು ಸಾಂಪ್ರದಾಯಿಕ ಅಧಿಕಾರ ಎಂದು ಕರೆಯುವುದಿಲ್ಲ; ಸ್ವಲ್ಪಮಟ್ಟಿಗಿನ ಅನೂಚಾನ ಎನಿಸುವ ಪದ್ಧತಿಯಿಂದ ಕೂಡಿದ ಗೌರವಕ್ಕೆ ಅದು ಪಾತ್ರವಾಗಿರಬೇಕು. ಈ ಗೌರವವು ಕುಂದುತ್ತ ಹೋದಂತೆಲ್ಲ, ಸಾಂಪ್ರದಾಯಿಕ ಅಧಿಕಾರವು ಕ್ರಮೇಣ ನಗ್ನತೆಯತ್ತ ವಾಲುತ್ತದೆ. ರಷ್ಯದಲ್ಲಿ ಕ್ರಾಂತಿಕಾರಿ ಆಂದೋಲನವು ಬೆಳೆಯುತ್ತ ಕೊನೆಗೆ ೧೯೧೭ ರಲ್ಲಿ ಅದು ಗೆಲವು ಸಾಧಿಸಿದುದರಲ್ಲಿ ಈ ಬಗೆಯನ್ನು ಕಾಣಬಹುದು.

ಹೊಸತೊಂದು ಪಂಥ, ಕಾರ್ಯಕ್ರಮ ಅಥವಾ ಭಾವನೆಯ ಕಾರಣದಿಂದ ಒಗ್ಗೂಡಿದ ದೊಡ್ಡ ಗುಂಪಿನ ಮೇಲೆ ಆಧರಿಸಿದ ಅಧಿಕಾರವನ್ನು ನಾನು ಕ್ರಾಂತಿಕಾರಿ ಎಂದು ಕರೆಯುತ್ತೇನೆ; ಪ್ರಾಟೆಸ್ಟೆಂಟಿಸ್ಮ್, ಕಮ್ಯುನಿಸ್ಮ್, ಅಥವಾ ದೇಶದ ಸ್ವಾತಂತ್ರ್ಯ ಪ್ರೇಮ ಇವುಗಳು ಇದಕ್ಕೆ ನಿದರ್ಶನಗಳು. ಅಧಿಕಾರದಾಹದ ವ್ಯಕ್ತಿಗಳು ಅಥವಾ ಗುಂಪುಗಳು ಜನರ ಸಹಕಾರವನ್ನು ಪಡೆಯುವ ಬದಲು ಅವರನ್ನು ಭಯದಿಂದ ವಿನೀತರಾಗಿಸಿ ಅಧಿಕಾರ ಹಿಡಿದಿದ್ದರೆ ಅಂಥದನ್ನು ನಾನು ನಗ್ನ ಅಧಿಕಾರವೆನ್ನುತ್ತೇನೆ. ಅಧಿಕಾರದ ನಗ್ನತೆ ಎಂಬುದು ಪ್ರಮಾಣವನ್ನು ಅವಲಂಬಿಸಿದೆ ಎಂಬುದನ್ನು ಮುಂದೆ ನೋಡುತ್ತೇವೆ. ಪ್ರಜಾಪ್ರಭುತ್ವ

ದೇಶದಲ್ಲಿ ವಿರೋಧ ಪಕ್ಷಗಳ ದೃಷ್ಟಿಯಲ್ಲಲ್ಲದಿದ್ದರೂ ದೃಢ ಅನಾಯಕತ್ವವಾದಿಯ ದೃಷ್ಟಿಯಲ್ಲಿ ನಗ್ನವೆನಿಸುತ್ತದೆ. ಹಾಗೆಯೇ, ಎಲ್ಲಿ ದಮನವಿರುತ್ತದೆಯೋ ಅಲ್ಲಿ ಚರ್ಚ್‌ನ ಅಧಿಕಾರವು ಧರ್ಮದ್ರೋಹಿಗಳ ದೃಷ್ಟಿಯಲ್ಲಿ ನಗ್ನವಾಗುತ್ತದೆ, ಆದರೆ ಸನಾತನವಾದಿಯಾದ ಪಾಪಿಯ ದೃಷ್ಟಿಯಲ್ಲಲ್ಲ.

ನಮ್ಮ ವಿಷಯದ ಮತ್ತೊಂದು ವಿಭಜನೆಯೆಂದರೆ ಸಂಸ್ಥೆಗಳ ಹಾಗೂ ವ್ಯಕ್ತಿಗಳ ನಡುವಣ ಅಧಿಕಾರಸ್ವರೂಪದ್ದು. ಸಂಸ್ಥೆಯೊಂದು ಅಧಿಕಾರವನ್ನು ಗಳಿಸುವ ರೀತಿ ಒಂದು, ಸಂಸ್ಥೆಯೊಳಗೆ ಒಬ್ಬ ವ್ಯಕ್ತಿ ಅಧಿಕಾರವನ್ನು ಹೇಗೆ ಗಳಿಸುತ್ತಾನೆ ಎಂಬ ಪ್ರಶ್ನೆ ಇನ್ನೊಂದು. ಆದರೆ ಇವೆರಡರಲ್ಲಿ ಪರಸ್ಪರ ಸಂಬಂಧವಿದೆ; ನಿಮಗೆ ಪ್ರಧಾನಮಂತ್ರಿಯಾಗುವ ಆಸೆಯಿದ್ದರೆ, ನೀವು ನಿಮ್ಮ ಪಕ್ಷದೊಳಗೆ ಅಧಿಕಾರವನ್ನು ಗಳಿಸಬೇಕು, ನಿಮ್ಮ ಪಕ್ಷ ದೇಶದ ಅಧಿಕಾರವನ್ನು ಸಂಪಾದಿಸಬೇಕು. ನೀವೇನಾದರೂ ಆನುವಂಶಿಕ ಅಧಿಕಾರವು ಅಂತ್ಯಗೊಳ್ಳುವುದಕ್ಕಿಂತ ಮುಂಚೆ ಜೀವಿಸಿದ್ದಿದ್ದರೆ ದೇಶವೊಂದರ ಅಧಿಕಾರವನ್ನು ಪಡೆಯಲು ರಾಜ ಮಗನಾಗಿಯೇ ಹುಟ್ಟಬೇಕಾಗಿತ್ತು; ಆದರೆ ಇಷ್ಟರಿಂದ ನೀವು ಇತರ ದೇಶಗಳ ಮೇಲೆ ಅಧಿಕಾರವನ್ನು ಹೊಂದಲು ಸಾಧ್ಯವಾಗುತ್ತಿರಲಿಲ್ಲ, ಅದನ್ನು ಪಡೆಯಲು ಎಷ್ಟೋ ರಾಜಕುಮಾರರಲ್ಲಿಲ್ಲದಿದ್ದ ಕೆಲವು ಗುಣಗಳನ್ನು ಪಡೆದಿರಬೇಕಾಗುತ್ತಿತ್ತು. ಆರ್ಥಿಕ ವಲಯದಲ್ಲಿ ಇಂತಹ ಪರಿಸ್ಥಿತಿಯು ಈಗಲೂ ಅಸ್ತಿತ್ವದಲ್ಲಿದೆ, ಶ್ರೀಮಂತಿಕೆ ಬಹುತೇಕ ಆನುವಂಶಿಕವಾಗಿಯೇ ಉಳಿದಿದೆ. ಫ್ರೆಂಚ್ ಸೋಷಿಯಲಿಸ್ಟರು ಪ್ರತಿಭಟಿಸುತ್ತಿರುವ ಫ್ರಾನ್ಸ್‌ನ ಇನ್ನೂರು ಶ್ರೀಮಂತಕುಟುಂಬಗಳ ಬಗ್ಗೆ ವಿಚಾರಮಾಡಿ. ಆದರೆ ಶ್ರೀಮಂತಿಕೆಯ ಆನುವಂಶಿಕತೆಯು ಹಿಂದಿನ ಸಿಂಹಾಸನದ ಉತ್ತರಾಧಿಕಾರದಷ್ಟು ಶಾಶ್ವತವಾದುದಲ್ಲ: ಏಕೆಂದರೆ ಈ ವಿಚಾರದಲ್ಲಿ ದೈವನಿಯಾಮಕತ್ವದ ನಂಬಿಕೆಯು ವ್ಯಾಪಕವಲ್ಲ. ಏಳಿಗೆ ಹೊಂದುತ್ತಿರುವ ಶ್ರೀಮಂತನೊಬ್ಬ ಆನುವಂಶಿಕ ಶ್ರೀಮಂತನೊಬ್ಬನನ್ನು ಹಿಂದೆ ಹಾಕಲು ಪ್ರಯತ್ನಿಸಿದರೆ ಅದನ್ನಾರೂ ಅಪವಿತ್ರವೆಂದು ಭಾವಿಸುವುದಿಲ್ಲ; ಅನೈತಿಕ ಎನ್ನಬಹುದಾದ ವಿಧಾನಗಳನ್ನನುಸರಿಸದೆ ನಿಯಮಾನುಸಾರ ನಡೆದುಕೊಳ್ಳಬೇಕು, ಅಷ್ಟೆ.

ವಿವಿಧ ಬಗೆಯ ಸಂಸ್ಥೆಗಳು ವಿಭಿನ್ನ ಸ್ವಭಾವಗಳ ವ್ಯಕ್ತಿಗಳನ್ನು ತಮ್ಮ ನಾಯಕಸ್ಥಾನಕ್ಕೇರಿಸುತ್ತವೆ; ಹಾಗೆಯೇ ಸಮಾಜದ ವಿವಿಧ ವರ್ಗಗಳು. ಇತಿಹಾಸದ ಒಂದು ಕಾಲಮಾನದ ವೈಶಿಷ್ಟ್ಯವನ್ನು ಆಗಿನ ವ್ಯಕ್ತಿಗಳ ಕಾರಣದಿಂದಲೇ ಗುರುತಿಸಲಾಗುತ್ತದೆ, ಅದರ ಸ್ವರೂಪ

ನಿರ್ಣಯವಾಗುವುದು ಈ ವ್ಯಕ್ತಿಗಳ ಸ್ವರೂಪದ ಆಧಾರದ ಮೇಲೆಯೇ. ಪ್ರಾಮುಖ್ಯವನ್ನು ಗಳಿಸಲು ಬೇಕಾದ ಗುಣಗಳು ಬದಲಾಗುವುದರಿಂದ ಗಣ್ಯವ್ಯಕ್ತಿಗಳೂ ಬದಲಾಗುತ್ತಾರೆ. ಲೆನಿನ್‌ರಂತಹ ವ್ಯಕ್ತಿಗಳು ಹನ್ನೆರಡನೆಯ ಶತಮಾನದಲ್ಲಿಯೂ ಇದ್ದಿರಬಹುದು, ಈಗಲೂ ರಿಚರ್ಡ್ ಕೂಅರ್ ದ ಲಯನ್ ಅಂತಹವರು ಇರಬಹುದು; ಆದರೆ ಇತಿಹಾಸ ಅವರನ್ನು ಗುರುತಿಸಿಲ್ಲ. ನಾನಾ ಬಗೆಯ ಅಧಿಕಾರಿಗಳು ಸೃಷ್ಟಿಸಿದ ವಿವಿಧ ಬಗೆಯ ವ್ಯಕ್ತಿಗಳ ಬಗ್ಗೆ ಈಗ ಸ್ವಲ್ಪ ವಿಚಾರ ಮಾಡೋಣ.

ಆನುವಂಶಿಕ ಅಧಿಕಾರದ ಪರಿಕಲ್ಪನೆಯಿಂದಾಗಿ 'ಸಭ್ಯ' (ಜೆಂಟಲ್‌ಮನ್)ನ ಕಲ್ಪನೆ ಬಂದಿದೆ. ಅಪಮೌಲ್ಯಕ್ಕೊಳಗಾದಂತೆ ತೋರುವ ಈ ಪರಿಕಲ್ಪನೆಗೆ ದೀರ್ಘ ಇತಿಹಾಸವೇ ಇದೆ: ನಾಯಕರ ಮಾಂತ್ರಿಕ ಶಕ್ತಿಯಿಂದ ಹಿಡಿದು ರಾಜರ ದೈವಮೂಲ, ರಾಜನ್ಯಕರ ಸಾಹಸ ಮತ್ತು ಕುಲೀನ ಶ್ರೀಮಂತಿಕೆಯವರೆಗೆ ಇದು ಸಾಗಿ ಬಂದಿದೆ. ಅಧಿಕಾರವು ಆನುವಂಶಿಕವಾಗಿರುವೆಡೆಗಳಲ್ಲಿ ಮೆಚ್ಚಿಕೆಗೊಳಗಾಗಿದ್ದ ಗುಣಗಳೆಂದರೆ ವಿರಾಮ ಮತ್ತು ಮೇಲ್ಮೆಗಳಂತಹವು. ಅಧಿಕಾರವು ರಾಜಪ್ರಭುತ್ವಕ್ಕೆ ಬದಲು ಶ್ರೀಮಂತಿಕೆಯಿಂದ ಬಂದುದಾಗಿದ್ದರೆ ಅತ್ಯಂತ ಘನವಾದ ಗುಣಗಳೆಂದು ಪರಿಗಣಿತವಾಗುತ್ತಿದ್ದುದು ಸಮಾನರೊಡನೆ ಸೌಜನ್ಯದಿಂದ ವರ್ತಿಸುವುದು, ಮತ್ತು ಕೆಳಗಿನ ಸ್ತರದವರೊಡನೆ ಹಿರಿಮೆಯನ್ನು ಪ್ರದರ್ಶಿಸುವುದು. ಆಯಾ ಕಾಲದಲ್ಲಿನ ಸೌಜನ್ಯ ವರ್ತನೆಯ ಕಲ್ಪನೆ ಏನೇ ಇರಲಿ, ಆನುವಂಶಿಕ ಅಧಿಕಾರದ ಆಧಾರದ ಮೇಲೆಯೇ ಸೌಜನ್ಯವನ್ನು ನಿರ್ಧರಿಸುವುದು ಪರಿಪಾಟ. ಅಧ್ಯಯನ ಮತ್ತು ವಿನಯ ವರ್ತನೆಗಳು ತುಂಬಿರುವ ಗಂಡು–ಹೆಣ್ಣುಗಳಿಂದ ತುಂಬಿದ ಸಮಾಜದಲ್ಲಿ ಒಬ್ಬ 'ಬೂರ್ಜ್ವಾ ಜಂಟಲ್‌ಮೆನ್' ಒಡನಾಡಿದರೆ ಅವನು ನಗೆಪಾಟಲಿಗೊಳಗಾಗುತ್ತಾನೆ. 'ಸಭ್ಯ'ನ ಬಗೆಗಿನ ಮೆಚ್ಚಿಕೆಯು ಉಳಿದುಕೊಳ್ಳುವುದು ವ್ಯಕ್ತಿಯುಾನುವಂಶಿಕವಾಗಿ ಪಡೆದಿರುವ ಆಸ್ತಿಯ ಕಾರಣದಿಂದ, ತಂದೆಯಿಂದ ಮಗನಿಗೆ ಐಶ್ವರ್ಯವೋ ಅಧಿಕಾರವೋ ಬರುವುದು ನಿಂತರೆ ಬಹು ಬೇಗ ಮೆಚ್ಚಿಕೆಯು ಕಣ್ಮರೆಯಾಗುತ್ತದೆ.

ವಾಸ್ತವವೋ ಊಹೆಯದೋ, ವಿವೇಕ ಅಥವಾ ವಿದ್ಯೆಯಿಂದ ಬರುವ ಅಧಿಕಾರದ ಸ್ವರೂಪವೇ ಬೇರೆ. ಈ ಬಗೆಯ ಅಧಿಕಾರದ ಎರಡು ಬಹು ಮುಖ್ಯ ಉದಾಹರಣೆಗಳೆಂದರೆ ಸಾಂಪ್ರದಾಯಿಕ ಚೈನ ಮತ್ತು ಕ್ಯಾಥೋಲಿಕ್ ಚರ್ಚ್. ಹಿಂದೆ ಬಹು ಕಾಲಗಳಲ್ಲಿ ಅಸ್ತಿತ್ವದಲ್ಲಿದ್ದ ಇದು ಆಧುನಿಕ ಯುಗದಲ್ಲಿ ಕಡಿಮೆಯಾಗಿದೆ. ಚರ್ಚ್‌ನ ಹೊರತಾಗಿ, ಇಂಗ್ಲಂಡ್‌ನಲ್ಲಿ ಇದನ್ನು ಕಾಣುವುದು ತೀರ ಅಪರೂಪ. ವಿಚಿತ್ರವೆಂದರೆ,

ವಿದ್ಯೆಗೆ ದತ್ತವಾಗುವ ಅಧಿಕಾರ ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿಯೇ ಅತ್ಯಧಿಕ, ನಾಗರಿಕತೆ ವ್ಯಾಪಕಗೊಂಡಷ್ಟೂ ಇದು ಕಡಿಮೆಯಾಗುತ್ತ ಹೋಗುತ್ತದೆ. ನಾನು 'ವಿದ್ಯೆ' ಎಂದು ಕರೆಯುವುದರಲ್ಲಿ ಅನೂಚಾನವಾದ ಮಾಂತ್ರಿಕ ಹಾಗೂ ವೈದ್ಯಕೀಯ ವಿದ್ಯೆಗಳೂ ಸೇರುತ್ತವೆ. ಲ್ಹಾಸಾ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಗಳಿಸಲು ಇಪ್ಪತ್ತು ವರ್ಷಗಳ ಶಿಕ್ಷಣ ಆವಶ್ಯಕ; ಇದು ದಲಾಯಿ ಲಾಮ ಅನ್ನು ಬಿಟ್ಟರೆ ಉಳಿದೆಲ್ಲ ಉನ್ನತ ಹುದ್ದೆಗಳನ್ನು ಪಡೆಯಲು ಅತ್ಯವಶ್ಯಕ. ಈ ಹುದ್ದೆಯು ಕ್ರಿಶ ೧೦೦೦ ದ ಯೂರೋಪಿನಲ್ಲಿದ್ದ ಮಹಾ ಮಾಂತ್ರಿಕನಾಗಿದ್ದ ಎರಡನೇ ಪೋಪ್ ಸಿಲ್ವೆಸ್ಟರ್ ಹೊಂದಿದ್ದಿರದಷ್ಟೇ ದೊಡ್ಡದು. ಅವನು ಪುಸ್ತಕಗಳನ್ನು ಓದುತ್ತಿದ್ದ, ಇದರಿಂದಾಗಿ ಜನರಲ್ಲಿ ತಾತ್ವಿಕ ಭಯಗಳನ್ನುಂಟುಮಾಡಿ ಚರ್ಚ್‌ನ ಅಧಿಕಾರವನ್ನು ಹೆಚ್ಚಿಸಿದ್ದ.

ಬುದ್ಧಿಜೀವಿ ಎಂದರೆ ಪುರೋಹಿತನ ಆಧ್ಯಾತ್ಮಿಕ ಉತ್ತರಾಧಿಕಾರಿ ಎಂಬುದನ್ನು ನಾವೆಲ್ಲ ಬಲ್ಲೆವು; ಆದರೆ ವಿದ್ಯೆಯ ವ್ಯಾಪಕತೆಯಿಂದಾಗಿ ಅವನ ಅಧಿಕಾರ ಕುಂದಿದೆ. ಬುದ್ಧಿಜೀವಿಯ ಅಧಿಕಾರ ನಿಂತಿರುವುದು ಮೂಢನಂಬಿಕೆಗಳ ಮೇಲೆ, ಮಂತ್ರಗಳು ಮತ್ತು ಧರ್ಮಗ್ರಂಥಗಳ ಬಗೆಗಿನ ಗೌರವದ ಮೇಲೆ. ಇಂತಹುದು ಇಂಗ್ಲಿಷ್ ಮಾತೃಭಾಷೆಯ ಜನರಲ್ಲಿ ಸ್ವಲ್ಪಮಟ್ಟಿಗೆ ಉಳಿದುಬಂದಿದೆ; ಕಿರೀಟಧಾರಣೆ ಮಹೋತ್ಸವದ ಬಗ್ಗೆ ಇಂಗ್ಲಿಷ್ ಜನರು ಹಾಗೂ ತಮ್ಮ ದೇಶದ ಸಂವಿಧಾನದ ಬಗ್ಗೆ ಅಮೆರಿಕನ್ನರು ಹೊಂದಿರುವ ಮನೋಭಾವ ಇದಕ್ಕೆ ಉದಾಹರಣೆಗಳು. ಹೀಗಾಗಿ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಸ್ವಲ್ಪಮಟ್ಟಿಗೆ ಪ್ರಾಚೀನಕಾಲದ ವಿದ್ಯಾವಂತರ ಅಧಿಕಾರವನ್ನು ಹೊಂದಿದ್ದಾರೆ. ಆದರೆ ಇವೆರಡೂ ಈಜಿಪ್ಟ್‌ನ ಪುರೋಹಿತವರ್ಗ ಅಥವಾ ಚೈನಾದ ಕನ್‌ಫ್ಯೂಷಿಯನ್ ಪಂಡಿತರ ತೆಳು ನೆರಳುಗಳು ಅಷ್ಟೆ.

ಸಭ್ಯನ ಲಕ್ಷಣವೆಂದರೆ ಗೌರವ, ತನ್ನ ವಿದ್ಯೆ ಅಥವಾ ವಿವೇಕದಿಂದಾಗಿ ಗಳಿಸುವ ಅಧಿಕಾರ. ವಿವೇಕಶಾಲಿಯೆಂದು ಹೆಸರು ಪಡೆಯಲು ಒಬ್ಬ ವ್ಯಕ್ತಿಯು ದುರ್ಜ್ಞೇಯ ಪಾಂಡಿತ್ಯ ಹೊಂದಿದವನಂತಿರಬೇಕು, ಇಂದ್ರಿಯನಿಗ್ರಹ ಸಾಧಿಸಿರಬೇಕು, ಜನರ ಸ್ವಭಾವದ ಆಳವಾದ ತಿಳಿವಳಿಕೆಯಿರಬೇಕು. ವಯಸ್ಸು ಈ ಎಲ್ಲ ಗುಣಗಳನ್ನು ಸ್ವಲ್ಪಮಟ್ಟಿಗೆ ಉಂಟುಮಾಡುವುದೆಂಬ ನಂಬಿಕೆಯೂ ಇದೆ; ಇದರಿಂದಾಗಿಯೇ, 'ಪೂಜ್ಯ', 'ವೇದಮೂರ್ತಿ', 'ದೈವಜ್ಞ', 'ಚತುರ್ವೇದಿ' ಮುಂತಾದ ಪದಗಳು ಗೌರವಸೂಚಕ ಶಬ್ದಗಳಾಗಿವೆ. ದಾರಿಹೋಕನನನ್ನು

ಚೈನಾದ ಭಿಕ್ಷುಕನು ಸಂಬೋಧಿಸುವುದು 'ಬುದ್ಧಿ' ಎಂದೋ 'ಅಣ್ಣಾವರೆ' ಎಂದೋ. ಇಂತಹ ಜ್ಞಾನಿಗಳ ಅಧಿಕಾರವನ್ನು ಸಂಘಟಿಸಿದಾಗ ಪುರೋಹಿತವರ್ಗವೋ ವಿದ್ವನ್ಮಂಡಳಿಯೋ ಸೃಷ್ಟಿಯಾಗುತ್ತದೆ; ವಿದ್ವತ್ತೆಲ್ಲ ಇವುಗಳಲ್ಲಿಯೇ ಕೇಂದ್ರೀಕೃತವಾಗಿರುತ್ತದೆ. ಜ್ಞಾನಿಯು ಯೋಧನಿಗಿಂತ ಭಿನ್ನ ಸ್ವರೂಪದವನು; ತನ್ನ ಪ್ರಭಾವವಿರುವೆಡೆ ಅವನು ಬೇರೆಯದೇ ರೀತಿಯಲ್ಲಿ ಅಧಿಕಾರ ನಡೆಸುತ್ತಾನೆ.

ಇಂದಿನ ನಾಗರಿಕ ಸಮಾಜದಲ್ಲಿ ಜ್ಞಾನವು ಹಿಂದೆಂದಿಗಿಂತ ಹೆಚ್ಚಿನ ಪಾತ್ರವನ್ನು ವಹಿಸಿದರೂ, ಹೊಸ ಜ್ಞಾನವನ್ನು ಹೊಂದಿದವರಲ್ಲಿ ಅದಕ್ಕನುಗುಣವಾಗಿ ಹೆಚ್ಚು ಅಧಿಕಾರವು ಕೇಂದ್ರೀಕೃತವಾಗಿಲ್ಲ ಎಂಬ ಕುತೂಹಲಕರ ಅಂಶವನ್ನಾಗಲೇ ನಾವು ಗಮನಿಸಿದ್ದೇವೆ. ನಮ್ಮ ಅನುಕೂಲಕ್ಕಾಗಿ (ಅಥವಾ ಅನನುಕೂಲಕ್ಕಾಗಿ) ಒಬ್ಬ ಎಲೆಕ್ಟ್ರೀಷಿಯನ್ ಅಥವಾ ಟೆಲಿಫೋನ್ ಇಲಾಖೆಯ ನೌಕರ ವಿಚಿತ್ರ ಕೆಲಸಗಳನ್ನು ಮಾಡಿದರೂ ಅವರನ್ನು ನಾವು ವೈದ್ಯರಂತೆ ಗೌರವಿಸುವುದಿಲ್ಲ, ಅಥವಾ ಅವರಿಗೆ ಮುಜುಗರವುಂಟುಮಾಡಿದರೆ ಬಿರುಗಾಳಿಯೆಬ್ಬಿಸಬಹುದೆಂದು ಹೆದರುವುದಿಲ್ಲ. ಇದಕ್ಕೆ ಕಾರಣವೆಂದರೆ, ವೈಜ್ಞಾನಿಕ ತಿಳಿವಳಿಕೆಯು ಕಷ್ಟಸಾಧ್ಯವಾದರೂ, ನಿಗೂಢವಾದುದೇನಲ್ಲ, ಆವಶ್ಯಕವಾದ ತೊಂದರೆ ತೆಗೆದುಕೊಂಡರೆ ಅದನ್ನು ಯಾರಾದರೂ ತಮ್ಮದಾಗಿಸಿಕೊಳ್ಳಬಹುದು ಎಂಬುದು. ಹೀಗಾಗಿಯೇ ಆಧುನಿಕ ಬುದ್ಧಿಜೀವಿಯು ಇತರರಲ್ಲಿ ಭಯವನ್ನುಂಟುಮಡುವುದಿಲ್ಲ, ಅವನು ಕೇವಲ ಒಬ್ಬ ನೌಕರನಾಗಿಯೇ ಉಳಿಯುತ್ತಾನೆ. ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ, ಈ ಬುದ್ಧಿಜೀವಿಗಳು, ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್‌ನಂತೆ ತಮ್ಮ ಪೂರ್ವಿಕರಿಗೆ ಅಧಿಕಾರ ನೀಡಿದ್ದ ಪ್ರಭಾವಳಿಯನ್ನು ಆನುವಂಶಿಕವಾಗಿ ಪಡೆದಿರುವುದಿಲ್ಲ.

ಸತ್ಯವೆಂದರೆ ವಿದ್ಯೆಗೆ ಸಲ್ಲಿಸುತ್ತಿದ್ದ ಗೌರವವು ಅಸಲಿ ಜ್ಞಾನಕ್ಕೆ ಎಂದೂ ಸಲ್ಲದೆ ಕೇವಲ ಅಲೌಕಿಕ ಶಕ್ತಿಗಳನ್ನು ಹೊಂದಿದವರೆಂದು ನಂಬಲಾದ ವ್ಯಕ್ತಿಗಳಿಗೆ ಮಾತ್ರ ಸಂದಾಯವಾಯಿತು. ಪ್ರಕೃತಿಯ ವ್ಯಾಪಾರಗಳನ್ನು ವಾಸ್ತವವಾಗಿ ವಿವರಿಸುವುದರ ಮೂಲಕ ವಿಜ್ಞಾನವು ಅಲೌಕಿಕತೆಯಲ್ಲಿನ ನಂಬಿಕೆಯನ್ನು, ಮತ್ತು ಅದರಿಂದಾಗಿ ಬುದ್ಧಿಜೀವಿಯ ಬಗೆಗಿನ ವಿಶೇಷ ಗೌರವವನ್ನು ತೊಡೆದುಹಾಕಿದೆ. ಹೀಗಾಗಿ, ನಮ್ಮ ಕಾಲವನ್ನು ಹಿಂದಿನದವಕ್ಕಿಂತ ಭಿನ್ನವಾದ ಲಕ್ಷಣಗಳಿಂದ ಕೂಡಿರುವಂತೆ ಮಾಡಲು ವಿಜ್ಞಾನಿಗಳು ಕಾರಣೀಭೂತರಾದರೂ, ತಮ್ಮ ಅನ್ವೇಷಣೆ ಮತ್ತು ಆವಿಷ್ಕಾರಗಳಿಂದ ಜೀವನದ ಆಗುಹೋಗುಗಳ ಮೇಲೆ ಅಗಾಧ

ಪ್ರಭಾವವನ್ನು ಬೀರಿರುವವರಾದರೂ, ವ್ಯಕ್ತಿಗಳಾಗಿ ಅವರು ಇಂಡಿಯದ ಫಕೀರರಂತೆಯೋ ಮ್ಯಾಲನೀಸಿಯದ ವೈದ್ಯಜನರಂತೆಯೋ ತಮ್ಮ ಬುದ್ಧಿವಂತಿಕೆಗಾಗಿ ಹೆಚ್ಚಿನ ಗೌರವಕ್ಕೆ ಪಾತ್ರರಾಗಿಲ್ಲ. ತಮ್ಮ ಕಾರ್ಯವೈಖರಿಯ ಕಾರಣದಿಂದಾಗಿಯೇ ತಮ್ಮಿಂದ ಘನತೆಯು ಜಾರಿಹೋಗುತ್ತಿರುವುದರಿಂದ ಆಧುನಿಕ ಜಗತ್ತಿನ ಬಗ್ಗೆ ಅವರಿಗೆ ಅತೃಪ್ತಿಯುಂಟಾಗುತ್ತದೆ. ಈ ಅತೃಪ್ತಿಯು ಯಾರಲ್ಲಿ ಕನಿಷ್ಠ ಪ್ರಮಾಣದಲ್ಲಿದೆಯೋ ಅಂತಹವರು ಕಮ್ಯುನಿಸಮ್‌ಗೆ ಒಲಿಯುತ್ತಾರೆ; ಅದು ಯಾರ ಮನಸ್ಸಿನಾಳದಲ್ಲಿ ಹುದುಗಿ ಹೋಗಿರುತ್ತದೆಯೋ ಅವರು ತಮ್ಮದೇ ದಂತಗೋಪುರವನ್ನು ಸೃಷ್ಟಿಸಿಕೊಳ್ಳುತ್ತಾರೆ.

ಭಾರಿ ಆರ್ಥಿಕ ಸಂಸ್ಥೆಗಳು ಸ್ಥಾಪನೆಗೊಂಡದ್ದರಿಂದ ಹೊಸ ಬಗೆಯ ಬಲಿಷ್ಠ ವ್ಯಕ್ತಿಗಳು ಸೃಷ್ಟಿಗೊಂಡಿದ್ದಾರೆ: ಅವರನ್ನು ಅಮೆರಿಕದಲ್ಲಿ 'ಎಕ್ಸಿಕ್ಯುಟಿವ್' (ಕಾರ್ಯನಿರ್ವಾಹಕ ಅಧಿಕಾರಿ)ಗಳೆಂದು ಕರೆಯುತ್ತಾರೆ. ಆದರ್ಶ ಎಕ್ಸಿಕ್ಯುಟಿವ್ ಯಾರೆಂದರೆ, ಕ್ಷಿಪ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲವನು, ವಸ್ತುವಿನ ಸ್ವರೂಪದ ಬಗ್ಗೆ ಸೂಕ್ಷ್ಮ ಒಳನೋಟವನ್ನು ಹರಿಸಬಲ್ಲವನು ಮತ್ತು ಕಠಿಣ ಸಂಕಲ್ಪಶಕ್ತಿಯವನೆಂಬ ಭಾವನೆಯನ್ನು ಇತರರಲ್ಲಿ ಮೂಡಿಸುವವನು. ಅವನಿಗೆ ಬಿಗುವಾದ ದವಡೆಗಳು, ಭದ್ರವಾಗಿ ಮುಚ್ಚಿಕೊಂಡ ತುಟಿಗಳು ಹಾಗೂ ಸಂಕ್ಷಿಪ್ತವೂ ಹರಿತವೂ ಆದ ಮಾತುಗಾರಿಕೆಗಳು ಇರಬೇಕು. ಸಮಾನರಲ್ಲಿ ಗೌರವವನ್ನೂ, ಕೆಳದರ್ಜೆಯವರಲ್ಲಿ ತಾವು ಯಾವ ಬಗೆಯಲ್ಲಿಯೂ ನಗಣ್ಯವಲ್ಲವೆಂಬ ಆತ್ಮವಿಶ್ವಾಸವನ್ನೂ ಅವನು ಮೂಡಿಸುತ್ತಾನೆ. ದಕ್ಷ ಸೇನಾಧಿಪತಿ ಹಾಗೂ ದಕ್ಷ ರಾಜನೀತಿಜ್ಞನ ಗುಣಗಳು ಅವನಲ್ಲಿ ಮೇಳೈಸಿರುತ್ತವೆ; ಯುದ್ಧಕಾಲದಲ್ಲಿ ದಯೆದಾಕ್ಷಿಣ್ಯರಾಹಿತ್ಯವೂ, ಸಂಧಿಸಮಯದಲ್ಲಿ ರಿಯಾಯಿತಿಗಳನ್ನು ತೋರಿಸುವ ಕೌಶಲವೂ ಅವನಲ್ಲಿರುತ್ತವೆ. ಇಂಥ ಗುಣಗಳಿಂದಲೇ ಅವನು ದೊಡ್ಡ ಆರ್ಥಿಕ ಸಂಸ್ಥೆಗಳ ಮೇಲೆ ಹಿಡಿತವನ್ನು ಸಾಧಿಸಿರುತ್ತಾನೆ.

ರಾಜಕೀಯ ಅಧಿಕಾರವು, ನಾವು ಮೇಲೆ ವಿವರಿಸಿದ ಮೂರು ಬಗೆಯವರಿಗಿಂತ ಗಣನೀಯ ಪ್ರಮಾಣದಲ್ಲಿ ಭಿನ್ನವಾದ ಬಗೆಯ ವ್ಯಕ್ತಿಗಳಲ್ಲಿ ಸೇರಿರುತ್ತದೆ. ಒಬ್ಬನು ರಾಜಕಾರಣಿಯಾಗಿ ಯಶಸ್ವಿಯಾಗಬೇಕಾದರೆ ತನ್ನ ವ್ಯವಸ್ಥೆಯ ವಿಶ್ವಾಸವನ್ನು ಅವನು ಗಳಿಸಬೇಕು, ಬಹುಸಂಖ್ಯಾತ ಮತದಾರರಲ್ಲಿ ಒಂದು ಮಟ್ಟದ ಉತ್ಸುಕತೆಯನ್ನು ಬಡಿದೆಬ್ಬಿಸಬೇಕು. ಆದರೆ ಅಧಿಕಾರಗಳಿಕೆಗಿರುವ ಈ ಎರಡು ಮಾರ್ಗಗಳು ಎಲ್ಲ ಸಂದರ್ಭದಲ್ಲಿಯೂ ಒಂದೇ ಬಗೆಯವಲ್ಲ, ಕೆಲವರಲ್ಲಿ ಇವೆರಡರಲ್ಲಿ ಯಾವುದಾದರೂ ಒಂದು ಮಾತ್ರವೇ ಇರಬಹುದು. ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ

ಅಭ್ಯರ್ಥಿಗಳಲ್ಲಿ ಸಾರ್ವಜನಿಕರ ಕಲ್ಪನೆ ಗರಿಗೆದರುವಂತೆ ಮಾಡುವ ಶಕ್ತಿಯಿಲ್ಲದಿರುವುದು ಅಪರೂಪವೇನಲ್ಲ, ಆದರೆ ತಮ್ಮ ಪಕ್ಷವನ್ನು ನಿಭಾಯಿಸುವವರ ಕೃಪೆಯನ್ನು ಹೇಗೋ ಸಂಪಾದಿಸುವ ಜಾಣ್ಮೆ ಅವರಲ್ಲಿರುತ್ತದೆ. ಇಂಥವರು ನಿಷ್ಪ್ರಯೋಜಕರಾಗಿರುವುದು ನಿಯಮದಂತೆ ಖಚಿತವಾದರೂ, ಪಕ್ಷವರಿಷ್ಠರು ಅವರ ಸೋಲನ್ನು ಊಹಿಸಿಕೊಳ್ಳಲಾರರು. ಆದರೆ ಕೆಲವೊಮ್ಮೆ ಆಕರ್ಷಣಶಕ್ತಿಯಿಲ್ಲದವರೂ ಚುನಾವಣೆಯಲ್ಲಿ ಗೆಲ್ಲುವಂತೆ ಮಾಡುವ ಚಾಕಚಕ್ಯತೆ ಇಂಥ ವ್ಯವಸ್ಥೆಗಳಿಗಿರುತ್ತದೆ. ಇಂಥ ಸನ್ನಿವೇಶಗಳಲ್ಲಿ ಚುನಾವಣೆಯ ನಂತರ ಅಂಥವರ ಮೇಲೆ ಪಕ್ಷದ್ದೇ ಮೇಲುಗೈಯಾಗುತ್ತದೆ, ಹಾಗಾಗಿ ಅಭ್ಯರ್ಥಿಗೆ ವಾಸ್ತವವಾಗಿ ಯಾವುದೇ ಅಧಿಕಾರ ಇರುವುದಿಲ್ಲ. ಕೆಲವೊಮ್ಮೆ, ಇದಕ್ಕೆ ವಿರುದ್ಧವಾಗಿ, ವ್ಯಕ್ತಿಯು ತನ್ನದೇ ವ್ಯವಸ್ಥೆಯೊಂದನ್ನು ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಮೂರನೆಯ ನೆಪೋಲಿಯನ್, ಮುಸೋಲಿನಿ ಮತ್ತು ಹಿಟ್ಲರ್‌ಗಳು ಇಂಥ ರೀತಿಗೆ ನಿದರ್ಶನಗಳು. ಈಗಾಗಲೇ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನೇ ತನ್ನ ಅನುಕೂಲಕ್ಕೆ ಬಳಸಿಕೊಂಡರೂ, ನಿಜವಾಗಿಯೂ ಯಶಸ್ವಿಯಾದ ರಾಜಕಾರಣಿಯು ಪ್ರಬಲನಾಗಿ ತನ್ನಿಚ್ಛೆಗೆ ಅನುಗುಣವಾಗಿ ಅದು ನಡೆಯುವಂತೆ ಮಾಡಿಕೊಳ್ಳುತ್ತಾನೆ.

ಪ್ರಜಾಪ್ರಭುತ್ವದಲ್ಲಿ ಒಬ್ಬ ರಾಜಕಾರಣಿಯು ಯಶಸ್ವಿಯಾಗಬೇಕಾದರೆ ಹೊಂದಿರಬೇಕಾದ ಗುಣಗಳು ಕಾಲದ ಸ್ವರೂಪಕ್ಕನುಗುಣವಾಗಿ ಬದಲಾಗುತ್ತವೆ; ಶಾಂತಿಕಾಲದಲ್ಲಿರುವುದಕ್ಕಿಂತ ಯುದ್ಧ ಅಥವಾ ಕ್ರಾಂತಿ ನಡೆಯುವ ಕಾಲದಲ್ಲಿ ಅವು ಭಿನ್ನ. ಶಾಂತಿಕಾಲದಲ್ಲಿ ಅಚಲತೆ ಮತ್ತು ಒಳ್ಳೆಯ ನಿರ್ಧಾರಕ ಶಕ್ತಿಗಳು ತನಗಿವೆಯೆಂಬ ಭಾವನೆಯನ್ನುಂಟುಮಾಡುವ ಮೂಲಕ ಅವನು ಯಶಸ್ವಿಯಾಗಬಹುದು, ಆದರೆ ಉದ್ವಿಗ್ನ ಸನ್ನಿವೇಶದಲ್ಲಾದರೆ ಮತ್ತೇನೋ ಆವಶ್ಯಕವಾಗಬಹುದು. ಅಂಥ ಸನ್ನಿವೇಶಗಳಲ್ಲಿ, ಅವನು ಪರಿಣಾಮಕಾರಿ ಭಾಷಣಕಾರನೂ ಆಗಿರಬೇಕಾಗುತ್ತದೆ, ಅಂದರೆ ಸಾಂಪ್ರದಾಯಿಕ ಅರ್ಥದಲ್ಲಿ ವಾಚಾಳಿಯಾಗಿರಬೇಕು ಎಂಬುದು ಇದರರ್ಥವಲ್ಲ. ಏಕೆಂದರೆ ರಾಬ್‌ಸ್ಪಿಯರ್ ಅಥವಾ ಲೆನಿನ್ ವಾಕ್ಪಟುಗಳೇನಾಗಿರಲಿಲ್ಲ, ಆದರೆ ಅವರು ದೃಢ ಮನಸ್ಸಿನವರೂ ಆವೇಶಪರರೂ ಧೈರ್ಯಶಾಲಿಗಳೂ ಆಗಿದ್ದರು. ಆವೇಶವು ಅನುದ್ವಿಗ್ನವೂ ನಿಯಂತ್ರಿತವೂ ಆಗಿರಬಹುದು, ಆದರೆ ಅದು ಜನರನ್ನು ಉದ್ವಿಗ್ನಗೊಳಿಸಬೇಕು ಮತ್ತು ಅವರನ್ನು ತಾಕಬೇಕು. ಉದ್ವಿಗ್ನ ಕಾಲಗಳಲ್ಲಿ ರಾಜಕಾರಣಿಗೆ ತರ್ಕಶಕ್ತಿಯೇನೂ ಬೇಕಾಗುವುದಿಲ್ಲ, ವೈಯಕ್ತಿಕವಲ್ಲದ ವಸ್ತುಸ್ಥಿತಿಗಳ ಬಗ್ಗೆ ತಿಳಿವಳಿಕೆಯಿರಬೇಕಾದುದಿಲ್ಲ, ಅಥವಾ

ವಿವೇಕದ ಲವಲೇಶವೂ ಇರಬೇಕಾದುದಿಲ್ಲ. ಆವಶ್ಯಕವಾದ ಗುಣವೆಂದರೆ, ತನ್ನೆದುರಿಗಿರುವ ಜನಸಂದಣಿಯು ಏನು ಬಯಸುತ್ತದೆಯೋ ಅದನ್ನು ಸಾಧಿಸಬಹುದೆಂದು ಮನವರಿಕೆ ಮಾಡಿಸುವವನಾಗಿರಬೇಕು, ತನ್ನ ದೃಢ ನಿರ್ಧಾರದಿಂದ ಅದನ್ನು ಸಾಧಿಸಬಲ್ಲೆನೆಂದು ನಿರೂಪಿಸುವವನಾಗಿರಬೇಕು.

ಅತ್ಯಂತ ಯಶಸ್ವೀ ಪ್ರಜಾಪ್ರಭುತ್ವವಾದೀ ನಾಯಕರೆಂದರೆ ಪ್ರಜಾಪ್ರಭುತ್ವವನ್ನು ಕಿತ್ತುಹಾಕಿ ಸರ್ವಾಧಿಕಾರವನ್ನು ಯಶಸ್ವಿಯಾಗಿ ಸ್ಥಾಪಿಸಬಲ್ಲವರು. ಆದರೆ ಇದು ಕೆಲವೇ ಸಂದರ್ಭಗಳಲ್ಲಿ ಮಾತ್ರ ಕಾರ್ಯಸಾಧ್ಯ; ಹತ್ತೊಂಬತ್ತನೆ ಶತಮಾನದಲ್ಲಿ ಅದನ್ನು ಇಂಗ್ಲಂಡ್‌ನಲ್ಲಿ ಸಾಧಿಸಲು ಸಾಧ್ಯವಾಗಲಿಲ್ಲ. ಅದು ಸಾಧ್ಯವಾದಾಗ ಮಾತ್ರ, ಪ್ರಜಾಪ್ರಭುತ್ವವಾದೀ ರಾಜಕಾರಣಿಗಳಲ್ಲಿ ಸಾಧಾರಣವಾಗಿ ಕಾಣುವ ಗುಣಗಳೇ, ಕನಿಷ್ಠ ಪಕ್ಷ ಉದ್ವಿಗ್ನ ಸನ್ನಿವೇಶಗಳಲ್ಲಿ, ಅತ್ಯಧಿಕ ಪ್ರಮಾಣದಲ್ಲಿರಬೇಕಾದುದು ಆವಶ್ಯಕ. ಲೆನಿನ್, ಮುಸೋಲಿನಿ ಮತ್ತು ಹಿಟ್ಲರ್ ಅವರ ಯಶಸ್ಸಿಗೆ ಕಾರಣವಾದುದು ಪ್ರಜಾಪ್ರಭುತ್ವವೇ.

ಒಮ್ಮೆ ಪ್ರಜಾಪ್ರಭುತ್ವವು ಸ್ಥಾಪಿತವಾದರೆ, ಒಬ್ಬ ಸತ್ತ ಸರ್ವಾಧಿಕಾರಿಯ ನಂತರ ಬರುವ ನಾಯಕನ ಗುಣಗಳು, ಆ ಸರ್ವಾಧಿಕಾರಿಯು ಅಧಿಕಾರಕ್ಕೆ ಬರಲು ಕಾರಣವಾದ ಗುಣಗಳಿಗಿಂತ ತೀರ ಭಿನ್ನವಾಗಿರುತ್ತವೆ. ಆನುವಂಶಿಕತೆಯನ್ನು ಧಿಕ್ಕರಿಸಿರುವಾಗ ತುಂಬ ಪರಿಣಾಮಕಾರಿ ಮಾರ್ಗಗಳೆಂದರೆ ಸೂತ್ರಧಾರಿ ಅಧಿಕಾರ, ಒಳಸಂಚುಮಾಡುವುದು ಹಾಗೂ ಒಡ್ಡೋಲಗದ ಸಹಾಯ ಇವುಗಳು. ಈ ಕಾರಣದಿಂದಲೇ ಸರ್ವಾಧಿಕಾರದ ಮೂಲಪುರುಷನು ಸತ್ತ ನಂತರ ಅದರ ಸ್ವರೂಪವು ಗಣನೀಯವಾಗಿ ಬದಲಾಗುತ್ತದೆ. ಒಬ್ಬ ಸರ್ವಾಧಿಕಾರಿಯ ನಂತರ ಬರುವ ನಾಯಕನ ಗುಣಗಳು ಸರ್ವಾಧಿಕಾರವನ್ನು ಸ್ಥಾಪಿಸಿದವನ ಗುಣಗಳಿಗಿಂತ ಸಾಮಾನ್ಯವಾಗಿ ಕಡಿಮೆ ಪ್ರಭಾವಕಾರಿಯಾದುದರಿಂದ, ಅಲ್ಲಿ ಅಸ್ಥಿರತೆ, ಒಳದಂಗೆ ಮತ್ತು, ಅಂತಿಮವಾಗಿ, ಬೇರೊಂದು ಬಗೆಯ ಪ್ರಭುತ್ವ ಸ್ಥಾಪನೆ ಇವುಗಳು ಸಂಭವನೀಯವಾಗಿರುತ್ತವೆ. ಆದರೆ ಹೀಗಾಗುವುದನ್ನು, ಆಧುನಿಕ ಪ್ರಚಾರ ಸಾಧನಗಳ ಸಹಾಯದಿಂದ, ಸ್ವತಃ ಜನಪ್ರಿಯ ಗುಣಗಳನ್ನು ಪ್ರದರ್ಶಿಸದೆಯೇ ಸರ್ಕಾರದ ವರಿಷ್ಠನನ್ನು ಜನಪ್ರಿಯಗೊಳಿಸುವುದರ ಮೂಲಕ, ಯಶಸ್ವಿಯಾಗಿ ತಡೆಗಟ್ಟಲಾಗುತ್ತಂದು ನಿರೀಕ್ಷಿಸಬಹುದು.

ನಾವಿನ್ನೂ ಪರಿಗಣಿಸಿರದ ವ್ಯಕ್ತಿ ಅಧಿಕಾರದ ಇನ್ನೊಂದು ಬಗೆಯೆಂದರೆ, ತೆರೆಮರೆಯ ಅಧಿಕಾರ: ಆಸ್ಥಾನಿಕರ, ಒಳಸಂಚುಗಾರರ,

ಗುಪ್ತಚರರ ಮತ್ತು ಸೂತ್ರಧಾರರ ಅಧಿಕಾರ. ನಿಯಂತ್ರಕನು ಗಣನೀಯ ಅಧಿಕಾರವನ್ನು ಹೊಂದಿರುವ ಯಾವುದೇ ಸಂಘಟನೆಯಲ್ಲಿ ತಮ್ಮದೇ ವೈಯಕ್ತಿಕ ಮಾರ್ಗಗಳಿಂದ ನಾಯಕನ ಮೇಲೆ ಪ್ರಭಾವ ಬೀರುವ ಕಡಿಮೆ ಪ್ರಾಮುಖ್ಯದ ಅನೇಕ ವ್ಯಕ್ತಿಗಳಿರುತ್ತಾರೆ. ಸೂತ್ರಧಾರಿಗಳು ಹಾಗೂ ಪಕ್ಷದ ವರಿಷ್ಠರು ಈ ವರ್ಗಕ್ಕೆ ಸೇರುತ್ತಾರೆ, ಆದರೆ ಅವರ ಕಾರ್ಯತಂತ್ರಗಳು ಬೇರೆಯೇ ಇರಬಹುದು. ಮಾತಿಲ್ಲದೆ ತಮ್ಮ ಗೆಳೆಯರನ್ನು ಅವರು ಮುಖ್ಯ ಜಾಗಗಳಿಗೆ ನೇಮಿಸುತ್ತಾರೆ, ಹೀಗಾಗಿ ಆವಶ್ಯಕ ಸಂದರ್ಭಗಳಲ್ಲೆಲ್ಲ ಸಂಘಟನೆಯನ್ನು ನಿಯಂತ್ರಿಸುತ್ತಾರೆ. ಆನುವಂಶಿಕವಲ್ಲದ ಸರ್ವಾಧಿಕಾರದಲ್ಲಿ, ಅವನು ಸತ್ತನಂತರ ಅವನ ಜಾಗವನ್ನು ಆಕ್ರಮಿಸಿಕೊಳ್ಳುವ ಬಯಕೆಯನ್ನು ಅವರು ಹೊಂದಿರಬಹುದು; ಆದರೆ ಅವರು ಮುಂದಿನ ಸಾಲಿನಲ್ಲಿರಲು ಸಾಮಾನ್ಯವಾಗಿ ಬಯಸುವುದಿಲ್ಲ. ಅವರಿಗೆ ವೈಭವಕ್ಕಿಂತ ಅಧಿಕಾರ ಮುಖ್ಯ; ಕೆಲವೊಮ್ಮೆ ಅವರು ಸಾಮಾಜಿಕವಾಗಿ ಪುಕ್ಕಲಸ್ವಭಾವದವರೂ ಆಗಿರುತ್ತಾರೆ. ಪ್ರಾಚೀನ ರಾಜಪ್ರಭುತ್ವಗಳಲ್ಲಿನ ಖೋಜಾಗಳಂತೆ, ಅಥವಾ ಉಳಿದೆಡೆಗಳಲ್ಲಿನ ರಾಜನ ಬಂಗಾರದವಳಂತೆ, ಅವರನ್ನು ಒಂದಲ್ಲ ಒಂದು ಕಾರಣಕ್ಕಾಗಿ ನೇರ ನಾಯಕತ್ವದಿಂದ ದೂರವಿರಿಸಲಾಗುತ್ತದೆ. ಅಧಿಕಾರವು ಆನುವಂಶಿಕ ವಾಗಿರುವೆಡೆಗಳಲ್ಲಿ ಅಂಥ ಪ್ರಭಾವವು ಗರಿಷ್ಠ ಪ್ರಮಾಣದ್ದಾಗಿದ್ದು, ವೈಯಕ್ತಿಕ ಕೌಶಲ ಮತ್ತು ಸಾಮರ್ಥ್ಯಗಳಿಂದ ಪಡೆದ ಅಧಿಕಾರದಲ್ಲಿ ಕನಿಷ್ಠ ಮಟ್ಟದ್ದಾಗಿರುತ್ತದೆ. ವಿವಿಧ ಬಗೆಯ ಆಧುನಿಕ ಸರ್ಕಾರಗಳಲ್ಲಿಯೂ, ಸಾಮಾನ್ಯರು ನಿಗೂಢವೆಂದು ಭಾವಿಸುವ ಇಲಾಖೆಗಳಲ್ಲಿ, ಅಂಥವರು ಸಾಕಷ್ಟು ಮೇಲುಗೈಯನ್ನು ಹೊಂದಿರುತ್ತಾರೆ. ಈಗ ಅತ್ಯಂತ ಪ್ರಮುಖವಾದವುಗಳೆಂದರೆ ಹಣಕಾಸು ಮತ್ತು ವಿದೇಶಾಂಗ ವ್ಯವಹಾರ ಖಾತೆಗಳು. ಎರಡನೇ ಕೈಸರ್ ವಿಲಿಯಮ್‌ನ ಕಾಲದಲ್ಲಿ, ಬರೋನ್ ಹೋಲ್ಸ್ಟೈನ್ (ಜರ್ಮನ್ ವಿದೇಶಾಂಗ ಇಲಾಖೆಯ ಶಾಶ್ವತ ಮುಖ್ಯಸ್ಥ)ನಿಗೆ ಅಪರಿಮಿತ ಅಧಿಕಾರವಿರುತ್ತಿತ್ತು, ಆದರೆ ಅವನೆಂದೂ ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಈಗಿನ ಬ್ರಿಟಿಷ್ ವಿದೇಶಾಂಗ ಕಚೇರಿಯಲ್ಲಿನ ಶಾಶ್ವತ ನೌಕರರ ಅಧಿಕಾರ ಎಷ್ಟು ಎಂಬುದು ನಮಗೆ ತಿಳಿಯುವುದು ಸಾಧ್ಯವಿಲ್ಲ; ಈ ಸಂಬಂಧದಲ್ಲಿ ಆವಶ್ಯಕವಾದ ದಾಖಲೆಗಳು ನಮ್ಮ ಮಕ್ಕಳಿಗೆ ದೊರಕಬಹುದು. ತೆರೆಮರೆಯ ಅಧಿಕಾರ ಹಿಡಿಯಲು ಬೇಕಾದ ಗುಣಗಳು ಇನ್ನಿತರ ಬಗೆಯ ಅಧಿಕಾರಗಳಿಗೆ ಆವಶ್ಯಕವಾದುದಕ್ಕಿಂತ ತೀರ ಭಿನ್ನವಾದವು; ಆದರೆ ಅಂಥಹವು, ಎಲ್ಲ ಸಂದರ್ಭಗಳಲ್ಲಿ ಅಲ್ಲದಿದ್ದರೂ, ಅನಪೇಕ್ಷಣೀಯವಾಗಿರುವುದು ಸಾಮಾನ್ಯ. ಹೀಗಾಗಿ, ಆಸ್ಥಾನಿಕ ಅಥವಾ ಸೂತ್ರಧಾರನ ಕೈಯಲ್ಲಿ ಹೆಚ್ಚು ಅಧಿಕಾರವನ್ನು

ಒತ್ತೆಯಿಡುವ ವ್ಯವಸ್ಥೆಯು ಎಲ್ಲರ ಒಳಿತನ್ನು ಸಾಧಿಸುವುದು ದೂರದ ಮಾತು.

–೦–೦–೦–೦–

ಅಧ್ಯಾಯ ೪

ಪುರೋಹಿತಾಧಿಕಾರ

ಈ ಅಧ್ಯಾಯ ಹಾಗೂ ಮುಂದಿನದರಲ್ಲಿ, ಹಿಂದಿನ ಕಾಲದಲ್ಲಿ ಅತೀವ ಪ್ರಾಮುಖ್ಯ ಪಡೆದಿದ್ದ ಎರಡು ಬಗೆಯ ಸಾಂಪ್ರದಾಯಿಕ ಅಧಿಕಾರಗಳ ಕುರಿತು ಚರ್ಚಿಸುತ್ತೇನೆ; ಅವುಗಳೆಂದರೆ, ಪುರೋಹಿತಾಧಿಕಾರ ಮತ್ತು ರಾಜಾಧಿಕಾರ. ಇವೆರಡಕ್ಕೂ ಈಗ ಒಂದು ರೀತಿಯ ಗ್ರಹಣ ಹಿಡಿದಿದೆ ಎನ್ನಬಹುದು. ಆದರೆ ಇವು ಮತ್ತೆ ಪುನರುತ್ಥಾನವಾಗುವುದೇ ಇಲ್ಲ ಎಂದು ತೀರ್ಮಾನಿಸುವುದು ಅವಸರದ್ದಾದರೂ, ತಾತ್ಕಾಲಿಕವೋ ಶಾಶ್ವತವೋ ಆದ ಅದರ ಅವನತಿಯು ಆ ಎರಡು ಸಂಸ್ಥೆಗಳನ್ನು ಪೂರ್ಣವಾಗಿ ಅಧ್ಯಯನ ಮಾಡುವುದನ್ನು ಸಾಧ್ಯವಾಗಿಸುತ್ತದೆ.; ಏಕೆಂದರೆ ತೀವ್ರತರದ ಅಧಿಕಾರಗಳು ಇನ್ನೂ ಅಸ್ತಿತ್ವದಲ್ಲಿರುವ ಕಡೆಗಳಲ್ಲಿ ಹಾಗೆ ಮಾಡಲಾಗುವುದಿಲ್ಲ.

ಪುರೋಹಿತರು ಹಾಗೂ ರಾಜರುಗಳು ತಮ್ಮ ಪ್ರಾಥಮಿಕ ಸ್ವರೂಪದಲ್ಲಿ ಮಾನವಶಾಸ್ತ್ರಜ್ಞರಿಗೆ ತಿಳಿದಿರುವ ಆದಿವಾಸಿ ಜನಾಂಗಗಳಲ್ಲಿ ಇನ್ನೂ ಅಸ್ತಿತ್ವದಲ್ಲಿದ್ದಾರೆ. ಕೆಲವು ಸಂದರ್ಭಗಳಲ್ಲಿ ಈ ಇಬ್ಬರ ಕಾರ್ಯಗಳೂ ಒಬ್ಬನಲ್ಲಿಯೇ ಮೇಳೈಸಿರುತ್ತವೆ. ಇದು ಇರುವುದು ’ನಾಗರಿಕ ಸಮಾಜಗಳಲ್ಲಿ ಮಾತ್ರವಲ್ಲ, ಅತ್ಯಂತ ನಾಗರಿಕ ಸಮಾಜಗಳಲ್ಲಿಯೂ. ಆಗಸ್ಟಸ್ ರೋಮ್‌ನ ಪರಮಗುರುವಾಗಿದ್ದವನು, ದೇವರೆಂದು ಆ ಪ್ರದೇಶಗಳಲ್ಲಿ ಪರಿಗಣಿತನಾಗಿದ್ದವನು. ಕಲೀಫನು ಮಹಮದೀಯರ ಧಾರ್ಮಿಕ ಗುರುವಲ್ಲದೆ ಸರ್ಕಾರವೂ ಆಗಿದ್ದ. ಶಿಂಟೋ ಧರ್ಮದಲ್ಲಿ ಇಂದಿಗೂ ಮಿಕಾಡೊ ಇದೇ ಬಗೆಯ ಸ್ಥಾನವನ್ನು ಹೊಂದಿದ್ದಾನೆ. ತಮ್ಮ ಪಾವಿತ್ರ್ಯದಿಂದಾಗಿ ರಾಜರು ಧರ್ಮನಿರಪೇಕ್ಷಕ ಕಾರ್ಯಗಳನ್ನು ಕಳೆದುಕೊಳ್ಳುವುದು ಸಾಮಾನ್ಯ, ಇದರಿಂದಾಗಿ ಅವರು ಪುರೋಹಿತರೂ ಆಗಿಬಿಡುತ್ತಾರೆ. ಆದರೂ, ಬಹುತೇಕ ಸ್ಥಳ ಹಾಗೂ ಕಾಲಗಳಲ್ಲಿ, ಪುರೋಹಿತ ಹಾಗೂ ರಾಜನ ನಡುವಣ ವ್ಯತ್ಯಾಸವು ಸ್ಪಷ್ಟವೂ ಖಚಿತವೂ ಆಗಿರುವುದು ಕಂಡುಬರುತ್ತದೆ.

ಅತ್ಯಂತ ಪ್ರಾಚೀನ ರೂಪದ ಪುರೋಹಿತನೆಂದರೆ ವೈದ್ಯವ್ಯಕ್ತಿ; ಅವನದು ಇಬ್ಬಗೆಯ ಅಧಿಕಾರ: ಅದನ್ನು ಧಾರ್ಮಿಕತೆ ಮತ್ತು ಮಾಟ ಎಂದು ಮಾನವಶಾಸ್ತ್ರಜ್ಞರು ವರ್ಗೀಕರಿಸುತ್ತಾರೆ. ಧಾರ್ಮಿಕ ಅಧಿಕಾರವು

ಅತಿಮಾನುಷ ಶಕ್ತಿಗಳ ಸಹಾಯವನ್ನು ಅವಲಂಬಿಸಿರುತ್ತದೆ, ಆದರೆ ಮಾಟವನ್ನು ಸಹಜವೆಂದೇ ಭಾವಿಸಲಾಗುತ್ತದೆ. ನಮ್ಮ ಉದ್ದೇಶಗಳಿಗೆ ಈ ವಿಭಜನೆ ಮುಖ್ಯವಲ್ಲ. ಗಮನಿಸಬೇಕಾದ ಅಂಶವೆಂದರೆ, ವೈದ್ಯವ್ಯಕ್ತಿಯು, ಧಾರ್ಮಿಕ ಬಲದಿಂದಾಗಲೀ ಮಾಟದಿಂದಾಗಲೀ, ಜನರಿಗೆ ಒಳಿತನ್ನೂ ಕೆಡುಕನ್ನೂ ಉಂಟುಮಾಡಬಲ್ಲ ಎಂಬ ಮತ್ತು ಆ ಶಕ್ತಿಯನ್ನು ಇತರರು ಹೊಂದಲಾರರು ಎಂಬ ನಂಬಿಕೆಯಿರುವುದನ್ನು. ಸಾಮಾನ್ಯರೂ ಕೊಂಚ ಮಟ್ಟಿಗಿನ ಮಾಟಶಕ್ತಿಯನ್ನು ಹೊಂದಬಹುದೆಂದು ಭಾವಿಸಲಾದರೂ, ವೈದ್ಯವ್ಯಕ್ತಿಯ ಮಾಟ ಬಹಳ ಗಾಢವಾದುದು ಎಂಬ ಭಾವನೆಯಿದೆ. ಯಾವನಾದರೊಬ್ಬ ಕಾಯಿಲೆ ಬಿದ್ದಾಗಲೋ ಆಕಸ್ಮಿಕಕ್ಕೆ ಒಳಗಾದಾಗಲೋ ಅದಕ್ಕೆ ಕಾರಣ ವಿರೋಧಿಯ ಮಾಟವೇ ಕಾರಣ ಎಂಬುದು ನಂಬಿಕೆ; ಹಾಗೆಯೇ ವೈದ್ಯವ್ಯಕ್ತಿಯು ಆ ಮಾಟದ ಕೆಡುಕು ಪರಿಣಾಮವನ್ನು ನಿವಾರಿಸಬಲ್ಲ ಎಂಬುದು. ಹೀಗೆ ಡ್ಯೂಕ್ ಆಫ್ ಯಾರ್ಕ್ ದ್ವೀಪದಲ್ಲಿ ವೈದ್ಯವ್ಯಕ್ತಿಯು ರೋಗಿಯ ಕಾಯಿಲೆಗೆ ಕಾರಣವನ್ನು ಪತ್ತೆಮಾಡಿ ಅದರ ನಿವಾರಣೆಗಾಗಿ ಸುಣ್ಣವನ್ನು ಚಿಟಿಕೆಯಲ್ಲಿ ಹಿಡಿದು ಮಂತ್ರವನ್ನು ಉಸುರುತ್ತಾನೆ:

"ಭೂತೋಚ್ಚಾಟನೆಯ ಸುಣ್ಣವೇ, ನಾನು ಆಕ್ಟೋಪಸ್‌ನನ್ನು ನಿರ್ಬಂಧಿಸುತ್ತೇನೆ; ನಾನು ***ತಿಯೋ*** *ಸರ್ಪವನ್ನು ನಿರ್ಬಂಧಿಸುತ್ತೇನೆ; ನಾನು* ***ಇಂಜಿಯೆಟ್*** *(ರಹಸ್ಯ ಸಮುದಾಯ) ಅನ್ನು ನಿರ್ಬಂಧಿಸುತ್ತೇನೆ; ನಾನು ಏಡಿಯನ್ನು ನಿರ್ಬಂಧಿಸುತ್ತೇನೆ; ನಾನು ನೀರುಹಾವನ್ನು ನಿರ್ಬಂಧಿಸುತ್ತೇನೆ; ನಾನು* ***ಬಾಲಿವೋ*** *ಸರ್ಪವನ್ನು ನಿರ್ಬಂಧಿಸುತ್ತೇನೆ; ನಾನು ಹೆಬ್ಬಾವನ್ನು ನಿರ್ಬಂಧಿಸುತ್ತೇನೆ; ನಾನು* ***ಕೆಯಾ*** *ನಾಯಿಯನ್ನು ನಿರ್ಬಂಧಿಸುತ್ತೇನೆ. ಭೂತೋಚ್ಚಾಟನೆಯ ಸುಣ್ಣವೇ, ನಾನು ಕೆಸರು ದ್ರಾವಣನ್ನು ನಿರ್ಬಂಧಿಸುತ್ತೇನೆ; ನಾನು* ***ಕೇಟೆ*** *ಬಳ್ಳಿಯನ್ನು ನಿರ್ಬಂಧಿಸುತ್ತೇನೆ; ನಾನು* ***ತೋ ಪಿಲಾನೊ*** *ಅನ್ನು ನಿರ್ಬಂಧಿಸುತ್ತೇನೆ; ನಾನು* ***ತೋ ವುವೂ-ತವಾರ್*** *ಅನ್ನು ನಿರ್ಬಂಧಿಸುತ್ತೇನೆ; ನಾನು* ***ತುಂಬಾಲ್*** *ಅನ್ನು ನಿರ್ಬಂಧಿಸುತ್ತೇನೆ. ಅವನ್ನೆಲ್ಲ ಸಮುದ್ರದಾಳದಲ್ಲಿ ಹುದುಗಿಸಲಾಗಿದೆ. ಆವಿಯು ಅವುಗಳನ್ನೆಲ್ಲ ದೂರದಲ್ಲಿ ತಡೆಹಿಡಿಯುತ್ತವೆ; ಕತ್ತಲು ಆವರಿಸಿ ಅವುಗಳನ್ನು ದೂರದಲ್ಲಿ ನಿಲ್ಲಿಸುತ್ತವೆ; ಅವೆಲ್ಲ ಸಮುದ್ರತಳದಲ್ಲಿ ಸೇರಿಬಿಡುತ್ತವೆ."*[೧]

---

[೧] (ಡಬ್ಲ್ಯು. ಎಚ್. ಆರ್. ರಿವರ್ಸ್: 'ಮೆಡಿಸಿನ್, ಮ್ಯಾಜಿಕ್ ಅಂಡ್ ರಿಲಿಜನ್', ಪು.೧೬).

ಈ ಸೂತ್ರವು ಸಾಮಾನ್ಯವಾಗಿ ಪರಿಣಾಮಕಾರಿಯಲ್ಲವೆಂದು ಭಾವಿಸಬಹುದು. ಅನಾಗರಿಕ ಸಮುದಾಯದವರು ನಾಗರಿಕರಿಗಿಂತ ಹೆಚ್ಚು ಪ್ರಚೋದನೆಗೊಳಗಾಗುವವರು; ಹೀಗಾಗಿ ಸಂಬಂಧಪಟ್ಟವರು ರೋಗಗಳನ್ನು ಅನೇಕವೇಳೆ ಉಂಟುಮಾಡಲೂಬಹುದು, ವಾಸಿಮಾಡಲೂಬಹುದು. ಮ್ಯಾಲೆನೀಸಿಯದ ಬಹು ಭಾಗಗಳಲ್ಲಿ ಕಾಯಿಲೆಯನ್ನು ವಾಸಿಮಾಡುವವನು ಮಾಟಗಾರನಾಗಿರುತ್ತಾನೆ ಇಲ್ಲವೇ ಪೂಜಾರಿಯಾಗಿರುತ್ತಾನೆ ಎಂದು ರಿವರ್ಸ್ ಹೇಳುತ್ತಾರೆ. ಈ ಭಾಗಗಳಲ್ಲಿ ವೈದ್ಯವ್ಯಕ್ತಿಗೂ ಇತರರಿಗೂ ಸ್ಪಷ್ಟವಾದ ವ್ಯತ್ಯಾಸವಿಲ್ಲದಿರುವುದು ಎದ್ದು ಕಾಣಿಸುವ ಅಂಶ, ಅಲ್ಲದೆ, ಅವರು ಬಳಸುವ ಕ್ರಮಗಳು ಕೆಲವು ವೇಳೆ ಯಾರು ಬೇಕಾದರೂ ಅನುಸರಿಸಬಹುದಾದವು.

"ವೈದ್ಯ ಮತ್ತು ಮಾಟ ಅಥವಾ ಧಾರ್ಮಿಕ ಮಾರ್ಗಗಳನ್ನು ಅನುಸರಿಸುವವರು ತಮ್ಮ ಕಲೆಯನ್ನು ಸಾಮಾನ್ಯವಾಗಿ ದೀಕ್ಷೆ ಅಥವಾ ಶಿಕ್ಷಣಗಳ ವಿಶೇಷ ಕ್ರಮದಿಂದ ಕಲಿತಿರುತ್ತಾರೆ; ಮ್ಯಾಲೆನೀಸಿಯದಲ್ಲಿ ಹಣಕೊಟ್ಟು ಇದನ್ನು ಪಡೆಯಬಹುದಾದ ಪದ್ಧತಿ ಮೊದಲಿನಿಂದಲೂ ಇದೆ. ವಿದ್ಯಾರ್ಥಿಯು ಗುರುವಿಗೆ ಹಣ ಸಂದಾಯಮಾಡದಿದ್ದರೆ ವೈದ್ಯ–ಮಾಟ ಅಥವಾ ವೈದ್ಯ–ಧಾರ್ಮಿಕ ಕಲೆಯ ಯಾವುದೇ ವಿಭಾಗದಲ್ಲಿನ ಸಂಪೂರ್ಣ ಶಿಕ್ಷಣವು ಕೂಡ ಅನುಪಯುಕ್ತವಾಗುತ್ತದೆ".[೧]

ಹೀಗೆ ಆರಂಭಗೊಂಡ ರೀತಿಯು ಖಚಿತವಾದ ಒಂದು ಪೂಜಾರಿ ಕುಲವನ್ನು ರೂಪಿಸಿರುತ್ತದೆ, ಇದರಿಂದಾಗಿ ಅದಕ್ಕೆ ಹೆಚ್ಚಿನ ಮಾಟ ಮತ್ತು ಧಾರ್ಮಿಕ ಸಾಮರ್ಥ್ಯ ಮತ್ತು ಅದರಿಂದ ಸಮುದಾಯದ ಮೇಲೆ ಹೆಚ್ಚಿನ ಹಿಡಿತ ದೊರೆಯುತ್ತದೆ. ಸಂಘರ್ಷದ ಸನ್ನಿವೇಶಗಳಲ್ಲಿ, ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಲ್ಲಿ, ಅವರ ಅಧಿಕಾರವೇ ರಾಜಾಧಿಕಾರಕ್ಕಿಂತ ಮಿಗಿಲೆಂಬುದು ಸಾಬೀತಾಗಿದೆ. ತಮ್ಮ ರಾಜ ಪೌರೋಹಿತ್ಯವಿರೋಧಿ ಧೋರಣೆಯನ್ನು ತಳೆದನೆಂಬ ಕಾರಣಕ್ಕಾಗಿ ಅವರು 'ನಾಸ್ತಿಕ'ನಾದ ಫರಾಹ್ ಇಖ್ನಟಾನ್ (ಅಥವಾ ಅಖ್ನಟಾನ್) ಅನ್ನು ಸೋಲಿಸಿ, ಸೈರಸ್ ಬ್ಯಾಬಿಲೋನ್ ಅನ್ನು ಗೆಲ್ಲಲು ದೇಶದ್ರೋಹವೆನಿಸಿದರೂ ಸಹಾಯಮಾಡಿದರು.

---

[೧] (ಅದೇ: ಪು.೪೪).

ಗ್ರೀಸ್ ಮತ್ತು ರೋಮ್‌ಗಳು ಪ್ರಾಚೀನತೆಯ ದೃಷ್ಟಿಯಿಂದ ತುಂಬ ವಿಶಿಷ್ಟವಾದವು; ಏಕೆಂದರೆ ಪುರೋಹಿತಶಾಹಿಯಿಂದ ಅವು ಸಂಪೂರ್ಣ ಮುಕ್ತವಾಗಿದ್ದವು. ಗ್ರೀಸ್‌ನಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ಅಧಿಕಾರವು ಭವಿಷ್ಯವಾಣಿ (ಒರಾಕಲ್)ಗಳಿಗೆ ಸೀಮಿತವಾಗಿತ್ತು; ಅದರಲ್ಲೂ ಡೆಲ್ಫಿಯಲ್ಲಿ, ಅಪಾಲೋ ಮೈಮೇಲೆ ಬಂದಾಗ ಅರ್ಚಕಿಯು (ಪೈಥಾನೆಸ್) ಉತ್ತರಗಳನ್ನು ನೀಡುತ್ತಾಳೆ ಎಂಬ ನಂಬಿಕೆಯಿತ್ತು. ಆದರೆ ಈ ಭವಿಷ್ಯವಾಣಿಯನ್ನು ಲಂಚವಿತ್ತು ಬದಲಾಯಿಸಬಹುದಾಗಿತ್ತೆಂಬುದು ಹೆರೋಡೊಟಸ್‌ನ ಕಾಲಕ್ಕಾಗಲೇ ಬಹಿರಂಗವಾಗಿತ್ತು. ಅಲ್ಕಮೊನ್ಯೆಡಿಯನ್ನು ಪೆಸಿಸ್ಟ್ರಾಟಸ್ (ಸತ್ತದ್ದು ಕ್ರಿಪೂ ೫೨೭) ದೇಶಭ್ರಷ್ಟಗೊಳಿಸಿದಾಗ ಅಥೆನ್ಸ್‌ನ ಒಂದು ಪ್ರಮುಖ ಕುಟುಂಬದವರು ಲಂಚವಿತ್ತು ಅವನ ಮಕ್ಕಳ ವಿರುದ್ಧ ಡೆಲ್ಫಿಯ ಭವಿಷ್ಯವಾಣಿಯನ್ನು ನುಡಿಸಿದರು ಎಂದು ಹೆರೋಡೊಟಸ್ ಹಾಗೂ ಅರಿಸ್ಟಾಟಲ್‌ರು ನಿರೂಪಿಸುತ್ತಾರೆ. ಹೆರೋಡಟಸ್ ಹೇಳುವುದು ಸ್ವಾರಸ್ಯಕರವಾಗಿದೆ: "ಅಥೆನಿಯನ್ನರನ್ನು ನಂಬಬಹುದಾದರೆ, ಸ್ಪಾರ್ಟನ್ನರಲ್ಲಿ ಯಾರಾದರೂ, ತಮ್ಮ ಖಾಸಗಿ ವಿಷಯಗಳ ಬಗ್ಗೆಯೋ ಅಥವಾ ದೇಶದ ವಿಷಯದ ಬಗ್ಗೆಯೋ, ಭವಿಷ್ಯವಾಣಿಯ ಸಲಹೆ ಪಡೆಯಲು ಬಂದಾಗ ಅವರು ಅಥೆನ್ಸ್ ಅನ್ನು (ಪೆಸಿಸ್ಟ್ರಟೈಡಿಯ ದೌರ್ಜನ್ಯದಿಂದ) ಮುಕ್ತಗೊಳಿಸಬೇಕೆಂದು ಸಲಹೆ ನೀಡುವಂತೆ (ಅಲ್ಕ್‌ಮೊನ್ಯೆಡಿ ಕುಟುಂಬವು) ಲಂಚವಿತ್ತು, ಅರ್ಚಕಿಯನ್ನು ಮನವೊಲಿಸಿಕೊಂಡಿತಂತೆ. ಹೀಗಾಗಿ, ತಾವು ಹೋದಾಗಲೆಲ್ಲ ಈ ಉತ್ತರವೊಂದೇ ಕೇಳಿ ಬಂದಾಗ ಲೆಸಿಡೀಮೋನಿಯನ್ನರು, ಕೊನೆಗೆ, ತಮಗೆ ಅತ್ಯಂತ ಸನಿಹದ ಸ್ನೇಹಿತರಾಗಿದ್ದಾಗ್ಯೂ ಪೆಸಿಸ್ಟ್ರಟೈಡಿಯನ್ನು ಓಡಿಸಲು ಆಜ್ಞೆಯಿತ್ತು ತನ್ನ ನಾಗರಿಕರಲ್ಲಿ ತುಂಬ ಪ್ರಮುಖನಾದ ಆಸ್ಟರ್‌ನ ಮಗ ಆಂಕಿಮೋಲಿಯಸ್‌ನ ನಾಯಕತ್ವದಲ್ಲಿ ಸೇನೆಯೊಂದನ್ನು ಅಥೆನ್ಸ್‌ನ ವಿರುದ್ಧ ಕಳಿಸಿಕೊಟ್ಟರಂತೆ. ಏಕೆಂದರೆ ಅವರಿಗೆ ಮನುಷ್ಯರ ವಿಚಾರಗಳಿಗಿಂತ ದೇವತೆಗಳ ವಿಚಾರದಲ್ಲಿ ಹೆಚ್ಚಿನ ಗೌರವ."[೧] ಆಂಖಿಮೋಲಿಯಸ್ ಆಗ ಸೋತರೂ ಮುಂದಿನ ಅವನ ದೊಡ್ಡ ದಾಳಿಯು ಯಶಸ್ವಿಯಾಯಿತು, ಅಲ್ಕಮೊನ್ಯೆಡಿ ಮತ್ತಿತರ ದೇಶಭ್ರಷ್ಟರು ಅಧಿಕಾರವನ್ನು ಮರಳಿ ಪಡೆದರು, ಮತ್ತೆ ಅಥೆನ್ಸ್ 'ಸ್ವಾತಂತ್ರ್ಯ'ವನ್ನು ಗಳಿಸಿತು.

---

[೧] (ಭಾಗ ೫, ಅಧ್ಯಾಯ ೬೩; ರಾಲಿನ್‌ಸನ್ ಅವರ ಅನುವಾದ)

ಈ ನಿರೂಪಣೆಯಲ್ಲಿ ಅನೇಕ ಕೌತುಕದ ಅಂಶಗಳು ಸೇರಿವೆ. ಹೆರೋಡೊಟಸ್ ಒಬ್ಬ ಭಾವುಕ ಜೀವಿ, ಅವನಲ್ಲಿ ಯಾವುದೇ ಸಿನಿಕತನವಿರಲಿಲ್ಲ, ಭವಿಷ್ಯವಾಣಿಯಂತೆ ನಡೆದುಕೊಂಡದಕ್ಕಾಗಿ ಅವನು ಸ್ಪಾರ್ಟನ್‌ರ ಬಗ್ಗೆ ಸದಭಿಪ್ರಾಯ ತಾಳುತ್ತಾನೆ. ಆದರೆ ಅವನಿಗೆ ಸ್ಪಾರ್ಟಕ್ಕಿಂತ ಅಥೆನ್ಸ್ ಬಗ್ಗೆ ಹೆಚ್ಚಿನ ಒಲವು, ಅಥೆನ್ಸ್‌ನ ಆಗುಹೋಗುಗಳ ವಿಚಾರ ಬಂದಾಗ ಅವನು ಪೆಸಿಸ್ಟ್ರಟೈಡಿಯ ವಿರುದ್ಧದ ನಿಲವು ತಳೆಯುತ್ತಾನೆ. ಇಷ್ಟಾದರೂ ಅವನು ಅಥೆನ್ನಿಯನ್ನರೇ ಲಂಚವಿತ್ತವರು ಎಂಬ ಅಂಶವನ್ನು ಎತ್ತಿ ತೋರಿಸುತ್ತಾನೆ, ಅಪವಿತ್ರವಾಗಿ ಗೆದ್ದವರಿಗಾಗಲೀ ಅರ್ಚಕಿಗಾಗಲೀ ಯಾವುದೇ ಶಿಕ್ಷೆಯಾಗಲಿಲ್ಲ ಎಂಬುದನ್ನೂ ಸೂಚಿಸುತ್ತಾನೆ.[೧] ಅಲ್ಕ್‌ಮೊನ್ಯೆಡಿ ಮನೆತನವು ಹೆರೊಡೊಟಸ್‌ನ ಕಾಲದಲ್ಲಿಯೂ ಪ್ರಬಲವಾಗಿಯೇ ಇತ್ತು; ಅದರಲ್ಲಿ ಅತ್ಯಂತ ಪ್ರಸಿದ್ಧನಾದ ಪೆರಿಕ್ಲೀಸ್ ಅವನ ಸಮಕಾಲೀನ.

ಅರಿಸ್ಟಾಟಲ್, ಅಥೆನ್ಸ್‌ನ ಸಂವಿಧಾನದ ಬಗೆಗಿನ ತನ್ನ ಪುಸ್ತಕದಲ್ಲಿ ಈ ಸನ್ನಿವೇಶವನ್ನು ಮತ್ತಷ್ಟು ತಾತ್ಸಾರದೃಷ್ಟಿಯಿಂದ ನಿರೂಪಿಸುತ್ತಾನೆ. ಡೆಲ್ಫಿಯ ದೇವಾಲಯವು ಕ್ರಿಪೂ ೫೪೮ ರಲ್ಲಿ ಬೆಂಕಿ ಅನಾಹುತದಿಂದಾಗಿ ನಾಶಗೊಂಡಿತು, ಆಗ ಅಲ್ಕ್‌ಮೊನ್ಯೆಡಿ ಮನೆತನದವರು ಅದರ ಪುನರ್ನಿರ್ಮಾಣಕ್ಕಾಗಿ ಗ್ರೀಸ್‌ನ ಎಲ್ಲಡೆಯೂ ಹಣಸಂಗ್ರಹ ಮಾಡಿದರು. ಆ ಹಣದ ಕೊಂಚ ಭಾಗವನ್ನು ಅವರು ಅರ್ಚಕಿಗೆ ಲಂಚವೀಯಲು ಬಳಸಿಕೊಂಡಿರಬೇಕೆಂದೂ, ಉಳಿದ ಹಣವನ್ನು ಪೆಸಿಸ್ಟ್ರಟಸ್‌ನ ಮಗ ಹಿಪ್ಪಿಯಾಸ್‌ನನ್ನು ಪದಚ್ಯುತಿಗೊಳಿಸಲು ಬಳಸಬೇಕೆಂಬ ನಿರ್ಬಂಧ ಹಾಕಿರಬೇಕೆಂದೂ, ಆ ಮೂಲಕ ಅವರು ಅಪಾಲೊ ಅನ್ನು ತಮ್ಮ ಕಡೆಗೆ ಸೆಳೆದುಕೊಂಡರೆಂದೂ ಅರಿಸ್ಟಾಟಲ್ ಊಹಿಸುತ್ತಾನೆ.

ಇಂತಹ ದುರ್ವ್ಯವಹಾರಗಳಾದರೂ, ಡೆಲ್ಫಿಯ ಭವಿಷ್ಯವಾಣಿಯ ನಿಯಂತ್ರಣವು ಇಂತಹ ರಾಜಕೀಯ ವಿಷಯಗಳಿಗಾಗಿ ಬಳಕೆಗೊಂಡು ಒಂದು ದೊಡ್ಡ ಯುದ್ಧವೇ ಅಗುವಂತಾದರೂ, ಧಾರ್ಮಿಕ ಸಂಬಂಧದ ಕಾರಣದಿಂದಾಗಿ ಅದನ್ನು ‘ಧರ್ಮಯುದ್ಧ’ ಎಂದು ಕರೆಯುವ ಹಾಗಾಯಿತು. ಆದರೆ ಭವಿಷ್ಯವಾಣಿಯು ರಾಜಕೀಯ ನಿಯಂತ್ರಣಕ್ಕೊಳಗಾದ ವಿಷಯವು ಜನಜನಿತವಾಗಿ ಮುಂದೆ ಮುಕ್ತ ಆಲೋಚನೆಯು ಬೆಳೆಯಲು ಕಾರಣವಾಗಿರಬೇಕು; ಹೀಗಾಗಿಯೇ ಕೊನೆಗೆ ರೋಮನ್‌ರು ಧರ್ಮದ್ರೋಹದ ಕಳಂಕಕ್ಕೆ ಒಳಗಾಗದೆಯೇ ಗ್ರೀಕ್

---

[೧] ಅರ್ಚಕಿ ಮತ್ತೊಂದು ಸಂದರ್ಭದಲ್ಲಿಯೂ ಲಂಚ ಸ್ವೀಕರಿಸಿದ್ದನ್ನು ಹೆರೊಡೊಟಸ್ ಉಲ್ಲೇಖಿಸುತ್ತಾನೆ, ಭಾಗ ೬, ಅಧ್ಯಾಯ ೬೬

ದೇವಾಲಯಗಳ ಮೇಲೆ ದಾಳಿಮಾಡಿ ಅಲ್ಲಿನ ಸಂಪತ್ತು ಹಾಗೂ ಅಧಿಕಾರಗಳನ್ನು ಲೂಟಿಮಾಡಲು ಸಾಧ್ಯವಾಗುವಂತೆ ಮಾಡಿತು. ಬಹುಪಾಲು ಧರ್ಮಸಂಸ್ಥೆಗಳ ಪಾಡೇ ಇಂತಹುದು; ಒಂದಲ್ಲ ಒಂದು ದಿನ ಧೈರ್ಯಸ್ಥರು ಲೌಕಿಕ ಉದ್ದೇಶಗಳಿಗೆ ಅವುಗಳನ್ನು ಬಳಸಿಕೊಳ್ಳುವಂತಾಗುವುದೂ, ತಮ್ಮ ಅಧಿಕಾರಕ್ಕೆ ಕಾರಣವಾದ ಅದರ ಮೇಲಿನ ಗೌರವವನ್ನು ಜನ ಕಳೆದುಕೊಳ್ಳುವಂತಾಗುವುದೂ ನಡೆದೇ ಇದೆ. ಗ್ರೆಕೋ–ರೋಮನ್ ಜಗತ್ತಿನಲ್ಲಿ ಇದು ಹೆಚ್ಚು ಸಲೀಸಾಗಿಯೂ ಅಂತಹ ವಿರೋಧವಿಲ್ಲದೆಯೂ ಸಾಗಿತು. ಇದಕ್ಕೆ ಕಾರಣ ಏಷ್ಯ ಅಥವಾ ಆಫ್ರಿಕ ಅಥವಾ ಮಧ್ಯಕಾಲೀನ ಯೂರೋಪಿನಲ್ಲಿನಂತೆ ಧರ್ಮವು ಎಂದೂ ಒಂದೇ ಬಗೆಯ ಸಾಮರ್ಥ್ಯವನ್ನು ಅಲ್ಲಿ ಹೊಂದಿಲ್ಲದಿದ್ದುದು. ಈ ವಿಷಯದಲ್ಲಿ ಗ್ರೀಸ್ ಮತ್ತು ರೋಮ್‌ಗಳಿಗೆ ಹೋಲಿಸಬಹುದಾದ ದೇಶವೆಂದರೆ ಚೈನಾ ಒಂದೇ.

ಇದುವರೆಗೂ ನಾವು ಗಮನಿಸಿದ್ದು ಸನಾತನವೂ, ಆದಿಯ ಬಗ್ಗೆ ಐತಿಹಾಸಿಕವಾಗಿ ಏನೂ ತಿಳಿಯದುದೂ ಆದ ಮತಧರ್ಮಗಳ ಕುರಿತು. ಆದರೆ ಎಲ್ಲೆಡೆಯೂ ಇವುಗಳ ಸ್ಥಾನವನ್ನು ಸ್ಥಾಪಕರು ನೆಲೆಗೊಳಿಸಿದ ಧರ್ಮಗಳು ಆಕ್ರಮಿಸಿಕೊಂಡಿವೆ; ಈ ಮಾತಿಗೆ ಅಪವಾದಗಳೆಂದರೆ ಶಿಂಟೋ ಮತ್ತು ಬ್ರಾಹ್ಮಣಧರ್ಮಗಳು. ಸನಾತನ ಧರ್ಮಗಳ ಹಾಗೂ ಮಾನವಶಾಸ್ತ್ರಜ್ಞರು ಇಂದಿನ ಆದಿವಾಸಿಗಳಲ್ಲಿ ಗುರುತಿಸಿದವುಗಳ ಮೂಲವು ಸಂಪೂರ್ಣವಾಗಿ ಅಸ್ಪಷ್ಟವಾಗಿದೆ. ಅತ್ಯಂತ ಪ್ರಾಚೀನ ಆದಿವಾಸಿಗಳಲ್ಲಿ ಖಚಿತವಾದ ಪುರೋಹಿತವರ್ಗವೂ ಇರುವುದಿಲ್ಲ; ಪ್ರಾಯಶಃ, ಅಲ್ಲಿ ಪುರೋಹಿತಕರ್ತವ್ಯಗಳನ್ನು ಮೂಲತಃ ನೆರವೇರಿಸುತ್ತಿದ್ದವರು ವೃದ್ಧರು, ಅದರಲ್ಲೂ ವಿವೇಕಶಾಲಿಗಳೆನಿಸಿಕೊಂಡಿದ್ದವರು ಅಥವಾ ಅಪಾಯಕಾರಿ ಮಾಟಗಳನ್ನು ಬಲ್ಲವರು ಎಂದು ಕಾಣುತ್ತದೆ.[೧]

ನಾಗರಿಕತೆ ಮುಂದುವರಿದಂತೆಲ್ಲ, ಬಹುಪಾಲು ದೇಶಗಳಲ್ಲಿ, ಪುರೋಹಿತರು ಮಿಕ್ಕ ಜನವರ್ಗಗಳಿಗಿಂತ ಹೆಚ್ಚು ಹೆಚ್ಚು ಬೇರ್ಪಡುತ್ತಲೂ ಹೆಚ್ಚು ಹೆಚ್ಚು ಶಕ್ತಿಶಾಲಿಗಳಾಗುತ್ತಲೂ ಸಾಗಿರುವುದು ಕಂಡುಬರುತ್ತದೆ. ಸನಾತನ ಸಂಪ್ರದಾಯಗಳ ರಕ್ಷಕರಾಗಿರುವುದರಿಂದ ಅವರು ಸಂಪ್ರದಾಯಶರಣರಾಗಿರುತ್ತಾರೆ, ಹಣ–ಅಧಿಕಾರಗಳನ್ನು ಹೊಂದಿದವರಾಗಿ

---

[೧] ಡಬ್ಲ್ಯು.ಎಚ್.ಆರ್. ರಿವರ್ಸ್: 'ಸೋಷಿಯಲ್ ಆರ್ಗನೈಜೇಷನ್ಸ್', ಪು.೧೬೭.

ವೈಯಕ್ತಿಕ ಧರ್ಮಗಳ ಬಗ್ಗೆ ದ್ವೇಷ ಮತ್ತು ತಿರಸ್ಕಾರಗಳನ್ನು ಹೊಂದಿದವರಾಗಿರುತ್ತಾರೆ. ಕ್ರಮೇಣ ಅವರ ಇಡೀ ವ್ಯವಸ್ಥೆಯನ್ನು ಕ್ರಾಂತಿಕಾರಿ ಪ್ರವಾದಿಯೊಬ್ಬನ ಅನುಯಾಯಿಗಳು ಬುಡಮೇಲು ಮಾಡಿಬಿಡುತ್ತಾರೆ. ಬುದ್ಧ, ಕ್ರಿಸ್ತ ಮತ್ತು ಮಹಮ್ಮದರು ಇತಿಹಾಸದಲ್ಲಿ ಈ ಬಗ್ಗೆ ಕಾಣಬರುವ ಪ್ರಮುಖ ನಿದರ್ಶನಗಳು. ಅವರ ಅನುಯಾಯಿಗಳ ಅಂಧಕಾರವು ಮೊದಲು ಕ್ರಾಂತಿಕಾರಕವಾದುದಾಗಿತ್ತು, ಆದರೆ ಬರಬರುತ್ತ ಸಾಂಪ್ರದಾಯಿಕವಾಯಿತು. ಈ ಪ್ರಕ್ರಿಯೆಯಲ್ಲಿ ತಾವೇ ಬುಡಮೇಲು ಮಾಡಿದ್ದ ಹಿಂದಿನ ಸಂಪ್ರದಾಯದಲ್ಲಿನ ಬಹ್ವಂಶವನ್ನೇ ಅವರು ಸಾಮಾನ್ಯವಾಗಿ ರೂಢಿಸಿಕೊಂಡರು.

ಧಾರ್ಮಿಕ ಅಥವಾ ಲೌಕಿಕ ಸುಧಾರಕರು, ಅಂದರೆ ವ್ಯಾಪಕವಾದ ಯಶಸ್ಸು ಗಳಿಸಿದವರು, ತಮಗೆ ಸಾಧ್ಯವಿರುವಷ್ಟರಮಟ್ಟಿಗೆ ಸಂಪ್ರದಾಯವನ್ನೇ ಆಶ್ರಯಿಸಿದರು, ತಮ್ಮ ಶಕ್ತಿಯಿರುವಷ್ಟರ ಮಟ್ಟಿಗೆ ತಮ್ಮ ವ್ಯವಸ್ಥೆಯಲ್ಲಿ ಹೊಸತನದ ಅಂಶಗಳು ಕನಿಷ್ಠ ಪ್ರಮಾಣದಲ್ಲಿರುವಂತೆ ನೋಡಿಕೊಂಡರು. ಸಾಮಾನ್ಯವಾಗಿ ಇಲ್ಲೆಲ್ಲ ಅನುಸರಿಸಲಾಗುವ ತಂತ್ರವೆಂದರೆ ಒಂದು ಕಲ್ಪಕ ಸಂಪ್ರದಾಯವನ್ನು ಸೃಷ್ಟಿಸುವುದು ಮತ್ತು ಅದರ ನೆಲೆಗಳನ್ನು ಗಟ್ಟಿಗೊಳಿಸುವುದು. '೨ ಕಿಂಗ್ಸ್'ನ ಥಾ ನಲ್ಲಿ, ಪುರೋಹಿತರು ಹೇಗೆ ನೀತಿಸಂಹಿತೆಯನ್ನು 'ಕಂಡುಕೊಂಡರು' ಮತ್ತು ಕಿಂಗ್ ಹೇಗೆ ಅವುಗಳ ಪಾಲನೆಗೆ 'ಮರಳಲು' ಕಾರಣನಾದ ಎಂಬುದನ್ನು ಹೇಳಲಾಗಿದೆ. ಹೊಸ ಒಡಂಬಡಿಕೆಯು ಪ್ರವಾದಿಗಳ ಅಧಿಕಾರಕ್ಕಾಗಿ ಪ್ರತಿಪಾದನೆ ಮಾಡಿತು; ಅನಾಬಾಪ್ಟಿಸ್ಟರು ಹೊಸ ಒಡಂಬಡಿಕೆಯನ್ನು ಪ್ರತಿಪಾದಿಸಿದರು; ಲೌಕಿಕ ವಿಷಯಗಳಲ್ಲಿ ಇಂಗ್ಲಿಷ್ ಪ್ಯೂರಿಟನ್ನರು ಕಾಂಕ್ವೆಸ್ಟ್‌ಗೆ ಹಿಂದಿನ ಇಂಗ್ಲಂಡ್‌ನಲ್ಲಿದ್ದ ಸಂಸ್ಥೆಗಳ ಪುನಃಸ್ಥಾಪನೆಯನ್ನು ಪ್ರತಿಪಾದಿಸಿದರು. ಜಪಾನೀಯರು ಕ್ರಿಶ ೬೪೫ ರಲ್ಲಿ ಮಿಕಾಡೋನ ಅಧಿಕಾರವನ್ನು 'ಪುನಃಸ್ಥಾಪಿಸಿ'ದರು; ೧೮೬೮ರಲ್ಲಿ ಕ್ರಿಶ ೬೪೫ ರ ಸಂವಿಧಾನವನ್ನು 'ಪುನಃಸ್ಥಾಪಿಸಿ'ದರು. ಮಧ್ಯಯುಗದುದ್ದಕ್ಕೂ ಮತ್ತು ೧೮ ಬ್ರೂಮೇರ್‌ವರೆಗೂ, ಬಂಡಾಯಗಾರರ ಸಮೂಹಗಳೆಲ್ಲ ರೋಮ್‌ನ ರಿಪಬ್ಲಿಕನ್ ಸಂಸ್ಥೆಗಳನ್ನು 'ಪುನಃಸ್ಥಾಪಿಸಿ'ದರು, ನೆಪೋಲಿಯನ್ ಶಾರ್ಲಮೇನ್ ಸಾಮ್ರಾಜ್ಯವನ್ನು 'ಪುನಃಸ್ಥಾಪಿಸಿ'ದ, ಆದರೆ ಇದು ತೀರ ನಾಟಕೀಯವೆನಿಸಿಕೊಂಡು ಕ್ಷುಲ್ಲಕವಾಯಿತು, ಹೀಗಾಗಿ ಅದಕ್ಕೆ ಆ ಆಡಂಬರಪ್ರಿಯ ಯುಗದ ಮೇಲೆ ಪ್ರಭಾವ ಬೀರುವುದಕ್ಕೂ ಸಾಧ್ಯವಾಗಲಿಲ್ಲ. ಮಹಾ ಸುಧಾರಕರು ಕೂಡ ಸಂಪ್ರದಾಯದ ಅಧಿಕಾರಕ್ಕೆ

ಹೇಗೆ ಮಣಿದರು ಎಂದು ತೋರಿಸುವುದಕ್ಕೆ ಇಲ್ಲಿ ಹೇಳಿದವು ಕೆಲವೇ ನಿದರ್ಶನಗಳು ಮಾತ್ರ, ಅಲ್ಲೊಂದು ಇಲ್ಲೊಂದು ಎಂದು ಆರಿಸಿರುವುದು.

ಇತಿಹಾಸ ಕಂಡ ಪುರೋಹಿತ ಸಂಸ್ಥೆಗಳಲ್ಲೆಲ್ಲ ಅತ್ಯಂತ ಶಕ್ತಿಯುತವಾದುದೆಂದರೆ ಕ್ಯಾಥೋಲಿಕ್ ಚರ್ಚ್. ಈ ಅಧ್ಯಾಯದಲ್ಲಿ ಚರ್ಚಿಸುವುದು ಸಾಂಪ್ರದಾಯಿಕ ಅರ್ಥದ ಪುರೋಹಿತರ ಅಧಿಕಾರವನ್ನು ಕುರಿತು ಮಾತ್ರ; ಹೀಗಾಗಿ ಕ್ರಾಂತಿಕಾರಕವಾಗಿದ್ದ ಪ್ರಾಚೀನ ಚರ್ಚ್‌ನ ಅಧಿಕಾರದ ಬಗ್ಗೆ ನಾನಿಲ್ಲಿ ಪ್ರಸ್ತಾಪಿಸುವುದಿಲ್ಲ. ರೋಮ್ ಸಾಮ್ರಾಜ್ಯದ ಪತನಾನಂತರ ಚರ್ಚ್ ಎರಡು ಸಂಪ್ರದಾಯಗಳ ಪ್ರತಿನಿಧಿಯಾಗುವ ಅದೃಷ್ಟವನ್ನು ಸಂಪಾದಿಸಿತು: ಕ್ರಿಶ್ಚಿಯನ್ ಮತದೊಡನೆ ಅದು ರೋಮ್‌ದನ್ನೂ ಒಳಗೊಂಡಿತು. ಅನಾಗರಿಕರದು ಖಡ್ಗಶಕ್ತಿ, ಆದರೆ ಚರ್ಚ್‌ನದು ಹೆಚ್ಚಿನ ಮಟ್ಟದ ನಾಗರಿಕತೆ ಮತ್ತು ಶಿಕ್ಷಣಗಳು ಮತ್ತು ನಿರಂತರವಾಗಿ ಧಾರ್ಮಿಕ ಭರವಸೆಗಳ ಮತ್ತು ಮೌಢ್ಯಾಧಾರಿತ ಭಯಗಳ ಕಡೆಗೆ ಗಮನವಿತ್ತ ವ್ಯಕ್ತ್ಯತೀತ ಉದ್ದೇಶ. ಅಲ್ಲದೆ, ಇದು ಪಶ್ಚಿಮ ಯೂರೋಪಿನಾದ್ಯಂತ ವ್ಯಾಪಿಸಿದ್ದ ಏಕೈಕ ಸಂಸ್ಥೆಯಾಗಿತ್ತು. ಹೆಚ್ಚು ಸ್ಥಿರವಾದ ಕಾನ್‌ಸ್ಟಾಂಟಿನೋಪಲ್ ಮತ್ತು ಮಾಸ್ಕೋ ಸಾಮ್ರಾಜ್ಯಗಳೊಡನೆ ಒಡನಾಟವಿದ್ದ ಗ್ರೀಕ್ ಚರ್ಚ್ ಸಂಪೂರ್ಣವಾಗಿ ಸರ್ಕಾರಕ್ಕೆ ಅಧೀನವಾಯಿತು; ಆದರೆ ಪಶ್ಚಿಮದಲ್ಲಿ ರಿಫರ್‌ಮೇಷನ್‌ವರೆಗೂ ನಾನಾ ಬಗೆಯ ಫಲಿತಾಂಶಗಳೊಡನೆ ಹೋರಾಟವು ಮುಂದುವರಿಯಿತು, ಅದು ಜರ್ಮನಿ, ಮೆಕ್ಸಿಕೊ ಮತ್ತು ಸ್ಪೇನ್‌ಗಳಲ್ಲಿ ಇಂದಿಗೂ ಮುಂದುವರಿದಿದೆ.

ಬಾರ್ಬೇರಿಯನ್ನರ ಆಕ್ರಮಣದ ನಂತರ ಆರು ಶತಮಾನಗಳ ಕಾಲ ಪಶ್ಚಿಮದ ಚರ್ಚ್ ಉಗ್ರರೂ ಉದ್ವೇಗಿಗಳೂ ಆಗಿದ್ದ ಜರ್ಮನ್ ದೊರೆಗಳ ಜೊತೆಗಾಗಲೀ ಇಂಗ್ಲಂಡ್ ಮತ್ತು ಫ್ರಾನ್ಸ್ ಹಾಗೂ ಉತ್ತರ ಇಟಲಿ ಮತು ಕ್ರಿಶ್ಚಿಯನ್ ಸ್ಪೇನ್‌ಗಳನ್ನಾಳಿದ ಸಾಮಂತರ ಜೊತೆಗಾಗಲೀ ಸಮಾನ ನೆಲೆಯಲ್ಲಿ ಹೋರಾಡುವ ಸ್ಥಿತಿಯಲ್ಲಿರಲಿಲ್ಲ. ಇದಕ್ಕೆ ನಾನಾ ಕಾರಣಗಳಿದ್ದವು. ಇಟಲಿಯಲ್ಲಿ ಜಸ್ಟಿನಿಯನ್ ಪಡೆದ ಗೆಲವುಗಳು ಕೆಲವು ಕಾಲ ಪೋಪ್ ಅಧಿಕಾರವನ್ನು ಒಂದು ಬೈಜಾ಼ಂಟೈನ್ ಸಂಸ್ಥೆಯನ್ನಾಗಿ ಮಾರ್ಪಡಿಸಿತ್ತು, ಹೀಗಾಗಿ ಅದರ ಪ್ರಭಾವವನ್ನು ಪಶ್ಚಿಮದಲ್ಲಿ ಗಣನೀಯವಾಗಿ ಕುಗ್ಗಿಸಿತ್ತು. ಕೆಲವು ಅಪವಾದಗಳನ್ನು ಹೊರತುಪಡಿಸಿದಂತೆ, ಮೇಲುವರ್ಗದ ಪುರೋಹಿತರನ್ನೆಲ್ಲ ಊಳಿಗಮಾನ್ಯ ಶ್ರೀಮಂತವರ್ಗದಿಂದಲೇ ಆರಿಸಲಾಗುತ್ತಿತ್ತು; ಹೀಗಾಗಿ ಅವರಿಗೆ ದೂರದ ಪೋಪ್‌ಗಿಂತ ಇವರೊಡನೆಯೇ ಹೆಚ್ಚು ನಿಕಟ ಸಂಪರ್ಕವಿರುತ್ತಿತ್ತು. ಕೆಳವರ್ಗದ ಪುರೋಹಿತವರ್ಗದವರು ಬಹುತೇಕ ಅವಿದ್ಯಾವಂತರೂ

ಮದುವೆಯಾದವರೂ ಆಗಿರುತ್ತಿದ್ದರು; ಇದರಿಂದಾಗಿ ಅವರಿಗೆ ಚರ್ಚ್‌ನ ಹೋರಾಟಗಳಲ್ಲಿ ಭಾಗಿಗಳಾಗುವುದಕ್ಕಿಂತ ತಮ್ಮ ಮಕ್ಕಳಿಗೆ ವರಮಾನವನ್ನು ವರ್ಗಾಯಿಸುವುದರಲ್ಲಿಯೇ ಹೆಚ್ಚಿನ ಆಸಕ್ತಿಯಿರುತ್ತಿತ್ತು. ಪ್ರಯಾಣ ತುಂಬ ಕಷ್ಟಕರವಾಗಿದ್ದುದರಿಂದ ದೂರದ ರಾಜ್ಯಗಳಲ್ಲಿ ರೋಮನ್ ಅಧಿಕಾರವನ್ನು ಜಾರಿಗೊಳಿಸುವುದು ಸಾಧ್ಯವಿರಲಿಲ್ಲ. ವಿಶಾಲ ಪ್ರದೇಶದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ ಮೊದಲ ಆಡಳಿತ ಪೋಪ್‌ದಲ್ಲ, ಶಾರ್ಲಮೇನ್‌ನದು, ಸಮಕಾಲೀನರೆಲ್ಲ ಅವನನ್ನು ಪೋಪ್‌ಗಿಂತ ನಿಸ್ಸಂದೇಹವಾಗಿ ಹೆಚ್ಚು ಮೇಲುಮಟ್ಟದವನೆಂದು ನಂಬಿದ್ದರು.

ಕ್ರಿಶ ೧೦೦೦ ದ ನಂತರ, ನಿರೀಕ್ಷಿಸಿದಂತೆ ಜಗತ್ತು ಅಂತ್ಯಗೊಂಡಿರದಿದುದನ್ನು ಗಮನಿಸಿದ ಬಳಿಕ, ನಾಗರಿಕತೆಯಲ್ಲಿ ತೀವ್ರತರವಾದ ಮುನ್ನಡೆಯುಂಟಾಯಿತು. ಸ್ಪೇನ್ ಮತ್ತು ಇಟಲಿಗಳಲ್ಲಿ ಮೂರ್‌ರ ಜೊತೆಗಿನ ಸಂಪರ್ಕವು ತರ್ಕಬದ್ಧ ತಾತ್ವಿಕತೆಯ ಬೆಳವಣಿಗೆಯನ್ನು ಚುರುಕುಗೊಳಿಸಿತು. ಶತಮಾನಗಳ ಕಾಲ ಫ್ರಾನ್ಸ್ ಮತ್ತು ಇಟಲಿಗಳಲ್ಲಿ ಕೇವಲ ದರೋಡೆಕೋರ ಪೀಡೆಗಳಾಗಿದ್ದ ನಾರ್ಮನ್‌ರು ಆನಂತರ ಸಮಕಾಲೀನ ಜಗತ್ತಿನಿಂದ ಪ್ರಸ್ತುತವಾದುದನ್ನೆಲ್ಲ ಕಲಿತರು, ಅವ್ಯವಸ್ಥೆಯ ಬದಲು ವ್ಯವಸ್ಥೆ ಮತ್ತು ಧರ್ಮಗಳ ವಿಷಯದಲ್ಲಿ ಗಣ್ಯರೆನಿಸಿದರು. ಅಲ್ಲದೆ, ತಮ್ಮ ಗೆಲವುಗಳನ್ನು ಸಕ್ರಮಗೊಳಿಸಲು ಪೋಪ್ ಅಧಿಕಾರವು ಉಪಯುಕ್ತವಾದುದೆಂಬುದನ್ನು ಅವರು ಕಂಡುಕೊಂಡರು. ಅವರಿಂದಾಗಿ ಕ್ರೈಸ್ತ ಹಿಡಿತದ ಇಂಗ್ಲಂಡ್ ಮೊಟ್ಟ ಮೊದಲ ಬಾರಿಗೆ ರೋಮ್ ಅಧೀನಕ್ಕೊಳಪಟ್ಟಿತು. ಈ ಮಧ್ಯೆ, ಚಕ್ರವರ್ತಿ ಹಾಗೂ ಫ್ರಾನ್ಸ್‌ನ ರಾಜರು ತಮ್ಮ ಸಾಮಂತರನ್ನು ಹಿಡಿತದಲ್ಲಿರಿಸಿಕೊಳ್ಳುವುದು ತುಂಬ ಕಷ್ಟಕರವಾಯಿತು. ಇಂತಹ ಪರಿಸ್ಥಿತಿಯಲ್ಲಿ ಗ್ರೆಗರಿ ೭ (ಹಿಲ್ಡೆಬ್ರಾಂಡ್)ನ ಮುತ್ಸದ್ಧಿತನ ಮತ್ತು ನಿಷ್ಠೂರ ಸಾಮರ್ಥ್ಯಗಳಿಂದಾಗಿ ಪೋಪ್ ಅಧಿಕಾರವು ಹೆಚ್ಚಲು ಕಾರಣವಾಯಿತು, ಇದು ಮುಂದಿನ ಎರಡು ಶತಮಾನಗಳ ಕಾಲ ಮುಂದುವರಿಯಿತು. ಈ ಕಾಲವು ಪೋಪ್ ಅಧಿಕಾರಸ್ವರೂಪದ ಉತ್ಕೃಷ್ಟ ನಿದರ್ಶನವಾಗಿರುವುದರಿಂದ ಆ ಬಗ್ಗೆ ಸ್ವಲ್ಪ ವಿವರವಾಗಿಯೇ ಪರಿಶೀಲಿಸಬಯಸುತ್ತೇನೆ.

ಗ್ರೆಗರಿ ೭ (೧೦೭೩) ಯ ಸಿಂಹಾಸನಾರೋಹಣ ಕಾಲದಿಂದ ಆರಂಭಗೊಂಡ ಪೋಪ್ ಅಧಿಕಾರದ ಉಚ್ಛ್ರಾಯಸ್ಥಿತಿಯು ಕ್ಲೆಮೆಂಟ್ ೫ ಅವಿಗ್ನಾನ್‌ನಲ್ಲಿ (೧೩೦೯) ಪೋಪ್ ಪದ್ಧತಿಯನ್ನು ಸ್ಥಾಪಿಸುವವರೆಗೂ ಮುಂದುವರಿಯಿತು. ಈ ಅವಧಿಯಲ್ಲಿ ವಿಜಯಗಳನ್ನು ಸಾಧಿಸಿದ್ದು 'ಆಧ್ಯಾತ್ಮಿಕ' ಎನ್ನಿಸಿಕೊಳ್ಳುವ ಶಸ್ತ್ರಗಳ ಮೂಲಕ, ಅಂದರೆ ಮೂಢ

ನಂಬಿಕೆಗಳಿಂದಲೇ ಹೊರತು ಆಯುಧಬಲದಿಂದಲ್ಲ. ಈ ಅವಧಿಯುದ್ದಕ್ಕೂ, ಪೋಪ್‌ಗಳು ಹೊರನೋಟಕ್ಕೆ, ನಗರದ ಬಂಡಾಯಕೋರ ಸಾಮಂತರ ಮುಂದಾಳತ್ವದಲ್ಲಿನ ರೋಮ್ ಜನಸಮುದಾಯದ ಕೃಪೆಯಲ್ಲಿದ್ದರು; ಉಳಿದ ಕ್ರೈಸ್ತ ಪ್ರದೇಶಗಳು ಯಾವ ಭಾವನೆಯನ್ನು ಹೊಂದಿದ್ದರೂ ರೋಮ್‌ಗೆ ಮಾತ್ರ ಗುರುವಿನ ಬಗ್ಗೆ ಯಾವುದೇ ಗೌರವವಿರಲಿಲ್ಲ. ಈ ಹಿಲ್ಡೆಬ್ರಾಂಡ್ ಮಹಾಶಯನು ಮಾತ್ರ ದೇಶಭ್ರಷ್ಟನಾಗಿಯೇ ಸತ್ತ; ಆದರೆ ತಾನು ಗಳಿಸಿದ ಶಕ್ತಿಯನ್ನು ಅವನು ಮಹಾ ಮಹಾ ಸಮ್ರಾಟರನ್ನು ಮಣಿಸಲು ಬಳಸಿದ. ತಕ್ಷಣದ ಪರಿಣಾಮಗಳು ಸಮ್ರಾಟ ಹೆನ್ರಿ ೪ ಗೆ ಅನುಕೂಲಕರವೆನಿಸಿದರೂ, ಮುಂದಿನ ದಿನಗಳಲ್ಲಿ ಕನೋಸಾ ಒಂದು ಸಂಕೇತವೆನಿಸಿತು. "ನಾವು ಕನೋಸಕ್ಕೆ ಹೋಗುವುದಿಲ್ಲ" ಎಂದು ಕುಲ್ತುರ್‌ಕೆಂಫ್ (ನಾಗರಿಕ–ಚರ್ಚ್ ನಡುವಣ ಸಂಘರ್ಷ) ಕಾಲದಲ್ಲಿ ಬಿಸ್‌ಮಾರ್ಕ್ ಹೇಳಿದ; ಆದರೆ ಅವು ಅಕಾಲದಲ್ಲಿ ಬಡಾಯಿ ಕೊಚ್ಚಿಕೊಂಡಿದ್ದ. ಬಹಿಷ್ಕಾರಕ್ಕೊಳಗಾಗಿದ್ದ ಹೆನ್ರಿ ೪ ಗೆ ತನ್ನ ಸಂಚುಗಳನ್ನು ಮುಂದುವರಿಸಲು ಅದರಿಂದ ಹೊರಬರಬೇಕಾಗಿತ್ತು; ಪಶ್ಚಾತ್ತಾಪ ಪಡುವವನಿಗೆ ಬಹಿಷ್ಕಾರದಿಂದ ವಿಮುಕ್ತಿ ನೀಡುವುದನ್ನು ಗ್ರೆಗರಿ ನಿರಾಕರಿಸಲು ಸಾಧ್ಯವಿರಲಿಲ್ಲವಾದರೂ, ಚರ್ಚ್ ಜೊತೆ ಜೊತೆಗಿನ ರಾಜಿಯು ಕುಂಠಿತಗೊಳ್ಳುವಂತಿದ್ದರೂ ಅವನನ್ನು ಅವಮಾನಗೊಳಿಸಿದ. ರಾಜಕಾರಣಿಗಳಾಗಿ ಜನರು ಪೋಪ್‌ನನ್ನು ನಿಂದಿಸಿರಬಹುದಾದರೂ, ಅವರ ಅಧಿಕಾರವನ್ನು ಧರ್ಮದ್ರೋಹಿಗಳು ಮಾತ್ರವೇ ಪ್ರಶ್ನಿಸುತ್ತಿದ್ದುದು. ಫ್ರೆಡೆರಿಕ್ ೨ ಕೂಡ ಪೋಪ್ ಪ್ರಭುತ್ವದ ಜೊತೆಗಿನ ತನ್ನ ಸಂಘರ್ಷದ ಉತ್ತುಂಗದಲ್ಲಿಯೂ ಧರ್ಮದ್ರೋಹವನ್ನು ಮನ್ನಿಸಲಿಲ್ಲ.

ಗ್ರೆಗರಿ ೭ ಯು ಪೋಪ್ ಆದದ್ದು ಕ್ರೈಸ್ತಪ್ರಭುತ್ವದ ಸುಧಾರಣೆಯ ಅವಧಿಯ ಶಿಖರ ಘಟನೆ. ಅವನ ತನಕ ಸಮ್ರಾಟನು ನಿರ್ವಿವಾದವಾಗಿ ಪೋಪ್‌ಗಿಂತ ಉನ್ನತಸ್ಥಾನದಲ್ಲಿದ್ದವನು, ಅವನಿಂದ ತನ್ನ ಆಯ್ಕೆಯನ್ನು ಸಮರ್ಥನೆಗೊಳಿಸಿಕೊಂಡದ್ದೂ ಅಪರೂಪವೇನಲ್ಲ. ನಾಲ್ಕನೆಯ ಹೆನ್ರಿಯ ತಂದೆಯಾದ ಮೂರನೆಯ ಹೆನ್ರಿಯು ಧಾರ್ಮಿಕ ಅಧಿಕಾರವನ್ನು ಬಳಸಿಕೊಂಡು ಗ್ರೆಗರಿ ೬ ಯನ್ನು ಪದಚ್ಯುತಗೊಳಿಸಿ ಒಬ್ಬ ಜರ್ಮನ್‌ನನನು, ಅಂದರೆ ಎರಡನೆಯ ಕ್ಲೆಮೆಂಟ್‌ನನನ್ನು ಪೋಪ್ ಆಗಿ ಮಾಡಿದ್ದ. ಆದರೂ ಎರಡನೆಯ ಹೆನ್ರಿ ಚರ್ಚ್ ಜೊತೆ ಸಂಘರ್ಷಕ್ಕೆ ಇಳಿಯಲಿಲ್ಲ; ಅದಕ್ಕೆ ವಿರುದ್ಧವಾಗಿ, ಅವನು ಸಂತನಂತಹ ವ್ಯಕ್ತಿಯಾಗಿದ್ದ, ತನ್ನ ಕಾಲದ ಎಲ್ಲ ಶ್ರದ್ಧಾವಂತ ಕ್ರೈಸ್ತಗುರುಗಳ ಜೊತೆ ಸಹಕರಿಸಿದ್ದ. ಅವನು ಬೆಂಬಲಿಸಿದ ಹಾಗೂ ಏಳನೆಯ ಗ್ರೆಗರಿ ಗೆಲವಿನೆಡೆಗೆ ಕೊಂಡೊಯ್ದ ಸುಧಾರಣೆಗಳು

ಊಳಿಗಮಾನ್ಯತೆಯಿಂದ ಚರ್ಚ್ ಕಳಂಕಗೊಳ್ಳುವುದರ ವಿರುದ್ಧ ಸಾಗಿದ್ದವು. ಆರ್ಚ್‌ಬಿಷಪ್‌ರನ್ನೂ ಬಿಷಪ್‌ರನ್ನೂ ರಾಜರೂ ಸಾಮಂತರೇ ನೇಮಿಸುತ್ತಿದ್ದುದು; ಅವರೂ ಊಳಿಗಮಾನ್ಯ ಶ್ರೀಮಂತಪ್ರಭುತ್ವದ ಪ್ರತೀಕಗಳೇ ಆಗಿದ್ದರು. ಆದರೆ ತಮ್ಮ ಸ್ಥಾನದ ಬಗ್ಗೆ ಮಾತ್ರ ಅವರು ಧರ್ಮೇತರ ನಿಲವನ್ನು ಹೊಂದಿರುತ್ತಿದ್ದರು. ಈ ಹಿಂದೆ ಸಾಮ್ರಾಜ್ಯವೊಂದರಲ್ಲಿ ಸಮ್ರಾಟನ ಕೈಕೆಳಗಿನ ಉನ್ನತ ವ್ಯಕ್ತಿಗಳೆಲ್ಲ ಅಧಿಕಾರಿಗಳೇ ಆಗಿರುತ್ತಿದ್ದರು, ಅವರೆಲ್ಲ ತಮ್ಮ ಅಧಿಕಾರಬಲದಿಂದಲೇ ಭೂಮಿಯ ಒಡೆತನ ಸಾಧಿಸಿರುತ್ತಿದ್ದುದು. ಆದರೆ ಹನ್ನೊಂದನೆಯ ಶತಮಾನದ ಅಂತ್ಯದ ವೇಳೆಗೆ ಅವರು ಆನುವಂಶಿಕ ಶ್ರೀಮಂತವರ್ಗಕ್ಕೆ ಸೇರಿದ್ದರು, ಅಂದರೆ ಅವರ ಆಸ್ತಿಗಳೆಲ್ಲ ವಂಶಪಾರಂಪರ್ಯವಾಗಿ ಬಂದವು. ಅಂಥದೇ ಒಂದು ಅಪಾಯಕರ ಸನ್ನಿವೇಶ ಚರ್ಚ್‌ನಲ್ಲಿಯೂ ಇತ್ತು, ಅದರಲ್ಲೂ ಕೆಳವರ್ಗದ ಧಾರ್ಮಿಕೇತರ ಪಂಡಿತರುಗಳಲ್ಲಿ. ಚರ್ಚ್‌ನಲ್ಲಿನ ಸುಧಾರಕ ಬಣವು ಧಾರ್ಮಿಕ ವಲಯದಲ್ಲಿನ ಅಂತಹ ಜ್ಞಾತಿದೋಷಗಳ ಹಾಗೂ ‘ಮಿಂಡಗಾರಿಕೆ’ಯ (ಪಾದ್ರಿಗಳ ಮದುವೆಯನ್ನು ಕರೆಯುತ್ತಿದ್ದು ಹೀಗೆ) ವಿರುದ್ಧ ಸಮರ ಸಾರಿದವು. ತಮ್ಮ ಸಮರದಲ್ಲಿ ಅವರು ಹೆಚ್ಚಿನ ಉತ್ಸಾಹ, ಧೈರ್ಯ, ನಿಷ್ಠೆ ಮತ್ತು ವ್ಯವಹಾರಜ್ಞಾನಗಳನ್ನು ತೋರಿದರು. ಪೂಜ್ಯತೆಯಿಂದಾಗಿ ಅವರಿಗೆ ಸಾಮಾನ್ಯರ ಬೆಂಬಲವೂ ದೊರಕಿತು, ಮಾತುಗಾರಿಕೆಯಿಂದ ಅವರು ಮೊದಲು ತಮ್ಮ ವಿರುದ್ಧವಾಗಿದ್ದ ಸಭೆಗಳ ಒಲವನ್ನೂ ಸಂಪಾದಿಸಿದರು. ಉದಾಹರಣೆಗೆ, ರೋಮ್‌ನ ಸುಧಾರಕ ತೀರ್ಪುಗಳಿಗೆ ಪಾಲನಗೆಂದು ಸಂತ ಪೀಟರ್ ಡಾಮಿಯನ್ ೧೦೫೮ ರಲ್ಲಿ ಮಿಲಾನ್‌ನಲ್ಲಿ ಧರ್ಮಗುರುಗಳ ಸಭೆಯೊಂದನ್ನು ಕರೆದುದನ್ನು ಉಲ್ಲೇಖಿಸಬಹುದು. ಮೊದಮೊದಲು ಅವರು ಅವನ ಜೀವಕ್ಕೆ ಅಪಾಯಕಾರಿಯಾಗುವಷ್ಟು ಆಕ್ರೋಶ ವ್ಯಕ್ತಪಡಿಸಿದರು; ಕೊನೆಗೆ ಅವನೇ ಜಯಶಾಲಿಯಾದ; ಮಿಲಾನ್‌ನ ಆರ್ಚ್‌ಬಿಷಪ್‌ನಿಂದ ಹಿಡಿದು ಕೆಳತನಕ ಗುರುವರ್ಗದಲ್ಲಿನ ಪ್ರತಿಯೊಬ್ಬನೂ ಧರ್ಮವನ್ನು ದುರುಪಯೋಗ ಪಡಿಸಿಕೊಂಡಿದ್ದವನೆಂಬುದು ಸಾಬೀತಾಯಿತು. ಎಲ್ಲರೂ ತಮ್ಮ ತಪ್ಪನ್ನೊಪ್ಪಿಕೊಂಡು, ಮುಂದೆ ವಿಧೆಯರಾಗಿರುವುದಾಗಿ ಪ್ರಮಾಣ ಮಾಡಿದರು. ಈ ಕಾರಣದಿಂದ ಅವರನ್ನೇನೂ ಉಚ್ಚಾಟನೆಗೊಳಿಸಲಿಲ್ಲ, ಆದರೆ ಮುಂದಿನ ಅಪರಾಧಗಳನ್ನು ದಯೆದಾಕ್ಷಿಣ್ಯಗಳಿಲ್ಲದೆ ಶಿಕ್ಷಿಸಲಾಗುವುದೆಂದು ಸ್ಪಷ್ಟಪಡಿಸಲಾಯಿತು.

ಧರ್ಮಗುರುಗಳ ಬ್ರಹ್ಮಚರ್ಯವು ಹಿಲ್ಡೆಬ್ರಾಂಡ್‌ನ ಒಂದು ಗೀಳಾಗಿತ್ತು; ಅದನ್ನು ಜಾರಿಗೊಳಿಸುವಲ್ಲಿ ಅವನು ಗುರುಗಳು ಮತ್ತವರ

ಹೆಂಡತಿಯರ ಬಗ್ಗೆ ಅತೀವ ಕ್ರೌರ್ಯ ತೋರಿಸುತ್ತಿದ್ದ ಸಾಮಾನ್ಯರ ನೆರವನ್ನೇ ಪಡೆದ. ಆದರೆ ಇದು ಸಂಪೂರ್ಣವಾಗಿ ಫಲಕಾರಿಯೇನಾಗಲಿಲ್ಲ – ಇಂದಿಗೂ ಅದು ಸ್ಪೇನ್‌ನಲ್ಲಿ ಸಫಲವಾಗಿಲ್ಲ – ಆದರೆ ಗುರುಗಳ ಮಕ್ಕಳಿಗೆ ಗುರುದೀಕ್ಷೆ ನೀಡುವಂತಿಲ್ಲ ಎಂಬ ಅದರ ಒಂದು ಮುಖ್ಯವಾದ ಉದ್ದೇಶವು ಸಫಲವಾಗಿದೆ, ಅದರಿಂದಾಗಿ ಗುರುತನವು ಆನುವಂಶೀಯವಾಗುವುದರಿಂದ ಪಾರಾಗಿದೆ.

ಸುಧಾರಕ ಚಳವಳಿಯ ಒಂದು ಪ್ರಮುಖ ವಿಜಯಗಳಲ್ಲೊಂದೆಂದರೆ, ೧೦೫೯ ರ ತೀರ್ಪಿನ ಮೂಲಕ ಪೋಪ್ ಚುನಾವಣೆಗೆ ನಿರ್ದಿಷ್ಟ ಕ್ರಮವನ್ನು ಜಾರಿಗೊಳಿಸಿದ್ದು. ಈ ತೀರ್ಪು ಬರುವ ಮುನ್ನ, ಸಮ್ರಾಟ ಮತ್ತು ರೋಮ್‌ನ ಜನತೆಗೆ ನಿರ್ದಿಷ್ಟ ರೂಪವಿರದ ಕೆಲವು ಹಕ್ಕುಗಳಿದ್ದವು; ಇದರಿಂದಾಗಿ ಪದೇ ಪದೇ ಬಿರುಕುಗಳೂ ಚುನಾವಣೆಗಳಲ್ಲಿ ವಿವಾದಗಳೂ ಕಾಣಿಸಿಕೊಳ್ಳುತ್ತಿದ್ದವು. ಹೊಸ ತೀರ್ಪಿನಿಂದಾಗಿ – ತಕ್ಷಣವೇ ಅಥವಾ ಹೋರಾಟಗಳಿಲ್ಲದೆ ಅಲ್ಲದಿದ್ದರೂ – ಕಾರ್ಡಿನಲ್‌ಗಳಿಗೆ ಮಾತ್ರ ಚುನಾಯಿಸುವ ಹಕ್ಕು ಮಿತಿಗೊಳ್ಳುವಂತಾಯಿತು.

ಹನ್ನೊಂದನೆಯ ಶತಮಾನದ ಉತ್ತರಾರ್ಧದುದ್ದಕ್ಕೂ ನಡೆದುಕೊಂಡು ಬಂದ ಈ ಸುಧಾರಕ ಚಳವಳಿಯು ಆಬಟ್, ಬಿಷಪ್ ಮತ್ತು ಆರ್ಚ್‌ಬಿಷಪ್ ಇವರುಗಳನ್ನು ಸಾಮಂತ ಶ್ರೀಮಂತರಿಂದ ಬೇರೆ ಮಾಡುವಲ್ಲಿ ಹಾಗೂ ಅವರ ನೇಮಕದಲ್ಲಿ ಪೋಪ್ ಅಭಿಪ್ರಾಯಕ್ಕೆ ಅವಕಾಶವಿರುವಂತೆ ಮಾಡುವಲ್ಲಿ ಬಹುಪಾಲು ಯಶಸ್ಸು ಪಡೆಯಿತು. ಅವನ ಅಭಿಪ್ರಾಯಕ್ಕೆ ಅವಕಾಶವಿಲ್ಲದಿದ್ದಾಗ ಅವನು ಧರ್ಮ ದುರುಪಯೋಗದ ಕಳಂಕವನ್ನು ಕಾಣುವುದು ಸಾಮಾನ್ಯವಾಗಿರುತ್ತಿತ್ತು. ಇದರಿಂದ ಸಾಮಾನ್ಯರು ಪ್ರಭಾವಿತರಾದರು, ಚರ್ಚ್‌ನ ಬಗ್ಗೆ ಅವರ ಗೌರವ ಹೆಚ್ಚಿತು. ಬ್ರಹ್ಮಚರ್ಯವನ್ನು ಕಡ್ಡಾಯಗೊಳಿಸವಲ್ಲಿ ಯಶಸ್ಸು ಗಳಿಸಿದ ಮೇಲೆ, ಪಾದ್ರಿಗಳು ಉಳಿದ ಲೋಕದಿಂದ ಬೇರೆಯೇ ಅದರು, ವಿರಕ್ತಿಯ ಕಾರಣದಿಂದಾಗುವಂತೆಯೇ ಅವರ ಅಧಿಕಾರ ದಾಹ ಪಟುಗೊಂಡಿತು. ಇದರಿಂದ ಪ್ರಮುಖ ಧರ್ಮಗುರುಗಳಲ್ಲಿ ಗುರಿಸಾಧನೆಗಾಗಿ ನೈತಿಕ ಉತ್ಸಾಹ ತುಂಬಿಕೊಂಡಿತು, ಅನೂಚಾನವಾದ ಭ್ರಷ್ಟತೆಯಿಂದ ಲಾಭ ಪಡೆದವರನ್ನು ಹೊರತುಪಡಿಸಿ ಮಿಕ್ಕೆಲ್ಲರೂ ಅದರಲ್ಲಿ ನಂಬಿಕೆ ತಳೆದರು; ಇದು ಗುರಿಸಾಧನೆಗಾಗಿ ಪೋಪ್‌ನ ಅಧಿಕಾರವನ್ನು ಹೆಚ್ಚಿಸುವ ಒಂದು ಪ್ರಮುಖ ಸಾಧನವಾಯಿತು.

ಪ್ರಚಾರವನ್ನವಲಂಬಿಸಿದ ಅಧಿಕಾರವು ಮೊದಮೊದಲು ಸಾಮಾನ್ಯವಾಗಿ ಮಹಾ ಧೈರ್ಯ ಮತ್ತು ಬಲಿದಾನಗಳನ್ನು ನಿರೀಕ್ಷಿಸುತ್ತದೆ. ಈ ಗುಣಗಳಿಂದಾಗಿ ಒಮ್ಮೆ ಗೌರವವು ದೊರಕಿತೆಂದರೆ, ಅವುಗಳನ್ನು ಆಮೇಲೆ ದೂರಮಾಡಬಹುದು ಮತ್ತು ಗಳಿಸಿದ ಗೌರವವನ್ನು ಪ್ರೇಯಸ್ಸಿಗಾಗಿ ಬಳಸಿಕೊಳ್ಳಬಹುದು. ಕಾಲಕ್ರಮೇಣ, ಗೌರವವು ಕುಂದಿದಂತೆ ಅದರಿಂದಾಗಿ ಗಳಿಸಿದ್ದ ಅನುಕೂಲಗಳೂ ಕ್ಷೀಣಿಸುತ್ತವೆ. ಕೆಲವೇಲೆ ಈ ಪ್ರಕ್ರಿಯೆಗೆ ಹಲವು ವರ್ಷಗಳೇ ಬೇಕಾಗಬಹುದು, ಕೆಲವೊಮ್ಮೆ ಸಾವಿರಾರು ವರ್ಷಗಳೇ ಆವಶ್ಯಕವಾಗಬಹುದು, ಆದರೆ ಸತ್ವತಃ ಆಗುವುದು ಹೀಗೆಯೇ.

ಏಳನೆಯ ಗ್ರೆಗರಿ ಸಾಧುಸ್ವಭಾವದವನೇನಲ್ಲ. ಅವನಿಗೆ ಪ್ರಿಯವಾಗಿದ್ದುದು "ರಕ್ತದಿಂದ ಕತ್ತಿಯನ್ನು ಹೊರತೆಗೆವವನು ನಾಶವಾಗಲಿ" ಎಂಬ ಮಾತು. ಇದರಿಂದಾಗಿ ಲೋಲುಪ ಜನರು ಧರ್ಮಬೋಧೆಯನ್ನು ಮಾಡುವುದನ್ನು ತಪ್ಪಿಸುತ್ತದೆ ಎಂದವನು ವಿವರಿಸುತ್ತಿದ್ದ. ಇದು ಪ್ರಚಾರಶಕ್ತಿಯ ಬಗೆಗಿದ್ದ ಅವನ ಅಭಿಪ್ರಾಂಯಗಳ ಸಿಂಧುತ್ವವನ್ನು ಪ್ರತಿಪಾದಿಸುತ್ತದೆ.

ಪೋಪ್ ಸ್ಥಾನವನ್ನು (೧೧೫೪–೫೯) ಅಲಂಕರಿಸಿದ್ದ ಏಕೈಕ ಇಂಗ್ಲಿಷ್ ವ್ಯಕ್ತಿಯಾದ ನಿಕೋಲಾಸ್ ಬ್ರೇಕ್‌ಸ್ಪಿಯರ್ ಬೇರೊಂದು ಪ್ರಸಂಗದಲ್ಲಿ ಪೋಪ್‌ನ ದೈವವಿದ್ಯೆಯ ಅಧಿಕಾರವನ್ನು ತೋರಿಸುತ್ತಾನೆ. ಅಬೆಲಾರ್ಡ್‌ನ ಶಿಷ್ಯನಾದ ಆರ್ನಲ್ಡ್ ಆಫ್ ಬ್ರೆಸಿಕ "ತೋಟತುಡಿಕೆ ಹೊಂದಿದ ಪಾದ್ರಿಗಳು, ಉಂಬಳಿ ಪಡೆದ ಬಿಷಪ್‌ಗಳು, ಆಸ್ತಿ ಹೊಂದಿದ ಸನ್ಯಾಸಿಗಳು ಉದ್ಧರವಾಗುವುದಿಲ್ಲ" ಎಂದು ಬೋಧಿಸಿದ. ಇದು ಸನಾತನ ಸಿದ್ಧಾಂತವೇನಲ್ಲ. ಅವನಿಗೆ ಸಂತ ಬರ್ನಾರ್ಡ್ ಹೀಗೆ ಹೇಳಿದ: "ತಿಂದುಕುಡಿದು ಮಾಡದ ಮನುಷ್ಯನು ಮಾತ್ರವೇ ಆತ್ಮಗಳ ರಕ್ತಕ್ಕಾಗಿ ದೆವ್ವದ ಹಾಗೆ ಹಾತೊರೆಯುತ್ತಾನೆ". ಆದರೆ ಸಂತ ಬರ್ನಾರ್ಡ್ ತನ್ನ ಪರಿಶುದ್ಧತೆಯನ್ನು ಒಪ್ಪಿಕೊಂಡಿದ್ದ; ಇದರಿಂದಾಗಿ ಅವನು ೧೧೪೩ ರಲ್ಲಿ ತನ್ನನ್ನು ದೇಶಭ್ರಷ್ಟಗೊಳಿಸುವಲ್ಲಿ ಸಫಲರಾಗಿದ್ದ ಪೋಪ್ ಮತ್ತು ಕಾರ್ಡಿನಲ್‌ಗಳ ಜೊತೆಗಿನ ಸಂಘರ್ಷದಲ್ಲಿ ರೋಮನ್‌ರ ನೆರವಿಗೆ ಬಂದ. ಅವನ ಸಿದ್ಧಾಂತಕ್ಕೆ ನೈತಿಕ ಬೆಂಬಲಕ್ಕಾಗಿ ಪ್ರಯತ್ನಿಸಿದ, ಪುನರುತ್ಥಾನಗೊಂಡ ರೋಮನ್ ಗಣರಾಜ್ಯವನ್ನು ಬೆಂಬಲಿಸಿದ. ಆದರೆ ನಾಲ್ಕನೆಯ ಏಡ್ರಿಯನ್ (ಬ್ರೇಕ್‌ಸ್ಪಿಯರ್), ಕಾರ್ಡಿನಲ್ ಒಬ್ಬನ ಕೊಲೆಯ ಸಂದರ್ಭವನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ರೋಮ್ ಅನ್ನು ಪವಿತ್ರ ಸಪ್ತಾಹದಲ್ಲಿ ಬಹಿಷ್ಕಾರಕ್ಕೊಳಪಡಿಸಿದ. ಗುಡ್ ಫ್ರೈಡೆ ಹತ್ತಿರ ಬಂದಂತೆ, ಸೆನೇಟ್ ಅನ್ನು ದೈವವಿದ್ಯೆಯ ಭಯೋತ್ಪಾದಕತೆ ಆವರಿಸಿತು, ಅದು

ದೈನ್ಯದಿಂದ ಶರಣಾಯಿತು. ಸಮ್ರಾಟನಾದ ಫ್ರೆಡೆರಿಕ್ ಬಾರ್ಬರೋಸಾನ ನೆರವಿನಿಂದ ಆರ್ನಾಲ್ಡ್‌ನನ್ನು ಬಂಧಿಸಲಾಯಿತು; ಅವನನ್ನು ಗಲ್ಲಿಗೇರಿಸಿ ಹೆಣವನ್ನು ಸುಡಲಾಯಿತು, ಬೂದಿಯನ್ನು ಟೈಬರ್‌ನಲ್ಲಿ ಸುರಿಯಲಾಯಿತು. ಹೀಗಾಗಿ ಪಾದ್ರಿಗಳಿಗೆ ಶ್ರೀಮಂತರಾಗುವ ಹಕ್ಕು ಇದೆ ಎಂಬುದನ್ನು ಪ್ರತಿಪಾದಿಸಲಾಯಿತು. ಸಮ್ರಾಟನಿಗೆ ಕೃತಜ್ಞತೆ ಸಲ್ಲಿಸಲು ಪೋಪ್ ಅವನಿಗೆ ಸೈಂಟ್ ಪೀಟರ್ಸ್‌ನಲ್ಲಿ ಕಿರೀಟಧಾರಣೆ ಮಾಡಿದ. ಸಮ್ರಾಟನ ಪಡೆಗಳು ಹೆಚ್ಚು ಉಪಯುಕ್ತವೆನಿಸಿದವು, ಆದರೆ ಚರ್ಚ್ ಅಧಿಕಾರ–ಐಶ್ವರ್ಯಗಳನ್ನು ಪಡೆಯಲು ಲೌಕಿಕ ಬೆಂಬಲಕ್ಕಿಂತ ಹೆಚ್ಚಿನ ನೆರವು ನೀಡಿದ್ದ ಕ್ಯಾಥೊಲಿಕ್ ಮತದಷ್ಟಲ್ಲ.

ಬ್ರೆಸಿಯದ ಆರ್ನಾಲ್ಡ್‌ನ ಸಿದ್ಧಾಂತಗಳು ಪೋಪ್ ಮತ್ತು ಸಮ್ರಾಟ ಇಬ್ಬರಿಗೂ ಬೇಕಾಗುವಂತಿದ್ದವು; ಸುವ್ಯವಸ್ಥೆಯನ್ನು ಕಾಪಾಡಲು ಇಬ್ಬರ ಆವಶ್ಯಕತೆಯೂ ಇದೆಯೆಂಬುದನ್ನೂ ಇಬ್ಬರೂ ಕಂಡುಕೊಂಡರು. ಆದರೆ ಆರ್ನಾಲ್ಡ್ ಅನ್ನು ಮೂಲೆಗುಂಪಾಗಿಸಿದಾಗ, ಅನಿವಾರ್ಯವಾದ ಜಗಳ ಮತ್ತೆ ಬೇಗ ಶುರುವಾಯಿತು. ಮುಂದೆ ನಡೆದ ದೀರ್ಘ ಕದನದಲ್ಲಿ ಪೋಪ್‌ಗೆ ಹೊಸ ಬೆಂಬಲಿಗ ದೊರಕಿದ್ದ, ಅದೇ ಲೊಂಬಾರ್ಡ್ ಲೀಗ್. ಲೊಂಬಾರ್ಡಿಯ ನಗರಗಳು, ವಿಶೇಷವಾಗಿ ಮಿಲಾನ್, ಶ್ರೀಮಂತವೂ ವಾಣಿಜ್ಯಪ್ರಮುಖವೂ ಆಗಿದ್ದವು. ಅವುಗಳು ಆರ್ಥಿಕಾಭಿವೃದ್ಧಿಯ ಮುಂಚೂಣಿಯಲ್ಲಿದ್ದವು. ಈ ಅಂಶವನ್ನು ಇಂಗ್ಲಿಷರು 'ಲೊಂಬಾರ್ಡ್ ರಸ್ತೆ' ಎಂದು ಹೆಸರಿಸುವುದರ ಮೂಲಕ ಚಿರಸ್ಥಾಯಿಯಾಗಿಸಿದ್ದಾರೆ. ಸಮ್ರಾಟನೆಂದರೆ ಊಳುಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯೆನಿಸಿದ; ಈ ಹೊತ್ತಿಗೆ ಬೂರ್ಜ್ವಾ ಬಂಡವಾಳಶಾಹಿಯು ಅದರ ವಿರೋಧಿಯೆನಿಸಿತ್ತು. ಚರ್ಚ್ ಬಡ್ಡಿಪದ್ಧತಿಯನ್ನು ನಿಷೇಧಿಸಿದ್ದರೂ ಪೋಪ್ ಸಾಲಗಾರನಾಗಿದ್ದ, ಉತ್ತರ ಇಟಲಿಯ ವಹಿವಾಟುದಾರರ ಬಂಡವಾಳವು ಸಹಾಯಕವಾದುದರಿಂದ ಅವನು ಧಾರ್ಮಿಕ ನಿಯಮವನ್ನು ಮೆದುಗೊಳಿಸಬೇಕಾಯಿತು. ಪೋಪ್ ಪ್ರಭುತ್ವದೊಡನೆ ಬಾರ್ಬೋಸಾನ ಸಂಘರ್ಷವು ಇಪ್ಪತ್ತು ವರ್ಷಗಳ ಕಾಲ ಮುಂದುವರಿದು, ಕೊನೆಗೆ ಸಮಸಮವಾಗಿ ಕೊನೆಗಂಡಿತು; ಲೊಂಬಾರ್ಡ್‌ನ ನಗರಗಳ ಕಾರಣದಿಂದಲೇ ಸಮ್ರಾಟನಿಗೆ ಗೆಲವು ಸಿಕ್ಕದಾಯಿತು.

ಪೋಪ್ ಪ್ರಭುತ್ವ ಮತ್ತು ಸಮ್ರಾಟ ಎರಡನೆಯ ಫ್ರೆಡೆರಿಕ್‌ರ ನಡುವಣ ಸಂಘರ್ಷದಲ್ಲಿ ಅಂತಿಮ ಗೆಲವು ಪೋಪ್ ಪರವಾಗಿ ಆಗುವುದರಲ್ಲಿದುದಕ್ಕೆ ಮುಖ್ಯವಾಗಿ ಎರಡು ಕಾರಣಗಳು: ಉತ್ತರ ಇಟಲಿಯ ವಾಣಿಜ್ಯ ಮನೋಭಾವದ ನಗರಗಳು, ಅಂದರೆ ಟಸ್ಕನಿ ಮತ್ತು

ಲೊಂಬಾರ್ಡಿ, ಊಳಿಗಮಾನ್ಯ ಪದ್ಧತಿಗೆ ವಿರುದ್ಧವಾಗಿದ್ದುದು ಹಾಗೂ ಫ್ರಾನ್ಸಿಸ್ಕನ್‌ಗಳು ಪ್ರಚೋದಿಸಿದ್ದ ಪವಿತ್ರೋತ್ಸಾಹಗಳು. ಸಂತ ಫ್ರಾನ್ಸಿಸ್ ಬಡತನ ಮತ್ತು ವಿಶ್ವಪ್ರೇಮಗಳನ್ನು ಬೋಧಿಸಿದ; ಆದರೆ ಅವನು ಸತ್ತ ಕೆಲವೇ ವರ್ಷಗಳಲ್ಲಿ ಅವನ ಅನುಯಾಯಿಗಳು ಚರ್ಚ್‌ನ ಆಸ್ತಿಯನ್ನು ರಕ್ಷಿಸುವ ಘೋರ ಯುದ್ಧದಲ್ಲಿ ಸಂಬಳದಾರ ಸೈನಿಕರಂತೆ ನಡೆದುಕೊಂಡರು. ಸಮ್ರಾಟನು ಸೋತದ್ದಕ್ಕೆ ಮುಖ್ಯ ಕಾರಣ ಅವನು ತನ್ನ ಉದ್ದೇಶಕ್ಕೆ ಪಾವಿತ್ರ್ಯ ಅಥವಾ ನೈತಿಕತೆಯ ಮುಸುಕನ್ನು ಹಾಕಲು ಸಾಧ್ಯವಾಗದಿದ್ದುದು.

ಇದೇ ವೇಳೆಗೆ, ಈ ಸಂಘರ್ಷದಲ್ಲಿ ಪೋಪ್‌ಗಳು ಅನುಸರಿಸಿದ್ದ ಯುದ್ಧಕ್ರಮಗಳಿಂದಾಗಿ ಅನೇಕರು ನೈತಿಕ ನೆಲೆಗಟ್ಟಿನ ಮೇಲೆ ಪೋಪ್ ಆಡಳಿತದ ವಿರೋಧಿಗಳಾದರು. ಸಾವಿನ ಸಂದರ್ಭದಲ್ಲಿ ಫ್ರೆಡೆರಿಕ್‌ನ ಎದುರಾಳಿಯಾಗಿದ್ದ ಪೋಪ್ ನಾಲ್ಕನೆಯ ಇನ್ನೋಸೆಂಟ್ ಬಗ್ಗೆ 'ಕೇಂಬ್ರಿಜ್ ಮಿಡೈವಲ್ ಹಿಸ್ಟರಿ' (ಸಂಪುಟ ಆರು, ಪು. ೧೭೬) ಹೀಗೆನ್ನುತ್ತದೆ:

"ಪೋಪ್ ಸ್ಥಾನದ ಬಗ್ಗೆ ಅವನು ಹೊಂದಿದ್ದ ಕಲ್ಪನೆಯು ತನ್ನ ಹಿಂದಿನ ಬೇರಾವುದೇ ಪೋಪ್‌ನದಕ್ಕಿಂತ ಹೆಚ್ಚು ಲೌಕಿಕವಾಗಿತ್ತು. ತನ್ನ ದೌರ್ಬಲ್ಯಗಳನ್ನವನು ರಾಜಕೀಯ ಸ್ವರೂಪದ್ದೆಂದು ಭಾವಿಸಿದ್ದ; ಅದಕ್ಕನುಗುಣವಾಗಿ ಅವುಗಳ ಪರಿಹಾರವಾಗಿ ಅವನು ಕಂಡುಕೊಂಡ ಕ್ರಮಗಳೂ ರಾಜಕೀಯ ಸ್ವರೂಪದ್ದಾಗಿದ್ದವು. ತನ್ನ ಆಧ್ಯಾತ್ಮಿಕ ಅಧಿಕಾರವನ್ನವನು ಹಣ ಸಂಗ್ರಹಣೆ, ಸ್ನೇಹಸಂಪಾದನೆ, ಶತ್ರುದಮನಗಳಿಗೆ ನಿರಂತರವಾಗಿ ಬಳಸಿಕೊಂಡ, ತನ್ನ ಸ್ವೇಚ್ಛಾಚಾರದಿಂದಾಗಿ ಪೋಪ್ ಅಧಿಕಾರದ ಬಗ್ಗೆ ಇತರೆಡೆಗಳಲ್ಲಿಯೂ ಅಗೌರವ ಮೂಡುವಂತೆ ನಡೆದುಕೊಂಡ. ಅವನ ಕಾರ್ಯವೈಖರಿಯು ಅಪವಾದಗಳಿಗೆ ಎಡೆಗೊಡುವಂತಿತ್ತು. ತನ್ನ ಆಧ್ಯಾತ್ಮಿಕ ಹಾಗೂ ಸ್ಥಾನಿಕ ಕರ್ತವ್ಯಗಳನ್ನು ಅವಗಣಿಸಿ, ಚರ್ಚ್ ಪಡೆದ ದೇಣಿಗೆಯನ್ನು ಪೋಪ್‌ನ ಆದಾಯವೆಂಬಂತೆ ವೆಚ್ಚಮಾಡಿದ, ರಾಜಕೀಯ ಪ್ರತಿಫಲಗಳಿಗಾಗಿ ಬಳಸಿಕೊಂಡ. ನಾಲ್ಕು ಮಂದಿ ಪೋಪ್ ಅನುಯಾಯಿಗಳು ಒಬ್ಬರಾದ ಮೇಲೊಬ್ಬರಂತೆ ಉಂಬಳಿಗಾಗಿ ಕಾಯುತ್ತಿದ್ದರು. ಅಂತಹ ಕಾರ್ಯವಿಧಾನದಿಂದಾಗಿ ನೇಮಕಾತಿಗಳು ಸಹಜವಾಗಿಯೇ ದೋಷಯುಕ್ತವಾದವು; ಅದಕ್ಕಿಂತ ಮಿಗಿಲಾಗಿ, ತನ್ನ ಯುದ್ಧ ಮತ್ತು ರಾಜನೈತಿಕ ಪ್ರತಿನಿಧಿಗಳ ಆಯ್ಕೆಯು ಸಂಪೂರ್ಣ ಲೌಕಿಕವಾಗಿರುವುದರ ಬದಲು ಪಕ್ಷಪಾತದಿಂದ ಕೂಡಿರುತ್ತಿತ್ತು... ತಾನೇ ಮಾಡಿಕೊಂಡ ಗೌರವಹೀನತೆ ಮತ್ತು ಆಧ್ಯಾತ್ಮಿಕಪತನಗಳ ಬಗ್ಗೆ ಇನ್ನೋಸೆಂಟ್‌ಗೆ ಅರಿವೇ ಇರಲಿಲ್ಲ. ಅವನ ಆಶಯಗಳು

ಒಳ್ಳೆಯವಾಗಿದ್ದವೇ ಹೊರತು ಅವನ ತತ್ವಗಳಲ್ಲ. ಧೈರ್ಯ ಮತ್ತು ದೃಢನಿರ್ಧಾರ, ಚಾಣಾಕ್ಷತನ, ನಿರುದ್ವಿಗ್ನತೆಗಳಿಂದಾಗಿ ಎಂತಹ ಆಪತ್ತು ಅಥವಾ ಅದೃಷ್ಟದ ಸನ್ನಿವೇಶದಲ್ಲಿಯೂ ಅವನು ಎಂದಿಗೂ ವಿಚಲಿತನಾಗುತ್ತಿರಲಿಲ್ಲ. ನಯವಂಚಕ ಅಧಾರ್ಮಿಕತೆಯಿಂದಲೇ ತನ್ನ ಗುರಿಸಾಧನೆಗಾಗಿ ಅವನು ಪ್ರಯತ್ನಿಸಿದ, ಇದರಿಂದಾಗಿ ಚರ್ಚ್‌ನ ಗುಣಮಟ್ಟ ಕುಸಿಯಿತು. ಆಗುಹೋಗುಗಳ ಮೇಲೆ ಅವನು ಬೀರುತ್ತಿದ್ದ ಪ್ರಭಾವ ಅಪರಿಮಿತ. ಅವನಿಂದಾಗಿ ಸಾಮ್ರಾಜ್ಯ ಪತನಗೊಂಡಿತು; ಪೋಪ್ ಸ್ಥಾನಮಾನಕ್ಕೆ ಚ್ಯುತಿಯುಂಟಾಗತೊಡಗಿತು; ಅವನು ಇಟಲಿಯ ಭವಿಷ್ಯವನ್ನು ರೂಪಿಸಿದ."

ನಾಲ್ಕನೆಯ ಇನ್ನೋಸೆಂಟ್‌ನ ಮರಣದಿಂದ ಪೋಪ್ ಧೋರಣೆಗಳಲ್ಲೇನೂ ಬದಲಾವಣೆಗಳಾಗಲಿಲ್ಲ. ಅವನ ನಂತರ ಬಂದ ನಾಲ್ಕನೆಯ ಅರ್ಬನ್ ಫ್ರೆಡೆರಿಕ್‌ನ ಮಗ ಮ್ಯಾನ್‌ಫ್ರೆಡ್ ಜೊತೆಗಿನ ತನ್ನ ಹೋರಾಟವನ್ನು ಮುಂದುವರಿಸಿ ಸಂಪೂರ್ಣ ಯಶಸ್ವಿಯಾದ, ಇನ್ನೂ ಏರುಪೇರುಗಳನ್ನು ಕಾಣುತ್ತ ಬೆಳೆಯುತ್ತಿದ್ದ ಇಟಲಿಯ ಬಂಡವಾಳಶಾಹಿಯ ಬೆಂಬಲವನ್ನು ಗಳಿಸಿದ. ಈ ಪ್ರಸಂಗವು ಪ್ರಚಾರಶಕ್ತಿಯು ಆರ್ಥಿಕಸಾಮರ್ಥ್ಯವಾಗಿ ಬದಲಾವಣೆಗೊಂಡ ಬಗೆಯ ಅತ್ಯುತ್ತಮ ಉದಾಹರಣೆಯಾಗಿದೆ. ಪೋಪ್ ಆದಾಯವನ್ನು ಸಂಗ್ರಹಿಸುವ ಮೂಲಕ ತಮ್ಮ ವಹಿವಾಟುಗಳನ್ನು ವಿಸ್ತರಿಸಿಕೊಂಡಿದ್ದ ಬಹುತೇಕ ಬ್ಯಾಂಕರುಗಳು ಇಷ್ಟು ಹೊತ್ತಿಗಾಗಲೇ ಪೋಪ್‌ನ ಪರವಾಗಿಬಿಟ್ಟಿದ್ದರು. ಆದರೆ ಸಿಯೆನದಂತಹ ಕೆಲವು ನಗರಗಳಲ್ಲಿ ಗಿಬೆಲ್ಲೈನ್[೧] (ಉಝಝಝಚಿಟಿಜ) ಮನೋಭಾವವು ಎಷ್ಟು ತೀವ್ರವಾಗಿತ್ತೆಂದರೆ, ಮೊದಮೊದಲು ಬ್ಯಾಂಕರುಗಳು ಮ್ಯಾನ್‌ಫ್ರೆಡ್‌ನ ಪರವಾಗಿದ್ದರು. ಇಂತಹ ಪ್ರಸಂಗ ಬಂದಾಗಲೆಲ್ಲ, ಸಾಲವನ್ನು ಮರುಪಾವತಿ ಮಾಡದಿರುವುದು ತಮ್ಮ ಧಾರ್ಮಿಕ ಕರ್ತವ್ಯದಂತೆ ಭಾವಿಸಬೇಕೆಂದು ಸುಸ್ತಿದಾರರಿಗೆ ಹೇಳುತ್ತಿದ್ದ; ಅವರು ತಕ್ಷಣ ಕರೆಯು ಅಧಿಕೃತವೆಂಬಂತೆ ಅದಕ್ಕೆ ಓಗೊಡುತ್ತಿದ್ದರು. ಇದರಿಂದಾಗಿ ಸಿಯೆನ ಇಂಗ್ಲಿಷ್ ವಹಿವಾಟನ್ನು ಕಳೆದುಕೊಳ್ಳುವಂತಾಯಿತು. ವಿನಾಶದಿಂದ ಪಾರಾಗಲು ಇಟಲಿಯಾದ್ಯಂತ ಬ್ಯಾಂಕರುಗಳು ಪೋಪ್‌ತಂತ್ರಕ್ಕೆ ಮಣಿದು ಗೆಲ್ಫ್ ಪಕ್ಷವನ್ನು ಬೆಂಬಲಿಸಿದರು.[೨]

---

[೧] ಒಂದು ಸಾಮ್ರಾಜ್ಯವಾದಿ ಪಕ್ಷದ ಹೆಸರು

[೨] ನೋಡಿ, 'ಕೇಂಬ್ರಿಜ್ ಮಿಡ್ನೈವಲ್ ಹಿಸ್ಟರಿ', ಸಂಪುಟ ಏಳು, ಪು.೧೮೨

ಈ ತಂತ್ರಗಳಿಂದ ಅವರು ಬ್ಯಾಂಕರುಗಳ ಬೆಂಬಲವನ್ನು ಗಳಿಸಲು ಸಾಧ್ಯವಾದರೂ, ಪೋಪ್ ಅಂದರೆ ದೈವಿಕತೆಯ ಪ್ರತೀಕ ಎಂಬ ಗೌರವವನ್ನು ಉಳಿಸಿಕೊಳ್ಳಲು ಮಾತ್ರ ಅಸಾಧ್ಯವಾಯಿತು.

ಪಾಶ್ಚಾತ್ಯ ಸಾಮ್ರಾಜ್ಯದ ಪತನ ಮತ್ತು ಹದಿನಾರನೆಯ ಶತಮಾನದ ಕೊನೆ ಇವುಗಳ ನಡುವಣ ಅವಧಿಯನ್ನು ಎರಡು ಸಂಪ್ರದಾಯಗಳ ಮಧ್ಯದ ಪೈಪೋಟಿಯ ಕಾಲವೆಂಬ ದೃಷ್ಟಿಯಿಂದಲೂ ಪರಿಶೀಲಿಸಬಹುದು. ಅವುಗಳೆಂದರೆ, ಸಾಮ್ರಾಜ್ಯಶಾಹಿ ರೋಮ್ ಮತ್ತು ಟ್ಯೂಟನ್ ಶ್ರೀಮಂತವರ್ಗಗಳು; ಮೊದಲನೆಯದು ಚರ್ಚ್‌ನಲ್ಲಿ ಸಮೀಕೃತವಾಗಿದ್ದರೆ, ಎರಡನೆಯದು ಸರ್ಕಾರದಲ್ಲಿ. ಪವಿತ್ರ ರೋಮನ್ ಸಮ್ರಾಟರು ಸಾಮ್ರಾಜ್ಯಶಾಹಿ ಸಂಪ್ರದಾಯವನ್ನು ಒಳಗೊಳ್ಳಲು ಪ್ರಯತ್ನಿಸಿ ವಿಫಲರಾದರು. ಎರಡನೆಯ ಫ್ರೆಡೆರಿಕ್‌ನನ್ನು ಹೊರತುಪಡಿಸಿ, ಅವರು ರೋಮನ್ ಸಂಪ್ರದಾಯವನ್ನು ಅರ್ಥಮಾಡಿಕೊಳ್ಳಲಾರದ ಮೌಢ್ಯವನ್ನು ಹೊಂದಿದ್ದರು, ಅಲ್ಲದೆ ತಮಗೆ ಪರಿಚಿತವಾಗಿದ್ದ ರಾಜಕೀಯ ಸಂಸ್ಥೆಯಾದ ಸಾಮಂತಪ್ರಭುತ್ವವು ಜರ್ಮಾನಿಕ್ ಆಗಿತ್ತು. ಸಮ್ರಾಟರ ಸೇವೆಯಲ್ಲಿದ್ದವರನ್ನು ಒಳಗೊಂಡಂತೆ, ವಿದ್ಯಾವಂತ ಜನರ ಭಾಷೆಯು ಪ್ರಾಚೀನ ಕಾಲದ ಪಾಂಡಿತ್ಯಪೂರ್ಣತೆಯಿಂದ ಮೂಡಿಬಂದುದಾಗಿತ್ತು. ಕಾನೂನುಗಳು ರೋಮನ್, ಆದರೆ ತಾತ್ವಿಕತೆ ಮಾತ್ರ ಗ್ರೀಕ್ ಆಗಿದ್ದವು, ಟ್ಯೂಟಾನಿಕ್ ಮೂಲದ ರೂಢಿಗಳು ಮಾತ್ರ ಸಭ್ಯ ಮಾತಿನಲ್ಲಿ ಹೇಳಲಾರದಂತಹವಾಗಿದ್ದವು. ನಮ್ಮ ಕಾಲದ ಅಭಿಜಾತ ವಿದ್ವಾಂಸನೊಬ್ಬ ಆಧುನಿಕ ಕೈಗಾರಿಗೆಳ ಬಗ್ಗೆ ಲ್ಯಾಟಿನ್ ಭಾಷೆಯಲ್ಲಿ ವಿವರಣೆ ನೀಡಲು ಎಂತಹ ಪಾಡುಪಡಬೇಕೋ ಅಂತಹುದೇ ಪರಿಸ್ಥಿತಿ ಆಗ ಇತ್ತು. ಲ್ಯಾಟಿನ್ ಬದಲು ಆಧುನಿಕ ಭಾಷೆಗಳನ್ನು ಅಳವಡಿಸಿಕೊಂಡ ರಿಫ಼ರ್ಮೆಷನ್‌ೀ ಕಾಲದವರೆವಿಗೂ ಪಾಶ್ಚಾತ್ಯ ಯೂರೋಪ್‌ನ ನಾಗರಿಕತೆಯು ಸಾಹಿತ್ಯಕ ಹಾಗೂ ಬೌದ್ಧಿಕ ಅಭಿವ್ಯಕ್ತಿಯನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗಲಿಲ್ಲ.

ಹೊಹೆನ್‌ಸ್ಟಾಫ಼ೆನ್‌ನ ಪತನಾನನಂತರ, ಕೆಲವು ದಶಕಗಳ ಕಾಲ ಪಾಶ್ಚಾತ್ಯ ಜಗತ್ತಿನ ಮೇಲೆ ಚರ್ಚ್ ಇಟಲಿಯ ಪ್ರಭುತ್ವವನ್ನು ಪುನಃಸ್ಥಾಪಿಸಿದಂತೆ ಕಾಣಿಸಿತು. ಹಣದ ಮಾನದಂಡದಿಂದ ಅಳೆಯುವುದಾದರೆ, ಈ ನಿಯಮವು ಕನಿಷ್ಠ ಪಕ್ಷ ಆಂಟೋನೈನ್‌ಗಳ ಕಾಲದಲ್ಲಿದ್ದಷ್ಟೇ ದೃಢವಾಗಿತ್ತು; ಇಂಗ್ಲಂಡ್ ಮತ್ತು ಜರ್ಮನಿಗಳಿಂದ ರೋಮ್ ಕಡೆಗೆ ಹರಿದ ಆದಾಯವು ರೋಮನ್ ಸೈನ್ಯದ ವಸೂಲಿಗಿಂತ

ತುಂಬ ಹೆಚ್ಚಾಗಿತ್ತು. ಈ ವಸೂಲಿಯನ್ನು ಪೋಪ್ ಸ್ಥಾನದ ಬಗೆಗಿದ್ದ ಗೌರವದ ಕಾರಣ ಮಾಡಲಾಗುತ್ತಿತ್ತೇ ಹೊರತು ಸೈನ್ಯದ ಶಸ್ತ್ರಬಲದಿಂದಲ್ಲ.

ಪೋಪ್‌ಗಳು ಆವಿಗ್ನಾನ್‌ಗೆ ಹೋದನಂತರ ತಾವು ಕಳೆದ ಮೂರು ಶತಮಾನಗಳಲ್ಲಿ ಗಳಿಸಿದ್ದ ಗೌರವವನ್ನು ಕಳೆದುಕೊಳ್ಳಲಾರಂಭಿಸಿದರು. ಇದಕ್ಕೆ ಕಾರಣ ಅವರು ಫ್ರಾನ್ಸ್‌ನ ದೊರೆಗೆ ಸಂಪೂರ್ಣವಾಗಿ ಅಧೀನರಾಗಿದ್ದುದು ಮಾತ್ರವಲ್ಲ, ಟೆಂಪ್ಲರ್‌ರಂತಹವರನ್ನು ದಮನ ಮಾಡುವ ಕಾರ್ಯದಂತಹ ಮಹಾದೌರ್ಜನ್ಯಗಳಲ್ಲಿ ಅವರು ಭಾಗಿಗಳಾಗಿದ್ದುದು ಕೂಡ ಸೇರಿತ್ತು. ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದ್ದ ನಾಲ್ಕನೆಯ ಫಿಲಿಪ್ ಅವರ ಭೂಮಿಯನ್ನೆಲ್ಲ ವಶಪಡಿಸಿಕೊಂಡ. ವಿನಾಕಾರಣ ಅವರ ಮೇಲೆ ಧರ್ಮದ್ರೋಹದ ಆಪಾದನೆಯನ್ನು ಹೊರಿಸಲು ನಿರ್ಧರಿಸಲಾಯಿತು. ಫ್ರಾನ್ಸ್‌ನಲ್ಲಿದ್ದವರನ್ನು ಪೋಪ್‌ನ ಸಹಕಾರದಿಂದ ವಶಕ್ಕೆ ತೆಗೆದುಕೊಳ್ಳಲಾಯಿತು, ತಾವು ಸೈತಾನನಿಗೆ ಗೌರವ ತೋರಿಸಿದೆವೆಂದು ಒಪ್ಪಿಕೊಂಡು ಶಿಲುಬೆಗೆ ಉಗುಳುವವರೆಗೂ ಅವರಿಗೆ ಚಿತ್ರಹಿಂಸೆ ನೀಡಲಾಯಿತು, ಸಾಕಷ್ಟು ಮಂದಿಯನ್ನು ಸುಡಲಾಯಿತು; ರಾಜ ಅವರ ಆಸ್ತಿಗಳನ್ನೆಲ್ಲ ವಿಲೇವಾರಿ ಮಾಡಿದ, ಅದರಲ್ಲಿ ಪೋಪ್‌ಗೂ ಪಾಲುಹೋಯಿತು, ಅನ್ನಿ. ಇಂತಹ ಕೃತ್ಯಗಳಿಂದಾಗಿ ಪೋಪ್ ಸ್ಥಾನದ ನೈತಿಕ ಅಧಃಪತನ ಆರಂಭಗೊಂಡಿತು.

ಚರ್ಚ್‌ನ ಮಹಾ ಛಿದ್ರವು (ಡಿಜಚಿಣ ಖಛಿಊಟ) ಪೋಪ್‌ನ ಬಗೆಗಿನ ಗೌರವವನ್ನು ಮತ್ತಷ್ಟು ಇಳಿಕೆಗೊಳಿಸಿತು; ಯಾಕೆಂದರೆ ಆಕಾಂಕ್ಷಿಗಳಲ್ಲಿ ನಿಜವಾದ ಪೋಪ್ ಯಾರು ಎಂಬ ಬಗ್ಗೆ ಖಚಿತತೆಯಿರಲಿಲ್ಲ, ಅವರು ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರು. ಮಹಾ ಛಿದ್ರದ ಅವಧಿಯುದ್ದಕ್ಕೂ ಪ್ರತಿಸ್ಪರ್ಧಿಗಳು ಅಧಿಕಾರದ ವಿಷಯದಲ್ಲಿ ತಮ್ಮ ಕಪಿಮುಷ್ಟಿಯನ್ನು ಬಿಟ್ಟುಕೊಡಲಿಲ್ಲ, ಇದರಿಂದ ಅವರಿಬ್ಬರೂ ತಾವು ಮಾಡಿದ್ದ ಪವಿತ್ರ ಪ್ರತಿಜ್ಞೆಗಳನ್ನೂ ಮುರಿದರು. ಅನೇಕ ದೇಶಗಳಲ್ಲಿ ಸರ್ಕಾರ ಮತ್ತು ಚರ್ಚ್‌ಗಳು ಪೋಪ್‌ಗಳಿಗೆ ವಿಧೇಯರಾಗಿರುವುದರಿಂದ ಹಿಂದೆ ಸರಿದವು. ದೀರ್ಘಕಾಲದ ನಂತರ, ಈ ಸಮಸ್ಯೆಯನ್ನು ಒಂದು ಮಹಾಸದಸ್ಯಸಭೆಯು ಮಾತ್ರ ಪರಿಹರಿಸಬಲ್ಲುದೆಂಬುದು ಸ್ಪಷ್ಟವಾಯಿತು. ಪೀಸಾದ ಮಹಾಸದಸ್ಯಸಭೆಯು, ಮೊದಲಿನ ಇಬ್ಬರ ಹೇಳಿಕೆಗಳನ್ನು ಧರ್ಮವಿರುದ್ಧವೆಂದು ಸಾರಿದರೂ, ಅವರನ್ನು ತೆಗೆದುಹಾಕದೆ ಮೂರನೆಯ ಪೋಪ್ ಒಬ್ಬನನ್ನು ನೇಮಿಸುವ ತಪ್ಪನ್ನು ಮಾಡಿಬಿಟ್ಟಿತು. ಕೊನೆಗೆ ಕಾನ್‌ಸ್ಟೆನ್ಸ್‌ನ ಮಹಾಸದಸ್ಯಸಭೆಯು ಆ ಮೂವರನ್ನೂ ತೆಗೆದುಹಾಕಿ ಐಕಮತ್ಯವನ್ನು ಸಾಧಿಸುವಲ್ಲಿ ಯಶಸ್ವಿಯಾಯಿತು. ಆದರೆ ಈ ಕಚ್ಚಾಟದಿಂದ

ಪೋಪ್‌ಸ್ಥಾನದ ಬಗ್ಗೆ ಜನರಲ್ಲಿ ಹಿಂದಿದ್ದ ಗೌರವಭಕ್ತಿಗಳು ನಾಶವಾಗಿದ್ದವು. ಈ ಗೊಂದಲಪರಿಸ್ಥಿತಿಯ ಕೊನೆಯಲ್ಲಿ ಪೋಪ್‌ಸ್ಥಾನದ ಬಗ್ಗೆ ವೈಕ್ಲಿಫ್ ಹೀಗೆ ಹೇಳಲು ಸ್ಥಿತಿಯುಂಟಾಯಿತು: "ಇಂತಹ ಪಿಶಾಚಿಯನ್ನು ಓಡಿಸುವುದರಿಂದ ಚರ್ಚ್‌ಗೆ ಹಾನಿಯೇನೂ ಆಗುವುದಿಲ್ಲ, ಬದಲು ಅನುಕೂಲವೇ ಆಗುತ್ತದೆ. ಅದನ್ನು ನಾಶಪಡಿಸಲು ಪ್ರಯತ್ನಿಸುವುದರ ಮೂಲಕ ಚರ್ಚ್ ದೇವರ ಕೈಂಕರ್ಯವನ್ನು ಭಕ್ತಿಪೂರ್ವಕವಾಗಿ ಮಾಡಿದಂತಾಗುತ್ತದೆ."

ಹದಿನೈದನೆಯ ಶತಮಾನದ ಪೋಪ್ ಅಧಿಕಾರ, ಇಟಲಿಗೆ ಸೂಕ್ತವಾಗಿದ್ದರೂ, ತೀರ ಲೌಕಿಕವೂ ಧರ್ಮದೂರವೂ ಆಗಿತ್ತು, ಜೊತೆಗೆ ಉತ್ತರ ದೇಶಗಳನ್ನು ತೃಪ್ತಿಪಡಿಸಲು ರಾಜಾರೋಷವಾಗಿಯೇ ಅನೈತಿಕವೂ ಆಗಿತ್ತು, ಕೊನೆಗೆ, ಟ್ಯೂಟಾನಿಕ್ ದೇಶಗಳಲ್ಲಿ ನೈತಿಕ ಬಂಡಾಯವು ತೀವ್ರಗೊಂಡು ಆರ್ಥಿಕ ಲಾಭದ ಚಟುವಟಿಕೆಗಳಿಗೆ ಕಡಿವಾಣ ಹಾಕಿತು. ರೋಮ್‌ಗೆ ಕಪ್ಪ ಕೊಡುವುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಯಿತು, ರಾಜರೂ ಚರ್ಚ್‌ಪ್ರಿನ್ಸ್‌ಗಳು ಚರ್ಚ್‌ನ ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಪ್ರಾಟೆಸ್ಟೆಂಟ್‌ನ ಸೈದ್ಧಾಂತಿಕ ಬಂಡಾಯವಿಲ್ಲದಿದ್ದರೆ ಇದೆಲ್ಲ ಸಾಧ್ಯವಾಗುತ್ತಿರಲಿಲ್ಲ. ಇದು ನಡೆದುದಕ್ಕೆ ಕಾರಣ ಚರ್ಚ್‌ನ ಮಹಾ ಛಿದ್ರ ಮತ್ತು ರೆನೈಸಾನ್ಸ್ ಕಾಲದ ಪೋಪ್‌ಸ್ಥಾನದ ಹಗರಣಗಳು. ಚರ್ಚ್‌ನ ನೈತಿಕ ಬಲವು ಒಳಗೇ ದುರ್ಬಲಗೊಂಡಿರದಿದ್ದರೆ, ಅದರ ವಿರೋಧಿಗಳಿಗೆ ನೈತಿಕ ಸ್ಥೈರ್ಯ ಉಂಟಾಗುತ್ತಿರಲಿಲ್ಲ, ಅವರೂ ಎರಡನೆಯ ಫ್ರೆಡೆರಿಕ್‌ನಂತೆ ಸೋಲನ್ನು ಕಾಣುತ್ತಿದ್ದರು.

ಈ ಸಂದರ್ಭದಲ್ಲಿ ಮೆಕಿಯವಿಲ್ಲಿ ತನ್ನ *'ದ ಪ್ರಿನ್ಸ್'* ಎಂಬ ಪುಸ್ತಕದ ಹನ್ನೊಂದನೆಯ ಅಧ್ಯಾಯದಲ್ಲಿ ಧರ್ಮಗುರು ಸಂಸ್ಥಾನಗಳ ಬಗ್ಗೆ ಹೇಳುವ ಕುತೂಹಲಕರ ಮಾತುಗಳನ್ನು ಗಮನಿಸಬಹುದು: "ಈಗ ಉಳಿದಿರುವುದು ಧರ್ಮಗುರು ಸಂಸ್ಥಾನಗಳ ಬಗೆಗಿನ ಮಾತು. ಅವುಗಳನ್ನು ಸ್ವಸಾಮರ್ಥ್ಯದಿಂದಲೋ ಅದೃಷ್ಟದಿಂದಲೋ ಪಡೆದುಕೊಂಡಿರುವುದರಿಂದಲೂ, ಆ ಎರಡೂ ಇಲ್ಲದೆಯೇ ಅವುಗಳನ್ನು ಉಳಿಸಿಕೊಳ್ಳಬಹುದಾದುದರಿಂದಲೂ, ಕಷ್ಟಗಳೆಲ್ಲ ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮುಂಚಿನ ಕಾಲಕ್ಕೆ ಸಂಬಂಧಿಸಿದವು. ಅವುಗಳೆಲ್ಲ ಉಳಿದಿರಲು ಕಾರಣವೆಂದರೆ ಶಕ್ತಿಯುತವಾದ ಹಿಂದಿನ ಧಾರ್ಮಿಕ ನಿಯಮಗಳು ಮತ್ತು ಅವುಗಳ ಸ್ವರೂಪ; ಹೀಗಾಗಿ ರಾಜಕುಮಾರರು ಹೇಗೇ ಇರಲಿ ಸಂಸ್ಥಾನಗಳ ಸ್ವಾಧೀನ ಮಾತ್ರ ತಪ್ಪುವುದಿಲ್ಲ. ಈ ರಾಜಕುಮಾರರಿಗೆ ರಾಜ್ಯಗಳಿವೆ ಅವುಗಳನ್ನವರು ರಕ್ಷಿಸಬೇಕಾಗಿಲ್ಲ,

ಪ್ರಜೆಗಳಿದ್ದಾರೆ ಆಳಬೇಕಾದ್ದಿಲ್ಲ; ರಕ್ಷಣೆಗೊಳಗಾಗದ ಈ ರಾಜ್ಯಗಳನ್ನು ಯಾರೂ ಕಿತ್ತುಕೊಳ್ಳಲಾರರು, ಆಳದಿದ್ದರೂ ಪ್ರಜೆಗಳನ್ನು ಯಾರೂ ಲಕ್ಷಿಸುವುದಿಲ್ಲ, ಅಂತೆಯೇ ಅವರಿಗೆ ಬೇರೆಯಾಗುವ ಆಸೆಯಾಗಲೀ ಸಾಮರ್ಥ್ಯವಾಗಲೀ ಇಲ್ಲ. ಇಂತಹ ಸಂಸ್ಥಾನಗಳು ಮಾತ್ರ ಸುರಕ್ಷಿತವೂ ಸುಖಪ್ರದವೂ ಆಗಿರಬಲ್ಲುದು. ಆದರೆ ಮಾನವ ಬುದ್ಧಿಗೆ ನಿಲುಕಲಾರದ ಶಕ್ತಿಯ ಬೆಂಬಲ ಪಡೆದ ಅವುಗಳ ಬಗ್ಗೆ ನಾನು ಹೆಚ್ಚಿಗೆ ಹೇಳಲಾರೆ. ದೇವರಿಂದಲೇ ಸ್ಥಾಪಿತಗೊಂಡು ನಡೆಯುತ್ತಿರುವುದರಿಂದ ಒಬ್ಬ ಹುಲು ಮನುಜ ಆ ಬಗ್ಗೆ ಮಾತನಾಡುವುದು ಸಮಂಜಸವಲ್ಲ."

ಈ ಮಾತುಗಳನ್ನಾಡಿದ್ದು ಹತ್ತನೆಯ ಲಿಯೋನ ಅಧಿಕಾರಸ್ವೀಕಾರ ಸಂದರ್ಭದಲ್ಲಿ, ಆ ಮೂಲಕ ರಿಫರ್ಮೇಷನ್ ಆರಂಭಗೊಂಡಾಗ. ಧರ್ಮಿಷ್ಟರಾದ ಜರ್ಮನರಿಗೆ ಆರನೆಯ ಅಲೆಕ್ಸಾಂಡರ್‌ನ ರಾಜಾರೋಷವಾದ ಸ್ವಜನಪಕ್ಷಪಾತ ಅಥವಾ ಲಿಯೋನ ಸುಲಿಗೆಗಳು 'ದೇವರಿಂದಲೇ ಸ್ಥಾಪಿತಗೊಂಡು ನಡೆಯುತ್ತಿ'ದೆಯೆಂದು ನಂಬುವುದು ಮಾತ್ರ ಕ್ರಮೇಣ ಅಸಾಧ್ಯವಾಯಿತು. 'ಹುಲು ಮನುಜ'ನಾದ ಲೂಥರ್ ಪೋಪ್ ಅಧಿಕಾರದ ಬಗ್ಗೆ ಚರ್ಚೆಗೆ ಸಿದ್ಧನಾಗಿದ್ದ, ಆದರೆ ಮೆಕಿಯವಿಲ್ಲಿ ಅದರಿಂದ ಹಿಂದೆ ಸರಿದ. ಚರ್ಚ್ ವಿರೋಧಕ್ಕೆ ನೈತಿಕ ಹಾಗೂ ದೈವಶಾಸ್ತ್ರಗಳ ಬೆಂಬಲ ದೊರಕಿದ ಕೂಡಲೆ, ಸ್ವಹಿತಾಸಕ್ತಿಗಳು ವಿರೋಧವು ಬೇಗ ಬೇಗ ಹರಡುವುದನ್ನು ತಡೆಗಟ್ಟಿದವು. ಪೋಪ್‌ನ ಅಧಿಕಾರದ ಮೇಲೆ ಚರ್ಚ್ ಅವಲಂಬನೆಗೊಂಡಿತ್ತು; ಹೀಗಾಗಿ ವಿರೋಧವು ಪಾಪವಿಮೋಚನೆಯ ಹೊಸ ಪರಿಕಲ್ಪನೆಯೊಂದಿಗೆ ಸಂಬಂಧ ಪಡೆದಿತ್ತು. ಲೂಥರ್‌ನ ದೈವಶಾಸ್ತ್ರದಿಂದಾಗಿ ಸಾಮಾನ್ಯ ಚರ್ಚ್‌ಪ್ರಿನ್ಸ್‌ಗಳು ಶಿಕ್ಷೆಯ ಭಯವಿಲ್ಲದೆ ಹಾಗೂ ತಮ್ಮ ಪ್ರಜೆಗಳ ನೈತಿಕ ಖಂಡನೆಗೊಳಗಾಗದೆ ಚರ್ಚ್ ಅನ್ನು ಲೂಟಿ ಮಾಡಲು ಸಾಧ್ಯವಾಯಿತು.

ಆರ್ಥಿಕ ಉದ್ದೇಶಗಳು ರಿಫರ್ಮೇಷನ್‌ನ ವಿಸ್ತರಣೆಗೆ ಹೆಚ್ಚಿನ ಕೊಡುಗೆಯನ್ನು ನೀಡಿದವು, ಆದರೂ ಅವುಗಳು ಸಾಕಾಗಲಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ, ಏಕೆಂದರೆ ಅವು ಅನೇಕ ಶತಮಾನಗಳ ಕಾಲದಿಂದಲೂ ಕ್ರಿಯಾಶೀಲವಾಗಿದ್ದವು. ಅನೇಕ ಮಂದಿ ಸಮ್ರಾಟರು ಪೋಪ್‌ನನ್ನು ಪ್ರತಿರೋಧ ಒಡ್ಡಲು ಪ್ರಯತ್ನಿಸಿದರು; ಹಾಗೆಯೇ ಮಿಕ್ಕಡೆಯ ಸಾರ್ವಭೌಮರು, ನಿದರ್ಶನಕ್ಕೆ, ಇಂಗ್ಲಂಡ್‌ನ ಎರಡನೆಯ ಹೆನ್ರಿ ಮತ್ತು ಕಿಂಗ್ ಜಾನ್. ಆದರೆ ಅವರ ಪ್ರಯತ್ನಗಳನ್ನು ಕುಟಿಲತನದ್ದೆಂದು ಭಾವಿಸಿದ್ದರಿಂದ ಅವುಗಳು ವಿಫಲಗೊಂಡವು. ಪೋಪ್ ಅಧಿಕಾರಸ್ಥನವು ಬಹು ದೀರ್ಘಕಾ ತನ್ನ ಸಾಂಪ್ರಾದಾಯಿಕ ಅಧಿಕಾರವನ್ನು

ದುರುಪಯೋಗಪಡಿಸಿಕೊಂಡ ನಂತರವೇ ಅದು ನೈತಿಕ ಬಂಡಾಯವಾಗಿ ರೂಪುಗೊಳ್ಳಲು ಸಾಧಯವಾಯಿತು, ಅದರಿಂದಾಗಿಯೇ ಬಂಡಾಯವು ಯಶಸ್ವಿಯಾಗುವಂತಾಯಿತು.

ಪ್ರಚಾರದ ಮೂಲಕ ಅಧಿಕಾರಗ್ರಹಣ ಮಾಡುವ ಬಗೆಯನ್ನು ಅರ್ಥಮಾಡಿಕೊಳ್ಳಲು ಬಯಸುವ ಯಾರಿಗಾದರೂ, ಪೋಪ್ ಅಧಿಕಾರದ ಮೇಲ್ಮೆ-ಪತನಗಳನ್ನು ಅಭ್ಯಸಿಸುವುದು ತುಂಬ ಸಹಕಾರಿಯಾಗುತ್ತದೆ. ಜನರು ಮೂಢನಂಬಿಕೆಯಿಂದ ಕೂಡಿ ಗುರುಸ್ಥಾನದ ಅಧಿಕಾರದಲ್ಲಿ ವಿಶ್ವಾಸವಿಟ್ಟಿದ್ದರು ಎಂದುಬಿಟ್ಟರೆ ಸಾಲದು. ಮಧ್ಯಕಾಲದುದ್ದಕ್ಕೂ ಧರ್ಮದ್ರೋಹಗಳ ನಡೆಯುತ್ತಲೇ ಇದ್ದವು; ಪೋಪ್‌ಗಳು ತಮ್ಮ ಬಗ್ಗೆ ಸಾಮಾನ್ಯವಾಗಿದ್ದ ಗೌರವಕ್ಕೆ ಅರ್ಹರಾಗಿಲ್ಲದಿದ್ದರೆ, ಪ್ರಾಟೆಸ್ಟೆಂಟಿಸಮ್‌ನ ಹರಡುವಿಕೆಯಿಂದ ಅದೂ ಹೆಚ್ಚಬಹುದಾಗಿತ್ತು. ಧರ್ಮದ್ರೋಹಗಳು ನಡೆಯದಿದ್ದರೂ ಲೌಕಿಕದೃಷ್ಟಿಯ ಆಡಳಿತಗಾರರು ಚರ್ಚ್ ಅನ್ನು ಸರ್ಕಾರದ ಅಡಿಯಾಳಾಗಿ ಮಾಡಿಕೊಳ್ಳಲು ತೀವ್ರ ಪ್ರಯತ್ನಗಳನ್ನು ನಡೆಸಿದ್ದರು; ಆ ಪ್ರಯತ್ನವು ಪೂರ್ವದಲ್ಲಿ ಯಶಸ್ವಿಯಾದರೆ, ಪಶ್ಚಿಮದಲ್ಲಿ ವಿಫಲಗೊಂಡವು. ಇದಕ್ಕೆ ಹಲವಾರು ಕಾರಣಗಳಿದ್ದವು.

ಮೊದಲನೆಯದಾಗಿ, ಪೋಪ್‌ಸ್ಥಾನವು ಆನುವಂಶಿಕವಾಗಿರಲಿಲ್ಲ, ಹೀಗಾಗಿ ಲೌಕಿಕ ಸಾಮ್ರಾಜ್ಯಗಳಂತೆ ದೀರ್ಘ ಅಲ್ಪಸಂಖ್ಯಾತರ ಜೊತೆ ತೊಂದರೆಪಡಬೇಕಾಗಿರಲಿಲ್ಲ. ಒಬ್ಬ ವ್ಯಕ್ತಿಯು ಚರ್ಚ್‌ನಲ್ಲಿ ಧಾರ್ಮಿಕತೆಯೋ ವಿದ್ವತ್ತೋ ಮುತ್ಸದ್ಧಿತನವೋ ಇಲ್ಲದಿದ್ದರೆ ಗಣ್ಯಪದವಿಯನ್ನು ಸುಲಭವಾಗಿ ಗಳಿಸಲು ಆಗುತ್ತಿರಲಿಲ್ಲ; ಹೀಗಾಗಿ ಪೋಪ್‌ಗಳಲ್ಲಿ ಬಹುಮಂದಿ ಒಂದಲ್ಲ ಒಂದು ವಿಷಯದಲ್ಲಿ ಸಾಕಷ್ಟು ಪರಿಣತರಾಗಿರುತ್ತಿದ್ದರು. ಲೌಕಿಕ ಸಾರ್ವಭೌಮತೆಗಳು ಸಮರ್ಥವಾಗಿದ್ದಿರಬಹುದು; ಆದರೆ ಅನೇಕ ಸಂದರ್ಭಗಳಲ್ಲಿ ತದ್ವಿರುದ್ಧ ಪರಿಸ್ಥಿತಿ ಇರುತ್ತಿದ್ದವು. ಅಲ್ಲದೆ, ಧರ್ಮಗುರುಗಳಿಗಿರುತ್ತಿದ್ದಂತೆ ಅವರಿಗೆ ತಮ್ಮ ರಾಗಭಾವಗಳನ್ನು ನಿಯಂತ್ರಿಸಿಕೊಳ್ಳುವ ಶಿಕ್ಷಣವಿರುತ್ತಿರಲಿಲ್ಲ. ವಿವಾಹವಿಚ್ಛೇದನದ ಆಮಿಷದಿಂದಾಗಿ ರಾಜರುಗಳು ಆಗಾಗ್ಗೆ ಕಷ್ಟಗಳಿಗೆ ಸಿಲುಕಿಕೊಳ್ಳುತ್ತಿದ್ದರು; ಏಕೆಂದರೆ ಅದು ಚರ್ಚ್‌ನಲ್ಲಿ ತೀರ್ಮಾನವಾಗಬೇಕಾದ ವಿಷಯವಾದ್ದರಿಂದ ಪೋಪ್‌ಗಳ ಮುಲಾಜಿಗೊಳಗಾಗಬೇಕಾಗಿತ್ತು. ಕೆಲವೇಳೆ ಅವರು ಈ ಕಷ್ಟದಿಂದ ಪಾರಾಗಲು ಏಳನೆಯ ಹೆನ್ರಿ ಅನುಸರಿಸಿದ ಮಾರ್ಗವನ್ನಾಶ್ರಯಿಸುತ್ತಿದ್ದರು; ಆದರೆ ಇದರಿಂದ ಅವರ ಪ್ರಜೆಗಳಿಗೆ ಆಘಾತವಾಗುತ್ತಿತ್ತು, ಸಾಮಂತರು

ತಮ್ಮ ನಿಷ್ಠೆಯನ್ನು ತೊರೆಯುತ್ತಿದ್ದರು, ಕೊನೆಗೆ ಅವರಿಗೆ ಶರಣಾಗಬೇಕಾಗುತ್ತಿತ್ತು, ಇಲ್ಲ ಅಧಿಕಾರ ಕಳೆದುಕೊಳ್ಳಬೇಕಾಗುತ್ತಿತ್ತು.

ಪೋಪ್‌ಸ್ಥಾನದ ಮತ್ತೊಂದು ಶಕ್ತಿಯೆಂದರೆ ಒಂದು ಅಧಿಕಾರಸ್ಥಾನವಾಗಿ ಅದರ ನಿರಂತರತೆ. ಎರಡನೆಯ ಫ್ರೆಡೆರಿಕ್ ಜೊತೆಗಿನ ಸಂಘರ್ಷದ ನಿದರ್ಶನ ತೆಗೆದುಕೊಂಡರೆ, ಪೋಪ್‌ನ ಸಾವು ಯಾವ ಮುಖ್ಯ ವ್ಯತ್ಯಾಸವನ್ನೂ ಮಾಡಲಾರದೆ ಹೋಯಿತು ಎಂಬುದು ಆಶ್ಚರ್ಯಕರವಾದ ವಿಷಯ. ಒಂದು ಸಿದ್ಧಾಂತಸಂಹಿತೆಯೇ ಇತ್ತು, ರಾಜತಂತ್ರದ ಒಂದು ಸಂಪ್ರದಾಯವಿತ್ತು; ಇವುಗಳ ವಿರುದ್ಧ ಅಷ್ಟೇ ಪ್ರಬಲವಾದ ಅಸ್ತ್ರವನ್ನು ಪ್ರಯೋಗಿಸುವುದು ಅಸಾಧ್ಯವಾಗಿತ್ತು. ಅದಕ್ಕೆ ಹೋಲಿಸಬಹುದಾದ ನಿರಂತರತೆ ಅಥವಾ ಗಟ್ಟಿಯಾದ ಉದ್ದೇಶ ಲೌಕಿಕ ಸರ್ಕಾರಗಳಿಗೆ ಪ್ರಾಪ್ತವಾದುದು ರಾಷ್ಟ್ರೀಯತೆಯ ಉಗಮದ ನಂತರ ಮಾತ್ರ.

ಹನ್ನೊಂದು ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ರಾಜರುಗಳು ಮೂರ್ಖರಾಗಿರುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು; ಅದೇ ಪೋಪ್‌ರಲ್ಲಿ ಬಹುಮಂದಿ ವಿದ್ವತ್ತು ಹೊಂದಿದವರೂ ವಿವೇಕಿಗಳೂ ಆಗಿರುತ್ತಿದ್ದರು. ಅಲ್ಲದೆ, ರಾಜರುಗಳು ಸದಾ ಅನಾಯಕತ್ವದ ಅಪಾಯ ಎದುರಿಸುವ ಹಾಗೂ ಹೊಸ ಆರ್ಥಿಕ ಶಕ್ತಿಗಳಿಗೆ ವಿರುದ್ಧವಾದ ಬಹು ತೊಡಕಿನ ಊಳಿಗಮಾನ್ಯ ವ್ಯವಸ್ಥೆಗೆ ಬದ್ಧರಾಗಿದ್ದವರು. ಒಟ್ಟಾರೆ ಈ ಶತಮಾನಗಳಲ್ಲಿ ಸರ್ಕಾರ ಪ್ರತಿನಿಧಿಸುತ್ತಿದ್ದುದಕ್ಕಿಂತ ಹೆಚ್ಚಿನ ಮಟ್ಟದ ನಾಗರಿಕತೆಯ ಪ್ರತೀಕವಾಗಿತ್ತು.

ಇವೆಲ್ಲದಕ್ಕಿಂತ ಚರ್ಚ್‌ಗಿದ್ದ ಬಹುದೊಡ್ಡ ಶಕ್ತಿಯೆಂದರೆ ಅದರ ಬಗ್ಗೆ ಜನರಲ್ಲಿದ್ದ ಗೌರವ. ಹಿಂದಿನ ಕಾಲದಲ್ಲಿ ನಡೆದ ಕಿರುಕುಳಗಳ ನೈತಿಕ ಬಂಡವಾಳ ಅದರ ಬೆಂಬಲಕ್ಕಿತ್ತು. ಅದು ಪಡೆದ ಗೆಲವುಗಳು ಬ್ರಹ್ಮಚರ್ಯದ ಅನುಷ್ಠಾನದೊಡನೆ ನಿಕಟ ಸಂಬಂಧ ಪಡೆದಿರುತ್ತಿದ್ದ ವಿಷಯವನ್ನು ನಾವಾಗಲೇ ನೋಡಿದ್ದೇವೆ. ಮಧ್ಯಯುಗೀನ ಮನಸ್ಸಿಗೆ ಬ್ರಹ್ಮಚರ್ಯವೆಂದರೆ ಬಹು ಆದರಣೀಯ ವಿಷಯವಾಗಿತ್ತು. ಕೆಲವು ಪೋಪ್‌ಗಳನ್ನೂ ಒಳಗೊಂಡಂತೆ ಅನೇಕ ಮಂದಿ ಧರ್ಮಗುರುಗಳು ಸಿದ್ಧಾಂತದ ಬಗ್ಗೆ ರಾಜಿಮಾಡಿಕೊಳ್ಳದ್ದರಿಂದ ಅತೀವ ಕಷ್ಟಗಳನ್ನೆದುರಿಸಬೇಕಾಗಿತ್ತು. ನಿಯಂತ್ರಣರಹಿತ ಸುಲಿಗೆ, ಸ್ವೇಚ್ಛಾಚಾರ ಮತ್ತು ಸ್ವಾರ್ಥಗಳ ತಾಣವಾದ ಜಗತ್ತಿನಲ್ಲಿ ಚರ್ಚ್‌ನ ಗಣ್ಯವ್ಯಕ್ತಿಗಳು ಬಹು ಸನ್ನಿವೇಶಗಳಲ್ಲಿ ಸ್ವಹಿತವಿರದ ಗುರಿಗಳ ಸಾಧನೆಗಾಗಿ ಜೀವಿಸುವುದರೊಡನೆ

ಅದಕ್ಕಾಗಿ ತಮ್ಮ ವೈಯಕ್ತಿಕ ಆಸ್ತಿಯನ್ನೂ ಸ್ವಇಚ್ಛೆಯಿಂದ ವ್ಯಯಿಸುತ್ತಿದ್ದ ವಿಷಯದ ಬಗ್ಗೆ ಸಾಮಾನ್ಯ ಜನತೆಗೆ ಸ್ಪಷ್ಟವಾದ ಅರಿವಿತ್ತು. ಆ ಮುಂದಿನ ಶತಮಾನಗಳಲ್ಲಿ, ತಮ್ಮ ಸಾತ್ವಿಕತೆಯಿಂದಾಗಿ ಮಾನ್ಯರಾಗಿದ್ದ – ಹಿಲ್ಡರ್‌ಬ್ರಾಂಡ್, ಸಂತ ಬರ್ನಾರ್ಡ್, ಸಂತ ಫ್ರಾನ್ಸಿಸ್ – ಅಂತಹವರ ಬಗೆಗಿನ ಜನಾಭಿಪ್ರಾಯ ದೇದೀಪ್ಯಮಾನಕರವಾಗಿತ್ತು; ಇದರಿಂದಾಗಿ ಇತರ ಕೆಲವರ ಸಲ್ಲದ ಕಾರ್ಯಗಳಿಂದ ಜನರಲ್ಲಿ ಉಂಟಾಗಬಹುದಾಗಿದ್ದ ನೈತಿಕ ಅಪನಂಬಿಕೆಯನ್ನು ತಡೆಯುವಂತಾಯಿತು.

ಆದರೆ ಉನ್ನತಾದರ್ಶಗಳನ್ನು ಹೊತ್ತ ಸಂಘಟನೆಯೊಂದಕ್ಕೆ ಆ ಕಾರಣದಿಂದ ಇರುವ ಹೆಚ್ಚಿನ ಮಾನ್ಯತೆಯೇ ಅಧಿಕಾರ ಪಡೆಯುವ ನೆವವಾಗಿಬಿಡುವ ಅಪಾಯವೂ ಇರುತ್ತದೆ; ಇದರಿಂದಾಗಿ ಕಾಲಕ್ರಮೇಣ ಅಡೆತಡೆಯಿಲ್ಲದ ಕ್ರೌರ್ಯಕ್ಕೂ ಅವಕಾಶವಾಗಬಹುದು. ಚರ್ಚ್ ಐಹಿಕ ವಿಷಯಗಳ ಬಗ್ಗೆ ತಿರಸ್ಕಾರವನ್ನು ಬೋಧಿಸಿತು, ಇದರಿಂದಾಗಿ ಅದು ರಾಜಮಹಾರಾಜರುಗಳ ಮೇಲೂ ಅಧಿಕಾರವನ್ನು ಸಾಧಿಸುವಂತಾಯಿತು. ಫ್ರಯರ್‌ಗಳು ಬಡತನದ ಪ್ರತಿಜ್ಞೆ ಹೊತ್ತರು, ಇದರಿಂದ ಜನರ ಮೇಲೆ ಪರಿಣಾಮ ಬೀರಿ ಆಗಲೇ ಸಾಕಷ್ಟಿದ್ದ ಚರ್ಚ್‌ನ ಆಸ್ತಿ ಮತ್ತಷ್ಟು ಹೆಚ್ಚುವಂತಾಯಿತು. ಸಂತ ಫ್ರಾನ್ಸಿಸ್ ಭ್ರಾತೃಪ್ರೇಮವನ್ನು ಬೋಧಿಸಿದ; ಇದರಿಂದಾಗಿ ದೀರ್ಘಕಾಲದ ಕ್ರೂರ ಯುದ್ಧದಲ್ಲಿ ಗೆಲವು ಸಾಧಿಸಲು ಬೇಕಾದ ಉತ್ಸಾಹವನ್ನು ತುಂಬಿತು. ಕೊನೆಯಲ್ಲಿ, ತನ್ನ ಆಸ್ತಿಪಾಸ್ತಿ ಹಾಗೂ ಅಧಿಕಾರಕ್ಕೆ ಕಾರಣವಾಗಿದ್ದ ಎಲ್ಲ ನೈತಿಕ ಉದ್ದೇಶವನ್ನೂ ರಿನೇಸಾನ್ಸ್ ಚರ್ಚ್ ಬದಿಗೊತ್ತಿತು, ಮತ್ತೆ ಉತ್ಸಾಹ ತುಂಬಲು ಅದಕ್ಕೆ ರಿಫಾರ್ಮೇಷನ್ನಿನ ಆಘಾತ ಆವಶ್ಯಕವಾಯಿತು. ದರ್ಪಿಷ್ಟ ಅಧಿಕಾರವನ್ನು ಗಳಿಸಲು ಒಂದು ಸಂಘಟನೆಯು ಉನ್ನತಾದರ್ಶಗಳನ್ನು ಬಳಸಿಕೊಂಡಾಗ ಇವೆಲ್ಲ ಅನಿವಾರ್ಯವಾಗಿಬಿಡುತ್ತದೆ. ಹೊರದಾಳಿಯ ಕಾರಣವನ್ನು ಹೊರತುಪಡಿಸಿದರೆ, ಅನೂಚಾನ ಅಧಿಕಾರವು ಕುಸಿದು ಬೀಳುವುದು, ಮೆಕಿಯವಿಲ್ಲಿ ನಂಬಿದ್ದಂತೆ, ಅತ್ಯಂತ ಕ್ರೂರ ಅಪರಾಧಗಳು ಕೂಡ ಅಲುಗಾಡಿಸಲಾಗದಂತಹ ಬಿಗಿಹಿಡಿತವನ್ನು ಜನಮನದ ಮೇಲೆ ಸಾಧಿಸಿದುದನ್ನು ಅಧಿಕಾರಸ್ಥರು ದುರುಪಯೋಗಪಡಿಸಿಕೊಳ್ಳುವ ಕಾರಣದಿಂದಾಗಿಯೇ.

ಪ್ರಾಚೀನ ಕಾಲದಲ್ಲಿ ಗ್ರೀಕರು ಭವಿಷ್ಯವಾಣಿಗೆ ಕೊಟ್ಟಿದ್ದ ಹಾಗೂ ಮಧ್ಯಕಾಲದಲ್ಲಿ ಪೋಪ್ ಬಗ್ಗೆ ಹೊಂದಿದ್ದ ಗೌರವವನ್ನು ಈಗಿನ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸುಪ್ರೀಂ ಕೋರ್ಟ್‌ಗೆ ನೀಡಲಾಗಿದೆ. ಅಮೆರಿಕನ್ ಸಂವಿಧಾನದ ಕಾರ್ಯವೈಖರಿಯನ್ನು ಅಧ್ಯಯನ ಮಾಡಿದವರಿಗೆ, ಸುಪ್ರೀಂ

ಕೋರ್ಟ್ ಶ್ರೀಮಂತವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಶಕ್ತಿಗಳ ಜೊತೆ ಕೈಜೋಡಿಸಿರುತ್ತದೆ ಎಂಬುದು ಮನವರಿಕೆಯಾಗಿರುತ್ತದೆ. ಈ ವಿಷಯವನ್ನು ಬಲ್ಲವರಲ್ಲಿ ಕೆಲವರು ಶ್ರೀಮಂತವರ್ಗದ ಪರವಾಗಿರುತ್ತಾರೆ, ಹಾಗಾಗಿ ಸುಪ್ರೀಂ ಕೋರ್ಟ್‌ನ ಸಾಂಪ್ರದಾಯಿಕ ಗೌರವವನ್ನು ಕುಂದಿಸಬಹುದಾದ ಏನನ್ನೂ ಮಾಡುವುದಿಲ್ಲ, ಉಳಿದವರನ್ನು ವಿಧ್ವಂಸಕರೆಂದೋ ಕ್ರಾಂತಿಕಾರಿಗಳೆಂದೋ ಬಿಂಬಿಸಿ ಸರಳ ಸಾಮಾನ್ಯ ಜನರ ದೃಷ್ಟಿಯಲ್ಲಿ ನಂಬಿಕೆಗೆ ಅನರ್ಹರನ್ನಾಗಿ ಮಾಡಲಾಗುತ್ತದೆ. ಸಂವಿಧಾನದ ಅಧಿಕೃತ ವ್ಯಾಖ್ಯಾನಕಾರರ ಅಧಿಕಾರವನ್ನು ಯಶಸ್ವಿಯಾಗಿ ಎದುರಿಸುವ ಒಬ್ಬ ಲೂಥರ್ ಬರಬೇಕಾದರೆ ಪೂರ್ವಭಾವಿಯಾಗಿ ಪಕ್ಷಾವಲಂಬಿ ಚಟುವಟಿಕೆಯು ಆವಶ್ಯಕವಾಗುತ್ತದೆ.

ಹೋರಾಟದಲ್ಲಿ ಧಾರ್ಮಿಕ ಅಧಿಕಾರದ ಮೇಲಾಗುವ ಪರಿಣಾಮವು ಲೌಕಿಕ ಅಧಿಕಾರದ ಮೇಲಾಗುವುದಕ್ಕಿಂತ ತುಂಬ ಕಡಿಮೆ ಪ್ರಮಾಣದ್ದು. ರಷ್ಯಾ ಮತ್ತು ಟರ್ಕಿಗಳಲ್ಲಿ ಮಹಾಯುದ್ಧದ ನಂತರ ಧಾರ್ಮಿಕ ಹಾಗೂ ರಾಜಕೀಯ ವಿಪ್ಲವವುಂಟಾಯಿತೆಂಬುದು ನಿಜ, ಆದರೆ ಈ ಎರಡೂ ದೇಶಗಳಲ್ಲಿ ಸಾಂಪ್ರದಾಯಿಕ ಮತಧರ್ಮವು ಸರ್ಕಾರದೊಡನೆ ತೀರ ನಿಕಟ ಸಂಪರ್ಕ ಪಡೆದಿದ್ದಿತು. ಯುದ್ಧದಲ್ಲಿ ಸೋತರೂ ಧಾರ್ಮಿಕವಾಗಿ ಕುಸಿಯದ ಅತ್ಯಂತ ಪ್ರಮುಖ ನಿದರ್ಶನವೆಂದರೆ, ಐದನೆಯ ಶತಮಾನದಲ್ಲಿ ಬಾರ್ಬೇರಿಯನ್ನರ ಮೇಲೆ ಚರ್ಚ್ ಪಡೆದ ಗೆಲವು. ನಿಜವಾದ ಧಾರ್ಮಿಕನಿಗೆ ದೊರೆಯುವುದೆಂದು ನೀಡಲಾಗುವ ಭರವಸೆಯು ಐಹಿಕ ಅಧಿಕಾರವಲ್ಲದ್ದರಿಂದ ಧರ್ಮಾವಲಂಬನೆಯಿಂದ ಅದು ದೊರೆಯುತ್ತದೆಂದು ನಿರೀಕ್ಷಿಸಬಾರದು ಎಂದು ರೋಮ್‌ನ ಪತನದಿಂದ ಸ್ಫೂರ್ತಿಗೊಂಡು ರಚಿತವಾದ ತನ್ನ ಕೃತಿ *'ಸಿಟಿ ಆಫ್ ಗಾಡ್'*ನಲ್ಲಿ ಸಂತ ಆಗಸ್ಟೈನ್ ವಿವರಿಸುತ್ತಾನೆ. ದೇವತೆಗಳನ್ನು ದೂರಮಾಡಿದ ಕಾರಣದಿಂದಾಗಿ ರೋಮ್ ಪತನಗೊಂಡಿತೆಂದು ಸಾಮ್ರಾಜ್ಯದಲ್ಲಿ ಬದುಕುಳಿದ ಪ್ಯಾಗನ್[೧]ರು ವಾದಿಸಿದರು; ಆದರೆ ಸಮಂಜಸವೆಂಬಂತೆ ಕಾಣಿಸುವ ಈ ವಾದವು ಜನಮನ್ನಣೆಯನ್ನು ಪಡೆಯುವಲ್ಲಿ ವಿಫಲವಾಯಿತು. ಸೋತವರ ಉನ್ನತ ನಾಗರಿಕತೆಯು ದಾಳಿಕೋರರಲ್ಲಿ ಮೇಲುಗೈಯಾದರೆ, ಗೆದ್ದವರು ಕ್ರಿಶ್ಚಿಯನ್ ಮತವನ್ನವಲಂಬಿಸಿರು. ಹೀಗೆ ರೋಮ್‌ನ ಪ್ರಭಾವವು ಬಾರ್ಬೇರಿಯನ್ನರಲ್ಲಿ ಚರ್ಚ್‌ನ ಮೂಲಕ ಉಳಿದುಕೊಂಡಿತು; ಅವರಲ್ಲಿ ಹಿಟ್ಲರ್‌ಗಿಂತ ಮುಂಚೆ

---

[೧] ಅಥವಾ ಹೀದನ್: ಕ್ರೈಸ್ತಮತದವರಿಂದ ಜ್ಞಾನೋದಯವಾಗದವನು ಮತ್ತು ಬೈಬಲ್‌ನಲ್ಲಿ ಹೇಳಿರುವ ದೇವರಲ್ಲಿ ನಂಬಿಕೆಯಿರದವನು

ಯಾರೂ ಪ್ರಾಚೀನ ಸಂಸ್ಕೃತಿಯ ಸಂಪ್ರದಾಯವನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

–೦–೦–೦–೦–

ಅಧ್ಯಾಯ ೫

ರಾಜಾಧಿಕಾರ

ಪುರೋಹಿತರದರಂತೆಯೇ ರಾಜರ ಮೂಲವೂ ಇತಿಹಾಸಪೂರ್ವದಷ್ಟು ಹಳೆಯದು; ರಾಜಪ್ರಭುತ್ವವು ವಿಕಾಸಗೊಂಡ ಮೊದಲ ಹಂತಗಳನ್ನು ಅತ್ಯಂತ ಅನಾಗರಿಕ ಬುಡಕಟ್ಟುಗಳಲ್ಲಿ ಈಗಲೂ ಉಳಿದಿರುವ ರೀತಿಯಿಂದ ನಾವು ಊಹಿಸಿಕೊಳ್ಳಬೇಕು, ಅಷ್ಟೆ. ಪೂರ್ಣವಾಗಿ ವಿಕಸನಗೊಂಡು, ಇನ್ನೂ ಅವನತಿಗೊಳ್ಳಲು ಆರಂಭವಾಗದಿರುವ ಸಂಸ್ಥೆಯಾದ ರಾಜಪ್ರಭುತ್ವದಲ್ಲಿ ರಾಜನು ತನ್ನ ದೇಶ ಅಥವಾ ಬುಡಕಟ್ಟನ್ನು ಯುದ್ಧಸಮಯದ ಮುಂದಾಳುತ್ವ ವಹಿಸುವವನು, ಯಾವಾಗ ಯುದ್ಧ ಹೂಡಬೇಕು ಮತ್ತು ಯಾವಾಗ ಶಾಂತಿ ಸ್ಥಾಪಿಸಬೇಕು ಎಂದು ನಿರ್ಧರಿಸುವವನು; ಎಲ್ಲ ವೇಳೆಗಳಲ್ಲಿ ಅಲ್ಲದಿದ್ದರೂ, ಬಹುಪಾಲು ಸಂದರ್ಭಗಳಲ್ಲಿ ನಿಯಮಗಳನ್ನು ರೂಪಿಸಿ ನ್ಯಾಯವಿತರಣೆ ಮಾಡುವವನು. ಸಿಂಹಾಸನದ ಅಧಿಕಾರ ಅವನಿಗೆ ಸಾಮಾನ್ಯವಾಗಿ ಆನುವಂಶೀಯವಾಗಿ ದತ್ತವಾಗುವಂತಹುದು. ಮಿಗಿಲಾಗಿ, ಅವನೊಬ್ಬ ಪಾವನ ಪುರುಷ; ದೇವರೇ ಅಲ್ಲದಿದ್ದರೂ, ದೈವಾಂಶಸಂಭೂತ.

ಆದರೆ ಈ ಬಗೆಯ ರಾಜಪ್ರಭುತ್ವವು ರೂಪುಗೊಳ್ಳಲು ಸರ್ಕಾರದ ಸ್ವರೂಪವು ದೀರ್ಘಕಾಲ ವಿಕಾಸಗೊಂಡಿರುತ್ತದೆ, ಹಾಗೂ ಆ ಸಮಾಜವು ಅನಾಗರಿಕ ಬುಡಕಟ್ಟುಗಳಿಗಿಂತ ತುಂಬ ಹೆಚ್ಚು ಸುಸಂಘಟಿತವಾಗಿರುತ್ತದೆ. ಪ್ರಾಚೀನ ಸಮಾಜಗಳಲ್ಲಿಯೂ ಬಹುಮಂದಿ ಯೂರೋಪಿಯನ್ನರು ಕಲ್ಪಿಸಿಕೊಳ್ಳುವಂತಹ ಅನಾಗರಿಕ ಮುಖ್ಯಸ್ಥನನ್ನು ಕಾಣಲಾಗುವುದಿಲ್ಲ. ನಾವು ಮುಖ್ಯಸ್ಥನೆಂದು ಭಾವಿಸುವವನು ಸಹ ಕೇವಲ ಧಾರ್ಮಿಕ ಹಾಗೂ ಆಚರಣಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವವನು; ಕೆಲವೊಮ್ಮ, ಲಾರ್ಡ್ ಮೇಯರ್‌ನಂತೆ, ಅವನು ಕೇವಲ ಔತಣ ಸಮಾರಂಭಗಳನ್ನು ಏರ್ಪಡಿಸುವವನು. ಕೆಲವು ಸಲ ಅವನು ಯುದ್ಧಘೋಷಣೆ ಮಾಡಬಹುದು, ಆದರೆ ಹೋರಾಟದಲ್ಲಿ ಭಾಗವಹಿಸುವುದಿಲ್ಲ, ಯಾಕೆಂದರೆ ಅವನು ಅದನ್ನು ಮಾಡಬಾರದಷ್ಟು ಪಾವನವ್ಯಕ್ತಿ. ಅವನ ಸ್ಥಾನಮಾನ ಎಂತಹುದೆಂದರೆ, ಸಾಮಾನ್ಯ ಪ್ರಜೆ ಅವನನ್ನು ಕಣ್ಣೆತ್ತಿ ನೋಡಲಾರ; ಇದರಿಂದಾಗಿಯೇ ಅವನು ಸಾರ್ವಜನಿಕ ಆಗುಹೋಗುಗಳಲ್ಲಿ ಹೆಚ್ಚಾಗಿ ಭಾಗವಹಿಸಲು ಆಗುವುದಿಲ್ಲ. ಅವನು ನಿಯಮಗಳನ್ನು ಮಾಡಲಾರ, ಯಾಕೆಂದರೆ ಅವೆಲ್ಲ ರೂಢಿಗತವಾದವು; ಅವುಗಳ ಜಾರಿಯಲ್ಲಿ

ಅವನದೇನೂ ಪಾತ್ರವಿರುವುದಿಲ್ಲ, ಯಾಕೆಂದರೆ ತೀರ ಸಣ್ಣ ಸಮುದಾಯದಲ್ಲಿ ಶಿಕ್ಷೆಯನ್ನು ನೆರೆಹೊರೆಯವರೇ ನಿರ್ಧರಿಸಿಬಿಡಬಹುದು. ಪ್ರಾಚೀನ ಜಪಾನ್‌ನ ಶೋಗನ್ ಮತ್ತು ಮಿಕಾಡೊಗಳಲ್ಲಿರುವಂತೆ, ಕೆಲವು ಅನಾಗರಿಕ ಸಮುದಾಯಗಳಲ್ಲಿ ಇಬ್ಬರು ಮುಖ್ಯಸ್ಥರಿರುತ್ತಾರೆ: ಒಬ್ಬ ಲೌಕಿಕನಾದರೆ, ಮತ್ತೊಬ್ಬ ಧಾರ್ಮಿಕ. ಆದರೆ ಅವರು ಸಮ್ರಾಟ ಮತ್ತು ಪೋಪ್ ಅಂತಹವರಲ್ಲ; ಯಾಕೆಂದರೆ ಧಾರ್ಮಿಕ ಮುಖ್ಯಸ್ಥನಿಗೆ ಕೇವಲ ಹೆಸರಿಗಷ್ಟೇ ಹಿರಿತನ. ಪ್ರಾಚೀನ ಅನಾಗರಿಕರಲ್ಲಿ ಸಾಮಾನ್ಯವಾಗಿ ಬಹುಪಾಲು ರೂಢಿಗಳೇ ನಿರ್ಧಾರಕ ಅಂಶಗಳು, ಔಪಚಾರಿಕ ಆಡಳಿತದ್ದು ತೀರ ಕಮ್ಮಿ. ಹೀಗಾಗಿ ಯೋರೋಪಿಯನ್ನರು ಮುಖ್ಯಸ್ಥರೆಂದು ಕರೆಯುವವರು ಆರಂಭದ ರಾಜಾಧಿಕಾರದ ದುರ್ಬಲ ನೆರಳುಗಳು, ಅಷ್ಟೆ.[೧]

ರೂಢಿಗಳ ವಿನಾಶಕ್ಕೆ ವಲಸೆ ಮತ್ತು ಪರಕೀಯ ದಾಳಿಗಳು ಶಕ್ತಿಶಾಲೀ ಕಾರಣಗಳು, ಇದರಿಂದಾಗಿ ಸರ್ಕಾರದ ರಚನೆ ಆವಶ್ಯಕವಾಗಿಬಿಡುತ್ತದೆ. ರಾಜ ಎಂದು ಕರೆಯಬಹುದಾದ ಆಡಳಿತಗಾರರಿರುವ ಕನಿಷ್ಠ ನಾಗರಿಕತೆಯ ಹಂತದಲ್ಲಿ ಅನೇಕ ವೇಳೆ ರಾಜಮನೆತನ ಬೇರೆಡೆಯಿಂದ ಬಂದವರದಾಗಿರುತ್ತದೆ, ಮೊದಮೊದಲು ಯಾವುದೋ ಹೆಚ್ಚುಗಾರಿಕೆಯಿಂದಾಗಿ ಗೌರವವನ್ನು ಸಂಪಾದಿಸಿರುತ್ತದೆ. ಇದು ರಾಜಪ್ರಭುತ್ವ ವಿಕಾಸದಲ್ಲಿನ ಎಲ್ಲ ಕಡೆಗಳಿಗೂ ಅನ್ವಯಿಸಬಹುದಾದ ಹಂತವೋ ಅಲ್ಲವೋ ಎಂಬುದು ಮಾನವಶಾಸ್ತ್ರಜ್ಞರಲ್ಲಿ ವಿವಾದಗ್ರಸ್ತ ವಿಷಯವಾಗಿದೆ.

ಯುದ್ಧಸಮಯದಲ್ಲಿ ಕೇಂದ್ರೀಕೃತ ಅಧಿಕಾರ ಆವಶ್ಯಕವಾದುದರಿಂದ, ರಾಜರ ಅಧಿಕಾರವು ಹೆಚ್ಚಲು ಯುದ್ಧವು ಪ್ರಮುಖ ಪಾತ್ರ ವಹಿಸಿರುವುದಂತೂ ಸ್ಪಷ್ಟವಾದ ವಿಚಾರ. ಉತ್ತರಾಧಿಕಾರತ್ವ ನಿರ್ಣಯದಲ್ಲಿ ಭಿನ್ನಾಭಿಪ್ರಾಯವನ್ನು ನಿವಾರಿಸಲು ಆನುವಂಶೀಯತೆಯನ್ನು ಅನುಸರಿಸುವುದು ಅತ್ಯಂತ ಸುಲಭದ ವಿಧಾನ. ರಾಜನಿಗೇ ತನ್ನ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರವಿದ್ದರೂ, ಅವನು ತನ್ನ ಮನೆತನದವನನ್ನೇ ಆರಿಸುವುದು ನಿಶ್ಚಿತ. ಆದರೆ ರಾಜವಂಶಗಳು ಸದಾಕಾಲ ಉಳಿಯುವಂತಹವಲ್ಲ; ಪ್ರತಿ ರಾಜಕುಟುಂಬದ ಮೂಲದಲ್ಲಿಯೂ ಒಬ್ಬ

---

[೧] ಈ ಬಗೆಗಿನ ವಿವರಣೆಗೆ ನೋಡಿ, ರಿವರ್ಸ್; 'ಸೋಷಿಯಲ್ ಆರ್ಗನೈಜ಼ೇಷನ್' ಎಂಬ ಪುಸ್ತಕ.

ಆಕ್ರಮಣಕಾರನೋ ವಿದೇಶೀ ಜಯಶಾಲಿಯೋ ಇರುತ್ತಾನೆ. ಸಾಮಾನ್ಯವಾಗಿ ಮತಧರ್ಮವು ಇಂತಹ ಹೊಸ ರಾಜಮನೆತನಕ್ಕೆ ಯಾವುದಾದರೂ ವಿಧಿಯ ಮೂಲಕವಾಗಿ ಮಾನ್ಯತೆಯನ್ನು ತಂದುಕೊಡುತ್ತದೆ. ರಾಜಘನತೆಗೆ ಆವಶ್ಯಕವಾದ ಬೆಂಬಲವನ್ನು ನೀಡುವುದರಿಂದ ಇಂತಹ ಸಂದರ್ಭಗಳಲ್ಲಿ ಪುರೋಹಿತವರ್ಗಕ್ಕೆ ಲಾಭವಾಗುತ್ತದೆ. 'ಬಿಷಪ್ ಇಲ್ಲದಿದ್ದರೆ ರಾಜನೂ ಇರಲಾರ' ಎಂಬುದು ಮೊದಲನೆಯ ಚಾರ್ಲ್ಸ್‌ನ ಮಾತು. ರಾಜಪ್ರಭುತ್ವವು ಅಸ್ತಿತ್ವದಲ್ಲಿರುವ ಎಲ್ಲ ಸಂದರ್ಭಗಳಲ್ಲಿ ಈ ಮಾತಿನ ಆಶಯದ ಪರಿಸ್ಥಿತಿಯೇ ಇರುತ್ತದೆ. ಮಹತ್ವಾಕಾಂಕ್ಷಿಗಳಾದವರಿಗೆ ರಾಜಪದವಿಯು ಎಂತಹ ಆಕರ್ಷಣೆಯೆಂದರೆ, ಆ ಪದವಿಯನ್ನು ಗಳಿಸುವುದರಿಂದ ಕೇವಲ ಪ್ರಬಲವಾದ ಮತಧಾರ್ಮಿಕ ದಂಡನೆಯ ಭಯ ಮಾತ್ರವೇ ಅವರನ್ನು ದೂರವಿರಿಸಬಲ್ಲುದು.

ಪ್ರಾಚೀನ ಕಾಲದ ಮುಖ್ಯಸ್ಥನು ಇತಿಹಾಸಕಾಲದ ರಾಜನಾಗಿ ರೂಪುಗೊಳ್ಳಲು ಯಾವುದೇ ಹಂತಗಳನ್ನು ಹಾದು ಬಂದಿರಲಿ, ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಲ್ಲಿನ ದಾಖಲೆಗಳು ಸಿಕ್ಕುವ ಕಾಲದ ಹೊತ್ತಿಗಾಗಲೇ ಈ ವಿಕಾಸಕ್ರಮವು ಪೂರ್ಣಗೊಂಡಿತ್ತು. ಮಹಾ ಪಿರಮಿಡ್ ಕ್ರಿಪೂ ೩೦೦೦ ದ ಹೊತ್ತಿಗಾಗಲೇ ನಿರ್ಮಾಣಗೊಂಡಿತ್ತೆಂದು ಭಾವಿಸಲಾಗಿದೆ; ಅಂತಹ ಒಂದು ನಿರ್ಮಾಣಕಾರ್ಯವು ತನ್ನ ಪ್ರಜೆಗಳ ಮೇಲೆ ಅಸೀಮ ಅಧಿಕಾರವನ್ನು ಹೊಂದಿದ ರಾಜನೊಬ್ಬನಿಂದ ಮಾತ್ರ ಸಾಧ್ಯ. ಈ ಹೊತ್ತಿಗೆ ಬ್ಯಾಬಿಲೋನಿಯದಲ್ಲಿ ಅನೇಕ ಮಂದಿ ರಾಜರುಗಳಿದ್ದರು; ಆದರೆ ಅವರಾರಿಗೂ ಈಜಿಪ್ಟ್‌ನೊಡನೆ ಹೋಲಿಸಬಹುದಾದಂತಹ ವಿಸ್ತಾರವಾದ ಸಾಮ್ರಾಜ್ಯವಿರಲಿಲ್ಲ. ಆದರೆ ಅವರೆಲ್ಲ ತಮ್ಮ ತಮ್ಮ ಪ್ರದೇಶಗಳಲ್ಲಿ ಪೂರ್ಣಪ್ರಮಾಣದ ರಾಜರುಗಳಾಗಿದ್ದರು. ಕ್ರಿಪೂ ಮೂರನೆಯ ಸಹಸ್ರಮಾನದ ಕೊನೆಯ ಹೊತ್ತಿಗೆ ಮಹಾರಾಜ ಹಮ್ಮುರಾಬಿ (ಕ್ರಿಪೂ ೨೧೨೩–೨೦೮೧) ಇದ್ದ. ಅವನು ರಾಜನ ಎಲ್ಲ ಕರ್ತವ್ಯಗಳನ್ನೂ ನಿರ್ವಹಿಸುತ್ತಿದ್ದ. ಅವನು ಪ್ರಸಿದ್ಧನಾಗಿರುವುದು, ಸೂರ್ಯದೇವನಿಂದ ಕೊಡಮಾಡಲಾಯಿತೆಂದು ನಂಬಲಾದ ನಿಯಮಸಂಹಿತೆಯನ್ನು ರೂಪಿಸಿದ್ದರಿಂದಾಗಿ; ಮತ್ತು ಬೇರಾವ ಮಧ್ಯಕಾಲೀನ ರಾಜನೂ ಮಾಡಲು ಸಾಧ್ಯವೇ ಇಲ್ಲದಿದ್ದಂತಹ ಕಾರ್ಯವನ್ನು ಸಾಧಿಸಿದ್ದರಿಂದಾಗಿ. ಅದೆಂದರೆ, ಧರ್ಮನ್ಯಾಯಪೀಠಗಳನ್ನು ನಾಗರಿಕ ನ್ಯಾಯಾಲಯಗಳಿಗೆ ಅಧೀನವಾಗಿಸಿದ್ದು. ಅಲ್ಲದೆ, ಅವನೊಬ್ಬ ಮಹಾಯೋಧನೂ ಶಿಲ್ಪಿಯೂ ಆಗಿದ್ದ. ಅವನ ವಿಜಯಗಳನ್ನು ಕುರಿತು ರಾಜಭಕ್ತ ಕವಿಗಳು ನಾನಾ ವಿಧವಾಗಿ ಸ್ತುತಿಗೈದಿದ್ದಾರೆ:

ಪರಮಯೋಧ, ದೊರೆ ಹಮ್ಮುರಾಬಿ
ತನ್ನ ಮಹಾಬಲವನ್ನು ಎಲ್ಲ ಕಾಲಕ್ಕೂ ತೋರಿದ್ದಾನೆ,
ಶತ್ರುವಿನ ತಲೆ ಹಾರಿಸಿದ್ದಾನೆ, ರಣರಂಗದಲ್ಲವನು ಬಿರುಗಾಳಿ.
ಎದುರಾಳಿಗಳ ಭೂಮಿಯನ್ನೊರೆಸಿ, ಯುದ್ಧ ಸ್ಥಗಿತಗೊಳಿಸಿದ್ದಾನೆ,
ಬಂಡಾಯವನ್ನು ಕೊನೆಗೊಳಿಸಿ, ವಿದ್ವೇಷಿಗಳನ್ನು
ಮಣ್ಣು ಬೊಂಬೆಗಳಂತೆ ಹಾಗೆ ಪುಡಿಗುಟ್ಟಿದ್ದಾನೆ,
ಎತ್ತರದ ಗಿರಿಶಿಖರಗಳ ಮಟ್ಟಗೊಳಿಸಿದ್ದಾನೆ.

ನೀರಾವರಿಯ ಕ್ಷೇತ್ರದಲ್ಲಿ ಮಾಡಿದ ಅನ್ವೇಷಣೆಗಳನ್ನು ಅವನೇ ದಾಖಲಿಸಿದ್ದಾನೆ: "ಅನು ಮತ್ತು ಎನ್ಲಿಲ್ (ದೇವತೆಗಳು) ಸುಮೇರು ಮತ್ತು ಅಕ್ಕಡ್‌ಗಳನ್ನು ನನಗೆ ದಯಪಾಲಿಸಿ ಅವುಗಳ ಅಧಿಕಾರವನ್ನು ಒಪ್ಪಿಸಿದಾಗ, ನಾನು 'ಜನಗಳ ಚಿಂತಾಮಣಿ ಹಮ್ಮುರಾಬಿ' ಕಾಲುವೆಯನ್ನು ತೋಡಿಸಿದೆ; ಅದು ಸುಮೇರು ಮತ್ತು ಅಕ್ಕಡ್‌ಗಳಿಗೆ ನೀರನ್ನು ಹರಿಸುತ್ತದೆ. ಸುಮೇರು ಮತ್ತು ಅಕ್ಕಡ್‌ಗಳ ಚದುರಿಹೋದ ಜನತೆಯನ್ನು ನಾನು ಒಗ್ಗೂಡಿಸಿದೆ, ಗೋಮಾಳ ಮತ್ತು ನೀರಾವರಿ ಸೌಲಭ್ಯಗಳನ್ನವರಿಗೆ ಒದಗಿಸಿದೆ, ಅವರು ಹಾಯಾಗಿ ನೆಲೆಸಲು ಸಹಕರಿಸಿದೆ."

ಮಹಾ ಪಿರಮಿಡ್‌ನ ಹೊತ್ತಿಗೆ ಈಜಿಪ್ಟ್‌ನಲ್ಲಿ ಮತ್ತು ಹಮ್ಮುರಾಬಿಯ ಕಾಲದ ಹೊತ್ತಿಗೆ ಬ್ಯಾಬಿಲೋನಿಯದಲ್ಲಿ ರಾಜಪ್ರಭುತ್ವವು ಒಂದು ಸಂಸ್ಥೆಯಾಗಿ ಸಂಪೂರ್ಣ ವಿಕಾಸಗೊಂಡಿತ್ತು. ಆನಂತರದ ರಾಜರುಗಳ ಆಡಳಿತವ್ಯಾಪ್ತಿಗೆ ಇನ್ನೂ ವಿಶಾಲ ಪ್ರದೇಶಗಳು ಒಳಪಟ್ಟಿರಬಹುದು, ಆದರೆ ತಮ್ಮ ಸಾಮ್ರಾಜ್ಯಗಳ ಮೇಲೆ ಆಗಿಗಿಂತ ಹೆಚ್ಚಿನ ಹಿಡಿತ ಸಾಧಿಸಿರಲಿಲ್ಲ. ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳ ಅಧಿಕಾರವು ಕೊನೆಗೊಂಡದ್ದು ಪರಕೀಯ ಆಕ್ರಮಣದಿಂದಾಗಿಯೇ ಹೊರತು ಆಂತರಿಕ ಬಂಡಾಯದ ಕಾರಣದಿಂದಲ್ಲ. ಪುರೋಹಿತಶಾಹಿಯೊಡನೆ ಸಂಘರ್ಷಕ್ಕಿಳಿಯಲು ಅವರಿಗೆ ಸಾಧ್ಯವಾಗಲಿಲ್ಲ ಎನ್ನುವುದು ನಿಜ; ಯಾಕೆಂದರೆ ಪ್ರಜೆಗಳು ತಮಗೆ ವಿಧೇಯರಾಗಿರಲು ತಮ್ಮ ರಾಜಪ್ರಭುತ್ವಕ್ಕೆ ಧಾರ್ಮಿಕ ಮಾನ್ಯತೆಯ ಆವಶ್ಯಕತೆಯಿತ್ತು. ಈ ಒಂದು ಅಂಶವನ್ನು ಹೊರತುಪಡಿಸಿ ಅವರ ಅಧಿಕಾರಕ್ಕೆ ಮಿತಿಯೇ ಇರಲಿಲ್ಲ.

ಗ್ರೀಕರು ತಮ್ಮ ಬಹುಪಾಲು ನಗರಗಳಲ್ಲಿನ ರಾಜರನ್ನು ರಾಜಕೀಯ ಆಡಳಿತಗಾರರಾಗಿ ಹೊರದೂಡಿದರು; ಇದು ನಡೆದದ್ದು ಇತಿಹಾಸಕಾಲ ಅಥವಾ ಅದರ ಆರಂಭದಲ್ಲಿ. ರೋಮನ್ ರಾಜರುಗಳು ಇತಿಹಾಸಪೂರ್ವದವರು, ಅಲ್ಲದೆ ರೋಮನ್‌ರು ತಮ್ಮ ಇತಿಹಾಸದುದ್ದಕ್ಕೂ

ರಾಜ ಎಂಬ ಶಬ್ದದ ಬಗ್ಗೆಯೇ ಒಂದು ಬಗೆಯ ಅಸಹ್ಯಭಾವನೆಯನ್ನು ಹೊಂದಿದ್ದರು. ಪಶ್ಚಿಮದ ರೋಮನ್ ಸಮ್ರಾಟನು ಅದರ ಪೂರ್ಣ ಅರ್ಥದಲ್ಲಿ ರಾಜನೇ ಆಗಿರಲಿಲ್ಲ. ಅವನು ಬಂದದ್ದು ನಿಯಮಬಾಹಿರ ಮೂಲದಿಂದ, ಅವನು ಸದಾ ಅವಲಂಬಿಸಿದ್ದು ಸೈನ್ಯಬಲವನ್ನು. ನಾಗರಿಕರ ಮುಂದೆ ತಾನು ದೈವಾಂಶಸಂಭೂತನೆಂದು ಹೇಳಿಕೊಂಡಿರಬಹುದು; ಆದರೆ, ಅವನು ಧರ್ಮಸಂಸ್ಥೆಗಳಿಗೆ ಸಾಕಾದಷ್ಟು ದತ್ತಿಯನ್ನು ಕೊಟ್ಟನೋ ಬಿಟ್ಟನೋ, ಸೈನಿಕರ ದೃಷ್ಟಿಯಲ್ಲಿ ಮಾತ್ರ ಅವನೊಬ್ಬ ಸೇನಾಧಿಪತಿ. ಕಿರಿದಾದ ಅವಧಿಯ ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ, ಸಾಮ್ರಾಜ್ಯವು ಆನುವಂಶಿಕವಾಗಿ ಬರಲಿಲ್ಲ. ನಿಜವಾದ ಅಧಿಕಾರ ಇದ್ದದು ಸೇನೆಯ ಹಿಡಿತದಲ್ಲಿ, ಅಂತೆಯೇ, ಸಮ್ರಾಟನು ಅದರ ತಾತ್ಕಾಲಿಕ ಮುಖ್ಯಸ್ಥನಾಗಿ ನಾಮಕರಣಗೊಂಡವನು, ಅಷ್ಟೆ.

ಅನಾಗರಿಕ ಬುಡಕಟ್ಟುಗಳ ಆಕ್ರಮಣವು ರಾಜಪ್ರಭುತ್ವವನ್ನು ಮರಳಿ ಜಾರಿಗೆ ತಂದಿತು, ಆದರೆ ಬದಲಾವಣೆಯೊಂದಿಗೆ. ಹೊಸ ರಾಜರು ಜರ್ಮಾನಿಕ್ ಬುಡಕಟ್ಟುಗಳ ಮುಖ್ಯಸ್ಥರಾಗಿದ್ದರು, ಅವರಿಗೆ ಗರಿಷ್ಠ ಅಧಿಕಾರವಿರಲಿಲ್ಲ, ಅವರು ಸದಾ ಹಿರಿಯರ ಅಥವಾ ರಕ್ತಸಂಬಂಧಿಗಳ ಸದಸ್ಸಿನ ಸಹಕಾರದ ಮೇಲೆ ಅವಲಂಬಿಸಿರಬೇಕಾಗಿತ್ತು. ಜರ್ಮಾನಿಕ್ ಬುಡಕಟ್ಟು ರೋಮನ್ ಪ್ರಾಂತ್ಯವನ್ನು ವಶಪಡಿಸಿಕೊಂಡಾಗ, ಅದರ ಮುಖ್ಯಸ್ಥನೇ ರಾಜನಾದ, ಆದರೆ ಅವನ ಪ್ರಮುಖ ಸಹವರ್ತಿಗಳು ಪರಿಮಿತ ಸ್ವಾತಂತ್ರ್ಯವುಳ್ಳ ಸಾಮಂತರಾದರು. ಹೀಗೆ ಊಳಿಗಮಾನ್ಯ ಪದ್ಧತಿಯ ಉದಯವಾಯಿತು, ಇದರಿಂದಾಗಿ ಪಾಶ್ಚಾತ್ಯ ಯೂರೋಪಿನ ಎಲ್ಲ ರಾಜರುಗಳು ದಂಗೆಕೋರ ಬ್ಯಾರನ್‌ಗಳ ಮರ್ಜಿಯಲ್ಲಿರಬೇಕಾದ ಪರಿಸ್ಥಿತಿಯನ್ನು ಉಂಟುಮಾಡಿತು.

ಇದರಿಂದಾಗಿ, ಚರ್ಚ್ ಮತ್ತು ಸಾಮಂತಪ್ರಭುಗಳ ಉತ್ತಮ ಅಂಶಗಳನ್ನು ಪಡೆಯುವವರೆಗೂ, ರಾಜಪ್ರಭುತ್ವವು ದುರ್ಬಲವಾಗಿಯೇ ಉಳಿಯಿತು. ಚರ್ಚ್ ದುರ್ಬಲಗೊಳ್ಳಲು ಇದ್ದ ಕಾರಣಗಳನ್ನಾಗಲೇ ಪರಿಶೀಲಿಸಿದ್ದೇವೆ. ಸಾಮಂತರು ರಾಜನೊಂದಿಗಿನ ಘರ್ಷಣೆಯಲ್ಲಿ ಇಂಗ್ಲಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಸೋತಿದ್ದರು, ಏಕೆಂದರೆ ಸುವ್ಯವಸ್ಥಿತವಾದ ಸರ್ಕಾರಕ್ಕೆ ಅವರೊಂದು ಅಡ್ಡಿ ಎನಿಸಿತ್ತು. ಜರ್ಮನಿಯಲ್ಲಾದರೋ ಸಾಮಂತ ಮುಂದಾಳುಗಳು ಸಣ್ಣ ಪುಟ್ಟ ರಾಜರುಗಳೇ ಆಗಿಬಿಟ್ಟರು; ಇದರಿಂದಾಗಿ ಜರ್ಮನಿ ಫ್ರಾನ್ಸ್‌ನ ಕೃಪೆಯಲ್ಲಿರಬೇಕಾಗಿತ್ತು. ಪೋಲಂಡ್‌ನಲ್ಲಿ ವಿಭಜನೆಯವರೆಗೂ ಶ್ರೀಮಂತ ಅನಾಯಕತ್ವವು ಮುಂದುವರೆಯಿತು. ಇಂಗ್ಲಂಡ್ ಫ್ರಾನ್ಸ್‌ಗಳಲ್ಲಿ, ಶತಮಾನಕಾಲದ ಯುದ್ಧ ಮತ್ತು ಗುಲಾಬಿಗಳ

ಯುದ್ಧಗಳ ನಂತರ ಸಾಮಾನ್ಯ ಪ್ರಜೆಗಳು ಬಲಿಷ್ಠ ರಾಜನಲ್ಲಿಯೇ ತಮ್ಮ ನಂಬಿಕೆಯಿಡಬೇಕಾದ ಅನಿವಾರ್ಯ ಪರಿಸ್ಥಿತಿಯೊದಗಿತ್ತು. ನಾಲ್ಕನೆಯ ಎಡ್ವರ್ಡ್ ಲಂಡನ್ ನಗರದ ನೆರವಿನಿಂದ ಜಯಶೀಲನಾದ, ಅಲ್ಲಿಂದಲೇ ತನ್ನ ರಾಣಿಯನ್ನೂ ಅವನು ಆಯ್ದುಕೊಂಡ. ಸಾಮಂತ ಪ್ರಭುತ್ವದ ವಿರೋಧಿಯಾಗಿದ್ದ ಹನ್ನೊಂದನೆಯ ಲೂಯಿ ಮೇಲು ಮಧ್ಯಮವರ್ಗದವರ ಸ್ನೇಹಿತನಾಗಿದ್ದ; ಅವರು ಅವನಿಗೆ ಸಾಮಂತರ ವಿರುದ್ಧ ಸಹಾಯಮಾಡಿದರೆ, ಅವನು ಅವರಿಗೆ ಕುಶಲಕರ್ಮಿಗಳ ವಿರುದ್ಧ ಸಹಾಯ ಮಾಡಿದ್ದ. "ಅವನು ಒಬ್ಬ ದೊಡ್ಡ ಬಂಡವಾಳಶಾಹಿಯಂತೆ ಆಳಿದ" ಎಂಬುದು *ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ* ಕೊಟ್ಟಿರುವ ಅಧಿಕೃತ ತೀರ್ಪು.

ಚರ್ಚ್‌ನೊಂದಿಗಿನ ಘರ್ಷಣೆಯಲ್ಲಿ ಹಿಂದಿನ ರಾಜರುಗಳೊಡನೆ ಹೋಲಿಸಿದಾಗ, ನವೋದಯದ ರಾಜಪ್ರಭುತ್ವಗಳಿಗೆ ಒಂದು ದೊಡ್ಡ ಅನುಕೂಲವಿತ್ತು; ಅದೇನೆಂದರೆ, ವಿದ್ಯಾಭ್ಯಾಸವು ಕೇವಲ ಮತಪ್ರಸಾರಕರಿಗೆ ಸೀಮಿತವಾಗಿರದಿದ್ದುದು. ಹೊಸ ರಾಜಪ್ರಭುತ್ವದ ಸ್ಥಾಪನೆಯಲ್ಲಿ ಸಾಮಾನ್ಯ ನ್ಯಾಯವಾದಿಗಳ ಸಹಾಯವು ಅಮೂಲ್ಯವಾದುದಾಗಿತ್ತು.

ಇಂಗ್ಲಂಡ್, ಫ್ರಾನ್ಸ್ ಮತ್ತು ಸ್ಪೈನ್‌ಗಳಲ್ಲಿನ ಹೊಸ ರಾಜಪ್ರಭುತ್ವಗಳು ಚರ್ಚ್ ಮತ್ತು ಶ್ರೀಮಂತವರ್ಗಗಳನ್ನೂ ಮೀರಿ ನಿಂತಿದ್ದವು. ಅವುಗಳ ಅಧಿಕಾರವು ಎರಡು ಬೆಳೆಯುತ್ತಿದ್ದ ಶಕ್ತಿಗಳನ್ನವಲಂಬಿಸಿತ್ತು; ರಾಷ್ಟ್ರೀಯತೆ ಮತ್ತು ವಾಣಿಜ್ಯ; ಆ ಎರಡೂ ಈ ಎರಡಕ್ಕೆ ಅನುಕೂಲಕರವೆಂದು ಭಾವಿಸಿರುವವರೆಗೂ ಅವು ಶಕ್ತಿಶಾಲಿಯಾಗಿದ್ದವು, ಆದರೆ ಈ ವಿಷಯದಲ್ಲಿ ಅವು ಸೋತಾಗ ಕ್ರಾಂತಿ ನಡೆಯಿತು. ಈ ಎರಡೂ ವಿಷಯಗಳಲ್ಲಿ ಟ್ಯೂಡರ್‌ಗಳು ಕಳಂಕರಹಿತವಾಗಿದ್ದರು; ಆದರೆ ಸ್ಟುಅರ್ಟ್‌ಗಳು ಆಸ್ಥಾನಿಕರಿಗೇ ಏಕಸ್ವಾಮ್ಯವನ್ನು ನೀಡುವುದರ ಮೂಲಕ ವಾಣಿಜ್ಯದ ಬೆಳವಣಿಗೆಗೆ ಅಡ್ಡಿ ತಂದರು; ಇದರಿಂದ ಮೊದಲು ಸ್ಪೈನ್‌ನ, ಆನಂತರ ಫ್ರಾನ್ಸ್‌ನ ರಥಚಕ್ರಗಳಡಿ ಇಂಗ್ಲಂಡ್ ಬರಲು ಅವಕಾಶವಾಯಿತು. ಫ್ರಾನ್ಸ್ ರಾಜಪ್ರಭುತ್ವವು ವಾಣಿಜ್ಯಕ್ಕೆ ಅನುಕೂಲವೊದಗಿಸಿ ಕೋಲ್‌ಬರ್ಟ್‌ನ ಅಧಿಕಾರದವರೆಗೆ ರಾಷ್ಟ್ರೀಯ ಅಧಿಕಾರವನ್ನು ಹೆಚ್ಚಿಸಿದರು. ಆ ಸಮಯದ ನಂತರ, ನಾಂಟೀಸ್‌ನ ಎಡಿಕ್ಟ್‌ನ ಅಧಿಕಾರರದ್ದತಿ, ಹೆಚ್ಚು ಹೆಚ್ಚು ವಿನಾಶಕಾರಕವಾದ ಯುದ್ಧ ಪರಂಪರೆ, ಕರಭಾರ ಮತ್ತು ಧರ್ಮಗುರುಗಳು ಹಾಗೂ ನೋಬಲ್‌ಗಳಿಗೆ ಆರ್ಥಿಕ ಭಾರದಿಂದ ನೀಡಿದ ವಿನಾಯಿತಿ – ಇವುಗಳು ವಾಣಿಜ್ಯ ಮತ್ತು ರಾಷ್ಟ್ರೀಯತೆಗಳೆರಡೂ ರಾಜನ ವಿರುದ್ಧ

ತಿರುಗುವಂತೆ ಮಾಡಿದವು, ಕೊನೆಯಲ್ಲಿ ಕ್ರಾಂತಿಯನ್ನೇ ತಂದವು. ಸ್ಪೈನ್ ಅನ್ನು ಹೊಸ ಜಗತ್ತಿನ ವಿಜಯದಿಂದ ತಪ್ಪಿಸಿಕೊಳ್ಳುವಂತೆ ಮಾಡಲಾಯಿತು; ಆದರೆ ದಂಗೆಯೆದ್ದ ಸ್ಪಾನಿಶ್ ನವ ಜಗತ್ತೇ ಹಾಗೆ ಮಾಡಿದ್ದು, ಮುಖ್ಯವಾಗಿ ಇಂಗ್ಲಂಡ್ ಮತ್ತು ಸಂಯುಕ್ತ ಸಂಸ್ಥಾನಗಳೊಡನೆ ವಾಣಿಜ್ಯ ಸಂಬಂಧ ಹೊಂದುವ ಉದ್ದೇಶದಿಂದ.

ವಾಣಿಜ್ಯವು ಸಾಮಂತ ಅನಾಯಕತ್ವದ ವಿರುದ್ಧ ರಾಜರನ್ನು ಬೆಂಬಲಿಸಿದರೂ, ತಾನು ಸಾಕಷ್ಟು ಪ್ರಬಲವಾಗಿರುವ ಭಾವನೆಯುಂಟಾದಾಗ ಗಣತಂತ್ರವಾದಿಯಾಗಿತ್ತು. ಮಧ್ಯಯುಗದ ಉತ್ತರ ಇಟಾಲಿಯನ್ ಮತ್ತು ಹ್ಯಾನಸಿಯಾಟಿಕ್ ನಗರಗಳಲ್ಲಿ ಪ್ರಾಚೀನ ಕಾಲದಲ್ಲೂ ಹಾಗೆಯೇ, ಉತ್ತುಂಗ ಕಾಲದಲ್ಲಿನ ಹಾಲಂಡ್‌ನಲ್ಲಿಯೂ ಹಾಗೆಯೇ. ಹೀಗಾಗಿ ರಾಜರು ಮತ್ತು ವಾಣಿಜ್ಯಗಳ ನಡುವಣ ಒಪ್ಪಂದವು ಇರಿಸುಮುರಿಸಿನದೇ ಆಗಿತ್ತು. ರಾಜರು ತಮ್ಮ 'ದೈವದತ್ತ ಹಕ್ಕುಗಳ'ನ್ನು ಪ್ರತಿಪಾದಿಸಿ, ತಮ್ಮ ಅಧಿಕಾರವು ಸಾಂಪ್ರದಾಯಿಕವೂ ಅರೆಧಾರ್ಮಿಕವೂ ಆಗಿರಲು ಸಾಧ್ಯವಾದಷ್ಟೂ ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರು ಭಾಗಶಃ ಯಶಸ್ವಿಗಳಾದರು: ಮೊದಲನೆಯ ಚಾರ್ಲ್ಸ್‌ನ ಮರಣದಂಡನೆಯನ್ನು ಕೇವಲ ಸಾಧಾರಣ ಅಪರಾಧವೆಂದು ಗಣಿಸದೆ ಅಧಾರ್ಮಿಕವೆಂದು ಭಾವಿಸಲಾಯಿತು. ಫ್ರಾನ್ಸ್‌ನಲ್ಲಿ ಸಂತ ಲೂಯಿಯನ್ನು ಒಬ್ಬ ಪುರಾಣಪುರುಷನೆಂದು ಬಿಂಬಿಸಲಾಯಿತು; ಅವನ ದೈವಿಕತೆಯ ಕೆಲವು ಅಂಶಗಳು ಹದಿನಾಲ್ಕನೆಯ ಲೂಯಿಗೂ ಇಳಿದುಬಂತು, ಅವನು 'ಸಂಪೂರ್ಣ ಕ್ರಿಶ್ಚಿಯನ್ ದೊರೆ' ಎಂದೇ ಇನ್ನೂ ಅನ್ನಿಸಿಕೊಂಡಿದ್ದ. ಒಂದು ಹೊಸ ಆಸ್ಥಾನ ಶ್ರೀಮಂತವರ್ಗವನ್ನು ಸೃಷ್ಟಿಸಿ, ರಾಜರು ಅವರನ್ನು ಮಧ್ಯಮವರ್ಗಕ್ಕಿಂತ ಹೆಚ್ಚು ಇಷ್ಟಪಟ್ಟರು. ಇಂಗ್ಲಂಡ್‌ನಲ್ಲಿ ಉನ್ನತ ಶ್ರೀಮಂತವರ್ಗ ಮತ್ತು ಮಧ್ಯಮವರ್ಗಗಳು ಜೊತೆಗೂಡಿ, ಹೆಸರಿಗೊಂದು ಪಾರ್ಲಿಮೆಂಟ್ ಇದ್ದು, ರಾಜನನ್ನು ಸಿಂಹಾಸನದ ಮೇಲೆ ಕೂರಿಸಿದರು; ಆದರೆ ಅವನಿಗೆ ಹಿಂದಿನ ಯಾವ ಮಾಂತ್ರಿಕ ಶಕ್ತಿಗಳೂ ಉಳಿಯಲಿಲ್ಲ. ಉದಾಹರಣೆಗೆ, ಮೊದಲನೆಯ ಜಾರ್ಜ್ ರಾಜನ ಕೆಡುಕನ್ನು ಪರಿಹರಿಸಲಾಗಲಿಲ್ಲ, ಆದರೆ ರಾಣಿ ಆ್ಯನ್‌ಗೆ ಅದು ಸಾಧ್ಯವಾಯಿತು. ಫ್ರಾನ್ಸ್‌ನಲ್ಲಿಯಾದರೋ, ರಾಜನು ಶ್ರೀಮಂತವರ್ಗವನ್ನು ಗೆದ್ದ, ಆದರೆ ಅವನ ಮತ್ತು ಅವರ ತಲೆಗಳು ಒಟ್ಟಾಗಿ ಗಿಲೊಟೀನ್‌ಗೆ ತುತ್ತಾದವು.

ಫ್ರೆಡೆರಿಕ್ ಬಾರ್ಬರೋಸ ಕಾಲದ ಲೊಂಬಾರ್ಡ್ ಒಕ್ಕೂಟದೊಡನೆ ಆರಂಭಗೊಂಡ ವಾಣಿಜ್ಯ ಮತ್ತು ರಾಷ್ಟ್ರೀಯತೆಗಳ ಒಪ್ಪಂದವು ಕ್ರಮೇಣ ಯೂರೋಪ್‌ನಲ್ಲಿ ಹರಡಿತು, ಅದರ ಕೊನೆಯ ಮತ್ತು ಅತ್ಯಂತ

ಕಿರುಗಾಲದ ಗೆಲವೆಂದರೆ ರಷ್ಯದ ಫೆಬ್ರವರಿ ಕ್ರಾಂತಿಯದು. ಎಲ್ಲೆಲ್ಲಿ ಅಧಿಕಾರವನ್ನು ಪಡೆಯಿತೋ ಅಲ್ಲೆಲ್ಲ ಅದು ಭೂಮಿಯ ಆಧಾರದ ಮೇಲಿನ ಸಾಂಪ್ರದಾಯಿಕ ಅಧಿಕಾರವನ್ನು ವಿರೋಧಿಸಿತು, ಮೊದಲು ರಾಜಪ್ರಭುತ್ವದೊಡನೆ ಸೇರಿ, ಆನಂತರ ಅದಕ್ಕೆ ವಿರುದ್ಧವಾಗಿ. ಕೊನೆಯಲ್ಲಿ, ಎಲ್ಲಡೆಯೂ ರಾಜರು ಇಲ್ಲವೇ ಕಣ್ಮರೆಯಾದರು, ಇಲ್ಲವೇ ಕೇವಲ ನಾಮಮಾತ್ರವಾಗಿ ಉಳಿದರು. ಈಗ ಅಂತಿಮವಾಗಿ ವಾಣಿಜ್ಯ ಮತ್ತು ರಾಷ್ಟ್ರೀಯತೆಗಳು ಬೇರೆಯಾದಂತಾಯಿತು; ಇಟಲಿ, ಜರ್ಮನಿ ಹಾಗೂ ರಷ್ಯಾಗಳಲ್ಲಿ ಗೆದ್ದದ್ದು ರಾಷ್ಟ್ರೀಯತೆ. ಹನ್ನೆರಡನೆಯ ಶತಮಾನದಲ್ಲಿ ಮಿಲಾನ್‌ನಲ್ಲಿ ಆರಂಭಗೊಂಡ ಲಿಬರಲ್ ಆಂದೋಲನವು ತನ್ನ ದಾರಿಯನ್ನು ಸವೆಸಿದೆ.

ಹೊರಗಿನಿಂದ ಭಗ್ನಗೊಳ್ಳದಿದ್ದರೆ, ಸಾಂಪ್ರದಾಯಿಕ ಅಧಿಕಾರವು ಸಾಮಾನ್ಯವಾಗಿ ಸ್ವಲ್ಪ ಮಟ್ಟಿಗಿನ ಬೆಳವಣಿಗೆಯೊಂದಿಗೆ ಮುಂದುವರಿಯುತ್ತದೆ. ಅದು ಉಕ್ಕಿಸುವ ಗೌರವದಿಂದ ಬಲಿಷ್ಠಗೊಂಡು ಸಾಮಾನ್ಯ ಒಪ್ಪಿಗೆಯ ಬಗ್ಗೆ ಅವಜ್ಞೆ ತೋರಿಸುತ್ತದೆ, ತಾನೆಂದೂ ಅದನ್ನು ಕಳೆದುಕೊಳ್ಳೆನೆಂಬ ಭರವಸೆ ಅದರದ್ದು. ಆಲಸ್ಯ, ತಪ್ಪು ಅಥವಾ ಕ್ರೌರ್ಯಗಳಿಂದಾಗಿ ಜನರು ನಿಧಾನವಾಗಿ ಅದರ ದೈವಿಕ ಅಧಿಕಾರದ ಬಗ್ಗೆ ಸಂದೇಹ ಹೊಂದುವಂತೆ ಆಗುತ್ತದೆ. ಇದಕ್ಕೆ ರೂಢಿಗಿಂತ ಬಲವಾದ ಯಾವ ಆಧಾರಗಳಿಲ್ಲದ್ದರಿಂದ, ಒಮ್ಮೆ ಟೀಕೆಗಳು ಬರಲು ತೊಡಗಿದರೆ ಸುಲಭವಾಗಿ ಕೆಳಗಿಳಿಸುತ್ತದೆ. ವಿರೋಧಿಗಳಿಗೆ ಅನುಕೂಲಕರವಾದ ಯಾವುದೋ ಮತ್ತೊಂದು ಹೊಸ ಸಿದ್ಧಾಂತ ಹಳೆಯದರ ಜಾಗವನ್ನು ಆಕ್ರಮಿಸಿಕೊಳ್ಳುತ್ತದೆ; ಅಥವಾ ಕೆಲವು ವೇಳೆ, ಫ್ರೆಂಚರಿಂದ ಸ್ವಾತಂತ್ರ್ಯ ಗಳಿಸಿದ ಹೈತಿಯಲ್ಲಾದಂತೆ, ಗೊಂದಲವಷ್ಟೇ ಉಂಟಾಗಬಹುದು. ಮಾನಸಿಕ ಬಂಡಾಯವು ವ್ಯಾಪಕಗೊಳ್ಳಲು ದೀರ್ಘಕಾಲದ ದರ್ಪಿಷ್ಟ ದುರಾಡಳಿತ ನಡೆದಿರಬೇಕು; ಅನೇಕ ಸಂದರ್ಭಗಳಲ್ಲಿ ಹಳೆಯ ಅಧಿಕಾರವನ್ನು ಇಡಿಯಾಗಿಯೋ ಭಾಗಶಃವೋ ಬಂಡಾಯಗಾರರು ತಾವೇ ಪಡೆದುಕೊಳ್ಳುವುದು ನಡೆಯುತ್ತದೆ. ಹೀಗೆಯೇ ಆಗಸ್ಟಸ್ ಸೆನೆಟ್‌ನ ಪಾರಂಪರಿಕ ಅಧಿಕಾರವನ್ನು ತಾನೇ ಪಡೆದದ್ದು; ಪ್ರಾಟೆಸ್ಟಂಟ್‌ರು ಬೈಬಲ್ ಬಗ್ಗೆ ಗೌರವ ಭಾವನೆಯನ್ನು ಉಳಿಸಿಕೊಂಡರು, ಆದರೆ ಕ್ಯಾಥೋಲಿಕ್ ಚರ್ಚ್ ಬಗೆಗಿನ ಗೌರವನ್ನು ನೀಗಿಕೊಂಡರು; ಬ್ರಿಟಿಷ್ ಪಾರ್ಲಿಮೆಂಟ್ ಕ್ರಮೇಣ ರಾಜನ ಅಧಿಕಾರವನ್ನು ಪಡೆದುಕೊಂಡಿತು, ಆದರೆ ರಾಜನ ಬಗೆಗಿನ ಗೌರವವನ್ನು ಹಾಳುಮಾಡಲಿಲ್ಲ.

ಆದರೆ ಇವೆಲ್ಲ ಸೀಮಿತ ಕ್ರಾಂತಿಗಳು; ಇನ್ನಷ್ಟು ವ್ಯಾಪಕವಾದವು ಹೆಚ್ಚಿನ ತೊಂದರೆಗಳನ್ನು ಅನುಭವಿಸಸಬೇಕಾಯಿತು. ಆನುವಂಶೀಯ ರಾಜತ್ವದ ಸ್ಥಾನದಲ್ಲಿ ಗಣತಂತ್ರಾತ್ಮಕ ಸರ್ಕಾರವನ್ನು ತರುವ ಪ್ರಕ್ರಿಯೆಯು ಇದ್ದಕ್ಕಿದ್ದಂತೆ ನಡೆದ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಅನೇಕ ಬಗೆಯ ಸಮಸ್ಯೆಗಳನ್ನು ಹುಟ್ಟುಹಾಕಿತು. ಇದಕ್ಕೆ ಕಾರಣ, ಅದೂ ಸ್ವಹಿತಾಸಕ್ತಿಯಿಂದ ಕೂಡಿದ ಸಂದರ್ಭಗಳಲ್ಲಿ, ಹೊಸ ಸಂವಿಧಾನವು ಜನರ ಮನಸ್ಸಿನ ಮೇಲೆ ಹಿಡಿತವಿಟ್ಟುಕೊಳ್ಳದೆ, ಅದರ ಬಗ್ಗೆ ಗೌರವ ಮಾತ್ರ ಇರುವಂತಾದುದು. ಇದರಿಂದ ಮಹತ್ವಾಕಾಂಕ್ಷಿಗಳಾದವರು ನಿರಂಕುಶಪ್ರಭುಗಳಾಗಲು ಪ್ರಯತ್ನಿಸಿದರು, ಇದು ದೀರ್ಘಕಾಲ ವಿಫಲಗೊಂಡ ಮೇಲೆಯೇ ಅದಕ್ಕೆ ವಿರೋಧ ವ್ಯಕ್ತವಾಗುತ್ತಿದ್ದುದು. ಅಂಥದೊಂದು ಸನ್ನಿವೇಶ ಬಾರದಿದ್ದಾಗ, ಗಣತಂತ್ರ ಸಂವಿಧಾನವು ಸ್ಥಿರತೆಗೆ ಆವಶ್ಯಕವಾದ ಮಟ್ಟಿಗೆ ಜನರ ಮನಸ್ಸಿನ ಮೇಲೆ ಹಿಡಿತ ಸಾಧಿಸಲಾರದು. ಅಮೆರಿಕ ಸಂಯುಕ್ತ ಸಂಸ್ಥಾನಗಳು ಮಾತ್ರ ಗಣತಂತ್ರವು ಆರಂಭದಿಂದಲೂ ಸಫಲವಾಗಿರುವ ಏಕೈಕ ನಿದರ್ಶನ.

ನಮ್ಮ ಕಾಲದ ಪ್ರಮುಖ ಕ್ರಾಂತಿಕಾರಕ ಆಂದೋಲನವೆಂದರೆ ಖಾಸಗಿ ವ್ಯಕ್ತಿಗಳ ಆರ್ಥಿಕ ಪ್ರಾಬಲ್ಯದ ಮೇಲೆ ಸಮಾಜವಾದ ಮತ್ತು ಕಮ್ಯುನಿಸಮ್‌ಗಳು ಮಾಡಿದ ದಾಳಿ. ಕ್ರಿಶ್ಚಿಯಾನಿಟಿ, ಪ್ರಾಟೆಸ್ಟಂಟಿಸಮ್, ಮತ್ತು ರಾಜಕೀಯ ಪ್ರಜಾಸತ್ತೆಗಳ ಉದಯದಲ್ಲಿ ಅಂತರ್ಗತವಾದ ಅಂಥ ಆಂದೋಲನಗಳ ಸಾಮಾನ್ಯ ಲಕ್ಷಣಗಳನ್ನು ನಾವು ಹುಡುಕಬೇಕಾಗುತ್ತದೆ. ಆದರೆ ಈ ವಿಷಯದ ಬಗ್ಗೆ ನಾನು ಮುಂದೆ ಒಂದು ಘಟ್ಟದಲ್ಲಿ ಪ್ರಸ್ತಾಪಿಸುತ್ತೇನೆ.

–o–o–o–o–

ಅಧ್ಯಾಯ ಆರು

ನಗ್ನ ಅಧಿಕಾರ

ಸಾಂಪ್ರದಾಯಿಕ ಅಧಿಕಾರಕ್ಕೆ ಪೂರಕವಾದ ನಂಬಿಕೆಗಳೂ ಅಭ್ಯಾಸಗಳೂ ಕುಂದಿದಂತೆ, ಕ್ರಮೇಣ ಅದರ ಸ್ಥಾನವನ್ನು ಹೊಸ ನಂಬಿಕೆಗಳ ಮೇಲೆ ಆಧರಿತವಾದ ಅಧಿಕಾರ ಅಥವಾ 'ನಗ್ನ ಅಧಿಕಾರ'ವು – ಅಂದರೆ ಪ್ರಜೆಯ ಸಮ್ಮತಿಯನ್ನು ಅವಲಂಬಿಸದೇ ಇರುವಂಥದು – ಆಕ್ರಮಿಸಿಕೊಳ್ಳುತ್ತದೆ. ಕಟುಕನು ಕುರಿಯ ಮೇಲೆ ಹೊಂದಿರುವಂಥದು, ದಾಳಿ ನಡೆಸಿ ದೇಶವನ್ನು ಗೆದ್ದುಕೊಂಡದ್ದು, ಪತ್ತೆ ಹಚ್ಚಿದ ಮೇಲೆ ಪಿತೂರಿಗಾರರ ಮೇಲೆ ಪೋಲೀಸ್ ತೋರಿಸುವಂಥದು, ಇದೇ ಅಧಿಕಾರ. ಕ್ಯಾಥೋಲಿಕ್‌ರ ಮೇಲೆ ಕ್ಯಾಥೋಲಿಕ್ ಚರ್ಚ್ ಹೊಂದಿರುವಂತದು ಸಾಂಪ್ರದಾಯಿಕ ಅಧಿಕಾರ, ಆದರೆ ಧರ್ಮದ್ರೋಹಿಗಳೆನ್ನಿಸಿಕೊಂಡವರ ಮೇಲೆ ಅದು ಶಿಕ್ಷೆ ವಿಧಿಸಿ ತೋರುವ ಅಧಿಕಾರ ನಗ್ನ ಅಧಿಕಾರ. ನಿಷ್ಠಾವಂತ ಪ್ರಜೆಗಳ ಮೇಲೆ ಸರ್ಕಾರ ತೋರುವ ಅಧಿಕಾರ ಸಾಂಪ್ರದಾಯಿಕ, ಆದರೆ ದಂಗೆಕೋರರ ವಿರುದ್ಧ ಅದು ತೋರುವುದು ನಗ್ನ ಅಧಿಕಾರ. ದೀರ್ಘಕಾಲ ಅಧಿಕಾರ ಚಲಾಯಿಸಿದ ಸಂಘಟನೆಗಳು ಸಾಮಾನ್ಯವಾಗಿ ಮೂರು ಘಟ್ಟಗಳನ್ನು ಹಾದು ಬರುತ್ತವೆ: ಒಂದು, ಗೆಲುವಿಗೆ ಕಾರಣವಾಗುವ ಸಾಂಪ್ರದಾಯಿಕ ನಂಬಿಕೆಯಾಗಿರದ ಮತಾಂಧತೆ; ಎರಡನೆಯದು, ಹೊಸ ಅಧಿಕಾರಕ್ಕೆ ಜನರ ಮೌನಸಮ್ಮತಿ, ಇದು ಬಹು ಬೇಗ ಸಾಂಪ್ರದಾಯಿಕವಾಗಿಬಿಡುತ್ತದೆ; ಮೂರು, ಸಾಂಪ್ರದಾಯಿಕತೆಯನ್ನು ನಿರಾಕರಿಸುವವರ ವಿರುದ್ಧ ಈಗ ಚಲಾಯಿಸುವ ಅಧಿಕಾರವು ಮತ್ತೆ ನಗ್ನವಾಗುವುದು. ಈ ಘಟ್ಟಗಳನ್ನು ಹಾದುಹೋಗುವ ಸಂಘಟನೆಯ ಸ್ವರೂಪವು ಬಹಳ ಬದಲಾಗುತ್ತದೆ.

ಸೈನಿಕಬಲದಿಂದ ಪಡೆದ ಅಧಿಕಾರವು ಎಷ್ಟೋ ವೇಳೆ ಹೆಚ್ಚು ಕಡಿಮೆ ಅವಧಿಗಳಲ್ಲಿ ಕೊನೆಗೊಂಡು ಬರಿ ಸೈನ್ಯವಾಗಿ ಉಳಿಯುತ್ತದೆ. ರೋಮನ್‌ರು ಗೆದ್ದ ಎಲ್ಲ ಪ್ರಾಂತಗಳು, ಜೂಡ್ಸ್ ಅನ್ನು ಹೊರತುಪಡಿಸಿದರೆ, ಬಹು ಬೇಗ ಸಾಮ್ರಾಜ್ಯಕ್ಕೆ ನಿಷ್ಠವಾದವು, ಅವುಗಳ ಸ್ವಾತಂತ್ರ್ಯಾಪೇಕ್ಷೆ ಕುಂದಿಹೋಯಿತು. ಏಷ್ಯಾ ಮತ್ತು ಆಫ್ರಿಕದಲ್ಲಿನ ಕ್ರಿಶ್ಚಿಯನ್ ದೇಶಗಳನ್ನು ಮಹಮ್ಮದೀಯರು ಗೆದ್ದ ಮೇಲೆ ಅವು ಹಿಂದುಮುಂದು ನೋಡದೆ ಹೊಸ ಆಡಳಿತಗಾರರ ಆಳ್ವಿಕೆಗೊಳಗಾದರು. ಇಂಗ್ಲಿಷ್ ಆಡಳಿತಕ್ಕೆ ವೇಲ್ಸ್ ಕ್ರಮೇಣ

ಸಮ್ಮತಿ ತೋರಿತು, ಆದರೆ ಐರ್ಲಂಡ್ ಹಾಗೆ ಮಾಡಲಿಲ್ಲ. ಆಲ್ಬಿಜೆನ್ಸಿಯನ್[೧] ಧರ್ಮದ್ರೋಹಿಗಳನ್ನು ಸೈನ್ಯಬಲವು ಬಗ್ಗು ಬಡಿಯಿತು, ಅದರ ಅನುಯಾಯಿಗಳು ಚರ್ಚ್‌ನ ಅಧಿಕಾರಕ್ಕೆ ಅಂತರಂಗ ಬಹಿರಂಗಗಳಲ್ಲಿ ಶರಣಾದರು. ಇಂಗ್ಲಂಡ್‌ನಲ್ಲಿ ನಾರ್ಮನ್ ವಿಜಯವು ಒಂದು ರಾಜವಂಶವನ್ನು ಸೃಷ್ಟಿಸಿತು; ಕೆಲ ಕಾಲಾನಂತರ ಅದು ಸಿಂಹಾಸನದ ಮೇಲೆ ದೈವದತ್ತ ಅಧಿಕಾರವನ್ನು ಹೊಂದಿದೆಯೆಂಬ ನಂಬಿಕೆಯನ್ನು ಉಂಟುಮಾಡಿತು. ಸೈನ್ಯದ ಮೂಲಕ ಪಡೆಯುವ ಗೆಲವು ಸ್ಥಿರಗೊಳ್ಳುವುದು ಮನಸ್ಸುಗಳ ಮೇಲೆ ವಿಜಯವನ್ನು ಸಾಧಿಸಿದಾಗ ಮಾತ್ರ, ಆದರೆ ಹೀಗಾಗಿರುವ ಪ್ರಸಂಗಗಳು ಮಾತ್ರ ಅತ್ಯಲ್ಪ. ಆನಂತರ ವಿದೇಶಿ ಆಕ್ರಮಣಕ್ಕೊಳಗಾಗದ ಸಮುದಾಯವೊಂದರ ಆಂತರಿಕ ಸರ್ಕಾರದಲ್ಲಿನ ನಗ್ನ ಅಧಿಕಾರವು ಎರಡು ವಿಭಿನ್ನ ಪರಿಸ್ಥಿತಿಗಳಲ್ಲಿ ಉದ್ಭವಿಸುತ್ತದೆ: ಒಂದು, ಎರಡು ಅಥವಾ ಹೆಚ್ಚು ವಿರೋಧಿ ಬಣಗಳು ಆಧಿಪತ್ಯಕ್ಕಾಗಿ ಹೋರಾಡುತ್ತಿದ್ದಾಗ; ಮತ್ತು ಎರಡು, ಎಲ್ಲ ಸಾಂಪ್ರದಾಯಿಕ ನಂಬಿಕೆಗಳು ನಶಿಸಿ ಹೋಗಿ, ಹೊಸವು ಇನ್ನೂ ಮೂಡದೆ ವೈಯಕ್ತಿಕ ಆಕಾಂಕ್ಷೆಗಳಿಗೆ ಮಿತಿಯೇ ಇರದಿದ್ದಾಗ. ಮೊದಲನೆಯ ಬಗೆಯು ಶುದ್ಧವಾದುದಲ್ಲ, ಏಕೆಂದರೆ ಅಲ್ಲಿ ಪ್ರಬಲ ಬಣದ ಪ್ರತಿಪಾದಕರನ್ನು ನಗ್ನ ಅಧಿಕಾರಕ್ಕೊಳಪಡಿಸುವುದಿಲ್ಲ. ಅದರ ಬಗ್ಗೆ ನಾನು ಕ್ರಾಂತಿಕಾರಕ ಅಧಿಕಾರ ಎಂಬ ವಿಷಯದ ಬಗೆಗಿನ ಮುಂದಿನ ಅಧ್ಯಾಯದಲ್ಲಿ ಚರ್ಚಿಸುತ್ತೇನೆ. ಪ್ರಸ್ತುತದಲ್ಲಿ ನನ್ನ ಆಸಕ್ತಿಯಿರುವುದು ಎರಡನೆಯ ಅಧಿಕಾರದ ಬಗ್ಗೆ ಮಾತ್ರ.

ನಗ್ನ ಅಧಿಕಾರದ ವ್ಯಾಖ್ಯೆಯು ಮಾನಸಿಕವಾದುದು; ಒಂದು ಸರ್ಕಾರವು ತನ್ನ ಕೆಲವು ಪ್ರಜೆಗಳ ವಿಷಯದಲ್ಲಿ ನಗ್ನವಾಗಿದ್ದು, ಉಳಿದವರ ಬಗ್ಗೆ ಅಲ್ಲದಿರಬಹುದು. ನನಗೆ ಗೊತ್ತಿರುವ ಪೂರ್ಣ ನಿದರ್ಶನಗಳೆಂದರೆ, ವಿದೇಶೀ ಗೆಲವುಗಳಲ್ಲದೆ, ಈಚಿನ ಗ್ರೀಕ್ ನಿರಂಕುಶಪ್ರಭುತ್ವಗಳು ಹಾಗೂ ರಿನೈಸಾನ್ಸ್ ಇಟಲಿಯ ಕೆಲವು ಸರ್ಕಾರಗಳು. ರಾಜನೀತಿಯ ವಿದ್ಯಾರ್ಥಿಗೆ ತುಂಬ ಆಸಕ್ತಿದಾಯಕವೆನ್ನಿಸುವ ಸಣ್ಣ ಪ್ರಮಾಣದ ಅನೇಕ ಪ್ರಯೋಗಗಳು, ಪ್ರಯೋಗಶಾಲೆಯಲ್ಲಿಯಂತೆ, ಗ್ರೀಕ್ ಇತಿಹಾಸದಲ್ಲಿ ದೊರೆಯುತ್ತವೆ. ಐತಿಹಾಸಿಕ ದಾಖಲೆಗಳು ಆರಂಭಗೊಳ್ಳುವ ಮುಂಚೆಯೇ ಹೊಮೆರಿಕ್ ಯುಗದ ಆನುವಂಶಿಕ ರಾಜಪ್ರಭುತ್ವವು ಕೊನೆಗೊಂಡು ಆನುವಂಶಿಕ ಶ್ರೀಮಂತಪ್ರಭುತ್ವವು ಆರಂಭಗೊಂಡಿತ್ತು. ಗ್ರೀಕ್ ನಗರಗಳಿಗೆ ಸಂಬಂಧಿಸಿದ

೧ ರೋಮನ್ ಕ್ಯಾಥೋಲಿಕ್‌ರು (ಹಿಂದೆ ಫ್ರಾನ್ಸ್‌ನ ಭಾಗವಾಗಿದ್ದ) ಲ್ಯಾಂಗ್ಡಕ್‌ನ ಕಾಥಾರ್‌ರ ಧರ್ಮದ್ರೋಹವನ್ನು ತೊಡೆದುಹಾಕಲು ಕ್ರಿ.ಶ. ೧೨೦೯–೧೨೨೯ ರ ನಡುವಣ ಅವಧಿಯಲ್ಲಿ ಮಾಡಿದ ಕಾರ್ಯ

ವಿಶ್ವಾಸಾರ್ಹ ಇತಿಹಾಸವು ಆರಂಭಗೊಳ್ಳುವ ಹೊತ್ತಿಗೆ ಶ್ರೀಮಂತಪ್ರಭುತ್ವ ಮತ್ತು ನಿರಂಕುಶಪ್ರಭುತ್ವಗಳ ನಡುವೆ ಸ್ಪರ್ಧೆ ಶುರುವಾಗಿತ್ತು. ಸ್ಪಾರ್ಟಾವನ್ನು ಹೊರತುಪಡಿಸಿ, ಸ್ವಲ್ಪ ಕಾಲ ನಿರಂಕುಶಪ್ರಭುತ್ವವು ಎಲ್ಲೆಡೆ ಗೆಲವು ಸಾಧಿಸಿತ್ತು, ಆದರೆ ಆನಂತರ ಪ್ರಜಾಪ್ರಭುತ್ವವು ಅದರ ಸ್ಥಾನವನ್ನಾಕ್ರಮಿಸಿತು ಅಥವಾ ಶ್ರೀಮಂತಪ್ರಭುತ್ವವು, ಕೆಲವು ವೇಳೆ ಶ್ರೀಮಂತ ಅಲ್ಪಜನಾಧಿತ್ಯದ ರೂಪದಲ್ಲಿ, ಮರುಕಳಿಸಿತು. ನಿರಂಕುಶಾಧಿಕಾರದ ಈ ಮೊದಲ ಅವಧಿಯು ಕ್ರಿ.ಪೂ. ಏಳು ಮತ್ತು ಎಂಟನೆಯ ಶತಮಾನಗಳ ಬಹುಭಾಗವನ್ನಾಕ್ರಮಿಸಿದವು. ಆದರೆ ಅದು ನಗ್ನ ಅಧಿಕಾರದ ಕಾಲವಲ್ಲ, ಹಾಗಿದ್ದದ್ದು ಆನಂತರದ ಅವಧಿಯಲ್ಲಿ, ಅದರ ಬಗ್ಗೆಯೇ ನನಗೆ ಹೆಚ್ಚು ಅಸಕ್ತಿ. ಆದರೆ ಅದು ಮುಂದಿನ ಕಾಲದ ಅವ್ಯವಸ್ಥೆ ಮತ್ತು ಹಿಂಸೆಗಳಿಗೆ ಭೂಮಿಕೆಯನ್ನು ಸಿದ್ಧಗೊಳಿಸಿತು.

'ನಿರಂಕುಪ್ರಭು' ಎಂಬ ಶಬ್ದವು ಮೂಲತಃ ಆಡಳಿತಗಾರನಲ್ಲಿನ ಯಾವುದೇ ಕೆಟ್ಟ ಗುಣಗಳನ್ನು ಸೂಚಿಸುತ್ತಿರಲಿಲ್ಲ, ಅದು ಸೂಚಿಸುತ್ತಿದ್ದುದು ವಿಧಿಪೂರ್ವಕವಾದ ಅಥವಾ ಸಾಂಪ್ರದಾಯಿಕ ಪದವಿಯಿಲ್ಲದಿದ್ದುದನ್ನು ಮಾತ್ರ. ಮೊದಮೊದಲ ಅನೇಕ ನಿರಂಕುಪ್ರಭುಗಳು ಜಾಣ್ಮೆಯಿಂದಲೂ ತಮ್ಮ ಬಹುತೇಕ ಪ್ರಜೆಗಳ ಒಪ್ಪಿಗೆಯಿಂದಲೂ ಆಡಳಿತ ನಿರ್ವಹಣೆ ಮಾಡಿದರು. ಅವರಿಗೆ ಎಲ್ಲ ಕಾಲದಲ್ಲಿಯೂ ಇದ್ದ ಏಕೈಕ ಕಡು ವಿರೋಧಿಗಳೆಂದರೆ ಶ್ರೀಮಂತವರ್ಗ. ಮೊದಮೊದಲಿನ ನಿರಂಕುಶಪ್ರಭುಗಳಲ್ಲಿ ಬಹುತೇಕ ಮಂದಿ ದೊಡ್ಡ ಶ್ರೀಮಂತರೇ ಆಗಿದ್ದರು, ಅವರು ಹಣ ಚೆಲ್ಲಿಯೇ ಅಧಿಕಾರ ಸಂಪಾದಿಸಿದ್ದುದು, ಅಧಿಕಾರದಲ್ಲಿ ಉಳಿದಿದ್ದುದೂ ಸೈನಿಕ ಬಲಕ್ಕಿಂತಲೂ ಆರ್ಥಿಕ ಸಾಮರ್ಥ್ಯದ ಮೇಲೆ ಅವಲಂಬಿಸಿಯೇ. ಅವರನ್ನು ಮೆಡಿಸಿ[೧]ಗಳೊಂದಿಗೆ ಹೋಲಿಸಬಹುದೇ ವಿನಾ ನಮ್ಮ ಕಾಲದ ಸರ್ವಾಧಿಕಾರಿಗಳ ಜೊತೆಗಲ್ಲ.

ನಿರಂಕುಶಾಧಿಕಾರದ ಮೊದಲ ಘಟ್ಟವೆಂದರೆ ನಾಣ್ಯ ಪದ್ಧತಿಯು ಶುರುವಾದದ್ದು; ಈಚಿನ ದಿನಗಳಲ್ಲಿ ಸಾಲ ಮತ್ತು ಕಾಗದದ ಹಣಗಳು ಜಾರಿಗೆ ಬಂದ ಮೇಲೆ ಆದಂತಹ ಪರಿಣಾಮವನ್ನೇ ಅದು ಬೀರಿತ್ತು. ನಾಣ್ಯಚಲಾವಣೆಯನ್ನು ನಿರಂಕುಶಾಧಿಕಾರದ ಜೊತೆಗೆ

---

[೧] ಫ್ಲಾರೆನ್ಸ್‌ನಲ್ಲಿ ಹದಿಮೂರನೇಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೆ ಪ್ರಬಲವಾಗಿದ್ದ ಒಂದು ಕುಟುಂಬ; ಅದರಲ್ಲಿ ಅನೇಕ ಮಂದಿ ರಾಜರೂ ಮೂವರು ಪೋಪ್‌ಗಳೂ ಆಗಿಹೋದರು.

ಸಮೀಕರಿಸಲಾಗಿತ್ತು[೧]; ಆದರೆ ಈ ಬಗ್ಗೆ ಹೇಳಲು ನಾನು ಸಮರ್ಥನಲ್ಲ. ಆದರೆ ನಿರಂಕುಶಪ್ರಭುವಾಗಬಯಸಿದವನಿಗೆ ಬೆಳ್ಳಿ ಗಣಿಗಳ ಒಡೆತನವು ಖಂಡಿತ ಸಹಾಯಕವಾಗಿತ್ತು. ಹಣಬಳಕೆಯು ಹೊಸತರಲ್ಲಿ ಪ್ರಾಚೀನ ಸಂಪ್ರದಾಯಗಳನ್ನು ಗಾಢವಾಗಿ ಕಲಕಿರುತ್ತದೆ, ಯೂರೋಪಿಯನ್ ನಿಯಂತ್ರಣದಲ್ಲಿ ದೀರ್ಘ ಕಾಲದಿಂದ ಇರದಿರುವ ಆಫ್ರಿಕದ ಭಾಗಗಳಲ್ಲಿ ಇದನ್ನು ಕಾಣಬಹುದು. ಕ್ರಿಪೂ ಏಳು ಮತ್ತು ಆರನೆಯ ಶತಮಾನಗಳಲ್ಲಿ ಆದ ಪರಿಣಾಮವೆಂದರೆ ವಾಣಿಜ್ಯದ ಶಕ್ತಿಯನ್ನು ಹೆಚ್ಚಿಸಿದ್ದು, ಹಾಗೆಯೇ ಪ್ರಾದೇಶಿಕ ಶ್ರೀಮಂತಪ್ರಭುತ್ವದ ಬಲವನ್ನು ಕುಂದಿಸಿದ್ದು. ಪರ್ಷಿಯನ್ನರು ಏಷ್ಯಾ ಮೈನರ್ ಅನ್ನು ಆಕ್ರಮಿಸಿಕೊಳ್ಳುವವರೆಗೆ, ಗ್ರೀಕ್ ಜಗತ್ತಿನಲ್ಲಿ ಯುದ್ಧಗಳು ಅಪರೂಪವೂ ಅಪ್ರಮುಖವೂ ಆಗಿದ್ದವು, ಉತ್ಪಾದನೆಯ ಹೆಚ್ಚಿನ ಕಾರ್ಯವನ್ನು ಗುಲಾಮರು ಮಾಡುತ್ತಿರಲಿಲ್ಲ. ಇದು ಆರ್ಥಿಕ ಅಧಿಕಾರಕ್ಕೆ ಅತ್ಯುತ್ತಮ ಪರಿಸ್ಥಿತಿ, ಇದು ಸಂಪ್ರದಾಯದ ಹಿಡಿತವನ್ನು ಬಲಗುಂದಿಸಿತು, ಹತ್ತೊಂಬತ್ತನೆಯ ಶತಮಾನದಲ್ಲಿ ಕೈಗಾರಿಕೀಕರಣವು ಮಾಡಿದಂತೆ.

ಸಂಪ್ರದಾಯದ ಬಲಗುಂದುವಿಕೆಯು ಪ್ರತಿಯೊಬ್ಬನೂ ಸಮೃದ್ಧಿ ಹೊಂದಲು ಸಾಧ್ಯವಾದಷ್ಟು ಕಾಲ ಕೆಟ್ಟುದಕ್ಕಿಂತ ಹೆಚ್ಚು ಒಳ್ಳೆಯದನ್ನೇ ಮಾಡಿತು. ಯಾವತ್ತೂ ಆಗದಷ್ಟು ಶೀಘ್ರ ಗತಿಯಲ್ಲಿ ಗ್ರೀಕ್‌ರಲ್ಲಿ ನಾಗರಿಕತೆಯ ಬೆಳವಣಿಗೆಯು ಉಂಟಾಯಿತು; ಈ ಮಾತಿಗೆ ಕಳೆದ ನಾಲ್ಕು ಶತಮಾನಾವಧಿಯಲ್ಲಾದುದು ಅಪವಾದವೆನ್ನಬಹುದು. ಗ್ರೀಕ್ ಕಲೆ, ವಿಜ್ಞಾನ ಮತ್ತು ತತ್ವಜ್ಞಾನಗಳ ಮುಕ್ತತೆಯು ಮೂಢನಂಬಿಕೆಗಳಿಂದ ಕುಂಠಿತಗೊಳ್ಳದ ಸಮೃದ್ಧ ಯುಗದ ಕುರುಹು. ಆದರೆ ಆಗಿನ ಸಾಮಾಜಿಕ ರಚನೆಯು ದುರದೃಷ್ಟವನ್ನು ತಡೆದುಕೊಳ್ಳುವಷ್ಟು ಗಡುಸಾಗಿರಲಿಲ್ಲ, ಹಾಗೆಯೇ ಸತ್ಕಾರ್ಯದಿಂದ ಲಾಭವೇನೂ ಆಗದು ಎನಿಸಿದಾಗ ಉಂಟಾಗುವ ವಿನಾಶಕಾರಿ ಅಪರಾಧಗಳ ಏರಿಕೆಯನ್ನು ತಡೆಗಟ್ಟಲು ಆವಶ್ಯಕವಾದ ವೈಯಕ್ತಿಕ ನೈತಿಕ ಮಟ್ಟ ಜನರಲ್ಲಿರಲಿಲ್ಲ. ಯುದ್ಧಗಳ ದೀರ್ಘ ಪರಂಪರೆಯು ಸ್ವತಂತ್ರ ವ್ಯಕ್ತಿಗಳ ಸಂಖ್ಯೆಯನ್ನು ಕಡಿಮೆಮಾಡಿ ಗುಲಾಮರ ಸಂಖ್ಯೆಯನ್ನು ಹೆಚ್ಚಿಸಿತು. ಅಂತಿಮವಾಗಿ ಗ್ರೀಸ್ ಮ್ಯಾಸೆಡೋನಿಯದ ಆಡಳಿತಕ್ಕೊಳಗಾಯಿತು, ಹೆಚ್ಚಾಗುತ್ತಿದ್ದ ಹಿಂಸಾತ್ಮಕ ಕ್ರಾಂತಿಗಳು, ಅಂತರ್ಯುದ್ಧ ಹಾಗೂ ನಿರಂಕುಶಾಧಿಕಾರಗಳ ನಡುವೆಯೂ ಹೆಲೆನಿಕ್ ಸಿಸಿಲಿಯು ಮೊದಲು ಕಾರ್ಥೇಜ್ ಆನಂತರ ರೋಮ್‌ನ ಅಧಿಕಾರದ

[೧] ನೋಡಿ, ಪಿ.ಎನ್. ಯೂರ್, 'ದಿ ಆರಿಜಿನ್ ಆಫ್ ಟಿರನಿ'

ವಿರುದ್ಧ ಹೋರಾಡಬೇಕಾಯಿತು.. ಸಿರಾಕ್ಯೂಸ್‌ನ ನಿರಂಕುಶಾಧಿಕಾರದ ಕಡೆ ನಾವು ಎರಡು ಕಾರಣಗಳಿಂದ ಗಮನ ಹರಿಸಬೇಕು: ಒಂದು, ಅವು ನಗ್ನ ಅಧಿಕಾರದ ಪರಿಪೂರ್ಣ ನಿದರ್ಶನಗಳಾಗಿರುವುದು; ಮತ್ತು ಎರಡು, ಇದರಿಂದ ಪ್ರಭಾವಿತನಾದ ಪ್ಲೇಟೋ ಹಿರಿಯ ಡಯೋನಿಸಿಯಸ್ ಜೊತೆಗೆ ಜಗಳವಾಡಿ ಕಿರಿಯವನ ವಿದ್ಯಾರ್ಥಿಯಾಗಲು ಪ್ರಯತ್ನಿಸಿದ್ದು. ನಿರಂಕುಶಪ್ರಭುಗಳ ಬಗ್ಗೆ ಆನಂತರದ ಗ್ರೀಕ್‌ರ ಹಾಗೂ ಮುಂದಿನ ಎಲ್ಲ ಕಾಲಗಳ ದೃಷ್ಟಿಕೋನವು ತತ್ವಜ್ಞಾನಿಗಳು ಡಯೋನಿಸಿಯಸ್‌ನೊಡನೆಯೂ ಅವನ ಉತ್ತರಾಧಿಕಾರಿಗಳಾದ ಸಿರಾಕ್ಯೂಸ್‌ನ ದುರಾಡಳಿತಗಾರರೊಡನೆಯೂ ಹೊಂದಿದ್ದ ದುರದೃಷ್ಟಕರ ಸಂಪರ್ಕದಿಂದ ಬಹುಪಾಲು ಪ್ರಭಾವಗೊಂಡವು.

"ಮೋಸದ ಗಾಳ ಹಾಕಿ ವಂಚನೆಯಿಂದ ಜನರನ್ನು ತಾತ್ಕಾಲಿಕವಾಗಿ ಶರಣಾಗಿಸಿಕೊಂಡು, ಆನಂತರ ಬಲದ ಬಲೆ ಬೀಸಿ ಅದನ್ನು ಅವರ ಇರಾದೆಗೆ ವಿರುದ್ಧವಾಗಿ ಶಾಶ್ವತವಾಗಿಸಿಕೊಳ್ಳುವುದು ಗ್ರೀಕ್ ಆಕ್ರಮಣಕಾರರ ಕಾರ್ಯತಂತ್ರವಾಗಿತ್ತು" ಎಂದು ಗ್ರೋಟ್ ಬರೆಯುತ್ತಾರೆ. ಜನರ ಒಪ್ಪಿಗೆಯಿಲ್ಲದೆ ಎಷ್ಟರ ಮಟ್ಟಿಗೆ ನಿರಂಕುಶಾಧಿಕಾರವನ್ನು ಮುಂದುವರಿಸಲಾಯಿತು ಎಂಬುದು ವಿವಾದಾಸ್ಪದ ವಿಷಯ, ಆದರೆ ಆನಂತರದ ಆರ್ಥಿಕವಾದುದಕ್ಕಿಂತ ಸೈನಿಕವಾದ ನಿರಂಕುಶಪ್ರಭುತ್ವಗಳ ವಿಷಯದಲ್ಲಿ ಮಾತ್ರ ಈ ಮಾತು ಖಂಡಿತ ಸತ್ಯ. ನಿದರ್ಶನಕ್ಕೆ, ಹಿರಿಯ ಡಯೋನಿಸಿಯಸ್ ಅಧಿಕಾರಕ್ಕೆ ಬಂದ ಸನ್ನಿವೇಶಕ್ಕೆ ಸಂಬಂಧಿಸದಂತೆ ಡಿಯೋಡೊರಸ್‌ನ ಮಾತನ್ನಾಧರಿಸಿ ಗ್ರೋಟ್ ಮಾಡುವ ವರ್ಣನೆಯನ್ನು ನೋಡಿ. ಹೆಚ್ಚು ಕಡಿಮೆ ಪ್ರಜಾಸತ್ತಾತ್ಮಕವಾದ ಆಡಳಿತದಲ್ಲಿ ಸಿರಾಕ್ಯೂಸ್‌ನ ಅಸ್ತ್ರಗಳು ಸೋಲನ್ನೂ ಅಪಮಾನವನ್ನೂ ಅನುಭವಿಸಿದ್ದವು; ಉಗ್ರ ಹೋರಾಟದ ಒಪ್ಪಿತ ನಾಯಕನಾದ ಡಯೋನಿಸಿಯಸ್ ಸೋತ ಸೇನಾಪತಿಗಳಿಗೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ.

"ಸಿರಾಕ್ಯೂಸ್‌ನ ಸಭೆಯಲ್ಲಿ ಆವರಿಸಿದ್ದ ಮೌನ ಮತ್ತು ತಳಮಳಗಳ ನಡುವೆ ಮೊದಲು ಮಾತನಾಡಲು ಎದ್ದು ನಿಂತವನು ಡಯೋನಿಸಸ್. ತನ್ನ ಕೇಳುಗರು ಹಾಗೂ ತನ್ನ ದೃಷ್ಟಿಕೋನಗಳಿಗೆ ಹೊಂದುವ ಒಂದು ವಿಷಯದ ಬಗ್ಗೆ ವಿವರಿಸಿದ. ಸೇನಾಧಿಪತಿಗಳು ಸಿರಾಕ್ಯೂಸ್‌ನ ರಕ್ಷಣೆಗೆ ದ್ರೋಹ ಬಗೆದು ಕಾರ್ಥೇಜಿಯನ್ನರ ಪರವಾಗಿದ್ದಾರೆಂದು ಅವನು ಪ್ರಬಲವಾಗಿ ಖಂಡಿಸಿದ; ಇದರಿಂದಾಗಿ ಅಗ್ರಿಜೆಂಟಮ್ ವಿನಾಶ ಮತ್ತು ಅದರ ಜನರಿಗೆ ಒದಗಲಿರುವ ವಿಪತ್ತುಗಳಿಗೆ ವ್ಯಕ್ತಿಗಳಾಗಿ ಅವರೇ ಜವಾಬುದಾರರೆಂದು ಆರೋಪಿಸಿದ. ಅವರ ವಾಸ್ತವ ಹಾಗೂ ಊಹಿಸಿದ ತಪ್ಪುಗಳನ್ನು

ವಿವರವಾಗಿ ಮತ್ತು ನ್ಯಾಯಯುತ ಚಚಯ ಎಲ್ಲ ಮಿತಿಗಳನ್ನೂ ದಾಟಿದ ಉಗ್ರತೆಯಿಂದ ತೀಕ್ಷ್ಣ ಮಾತುಗಳಲ್ಲಿ ಬಣ್ಣಿಸಿದ, ಈ ಕೃತ್ಯಕ್ಕಾಗಿ, ಈಚೆಗೆ ಅಗ್ರಿಜೆಂಟಮ್‌ನಲ್ಲಿ ಸೇನಾಧಿಪತಿಗಳನ್ನು ಒಳಪಡಿಸಿದಂತೆ ಅವರನ್ನು ನ್ಯಾಯವಿರೋಧಿಯಾದ ಮರಣಕ್ಕೆ ಗುರಿಪಡಿಸಬೇಕೆಂದು ವಾದಿಸಿದ. 'ಅಗೋ, ದೇಶದ್ರೋಹಿಗಳು ಅಲ್ಲಿ ಕುಳಿತಿದ್ದಾರೆ! ನ್ಯಾಯಾಧಿಕರಣದ ವಿಚಾರಣೆ ತೀರ್ಪುಗಳಿಗಾಗಿ ಕಾಯಬೇಡಿ, ಈಗಲೇ ಅವರನ್ನು ಹಿಡಿದುಕೊಂಡು ಅವರನ್ನು ಅಂತಿಮ ಶಿಕ್ಷೆಗೆ ಗುರಿಪಡಿಸಿ'. ಅಂತಹ ಸಲಹೆಯು....ನ್ಯಾಯದ ಹಾಗೂ ಸಂಸದೀಯ ವ್ಯವಸ್ಥೆಯ ವಿರುದ್ಧ ಮಾಡಿದ ಅಪರಾಧ. ನ್ಯಾಯವಿತರಕರು ಡಯೋನಿಸಸ್‌ನನ್ನು ವ್ಯವಸ್ಥೆಯನ್ನು ಕಲಕುವವನೆಂದು ಖಂಡಿಸಿ, ತಮಗಿದ್ದ ಕಾನೂನುಬದ್ಧ ಅಧಿಕಾರವನ್ನು ಬಳಸಿಕೊಂಡು ಅವನಿಗೆ ಆ ಕ್ಷಣವೇ ದಂಡ ವಿಧಿಸಿದರು. ಆದರೆ ಬೆಂಬಲಿಗರು ಪ್ರಬಲವಾಗಿ ಅವನ ಜೊತೆ ನಿಂತರು. ಫಿಲಿಸ್ಟಸ್ ಅವನ ಪರವಾಗಿ ಸ್ಥಳದಲ್ಲಿಯೇ ದಂಡವನ್ನು ತೆತ್ತುದಲ್ಲದೆ, ಮುಂದೆಯೂ ವಿಧಿಸಬಹುದಾದ ಎಲ್ಲ ದಂಡಗಳನ್ನೂ ದಿನವಿಡೀ ತಾನೇ ತೆರುವುದಾಗಿಯೂ, ಡಯೋನಿಸಸ್ ಮಾತ್ರ ತನಗೆ ಸರಿಯೆನಿಸಿದ ರೀತಿಯಲ್ಲಿಯೇ ಮಾತನ್ನು ಮುಂದುವರಿಸಬೇಕೆಂದೂ ಪ್ರಚೋದಿಸಿದ. ಇದುವರೆಗೆ ನ್ಯಾಯವಿರೋಧಿಯಾಗಿ ಆರಂಭಗೊಂಡುದು ಈಗ ಕಾನೂನಿನ ಸಾರ್ವಜನಿಕ ಉಲ್ಲಂಘನೆಯಾಗಿ ಮಾರ್ಪಟ್ಟಿತು. ಇಷ್ಟಾದರೂ ನ್ಯಾಯಾಧಿಕಾರಿಗಳ ಅಧಿಕಾರ ಎಷ್ಟು ಬಲಗುಂದಿದ್ದಿತೆಂದರೆ, ಅವರ ವಿರುದ್ಧದ ದನಿ ಎಷ್ಟು ಪ್ರಬಲವಾಗಿತ್ತೆಂದರೆ, ವಾಸ್ತವದಲ್ಲಿ ಅವರು ಭಾಷಣಕಾರನನ್ನು ಶಿಕ್ಷಿಸಲಾಗಲೀ ತಡೆಯಲಾಗಲೀ ಸಾಧ್ಯವಿರಲಿಲ್ಲ. ಡಯೋನಿಸಸ್ ತನ್ನ ವಾಗ್ಬಾಣಗಳನ್ನು ಮತ್ತಷ್ಟು ತೀಕ್ಷ್ಣ ರೂಪದಲ್ಲಿ ಪ್ರಯೋಗ ಮಾಡಲು ತೊಡಗಿದ; ಸೇನಾಧಿಪತಿಗಳು ಅಗ್ರಿಜೆಂಟಮ್ ಅನ್ನು ಭ್ರಷ್ಟಾಚಾರವೆಸಗಿ ಬಲಿಗೊಟ್ಟಿದ್ದಾರೆಂದು ಆರೋಪಿಸುವುದು ಮಾತ್ರವಲ್ಲದೆ, ಪ್ರಮುಖ ಶ್ರೀಮಂತ ನಾಗರಿಕರನ್ನು ನಿರಂಕುಶಾಧಿಕಾರೀ ಅಲ್ಪಜನಾಧಿಪತಿಗಳೆಂದು ಜರೆದು, ಅವರು ಅನೇಕರನ್ನು ತಿರಸ್ಕಾರದಿಂದ ಕಂಡುದಲ್ಲದೆ ನಗರದ ದುರದೃಷ್ಟವನ್ನು ತಮ್ಮ ಸ್ವಹಿತಕ್ಕಾಗಿ ಬಳಸಿಕೊಂಡವರೆಂದು ಆರೋಪಿಸಿದ. ಸಂಪೂರ್ಣ ವಿಭಿನ್ನ ಮನೋಭಾವದ ಜನರಿಗೆ ಅಧಿಕಾರ ದೊರೆಯದೆ ಸಿರಾಕ್ಯೂಸ್ ಅನ್ನು ಎಂದೂ ರಕ್ಷಿಸಲು ಆಗದೆಂದು ವಾದಿಸಿದ; ಶ್ರೀಮಂತಿಕೆ ಅಥವಾ ಸ್ಥಾನದ

ಕಾರಣದಿಂದಲ್ಲದೆ, ಕುಲೀನ ಮನೆತನದ, ತಮ್ಮ ದೌರ್ಬಲ್ಯಗಳ ಅರಿವಿನಿಂದ ಕೂಡಿದ ನಡತೆ ಮತ್ತು ಜನಪರತೆಯ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕೆಂದ."[೧]

ಹೀಗೆ ಅವನೊಬ್ಬ ನಿರಂಕುಶಪ್ರಭುವಾದ; ಆದರೆ ಅದರಿಂದ ಬಡವರಿಗಾಗಲೀ ವಿನೀತರಿಗಾಗಲೀ ಯಾವುದೇ ಅನುಕೂಲವಾದ ಬಗ್ಗೆ ಇತಿಹಾಸ ಏನೂ ಹೇಳುವುದಿಲ್ಲ. ಅವನು ಹಣವಂತರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡ ಎಂಬುದು ನಿಜವಾದರೂ ಅದನ್ನವನು ತನ್ನ ಅಂಗರಕ್ಷಕರಿಗೆ ಕೊಟ್ಟ. ಬಹು ಬೇಗ ಅವನ ಜನಪ್ರಿಯತೆ ಕುಗ್ಗಿತು, ಆದೆ ಅವನ ಅಧಿಕಾರವಲ್ಲ. ಮುಂದೆ ಕೆಲವು ಪುಗಳದನಂತರ ಗ್ರೋಟ್ ಹೀಗೆ ಬರೆಯುತ್ತಾರೆ: *"ಅವನ ಆಡಳಿತವು ಸಿರಾಕ್ಯೂಸ್‌ನ ಜನರಿಗೆ ಹಿಂದೆಂದಿಗಿಂತಲೂ ಹೆಚ್ಚು ಕೆಡಡುಕಾದುದೆಂಬ ಭಾವನೆಯನ್ನುಂಟುಮಾಡಿ, ತನ್ನ ನಗ್ನ ಅಧಿಕಾರದ ಮೇಲೆಯೇ ಅವಲಂಬಿಸಿ, ಹಿಂದಿನ ಯಾವುದೇ ನಿರಂಕುಶಾಧಿಕಾರಿಗಿಂತಲೂ ಪ್ರಬಲವಾದ ರಕ್ಷಣೋಪಾಯಗಳನ್ನು ತನ್ನ ಸುತ್ತಲೂ ಏರ್ಪಾಟುಮಾಡಿಕೊಂಡ."*

ಸ್ಪಾರ್ಟಾದ ಹೊರತು, ಗ್ರೀಸ್‌ನಲ್ಲಿ ಸಂಪ್ರದಾಯದ ಪ್ರಭಾವವು ತೀರ ದುರ್ಬಲವಾಗಿತ್ತೆಂಬುದಕ್ಕಾಗಿ ಗ್ರೀಕ್ ಚರಿತ್ರೆಯು ವಿಶಿಷ್ಟವೆನಿಸಿದೆ; ಮಿಗಿಲಾಗಿ, ಅಲ್ಲಿ ಯಾವುದೇ ರಾಜಕೀಯ ನೈತಿಕತೆ ಎಂಬುದಿರಲಿಲ್ಲ. ಯಾವುದೇ ಸ್ಪಾರ್ಟನ್ ಆದರೂ ಲಂಚಗುಳಿತನವನ್ನು ವಿರೋಧಿಸುವ ಪರಿಸ್ಥಿತಿಯಿರಲಿಲ್ಲ. ಯಾವುದೋ ರಾಜಕಾರಣಿ ಪರ್ಷಿಯದ ರಾಜನಿಂದ ಲಂಚವನ್ನು ತೆಗೆದುಕೊಂಡ ಎಂದು ಆರೋಪಿಸುವುದು ಇಡೀ ಗ್ರೀಸ್‌ನಾದ್ಯಂತ ನಿಷ್ಪ್ರಯೋಜಕವಾಗಿತ್ತು, ಏಕೆಂದರೆ ಅವನ ಎದುರಾಳಿಯೂ ಬೆಲೆಗರ್ಹನಾಗುವಷ್ಟು ಪ್ರಬಲನಾಗಿದ್ದರೆ ತಾನೂ ಹೀಗೇ ಮಾಡುತ್ತಿದ್ದ. ಇದರಿಂದಾದ ಪರಿಣಾಮವೆಂದರೆ, ವೈಯಕ್ತಿಕ ಅಧಿಕಾರಕ್ಕಾಗಿ ಲಂಚಗುಳಿತನ, ಬೀದಿಕಾಳಗ ಮತ್ತು ಕೊಲೆಗಳಿಂದ ಎಲ್ಲೆಡೆ ಉಂಟಾದ ಗೊಂದಲಮಯ ವಾತಾವರಣ. ಈ ವ್ಯವಹಾರದಲ್ಲಿ, ಸಾಕ್ರಟೀಸ್ ಮತ್ತು ಪ್ಲೆಟೋನ ಸ್ನೇಹಿತರು ಕೂಡ ಅತ್ಯಂತ ಲಜ್ಜಾಹೀನರಾಗಿದ್ದರು. ಅಂತಿಮ ಪರಿಣಾಮವೆಂದರೆ, ಯಾರೇ ಊಹಿಸಬಹುದಾದಂತೆ, ಪರಕೀಯ ಆಕ್ರಮಣ.

---

[೧] ಜಿ. ಗ್ರೋಟ್: 'ಹಿಸ್ಟರಿ ಆಫ್ ಗ್ರೀಸ್', ಅಧ್ಯಾಯ ೮೧

ಗ್ರೀಕ್‌ನ ಸ್ವಾತಂತ್ರ್ಯಹರಣಕ್ಕಾಗಿ ದುಃಖಿಸುವುದಾಗಲೀ ಎಲ್ಲ ಗ್ರೀಕರೂ ಸಾಕ್ರಟಿಸರೂ ಸೋಲೋನ್‌ರು ಎಂದು ಯೋಚಿಸುವುದಾಗಲೀ ಕೇವಲ ಉಪಚಾರದ ಮಾತಾಗಿತ್ತು. ರೋಮ್‌ನ ಗೆಲವಿನ ಬಗ್ಗೆ ಶೋಕಿಸುವುದಕ್ಕೆ ಕಾರಣವಿರಲಿಲ್ಲ ಎಂಬುದು ಹೆಲೆನಿಕ್ ಇತಿಹಾಸದಿಂದ ತಿಳಿಯುತ್ತದೆ. ಹೆಚ್ಚು ನಗ್ನ ಅಧಿಕಾರದ ನಿದರ್ಶನ ನೀಡಲು ನನಗೆ ಕ್ರಿಪೂ ೩೬೧ ರಿಂದ ೨೮೯ ರವರೆಗೆ ಬಾಳಿದ ಅಲೆಕ್ಸಾಂಡರ್ ಮಹಾಶಯನ ಸಮಕಾಲೀನನಾದ ಅಗಾಥಾಕ್ಲೀಸ್‌ನ ಅವಧಿಗಿಂತ ಉತ್ತಮವಾದುದು ಬೇರೊಂದಿಲ್ಲ, ತನ್ನ ಜೀವಿತದ ಜನೆಯ ಇಪ್ಪತ್ತೆಂಟು ವರ್ಷಗಳ ಕಾಲ ಅವನು ಸಿರಾಕ್ಯೂಸ್‌ನ ನಿರಂಕುಶಪ್ರಭುವಾಗಿದ್ದ.

ಸಿರಾಕ್ಯೂಸ್ ಗ್ರೀಕ್ ನಗರಗಳಲ್ಲಿ ಮಾತ್ರವಲ್ಲ, ಮೆಡಿಟರೇನಿಯನ್ ವಲಯದಲ್ಲಿಯೇ ಅತ್ಯಂತ ದೊಡ್ಡ ನಗರವಾಗಿತ್ತು. ಅದರ ಏಕೈಕ ಸ್ಪರ್ಧಿಯೆಂದರೆ ಕಾರ್ಥೇಜ್; ಎರಡೂ ಪಕ್ಷಗಳು ಅನುಭವಿಸಿದ ಒಂದು ಗಂಭೀರ ಸೋಲಿನನಂತರ ಸ್ವಲ್ಪಕಾಲದ ಬಿಡುವನ್ನು ಬಿಟ್ಟರೆ ಅವೆರಡೂ ಸದಾ ಯುದ್ಧದಲ್ಲಿ ತೊಡಗಿರುತ್ತಿದ್ದವು. ಸಿಸಿಲಿಯ ಇನ್ನಿತರ ನಗರಗಳು ಪಕ್ಷ ರಾಜಕೀಯದ ತಿರುವುಗಳಿಗನುಗುಣವಾಗಿ ಕೆಲವು ವೇಳೆ ಸಿರಾಕ್ಯೂಸ್‌ನ ಪರವಾಗಿರುತ್ತಿದ್ದವು, ಮತ್ತೆ ಕೆಲ ಸಂದರ್ಭಗಳಲ್ಲಿ ಕಾರ್ಥೇಜ್ ಪರ. ಎಲ್ಲ ನಗರಗಳಲ್ಲಿಯೂ ಶ್ರೀಮಂತರು ಸ್ವಲ್ಪಜನಾಧಿಪತ್ಯವನ್ನೇ ಬೆಂಬಲಿಸುತ್ತಿದ್ದರು, ಬಡವರು ಪ್ರಜಾಪ್ರಭುತ್ವದ ಬೆಂಬಲಿಗರಾಗಿರುತ್ತಿದ್ದರು. ಪ್ರಜಾಪ್ರಭುತ್ವದ ಬೆಂಬಲಿಗರು ಗೆದ್ದಾಗ, ಅವರ ನಾಯಕನು ಸಾಮಾನ್ಯವಾಗಿ ನಿರಂಕುಶಪ್ರಭುವಾಗಿ ಮಾರ್ಪಡುತ್ತಿದ್ದ. ಸೋತ ಪಕ್ಷಗಳವರು ದೇಶಭ್ರಷ್ಟರಾಗುತ್ತಿದ್ದರು, ಯಾವ ನಗರಗಳಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿರುತ್ತಿತ್ತೋ ಅಲ್ಲಿನ ಸೈನ್ಯವನ್ನು ಸೇರುತ್ತಿದ್ದರು. ಆದರೆ ಸೈನ್ಯದ ಬಹುಭಾಗ ಹಣಕ್ಕಾಗಿ ಬಂದವರಿಂದ ತುಂಬಿರುತ್ತಿತ್ತು, ಅವರಲ್ಲಿಯೂ ಬಹುಪಾಲು ಹೆಲೆನಿಕೇತರರು.

ಅಗಾಥಾಕ್ಲೀಸ್ ಸಾಮಾನ್ಯ ನೆಲೆಯಿಂದ ಬಂದವನು, ಅವನು ಒಬ್ಬ ಕುಂಬಾರನ ಮಗ.[೧] ತನ್ನ ಸೌಂದರ್ಯದ ಕಾರಣದಿಂದಾಗಿ ಅವನು ಡೀಮಾಸ್ ಎಂಬ ಸಿರಾಕ್ಯೂಸ್‌ನ ಶ್ರೀಮಂತನಿಗೆ ಆತ್ಮೀಯನಾದ, ಅವನು

---

[೧] ಮುಂದಿನ ವಿವರಣೆ ಡಯೋಡೋರಸ್ ಸಿಸಿಲಸ್‌ನ ದಾಖಲೆಗಳನ್ನಾಧರಿಸಿದವು. ಆಧುನಿಕ ಪಂಡಿತರಲ್ಲಿ ಕೆಲವರು ಅವನೊಬ್ಬ ಪಕ್ಷಪಾತಿಯೆಂದು ಹೇಳಿದರೆ, ಮತ್ತೆ ಕೆಲವರು ಅಗಾಥಾಕ್ಲೀಸ್ ಒಬ್ಬ ಸಮರ್ಥ ಆಡಳಿತಗಾರನಾಗಿದ್ದನೆಂದು ಬಣ್ಣಿಸುತ್ತಾರೆ. ಆದರೆ ಡಯೋಡೊರಸ್ ತಿಳಿಸುವ ಮುಖ್ಯ ಸಂಗತಿಗಳು ಸರಿಯಲ್ಲ ಎಂದು ಹೇಳುವುದು ಕಷ್ಟ.

ಇವನಿಗೆ ತನ್ನೆಲ್ಲ ಹಣವನ್ನೂ ಬಿಟ್ಟುಹೋದ, ಅವನ ವಿಧವೆಯನ್ನೇ ಇವನು ಮದುವೆಯಾದ. ಯುದ್ಧದಲ್ಲಿ ಕೌಶಲ ತೋರಿಸಿದ ಅವನು ನಿರಂಕುಶಪ್ರಭುವಾಗಲು ಹವಣಿಸುತ್ತಿರುವನೆಂಬ ಭಾವನೆಯುಂಟುಮಾಡಿದ್ದ; ಹಾಗಾಗಿ ಅವನನ್ನು ದೇಶಭ್ರಷ್ಟನನ್ನಾಗಿ ಮಾಡಲಾಯಿತು, ಅಲ್ಲದೆ ದಾರಿಯಲ್ಲೇ ಅವನನ್ನು ವಧೆಗೈಯಲೂ ಆಜ್ಞೆ ನೀಡಲಾಯಿತು. ಇಂತಹುದರ ಬಗ್ಗೆ ಮುಂದಾಲೋಚಿಸಿದ್ದ ಅವನು ತನ್ನ ಉಡುಪುಗಳನ್ನು ಬಡವನೊಬ್ಬನಿಗೆ ತೊಡಿಸಿದ ಕಾರಣ ನಿಯೋಜಕರು ತಪ್ಪು ತಿಳಿದು ಅವನನ್ನೇ ಕೊಂದುಹಾಕಿದರು. ಆನಂತರ ಅವನು ಸಿಸಿಲಿಯ ಮಧ್ಯದಲ್ಲಿ ಸೈನ್ಯವೊಂದನ್ನು ಸಂಘಟಿಸಿದ; ಅವನ ಬಗ್ಗೆ ಸಿರಾಕ್ಯೂಸ್ ಜನ ಎಷ್ಟು ಹೆದರಿದರೆಂದರೆ ಅವನೊಡನೆ ಒಪ್ಪಂದ ಮಾಡಿಕೊಂಡರು. ಅವನಿಗೆ ಮತ್ತೆ ಪ್ರವೇಶ ನೀಡಲಾಯಿತು, ತಾನು ಪ್ರಜಾಪ್ರಭುತ್ವಕ್ಕೆ ಹಾನಿಕಾರಕವಾದುದೇನನ್ನೂ ಮಾಡುವುದಿಲ್ಲವೆಂದು ಅವನು ಸೆರೀಸ್‌ನ ದೇವಸ್ಥಾನದಲ್ಲಿ ಆಣೆ ಮಾಡಿದ.

ಈ ಕಾಲದಲ್ಲಿ ಸಿರಾಕ್ಯೂಸ್‌ನಲ್ಲಿದ್ದ ಸರ್ಕಾರವು ಪ್ರಜಾಪ್ರಭುತ್ವ ಹಾಗೂ ಸ್ವಲ್ಪಜನಾಧಿಪತ್ಯಗಳ ಮಿಶ್ರಣವಾಗಿತ್ತು. ಆರು ನೂರು ಮಂದಿ ಅತ್ಯಂತ ಶ್ರೀಮಂತರಾದ ಸದಸ್ಯರಿಂದ ಕೂಡಿದ ಒಂದು ಪರಿಷತ್ತು ಅಸ್ತಿತ್ವದಲ್ಲಿತ್ತು. ಈ ಅಲ್ಪಜನಾಧಿಪತಿಗಳ ವಿರುದ್ಧ ಅಗಾಥಾಕ್ಲೀಸ್ ಬಡವರ ಪರವಾದ ನಿಲವು ತಳೆದ. ಆ ಸದಸ್ಯರಲ್ಲಿನ ನಲವತ್ತು ಮಂದಿಯೊಡನೆ ನಡೆಸಿದ ಸಭೆಯೊಂದರಲ್ಲಿ, ತನ್ನ ವಿರುದ್ಧ ಪಿತೂರಿ ನಡೆಸಿದರೆಂದು ಆರೋಪಿಸಿ ಅವನು ಸೈನಿಕರಿಗೆ ಆಜ್ಞೆಯಿತ್ತು ಅವರೆಲ್ಲರನ್ನೂ ಕೊಲ್ಲಿಸಿದ. ಆನಂತರ ಸೈನ್ಯವನ್ನು ನಗರದೊಳಕ್ಕೆ ತೆಗೆದುಕೊಂಡು ಹೋಗಿ ಎಲ್ಲ ಆರುನೂರು ಸದಸ್ಯರ ಮನೆಗಳನ್ನು ಲೂಟಿಮಾಡಲು ಆಜ್ಞೆ ನೀಡಿದ. ಅವರು ಹಾಗೆ ಮಾಡಿದ್ದು ಮಾತ್ರವಲ್ಲ, ಏನಾಗುತ್ತಿದೆಯೆಂದು ನೋಡಲು ಮನೆಯಿಂದ ಹೊರಬಂದ ನಾಗರಿಕರನ್ನೆಲ್ಲ ಕೊಂದರು. ಕೊನೆಯಲ್ಲಿ ಸೈನಿಕರು ಬಹಳ ಜನರನ್ನು ಕೊಂದು ದರೋಡೆ ಮಾಡಿದರು. ಡಯೋಡರಸ್ ಹೇಳುವಂತೆ, "ಉಹ್ಞೂ, ದೇವರ ಹೆಸರಲ್ಲಿ ರಕ್ಷಣೆ ಪಡೆಯಲೆಂದು ಗುಡಿಗಳನ್ನು ಹೊಕ್ಕವರನ್ನೂ ಉಳಿಸಲಿಲ್ಲ; ಮನುಷ್ಯನ ಕ್ರೌರ್ಯವು ದೇವರ ಪಾವಿತ್ರ್ಯವನ್ನು ತುಳಿದುಹಾಕಿತು; ಅದು ಗ್ರೀಕರ ವಿರುದ್ಧ ಗ್ರೀಕರಿಂದಲೇ ಗ್ರೀಸ್‌ನಲ್ಲಿಯೇ, ಶಾಂತಿಕಾಲದಲ್ಲಿ ಪರಸ್ಪರ ರಕ್ತಸಂಬಂಧಿಗಳ ನಡುವೆಯೇ, ಪ್ರಕೃತಿನಿಯಮಗಳನ್ನಾಗಲೀ ಒಪ್ಪಂದಗಳನ್ನಾಗಲೀ ಲೆಕ್ಕಿಸದೆ ದೇವರುಗಳ ಬಗ್ಗೆಯೂ ಭಕ್ತಿಯಿಡದೆ ಅಟ್ಟಹಾಸಗೈದಿತು. ಇದರಿಂದ ಸ್ನೇಹಿತರು ಮಾತ್ರವಲ್ಲ, ಶತ್ರುಗಳಲ್ಲಿಯೂ ಕೂಡ, ಸಮಚಿತ್ತದ ವ್ಯಕ್ತಿಗಳು

ದೌರ್ಜನ್ಯಕ್ಕೊಳಗಾದ ಜನರ ಈ ದಯನೀಯ ಪರಿಸ್ಥಿತಿಯ ಬಗ್ಗೆ ಮರುಕ ಪಡುವುದರ ಹೊರತು ಇನ್ನೇನೂ ಮಾಡಲಾರದವರಾಗಿದ್ದರು."

ಹಗಲಿನ ಹೊತ್ತು ಗಂಡಸರನ್ನು ಕೊಚ್ಚಿಹಾಕಿದ ಅಗಾಥಾಕ್ಲೀಸ್‌ನ ಪಕ್ಷದ ಜನರು ರಾತ್ರಿ ಹೆಂಗಸರ ಕಡೆ ಗಮನ ಹರಿಸಿತು. ಎರಡು ದಿನಗಳು ಮಾರಣಹೋಮ ನಡೆದ ಮೇಲೆ, ಅಗಾಥಾಕ್ಲೀಸ್ ಬಂಧಿತರನ್ನು ಕರೆಸಿ, ತನ್ನ ಸ್ನೇಹಿತ ಡಿನೀಕ್ರೀಟ್ಸ್‌ನ ಹೊರತು ಮಿಕ್ಕವರನ್ನು ಕೊಂದುಹಾಕಿದ. ಆನಂತರ ಪರಿಷತ್ತಿನ ಸಭೆಯನ್ನು ಕರೆದು, ಅಲ್ಪಜನಾಧಿಪತಿಗಳ ಮೇಲೆ ಆರೋಪ ಹೊರಿಸಿ, ರಾಜಪ್ರಭುತ್ವದ ಎಲ್ಲ ಬೆಂಬಲಿಗರನ್ನೂ ಒರೆಸಿಹಾಕಿ ನಗರವನ್ನು ಶುಚಿಗೊಳಿಸುವುದಾಗಿಯೂ ತಾನು ಖಾಸಗಿ ಜೀವನ ನಡೆಸುವುದಾಗಿಯೂ ಹೇಳಿದ. ಆನಂತರ ತನ್ನ ಸಮವಸ್ತ್ರವನ್ನು ತೆಗೆದುಹಾಕಿ ಮಫ್ತಿ ಉಡುಪನ್ನು ತೊಟ್ಟ. ಆದರೆ ಅವನ ನಾಯಕತ್ವದಲ್ಲಿ ಲೂಟಿಮಾಡಿದ್ದವರು ಅವನೇ ಅಧಿಕಾರದಲ್ಲಿ ಮುಂದುವರಿಯಬೇಕೆಂದು ಬಯಸಿದರು, ಅಷ್ಟೇ ಅಲ್ಲ ಅವನನ್ನು ಏಕೈಕ ಸೇನಾಧಿಪತಿಯನ್ನಾಗಿ ಆಯ್ಕೆಮಾಡಿದರು. "ಸಾಲಗಾರರಾಗಿದ್ದ ಅನೇಕ ಮಂದಿ ಬಡಪಾಯಿಗಳು ಅವನ ಕ್ರಾಂತಿಯಿಂದ ಸಂತುಷ್ಟರಾಗಿದ್ದರು." ಏಕೆಂದರೆ ಸಾಲವನ್ನೆಲ್ಲ ಮನ್ನಾ ಮಾಡುವುದಾಗಿಯೂ ಭೂಮಿಯನ್ನೆಲ್ಲ ಬಡವರಿಗೆ ಹಂಚುವುದಾಗಿಯೂ ಅಗಾಥಾಕ್ಲೀಸ್ ಮಾತುಕೊಟ್ಟ. ಆನಂತರ ಕೆಲವು ಕಾಲ ಅವನು ಸೌಮ್ಯವಾಗಿದ್ದ.

ಯುದ್ಧದಲ್ಲಿ ಅಗಾಥಾಕ್ಲೀಸ್ ಸಂಪನ್ಮೂಲ ಕ್ರೋಡೀಕರಣದಲ್ಲಿ ಚತುರನಾಗಿದ್ದ, ಅಲ್ಲದೆ ಧೈರ್ಯಶಾಲಿಯಾಗಿಯೂ ಇದ್ದ, ಆದರೆ ಅವನದು ದುಡುಕು ಸ್ವಭಾವ. ಒಂದು ಸನ್ನಿವೇಶದಲ್ಲಿ ಕಾರ್ಥೇಜಿಯನ್ನರು ಸಂಪೂರ್ಣ ಗೆಲವನ್ನು ಸಾಧಿಸುವರೆಂಬ ಭರವಸೆ ಮೂಡಿತ್ತು; ಅವರು ಸಿರಾಕ್ಯೂಸ್ ಅನ್ನು ಆಕ್ರಮಿಸುತ್ತಿದ್ದರು, ಅವರ ನೌಕಾಪಡೆ ಬಂದರನ್ನು ಮುತ್ತಿತು. ಆದರೆ ಭಾರಿ ಸೈನ್ಯದೊಂದಿಗೆ ಅಗಾಥಾಕ್ಲೀಸ್ ಆಫ್ರಿಕಕ್ಕೆ ಹೋದ, ಕಾರ್ಥೇಜಿಯನ್ನರ ಕೈಗೆ ಸಿಕ್ಕಬಾರದೆಂದು ಅಲ್ಲಿ ತನ್ನ ಹಡಗುಗಳಿಗೆ ಬೆಂಕಿ ಇಟ್ಟ. ಅವನಿಲ್ಲದಾಗ ಬಂಡಾಯವಾಗಬಹುದೆಂದು ಹೆದರಿ ಅವನು ಮಕ್ಕಳನ್ನು ಒತ್ತೆಯಾಳುಗಳಾಗಿ ಕರೆದುಕೊಂಡು ಹೋಗಿದ್ದ. ಕೆಲಕಾಲಾನಂತರ ಸಿರಾಕ್ಯೂಸ್‌ನಲ್ಲಿ ಅವನ ಪ್ರತಿನಿಧಿಯಾಗಿದ್ದ ಅವನ ಸೋದರ ಎಂಟು ಸಾವಿರ ಮಂದಿ ರಾಜಕೀಯ ವಿರೋಧಿಗಳನ್ನು ದೇಶಭ್ರಷ್ಟಗೊಳಿಸಿದ; ಅವರ ಜೊತೆ ಕಾರ್ಥೇಜಿಯನ್ನರು ಸ್ನೇಹ ಬೆಳೆಸಿದರು. ಮೊದಮೊದಲು ಅವನು ಆಫ್ರಿಕದಲ್ಲಿ ಆಶ್ಚರ್ಯ ಹುಟ್ಟಿಸುವಷ್ಟು ಯಶಸ್ಸು ಗಳಿಸಿದ; ಟ್ಯೂನಿಸ್ ಅನ್ನು ವಶಪಡಿಸಿಕೊಂಡ, ಕಾರ್ಥೇಜ್ ಅನ್ನು ಹಿಡಿದ, ಅಲ್ಲಿನ ಸರ್ಕಾರ

ಗಾಬರಿಗೊಂಡು ಮೊಲೋಕ್ ದೇವತೆಯನ್ನು ಒಲಿಸಿಕೊಳ್ಳಲು ಉದ್ಯುಕ್ತರಾದರು. ದೇವತೆಗೆ ಬಲಿಯಾಗಬೇಕಾಗಿದ್ದ ಮಕ್ಕಳ ಪೋಷಕರಾದ ಶ್ರೀಮಂತರು ಅವರಿಗೆ ಬದಲಾಗಿ ಬಡವರ ಮಕ್ಕಳನ್ನು ಕೊಂಡುಕೊಳ್ಳುವ ಪರಿಪಾಟವಿದ್ದವರೆಂಬುದು ತಿಳಿಯಿತು. ಏಕೆಂದರೆ ಮೊಲೋಕ್ ದೇವತೆಗೆ ಶ್ರೀಮಂತ ಮಕ್ಕಳ ಬಲಿ ಹೆಚ್ಚು ತೃಪ್ತಿ ನೀಡುತ್ತದೆಂಬ ಕಾರಣದಿಂದ ಆ ರೂಢಿಯನ್ನೀಗ ಕಠಿಣ ಕ್ರಮಗಳಿಂದ ನಿಲ್ಲಿಸಲಾಯಿತು. ಈ ಸುಧಾರಣೆಯನಂತರ ಕಾರ್ಥೇಜಿಯನ್ನರ ಅದೃಷ್ಟವು ಸುಧಾರಿಸಲಾರಂಭಿಸಿತು.

ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳುವ ಆವಶ್ಯತೆಯನ್ನು ಮನಗಂಡ ಅಗಾಥಾಕ್ಲೀಸ್ ಸೈರೀನ್‌ಗೆ ದೂತರನ್ನು ಕಳಿಸಿದ; ಅವನು ವಶಪಡಿಸಿಕೊಳ್ಳುವ ವೇಳೆಗೆ ಅಲೆಕ್ಸಾಂಡರ್‌ನ ಸೇನಾಪತಿಗಳಲ್ಲಿ ಒಬ್ಬನಾಗಿದ್ದ ಒಫೆಲಸ್ ಟಾಲೆಮಿಯ ನೇತೃತ್ವದಲ್ಲಿ ಅದನ್ನು ವಶಪಡಿಸಿಕೊಂಡಿದ್ದ. ಒಫೆಲಸ್‌ನ ಸಹಾಯದಿಂದ ಕಾರ್ಥೇಜ್ ಅನ್ನು ನಾಶಗೊಳಿಸಬಹುದೆಂದೂ, ಅಗಾಥಾಕ್ಲೀಸ್ ಸಿಸಿಲಿಯಲ್ಲಿ ಸುಭದ್ರವಾಗಿರಲು ಮಾತ್ರ ಬಯಸುವವನಾದ್ದರಿಂದ ಆಫ್ರಿಕದಲ್ಲಿನ ತಮ್ಮ ಎಲ್ಲ ಜಂಟಿ ಗೆಲವುಗಳು ಒಫೆಲಸ್‌ನ ಪಾಲಾಗುವೆಂದೂ ದೂತರ ಮೂಲಕ ತಿಳಿಸಲಾಯಿತು. ಈ ಆಮಿಷಗಳಿಂದ ಆಕರ್ಷಿತನಾದ ಒಫೆಲಸ್ ತನ್ನ ಸೈನ್ಯದೊಡನೆ ಮರುಭೂಮಿಯುದ್ದಕ್ಕೂ ನಡೆದ, ಆ ಮೇಲೆ ಬಹಳ ಕಷ್ಟಪಟ್ಟು ಅಗಾಥಾಕ್ಲೀಸ್‌ನ ಜೊತೆಗೂಡಿದ. ಆಗ ಅಗಾಥಾಕ್ಲೀಸ್ ಅವನನ್ನು ಕೊಲೆಮಾಡಿ, ತನ್ನ ಸೇವೆಯಲ್ಲಿರಲೊಪ್ಪುವುದು ಮಾತ್ರ ಅವರಿಗೆ ಏಕೈಕ ರಕ್ಷಣಾಮಾರ್ಗ ಎಂದು ಒಫೆಲಸ್‌ನ ಸೈನ್ಯಕ್ಕೆ ತಿಳಿಸಿದ.

ಆನಂತರ ಉಟಿಕವನ್ನು ಮುತ್ತಿ, ಅಲ್ಲಿನ ಹೊಲಗಳಲ್ಲಿದ್ದ ಮುನ್ನೂರು ಮಂದಿಯನ್ನು ಅನಿರೀಕ್ಷಿತವಾಗಿ ಕೈಸೆರೆ ಹಿಡಿದ; ಅವರನ್ನು ತನ್ನ ಪಡೆಯ ಮುಂಭಾಗದಲ್ಲಿರಿಸಿದ, ಇದರಿಂದ ಸ್ವರಕ್ಷಣೆಗಾಗಿ ಮೇಲೇರಿ ಬರುವ ಯೂಟಿಕನ್ನರು ತಮ್ಮವರನ್ನೇ ಮೊದಲು ಕೊಲ್ಲಬೇಕಾಗಿತ್ತು. ಈ ಪ್ರಯತ್ನದಲ್ಲಿ ಯಶಸ್ಸು ಗಳಿಸಿದರೂ, ಅವನ ಪರಿಸ್ಥಿತಿಯು ಕಷ್ಟಕರವಾಗಿತ್ತು, ತನ್ನ ಮಗ ಆರ್ಕಗಾಥಸ್ ಸೈನ್ಯದಲ್ಲಿ ಅತೃಪ್ತಿಯನ್ನು ಬಿತ್ತುತ್ತಿದ್ದಾನೆಂಬುದು ಅವನ ಭಯವನ್ನು ಮತ್ತಷ್ಟು ಹೆಚ್ಚಿಸಿತ್ತು. ಇದರಿಂದ ಅವನು ಗುಟ್ಟಾಗಿ ಸಿಸಿಲಿಗೆ ಪಲಾಯನ ಮಾಡಿದ; ತಮ್ಮ ಕೈಬಿಟ್ಟದ್ದರಿಂದ ಕೋಪಗೊಂಡ ಸೈನ್ಯವು ಆರ್ಕಗಾಥಸ್ ಮತ್ತು ಅಗಾಥಾಕ್ಲೀಸ್‌ನ ಮತ್ತೊಬ್ಬ ಮಗನನ್ನೂ ಕೊಂದುಹಾಕಿತು.. ಇದು ಅವನನ್ನು ಎಷ್ಟು ಕೆರಳಿಸಿತೆಂದರೆ

ಸಿರಾಕ್ಯೂಸ್‌ನಲ್ಲಿದ್ದ ದಂಗೆಕೋರ ಸೈನಿಕರಿಗೆ ಸಂಬಂಧಪಟ್ಟಿದ್ದ ಎಲ್ಲರನ್ನೂ ಮಕ್ಕಳು ಹೆಂಗಸರೆನ್ನದೆ ಕೊಚ್ಚಿಹಾಕಿದ.

ಸಿಸಿಲಿಯಲ್ಲಿ ಅವನ ಅಧಿಕಾರವು ವೈಪರೀತ್ಯಗಳ ನಡುವೆಯೂ ಕೆಲ ಕಾಲ ಸಾಗಿತು. ಈಜೆಸ್ಟವನ್ನು ವಶಪಡಿಸಿಕೊಂಡು ಬಡವ ಗಂಡಸರನ್ನೆಲ್ಲ ಕೊಂದು, ಸಂಪತ್ತನ್ನು ಬಚ್ಚಿಟ್ಟಿರುವ ಜಾಗ ತೋರಿಸಬೇಕೆಂದು ಶ್ರೀಮಂತರನ್ನು ಚಿತ್ರಹಿಂಸೆಗೆ ಗುರಿಮಾಡಿದ. ಚಿಕ್ಕ ವಯಸ್ಸಿನ ಹೆಂಗಸರನ್ನೂ ಮಕ್ಕಳನ್ನೂ ಪ್ರಧಾನಭೂಮಿಯಲ್ಲಿದ್ದ ಬ್ರೂಟಿಯಲ್ಲಿ ಗುಲಾಮರನ್ನಾಗಿ ಮಾರಿದ. ಅವನ ಗೃಹಜೀವನವು, ಪಾಪ, ಸುಖಕರವಾಗಿರಲಿಲ್ಲ. ಅವನ ಹೆಂಡತಿಯು ಮಗನ ಜೊತೆಯಲ್ಲಿಯೇ ಅನೈತಿಕ ವ್ಯವಹಾರವಿರಿಸಿಕೊಂಡಿದ್ದಳು, ಅವನ ಇಬ್ಬರು ಮೊಮ್ಮಕ್ಕಳಲ್ಲಿ ಒಬ್ಬ ಮತ್ತೊಬ್ಬನ ಕೊಲೆಗೈದ, ಮುದಿ ನಿರಂಕುಶಪ್ರಭುವಾದ ತಾತನ ಹಲ್ಲುಕಡ್ಡಿಗೆ ವಿಷ ಸವರಲು ಸೇವಕನನ್ನು ಪ್ರಚೋದಿಸಿದ. ತಾನು ಸಾಯುವ ಗಳಿಗೆ ಬಂದಿದೆಯೆಂದು ಅರ್ಥಮಾಡಿಕೊಂಡಾಗ ಅಗಾಥಾಕ್ಲಿಸ್ ಮಾಡಿದ ಕೊನೆಯ ಕೆಲಸವೆಂದರೆ, ಸೆನೇಟ್ ಸಭೆಯನ್ನು ಕರೆದು ತನ್ನ ಮೊಮ್ಮಗನ ಮೇಲೆ ಸೇಡು ತೀರಿಸಿಕೊಳ್ಳಲು ಆದೇಶಿಸಿದ್ದು. ಆದರೆ ವಿಷಲೇಪನದಿಂದಾಗಿ ಅವನ ವಸಡುಗಳು ಮಾತನಾಡಲಾಗದಷ್ಟು ಹುಣ್ಣಾಗಿದ್ದವು. ಆದರೆ ಜನ ದಂಗೆಯೆದ್ದು, ಅವನ ಸಾಮಾನುಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು ಸಾಯುವ ಮುಂಚೆಯೇ ಅವನನ್ನು ಚಿತಾಗ್ನಿಯ ಬಳಿ ಕೊಂಡೊಯ್ದು, ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪನೆ ಮಾಡಿದುದಾಗಿ ತಿಳಿಯುತ್ತದೆ.

ನವೋದಯದ ಇಟಲಿಯೂ ಪ್ರಾಚೀನ ಗ್ರೀಸ್‌ನಂತೆಯೇ ಇತ್ತು. ಜೊತೆಗೆ ಅಲ್ಲಿನ ಗೊಂದಲ ಮತ್ತಷ್ಟು ಹೆಚ್ಚಿನದು. ಅಲ್ಲಿ ವಾಣಿಜ್ಯ ಸ್ವಲ್ಪಜನಾಧಿಪತ್ಯದ ಗಣರಾಜ್ಯಗಳಿದ್ದವು, ಗ್ರೀಕ್ ಮಾದರಿಯ ನಿರಂಕುಶತೆಯಿತ್ತು, ಊಳಿಗಮಾನ್ಯ ಪಾಳೆಯಪಟ್ಟುಗಳಿದ್ದವು, ಅವುಗಳೊಡನೆ ಚರ್ಚ್ ಆಡಳಿತದ ಸಂಸ್ಥಾನಗಳೂ ಇದ್ದವು. ಇಟಲಿಯ ಹೊರತು ಪೋಪ್ ಬಗ್ಗೆ ಗೌರವವಿತ್ತು, ಅದರೆ ಅವನ ಮಕ್ಕಳಿಗೇ ಅವನ ಬಗ್ಗೆ ಗೌರವವಿರಲಿಲ್ಲ, ಹೀಗಾಗಿ ಸೆಸೇರ್ ಬೋರ್ಜಿಯ ನಗ್ನ ಅಧಿಕಾರವನ್ನೇ ಅವಲಂಬಿಸಬೇಕಾಗಿತ್ತು.

ಸೆಸೇರ್ ಬೋರ್ಜಿಯ ಮತ್ತವನ ತಂದೆ ಆರನೆಯ ಅಲೆಕ್ಸಾಂಡರ್ ಮುಖ್ಯರಾದವರು, ತಮ್ಮದೇ ಕಾರಣಕ್ಕೆ ಮಾತ್ರವಲ್ಲ, ಮೆಕಿಯವಿಲ್ಲಿಯನ್ನು ಸ್ಫೂರ್ತಗೊಳಿಸಿದ್ದಕ್ಕಾಗಿಯೂ. ಅವರ ಅಧಿಕಾರವಧಿಯಲ್ಲಿ ನಡೆದ ಒಂದು ಘಟನೆಯನ್ನು ಕ್ರೈಟನ್ ವಿವರಿಸುವ ರೀತಿಯು ಆ ಕಾಲದ ಸ್ವರೂಪವನ್ನು

ಸಮರ್ಥವಾಗಿ ಚಿತ್ರಿಸುತ್ತದೆ. ಕೊಲೋನ ಮತ್ತು ಆರ್ಸಿನಿಗಳು ಶತಮಾನಗಳ ಕಾಲ ಪೋಪ್‌ಗಳ ಹಾದಿಯಲ್ಲಿ ಮುಳ್ಳುಗಳಾಗಿದ್ದವು; ಕೊಲೋನ ಪತನಗೊಂಡಿದ್ದರೂ ಆರ್ಸಿನಿ ಇನ್ನೂ ಉಳಿದಿತ್ತು. ಸೆಸೇರ್ ದ್ರೋಹದಿಂದ ಎರಡು ಪ್ರಮುಖ ಆರ್ಸಿನಿಗಳನ್ನು ವಶಪಡಿಸಿಕೊಂಡಿದ್ದನೆಂಬುದನ್ನು ಕೇಳಿದ ಆರನೆಯ ಅಲೆಕ್ಸಾಂಡರ್ ಅವುಗಳೊಡನೆ ಒಂದು ಒಪ್ಪಂದ ಮಾಡಿಕೊಂಡ, ಅವುಗಳ ಮುಖ್ಯಸ್ಥನಾದ ಕಾರ್ಡಿನಲ್ ಆರ್ಸಿನಿಯನ್ನು ವ್ಯಾಟಿಕನ್‌ಗೆ ಆಹ್ವಾನಿಸಿದ. ಪೋಪ್‌ನ ಸನ್ನಿಧಿಗೆ ಬಂದ ಗಳಿಗೆಯೇ ಕಾರ್ಡಿನಲ್ ಆರ್ಸಿನಿಯನ್ನು ಬಂಧಿಸಲಾಯಿತು; ಅವನ ತಾಯಿ ತನ್ನ ಮಗನಿಗೆ ಆಹಾರ ಕಳಿಸುವ ಸೌಲಭ್ಯ ಒದಗಿಸಲು ಎರಡು ಸಾವಿರ ಡ್ಯುಕಾಟ್‌ಗಳನ್ನು ಕೊಡಬೇಕಾಯಿತು, ಅವನ ಪ್ರೇಯಸಿಯು ಅವನಿಗಿಷ್ಟವಾಗಿದ್ದ ಬೆಲೆಬಾಳುವ ಮುತ್ತೊಂದನ್ನು ಪರಮಪೂಜ್ಯರಿಗೆ ಕಾಣಿಕೆಯಾಗಿ ನೀಡಿದಳು. ಇಷ್ಟಾದರೂ, ಕಾರ್ಡಿನಲ್ ಆರ್ಸಿನಿ ಬಂಧನದಲ್ಲಿಯೇ ಸತ್ತ; ಕಾರಣ, ಅವನಿಗೆ ಕೊಟ್ಟ ವೈನ್‌ಗೆ ಆರನೆಯ ಅಲೆಕ್ಸಾಂಡರ್ ವಿಷ ಬೆರಸಲು ಅದೇಶಿಸಿದ್ದ ಎಂದು ತಿಳಿದುಬರುತ್ತದೆ. ಈ ಘಟನೆಯ ಬಗ್ಗೆ ಕ್ರೈಟನ್ ಮಾಡುವ ವ್ಯಾಖ್ಯಾನವು ನಗ್ನ ಅಧಿಕಾರದ ಸ್ವರೂಪವನ್ನು ವಿವರಿಸುತ್ತದೆ:

"ಈ ದ್ರೋಹಕೃತ್ಯವು ಜನರಲ್ಲಿ ಯಾವುದೇ ಬಗೆಯ ವಿರೋಧವನ್ನು ಮೂಡಿಸಲಿಲ್ಲ ಎಂಬುದೂ, ಅದು ಅಷ್ಟು ಸುಸೂತ್ರವಾಗಿ ನಡೆಯಿತೆಂಬುದೂ ಆಶ್ಚರ್ಯಕರವಾದ ವಿಷಯ. ಇಟಲಿಯ ಕೃತಕ ರಾಜಕಾರಣದಲ್ಲಿ ಎಲ್ಲವೂ ಆಟಗಾರನ ಕೈಚಳಕವನ್ನೇ ಆಧರಿಸಿತ್ತು. ಹಣಕ್ಕಾಗಿ ಕಾದುವವರು ತಮ್ಮ ಹಿತವನ್ನು ಮಾತ್ರ ಆಲೋಚಿಸುವವರು; ಅವರನ್ನು ಯಾವುದೋ ಕಾರಣಕ್ಕೆ ಕಿತ್ತುಹಾಕಿದಾಗ, ಯಾವ ದ್ರೋಹವೂ ಉಳಿಯುತ್ತಿರಲಿಲ್ಲ. ಆರ್ಸಿನಿ ಮತ್ತು ವಿಟೆಲೋಜ಼ೋಗಳು ಪತನಗೊಂಡಾಗ ವಿರೋಧ ವ್ಯಕ್ತಪಡಿಸುವುದಕ್ಕೆ ಯಾವುದೇ ಪಕ್ಷಗಳೂ ಇರಲಿಲ್ಲ, ಹಿತಾಸಕ್ತಿಗಳೂ ಇರಲಿಲ್ಲ. ಹಣಕ್ಕಾಗಿ ಕಾದುವ ಸೈನಿಕರು ತಮ್ಮ ಮುಖಂಡರನ್ನು ಅನುಸರಿಸುವವರೆಗೂ ಬಹಳ ಪ್ರಬಲರಾಗಿರುತ್ತಿದ್ದರು; ಮುಖಂಡರನ್ನು ಕಿತ್ತುಹಾಕಿದಾಗ ಸೈನಿಕರು ಚೆಲ್ಲಾಪಿಲ್ಲಿಯಾಗಿ ತಮ್ಮ ಇತರ ಕೆಲಸಗಳಲ್ಲಿ ತೊಡಗುತ್ತಿದ್ದರು.... ಈ ವಿಷಯದಲ್ಲಿ ಸೆಸೇರ್ ತೋರಿಸಿದ ಪರಮ ನಿರ್ಭಾವುಕತೆಯನ್ನು ಬಹಳ ಜನ ಮೆಚ್ಚಿಕೊಂಡರು.... ಪ್ರಸ್ತುತ ನೈತಿಕತೆಗೆ ಯಾವ ಧಕ್ಕೆಯೂ ಆಗಿರಲಿಲ್ಲ.... ಮೆಕಿಯವಿಲ್ಲಿಗೆ ಸೆಸೇರ್ ನೀಡಿದ ವಿವರಣೆಯನ್ನು ಇಟಲಿಯ ಬಹುಜನರು ಒಪ್ಪಿಕೊಂಡರು: 'ತಾವು

ದ್ರೋಹಿಗಳೆಂದು ಸಾಬೀತುಪಡಿಸಿಕೊಂಡವರಿಗೆ ಮೋಸಮಾಡುವುದೇನೂ ತಪ್ಪಲ್ಲ.' ಸೆಸೇರ್ ನಡತೆಯನ್ನು ಅವನ ಗೆಲವಿನಿಂದ ಅಳೆದರು.'[೧]

ಗ್ರೀಸ್‌ನಂತೆಯೇ ನವೋದಯಕಾಲದ ಇಟಲಿಯಲ್ಲಿಯೂ ಉನ್ನತ ಮಟ್ಟದ ನಾಗರಿಕತೆಯೊಡನೆ ಕೀಳು ಮಟ್ಟದ ನೈತಿಕತೆ ಸೇರಿತ್ತು. ಈ ಎರಡೂ ಕಾಲಗಳಲ್ಲಿ ಅತ್ಯುನ್ನತ ಪ್ರತಿಭೆಯ ಜೊತೆಗೆ ಅಪಾರ ದೌರ್ಜನ್ಯ ತುಂಬಿಕೊಂಡಿತ್ತು; ಎರಡರಲ್ಲಿಯೂ ದುರ್ಜನರೂ ಪ್ರತಿಭಾವಂತರೂ ಯಾವ ರೀತಿಯಲ್ಲಿಯೂ ಪರಸ್ಪರ ವಿರೋಧಿಗಳಾಗಿರಲಿಲ್ಲ. ಸೆಸೇರ್ ಬೋರ್ಜಿಯಾಗೆಂದು ಲಿಯೊನಾರ್ಡೊ ಕೋಟೆಗಳನ್ನು ನಿರ್ಮಿಸಿದ; ಸಾಕ್ರಟೀಸ್‌ನ ಕೆಲವು ಮಂದಿ ವಿದ್ಯಾರ್ಥಿಗಳು ಅತ್ಯಂತ ನಿಷ್ಠುರ ನಿರಂಕುಶಪ್ರಭುಗಳಾಗಿದ್ದ ಮೂವತ್ತು ಮಂದಿಯಲ್ಲಿ ಸೇರಿದ್ದರು; ಪ್ಲೇಟೋನ ಶಿಷ್ಯರು ಸಿರಾಕ್ಯೂಸ್‌ನ ಅನೇಕ ಹೀನಕೃತ್ಯಗಳಲ್ಲಿ ಭಾಗಿಗಳಾಗಿದ್ದರು; ಅರಿಸ್ಟಾಟಲ್ ಒಬ್ಬ ನಿರಂಕುಶಪ್ರಭುವಿನ ಸೋದರಸೊಸೆಯನ್ನೇ ಮದುವೆಯಾಗಿದ್ದ. ಈ ಎರಡೂ ಕಾಲಗಳಲ್ಲಿ, ಸುಮಾರು ನೂರೈವತ್ತು ವರ್ಷಗಳ ಅವಧಿಯವರೆಗೂ ಕಲೆ ಸಾಹಿತ್ಯಗಳೊಂದಿಗೆ ಕೊಲೆಗಾರಿಕೆಯೂ ವಿಜೃಂಭಿಸಿತು; ಇವೆಲ್ಲವನ್ನೂ ಪಶ್ಚಿಮ ಮತ್ತು ಉತ್ತರದ ಕಡಿಮೆ ನಾಗರಿಕವಾಗಿದ್ದ ಸ್ನೇಹಪರ ದೇಶಗಳು ಅಳಿಸಿಹಾಕಿದವು. ಎರಡು ಸನ್ನಿವೇಶಗಳಲ್ಲಿಯೂ ರಾಜಕೀಯ ಸ್ವಾತಂತ್ರ್ಯಹರಣವು ಸಾಂಸ್ಕೃತಿಕ ಪತನದ ಜೊತೆಗೆ ವಾಣಿಜ್ಯ ಶ್ರೇಷ್ಠತೆ ಹಾಗೂ ಕಡುಬಡತನಗಳ ನಿವಾರಣೆಯನ್ನೂ ಒಳಗೊಂಡಿತ್ತು.

ನಗ್ನ ಅಧಿಕಾರಗಳ ಅವಧಿ ಸಾಮಾನ್ಯವಾಗಿ ಹ್ರಸ್ವವಾದುದು. ಅಲ್ಲದೆ ಅದು ಮೂರು ಕಾರಣಗಳಲ್ಲಿ ಒಂದರ ಮೂಲಕ ಕೊನೆಗೊಳ್ಳುವುದಂತೂ ನಿಶ್ಚಿತ. ಮೊದಲನೆಯದು, ಗ್ರೀಸ್ ಮತ್ತು ಇಟಲಿಗಳಲ್ಲಾದಂತೆ, ವಿದೇಶಿ ಆಕ್ರಮಣ. ಎರಡನೆಯದು, ಸ್ಥಿರ ಸರ್ವಾಧಿಕಾರದ ಸ್ಥಾಪನೆ, ಅದು ಬಹು ಬೇಗ ಸಂಪ್ರದಾಯವಾಗಿಬಿಡುತ್ತದೆ; ಇದಕ್ಕೆ ಅತ್ಯುತ್ತಮ ನಿದರ್ಶನವೆಂದರೆ, ಮರಿಯಸ್‌ನಿಂದ ಆಂಟೋನಿಯ ಸೋಲಿನವರೆಗೆ ನಡೆದ ಅಂತರ್ಯುದ್ಧಗಳ ಅವಧಿಯ ಬಳಿಕ ಸ್ಥಾಪನೆಗೊಂಡ ಆಗಸ್ಟಸ್‌ನ ಸಾಮ್ರಾಜ್ಯ. ಮೂರನೆಯದು, ಅದರ ಅತ್ಯಂತ ವಿಶಾಲ ಅರ್ಥದಲ್ಲಿ ಹೊಸ ಮತಧರ್ಮದ ಉದಯ. ಇದಕ್ಕೆ ಅತ್ಯುತ್ತಮ ನಿರ್ಶನವೆಂದರೆ, ಅರೇಬಿಯದ

---

[೧] ಎಂ. ಕ್ರೈಟನ್, '*ಹಿಸ್ಟರಿ ಆಫ್ ದ ಪಾಪಸಿ*,' ಸಂಪುಟ ೫, ಪು. ೪೨.

ಒಳಜಗಳಗಳಲ್ಲಿ ತೊಡಗಿದ್ದ ವಿವಿಧ ಬುಡಕಟ್ಟುಗಳನ್ನು ಒಂದುಗೂಡಿಸಿದ ರೀತಿ. ರಷ್ಯದಲ್ಲಿ ರಫ್ತುಮಾಡಬಹುದಾದಷ್ಟು ಹೆಚ್ಚಿನ ಆಹಾರವಿದ್ದಿದ್ದರೆ, ಮಹಾಯುದ್ಧದ ಬಳಿಕ ಯೂರೋಪ್‌ನಾದ್ಯಂತ ಕಮ್ಯೂನಿಸಂ ಅನ್ನು ಅನುಸರಿಸುವುದರ ಮೂಲಕ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿನ ನಗ್ನ ಬಲಪ್ರದರ್ಶನವನ್ನು ಕೊನೆಗೊಳಿಸಬಹುದಾಗಿತ್ತು.

ಎಲ್ಲಿ ಅಧಿಕಾರವು ನಗ್ನವಾಗಿರುವುದೋ, ಬರಿ ಅಂತಾರಾಷ್ಟ್ರೀಯವಾಗಲ್ಲ, ಏಕರಾಷ್ಟ್ರಗಳ ಆಂತರಿಕ ಸರ್ಕಾರಗಳಲ್ಲೂ, ಅಧಿಕಾರವನ್ನು ಹಿಡಿಯುವ ಮಾರ್ಗಗಳು ಅನ್ಯಥಾ ಇರುವುದಕ್ಕಿಂತ ಹೆಚ್ಚು ಕ್ರೌರ್ಯದಿಂದ ಕೂಡಿರುತ್ತವೆ. ಈ ವಿಷಯವನ್ನು ಮೆಕಿಯವಿಲ್ಲಿ ಸಮಗ್ರವಾಗಿ ಚರ್ಚಿಸಿದ್ದಾನೆ. ನಿದರ್ಶನಕ್ಕೆ, ಆರನೆಯ ಅಲೆಕ್ಸಾಂಡರ್‌ನ ಮರಣವು ಸಂಭವಿಸಿದರೆ ತನ್ನ ರಕ್ಷಣೆ ಮಾಡಿಕೊಳ್ಳಲು ಸೆಸೇರ್ ಬೋರ್ಜಿಯ ತೆಗೆದುಕೊಂಡ ಕ್ರಮಗಳನ್ನು ಕುರಿತು ಅವನು ಆಡುವ ಹೊಗಳಿಕೆಯ ಮಾತುಗಳು:

"ಅವನು ನಾಲ್ಕು ವಿಧಗಳಲ್ಲಿ ಕ್ರಿಯಾಶೀಲನಾಗಲು ನಿರ್ಧರಿಸಿದ. ಮೊದಲನೆಯದಾಗಿ, ತಾನು ಲೂಟಿಮಾಡಿದ್ದ ಶ್ರೀಮಂತರ ಕುಟುಂಬಗಳನ್ನು ನಿರ್ನಾಮಗೊಳಿಸಿ, ಆ ಮೂಲಕ ಪೋಪ್ ಆ ನೆವ ಒಡ್ಡುವುದನ್ನು ನಿವಾರಿಸಿಕೊಳ್ಳುವುದು. ಎರಡನೆಯದು, ರೋಮ್‌ನ ಎಲ್ಲ ಸಭ್ಯರನ್ನು ತನ್ನ ಪರವಾಗಿ ಒಲಿಸಿಕೊಳ್ಳುವುದು, ಅವರ ಸಹಾಯದಿಂದ ಪೋಪ್ ಅನ್ನು ಕುಂಠಿತಗೊಳಿಸುವುದು. ಮೂರನೆಯದು, ಆಯ್ಕೆದಾರರನ್ನು ಹೆಚ್ಚು ತನ್ನ ಪರವಾಗಿಸಿಕೊಳ್ಳುವುದು. ನಾಲ್ಕನೆಯದು, ಪೋಪ್ ಸಾಯುವ ಮುಂಚೆ ನಿರೋಧವನ್ನು ತಾನೇ ಎದುರಿಸವಷ್ಟು ಅಧಿಕವಾದ ಅಧಿಕಾರವನ್ನು ಸಂಚಯಿಸಿಕೊಳ್ಳುವುದು. ಈ ನಾಲ್ಕರಲ್ಲಿ, ಅಲೆಕ್ಸಾಂಡರ್ ಸತ್ತಾಗ, ಮೂರನ್ನಾಗಲೇ ಮಾಡಿ ಪೂರೈಸಿದ್ದ. ಏಕೆಂದರೆ ಸಂಪತ್ತು ಕಳೆದುಕೊಂಡ ಶ್ರೀಮಂತರಲ್ಲಿ ಸಾಧ್ಯವಾದಷ್ಟು ಮಂದಿಯನ್ನು ಅವನಾಗಲೇ ಕೊಂದುಹಾಕಿದ್ದ. ಕೆಲವರು ತಪ್ಪಿಕೊಂಡಿದ್ದರು," ಇತ್ಯಾದಿ.

ಈ ಕ್ರಮಗಳಲ್ಲಿ ಎರಡು, ಮೂರು ಮತ್ತು ನಾಲ್ಕನೆಯದನ್ನು ಯಾವಾಗ ಬೇಕಾದರೂ ಕೈಗೊಳ್ಳಬಹುದು, ಆದರೆ ಮೊದಲನೆಯದು ಸುವ್ಯವಸ್ಥಿತ ಸರ್ಕಾರವಿರುವ ಸಂದರ್ಭದಲ್ಲಿ ಜನಾಭಿಪ್ರಾಯವನ್ನು ತಲ್ಲಣಗೊಳಿಸುತ್ತದೆ. ವಿರೋಧ ಪಕ್ಷದ ನಾಯಕನನ್ನು ಕೊಲ್ಲುವುದರ ಮೂಲಕ ತನ್ನ ಸ್ಥಾನವನ್ನು ಸುಭದ್ರಗೊಳಿಸಿಕೊಳ್ಳುವ ಆಲೋಚನೆಯನ್ನು ಬ್ರಿಟಿಷ್ ಪ್ರಧಾನ ಮಂತ್ರಿಯೊಬ್ಬ ಮಾಡಲಾರ. ಆದರೆ ಅಧಿಕಾರವು

ನಗ್ನವಾಗಿರುವಾಗ ಅಂಥ ನೈತಿಕ ನಿಯಂತ್ರಣಗಳು ಪರಿಣಾಮಕಾರಿಯಾಗುವುದಿಲ್ಲ.

ಬೇರಾವ ಕಾರಣವೂ ಇಲ್ಲದೆ ಅಧಿಕಾರ ಎಂಬ ಕಾರಣದಿಂದ ಪ್ರಜೆಗಳು ಗೌರವಿಸಿದರೆ ಆ ಅಧಿಕಾರ ನಗ್ನವಾಗುತ್ತದೆ. ಹೀಗಾಗಿ ಸಾಂಪ್ರದಾಯಿಕವಾಗಿದ್ದ ಅಧಿಕಾರದಲ್ಲಿ ಸಂಪ್ರದಾಯವನ್ನು ಒಪ್ಪಿಕೊಳ್ಳದಿದ್ದಾಗ ಅದು ನಗ್ನವಾಗುತ್ತದೆ. ಮುಕ್ತ ಆಲೋಚನೆ ಹಾಗೂ ಕಟುಟೀಕೆಗಳ ಕಾಲಗಳು ನಗ್ನ ಅಧಿಕಾರದ ಕಾಲಗಳಾಗಿ ಮಾರ್ಪಡುವುದು ಸಾಮಾನ್ಯ. ಗ್ರೀಸ್‌ನಲ್ಲಿ ಆದುದೂ ಹೀಗೆಯೇ, ನವೋದಯದ ಇಟಲಿಯಲ್ಲಿ ಆದುದೂ ಹೀಗೆಯೇ. ಪ್ಲೇಟೋ ತನ್ನ *'ರಿಪಬ್ಲಿಕ್'*ನ ಮೊದಲನೆಯ ಅಧ್ಯಾಯದಲ್ಲಿ, ನ್ಯಾಯದ ನೈತಿಕ ವ್ಯಾಖ್ಯೆಯೊಂದನ್ನು ಕಂಡುಕೊಳ್ಳಲು ಸಾಕ್ರಟೀಸ್ ಮಾಡಿದ ಸ್ನೇಹಪರ ಪ್ರಯತ್ನಗಳಿಂದ ಕಸಿವಿಸಿಗೊಂಡ ಥ್ರಾಸಿಮ್ಯಾಕಸ್‌ನ ಮಾತುಗಳ ಮೂಲಕ ನಗ್ನ ಅಧಿಕಾರಕ್ಕೆ ಅನ್ವಯವಾಗುವ ಸಿದ್ಧಾಂತವೊಂದನ್ನು ಮಂಡಿಸಿದ್ದಾನೆ. *"ನನ್ನ ಸಿದ್ಧಾಂತವೆಂದರೆ, ನ್ಯಾಯವೆಂದರೆ ಕೇವಲ ಪ್ರಬಲನಾದವನ ಪರವಾದ ಆಸಕ್ತಿ"* ಎಂದು ಥ್ರಾಸಿಮ್ಯಾಕಸ್ ನುಡಿಯುತ್ತಾನೆ. ಮುಂದುವರಿದು ಅವನೆನ್ನುತ್ತಾನೆ:

"ಪ್ರತಿ ಸರ್ಕಾರವೂ ತನ್ನ ಹಿತಾಸಕ್ತಿಗಳಿಗೆ ಅನುಗುಣವಾದ ಕಾನೂನುಗಳನ್ನು ರೂಪಿಸುತ್ತದೆ; ಪ್ರಜಾಪ್ರಭುತ್ವವು ಪ್ರಜಾಪ್ರಭುತ್ವಾತ್ಮಕ ಕಾನೂನುಗಳನ್ನು ಮಾಡುತ್ತದೆ; ನಿರಂಕುಶಪ್ರಭುವು ಮನಸೋ ಇಚ್ಛೆಯ ಕಾನೂನುಗಳನ್ನು ಮಾಡುತ್ತಾನೆ, ಹೀಗೆಯೇ. ಈ ಕ್ರಮದಿಂದ ಈ ಸರ್ಕಾರಗಳು ತಮಗೆ ಅನುಕೂಲಕರವಾದುವನ್ನು ಪ್ರಜೆಗಳಿಗೂ ಅನುಕೂಲಕರ ಎಂದು ಘೋಷಿಸುತ್ತವೆ. ಅವುಗಳನ್ನು ಮೀರಿದವರನ್ನು ಕಾನೂನುಬಾಹಿರರೆಂದೂ ನ್ಯಾಯವಿರೋಧಿಗಳೆಂದೂ ಅಪರಾಧಿಗಳೆಂದು ಶಿಕ್ಷಿಸಲಾಗುತ್ತದೆ. ಆದ್ದರಿಂದ, ಸ್ವಾಮಿ, ನಾನು ಹೇಳುವುದೇನೆಂದರೆ, ಎಲ್ಲ ನಗರಗಳಲ್ಲೂ ಅದೇ, ಅಂದರೆ, ಸ್ಥಾಪಿತವಾಗಿರುವ ಸರ್ಕಾರದ ಹಿತವೇ ನ್ಯಾಯಯುತವಾದುದು. ಅಧಿಕ ಬಲವನ್ನು ಸರ್ಕಾರದಲ್ಲಿ ಕಾಣಬಹುದೆಂದು ನಾನು ಭಾವಿಸುತ್ತೇನೆ. ಹೀಗಾಗಿ, ಸರಿಯಾದ ಆಲೋಚನೆಯ ತೀರ್ಮಾನವೆಂದರೆ, ಒಂದೇ, ಅಂದರೆ, ಬಲಿಷ್ಠನ ಹಿತಾಸಕ್ತಿಯೇ ಎಲ್ಲೆಡೆಯೂ ನ್ಯಾಯಯುತ ಎನ್ನಿಸಿಕೊಳ್ಳುವುದು."

ಈ ಅಭಿಪ್ರಾಯವನ್ನು ಒಪ್ಪಿಕೊಂಡ ಸಂದರ್ಭಗಳಲೆಲ್ಲ, ಆಡಳಿತಗಾರರು ನೈತಿಕ ನಿಯಂತ್ರಣಗಳಿಗೊಳಗಾಗುವುದಿಲ್ಲ, ಏಕೆಂದರೆ ತಮ್ಮ ಅಧಿಕಾರವನ್ನುಳಿಸಿಕೊಳ್ಳಲು ಅವರು ಮಾಡುವುದೆಲ್ಲ

ಆಘಾತಕರವಾದುದೆಂದು, ಅದರಿಂದ ನೇರವಾಗಿ ತೊಂದರೆಗೊಳಗಾದವರನ್ನು ಹೊರತುಪಡಿಸಿ, ಜನರಿಗೆ ಅನ್ನಿಸುವುದಿಲ್ಲ. ಬಂಡಾಯಗಾರರೂ ಹಾಗೆಯೇ ಸೋಲಿನ ಭಯದಿಂದಷ್ಟೇ ನಿಯಂತ್ರಣಕ್ಕೊಳಗಾಗುತ್ತಾರೆ; ಕ್ರೂರಮಾರ್ಗಗಳಿಂದ ಸಫಲರಾಗುವುದಾದರೆ, ಈ ಕ್ರೂರಮಾರ್ಗಗಳಿಂದ ತಾವು ಜನಪ್ರಿಯತೆಯನ್ನು ಕಳೆದುಕೊಳ್ಳುತ್ತೇವೆಂದು ಅವರು ಹೆದರಬೇಕಾಗಿಲ್ಲ.

ಥ್ರಾಸಿಮ್ಯಾಕಸ್‌ನ ಸಿದ್ಧಾಂತವು, ಒಪ್ಪಿತವಾದೆಡೆಯಲ್ಲೆಲ್ಲ, ಸುವ್ಯವಸ್ಥಿತ ಸಮುದಾಯದ ಅಸ್ತಿತ್ವವು ಸರ್ಕಾರವು ಬಳಸಬಹುದಾದ ನೇರ ಭೌತಿಕ ಬಲವನ್ನು ಆಶ್ರಯಿಸುವಂತೆ ಮಾಡುತ್ತದೆ. ಹೀಗಾಗಿ ಅದು ಸೈನಿಕ ದೌರ್ಜನ್ಯವನ್ನು ಅನಿವಾರ್ಯವಾಗಿಸುತ್ತದೆ. ಇರುವ ಅಧಿಕಾರದ ಹಂಚಿಕೆಯ ಬಗ್ಗೆ ಗೌರವವನ್ನುಂಟುಮಾಡಬಲ್ಲ ತಕ್ಕಮಟ್ಟಿಗಿನ ವ್ಯಾಪಕ ನಂಬಿಕೆ ಜನರಲ್ಲಿದ್ದರೆ ಮಾತ್ರ ಇತರ ಬಗೆಯ ಸರ್ಕಾರಗಳು ಸ್ಥಿರವಾಗಿರಬಲ್ಲವು. ಈ ವಿಷಯದಲ್ಲಿ ಯಶಸ್ವಿಯಾದ ನಂಬಿಕೆಗಳು ಸಾಮಾನ್ಯವಾಗಿ ಬೌದ್ಧಿಕ ಟೀಕೆಗಳನ್ನು ತಡೆದುಕೊಳ್ಳಲಾರದಂತಹವು. ಅನೇಕ ಸನ್ನಿವೇಶಗಳಲ್ಲಿ ಅಧಿಕಾರವು ಜನಮನ್ನಣೆಯಿಂದ ರಾಜಕುಟುಂಬಗಳಿಗೆ, ಶ್ರೀಮಂತವರ್ಗಕ್ಕೆ, ಹಣವಂತರಿಗೆ, ಹೆಂಗಸರ ಬದಲು ಗಂಡಸರಿಗೆ, ಇತರ ಬಣ್ಣಗಳ ಜನರ ಬದಲು ಬಿಳಿಯರಿಗೆ ಸೀಮಿತವಾಗಿರುತ್ತದೆ. ಆದರೆ ಬುದ್ಧಿವಂತಿಕೆಯು ಹರಡಿ ಜನರು ಅಂತಹ ಸೀಮಿತತೆಗಳನ್ನು ನಿರಾಕರಿಸುವಂತಾಗಿದೆ, ಹೀಗಾಗಿ ಅಧಿಕಾರವನ್ನು ಹಿಡಿದವರು ನಗ್ನ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ ಅಥವಾ ಆಶ್ರಯಿಸಬೇಕಾಗುತ್ತದೆ. ಸುವ್ಯವಸ್ಥಿತವಾದ ಸರ್ಕಾರವು ಜನಮನ್ನಣೆಯನ್ನು ಗಳಿಸಬೇಕಾದರೆ, ಬಹುಮಂದಿಯ ಬೆಂಬಲವನ್ನು ಗಳಿಸುವ, ಥ್ರಾಸಿಮ್ಯಾಕಸ್‌ನ ಸಿದ್ಧಾಂತಕ್ಕಿಂತ ಭಿನ್ನವಾದ, ದಾರಿಯೊಂದನ್ನು ಕಂಡುಕೊಳ್ಳಬೇಕು.

ಮೂಢನಂಬಿಕೆಯ ಹೊರತಾಗಿ ಜನಮನ್ನಣೆಯನ್ನು ಸಂಪಾದಿಸುವ ಮಾರ್ಗಗಳನ್ನು ಕುರಿತಾದ ಚರ್ಚೆಯನ್ನು ನಾನು ಮುಂದಿನ ಅಧ್ಯಾಯವೊಂದರಲ್ಲಿ ಕೈಗೆತ್ತಿಕೊಳ್ಳುತ್ತೇನೆ; ಆದರೆ ಈ ಹಂತದಲ್ಲಿ ಕೆಲವು ಪೂರ್ವಭಾವಿ ಮಾತುಗಳನ್ನು ಹೇಳುವುದು ಸಮಂಜಸವೆನಿಸುತ್ತದೆ. ಮೊದಲನೆಯದಾಗಿ, ಈ ಸಮಸ್ಯೆಯೇನೂ ಪರಿಹಾರದೂರವಲ್ಲ, ಏಕೆಂದರೆ ಇದನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಗೆಹರಿಸಲಾಗಿದೆ. (ಈ ಸಮಸ್ಯೆಯು ಬ್ರಿಟನ್‌ನಲ್ಲಿ ಪರಿಹಾರವಾಗಿದೆ ಎಂದು ಹೇಳಬರುವುದಿಲ್ಲ, ಏಕೆಂದರೆ ಬ್ರಟಿಷ್ ಸ್ಥಿರತೆಯಲ್ಲಿ ರಾಜಪ್ರಭುತ್ವವು ಬಹು ಮುಖ್ಯ ಅಂಶ). ಎರಡನೆಯದಾಗಿ, ಸುವ್ಯವಸ್ಥಿತವಾದ ಸರ್ಕಾರದಿಂದಾಗುವ

ಅನುಕೂಲಗಳನ್ನು ಸ್ಥೂಲವಾಗಿ ಅರಿತುಕೊಳ್ಳಬೇಕು; ಇದನ್ನು ಮಾಡಲು ಸದೃಢ ಜನರು ಹಣವಂತರಾಗಲು ಅಥವಾ ಸಂವಿಧಾನಾತ್ಮಕವಾಗಿ ಅಧಿಕಾರ ಪಡೆಯಲು ಬೇಕಾದ ಅವಕಾಶಗಳಿರಬೇಕು. ಶಕ್ತಿಸಾಮರ್ಥ್ಯಗಳನ್ನು ಹೊಂದಿರುವ ಜನರಿರುವ ಯಾವುದೋ ವರ್ಗವನ್ನು ಇಚ್ಛಿಸುವ ಸ್ಥಾನ ಪಡೆಯುವದಕ್ಕೆ ಅನರ್ಹಗೊಳಿಸಿದರೆ, ಅಂಥ ಸಂದರ್ಭಗಳಲ್ಲಿ ಅಸ್ಥಿರತೆಯ ಅಂಶವಿದ್ದು, ಅದರಿಂದ ಕಾಲಾನುಕ್ರಮದಲ್ಲಿ ಬಂಡಾಯಕ್ಕೆ ಅವಕಾಶವಿರುತ್ತದೆ. ಮೂರನೆಯದಾಗಿ, ಸುವ್ಯವಸ್ಥೆಯ ಕಾರಣದಿಂದ ಒಂದು ಅಪೇಕ್ಷಣೀಯ ಸಾಮಾಜಿಕ ರೂಢಿಯನ್ನು ಉದ್ದೇಶಪೂರ್ವಕವಾಗಿ ಅಳವಡಿಸಿಕೊಂಡಿರಬೇಕಾದ ಆವಶ್ಯಕತೆಯಿರುತ್ತದೆ, ಆದರೆ ಅದು ವ್ಯಾಪಕ ವಿರೋಧವನ್ನು ಉದ್ದೀಪಿಸುವಷ್ಟು ಎದ್ದುಕಾಣುವ ನ್ಯಾಯಬಾಹಿರವಾದುದಾಗಿರಬಾರದು. ಅಂತಹ ರೂಢಿಯು ಸ್ವಲ್ಪಕಾಲ ಯಶಸ್ವಿಯಾದರೆ, ಅದು ತಾನಾಗಿಯೇ ಸಂಪ್ರದಾಯವಾಗಿಬಿಡುತ್ತದೆ, ಅನಂತರ ಅದಕ್ಕೆ ಸಾಂಪ್ರದಾಯಿಕ ಅಧಿಕಾರದ ಎಲ್ಲ ಸಾಮರ್ಥ್ಯವೂ ಬಂದುಬಿಡುತ್ತದೆ.

ಆಧುನಿಕ ಓದುಗನಿಗೆ ರೂಸೋನ 'ಸಾಮಾಜಿಕ ಒಪ್ಪಂದ' (ಸೋಷಿಯಲ್ ಕಾಂಟ್ರಾಕ್ಟ್)ವು ಮಹಾ ಕ್ರಾಂತಿಕಾರಿಯಾಗೇನೂ ಕಾಣುವುದಿಲ್ಲ, ಆದರೂ ಸರ್ಕಾರಗಳು ಅದರ ಬಗ್ಗೆ ಏಕೆ ಅಷ್ಟು ಗಾಬರಿಗೊಂಡವೋ ಕಾಣೆ. ನನಗೆ ತೋರುವ ಮುಖ್ಯ ಕಾರಣವೆಂದರೆ, ಅದು ಸರ್ಕಾರದ ಅಧಿಕಾರವನ್ನು ರಾಜರ ಬಗೆಗಿನ ಕುರುಡು ಗೌರವದ ಬದಲು ತಾರ್ಕಿಕ ನೆಲೆಗಟ್ಟಿನ ಮೇಲೆ ರೂಪಿಸಿದ ರೂಢಿಯೊಂದರ ಮೇಲೆ ಆಧರಿಸಲು ಪ್ರಯತ್ನಪಟ್ಟಿದ್ದೇ ಇರಬೇಕು. ಜಗತ್ತಿನ ಮೇಲೆ ರೂಸೋನ ಸಿದ್ಧಾಂತಗಳು ಬೀರಿದ ಪ್ರಭಾವವು ಸರ್ಕಾರಕ್ಕೆ ಕುರುಡುನಂಬಿಕೆಯಲ್ಲದ ಆಧಾರವನ್ನು ಹೊಂದಲು ಜನರನ್ನು ಒಪ್ಪಿಸುವುದು ಎಷ್ಟು ಕಷ್ಟ ಎಂಬುದನ್ನು ತೋರಿಸುತ್ತದೆ. ಕುರುಡುನಂಬಿಕೆಯು ಇದ್ದಕ್ಕಿದ್ದಂತೆ ತೊಡೆದುಹೋದರೆ ಇದನ್ನು ಸಾಧಿಸುವುದು ಪ್ರಾಯಶಃ ಕಷ್ಟ; ಪೂರ್ವಭಾವಿ ತರಬೇತಿಯಂತೆ ಸ್ವಯಂಪ್ರೇರಿತ ಸಹಕಾರದಲ್ಲಿ ಸ್ವಲ್ಪಮಟ್ಟಿಗಿನ ಅಭ್ಯಾಸವು ಇದಕ್ಕೆ ಆವಶ್ಯಕ. ದೊಡ್ಡ ತೊಂದರೆಯೆಂದರೆ, ಸಾಮಾಜಿಕ ಸುವ್ಯವಸ್ಥೆಗೆ ಕಾನೂನಿನ ಬಗೆಗಿನ ಗೌರವವು ಅತ್ಯವಶ್ಯಕವಾಗಿರುವುದು, ಆದರೆ ಜನಮನ್ನಣೆಯನ್ನು ಕಳೆದುಕೊಂಡಿರುವ ಸಾಂಪ್ರದಾಯಿಕ ಆಡಳಿತದಲ್ಲಿ ಇದು ಅಸಾಧ್ಯ, ಕ್ರಾಂತಿಯಲ್ಲಿ ಇದಕ್ಕೆ ಮಾನ್ಯತೆಯೇ ಇರುವುದಿಲ್ಲ. ಸಮಸ್ಯೆಯು ಕಷ್ಟಕರವಾದರೂ, ಬುದ್ಧಿವಂತಿಕೆಯ ಮುಕ್ತ ಬಳಕೆಗೆ

ಅನುಗುಣವಾಗಿರುವ ಸುವ್ಯವಸ್ಥಿತ ಸಮುದಾಯಗಳು ಅಸ್ತಿತ್ವಕ್ಕೆ ಬರಬೇಕಾದರೆ ಅದನ್ನು ಬಗೆಹರಿಸಲೇಬೇಕು.

ಈ ಸಮಸ್ಯೆಯ ಸ್ವರೂಪವನ್ನು ಕೆಲವು ಸಲ ತಪ್ಪು ತಿಳಿಯಲಾಗಿದೆ. ಬಂಡಾಯಕ್ಕೆ ಆವಶ್ಯಕವಾದಷ್ಟು ಪ್ರಚೋದನಕಾರಿಯಲ್ಲವೆಂದು ಸಿದ್ಧಾಂತಪ್ರತಿಪಾದಕನಿಗೆ ಅನ್ನಿಸುವಂತಹ ಒಂದು ಬಗೆಯ ಸರ್ಕಾರವನ್ನು ಕುರಿತು ಆಲೋಚಿಸುವುದಷ್ಟೇ ಸಾಲದು; ವಸ್ತುತಃ ಅಸ್ತಿತ್ವಕ್ಕೆ ತರಬಹುದಾದ ಸರ್ಕಾರದ ಬಗೆಯನ್ನು ಕಂಡುಕೊಳ್ಳುವುದೂ ಆವಶ್ಯಕ, ಅಲ್ಲದೆ ಅಸ್ತಿತ್ವಕ್ಕೆ ಬಂದರೆ ಕ್ರಾಂತಿಯಾಗುವುದನ್ನು ತಪ್ಪಿಸುವ ಅಥವಾ ತಡೆಗಟ್ಟಬಲ್ಲ ಜನನಿಷ್ಠೆಯನ್ನು ಅದು ಹೊಂದಿರುವುದೂ ಅಷ್ಟೇ ಆವಶ್ಯಕ. ಇದು ಕ್ರಿಯಾಶೀಲ ಮುತ್ಸದ್ದಿತನದ ಸಮಸ್ಯೆ, ಸಂಬಂಧಪಟ್ಟ ಜನಸಮುದಾಯದ ಎಲ್ಲ ನಂಬಿಕೆಗಳು ಹಾಗೂ ಪೂರ್ವಾಗ್ರಹಗಳನ್ನು ಅವನು ಪರಿಗಣಿಸಬೇಕಾಗುತ್ತದೆ. ಸರ್ಕಾರದ ಯಂತ್ರವನ್ನು ಯಾವುದೇ ಗುಂಪು ಒಮ್ಮೆ ವಶಪಡಿಸಿಕೊಂಡರೂ, ಪ್ರಚಾರದ ಮೂಲಕ ಜನರ ಸಹಮತವನ್ನು ಗಳಿಸುವುದು ಅದಕ್ಕೆ ಸಾಧ್ಯ ಎಂದು ಹೇಳುವ ಕೆಲವರಿದ್ದಾರೆ. ಆದರೆ ಈ ಮಾತಿಗೆ ಅನೇಕ ಸ್ಪಷ್ಟ ಮಿತಿಗಳಿವೆ. ಈಚಿನ ದಿನಗಳಲ್ಲಿ ರಾಷ್ಟ್ರೀಯ ಭಾವನೆಯನ್ನು ಹೊರತುಪಡಿಸಿದ ಸರ್ಕಾರಿ ಪ್ರಚಾರವು ಶಕ್ತಿಯುತವಲ್ಲವೆಂದು ಸಾಬೀತಾಗಿದೆ, ಇದಕ್ಕೆ ಭಾರತ ಹಾಗೂ (೧೯೨೧ ರ ಹಿಂದಿನ) ಐರ್ಲಂಡ್ ನಿದರ್ಶನಗಳು. ಪ್ರಬಲ ಧಾರ್ಮಿಕ ಭಾವನೆಗಳ ವಿರುದ್ಧ ಅದು ನಿಲ್ಲಲಾರದು. ಬಹುಸಂಖ್ಯಾತರ ಸ್ವಹಿತಾಸಕ್ತಿಗಳ ವಿರುದ್ಧವೂ ಅದು ಎಷ್ಟರ ಮಟ್ಟಿಗೆ ಮತ್ತು ಎಷ್ಟು ಕಾಲ ನಿಲ್ಲಬಲ್ಲುದು ಎಂಬುದು ಇನ್ನೂ ಅನುಮಾನಾಸ್ಪದ ಪ್ರಶ್ನೆಯಾಗಿಯೇ ಇದೆ. ಆದರೆ ಸರ್ಕಾರದ ಪ್ರಚಾರವು ಕಾಲಕ್ರಮೇಣ ಹೆಚ್ಚು ಪರಿಣಾಮಕಾರಿಯಾಗುತ್ತ ಹೋಗುತ್ತದೆಂಬುದನ್ನು ಒಪ್ಪಬೇಕು; ಹೀಗಾಗಿ ಜನರ ಸಹಮತವನ್ನು ಪಡೆಯವುದು ಸರ್ಕಾರಗಳಿಗೆ ಹೆಚ್ಚು ಸುಲಭವಾಗುತ್ತಿದೆ. ನಾವೀಗ ಎತ್ತಿರುವ ಪ್ರಶ್ನೆಯನ್ನು ಮುಂದೆ ಹೆಚ್ಚು ಆಳವಾಗಿ ಪರಿಶೀಲಿಸಲಿದ್ದೇವೆ; ಈಗಿನ ಮಟ್ಟಿಗೆ, ಅವುಗಳನ್ನು ನಾವು ನೆನಪಿನಲ್ಲಿರಿಸಿಕೊಂಡಿರಬೇಕು, ಅಷ್ಟೆ.

ನಾನು ಇದುವರೆಗ ಪ್ರಸ್ತಾಪಿಸಿದ್ದು ರಾಜಕೀಯ ಅಧಿಕಾರವನ್ನು ಕುರಿತು ಮಾತ್ರ, ಆದರೆ ಆರ್ಥಿಕ ವಲಯದಲ್ಲಿನ ನಗ್ನ ಅಧಿಕಾರವೂ ಕನಿಷ್ಠ ಪಕ್ಷ ಅಷ್ಟೇ ಮುಖ್ಯವಾದುದು. ಭವಿಷ್ಯದ ಸಮಾಜವಾದೀ ಸಮುದಾಯವನ್ನು ಹೊರತುಪಡಿಸಿ, ಮಿಕ್ಕ ಎಲ್ಲ ಆರ್ಥಿಕ ಸಂಬಂಧಗಳನ್ನೂ ನಗ್ನ ಅಧಿಕಾರವೇ ನಿಯಂತ್ರಿಸುತ್ತದೆಂದು ಮಾರ್ಕ್ಸ್ ಹೇಳಿದ. ಇದಕ್ಕೆ ವ್ಯತಿರಿಕ್ತವಾಗಿ, ಬೆಂಥಮಿಸಮ್‌ನ ಇತಿಹಾಸಕಾರನಾದ ಎಲೀ ಹ್ಯಾಲೆವಿ

ಪ್ರತಿಪಾದಿಸಿದ್ದೆಂದರೆ, ವ್ಯಕ್ತಿಯೊಬ್ಬನು ತನ್ನ ಕೆಲಸಕ್ಕೆ ಪಡೆಯುವ ಕೂಲಿಯು ಅವನೇ ಅದು ಎಷ್ಟು ಬೆಲೆಬಾಳುತ್ತದೆಂದು ನಂಬುತ್ತಾನೋ ಅಷ್ಟನ್ನು ಮಾತ್ರ ಎಂದು. ಆದರೆ ಇದು ಲೇಖಕರ ವಿಷಯದಲ್ಲಿಯಂತೂ ನಿಜವಲ್ಲ ಎಂಬುದು ಸತ್ಯ; ನನ್ನ ವಿಷಯದಲ್ಲಿಯೇ, ಎಷ್ಟು ಹೆಚ್ಚು ಬೆಲೆಬಾಳುವುದೆಂದು ನಂಬಿದ ಪುಸ್ತಕಕ್ಕೆ ನನಗೆ ಸಿಕ್ಕಿರುವುದು ಅಷ್ಟೂ ಕಡಿಮೆ ಪ್ರತಿಫಲ. ತಾವು ಪಡೆಯುವುದು ತಮ್ಮ ಯೋಗ್ಯತೆಗೆ ತಕ್ಕುದನ್ನು ಎಂದು ನಿಜವಾಗಿ ನಂಬುವ ಯಶಸ್ವಿ ವ್ಯವಹಾರಸ್ಥರು, ಅವರು ಕಾಣಿಸುವುದಕ್ಕಿಂತ ಹೆಚ್ಚು ಮೂರ್ಖರಾಗಿರಬೇಕು. ಆದರೂ ಹ್ಯಾಲೆವಿಯ ಹೇಳಿಕೆಯಲ್ಲಿ ಸತ್ಯದ ಒಂದು ಅಣು ಸೇರಿದೆ. ಸ್ಥಿರವಾದ ಸಮಾಜದಲ್ಲಿ ತಮಗೆ ಪರಮ ಅನ್ಯಾಯವಾಗಿದೆಯೆಂದು ಕುದಿಯುವ ವರ್ಗವೊಂದೂ ಇರಲಾರದು; ಹೀಗಾಗಿ, ಎಲ್ಲಿ ಹೆಚ್ಚಿನ ಆರ್ಥಿಕ ಅತೃಪ್ತಿಯಿಲ್ಲವೋ ಅಲ್ಲೆಲ್ಲ ಜನರು ತಮಗೆ ತೀರ ಕಡಿಮೆ ಪ್ರತಿಫಲ ದೊರೆಯುತ್ತಿದೆಯೆಂದು ಭಾವಿಸಲಾರರು. ಅಭಿವೃದ್ಧಿ ಹೊಂದದ ದೇಶಗಳಲ್ಲಿ, ವ್ಯಕ್ತಿಯ ಜೀವನೋಪಾಯವು ಒಪ್ಪಂದಕ್ಕಿಂತ ಸ್ಥಾನಮಾನಗಳನ್ನು ಅವಲಂಬಿಸುವುದರಿಂದ, ತನಗೆ ದೊರೆಯುವ ರೂಢಿಯ ಪ್ರತಿಫಲವು ನ್ಯಾಯಯುತವಾದುದೆಂದೇ ಆ ವ್ಯಕ್ತಿ ಭಾವಿಸುತ್ತಾನೆ. ಇಷ್ಟಾದರೂ ಹ್ಯಾಲೆವಿಯ ಸಿದ್ಧಾಂತವು ಕಾರಣ–ಕಾರ್ಯಗಳ ಸೂತ್ರವನ್ನು ತಲೆಕೆಳಗು ಮಾಡುತ್ತದೆ: ನ್ಯಾಯಯುತವಾದುದೆಂಬ ಭಾವನೆಗೆ ರೂಢಿಯು ಕಾರಣವಾಗುವುದೇ ಹೊರತು ಅದಕ್ಕೆ ವ್ಯತಿರಿಕ್ತವಾದುದಲ್ಲ. ಈ ವಿಷಯದಲ್ಲಿ, ಆರ್ಥಿಕ ಅಧಿಕಾರವು ಸಾಂಪ್ರದಾಯಿಕವಾದುದು; ಹಳೆಯ ಪದ್ಧತಿಗಳು ಬುಡಮೇಲಾದಾಗ, ಅಥವಾ ಯಾವುದೋ ಕಾರಣದಿಂದ ಅವುಗಳ ವಿರುದ್ಧ ಟೀಕೆಗಳು ಬಂದಾಗ, ಅಧಿಕಾರವು ನಗ್ನವಾಗುತ್ತದೆ.

ಕೈಗಾರಿಕೀಕರಣದ ಶೈಶವದಲ್ಲಿ, ವೇತನವನ್ನು ನಿರ್ಧರಿಸಿಲು ಯಾವುದೇ ಪದ್ಧತಿಗಳಿರಲಿಲ್ಲ, ಅಲ್ಲದೆ ಕಾರ್ಮಿಕರು ಇನ್ನೂ ಸಂಘಟಿತರಾಗಿರಲಿಲ್ಲ. ಇದರ ಪರಿಣಾಮವಾಗಿ, ಯಜಮಾನ–ಕೆಲಸಗಾರರ ಸಂಬಂಧವು ಸರ್ಕಾರವು ಅವಕಾಶ ನೀಡಿದ ಮಿತಿಗಳಿಗೊಳಪಟ್ಟಂತೆ, ನಗ್ನ ಅಧಿಕಾರದ ಒಂದು ರೂಪವಾಗಿತ್ತು; ಮೊದಮೊದಲು ಈ ಮಿತಿಗಳು ತುಂಬ ವಿಸ್ತಾರವಾಗಿದ್ದವು. ಅಕುಶಲ ನೌಕರನ ವೇತನವು ಸದಾ ಬದುಕುಳಿಯುವ ಮಟ್ಟಕ್ಕಿಳಿಯುವುದೆಂದು ಕಟ್ಟಾ ಕಮ್ಯುನಿಸ್ಟರು ಕಲಿಸಿದ್ದರು, ಆದರೆ ಇದು ವೇತನದಾರರನ್ನು ರಾಜಕೀಯ ಅಧಿಕಾರದಿಂದಲೂ, ಎರಡರ ಮಿಶ್ರಣದಿಂದಾಗುವ ಸವಲತ್ತುಗಳಿಂದಲೂ ದೂರವಿರಿಸುವುದನ್ನು ಅವಲಂಬಿಸಿದೆ ಎಂಬುದನ್ನವರು ಅರಿತಿರಲಿಲ್ಲ. ಮಾರ್ಕ್ಸ್‌ಗೆ ಇದು ಅಧಿಕಾರದ ಪ್ರಶ್ನೆಯಾಗಿ ಕಂಡಿತು, ಆದರೆ ಆತ ಆರ್ಥಿಕ

ಅಧಿಕಾರದೊಂದಿಗೆ ಹೋಲಿಸಿದರೆ ರಾಜಕೀಯ ಅಧಿಕಾರದ ಮೌಲ್ಯವನ್ನು ಕಡಿಮೆಗೊಳಿಸಿದ. ವೇತನದಾರರ ಚೌಕಾಸಿ ಅಧಿಕಾರವನ್ನು ಅಪರಿಮಿತವಾಗಿ ಹೆಚ್ಚಿಸುವ ಕಾರ್ಮಿಕ ಸಂಘಗಳನ್ನು, ವೇತನದಾರರು ರಾಜಕೀಯ ಅಧಿಕಾರದಲ್ಲಿ ಪಾಲುದಾರರಾಗಿರದಿದ್ದರೆ, ದಮನಗೊಳಿಸಬಹುದು. ಕಾನೂನು ನಿರ್ಣಯಗಳ ಸಾಲು ಇಂಗ್ಲಂಡ್‌ನಲ್ಲಿ ಅವುಗಳನ್ನು ಕುಂಠಿತಗಳಿಸಬಹುದಾಗಿತ್ತು, ಆದರೆ ೧೮೬೮ ರನಂತರ ನಗರವಾಸಿ ಕಾರ್ಮಿಕರು ಮತದಾರರಾಗಿದ್ದರಿಂದ ಇದು ಸಾಧ್ಯವಾಗಲಿಲ್ಲ. ಕಾರ್ಮಿಕ ಸಂಘಗಳ ಇರುವಿಕೆಯ ಕಾರಣದಿಂದಾಗಿ ವೇತನನಿಗದಿಯು ನಗ್ನ ಅಧಿಕಾರದಿಂದಾಗಿ ನಡೆಯಲಾರದು, ಅದು ಆಗುವುದು ಸಾಮಾನುಗಳ ವ್ಯಾಪಾರದಲ್ಲಿನಂತೆ ಚೌಕಾಸಿಯ ಮೂಲಕ.

ಆರ್ಥಿಕ ವಲಯದಲ್ಲಿನ ನಗ್ನ ಅಧಿಕಾರದ ಪಾತ್ರವು ಮಾರ್ಕ್ಸ್ ಚಲಾವಣೆಗೆ ಬರುವುದಕ್ಕೆ ಮುಂಚೆ ಇತ್ತೆಂದು ಭಾವಿಸಲಾದುದಕ್ಕಿಂತ ತುಂಬ ಹೆಚ್ಚಾಗಿತ್ತು. ಕೆಲವು ಸಂದರ್ಭಗಳಲ್ಲಿ ಇದು ಸುಸ್ಪಷ್ಟ. ಹೆದ್ದಾರಿಹೋಕನನ್ನು ಸುಲಿಗೆ ಮಾಡುವ ಸುಲಿಗೆದಾರ, ಅಥವಾ ಸೋತ ದೇಶವನ್ನು ಗೆದ್ದ ದೇಶವು ಮಾಡುವ ಶೋಷಣೆ, ಇವುಗಳು ನಗ್ನ ಅಧಿಕಾರದ ಸ್ಪಷ್ಟ ನಿದರ್ಶನಗಳು. ದೀರ್ಘ ಕಾಲದ ಅಭ್ಯಾಸಕ್ಕೆ ಹೊಂದಿಕೊಳ್ಳಲಾಗದಿದ್ದರೆ, ಗುಲಾಮಪದ್ಧತಿಯೂ ಇಂತಹುದೇ. ಕೊಡುವವನ ಕೋಪವನ್ನು ಮೀರಿಯೂ ನಗ್ನ ಅಧಿಕಾರವು ಹಣ ವಸೂಲುಮಾಡಿಯೇ ಮಾಡುತ್ತದೆ. ಅಂತಹ ಕೋಪವು ಎರಡು ಸನ್ನಿವೇಶಗಳಲ್ಲಿ ವ್ಯಕ್ತವಾಗುತ್ತದೆ: ಹಣನೀಡಿಕೆಯು ಪದ್ಧತಿಯಾಗಿರದಿದ್ದರೆ, ಮತ್ತು ದೃಷ್ಟಿಕೋನ ಬದಲಾಗಿ ಪದ್ಧತಿಯನ್ನು ಅನ್ಯಾಯವೆಂದು ಭಾವಿಸಿದರೆ. ಮೊದಲು, ಗಂಡಸಿಗೆ ತನ್ನ ಹೆಂಡತಿಯ ಆಸ್ತಿಯ ಮೇಲೆ ಸಂಪೂರ್ಣ ಒಡೆತನವಿರುತ್ತಿತ್ತು, ಆದರೆ ಸ್ತ್ರೀವಾದಿ ಚಳವಳಿಯು ಈ ಪದ್ಧತಿಯ ವಿರುದ್ಧ ಪ್ರತಿಭಟಿಸಿತು, ಇದರಿಂದಾಗಿ ಕಾನೂನು ಬದಲಾಯಿತು. ಮೊದಲು, ಕಾರ್ಮಿಕರಿಗೆ ಸಂಭವಿಸಬಹುದಾದ ಆಕಸ್ಮಿಕಗಳಿಗೆ ಯಜಮಾನರು ಜವಾಬುದಾರರಾಗಿರುತ್ತಿರಲಿಲ್ಲ; ಇಲ್ಲಿಯೂ ಭಾವನೆಗಳು ಬದಲಾಗಿ ಕಾನೂನಿಗೆ ಮಾರ್ಪಾಟನ್ನು ತರಲಾಯಿತು. ಇಂಥ ಅಸಂಖ್ಯ ಉದಾಹರಣೆಗಳನ್ನು ನೀಡಬಹುದು.

ನೌಕರನೊಬ್ಬ ಸಮಾಜವಾದಿಯಾಗಿದ್ದರೆ, ತನ್ನ ಆದಾಯವು ಯಜಮಾನನದಕ್ಕಿಂತ ಕಡಿಮೆಯಾಗಿರುವುದು ಅನ್ಯಾಯವೆಂದು ಭಾವಿಸಬಹುದು. ಅಂತಹ ಸನ್ನಿವೇಶದಲ್ಲಿ ಅವನನ್ನು ಅನುಸರಿಸಿಕೊಂಡು ಹೋಗುವಂತೆ ಒತ್ತಾಯಿಸುವುದು ನಗ್ನ ಅಧಿಕಾರ. ಆರ್ಥಿಕ ಅಸಮಾನತೆಯ

ಹಳೆಯ ಪದ್ಧತಿಯು ಸಾಂಪ್ರದಾಯಿಕವಾದುದು, ಅದು ತನಗೆ ತಾನೇ ಕೋಪವನ್ನುಕ್ಕಿಸುವುದಿಲ್ಲ, ಸಂಪ್ರದಾಯದ ವಿರುದ್ಧದ ಬಂಡಾಯಗಾರರಲ್ಲಿ ಮಾತ್ರ ಹೀಗಾಗಬಹುದು. ಹೀಗಾಗಿ ಸಮಾಜವಾದಿ ಅಭಿಪ್ರಾಯವು ಆಳವಾದಷ್ಟೂ ಬಂಡವಾಳಶಾಹಿಯ ಅಧಿಕಾರವನ್ನು ಹೆಚ್ಚು ಹೆಚ್ಚು ನಗ್ನವಾಗಿ ಮಾಡುತ್ತದೆ; ಇದು ಧರ್ಮದ್ರೋಹ ಹಾಗೂ ಕ್ಯಾಥೋಲಿಕ್ ಚರ್ಚ್‌ಗಳ ಸಂಬಂಧಕ್ಕೆ ಸಂವಾದಿಯಾದ ಸನ್ನಿವೇಶ. ನಗ್ನ ಅಧಿಕಾರದಲ್ಲಿ ಕೆಲವು ಕೆಡುಕುಗಳು ಅಂತರ್ಗತವಾಗಿರುವುದನ್ನು ನಾವಾಗಲೇ ನೋಡಿದ್ದೇವೆ, ಇವು ಮನವೊಲಿಕೆಯಿಂದ ಗಳಿಸಿದ ಅಧಿಕಾರದಲ್ಲಿರುವುದಿಲ್ಲ. ಇದರ ಪರಿಣಾಮವೆಂದರೆ, ಸಮಾಜವಾದೀ ಅಭಿಪ್ರಾಯದ ಹೆಚ್ಚಿಕೆಯಿಂದ ಬಂಡವಾಳಶಾಹಿಗಳ ಅಧಿಕಾರವು ಹೆಚ್ಚು ಹಾನಿಕಾರಕವನ್ನಾಗಿಸುತ್ತದೆ, ಅದನ್ನು ಪ್ರಯೋಗಿಸುವಾಗಿನ ಕ್ರೌರ್ಯವು ಭಯದಿಂದಾಗಿ ಕಣ್ಮರೆಯಾಗಿರುತ್ತದೆ. ಎಲ್ಲ ವೇತನದಾರರೂ ಬದ್ಧ ಸಮಾಜವಾದಿಗಳು, ಮಿಕ್ಕವರೆಲ್ಲ ಬಂಡವಾಳಶಾಹಿಯ ಸಮರ್ಥಕರು ಎಂಬ ಭಾವನೆಯಿರುವ ಸಂಪೂರ್ಣ ಮಾರ್ಕ್ಸಿಸ್ಟ್ ಮಾದರಿಯಲ್ಲಿನ ಸಮಾಜವೊಂದರಲ್ಲಿ, ಗೆದ್ದ ಪಕ್ಷಕ್ಕೆ, ಅದು ಯಾವುದೇ ಆಗಿರಲಿ, ತನ್ನ ವಿರೋಧಿಗಳ ಮೇಲೆ ನಗ್ನ ಅಧಿಕಾರವನ್ನು ಚಲಾಯಿಸುವುದರ ಹೊರತು ಬೇರೆ ಮಾರ್ಗವೇ ಇರುವುದಿಲ್ಲ. ಇಂಥ ಸನ್ನಿವೇಶವು ಅತ್ಯಂತ ಗಂಭೀರವಾದದ್ದೆಂದು ಮಾರ್ಕ್ಸ್‌ನೇ ಊಹಿಸಿದ್ದ. ಅವನ ಅನುಯಾಯಿಗಳು ಮಾಡುತ್ತಿರುವ ಪ್ರಚಾರವು ಸಫಲವಾಗಿರುವೆಡೆಗಳಲ್ಲಿ ಆ ಊಹೆಯು ಸತ್ಯವಾಗುತ್ತಿದೆ.

ಮಾನವ ಇತಿಹಾಸದ ದೊಡ್ಡ ಕರಾಳ ಬಿಂದುಗಳೆಲ್ಲ ನಗ್ನ ಅಧಿಕಾರಕ್ಕೆ ಸಂಬಂಧಿಸಿದವು – ಯುದ್ಧಕ್ಕೆ ಸಂಬಂಧಿಸಿದವು ಮತ್ರವಲ್ಲ, ಇತರವೂ, ಅಷ್ಟು ಭಾರಿಯವಾಗಿ ಕಾಣದಿದ್ದರೂ ಭಯಂಕರವಾದವು. ಗುಲಾಮಪದ್ಧತಿ ಮತ್ತು ಗುಲಾಮವ್ಯಾಪಾರ, ಕಾಂಗೋದ ಶೋಷಣೆ, ಕೈಗಾರಿಕೀಕರಣದ ಪ್ರಾರಂಭಿಕ ಭೀಕರತೆ, ಮಕ್ಕಳ ಬಗೆಗಿನ ದೌರ್ಜನ್ಯ, ಕಾನೂನು ಹಿಂಸೆ, ಅಪರಾಧಸಂಹಿತೆ, ಬಂದೀಖಾನೆಗಳು, ಕಾರ್ಖಾನೆಗಳು, ಧಾರ್ಮಿಕ ದಂಡನೆ, ಯೆಹೂದಿಗಳ ಬಗೆಗಿನ ಹಿಂಸಾಕೃತ್ಯಗಳು, ದರ್ಪಿಷ್ಟಪ್ರಭುಗಳ ಕರುಣಾರಹಿತ ತಿಕ್ಕಲುತನ, ಜರ್ಮನಿ ಮತ್ತು ರಷ್ಯಗಳಲ್ಲಿ ರಾಜಕೀಯ ವಿರೋಧಿಗಳಿಗೆ ವಿಧಿಸುವ ನಂಬಲಾಗದ ಶಿಕ್ಷೆಯ ಸ್ವರೂಪ – ಈ ಎಲ್ಲ ಬಡಪಾಯಿ ವಿರೋಧಿಗಳ ಮೇಲೆ ನಗ್ನ ಅಧಿಕಾರದ ಬಳಕೆಯ ಉದಾಹರಣೆಗಳು.

ಸಂಪ್ರದಾಯದಲ್ಲಿ ಬೇರುಬಿಟ್ಟಿರುವ ನ್ಯಾಯಬಾಹಿರ ಅಧಿಕಾರದ ಅನೇಕ ರೂಪಗಳು ಒಂದು ಕಾಲದಲ್ಲಿ ನಗ್ನವಾಗಿದ್ದವೇ. ಕ್ರಿಶ್ಚಿಯನ್

ಹೆಂಡತಿಯರು ಶತಮಾನಗಳ ಕಾಲ ತಮ್ಮ ಗಂಡಂದಿರಿಗೆ ವಿಧೇಯವಾಗಿದ್ದುದಕ್ಕೆ ಕಾರಣ ಹಾಗಿರಬೇಕೆಂದು ಸಂತ ಪಾಲ್ ಬೋಧಿಸಿದ್ದುದು; ಆದರೆ ಜೇಸನ್ ಮತ್ತು ಮೀಡಿಯಗಳ ಕತೆಯು ಸಂತ ಪಾಲ್ ಹೇಳಿದುದನ್ನು ಹೆಂಗಸರು ವ್ಯಾಪಕವಾಗಿ ಒಪ್ಪಿಕೊಳ್ಳುವ ಮುಂಚೆ ಗಂಡಸರು ಅನುಭವಿಸಿದ್ದಿರಬಹುದಾದ ಕಷ್ಟಗಳ ಪ್ರತೀಕವಾಗಿದೆ.

ಅಧಿಕಾರ ಇರಲೇ ಬೇಕು, ಸರ್ಕಾರಗಳದ್ದಾಗಿರಬಹುದು, ಅಥವಾ ಅನಾಯಕತ್ವದ ದುಸ್ಸಾಹಸಗಳದಾಗಿರಬಹುದು. ಸರ್ಕಾರಗಳ ವಿರುದ್ಧ ಬಂಡಾಯಗಾರರು ಅಥವಾ ಸಾಧಾರಣ ಅಪರಾಧಿಗಳು ಇರುವ ತನಕ ನಗ್ನ ಅಧಿಕಾರವೂ ಇರಬೇಕು, ಆದರೆ ಜನಸಮುದಾಯದಲ್ಲಿನ ಜೀವನವು, ನಡನಡುವೆ ಮೊನಚು ದೌರ್ಜನ್ಯದ ಬಿಂದುಗಳಿಂದ ಕೂಡಿದ ತಣ್ಣಗಿನ ನರಳಿಕೆಗಿಂತ ಉತ್ತಮವಾಗಿರಬೇಕಾದರೆ, ನಗ್ನ ಅಧಿಕಾರಕ್ಕಿರುವ ಅವಕಾಶ ಆದಷ್ಟೂ ಕಡಿಮೆ ಪ್ರಮಾಣದ್ದಾಗಿರಬೇಕು. ಅಧಿಕಾರವನ್ನು ಚಲಾಯಿಸುವುದು ಬೇಕಾಬಿಟ್ಟಿ ಹಿಂಸೆಗಿಂತ ಸ್ವಲ್ಪಮಟ್ಟಿಗಾದರೂ ಉತ್ತಮವಾಗಬೇಕಾದರೆ ಸುತ್ತಲೂ ಕಾನೂನು ಮತ್ತು ಸಮಪ್ರದಾಯಗಳೆಂಬ ಬೇಲಿಯಿರಬೇಕು; ಹಾಗೂ ಅವುಗಳನ್ನು ಸೂಕ್ತ ವಿಚಾರಣೆಯನಂತರ ಪ್ರಯೋಗಿಸುವಂತಿರಬೇಕು ಮತ್ತು ಕ್ರಮಕ್ಕೆ ಒಳಗಾಗಬೇಕಾದವರ ಹಿತವನ್ನು ಯಾರ ಕೈಗೊಪ್ಪಿಸಲಾಗುವುದೋ ಅಂಥವರ ಬಗ್ಗೆ ನಿಕಟವಾದ ನಿಗಾ ಇರಿಸಬೇಕು.

ಇದು ಸುಲಭವೆಂದೇನೂ ನಾನು ಭಾವಿಸಿಲ್ಲ. ಇದಕ್ಕಾಗಿ ಯುದ್ಧವನ್ನು ನಿವಾರಿಸಬೇಕಾದುದಂತೂ ನಿಶ್ಚಿತ; ಏಕೆಂದರೆ ಎಲ್ಲ ಯುದ್ಧಗಳೂ ನಗ್ನ ಅಧಿಕಾರದ ಬಳಕೆಯೇ ಆಗಿರುತ್ತದೆ. ಇದಕ್ಕೆ ಆವಶ್ಯಕವಾದುದು ಬಂಡಾಯಕ್ಕೆ ಕಾರಣವಾಗುವ ಅಸಹನೀಯ ದಮನಕ್ಕೆ ಅವಕಾಶವಿರದ ಪರಿಸ್ಥಿತಿ. ಇದಕ್ಕೆ ಆವಶ್ಯಕವಾದುದು ಜಗತ್ತಿನಾದ್ಯಂತ, ವಿಶೇಷವಾಗಿ ಇಂಡಿಯ, ಚೈನಾ ಮತ್ತು ಜಪಾನ್‌ಗಳ ಜೀವನ ಮಟ್ಟವು ಅಮೆರಿಕದಲ್ಲಿ ಆರ್ಥಿಕ ಹಿಂಜರಿತಕ್ಕಿಂತ ಮುಂಚೆಯಿದ್ದ ಮಟ್ಟಕ್ಕೆ ಸಮಾನವಾಗುವಂತೆ ಆಗಬೇಕಾದ ಸುಧಾರಣೆ. ಇದಕ್ಕೆ ರೋಮನ್ ಟ್ರಿಬ್ಯೂನ್‌ಗಳಂತಹ ಸಂಸ್ಥೆಗಳ ಸ್ಥಾಪನೆಯ ಅಗತ್ಯವಿದೆ; ಇಡಿಯಾಗಿ ಎಲ್ಲ ಜನಗಳಿಗೂ ಅಲ್ಲ, ಅಲ್ಪಸಂಖ್ಯಾತರು ಹಾಗೂ ಅಪರಾಧಿಗಳಂತಹ ದಮನಕ್ಕೊಳಪಡಬಹುದಾದ ಜನವರ್ಗಗಳಿಗಾಗಿ. ಎಲ್ಲಕ್ಕಿಂತ ಮಿಗಿಲಾಗಿ, ವಸ್ತುಸ್ಥಿತಿಯನ್ನು ಖಚಿತಪಡಿಸಿಕೊಳ್ಳುವ ಅವಕಾಶಗಳನ್ನು ಹೊಂದಿ ಸದಾ ಜಾಗೃತವಾಗಿರುವ ಜನಾಭಿಪ್ರಾಯ.

ಕೆಲವು ವ್ಯಕ್ತಿಗಳಲ್ಲಿಯೋ ಅಥವಾ ವ್ಯಕ್ತಿಸಮುದಾಯದಲ್ಲಿಯೋ ನಂಬಿಕೆಯಿರಿಸುವುದು ನಿರುಪಯುಕ್ತ ಕೆಲಸ. ರಾಜರ್ಷಿ ಪರಿಕಲ್ಪನೆಯನ್ನು ಹಗಲುಗನಸೆಂದು ಬಹು ಹಿಂದೆಯೇ ತಳ್ಳಿಹಾಕಲಾಗಿದೆ, ಆದರೆ ಅಷ್ಟೇ ಭ್ರಮಾತ್ಮಕವಾದ ತತ್ವಜ್ಞಾನಿಗಳ ಪಕ್ಷವನ್ನು ಹಿರಿಯ ಅನ್ವೇಷಣೆಯೆಂದು ಹೊಗಳಲಾಗುತ್ತಿದೆ. ಸ್ವಲ್ಪಜನರಚಿತ ಹೊಣೆಗೇಡಿ ಸರ್ಕಾರದಿಂದಾಗಲೀ, ಇತರ ಯಾವುದೇ ಅಡ್ಡದಾರಿಯಿಂದಾಗಲೀ ನಿಜವಾದ ಪರಿಹಾರವನ್ನು ಕಾಣುವುದು ಸಾಧ್ಯವಿಲ್ಲ. ಇದರ ಬಗೆಗಿನ ವಿಸ್ತಾರವಾದ ಚರ್ಚೆಯನ್ನು ಮುಂದಿನ ಅಧ್ಯಾಯವೊಂದರಲ್ಲಿ ಮಾಡಲಾಗಿದೆ.

–೦–೦–೦–೦–

ಅಧ್ಯಾಯ ಏಳು

ಕ್ರಾಂತಿಕಾರಿ ಅಧಿಕಾರ

ಸಾಂಪ್ರದಾಯಿಕ ವ್ಯವಸ್ಥೆಯೊಂದು ಎರಡು ರೀತಿಗಳಲ್ಲಿ ಕವಲೊಡೆಯಬಹುದೆಂಬುದನ್ನು ನಾವು ನೋಡಿದ್ದೇವೆ. ಹಳೆಯ ಆಡಳಿತಕ್ಕೆ ಆಧಾರಭೂತವಾಗಿದ್ದ ಸಿದ್ಧಾಂತಗಳು ಮತ್ತು ಮಾನಸಿಕ ಅಭ್ಯಾಸಗಳು ಸಂಶಯಕ್ಕೆ ಆಸ್ಪದವೀಯಬಹುದು; ಅಂಥ ಸನ್ನಿವೇಶದಲ್ಲಿ ಸಾಮಾಜಿಕ ಸಂಸಕ್ತಿಯನ್ನು ನಗ್ನ ಅಧಿಕಾರದ ಬಳಕೆಯಿಂದ ಮಾತ್ರ ಕಾಪಾಡಬಹುದು. ಅಥವಾ ಹೊಸ ಮಾನಸಿಕ ಅಭ್ಯಾಸವನ್ನೊಳಗೊಂಡ ಒಂದು ಹೊಸ ಸಿದ್ಧಾಂತವು ಜನರ ಮನಸ್ಸಿನ ಮೇಲೆ ಹೆಚ್ಚು ಹಿಡಿತವನ್ನು ಸಾಧಿಸಿ ಕೊನೆಗೆ ಹೊಸ ನಂಬಿಕೆಗಳಿಗನುಗುಣವಾದ ಹೊಸ ಸರ್ಕಾರವು ಅಪ್ರಸ್ತುತವೆಂದು ಭಾವಿಸಲಾದ ಹಳೆಯದರ ಸ್ಥಾನದಲ್ಲಿ ಬರಬಹುದು. ಇಂಥ ಸಂದರ್ಭದಲ್ಲಿ ಹೊಸ ಕ್ರಾಂತಿಕಾರಿ ಅಧಿಕಾರಕ್ಕೆ ಸಾಂಪ್ರದಾಯಿಕ ಅಥವಾ ನಗ್ನ ಅಧಿಕಾರಗಳಿಗಿಂತ ಭಿನ್ನವಾದ ಲಕ್ಷಣಗಳಿರುತ್ತವೆ. ಕ್ರಾಂತಿಯು ಸಫಲಗೊಂಡರೆ ಅದು ಸ್ಥಾಪಿಸುವ ವ್ಯವಸ್ಥೆಯು ಬಹು ಬೇಗ ತಾನೇ ಸಾಂಪ್ರದಾಯಿಕವಾಗುತ್ತದೆಂಬುದು ನಿಜವೇ; ಹಾಗೆಯೇ, ಕ್ರಾಂತಿಕಾರಿ ಹೋರಾಟವು ತೀವ್ರವೂ ದೀರ್ಘಕಾಲಿಕವೂ ಆಗಿದ್ದರೆ ಅದು ನಗ್ನ ಅಧಿಕಾರಕ್ಕಾಗಿ ಮಾಡುವ ಹೋರಾಟದ ಮಟ್ಟಕ್ಕಿಳಿಯಬಹುದೆಂಬುದೂ ನಿಜವೇ. ಆದರೆ ಹೊಸ ಸಿದ್ಧಾಂತದ ಪ್ರತಿಪಾದಕರು ಮಾನಸಿಕವಾಗಿ ಮಹತ್ವಾಕಾಂಕ್ಷೆಯ ಸಾಹಸಿಗರಿಗಿಂತ ಭಿನ್ನರಾಗಿರುತ್ತಾರೆ, ಹಾಗೂ ಅವರ ಪ್ರಭಾವವು ಹೆಚ್ಚು ಮುಖ್ಯವೂ ಶಾಶ್ವತವೂ ಆಗಿರುತ್ತವೆ.

ನಾಲ್ಕು ನಿದರ್ಶನಗಳನ್ನು ಪರಿಶೀಲಿಸುವ ಮೂಲಕ ನಾನು ಕ್ರಾಂತಿಕಾರಿ ಅಧಿಕಾರವನ್ನು ವಿವರಿಸುತ್ತೇನೆ: (೧) ಆರಂಭಿಕ ಕ್ರಿಶ್ಚಿಯಾನಿಟಿ; (೨) ರಿಫ಼ರ್ಮೇಷನ್; (೩) ಫ಼್ರೆಂಚ್ ಕ್ರಾಂತಿ ಮತ್ತು ರಾಷ್ಟ್ರೀಯತೆ; ಮತ್ತು (೪) ಸಮಾಜವಾದ ಮತ್ತು ರಷ್ಯನ್ ಕ್ರಾಂತಿ.

೧. *ಆರಂಭಿಕ ಕ್ರಿಶ್ಚಿಯಾನಿಟಿ:* ನಾನು ಪರಿಗಣಿಸುತ್ತಿರುವುದು ಕ್ರಿಶ್ಚಿಯಾನಿಟಿಯು ಅಧಿಕಾರ ಮತ್ತು ಸಾಮಾಜಿಕ ಸಂಘಟನೆಯ, ಜೊತೆಗೆ ಆನುಷಂಗಿಕವಾದ ವೈಯಕ್ತಿಕ ಮತಧರ್ಮದ, ಮೇಲೆ ಬೀರಿದ ಪ್ರಭಾವಗಳನ್ನು ಮಾತ್ರ. ಕ್ರಿಶ್ಚಿಯಾನಿಟಿಯು ತನ್ನ ತೀರ ಆರಂಭಿಕ ದಿನಗಳಲ್ಲಿ

ಸಂಪೂರ್ಣವಾಗಿ ರಾಜಕೀಯದಿಂದ ಹೊರತಾಗಿತ್ತು. ನಮ್ಮ ಕಾಲದಲ್ಲಿನ ಹಳೆಯ ಸಂಪ್ರದಾಯದ ಅತ್ಯಂತ ಸಮರ್ಪಕ ಪ್ರತಿನಿಧಿಗಳೆಂದರೆ, ಕ್ರಿಸ್ಟಡೆಲ್ಫಿಯನ್ನರು; ಅವರು ಜಗತ್ತಿನ ಅಂತ್ಯವು ಸಮೀಪಿಸುತ್ತದೆ ಎಂದು ನಂಬುವವರು, ಮತ್ತು ಯಾವುದೇ ರೀತಿಯಲ್ಲಿ ಇಡಿಯ ಅಥವಾ ಭಾಗಶಃ ಲೌಕಿಕ ಆಗುಹೋಗುಗಳಲ್ಲಿ ಭಾಗವಹಿಸಲು ನಿರಾಕರಿಸುವವರು. ಆದರೆ ಇಂಥ ಮನೋಭಾವವು ಒಂದು ತೀರ ಸಣ್ಣ ಗುಂಪಿಗೆ ಮಾತ್ರ ಇರಲು ಸಾಧ್ಯ. ಕ್ರಿಶ್ಚಿಯನ್ನರ ಸಂಖ್ಯೆ ಹೆಚ್ಚಾದಂತೆಲ್ಲ, ಚರ್ಚ್ ಹೆಚ್ಚು ಹೆಚ್ಚು ಬಲಿಷ್ಠಗೊಂಡಂತೆಲ್ಲ, ಸರ್ಕಾರದ ಮೇಲೆ ಪ್ರಭಾವ ಬೀರುವ ಆಸೆಯು ಬೆಳೆಯುವುದು ಅನಿವಾರ್ಯ. ಡಯೋಕ್ಲೀಷಿಯನ್ ಪೀಡನೆಯು ಈ ಬಯಕೆಯನ್ನು ಮತ್ತಷ್ಟು ಬಲಗೊಳಿಸಿರಬಹುದು. ಕಾನ್‌ಸ್ಟಾಂಟೈನ್‌ನ ಮತಾಂತರದ ಉದ್ದೇಶಗಳು ಇನ್ನೂ ಅಸ್ಪಷ್ಟವಾಗಿಯೇ ಉಳಿದಿವೆ; ಆದರೆ ಅವು ಪ್ರಮುಖವಾಗಿ ರಾಜಕೀಯ ಸ್ವರೂಪದವು ಎಂಬುದಂತೂ ಸ್ಪಷ್ಟ; ಇದರಿಂದ ಚರ್ಚ್ ರಾಜಕೀಯವಾಗಿ ಪ್ರಭಾವಶಾಲಿಯಾಗಿದ್ದಿತು ಎಂಬುದು ವಿದಿತವಾಗುತ್ತದೆ. ಚರ್ಚ್‌ನ ಬೋಧನೆಗಳಿಗೂ ರೋಮ್ ಸರ್ಕಾರದ ಸಾಂಪ್ರದಾಯಿಕ ಸಿದ್ಧಾಂತಗಳಿಗೂ ಇರುವ ಮುಖ್ಯ ವ್ಯತ್ಯಾಸಗಳು ಎಷ್ಟು ಅಗಾಧವಾದುವೆಂದರೆ, ಕಾನ್‌ಸ್ಟಾಂಟೈನ್‌ನ ಕಾಲದಲ್ಲಿ ನಡೆದ ಕ್ರಾಂತಿಯು ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುದು ಎಂದು ಭಾವಿಸಬೇಕಾಗಿದೆ.

ಅಧಿಕಾರಕ್ಕೆ ಸಂಬಂಧಿಸಿದಂತೆ, ಅತ್ಯಂತ ಮುಖ್ಯವಾದ ಕ್ರಿಶ್ಚಿಯನ್ ಸಿದ್ಧಾಂತವೆಂದರೆ, "ನಾವು ದೇವರಿಗೆ ವಿಧೇಯವಾಗಿರಬೇಕೇ ಹೊರತು ಮಾನವನಿಗಲ್ಲ" ಎಂಬುದು. ಇದಕ್ಕೆ ಸಂವಾದಿಯಾದ ತತ್ವವು ಯೆಹೂದಿಗಳಲ್ಲಿ ಹೊರತು ಇತರತ್ರ ಅಸ್ತಿತ್ವದಲ್ಲಿರಲಿಲ್ಲ. ಧಾರ್ಮಿಕ ಕರ್ತವ್ಯಗಳ ಕಲ್ಪನೆಯಿತ್ತು, ನಿಜ, ಆದರೆ ಅವು ಸರ್ಕಾರದ ಬಗೆಗಿನ ಕರ್ತವ್ಯಗಳಿಗೆ ವಿರುದ್ಧವಾದವುಗಳಲ್ಲ, ಇದಕ್ಕೆ ಯೆಹೂದಿ ಮತ್ತು ಕ್ರಿಶ್ಚಿಯನ್ ಸಮುದಾಯಗಳು ಅಪವಾದಗಳು. ಪ್ಯಾಗನ್‌ರು, ರಾಜನ ದೈವಿಕಾಂಶದ ಕಲ್ಪನೆಗೆ ಯಾವುದೇ ಆಧ್ಯಾತ್ಮಿಕ ಸಮರ್ಥನೆಯಿಲ್ಲ ಎಂದು ಭಾವಿಸಿದ್ದರೂ, ಸಮ್ರಾಟ ಪಂಥಕ್ಕೆ ಹೊಂದಿಕೊಳ್ಳಲು ಅವರು ಬಯಸುತ್ತಿದ್ದರು. ಕ್ರಿಶ್ಚಿಯನ್ನರಿಗಾದರೋ, ಇದಕ್ಕೆ ವ್ಯತಿರಿಕ್ತವಾಗಿ, ಆಧ್ಯಾತ್ಮಿಕ ಸತ್ಯವು ತುರೀಯ ಕ್ಷಣಕ್ಕೆ ಸಂಬಂಧಿಸಿದ್ದಾಗಿತ್ತು. ನೈಜ ದೇವರಿಗಲ್ಲದೆ ಬೇರಾವುದಕ್ಕಾದರೂ ತಾವು ಸಲ್ಲಿಸುವ ಪೂಜೆಯು ನರಕವಾಸಕ್ಕೆ ನೂಕುತ್ತದೆ, ಇದಕ್ಕಿಂತ ಕೆಳಹಂತದಲ್ಲಿ ಹುತಾತ್ಮರಾಗುವುದು ಮೇಲು ಎಂಬ ನಂಬಿಕೆಯಿತ್ತು.

ನಾವು ವಿಧೇಯರಾಗಿರಬೇಕಾದದ್ದು ದೇವರಿಗೇ ಹೊರತು ಮಾನವನಿಗಲ್ಲ ಎಂಬ ಸಿದ್ಧಾಂತವನ್ನು ಕ್ರಿಶ್ಚಿಯನ್ನರು ಎರಡು ಭಿನ್ನ

ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ದೇವರ ಆಜ್ಞೆಗಳನ್ನು ವ್ಯಕ್ತಿಪ್ರಜ್ಞೆಗೆ ನೇರವಾಗಿಯಾಗಲೀ ಅಥವಾ ಚರ್ಚ್ ಮಾಧ್ಯಮದ ಮೂಲಕ ಪರೋಕ್ಷವಾಗಿಯಾಗಲೀ ತಲುಪಿಸಬಹುದು. ಎಂಟನೆಯ ಹೆನ್ರಿ ಮತ್ತು ಹೆಗೆಲ್‌ರ ಹೊರತು, ನಮ್ಮ ಕಾಲದವರೆಗೆ, ಆ ತತ್ವವನ್ನು ಸರ್ಕಾರದ ಮಾಧ್ಯಮದ ಮೂಲಕ ತಲುಪಿಸಬಹುದು ಎಂದು ಯಾವತ್ತೂ ಯಾರೂ ಹೇಳಿಲ್ಲ. ಈ ರೀತಿಯಲ್ಲಿ, ಖಾಸಗಿ ತೀರ್ಪು ಹೊಂದುವ ಹಕ್ಕಿನ ಪರವಾಗಿಯೋ ಅಥವಾ ಚರ್ಚ್‌ನ ಪರವಾಗಿಯೋ ನಿಂತ ಕ್ರಿಶ್ಚಿಯನ್ ಬೋಧನೆಗಳು ಸರ್ಕಾರವನ್ನು ದುರ್ಬಲಗೊಳಿಸಿತು. ಸೈದ್ಧಾಂತಿಕವಾಗಿ, ಮೊದಲನೆಯದು ಅನಾಯಕತ್ವವನ್ನು ಒಳಗೊಳ್ಳುತ್ತದೆ; ಎರಡನೆಯದು, ಚರ್ಚ್ ಮತ್ತು ಸರ್ಕಾರ ಎಂಬ ಎರಡು ಅಧಿಕಾರವಲಯಗಳನ್ನು ಒಳಗೊಳ್ಳುತ್ತದೆ; ಆದರೆ ಅವೆರಡರ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸುವ ಯಾವುದೇ ಸೂತ್ರ ಇರಲಿಲ್ಲ. ಸೀಸರ್‌ನ ವ್ಯಾಪ್ತಿಯ ಸಂಗತಿಗಳು ಯಾವುವು, ಚರ್ಚ್ ವ್ಯಾಪ್ತಿಯ ಸಂಗತಿಗಳು ಯಾವುವು? ಎಲ್ಲ ಸಂಗತಿಗಳು ದೇವರ ವ್ಯಾಪ್ತಿಯವು ಎಂದು ಹೇಳುವುದು ಕ್ರಿಶ್ಚಿಯನ್‌ಗೆ ಖಂಡಿತವಾಗಿ ಅತ್ಯಂತ ಸಹಜ.. ಆದ್ದರಿಂದ ಚರ್ಚ್‌ನ ಪ್ರತಿಪಾದನೆಯು ಸರ್ಕಾರದ ಕಣ್ಣನ್ನು ಕೆಂಪಾಗಿಸುವುದು ಸಹಜ. ಚರ್ಚ್ ಮತ್ತು ಸರ್ಕಾರದ ನಡುವಣ ಸಂಘರ್ಷವನ್ನು ಎಂದೂ ಸೈದ್ಧಾಂತಿಕ ನೆಲೆಯಲ್ಲಿ ತೀರ್ಮಾನಿಸಲಾಗಿಲ್ಲ, ಶಿಕ್ಷಣದಂತಹ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಈಗಲೂ ಅದು ಮುಂದುವರಿದಿದೆ.

ಕಾನ್‌ಸ್ಟಾಂಟೈನ್‌ನ ಮತಾಂತರವು ಚರ್ಚ್ ಮತ್ತು ಸರ್ಕಾರಗಳ ನಡುವೆ ಸಾಮರಸ್ಯವನ್ನು ತರಬಹುದು ಎಂದು ಭಾವಿಸಲು ಅವಕಾಶವಿತ್ತು. ಆದರೆ ವಾಸ್ತವದಲ್ಲಿ ಹಾಗಾಗಲಿಲ್ಲ. ಮೊದಮೊದಲ ಕ್ರಿಶ್ಚಿಯನ್ ಸಮ್ರಾಟರೆಲ್ಲ ಏರಿಯನ್ನರು, ಅಲ್ಲದೆ, ಗಾಥ್‌ರ ಮತ್ತು ವ್ಯಾಂಡಲ್‌ರ ದಾಳಿಯಿಂದಾಗಿ ಪಶ್ಚಿಮದಲ್ಲಿನ ಸಾಂಪ್ರದಾಯಿಕ ಏರಿಯನ್ ಸಮ್ರಾಟರ ಅವಧಿಯು ಬಹಳ ಹ್ರಸ್ವವಾದುದು. ಆನಂತರ, ಕ್ಯಾಥೋಲಿಕ್ ಮತಕ್ಕೆ ಪೌರ್ವಾತ್ಯ ಸಮ್ರಾಟರು ಹೊಂದಿದ್ದ ಬದ್ಧತೆಯು ಪ್ರಶ್ನಾತೀತವಾಯಿತೋ ಆಗ, ಈಜಿಪ್ಟ್ ಏಕಪ್ರಕೃತಿವಾದಿ(*ಮಾನೋಫಿಸೈಟ್*)ಯಾಗಿತ್ತು ಮತ್ತು ಪಶ್ಚಿಮ ಏಷ್ಯವು ದ್ವಿಪ್ರಕೃತಿವಾದಿ(*ನೆಸ್ಟೋರಿಯನ್*)ಯಾಗಿತ್ತು. ಈ ದೇಶಗಳಲ್ಲಿನ ಧರ್ಮದ್ರೋಹಿಗಳು, ಬೈಜಾಂಟಿಯನ್ ಸರ್ಕಾರಕ್ಕಿಂತ ಕಡಿಮೆ ಹಿಂಸಾತ್ಮಕವೆಂಬ ಕಾರಣದಿಂದ, ಪ್ರವಾದಿಯ ಅನುಯಾಯಿಗಳನ್ನು ಸ್ವಾಗತಿಸಿದರು. ಕ್ರಿಶ್ಚಿಯನ್ ಸರ್ಕಾರಕ್ಕೆ ಹೋಲಿಸಿದರೆ, ಈ ಎಲ್ಲ

ವಿಷಯಗಳಲ್ಲಿ ಚರ್ಚ್ ಗೆಲವು ಸಾಧಿಸಿತು; ಹೊಸ ಮತವಾದ ಇಸ್ಲಾಂ ಮಾತ್ರ ಚರ್ಚ್‌ಗಿಂತ ಹೆಚ್ಚು ಬಲಿಷ್ಠವಾಗಲು ಸರ್ಕಾರಕ್ಕೆ ಅಧಿಕಾರ ನೀಡಿತು.

ನಾಲ್ಕನೆಯ ಶತಮಾನದ ಕೊನೆಯಲ್ಲಿದ್ದ ಚರ್ಚ್ ಮತ್ತು ಏರಿಯನ್ ಸಾಮ್ರಾಜ್ಯಗಳ ನಡುವಣ ಸಂಘರ್ಷದ ಸ್ವರೂಪವು, ಸಾಮ್ರಾಜ್ಞಿ ಜಸ್ಟಿನ ಮತ್ತು ಮಿಲಾನ್‌ನ ಆರ್ಚ್‌ಬಿಷಪ್ ಸಂತ ಆಂಬ್ರೋಸ್‌ರ ನಡುವೆ ೩೮೫ ರಲ್ಲಿ ನಡೆದ ಹೋರಾಟದಲ್ಲಿ ಪ್ರತಿಮಿತವಾಗಿದೆ. ಅವಳ ಮಗ ವ್ಯಾಲೆಂಟಿನಿಯನ್ ಇನ್ನೂ ಅಪ್ರಾಪ್ತವಯಸ್ಕನಾಗಿದ್ದುದರಿಂದ ಅವಳು ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಳು; ಇಬ್ಬರೂ ಏರಿಯನ್ನರು. ಪವಿತ್ರ ವಾರದಲ್ಲಿ ಮಿಲಾನ್‌ನಲ್ಲಿದ್ದುರಿಂದ, ಸಾಮ್ರಾಜ್ಞಿಗೆ "ರೋಮನ್ ಚಕ್ರವರ್ತಿಯು ತನ್ನ ಮತಧರ್ಮವನ್ನು ಸಾರ್ವಜನಿಕವಾಗಿ ಆಚರಿಸಲು ಅಧಿಕಾರವನ್ನು ಚಲಾಯಿಸಬಹುದು ಎಂದು ಮನವರಿಕೆ ಮಾಡಿಕೊಡಲಾಯಿತು; ಮಿಲಾನ್ ನಗರದೊಳಗಾಗಲೀ ಹೊರವಲಯದಲ್ಲಾಗಲೀ ಅವನು ಒಂದು ಚರ್ಚ್ ಅನ್ನು ಮಾತ್ರ ಬಳಕೆಮಾಡುವುದರಿಂದ ಅದರಿಂದ ದೂರವಿರಬೇಕೆಂಬ ಸೌಮ್ಯವೂ ವಿವೇಕಯುತವೂ ಆದ ರಿಯಾಯಿತಿಯೊಂದನ್ನು ಆಕೆ ಆರ್ಚ್‌ಬಿಷಪ್‌ಗೆ ಸೂಚಿಸಿದಳು. ಆದರೆ ಆಂಬ್ರೋಸ್‌ನ ನಡವಳಿಕೆಯು ತೀರ ಭಿನ್ನವಾದ ತತ್ವಗಳಿಂದ ರೂಪಿತವಾಗಿತ್ತು. ಜಗತ್ತಿನ ಅರಮನೆಗಳೆಲ್ಲ ಸೀಸರ್‌ಗೆ ಸೇರಿರಬಹುದು; ಆದರೆ ಚರ್ಚ್‌ಗಳು ದೇವರ ಮನೆಗಳು; ಹೀಗಾಗಿ ತನ್ನ ಆಡಳಿತಪ್ರಾಂತ(ಡಯೋಸಿಸ್)ದ ವ್ಯಾಪ್ತಿಯಲ್ಲಿ, ಆದ್ಯಪ್ರವರ್ತಕರ ನ್ಯಾಯಯುತ ಉತ್ತರಾಧಿಕಾರಿಯಾಗಿ ತಾನು ಮಾತ್ರವೇ ದೇವರ ಏಕೈಕ ನಿರ್ವಾಹಕ ಎಂದು ಹೇಳಿದ. ಕ್ರಿಶ್ಚಿಯನ್ ಧರ್ಮದ ಲೌಕಿಕ ಹಾಗೂ ಆತ್ಮಿಕವಾದ ಸವಲತ್ತುಗಳು ನಿಜವಾದ ಶ್ರದ್ಧಾವಂತನಿಗೆ ಮಾತ್ರ ಸೀಮಿತವಾದವು; ಹಾಗೂ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ತನ್ನ ಅಭಿಪ್ರಾಯಗಳು ಸತ್ಯ ಮತ್ತು ಸಾಂಪ್ರದಾಯಿಕತೆಗಳ ಮಾನದಂಡಗಳೆಂದು ಆಂಬ್ರೋಸ್‌ಗೆ ಮನವರಿಕೆಯಾಗಿತ್ತು. ಸೈತಾನನ ಸಾಧನಗಳೊಂದಿಗೆ ಯಾವುದೇ ಮಾತುಕತೆ ಅಥವಾ ಒಪ್ಪಂದವನ್ನು ಮಾಡಿಕೊಳ್ಳಲು ನಿರಾಕರಿಸಿದ ಆರ್ಚ್‌ಬಿಷಪ್, ಅಪವಿತ್ರ ಅಪಚಾರಕ್ಕೆ ಮಣಿಯುವ ಬದಲು ಸತ್ತು ಹುತಾತ್ಮನಾಗುವ ತನ್ನ ನಿರ್ಧಾರವನ್ನು ಸೌಮ್ಯವಾದರೂ ಖಂಡಿತವಾಗಿ ಸಾರಿದ."[೧]

---

[೧] ಈ. ಗಿಬ್ಬನ್, ಅಧ್ಯಾಯ ೨೭

ಆದರೆ ಅವನು ಹುತಾತ್ಮನಾಗಬೇಕಾದ ಆವಶ್ಯಕತೆಯಿಲ್ಲವೆಂಬುದು ಬಹು ಬೇಗನೆ ಗೊತ್ತಾಯಿತು. ಪರಿಷತ್ತಿನ ಮುಂದೆ ಬರಲು ಅವನಿಗೆ ಕರೆಕಳಿಸಿದಾಗ, ಕೋಪೋದ್ರಿಕ್ತ ಬೆಂಬಲಿಗರ ದೊಡ್ಡ ಸಮೂಹವೇ ಅವನನ್ನು ಹಿಂಬಾಲಿಸಿ, ಅರಮನೆಯ ಮೇಲೆ ದಾಳಿ ಮಾಡಿ ಸಾಮ್ರಾಜ್ಞಿಯನ್ನೂ ಅವಳ ಮಗನನ್ನೂ ಕೊಲ್ಲುವುದಾಗಿ ಪ್ರಾಯಶಃ ಬೆದರಿಕೆ ಹಾಕಿತು. ಅಂಥ ಪಾವನ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ತಮ್ಮ ಹಿಂಜರಿಕೆಯನ್ನೂ, ದಂಗೆಯಿಂದ ಪಾರಾಗಲು ಸಾಮ್ರಾಜ್ಞಿಯು ಬಾಗಬೇಕೆಂದೂ ಗಾಥಿಕ್ ಸಂಬಳ ಸಿಪಾಯಿಗಳು ಏರಿಯನ್ ಮೂಲಕ ವ್ಯಕ್ತಪಡಿಸಿದರು. "ವ್ಯಾಲೆಂಟಿನಿಯನ್‌ನ ತಾಯಿಯು ಆಂಬ್ರೋಸ್‌ನ ಗೆಲವನ್ನೆಂದೂ ಕ್ಷಮಿಸಲು ಸಿದ್ಧಳಿರಲಿಲ್ಲ; ತನ್ನ ಸೇವಕರೇ ದರ್ಪಿಷ್ಟ ಪುರೋಹಿತನ ಕೈಗೆ ತನ್ನನ್ನೊಪ್ಪಿಸಲು ಸಿದ್ಧರಾಗಿರುವರಲ್ಲ ಎಂದು ರಾಜಕುಮಾರನ ಬಾಯಿಂದ ಅಚ್ಚರಿಯ ಉದ್ಗಾರವು ಹೊರಹೊಮ್ಮಿತು." (ಅದೇ).

ಮಾರನೆಯ ವರ್ಷ (೩೮೬) ಸಾಮ್ರಾಜ್ಞಿಯು ಮತ್ತೆ ಸಂತನನ್ನು ಮಣಿಸಲು ಪ್ರಯತ್ನಿಸಿದಳು. ಅವನ ವಿರುದ್ಧ ಗಡೀಪಾರು ಆಜ್ಞೆಯನ್ನು ಘೋಷಿಸಲಾಯಿತು. ಆದರೆ ಅವನು ಕ್ಯಾಥೆಡ್ರಲ್‌ನಲ್ಲಿಯೇ ಆಶ್ರಯ ಪಡೆದ; ಶ್ರದ್ಧಾವಂತರೂ ಧಾರ್ಮಿಕ ಕೊಡುಗೆಗಳನ್ನು ಪಡೆದವರೂ ಆದ ಜನರು ಹಗಲೂ ರಾತ್ರಿ ಅವನ ಕಾವಲಿಗೆ ನಿಂತರು. ಅವರನ್ನು ಎಚ್ಚರವಿರಿಸಿಕೊಳ್ಳಲು ಅವನು "ಮಿಲಾನ್‌ನ ಚರ್ಚ್‌ನಲ್ಲಿ ಜೋರಾಗಿ ನಿಯತವಾದ ಸ್ತುತಿಗೀತೆಗಳನ್ನು ಹಾಡುವ ಉಪಯುಕ್ತ ಪದ್ಧತಿಯೊಂದನ್ನು ಜಾರಿಗೆ ತಂದ." ಅವನ ಅನುಯಾಯಿಗಳ ಶ್ರದ್ಧೆಯು ಪವಾಡಗಳಿಂದ ಮತ್ತಷ್ಟು ಆಳವಾಯಿತು; ಕೊನೆಗೆ, "ಇಟಲಿಯ ದುರ್ಬಲ ಸಮ್ರಾಟನು ಸ್ವರ್ಗದ ಆಪ್ತನ ಜೊತೆ ಹೋರಾಡಲು ತನಗೆ ಶಕ್ತಿಯಿಲ್ಲವೆಂಬುದನ್ನು ಕಂಡುಕೊಂಡ."

ಈ ಬಗೆಯ ಅನೇಕ ಸಂಘರ್ಷಗಳು ನಡೆದು ಚರ್ಚ್‌ನ ಸ್ವತಂತ್ರ ಅಧಿಕಾರವು ಸ್ಥಿರಗೊಂಡಿತು. ಅದರ ಗೆಲವಿಗೆ ಕಾರಣ ಸ್ವಲ್ಪಮಟ್ಟಿಗೆ ದಾನಕಾರ್ಯ ಮತ್ತು ಇನ್ನು ಸ್ವಲ್ಪಮಟ್ಟಿಗೆ ಅದರ ಸಂಘಟನೆಯಾದರೂ, ಮುಖ್ಯವಾದುದು ಅದಕ್ಕೆ ವ್ಯತಿರಿಕ್ತವಾದ ಬೇರಾವುದೇ ಭಾವನಾತ್ಮಕ ಸಿದ್ಧಾಂತ ಇರಲಿಲ್ಲ ಎಂಬುದು. ರೋಮ್ ಗೆಲವಿನ ಹಾದಿಯಲ್ಲಿರುವಾಗ, ರೋಮನ್ ಪ್ರಜೆಯು ಸರ್ಕಾರದ ವೈಭವದ ಬಗ್ಗೆ ತೀವ್ರವಾದ ಹೆಮ್ಮೆ ಅನುಭವಿಸಬಹುದಾಗಿತ್ತು; ಏಕೆಂದರೆ ಅದರಿಂದ ಅವನ ಸಾಮ್ರಾಜ್ಯಾಭಿಮಾನವು ತೃಪ್ತಿಗೊಳ್ಳಬಹುದಾಗಿತ್ತು. ಆದರೆ ನಾಲ್ಕನೆಯ ಶತಮಾನಕ್ಕೂ ಬಹಳ ಹಿಂದೆಯೇ ಈ ಭಾವನೆಯು ಸಂಪೂರ್ಣವಾಗಿ ಲುಪ್ತವಾಗಿತ್ತು. ಧರ್ಮದ ಬಗೆಗಿನ ಶ್ರದ್ಧೆಗೆ ಅನುಗುಣವಾದ ದೇಶದ ಬಗೆಗಿನ

ಸಂಭ್ರಮವು ಆಧುನಿಕ ಕಾಲದಲ್ಲಿ ರಾಷ್ಟ್ರೀಯತೆಯ ಉದಯದ ನಂತರವಷ್ಟೇ ಮತ್ತೆ ಮೂಡಿದ್ದು.

ಪ್ರತಿಯೊಂದು ಯಶಸ್ವೀ ಕ್ರಾಂತಿಯೂ ಶಕ್ತಿಸ್ಥಾನವನ್ನು ಅಲುಗಾಡಿಸಿ ಸಾಮಾಜಿಕ ಸಂಸಕ್ತಿಯನ್ನು ಹೆಚ್ಚು ಕಷ್ಟಕರವಾಗಿಸುತ್ತದೆ. ಚರ್ಚ್‌ಗೆ ಅಧಿಕಾರವನ್ನು ನೀಡಲು ಕಾರಣವಾದ ಕ್ರಾಂತಿಯಿಂದಾದುದೂ ಇದೇ. ಅದರಿಂದ ಸರ್ಕಾರವು ಶಕ್ತಿಗುಂದಿದುದಲ್ಲದೆ, ಮುಂದಿನ ಕ್ರಾಂತಿಗಳ ಸ್ವರೂಪವನ್ನೂ ಅದು ನಿರ್ಧರಿಸಿತು. ಅಲ್ಲದೆ, ಕ್ರಿಶ್ಚಿಯನ್ ಬೋಧನೆಯ ಮೊದಮೊದಲಿನ ಪ್ರಮುಖ ಅಂಶಗಳಲ್ಲೊಂದಾದ ವ್ಯಕ್ತಿಸ್ವಾತಂತ್ರ್ಯವು ಧಾರ್ಮಿಕ ಹಾಗೂ ಲೌಕಿಕ ಬಂಡಾಯದ ಅಪಾಯಕಾರಿ ಆಕರವಾಗಿ ಉಳಿದು ಬಿಟ್ಟಿತು. ಚರ್ಚ್‌ನ ತೀರ್ಮಾನವನ್ನು ಒಪ್ಪಿಕೊಳ್ಳಲಾಗದ ಸಂದರ್ಭಗಳಲ್ಲಿ ಶರಣಾಗದಿರಲು ವ್ಯಕ್ತಿಪ್ರಜ್ಞೆಗೆ ಗಾಸ್ಪೆಲ್‌ಗಳಲ್ಲಿ ಸಮರ್ಥನೆಯನ್ನು ಕಾಣಲು ಸಾಧ್ಯವಾಯಿತು. ಧರ್ಮದ್ರೋಹವು ಚರ್ಚ್‌ಗೆ ಮುಜುಗರವುಂಟು ಮಾಡುವಂತಿದ್ದರೂ, ಆರಂಭಕ ಕ್ರಿಶ್ಚಿಯಾನಿಟಿಯ ಆಶಯಕ್ಕೆ ವಿರುದ್ಧವಾದುದಾಗಿರಲಿಲ್ಲ.

ಕ್ರಾಂತಿಯ ಪರಿಣಾಮವಾಗಿ ಮೂಡಿದ ಪ್ರತಿ ಅಧಿಕಾರಸ್ಥಾನದಲ್ಲಿಯೂ ಈ ತೊಂದರೆಯು ಅಂತರ್ಗತವಾಗಿರುತ್ತದೆ. ಮೂಲದ ಕ್ರಾಂತಿಯು ಸಮರ್ಥನೀಯವಾಗಿತ್ತು ಎಂದು ಅದು ಮಂಡಿಸಲೂಬೇಕು, ಆದರೆ ಮುಂದಿನ ಎಲ್ಲ ಕ್ರಾಂತಿಗಳೂ ಕಿಡಿಗೇಡಿತನದ್ದಾಗಿರುತ್ತದೆ ಎಂದು ಅದು ತಾರ್ಕಿಕವಾಗಿ ವಾದಿಸಲೂ ಸಾಧ್ಯವಿಲ್ಲ.[೧] ಕ್ರಿಶ್ಚಿಯಾನಿಟಿಯ ಅನಾಯಕತ್ವದ ಬೆಂಕಿಯು ಮಧ್ಯ

---

[೧] (ಹೀಗೆ ಮಾಡಲು ಪ್ರಯತ್ನಿಸುವುದರಿಂದ ವಿಚಿತ್ರ ಪರಿಣಾಮಗಳಾಗುತ್ತವೆ. ಈಗಿನ ರಷ್ಯಾದಲ್ಲಿ ಜ಼ಾರ್ ಕಾಲದ ಕ್ರಾಂತಿಕಾರಿ ಆಂದೋಲನದ ಹೊಗಳಿಕೆಯಿಂದ ಯುವಜನತೆಯನ್ನು ಜಾಗರೂಕತೆಯಿಂದ ದೂರವಿರಿಸಲಾಗಿದೆ. ಸ್ಟಾಲಿನ್ ಅನ್ನು ಕೊಲೆಗೈಯಲು ಮಾಡಲಾಯಿತೆನ್ನಲಾದ ಒಂದು ಪಿತೂರಿಯ ಬಗ್ಗೆ ವಿವರಿಸಿದ ಬಳಿಕ *'ದ ಲೆಟರ್ ಆಫ್ ಎನ್ ಓಲ್ಡ್ ಬೋಲ್ಷೆವಿಕ್'* (ಜಾರ್ಜ್ ಆಲೆನ್ ಅಂಡ್ ಅನ್‌ವಿನ್) ಪುಸ್ತಕದಲ್ಲಿ ಹೀಗೆ ಹೇಳಿದೆ: *"ಆರೋಪಿಗಳಾದ ವಿದ್ಯಾರ್ಥಿಗಳಿಂದ ಎಳೆಗಳನ್ನು ರಾಜನೀತಿಶಾಸ್ತ್ರ ಮತ್ತು ಪಕ್ಷದ ಇತಿಹಾಸದ ಪ್ರಾಧ್ಯಾಪಕರುಗಳವರೆಗೆ ಎಳೆಯುಲಾಯಿತು. ರಷ್ಯಾದ ಕ್ರಾಂತಿಕಾರಿ ಆಂದೋಲನದ ಬಗೆಗಿನ ಯಾವುದೇ ಉಪನ್ಯಾಸದಲ್ಲಿ ಸರ್ಕಾರದ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ತುಂಬ ಸಹಾಯಕವಾಗುವ ಪುಟಗಳನ್ನು ಕಾಣುವುದು ಸುಲಭ. ಅಲ್ಲದೆ, ಪ್ರಸ್ತುತ ಪರಿಸ್ಥಿತಿಯ ಬಗೆಗಿನ ತಮ್ಮ ತೀರ್ಮಾನಗಳನ್ನು, ತಮಗೆ ಶಾಲೆಗಳಲ್ಲಿ ಅಧಿಕೃತವಾಗಿ ಸ್ಥಾಪಿತವಾದುದೆಂದು ಹೇಳಿಕೊಟ್ಟಿರುವ ಸಂಗತಿಗಳ ಮೂಲಕ ಸಮರ್ಥಿಸಿಕೊಳ್ಳಲು ಬಯಸುತ್ತಾರೆ. ಆಗ್ರಾನೋವ್ ಮಾಡಬಹುದಾಗಿದ್ದುದೆಂದರೆ, ತನ್ನ ದೃಷ್ಟಿಯಲ್ಲಿ ಯಾವ ಯಾವ ಪ್ರಾಧ್ಯಾಪಕರುಗಳು*

ಯುಗದಾದ್ಯಂತ, ಆಳದಲ್ಲಿ ಹುದುಗಿದ್ದರೂ, ಜೀವಂತವಾಗಿತ್ತು; ಮತ್ತು ರಿಫ಼ರ್ಮೇಷನ್ ಕಾಲದಲ್ಲಿ ಇದ್ದಕ್ಕಿದ್ದಂತೆ ದಳ್ಳುರಿಯಾಗಿ ಭುಗಿಲೆದ್ದಿತು.

೨. ರಿಫ಼ರ್ಮೇಷನ್: ಅಧಿಕಾರದ ದೃಷ್ಟಿಯಿಂದ ನೋಡಿದಾಗ, ರಿಫ಼ರ್ಮೇಷನ್‌ನ ಎರಡು ಮಗ್ಗುಲುಗಳು ನಮ್ಮ ಗಮನ ಸೆಳೆಯುತ್ತವೆ: ಅದರ ಧಾರ್ಮಿಕ ಅನಾಯಕತ್ವವು ಚರ್ಚ್ ಅನ್ನು ದುರ್ಬಲಗೊಳಿಸಿದ್ದು ಒಂದಾದರೆ, ಅದು ಚರ್ಚ್ ಅನ್ನು ದುರ್ಬಲಗೊಳಿಸುವುದರ ಮೂಲಕ ಸರ್ಕಾರವನ್ನು ಬಲಿಷ್ಠಗೊಳಿಸಿದ್ದು ಇನ್ನೊಂದು. ರಿಫ಼ರ್ಮೇಷನ್ ಮುಖ್ಯವಾದುದಕ್ಕೆ ಕಾರಣ ತಾನು ಯಾವುದೇ ಧರ್ಮನಿರಪೇಕ್ಷಕ ಸರ್ಕಾರಕ್ಕಿಂತ ಹೆಚ್ಚು ಬಲಿಷ್ಠ ಎಂದು ಪದೇ ಪದೇ ಸಾಬೀತುಗೊಳಿಸಿದ್ದ ದೊಡ್ಡ ಅಂತಾರಾಷ್ಟ್ರೀಯ ಸಂಘಟನೆಯೊಂದನ್ನು ಅದು ಭಾಗಶಃ ನಾಶಪಡಿಸಿದ್ದು. ಚರ್ಚ್ ಮತ್ತು ಅತಿರೇಕಿಗಳ ವಿರುದ್ಧ ತಾನು ಜಯ ಗಳಿಸಲು ಲೂಥರ್ ಧರ್ಮೇತರ ರಾಜರುಗಳನ್ನು ಅವಲಂಬಿಸಬೇಕಾದುದು ಆವಶ್ಯಕವಾಗಿತ್ತು.[೧] ಹಿಟ್ಲರ್‌ನ ಕಾಲದವರೆಗೂ ಲೂಥೆರಿಯನ್ ಚರ್ಚ್

ಪಿತೂರಿಯಲ್ಲಿ ಭಾಗಿಗಳು ಎಂದು ತೋರಿಸುವುದು. ಈ ಬಗೆಯಲ್ಲಿಯೇ 'ಹದಿನಾರು ಮಂದಿಯ ವಿಚಾರಣೆ'ಯ ಕಾಲದ ಆಪಾದಿತರನ್ನು ಪಟ್ಟಿಮಾಡಿದುದು."

೧ *'ರಿಲಿಜನ್ ಅಂಡ್ ದ ರೈಸ್ ಆಫ್ ಕ್ಯಾಪಿಟಲಿಸಮ್'* ನಲ್ಲಿ ಟಾನಿ ಹೇಳುವುದೇನೆಂದರೆ, " 'ರೈತರ ಯುದ್ಧ'ವು ತನ್ನ ಗಾಸ್ಪಲ್ ಮತ್ತು ಅದರ ದುರಂತದ ಬಗ್ಗೆ ಹೃದಯವಿದ್ರಾವಕ ರೀತಿಯಲ್ಲಿ ಮೊರೆಯಿಟ್ಟುದು ಲೂಥರ್ ಅನ್ನು ಭಯದಿಂದ ಹೀಗೆ ಅರಚುವಂತೆ ಮಾಡಿತು: 'ಪ್ರಾರ್ಥನೆ ಮಾಡುವವನಿಗಿಂತ ರಕ್ತಪಾತ ಮಾಡುವವನೇ ಸ್ವರ್ಗಕ್ಕೆ ಹೆಚ್ಚು ಅರ್ಹನಾಗುವಂತೆ ಮಾಡುವ ಇಂತಹ ಅದ್ಭುತ ಕಾಲವನ್ನು.... ರಹಸ್ಯದಿಂದಾಗಲೀ ರಾಜಾರೋಷದಿಂದಾಗಲೀ ಯಾರು ತಾನೇ ಘಾತಿಸಬಲ್ಲರು, ಸದೆಬಡಿಯಬಲ್ಲರು, ಕತ್ತುಹಿಚುಕಬಲ್ಲರು ಅಥವಾ ಇರಿಯಬಲ್ಲರು; ಅಲ್ಲದೆ ಲೂಥೆರಿಸಮ್ ಲೌಕಿಕ ಅಧಿಕಾರಸ್ಥಾನದ ಮೇಲೆ ಗುಲಾಮತನದಿಂದ ಅವಲಂಬಿಸುವ ಹಾಗೆ ಅದರ ಮೇಲೆ ಮುದ್ರೆಯೊತ್ತಿತು." ಕೆಲವು ಪುಟಗಳ ನಂತರ ಅವನು ಲೂಥರ್‌ನ ಮತ್ತೊಂದು ಮಾತನ್ನು ಉಲ್ಲೇಖಿಸುತ್ತಾನೆ: ಅವನು ಹೀಗೆನ್ನುತ್ತಾನೆ: "ಜಗತ್ತನ್ನು ರಕ್ತಪಾತವಿಲ್ಲದೆ ಆಳಬಹುದೆಂದು ಯಾರೂ ಆಲೋಚಿಸದಿರಲಿ, ನಾಗರಿಕ ಖಡ್ಗವು ರಕ್ತದಿಂದ ಕೆಂಪಾಗಿರಬೇಕು." ಇದಕ್ಕೆ ಟಾಲಮಿ ಮಾಡುವ ವ್ಯಾಖ್ಯಾನ ಹೀಗಿದೆ: 'ಹೀಗೆ ಕೊಡಲಿಯು ಗೂಟದ ಜಾಗವನ್ನು ಆಕ್ರಮಿಸಿತು, ಬಲಿಪೀಠದಿಂದ ಭ್ರಷ್ಟಗೊಂಡ ಅಧಿಕಾರವು ಸುರಕ್ಷಿತವಾದ ಒಂದು ಹೊಸ ಆಶ್ರಯವಾದ ಸಿಂಹಾಸನದ ಮೇಲೆ ಕೂತಿತು. ಕ್ರಿಶ್ಚಿಯನ್ ನೈತಿಕತೆಯನ್ನು ಕಾಪಾಡುವ ಜವಾಬ್ದಾರಿಯು ವಿಶ್ವಾಸಾರ್ಹವಲ್ಲದ ಧಾರ್ಮಿಕ ಅಧಿಕಾರಿಗಳ ಬದಲು ಸರ್ಕಾರದ ಹೆಗಲ ಮೇಲೆ ಬಿದ್ದಿತು. ಒಂಟಿಕೊಂಬು ಕುದುರೆ ಹಾಗೂ ಬೆಂಕಿಮೊಸಳೆಗಳ ಅಸ್ತಿತ್ವದ ಬಗ್ಗೆ ಸಂಶಯಪಟ್ಟ ಮೆಕಿಯವಿಲ್ಲಿ ಮತ್ತು ಎಂಟನೆಯ ಹೆನ್ರಿಗಳ ಯುಗವು ದೈವಭೀರು ರಾಜನೆಂಬ ಅಪರೂಪದ ರಾಕ್ಷಸನನ್ನು ಪೂಜಿಸುವುದರ ಮೂಲಕ ನಂಬಿಕೆಗೆ ಆಹಾರವೊದಗಿಸಿತು." ಇಂತಹ ನಂಬಿಕೆಯು ಕ್ರಾಂತಿಕಾರಿ ಯುಗಗಳ ಒಂದು ಲಕ್ಷಣ.

ಕ್ಯಾಥೋಲಿಕ್ಕೇತರ ಸರ್ಕಾರಗಳ ಬಗ್ಗೆ ನಿಷ್ಠಾರಾಹಿತ್ಯವನ್ನು ಪ್ರದರ್ಶಿಸಲಿಲ್ಲ. ರೈತರ ಬಂಡಾಯವು ರಾಜರಿಗೆ ಮಣಿಯಲು ಇನ್ನೊಂದು ಕಾರಣವನ್ನೊದಗಿಸಿತು. ಸ್ವತಂತ್ರ ಅಧಿಕಾರಸ್ಥಾನವಾದ ಚರ್ಚ್ ಲೂಥೆರಿಯನ್ ದೇಶಗಳಲ್ಲಿ ತನ್ನ ಅಸ್ತಿತ್ವನ್ನು ಕಳೆದುಕೊಂಡು, ಧರ್ಮೇತರ ಸರ್ಕಾರಕ್ಕೆ ವಿಧೇಯವಾಗಿರುವಂತೆ ಮಾಡುವ ಪ್ರಚಾರಸಾಧನದ ಒಂದು ಭಾಗವಾಯಿತು.

ಇಂಗ್ಲಂಡ್‌ನಲ್ಲಿ ಎಂಟನೆಯ ಹೆನ್ರಿ ಗಡುಸಾಗಿಯೂ ದಯಾರಹಿತವಾಗಿಯೂ ಈ ವಿಷಯನ್ನು ಕೈಗೆತ್ತಿಕೊಂಡ. ಇಂಗ್ಲಂಡ್‌ನ ಚರ್ಚ್‌ಗೆ ತಾನೇ ಮುಖ್ಯಸ್ಥನೆಂದು ಘೋಷಿಸಿಕೊಳ್ಳುವ ಮೂಲಕ ಮತಧರ್ಮವನ್ನವನು ಧರ್ಮೇತರವಾಗಿಯೂ ರಾಷ್ಟ್ರೀಯವಾಗಿಯೂ ಮಾಡಲು ಪ್ರಯತ್ನಿಸಿದ. ಇಂಗ್ಲಂಡ್‌ನ ಮತಧರ್ಮವು ವ್ಯಾಪಕ ಕ್ರಿಶ್ಚಿಯನ್ ಜಗತ್ತಿನ ಒಂದು ಭಾಗವಾಗುವುದರ ಬಗ್ಗೆ ಅವನಿಗೆ ಆಸಕ್ತಿಯಿರಲಿಲ್ಲ; ಇಂಗ್ಲಂಡ್‌ನ ಮತಧರ್ಮವು ದೇವರ ಶ್ರೇಷ್ಠತೆಯನ್ನು ಸಾರುವುದರ ಬದಲು ತನ್ನ ಶ್ರೇಷ್ಠತೆಯನ್ನು ಸಾರುವುದು ಅವನಿಗೆ ಬೇಕಾಗಿತ್ತು. ತನಗೆ ಅಧೀನವಾಗಿದ್ದ ಪಾರ್ಲಿಮೆಂಟ್‌ನ ಮೂಲಕ ತನಗೆ ಬೇಕಾದಂತೆ ಅವನು ಮತತತ್ವಗಳನ್ನು ಬದಲಿಸಬಹುದಾಗಿತ್ತು; ತಾನು ಸೂಚಿಸಿದ ಬದಲಾವಣೆಗಳನ್ನು ಅನುಮೋದಿಸದಿದ್ದವರನ್ನು ವಧೆಗೈಯಲು ಅವನಿಗೆ ಕಷ್ಟವಾಗಿರಲಿಲ್ಲ. ಸನ್ಯಾಸಗೃಹಗಳನ್ನು ರದ್ದುಮಾಡಿದ್ದರಿಂದ ಸಾಕಷ್ಟು ಆದಾಯ ಬಂತು, ಇದರಿಂದ ಕ್ಯಾಥೋಲಿಕ್ ಪ್ರತಿಭಟನೆಯನ್ನು ದೈವಾಶೀರ್ವಾದದ ಯಾತ್ರೆಯ ಮೂಲಕ ನಾಶಪಡಿಸಲು ಅವನಿಗೆ ಸುಲಭವಾಯಿತು. ಸಿಡಿಮದ್ದು ಮತ್ತು ಗುಲಾಬಿಗಳ ಕದನಗಳು ಹಳೆಯ ಊಳಿಗಮಾನ್ಯ ಶ್ರೀಮಂತವರ್ಗವನ್ನು ದುರ್ಬಲಗೊಳಿಸಿದ್ದವು, ಹೀಗಾಗಿ ತನಗೆ ಬೇಕೆನಿಸದಾಗ ಅದರ ಮುಂದಾಳುಗಳ ತಲೆಗಳನ್ನು ಕತ್ತರಿಸಿದ. ಚರ್ಚ್‌ನ ಪಾರಂಪರಿಕ ಅಧಿಕಾರವನ್ನು ಆಶ್ರಯಿಸಿದ್ದ ವೋಲ್ಸ್ ಇದಕ್ಕೆ ಬಲಿಯಾದ; ಕ್ರಾಮ್‌ವೆಲ್ ಮತ್ತು ಕ್ರ್ಯಾಮರ್‌ಗಳು ಹೆನ್ರಿಯ ಕೈಯಲ್ಲಿನ ಸಾಧನಗಳಾದರು. ಚರ್ಚ್‌ನ ಗ್ರಹಣದಿಂದ ಸರ್ಕಾರದ ಅಧಿಕಾರ ಎಂಥದಾಗಬಹುದೆಂಬುದನ್ನು ಜಗತ್ತಿಗೆ ತೋರಿಸುವುದರಲ್ಲಿ ಹೆನ್ರಿಯು ಮೊದಲಿಗನಾದ.

ಎಂಟನೆಯ ಹೆನ್ರಿಯ ಕೆಲಸ ಶಾಶ್ವತವಾಗದೆ ಹೋಗಿರಬಹುದು, ಆದರೆ ಅದರ ಕಾರಣದಿಂದಲೇ ಎಲಿಝಬೆತ್‌ಳ ಕಾಲದಲ್ಲಿ ಪ್ರಾಟೆಸ್ಟೆಂಟಿಸಮ್‌ನೊಡನೆ ಬೆರೆತ ರಾಷ್ಟ್ರೀಯತೆಯು ಒಮ್ಮೆಗೇ ಆವಶ್ಯಕವೂ ಲಾಭದಾಯಕವೂ ಆಯಿತು. ಸ್ವರಕ್ಷಣೆಗಾಗಿ ಕ್ಯಾಥೋಲಿಕ್ ಸ್ಪೈನ್ ಅನ್ನು ಸೋಲಿಸವುದು ಅನಿವಾರ್ಯವಾಯಿತು, ಇದು ಸ್ಪಾನಿಶ್ ಸಂಪತ್ತಿನ ಹಡಗುಗಳನ್ನು ವಶಪಡಿಸಿಕೊಳ್ಳುವ ಸಂತೋಷದಾಯಕ ಕೆಲಸವಾಗಿ ಪರಿಣಮಿಸಿತು. ಆ ಕಾಲದನಂತರ, ಆಂಗ್ಲಿಕನ್ ಚರ್ಚ್‌ಗಿದ್ದ ಏಕೈಕ ಅಪಾಯವು ಎಡದಿಂದಲೇ ಹೊರತು ಬಲದಿಂದ ಅಲ್ಲ. ಆದರೆ ಎಡದಿಂದ ಬಂದ ಅಪಾತವನ್ನು ಹಿಮ್ಮೆಟ್ಟಿಸಲಾಯಿತು, ಅದನ್ನು ಅನುಸರಿಸಿದ್ದು

ಸಜ್ಜನ ದೊರೆ ಚಾರ್ಲ್ಸ್‌ನ ಚಿನ್ನದ ದಿನಗಳು,
ನಿಷ್ಠೆಯು ಆಗ ಅಪಾಯ ತರುವಂತಿರಲಿಲ್ಲ.

ಪ್ರಾಟೆಸ್ಟಂಟ್ ದೇಶಗಳಲ್ಲಿ ಚರ್ಚ್ ಅನ್ನು ಸರ್ಕಾರ ಹೇಗೆ ಸೋಲಿಸಿತು ಎನ್ನುವುದನ್ನು 'ವಿಕಾರ್ ಆಫ್ ಬೇ' ಚಿತ್ರಿಸುತ್ತದೆ. ಮತೀಯ ಸಹಿಷ್ಣುತೆಯು ಎಲ್ಲಿಯವರೆಗೆ ಸಾಧ್ಯವಿಲ್ಲ ಎಂದು ಭಾವಿಸಲಾಯಿತೋ ಅಲ್ಲಿಯವರೆಗೆ ಪೋಪ್ ಮತ್ತು ಸಾಮಾನ್ಯ ಪರಿಷತ್ತುಗಳ ಅಧಿಕಾರಕ್ಕಿದ್ದ ಒಂದೇ ಮೌಲಿಕವಾದ ಪರ್ಯಾಯವೆಂದರೆ ಎರಾಸ್ಟಿಯನಿಸಮ್[೧] ಅನ್ನು ಆ ಸ್ಥಳದಲ್ಲಿ ತರುವುದು.

ಆದರೆ ವೈಯಕ್ತಿಕ ಧರ್ಮವು ಯಾರಲ್ಲಿ ಬಲವಾಗಿತ್ತೋ ಅವರಿಗೆ ಎರಾಸ್ಟಿಯನಿಸಮ್ ತೃಪ್ತಿ ತರುವಂಥದಾಗಿರಲಿಲ್ಲ. ಪರ್ಗೆಟರಿಯ ಅಸ್ತಿತ್ವದಂತಹ ವಿಷಯದಲ್ಲಿಯೂ ಪಾರ್ಲಿಮೆಂಟ್‌ನ ಅಧಿಕಾರಕ್ಕೆ ಮಣಿಯಲು ಹೇಳುವುದು ಒಂದು ಬಗೆಯ ವಿಕೃತಿಯಾಗಿತ್ತು. ಸರ್ಕಾರ ಮತ್ತು ಚರ್ಚ್‌ಗಳೆರಡನ್ನೂ ಮತಧಾರ್ಮಿಕ ಅಧಿಕಾರವುಳ್ಳವೆಂದು ಒಪ್ಪಲು ಸ್ವತಂತ್ರ ಮನೋಭಾವದವರು ನಿರಾಕರಿಸಿ, ಅದನ್ನು ವ್ಯಕ್ತಿಯ ಸ್ವಂತ ತೀರ್ಮಾನಕ್ಕೆ ಬಿಡಬೇಕೆಂದು ವಾದಿಸಿದರು, ಜೊತೆಗೆ ಮತಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಪಾದಿಸಿದರು. ಈ ಮನೋಭಾವವು ಸಹಜವಾಗಿ ಲೌಕಿಕ ದರ್ಪಿಷ್ಟಪ್ರಭುತ್ವವಿರೋಧಿ ಬಂಡಾಯದೊಡನೆ ಸೇರಿಕೊಂಡಿತು. ಪ್ರತಿಯೊಬ್ಬನಿಗೂ ಮತಧಾರ್ಮಿಕ ಅಭಿಪ್ರಾಯದ ವಿಷಯದಲ್ಲಿ ಸ್ವಾತಂತ್ರ್ಯವಿದ್ದರೆ ಅವನಿಗೆ ಪ್ರಾಯಶಃ ಇತರ ವಿಷಯಗಳ ಬಗ್ಗೆ ಹಕ್ಕುಗಳಿರುವುದಿಲ್ಲವೇ? ಪ್ರಜೆಗಳ ವೈಯಕ್ತಿಕ ವಿಷಯಗಳ ಬಗ್ಗೆ ತಲೆಹಾಕಲು ಸರ್ಕಾರಕ್ಕಿರುವ ವಿಧಿಬದ್ಧ ಅಧಿಕಾರಕ್ಕೆ ಮಿತಿಗಳಿಲ್ಲವೇ? ಹೀಗಾಗಿ

---

[೧] ಮತಧಾರ್ಮಿಕ ವಿಷಯಗಳಲ್ಲಿ ಚರ್ಚ್ ಸರ್ಕಾರದ ಅಧೀನದಲ್ಲಿರುವ ಪರಿಕಲ್ಪನೆ

ಕ್ರಾಮ್‌ವೆಲ್‌ನ ಸೋತ ಅನುಯಾಯಿಗಳು ಅಟ್ಲಾಂಟಿಕ್ ಉದ್ದಗಲಕ್ಕೆ 'ಮಾನವನ ಹಕ್ಕುಗಳು' ಬಗೆಗಿನ ಸಿದ್ಧಾಂತದ ಪರ ಪ್ರಚಾರ ಮಾಡಿದರು; ಇದನ್ನು ಮೊದಲು ಜೆಫರ್‌ಸನ್ ಅಮೆರಿಕದ ಸಂವಿಧಾನದಲ್ಲಿ ಅಳವಡಿಸಿದ್ದ, ಫ್ರೆಂಚ್ ಕ್ರಾಂತಿಯು ಇದನ್ನು ಯೂರೋಪ್‌ಗೆ ತಂದಿತು.

೩. ಫ್ರೆಂಚ್ ಕ್ರಾಂತಿ ಮತ್ತು ರಾಷ್ಟ್ರೀಯತೆ: ರಿಫಾರ್ಮೇಷನ್‌ನಿಂದ ೧೮೪೮ ರವರೆಗೂ ಪಶ್ಚಿಮ ಜಗತ್ತಿನಲ್ಲಿ ನಿರಂತರ ವಿಪ್ಲವಗಳು ನಡೆಯುತ್ತಿದ್ದವು; ಇದನ್ನು 'ಮಾನವನ ಹಕ್ಕುಗಳು' ಬಗೆಗಿನ ಕ್ರಾಂತಿ ಎಂದು ಕರೆಯಬಹುದು. ೧೮೪೮ ರಲ್ಲಿ ಇದು ರೈನ್ ನದಿಯ ಪೂರ್ವದಲ್ಲಿ ರಾಷ್ಟ್ರೀಯತೆಯಾಗಿ ಮಾರ್ಪಡಲು ತೊಡಗಿತ್ತು. ಫ್ರಾನ್ಸ್‌ನಲ್ಲಿ ೧೭೯೨ ರಿಂದಲೂ ಈ ಸಂಘಟನೆಯು ಅಸ್ತಿತ್ವದಲ್ಲಿತ್ತು; ಇಂಗ್ಲಂಡ್‌ನಲ್ಲಿ ಮೊದಲಿನಿಂದಲೂ ಇತ್ತು; ಅಮೆರಿಕದಲ್ಲಿ ೧೭೭೬ ನಿಂದ ಅಸ್ತಿತ್ವದಲ್ಲಿತ್ತು. ಕ್ರಮೇಣ ಆಂದೋಲನದಲ್ಲಿನ ರಾಷ್ಟ್ರೀಯತೆಯ ಮಗ್ಗುಲು 'ಮಾನವ ಹಕ್ಕುಗಳು' ಮಗ್ಗುಲನ್ನು ಹಿಂದೆ ಸರಿಸಿದೆ, ಆದರೆ ಇದೇ ಮೊದಲು ಪ್ರಮುಖವಾಗಿದ್ದುದು.

'ಮಾನವನ ಹಕ್ಕುಗಳು' ಅನ್ನು ಹದಿನೆಂಟನೆಯ ಶತಮಾನದ ಟೊಳ್ಳು ಘೋಷಣೆ ಎಂದು ನಿಂದನೆ ಮಾಡುವುದು ನಮ್ಮ ಕಾಲದಲ್ಲಿ ಒಂದು ಚಾಳಿಯಾಗಿದೆ. ತಾತ್ವಿಕವಾಗಿ ಪರಿಶೀಲಿಸಿದರೆ ಈ ಸಿದ್ಧಾಂತವನ್ನು ಸಮರ್ಥಿಸುವುದು ಕಷ್ಟ ಎಂಬುದು ನಿಜ; ಆದರೆ ಐತಿಹಾಸಿಕವಾಗಿಯೂ ವ್ಯಾವಹಾರಿಕವಾಗಿಯೂ ಅದು ಉಪಯುಕ್ತವಾಗಿತ್ತು, ಇದರ ಫಲವಾಗಿ ಇಂದು ರೂಢಿಯಲ್ಲಿರುವ ಅನೇಕ ಬಗೆಯ ಸ್ವಾತಂತ್ರ್ಯಗಳು ನಮಗೆ ಲಭಿಸಿವೆ. 'ಹಕ್ಕುಗಳು' ಎಂಬ ಅಮೂರ್ತ ಪರಿಕಲ್ಪನೆಯನ್ನು ಒಪ್ಪದ ಬೆಂಥಮೈಟ್ ಒಬ್ಬನು ಇದನ್ನೇ, ವ್ಯಾವಹಾರಿಕವಾಗಿ ಈ ಮಾತುಗಳಲ್ಲಿ ಮಂಡಿಸಬಹುದು: "ಯಾವುದೇ ಬಾಹ್ಯ ಅಧಿಕಾರವು ಮೂಗು ತೂರಿಸದಂತೆ ವ್ಯಕ್ತಿಯು ತನಗೆ ಬೇಕಾದಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿರುವ ಪರಿಧಿಯನ್ನು ನಿಖರವಾಗಿ ನಿಗದಿಪಡಿಸಿದರೆ, ಸಾಮಾನ್ಯ ಸೌಖ್ಯವು ಹೆಚ್ಚುತ್ತದೆ." 'ಮಾನವನ ಹಕ್ಕುಗಳು' ಸಿದ್ಧಾಂತದ ಪ್ರತಿಪಾದಕರಿಗೆ ನ್ಯಾಯವಿತರಣೆಯೂ ಆಸಕ್ತಿಯ ವಿಷಯವಾಗಿತ್ತು; ಕಾನೂನು ಪ್ರಕ್ರಿಯೆಯಿಲ್ಲದೆ ಯಾವುದೇ ವ್ಯಕ್ತಿಯ ಜೀವ ಅಥವಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಅವಕಾಶವಿರಕೂಡದು. ಈ ಅಭಿಪ್ರಾಯದಲ್ಲಿ, ಸರಿಯೋ ತಪ್ಪೋ, ಯಾವುದೇ ತಾತ್ವಿಕ ಅಸಾಂಗತ್ಯವಿಲ್ಲ.

ಈ ಸಿದ್ಧಾಂತದ ಮೂಲದಲ್ಲಿ ಮತ್ತು ಅದರ ಮನೋಭಾವದಲ್ಲಿ ಸರ್ಕಾರವಿರೋಧವಿರುವುದು ಸುಸ್ಪಷ್ಟ. ನಿರಂಕುಶ ಸರ್ಕಾರದ ಒಬ್ಬ ಪ್ರಜೆಯು ತನಗೆ ಇಷ್ಟ ಬಂದ ಮತಧರ್ಮವನ್ನು ಆರಿಸಿಕೊಳ್ಳಲು, ಆಡಳಿತಾತ್ಮಕ ಮಧ್ಯಪ್ರವೇಶವಿಲ್ಲದೆ ಕಾನೂನುಬದ್ಧವಾದ ಮಾರ್ಗದಲ್ಲಿ ಯಾವುದೇ ವ್ಯವಹಾರಮಾಡಲು, ಪ್ರೀತಿಸಿದವರನ್ನು ಮದುವೆಯಾಗಲು, ಅನ್ಯಪ್ರಾಬಲ್ಯದ ವಿರುದ್ಧ ಪ್ರತಿಭಟಿಸಲು ತನಗೆ ಹಕ್ಕಿರಬೇಕೆಂದು ವಾದಿಸುತ್ತಾನೆ. ಸರ್ಕಾರದ ನಿರ್ಧಾರಗಳು ಅನಿವಾರ್ಯವಾದ ಸಂದರ್ಭಗಳಲ್ಲಿ, ರಾಜ ಅಥವಾ ಪುರೋಹಿತನಂತಹ ಯಾವುದೋ ಬೇಕಾಬಿಟ್ಟಿ ಅಥವಾ ಸಾಂಪ್ರದಾಯಿಕ ಅಧಿಕಾರದ ನಿರ್ಧಾರದ ಬದಲು ಬಹುಸಂಖ್ಯಾತರ ಅಥವಾ ಅವರ ಪ್ರತಿನಿಧಿಗಳ ಅಭಿಪ್ರಾಯವು ನಿರ್ಧಾರಕವಾಗಿರಬೇಕೆಂದು 'ಮಾನವನ ಹಕ್ಕುಗಳು' ಸಿದ್ಧಾಂತದ ಪ್ರತಿಪಾದಕರು ವಾದಿಸುತ್ತಾರೆ. ಈ ಅಭಿಪ್ರಾಯವು ಕ್ರಮೇಣ ನಾಗರಿಕ ಜಗತ್ತಿನಾದ್ಯಂತ ವ್ಯಾಪಿಸಿ, ವಿಚಿತ್ರ ಉದಾರವಾದಿ ಮನೋಭಾವವನ್ನು ಸೃಷ್ಟಿಸಿತು.; ಅಧಿಕಾರದಲ್ಲಿದ್ದಾಗಲೂ ಇದು ಸರ್ಕಾರದ ಕಾರ್ಯಶೀಲತೆಯ ಬಗ್ಗೆ ಕೊಂಚಮಟ್ಟಿಗಿನ ಸಂಶಯವನ್ನು ಉಳಿಸಿಕೊಂಡಿರುತ್ತದೆ.

ವ್ಯಕ್ತಿಸ್ವಾತಂತ್ರ್ಯವಾದವು ಪ್ರಾಟೆಸ್ಟೆಂಟನಿಸಂನೊಂದಿಗೆ ತಾರ್ಕಿಕವೂ ಐತಿಹಾಸಿಕವೂ ಆದ ಸ್ಪಷ್ಟ ಸಂಬಂಧವನ್ನು ಹೊಂದಿದೆ; ಪ್ರಾಟೆಸ್ಟೆಂಟನಿಸಂ ಮತಧಾರ್ಮಿಕ ವಲಯದಲ್ಲಿ ತನ್ನ ಸಿದ್ಧಾಂತಗಳನ್ನು ಪ್ರತಿಪಾದಿಸಿತು, ಆದರೆ ತಾನೇ ಅಧಿಕಾರವನ್ನು ಪಡೆದಾಗ ಅವುಗಳನ್ನು ಗಾಳಿಗೆ ತೂರಿದ್ದೂ ನಿಜ ಎನ್ನಿ. ಪ್ರಾಟೆಸ್ಟೆಂಟನಿಸಂ ಮೂಲಕ ಮತ್ತು ಅಧಾರ್ಮಿಕ ಸರ್ಕಾರವನ್ನು ವಿರೋಧಿಸುವುದರ ಮೂಲಕ ಅದಕ್ಕೆ ಆರಂಭಿಕ ಕ್ರಿಶ್ಚಿಯಾನಿಟಿಯೊಡನೆಯೂ ಸಂಬಂಧವಿದೆ. ಜೀವಾತ್ಮದ ಬಗ್ಗೆ ತಾನು ಹೊಂದಿದ ಕಳಕಳಿಯಿಂದಾಗಿ ಅದು ಕ್ರಿಶ್ಚಿಯಾನಿಟಿಯೊಡನೆ ಆಳವಾದ ಸಂಬಂಧವನ್ನೂ ಪಡೆದಿದೆ. ಕ್ರಿಶ್ಚಿಯನ್ ನೈತಿಕತೆಯ ಪ್ರಕಾರ ಯಾವ ಸರ್ಕಾರವೂ ವ್ಯಕ್ತಿಯನ್ನು ಪಾಪಕಾರ್ಯದಲ್ಲಿ ತೊಡಗುವಂತೆ ಬಲವಂತ ಮಾಡುವ ಅಧಿಕಾರವನ್ನು ಬೆಂಬಲಿಸಲಾಗದು. ಗಂಡುಹೆಣ್ಣುಗಳಿಬ್ಬರಲ್ಲಿ ಯಾರೊಬ್ಬರನ್ನು ಬಲವಂತ ಮಾಡಿ ನಡೆಸಿದ ಮದುವೆಯೂ ಸಿಂಧುವಾಗಲಾರದು. ಹಿಂಸೆಯನ್ನು ನೀಡುವ ವಿಷಯದಲ್ಲಿ ಅದು ಮತ್ತಷ್ಟು ವ್ಯಕ್ತಿಸ್ವಾತಂತ್ರ್ಯದ ಪರವಾಗಿದೆ: ಅದರ ಉದ್ದೇಶವು ಧರ್ಮವಿರೋಧಿ ವ್ಯಕ್ತಿಯು ತಪ್ಪನ್ನೊಪ್ಪಿಕೊಂಡು ಪಶ್ಚಾತ್ತಾಪ ಪಡುವುದರ ಕಡೆಗೆ ಒಯ್ಯುವುದೇ ಹೊರತು ಸಮುದಾಯಕ್ಕೆ ಲಾಭ ತರುವುದಲ್ಲ. ಪ್ರತಿ ವ್ಯಕ್ತಿಯೂ ತನ್ನಲ್ಲಿ ತಾನು ಪೂರ್ಣ ಎಂಬ ಕ್ಯಾಂಟ್‌ನ ತತ್ವವು ಕ್ರಿಶ್ಚಿಯನ್ ಬೋಧನೆಯಿಂದಲೇ ಮೂಡಿಬಂದಿರುವುದು.

ದೀರ್ಘಕಾಲದ ಅಧಿಕಾರವು ಕ್ಯಾಥೋಲಿಕ್ ಚರ್ಚ್‌ನಲ್ಲಿ ಆರಂಭಿಕ ಕ್ರಿಶ್ಚಿಯಾನಿಟಿಯ ವ್ಯಕ್ತಿಸ್ವಾತಂತ್ರ್ಯವನ್ನು ಮಸುಕುಗೊಳಿಸಿತ್ತು; ಆದರೆ ಪ್ರಾಟೆಸ್ಟೆಂಟನಿಸಂ, ಅದರಲ್ಲೂ ತನ್ನ ಅತಿರೇಕರೂಪಗಳಲ್ಲಿ, ಅದನ್ನು ಪುನರುಜ್ಜೀವಿಸಿ ಸರ್ಕಾರದ ತತ್ವಕ್ಕೆ ಅನ್ವಯಿಸಿತು.

ಕ್ರಾಂತಿಕಾರಿ ಹಾಗೂ ಸಾಂಪ್ರದಾಯಿಕ ಸಿದ್ಧಾಂತಗಳು ಮೇಲ್ಮೆಗಾಗಿ ಘರ್ಷಣೆಗಿಳಿದಾಗ, ಫ್ರೆಂಚ್ ಕ್ರಾಂತಿಯಲ್ಲಾದಂತೆ, ಗೆದ್ದವರು ಸೋತವರ ಮೇಲೆ ಚಲಾಯಿಸುವ ಅಧಿಕಾರವು ನಗ್ನವಾದುದಾಗಿರುತ್ತದೆ. ಕ್ರಾಂತಿಕಾರಿ ಮತ್ತು ನೆಪೋಲಿಯನಿಕ್ ಸೈನ್ಯಗಳು ಹೊಸ ಸಿದ್ಧಾಂತದ ಪ್ರಚಾರಾಸ್ತ್ರದ ಜೊತೆಗೆ ನಗ್ನ ಅಧಿಕಾರವನ್ನು ಹಿಂದೆಂದೂ ಕಾಣದ ಪ್ರಮಾಣದಲ್ಲಿ ಯೂರೋಪ್‌ನಲ್ಲಿ ಬಳಸಿದವು, ಇದು ಖಂಡಾಂತರದಲ್ಲಿ ಮಾಡಿದ ಪ್ರಭಾವವನ್ನು ಇಂದಿಗೂ ಕಾಣಬಹುದು. ಸಾಂಪ್ರದಾಯಿಕ ಅಧಿಕಾರವನ್ನು ಜಾಕೋಬಿಯನ್ನರು ಎಲ್ಲೆಡೆಯೂ ಪ್ರತಿರೋಧಿಸಿದರು, ಆದರೆ ಅದು ಪರಿಣಾಮಕಾರಿಯಾದದ್ದು ನೆಪೋಲಿಯನ್ನನ ಸೈನ್ಯದಿಂದ ಮಾತ್ರ. ನೆಪೋಲಿಯನ್‌ನ ಶತ್ರುಗಳು ಪ್ರಾಚೀನ ದುರುಪಯೋಗಗಳ ಪರವಾಗಿ ಹೋರಾಡಿ, ಕೊನೆಗೂ ಗೆಲುವನ್ನು ಸಾಧಿಸಿದಾಗ, ಒಂದು ಪ್ರತಿಗಾಮಿ ವ್ಯವಸ್ಥೆಯನ್ನು ಸ್ಥಾಪಿಸಿದರು. ಅವರ ಮಂಕುಗೊಳಿಸುವ ದಮನದ ಹಿನ್ನೆಲೆಯಲ್ಲಿ ಅವನ ಹಿಂಸೆ ಮತ್ತು ಸುಲಿಗೆಗಳು ಮರೆತುಹೋದವು; 'ಮಹಾ ಶಾಂತಿ'ಯ ನಿರ್ಜೀವತೆಯು ಯುದ್ಧವನ್ನು ಕಂಗೊಳಿಸುವಂತೆಯೂ, ಬಂದೂಕುತುದಿಗಳು ಸ್ವಾತಂತ್ರ್ಯದ ಹರಿಕಾರರಂತೆಯೂ ಕಾಣುವ ಹಾಗೆಮಾಡಿತು. 'ಪವಿತ್ರ ಒಪ್ಪಂದ' ಅವಧಿಯಲ್ಲಿ ಒಂದು ಬಗೆಯ ಹಿಂಸೆಯ ಬೈರಾನಿಕ್ ಪಂಥವು ಬೆಳೆಯಿತು, ಮುಂದೆ ಜನರ ನಿತ್ಯದ ಆಲೋಚನೆಗಳನ್ನು ನಿಧಾನವಾಗಿ ರೂಪಿಸಿತು. ಇದಕ್ಕೆಲ್ಲ ಮೂಲದಲ್ಲಿದ್ದುದು ನೆಪೋಲಿಯನ್ನನ ನಗ್ನ ಅಧಿಕಾರ ಮತ್ತು ಅದರ ಕ್ರಾಂತಿಯ ವಿಮೋಚನಾತ್ಮಕ ಯುದ್ಧಘೋಷ. ಹಿಟ್ಲರ್ ಮತ್ತು ಮುಸೋಲಿನಿಯರ ಯಶಸ್ಸು, ಸ್ಟಾಲಿನ್‌ಗಿಂತ ಕಡಿಮೆಯಿಲ್ಲದಂತೆ, ರಾಬಿಸ್‌ಪಿಯರ್ ಮತ್ತು ನೆಪೋಲಿಯನ್‌ರನ್ನು ಅವಲಂಬಿಸಿತ್ತು.

ಕ್ರಾಂತಿಕಾರಿ ಅಧಿಕಾರವು, ನೆಪೋಲಿಯನ್ನನ ನಿದರ್ಶನದಲ್ಲಿ ವ್ಯಕ್ತವಾಗುವಂತೆ, ನಗ್ನ ಅಧಿಕಾರವಾಗಿ ಜಾರುವ ಪ್ರವೃತ್ತಿಯದಾಗಿರುತ್ತದೆ. ವಿರೋಧಿಗಳ ಅಂಧಾಭಿಮಾನವು – ವಿದೇಶಿ ಆಕ್ರಮಣವಾಗಿರಲಿ, ಧಾರ್ಮಿಕ ದೌರ್ಜನ್ಯವಾಗಿರಲಿ, ಅಥವಾ ವರ್ಗಕಲಹವಾಗಿರಲಿ – ನಗ್ನ ಅಧಿಕಾರಕ್ಕಿಂತ ಭಿನ್ನವಾಗಿರುತ್ತದೆಂಬುದು ನಿಜ; ಯಾಕೆಂದರೆ ಅಲ್ಲಿ ಅಧಿಕಾರದಾಹವಿರುವುದು ವ್ಯಕ್ತಿಗಾಗಿಯಲ್ಲ, ಒಂದು ಗುಂಪಿಗೆ, ಅದೂ

ಬಯಸುವುದು ತನ್ನ ಸ್ವಂತಕ್ಕಲ್ಲ, ತನ್ನ ಸಿದ್ಧಾಂತಕ್ಕಾಗಿ. ಆದರೆ ಅಧಿಕಾರವೇ ಸಾಧನವಾಗಿರುವುದರಿಂದಲೂ ದೀರ್ಘಾವಧಿಯ ಹೋರಾಟದಲ್ಲಿ ಉದ್ದೇಶವು ಮರೆತುಹೋಗಬಹುದಾದ ಸಾಧ್ಯತೆಯಿರುವುದರಿಂದಲೂ, ಅದೂ ಹೋರಾಟವು ವಿಳಂಬವೂ ಉಗ್ರವೂ ಆಗಿದ್ದರಂತೂ, ಅಂಧಾಭಿಮಾನವು ಕ್ರಮೇಣ ಕೇವಲ ಗೆಲವನ್ನು ಗುರಿಯಾಗಿರಿಸಿಕೊಳ್ಳುವ ಸಾಧ್ಯತೆಯಿರುತ್ತದೆ. ಹೀಗಾಗಿ ಕ್ರಾಂತಿಕಾರಿ ಮತ್ತು ನಗ್ನ ಅಧಿಕಾರಗಳ ನಡುವಣ ವ್ಯತ್ಯಾಸವು ಮೇಲುನೋಟಕ್ಕೆ ಕಾಣುವುದಕ್ಕಿಂತ ಎಷ್ಟೋ ವೇಳೆ ತೆಳುವಾದುದಾಗಿರುತ್ತದೆ. ಲ್ಯಾಟಿನ್ ಅಮೆರಿಕದಲ್ಲಿ ಸ್ಪೈನ್‌ನ ವಿರುದ್ಧದ ಬಂಡಾಯದ ಮುಂಚೂಣಿಯಲ್ಲಿದ್ದವರು ಮೊದಮೊದಲು ಉದಾರವಾದಿಗಳು ಮತ್ತು ಪ್ರಜಾಪ್ರಭುತ್ವವಾದಿಗಳು, ಆದರೆ ಕೊನೆಗೆ, ಬಹುಪಾಲು ಸನ್ನಿವೇಶಗಳಲ್ಲಿ, ಉಂಟಾದುದು ನಡುನಡುವೆ ದಂಗೆಗಳಿಂದ ಕೂಡಿದ ಸೈನಿಕ ಸರ್ವಾಧಿಕಾರದ ಪರಂಪರೆ. ಎಲ್ಲಿ ಕ್ರಾಂತಿಕಾರಿ ಮನೋಭಾವವು ಆಳವಾದುದೂ ವ್ಯಾಪಕವಾದುದೂ ಆಗಿರುತ್ತದೆಯೊ, ಮತ್ತು ಎಲ್ಲಿ ಗೆಲವು ತೀರ ತಡವಾಗಿರುವುದಿಲ್ಲವೋ, ಅಲ್ಲಿ ಮಾತ್ರ ಸಹಕಾರಭಾವವು ಕ್ರಾಂತಿಯ ಆಘಾತವನ್ನು ತಡೆದುಕೊಳ್ಳಬಲ್ಲದು ಮತ್ತು ಅಲ್ಲಿ ಮಾತ್ರ ಹೊಸ ಸರ್ಕಾರವು ಸೈನ್ಯಬಲದ ಮೇಲಲ್ಲದೆ ಒಮ್ಮತದ ಮೇಲೆ ನೆಲೆನಿಲ್ಲಬಲ್ಲದು. ಮನೋಬಲವಿಲ್ಲದ ಸರ್ಕಾರವು ನಿರಂಕುಶವಾಗಿರುತ್ತದೆ.

೪. ರಷ್ಯಾದ ಕ್ರಾಂತಿ: ಜಗತ್ತಿನ ಇತಿಹಾಸದಲ್ಲಿ ರಷ್ಯಾ ಕ್ರಾಂತಿಯ ಪ್ರಾಮುಖ್ಯವನ್ನು ಕುರಿತು ಮಾತನಾಡುವುದಕ್ಕೆ ಇನ್ನೂ ಸಮಯ ಸಾಕಷ್ಟಾಗಿಲ್ಲ; ಆದರೆ ಅದರ ಕೆಲವು ಮಗ್ಗುಲುಗಳ ಬಗ್ಗೆ ನಾವು ಮಾತನಾಡಬಹುದು. ಆರಂಭಿಕ ಕ್ರಿಶ್ಚಿಯಾನಿಟಿಯಂತೆ ಅದೂ ಅಂತಾರಾಷ್ಟ್ರೀಯ, ಅಷ್ಟೇಕೆ ರಾಷ್ಟ್ರೀಯತಾವಿರೋಧಿ ಸಿದ್ಧಾಂತಗಳನ್ನೇ ಬೋಧಿಸಿತು, ಇಸ್ಲಾಂನಂತೆ, ಕ್ರಿಶ್ಚಿಯಾನಿಟಿಯಂತಲ್ಲ; ಅದು ಸತ್ವತಃ ರಾಜಕೀಯವಾದುದು. ಇದುವರೆಗೆ ಪರಿಣಾಮಕಾರಿಯಾದುದೆಂದು ಸಾಬೀತಾಗಿರುವ ಅದರ ಸೈದ್ಧಾಂತಿಕ ಅಂಶವೆಂದರೆ ಉದಾರವಾದಕ್ಕೆ ಅದು ಒಡ್ಡಿದ ಸವಾಲು. ೧೯೧೭ ರ ನವೆಂಬರ್‌ವರೆಗೂ, ಉದಾರವಾದಕ್ಕೆ ಪ್ರತಿರೋಧ ಒಡ್ಡುತ್ತಿದ್ದುದು ಪ್ರತಿಗಾಮಿಗಳು ಮಾತ್ರ; ಇತರ ಪ್ರಗತಿಗಾಮಿಗಳಂತೆ ಮಾರ್ಕ್ಸಿಸ್ಟರು ಕೂಡ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ, ಹಾಗೂ ಇತರ ಉದಾರವಾದಿ ರಾಜಕೀಯ ಪರಿಕರಗಳನ್ನು ಸಮರ್ಥಿಸಿದರು. ಅಧಿಕಾರಕ್ಕೆ ಬಂದಾಗ ಸೋವಿಯತ್ ಒಕ್ಕೂಟವು ಕ್ಯಾಥೋಲಿಕ್ ಚರ್ಚ್ ತನ್ನ ಔನ್ನತ್ಯದ ಕಾಲದಲ್ಲಿನ ತತ್ವಗಳ ಬೋಧನೆಗೆ

ಮರಳಿತು; ಅಂದರೆ, ನೇರ ಬೋಧನೆಯೊಡನೆ ವಿರೋಧಿ ಸಿದ್ಧಾಂತಗಳ ದಮನದ ಮೂಲಕ ಸತ್ಯವನ್ನು ಪ್ರಸಾರ ಮಾಡುವುದು ಅಧಿಕಾರಸ್ಥಾನದ ಕೆಲಸ ಎಂಬುದು. ಸಹಜವಾಗಿಯೇ ಇದು ಅಪ್ರಜಾಪ್ರಭುತ್ವವಾದಿ ಸರ್ವಾಧಿಕಾರದ ಸ್ಥಾಪನೆಗೆ ಹಾದಿ ಮಾಡಿಕೊಟ್ಟಿತು, ತನ್ನ ಸ್ಥಿರತೆಗೆ ಅದು ಕೆಂಪು ಸೈನ್ಯವನ್ನು ಆಶ್ರಯಿಸಿತು. ಹೊಸದಾದುದೆಂದರೆ, ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳ ಸಂಲಗ್ನ, ಇದರಿಂದ ಸರ್ಕಾರದ ನಿಯಂತ್ರಣವು ಅತ್ಯಧಿಕವಾಗಲು ಕಾರಣವಾಯಿತು.

ಕಮುನಿಸ್ಟ್ ಸಿದ್ಧಾಂತದಲ್ಲಿನ ಅಂತಾರಾಷ್ಟ್ರೀಯ ಅಂಶವು ಪರಿಣಮಕಾರಿಯಾಗಲಿಲ್ಲ, ಆದರೆ ಉದಾರವಾದದ ತಿರಸ್ಕಾರವು ಅದ್ಭುತ ಯಶಸ್ಸು ಗಳಿಸಿತು. ಅದರ ಪ್ರಮುಖ ಸಿದ್ಧಾಂತಗಳೆಲ್ಲ ರೈನ್‌ನಿಂದ ಪೆಸಿಫಿಕ್ ಸಾಗರದವರೆಗೆ ಸುಮಾರು ಎಲ್ಲೆಡೆಯೂ ತಿರಸ್ಕೃತಗೊಂಡಿವೆ; ಬೋಲ್ಷೆವಿಕ್ ರಾಜಕೀಯ ತಂತ್ರವನ್ನು ಮೊದಲು ಇಟಲಿ, ಆನಂತರ ಜರ್ಮನಿ ಅಳವಡಿಸಿಕೊಂಡವು; ಪ್ರಜಾಪ್ರಭುತ್ವವು ಜೀವಂತವಾಗಿರುವ ದೇಶಗಳಲ್ಲಿಯೂ ಉದಾರವಾದಿ ತತ್ವವು ತನ್ನ ಉರುಬನ್ನು ಕಳೆದುಕೊಂಡಿದೆ. ಉದಾಹರಣೆಗೆ, ರೊಚ್ಚಿಗೆದ್ದ ಜನರು ಸಾರ್ವಜನಿಕ ಕಟ್ಟಡಗಳನ್ನು ಧ್ವಂಸಗೊಳಿಸಿದಾಗ, ನಿಜವಾದ ವಿಧ್ವಂಸಕ ವ್ಯಕ್ತಿಗಳನ್ನು ಕಂಡುಹಿಡಿಯಲು ಪೋಲೀಸರೂ ನ್ಯಾಯಾಲಯಗಳೂ ಪ್ರಯತ್ನಿಸಬೇಕೆಂದು ಉದಾರವಾದಿಗಳು ಹೇಳುತ್ತಾರೆ; ಆದರೆ ಆಧುನಿಕಪ್ರಜ್ಞೆಯ ವ್ಯಕ್ತಿಯ ಅಭಿಪ್ರಾಯವೆಂದರೆ, ನೀರೋನಂತೆ, ಪ್ರಮಾಣಗಳನ್ನು ಸೃಷ್ಟಿಸಿ ತಾನು ವೈಯಕ್ತಿಕವಾಗಿ ಇಷ್ಟಪಡದ ಪಕ್ಷಕ್ಕೆ ಸೇರಿದ ವ್ಯಕ್ತಿಯ ಮೇಲೆ ಅದರ ಆರೋಪ ಹೊರಿಸಬೇಕು ಎಂಬುದು. ಅಭಿವ್ಯಕ್ತಿ ಸ್ವಾತಂತ್ರ್ಯದಂತಹ ವಿಷಯದಲ್ಲಿ ಅವನ ಅಭಿಪ್ರಾಯವೆಂದರೆ, ಸಂತ ಆಂಬ್ರೋಸ್‌ನದರಂತೆ, ತನ್ನ ಪಕ್ಷಕ್ಕೆ ಮಾತ್ರ ಸ್ವಾತಂತ್ರ್ಯವಿರಬೇಕೇ ಹೊರತು ಬೇರೆಯದಕ್ಕಲ್ಲ ಎಂಬುದು.

ಇಂತಹ ಸಿದ್ಧಾಂತಗಳ ಪರಿಣಾಮವೆಂದರೆ ಎಲ್ಲ ಅಧಿಕಾರವನ್ನೂ ಪರಿವರ್ತಿಸುವುದು, ಮೊದಲು, ಕ್ರಾಂತಿಕಾರಿ ಅಧಿಕಾರವನ್ನಾಗಿ, ಆನಂತರ, ಅನಿವಾರ್ಯ ಹಂತಗಳಲ್ಲಿ ನಗ್ನ ಅಧಿಕಾರವಾಗಿ. ಈ ಅಪಾಯ ಸನಿಹದ್ದು; ಅದನ್ನು ಪರಿಹರಿಸುವ ಸಾಧನಗಳ ಬಗ್ಗೆ ನಾನೀಗ ಏನೂ ಹೇಳುವುದಿಲ್ಲ, ಮುಂದೆ ಚರ್ಚಿಸುತ್ತೇನೆ.

ಉದಾರವಾದದ ಅವನತಿಗೆ ಅನೇಕ ತಾಂತ್ರಿಕವೂ ಮಾನಸಿಕವೂ ಆದ ಕಾರಣಗಳಿವೆ. ಯುದ್ಧತಂತ್ರಗಳಲ್ಲಿ, ಉತ್ಪಾದನೆಯ ತಂತ್ರದಲ್ಲಿ,

ಪ್ರಚಾರಕ್ಕೆ ನೀಡುವ ಹೆಚ್ಚಿನ ಆದ್ಯತೆಯಲ್ಲಿ, ರಾಷ್ಟ್ರೀಯತೆಯಲ್ಲಿ (ಇದು ಉದಾರವಾದವು ಸೃಷ್ಟಿಸಿದ್ದೇ) ಅವುಗಳನ್ನು ಕಾಣಬಹದು. ಈ ಎಲ್ಲ ಕಾರಣಗಳು, ಅದರಲ್ಲೂ ಸರ್ಕಾರಕ್ಕೆ ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳೆರಡೂ ಮೇಳೈಸಿರುವೆಡೆಗಳಲ್ಲಿ, ಸರ್ಕಾರದ ಅಧಿಕಾರವನ್ನು ಅತ್ಯಧಿಕಗೊಳಿಸಿವೆ. ವ್ಯಕ್ತಿ ಮತ್ತು ಸರ್ಕಾರಗಳ ನಡುವಣ ಸಂಬಂಧಕ್ಕೆ ಸಬಂಧಿಸಿದ ಸಮಸ್ಯೆಗಳು ನಮ್ಮ ಕಾಲದಲ್ಲಿ ಹೊಸತಾದವು, ಇವುಗಳನ್ನು ಪರಿಹರಿಸಲು ನಮಗೆ ಲಾಕ್ ಮತ್ತು ಮಾಂಟೆಸ್ಕ್ಯೂಗಳು ನೆರವಾಗಲಾರರು. ಹದಿನೆಂಟನೆಯ ಶತಮಾನದ ಸಮುದಾಯದಂತೆಯೇ, ಸುಖಸಮೃದ್ಧಿಗಳಿಂದ ಕೂಡಿರಬೇಕೆಂದು ಅದು ಬಯಸುವುದಾದರೆ, ಆಧುನಿಕ ಸಮಾಜಕ್ಕೂ ಆವಶ್ಯಕವಾದುದು, ವ್ಯಕ್ತಿಯ ಪ್ರವರ್ತನ ಸಾಮರ್ಥ್ಯಕ್ಕೆ ಅವಕಾಶ, ಆದರೆ ಇದು ಎಷ್ಟಿರಬೇಕೆಂಬುದನ್ನು ಹೊಸತಾಗಿ ನಿರ್ಧರಿಸಬೇಕು ಹಾಗೂ ಅದನ್ನು ಹೊಸ ವಿಧಾನಗಳಿಂದ ಉಳಿಸಿಕೊಳ್ಳಬೇಕು.

-೦-೦-೦-೦-

ಅಧ್ಯಾಯ ಎಂಟು

ಆರ್ಥಿಕ ಅಧಿಕಾರ

ಆರ್ಥಿಕ ಅಧಿಕಾರವು ಸೈನ್ಯದ್ದರಂತೆ ಮೂಲವಾದದ್ದಲ್ಲ, ಸಾಧಿತವಾದದ್ದು. ಒಂದು ದೇಶದಲ್ಲಾದರೆ ಅದು ಕಾನೂನನ್ನು ಅವಲಂಬಿಸಿರುತ್ತದೆ; ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಇದು ಕಾನೂನನ್ನು ಅವಲಂಬಿಸುವ ಒಂದು ಸಣ್ಣ ವಿಷಯ, ಆದರೆ ದೊಡ್ಡ ವಿಷಯಗಳನ್ನೊಳಗೊಂಡಿದ್ದಾಗ ಅದು ಯುದ್ಧ ಅಥವಾ ಯುದ್ಧಭಯವನ್ನು ಅವಲಂಬಿಸುವ ಒಂದು ವಿಚಾರವಾಗಿರುತ್ತದೆ. ವಿಶ್ಲೇಷಣೆಯಿಲ್ಲದೆ ಆರ್ಥಿಕ ಅಧಿಕಾರವನ್ನು ಒಪ್ಪಿಕೊಂಡುಬಿಡುವುದು ವಾಡಿಕೆ; ಇದರಿಂದಾಗಿ ಇತಿಹಾಸದ ಪ್ರಾಸಂಗಿಕ ವ್ಯಾಖ್ಯಾನದಲ್ಲಿ, ಆಧುನಿಕ ಯುಗದಲ್ಲಿ, ಯುದ್ಧ ಮತ್ತು ಪ್ರಚಾರಗಳಂತಲ್ಲದೆ, ಅರ್ಥವ್ಯವಸ್ಥೆಗೆ ಆವಶ್ಯಕವಾದುದಕ್ಕಿಂತ ಹೆಚ್ಚು ಮಹತ್ವ ಬರುವಂತಾಗಿದೆ.

ಕಾರ್ಮಿಕ ಆರ್ಥಿಕಾಧಿಕಾರವಲ್ಲದೆ, ಮಿಕ್ಕೆಲ್ಲ ಆರ್ಥಿಕಾಧಿಕಾರವೂ ಅಂತಿಮ ವಿಶ್ಲೇಷಣೆಯಲ್ಲಿ ಒಂದು ತುಂಡು ಭೂಮಿಯಲ್ಲಿ ಯಾರು ಬಿತ್ತಬೇಕು ಯಾರು ಬೆಳೆಯಬೇಕು ಎಂಬ ವಿಷಯವನ್ನು, ಆವಶ್ಯಕವಾದರೆ ಸೈನ್ಯಬಲ ಪ್ರಯೋಗದಿಂದ ನಿರ್ಣಯವಾಗಬೇಕಾದುದನ್ನು ಒಳಗೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇದು ಸ್ಪಷ್ಟವಾಗಿರುತ್ತದೆ. ದಕ್ಷಿಣ ಪರ್ಷಿಯದ ತೈಲವು ಆಂಗ್ಲೋ-ಪರ್ಷಿಯನ್ ತೈಲ ಕಂಪನಿಗಳಿಗೆ ಸೇರಿದ್ದು, ಏಕೆಂದರೆ ಬೇರಾರಿಗೂ ಅದರ ಮೇಲೆ ಹಕ್ಕಿಲ್ಲವೆಂದು ಬ್ರಿಟಿಷ್ ಸರ್ಕಾರವು ಆಜ್ಞಾಪಿಸಿದೆ, ಇಲ್ಲಿಯವರೆಗೂ ಅದನ್ನು ಜಾರಿಯಲ್ಲಿಡಲು ಸಮರ್ಥವಾಗಿದೆ. ಗ್ರೇಟ್ ಬ್ರಿಟನ್ ದೊಡ್ಡ ಯುದ್ಧದಲ್ಲೇನಾದರೂ ಸೋತರೆ ಅದರ ಒಡೆತನವು ಬದಲಾಗುವ ಸಂಭವವಿರುತ್ತದೆ. ರೊಡೀಶಿಯದ ಚಿನ್ನದ ಗಣಿಗಳು ಕೆಲವು ಶ್ರೀಮಂತರ ಕೈಯಲ್ಲಿವೆ, ಏಕೆಂದರೆ ಲೊಬೆಂಗ್ಯುಲದೊಡನೆ ಯುದ್ಧದಲ್ಲಿ ತೊಡಗಿ ಕೆಲವರನ್ನು ಶ್ರೀಮಂತರನ್ನಾಗಿಸಬೇಕೆಂದು ಬ್ರಿಟಿಷ್ ಪ್ರಜಾಪ್ರಭುತ್ವವು ಆಲೋಚಿಸಿತು, ಆದ್ದರಿಂದ. ಸಂಯುಕ್ತ ಸಂಸ್ಥಾನಗಳ ತೈಲವು ಕೆಲವು ಕಂಪನಿಗಳಿಗೆ ಸೇರಿದ್ದು, ಯಾಕೆಂದರೆ ಅವುಗಳಿಗೆ ಅದರ ಮೇಲೆ ಕಾನೂನುಬದ್ಧ ಹಕ್ಕಿದೆ, ಈ ಕಾನೂನನ್ನು ಜಾರಿಗೊಳಿಸಲು ಸಂಯುಕ್ತ ಸಂಸ್ಥಾನದ ಸೈನ್ಯ ಸಿದ್ಧವಾಗಿದೆ; ಈ ತೈಲಪ್ರದೇಶದ ಮೂಲ ಒಡೆಯರಾಗಿದ್ದ ಇಂಡಿಯನ್‌ರಿಗೆ ಈಗ ಅದರ ಮೇಲೆ ಕಾನೂನುಬದ್ಧ ಹಕ್ಕಿಲ್ಲ, ಅದಕ್ಕೆ ಕಾರಣ ಅವರು ಯುದ್ಧದಲ್ಲಿ ಸೋತದ್ದು. ಲೊರೇನ್‌ನ ಕಬ್ಬಿಣದ ಅದಿರು

ಫ್ರಾನ್ಸ್ ಅಥವಾ ಜರ್ಮನಿಯ ಪ್ರಜೆಗಳಿಗೆ ಸೇರಿದ್ದು, ಇದು ಈ ಎರಡು ದೇಶಗಳ ನಡುವೆ ಈಚೆಗೆ ನಡೆದ ಯುದ್ಧದಲ್ಲಿ ಗೆಲ್ಲುವವರು ಯಾರು ಎಂಬುದನ್ನು ಅವಲಂಬಿಸಿದೆ. ಹೀಗೆಯೇ.

ಈ ವಿಶ್ಲೇಷಣೆಯು ಕಡಿಮೆ ಸ್ಪಷ್ಟವಾದ ಸಂದರ್ಭಗಳಿಗೂ ಅನ್ವಯಿಸುತ್ತದೆ. ಗೇಣಿಗೆ ಜಮೀನನ್ನು ಪಡೆದ ರೈತನು ಬಾಡಿಗೆಯನ್ನೇಕೆ ಕೊಡಬೇಕು, ತಾನು ತೆಗೆದ ಬೆಳೆಯನ್ನೇಕೆ ಅವನು ಮಾರಿಕೊಳ್ಳಬಹುದು? ಅವನು ಬಾಡಿಗೆಯನ್ನು ಕೊಡಬೇಕಾದುದುರ ಕಾರಣ, ಭೂಮಿಯು ಜಮೀನುದಾರನಿಗೆ 'ಸೇರಿದ್ದು'. ಜಮೀನುದಾರನಿಗೆ ಅದು ಏಕೆ ಸೇರಿದೆಯೆಂದರೆ, ಅದನ್ನವನು ವಂಶಪಾರಂಪರ್ಯವಾಗಿಯೋ ಬೇರೊಬ್ಬರಿಂದ ಕೊಂಡುಕೊಳ್ಳುವುರಿಂದಲೋ ಪಡೆದಿದ್ದಾನೆ, ಅದಕ್ಕೆ. ಈ ಒಡೆತನದ ಇತಿಹಾಸವನ್ನು ಅರಸುತ್ತ ಹೋದರೆ ಅದರ ಮೂಲ ಯಾವನೋ ಬಲಪ್ರಯೋಗದಿಂದ ಅದನ್ನು ಪಡೆದುದು ಎಂಬುದು ಗೊತ್ತಾಗುತ್ತದೆ. ಈ ಬಲಪ್ರಯೋಗವು ತನ್ನೊಬ್ಬ ಆಸ್ಥಾನಿಕನ ಪರವಾಗಿ ರಾಜನು ಮಾಡಿದ ಯಾದೃಚ್ಛಿಕ ಬಲಪ್ರಯೋಗವಿರಬಹುದು ಅಥವಾ ಸ್ಯಾಕ್ಸನ್‌ರು ಅಥವಾ ನಾರ್ಮನ್‌ರು ಮಾಡಿದಂತಹ ಸಾಮೂಹಿಕ ಗೆಲವಿನದಾಗಿರಬಹುದು. ಈ ಹಿಂಸಾಕೃತ್ಯಗಳ ನಡುವಣ ಅವಧಿಯಲ್ಲಿ, ಅದರ ಒಡೆತನವು ಕಾನೂನುಬದ್ಧವಾಗಿ ಮುಂದುವರಿಯಲು ಸರ್ಕಾರದ ಅಧಿಕಾರವನ್ನು ಬಳಸಲಾಗಿರುತ್ತದೆ. ಭೂಮಿಯ ಒಡೆತನವೇ ಭೂಮಿಯ ಮೇಲಿರಲು ಯಾರಿಗೆ ಅವಕಾಶ ನೀಡಬೇಕೆಂಬುದನ್ನು ನಿರ್ಧರಿಸುವ ಅಧಿಕಾರವಾಗಿರುತ್ತದೆ. ಈ ಅವಕಾಶಕ್ಕಾಗಿಯೇ ರೈತನು ಬಾಡಿಗೆಯನ್ನು ಕೊಡುವುದು, ಅದರಿಂದಾಗಿ ಅವನು ತನ್ನ ಬೆಳೆಯನ್ನು ಮಾರಿಕೊಳ್ಳಬಹುದು.

ಕೈಗಾರಿಕೋದ್ಯಮಿಯ ಅಧಿಕಾರವೂ ಇದೇ ಬಗೆಯದೇ; ಅಂತಿಮ ವಿಶ್ಲೇಷಣೆಯಲ್ಲಿ, ಅದು ನೆಲೆಸಿರುವುದು ಬೀಗಮುದ್ರೆ ಹಾಕುವುದರಲ್ಲಿ, ಅಂದರೆ, ತನ್ನ ಕೈಗಾರಿಕೆಯ ಪರಿಧಿಗೆ ಅನಧಿಕೃತ ವ್ಯಕ್ತಿಗಳು ಪ್ರವೇಶಿಸುವುದನ್ನು ಸರ್ಕಾರ ನಿಷೇಧಿಸಬೇಕೆಂದು ಮಾಲೀಕನು ಕೇಳಿಕೊಳ್ಳಬಹುದೆಂಬುದರಲ್ಲಿ. ಜನಾಭಿಪ್ರಾಯಕ್ಕೆ ಅವಕಾಶವಿರುವ ಕೆಲವು ದೇಶಗಳಲ್ಲಿ, ಈ ವಿಷಯದಲ್ಲಿ ಮಾಲೀಕನ ಪರ ವಹಿಸಲು ಸರ್ಕಾರವು ಹಿಂದೇಟುಹಾಕಬಹುದು; ಇದರಿಂದಾಗಿ ಧರಣಿ ಮುಷ್ಕರ ಅಸಾಧ್ಯವಾಗಬಹುದು. ಸರ್ಕಾರವು ಅವರ ವರ್ತನೆಯನ್ನು ಸಹಿಸಿಕೊಂಡರೆ, ಮಾಲೀಕತ್ವವು ಒಡೆಯನ ಕೈಲೇ ಸಂಪೂರ್ಣವಾಗಿರುವುದು

ನಿಂತಂತಾಗುತ್ತದೆ, ಒಂದು ಮಟ್ಟದಲ್ಲಿ ಕಾರ್ಮಿಕರೊಂದಿಗೆ ಸ್ವಲ್ಪ ಮಟ್ಟಿಗೆ ಅದನ್ನು ಹಂಚಿಕೊಳ್ಳುವ ಹಂತ ಶುರುವಾಗುತ್ತದೆ.

ಆರ್ಥಿಕ ಅಧಿಕಾರದ ಇತರ ಬಗೆಗಳಿಗಿಂತ ಸಾಲ ಎಂಬುದುಹೆಚ್ಚು ಅಮೂರ್ತವಾದುದು, ಆದರೆ ಮೂಲಃ ಭಿನ್ನವಾದುದೇನಲ್ಲ. ಉತ್ಪಾದಿಸುವವರು ನೇರವಾಗಿ ಉತ್ಪಾದಕವಲ್ಲದ ಕಾರ್ಯದಲ್ಲಿ ತೊಡಗಿರುವವರಿಗೆ ಹೆಚ್ಚಿನ ಬಳಕೆಯ ವಸ್ತುಗಳನ್ನು ವರ್ಗಾಯಿಸಲು ಇರುವ ಕಾನೂನುಬದ್ಧ ಹಕ್ಕಿನ ಮೇಲೆ ಅದು ಆಧರಿಸಿರುತ್ತದೆ. ಖಾಸಗಿ ವ್ಯಕ್ತಿಯಾಗಲೀ ಸಂಸ್ಥೆಯಾಗಲೀ ಹಣವನ್ನು ಕಡಪಡೆಯುವರ ಮೇಲೆ ಕಾನೂನುಬದ್ಧವಾದ ರೀತಿಯಲ್ಲಿ ಹೊಣೆಯನ್ನು ಹೊರಿಸಬಹುದು, ಆದರೆ ಸರ್ಕಾರದ ವಿಷಯದಲ್ಲಿ ವಿಧಿಸಲಾಗುವ ಈ ನಿರ್ಬಂಧವು ಅಂತಿಮವಾಗಿ ಇತರ ಸರ್ಕಾರಗಳ ಸೈನಿಕ ಅಧಿಕಾರದ ಮೇಲೆ ನಿಂತಿರುತ್ತದೆ. ನಿರ್ಬಂಧವು ಕ್ರಾಂತಿಯ ನಂತರದ ರಷ್ಯಾದಲ್ಲಾದಂತೆ ನಿರರ್ಥಕವಾಗಬಹುದು; ಹಾಗಾದಾಗ, ಪಡೆದವನು ಕೊಟ್ಟವನ ಆಸ್ತಿಯನ್ನು ತನ್ನದಾಗಿಸಿಕೊಳ್ಳುತ್ತಾನೆ. ಉದಾಹರಣೆಗೆ, ಲೇನಾ ಚಿನ್ನದ ಗಣಿಗಳ ಮೇಲೆ ಯಾರಿಗೆ ನಿಯಂತ್ರಣವಿರಬೇಕು ಎಂಬುದನ್ನು ನಿರ್ಧರಿಸುವುದು ಸೋವಿಯತ್ ಸರ್ಕಾರವೇ ವಿನಾ ಯುದ್ಧಪೂರ್ವದ ಷೇರುದಾರರಲ್ಲ.

ಈ ರೀತಿ ಖಾಸಗಿ ವ್ಯಕ್ತಿಗಳ ಆರ್ಥಿಕ ಅಧಿಕಾರವು, ಭೂಮಿಯ ಬಳಕೆಯು ಯಾರಿಗೆ ಸೇರಿದ್ದು ಎಂಬುದಕ್ಕೆ ಸಂಬಂಧಿಸಿದಂತೆ ಇರುವ ನಿಯಮಾವಳಿಗಳಿಗೆ ಅನುಗುಣವಾಗಿ, ಆವಶ್ಯಕವೆನಿಸಿದರೆ, ತನ್ನ ಸೈನ್ಯಬಲವನ್ನು ಬಳಸುವ ಆಯಾ ಸರ್ಕಾರಗಳ ನಿರ್ಧಾರವನ್ನು ಅವಲಂಬಿಸಿರುತ್ತದೆ. ಅದೇ ಸರ್ಕಾರಗಳ ಆರ್ಥಿಕ ಅಧಿಕಾರವು ಸ್ವಲ್ಪಮಟ್ಟಿಗೆ ಅದರ ಸೈನಿಕಬಲದ ಮೇಲೆ ನಿಂತಿರುತ್ತದೆ, ಇನ್ನು ಸ್ವಲ್ಪ ಮಟ್ಟಿಗೆ ಒಪ್ಪಂದಗಳು ಮತ್ತು ಅಂತಾರಾಷ್ಟ್ರೀಯ ಕಾನೂನುಗಳಗೆ ಇತರ ಸರ್ಕಾರಗಳು ನೀಡುವ ಗೌರವವನ್ನು ಅವಲಂಬಿಸಿರುತ್ತದೆ.

ಆರ್ಥಿಕ ಅಧಿಕಾರ ಮತ್ತು ಸರ್ಕಾರ ಇವುಗಳ ನಡುವಣ ಸಂಬಂಧವು ಸ್ವಲ್ಪಮಟ್ಟಿಗೆ ಪರಸ್ಪರವಾದುದು; ಅಂದರೆ, ಕೆಲವು ವ್ಯಕ್ತಿಗಳು ಸೇರಿ ಒಂದು ಗುಂಪು ಮಾಡಿಕೊಂಡು ಸೈನ್ಯಬಲವನ್ನು ಗಳಿಸಬಹುದು, ಆನಂತರ ಆರ್ಥಿಕ ಅಧಿಕಾರವನ್ನೂ ಪಡೆದುಕೊಳ್ಳಬಹುದು. ವಾಸ್ತವವಾಗಿ, ಆರ್ಥಿಕ ಅಧಿಕಾರದ ಆತ್ಯಂತಿಕ ಒಡೆತನವು ಒಟ್ಟುಗೂಡಿಸುವುದನ್ನೇ ತನ್ನ ಮೂಲ ಉದ್ದೇಶವನ್ನಾಗಿ ಪಡೆದಿರಬಹುದು. ೧೮೪೯ ರ ಕ್ಯಾಲಿಫೋರ್ನಿಯದ ಅಥವಾ ಕೆಲವರ್ಷಗಳ ನಂತರ ವಿಕ್ಟೋರಿಯದ

ಚಿನ್ನಕ್ಕಾಗಿ ನುಗ್ಗಾಟ (ಗೋಲ್ಡ್ ರಷ್)ವ್ನ್ನು ನಿದರ್ಶನಕ್ಕಾಗಿ ಪರಿಶೀಲಿಸಿ. ಕಾನೂನುಬದ್ಧವಾಗಿ ಚಿನ್ನವನ್ನು ಸ್ವಂತವಾಗಿ ಸಂಪಾದಿಸಿಕೊಂಡಿದ್ದ ವ್ಯಕ್ತಿಗೆ, ಅದನ್ನು ಬ್ಯಾಂಕಲ್ಲಿ ಇಟ್ಟ ಹೊರತು ಆರ್ಥಿಕ ಅಧಿಕಾರ ಬರುತ್ತಿತ್ತೆಂದು ಹೇಳಬರುವುದಿಲ್ಲ. ಅಲ್ಲಿಯವರೆಗೆ ಅವನು ಲೂಟಿ ಕೊಲೆಗಳಿಗೆ ಈಡಾಗಬಹುದಾದ ಸಂಭವವಿರುತ್ತಿತ್ತು. ಪರಮ ಅನಾಯಕತ್ವದ ದೇಶದಲ್ಲಿ, ಎಲ್ಲರೂ ಮಿಕ್ಕೆಲ್ಲರ ಜೊತೆ ಹೋರಾಟ ನಡೆಸುವ ಪರಿಸ್ಥಿತಿಯಲ್ಲಿ, ದುರಾಕ್ರಮಣ ಮಾಡಿದವರನ್ನು ತಕ್ಷಣ ತನ್ನ ಬಂದೂಕಿನಿಂದ ಎದುರಿಸಿ ಕಾರ್ಯಶೀಲನಾಗಿ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲ ವ್ಯಕ್ತಿಯ ಹೊರತು ಇತರರಿಗೆ ಚಿನ್ನವು ನಿರುಪಯುಕ್ತವಾಗಿರುತ್ತಿತ್ತು; ಅವನಿಗೆ ಕೂಡ, ಅದು ನೋಡುತ್ತಿದ್ದರೆ ಖುಷಿ ಕೊಡುವ ವಸ್ತುವಾಗಿರುತ್ತಿತ್ತು; ಏಕೆಂದರೆ ಯಾವುದೇ ಬೆಲೆ ಕೊಡದೆ ಕೊಲೆಯ ಬೆದರಿಕೆಯಿಂದಲೇ ತನ್ನ ಆಸೆಯನ್ನು ಪೂರೈಸಿಕೊಳ್ಳಬಹುದಾಗಿತ್ತು. ಅತಿಕ್ರಮಣ ಮತ್ತು ಬೆಳೆಯ ಕಳವುಗಳನ್ನು ನಿಯಂತ್ರಿಸಲಾಗದಿದ್ದರೆ ಬೇಸಾಯವು ಅಸಾಧ್ಯವಾದುದು. ಚಿನ್ನಪ್ರದೇಶಕ್ಕಾಗಿ ನುಗ್ಗಾಟದ (ಊಟಜ ಡಿಹ್ಣ) ಕಾಲದಲ್ಲಿದ್ದಂತೆ, ಅನಾಯಕತ್ವದಲ್ಲಿ ಹೆಚ್ಚು ಕಡಿಮೆ ಎಲ್ಲರೂ ನಾಗರಿಕರಾಗಿದ್ದರೆ, ಅವರು ಜಾಗರೂಕ ಸಮಿತಿಯಂತಹ ಯಾವುದೋ ಒಂದು ಬಗೆಯ ಸರ್ಕಾರವನ್ನು ರಚಿಸಿಕೊಳ್ಳುವುದು ಖಂಡಿತ. ಶಕ್ತಿಶಾಲಿ ಜನರು ಒಗ್ಗೂಡಿ ತಮ್ಮನ್ನು ಲೂಟಿಯಿಂದ ಪಾರುಮಾಡಿಕೊಳ್ಳುತ್ತಾರೆ; ಯಾವ ಬಾಹ್ಯ ಶಕ್ತಿಯೂ ಮಧ್ಯಪ್ರವೇಶ ಮಾಡದಿದ್ದರೆ, ಅವರೇ ಇತರರನ್ನು ಲೂಟಿ ಮಾಡಬಹುದು. ಆದರೆ ತಾವೆಲ್ಲಿ ಚಿನ್ನದ ಮೊಟ್ಟೆಯಿಡುವ ಬಾತುಕೋಳಿಯನ್ನೇ ಕೊಂದುಬಿಡುತ್ತೇವೋ ಎಂಬ ಅಳುಕಿನಿಂದ ಅವರು ಹಾಗೆ ಮಾಡುವುದು ಸ್ವಲ್ಪ ನಯಗಾರಿಕೆಯಿಂದ. ಉದಾಹರಣೆಗೆ, ಅವರು ರಕ್ಷಣೆಯನ್ನು ನೀಡಿ ವ್ಯಕ್ತಿಯ ಸಂಪಾದನೆಯಲ್ಲಿ ಒಂದು ಭಾಗವನ್ನು ಪ್ರತಿಫಲವಾಗಿ ವಸೂಲಿಮಾಡಬಹುದು. ಇದನ್ನೇ ಆದಾಯ ತೆರಿಗೆ ಎಂದು ಕರೆಯುವುದು. ರಕ್ಷಣೆ ನೀಡುವುದರ ಬಗ್ಗೆ ನಿಗದಿತ ನಿಯಮಗಳು ರೂಪುಗೊಂಡಾಗ, ಕಾನೂನುಬದ್ಧ ಆಡಳಿತಕ್ಕೂ ಸೈನ್ಯಾಡಳಿತಕ್ಕೂ ಇರುವ ಭಿನ್ನತೆ ಸ್ಪಷ್ಟವಾಗುತ್ತದೆ, ಅನಾಯಕತ್ವವು ಕೊನೆಗೊಳ್ಳುತ್ತದೆ. ಆದರೆ ಕಾನೂನು ಮತ್ತು ಆರ್ಥಿಕ ಸಂಬಂಧಗಳ ಮೂಲ ನೆಲೆಯು ಆಗಲೂ ಜಾಗರೂಕರ ಸೈನಿಕ ಬಲವೇ ಆಗಿರುತ್ತದೆ.

ಆದರೆ ಐತಿಹಾಸಿಕ ಬೆಳವಣಿಗೆಯು ಇದಕ್ಕಿಂತ ಬೇರೆಯಾಗಿರುವುದು ಸ್ಪಷ್ಟ. ಇದಕ್ಕೆ ಕಾರಣ ಅದು ಅಪವಾದವಿಲ್ಲವೆಂಬಂತೆ ನಡೆದುದು ಕ್ರಮೇಣವಾಗಿಯೇ ಹೊರತು, ತಾವು ಬದುಕುತ್ತಿದ್ದ ಕಾಲದ ಆಡಳಿತ ಸಂಸ್ಥೆಗಳಿಗಿಂತ ಹೆಚ್ಚು ನಾಗರಿಕ ಸಂಸ್ಥೆಗಳನ್ನು ಅವಲಂಬಿಸಿ ಅಲ್ಲ.

ಆದರೂ, ವಿದೇಶೀಯರು ಗೆದ್ದು ನಡೆಸುವ ಆಡಳಿತದ ಕಾಲದಲ್ಲಿ ಮೇಲಿನದರಂತಹ ಸನ್ನಿವೇಶವು ಸೃಷ್ಟಿಯಾಗುತ್ತದೆ, ಅದರಲ್ಲೂ ವಿದೇಶಿ ಆಡಳಿತಗಾರರು ಅಲ್ಪಸಂಖ್ಯಾತರಾಗಿದ್ದಾಗ ಇದರ ಸಂಭವ ಮತ್ತಷ್ಟು ತೀವ್ರತರ; ಆಗ ಭೂಮಿಯ ಒಡೆತನದ ಮೂಲವನ್ನು ಸಾಮಾನ್ಯವಾಗಿ ಅಂತಹ ವಿದೇಶೀ ಗೆಲವಿನ ಸಂದರ್ಭಕ್ಕೇ ಗುರುತಿಸಬಹುದು. ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಮೊದಲ ಜಾಗರೂಕ ಸಮಿತಿಯ ರಚನೆಯಾಗುವಂತಹ ಹಂತವನ್ನು ನಾವಿನ್ನೂ ತಲುಪಿಲ್ಲ: ಬಲಿಷ್ಠ ರಾಷ್ಟ್ರಗಳಲ್ಲಿ ಪ್ರತಿಯೊಂದೂ ಕೊಲೆಯ ಬೆದರಿಕೆಯೊಡ್ಡಿ ಇತರರಿಂದ ಹಣವನ್ನು ಕೀಳುತ್ತದೆ. ಈಚೆಗೆ ತೈಲದ ಕಾರಣ ಮೆಕ್ಸಿಕೋದೊಡನೆ ನಡೆದ ಬ್ರಿಟಿಷ್ ವ್ಯವಹಾರಗಳು, ಅಥವಾ ಮನ್ರೋ ಸಿದ್ಧಾಂತ ಎನ್ನಬಹುದು, ಇದನ್ನು ತೋರಿಸುತ್ತದೆ. ಇನ್ನೂ ಹೆಚ್ಚು ಬಲಿಷ್ಠವಾದ ನಿದರ್ಶನವೆಂದರೆ, ವರ್ಸೈಲ್ಸ್ ಒಪ್ಪಂದದ ಪರಿಹಾರ ಸೂತ್ರಗಳು. ಆದರೆ ನಾಗರಿಕ ದೇಶಗಳ ಆಂತರಿಕ ಆರ್ಥಿಕ ವ್ಯವಸ್ಥೆಗಳಲ್ಲಿನ ಕಾನೂನುಗಳ ಬುನಾದಿಯು ಹೆಚ್ಚು ಸಂಕೀರ್ಣವಾಗಿರುತ್ತದೆ. ಚರ್ಚ್‌ನ ಆಸ್ತಿಯು ಸಂಪ್ರದಾಯವನ್ನು ಆಧರಿಸಿರುತ್ತದೆ; ಕಾರ್ಮಿಕರು ಕಾರ್ಮಿಕಸಂಘಟನೆ ಹಾಗೂ ರಾಜಕೀಯ ಕಾರ್ಯಕ್ರಮಗಳ ಕಾರಣದಿಂದ ಸ್ವಲ್ಪಮಟ್ಟಿಗೆ ಅನುಕೂಲ ಪಡೆದಿದ್ದಾರೆ; ಹೆಂಡತಿಯರೂ ಮಕ್ಕಳು ಹಕ್ಕುಗಳನ್ನು ಪಡೆದಿರುವುದಕ್ಕೆ ಆಧಾರ ಸಮಾಜದ ನೈತಿಕ ಮನೋಭಾವ. ಆದರೆ ಸರ್ಕಾರವು ರೂಪಿಸಿರುವ ಆರ್ಥಿಕ ನಿಯಮಗಳು ಹೇಗೇ ಇರಲಿ, ಅವುಗಳ ಜಾರಿಗೆ ಸೈನಿಕ ಅಧಿಕಾರವು ಅತ್ಯವಶ್ಯಕವಾಗಿರುತ್ತದೆ.

ಖಾಸಗಿ ವ್ಯಕ್ತಿಗಳ ವಿಷಯದಲ್ಲಿ ಸರ್ಕಾರವು ಮಾಡುವ ನಿಯಮಗಳು ಕಾನೂನಿನ ಸೂಕ್ತ ಭಾಗಗಳಾಗುತ್ತವೆ. ಈ ಭಾಗಗಳೂ, ಇತರ ಎಲ್ಲದರಂತೆ, ಜನಾಭಿಪ್ರಾಯದ ಬೆಂಬಲ ದೊರೆಯುವಷ್ಟು ಕಾಲ ಪರಿಣಾಮಕಾರಿಯಾಗಿರುತ್ತದೆ. ಎಂಟನೆಯ ಆದೇಶಕ್ಕೆ (ಕಮಾಂಡ್‌ಮೆಂಟ್) ಅನುಗುಣವಾಗಿ, ಜನಾಭಿಪ್ರಾಯವು ಕಳ್ಳತನವನ್ನು ನಿಷೇಧಿಸುತ್ತದೆ, ಮತ್ತು 'ಕಳ್ಳತನ' ಎಂದರೆ ಕಾನೂನು ಖಂಡಿಸುವ ರೀತಿಯಲ್ಲಿ ಆಸ್ತಿಯನ್ನು ಲಪಟಾಯಿಸುವುದು ಎಂದು ವಿವರಿಸುತ್ತದೆ. ಅಂದರೆ ಖಾಸಗಿ ವ್ಯಕ್ತಿಯ ಆರ್ಥಿಕ ಅಧಿಕಾರವು ಅಭಿಪ್ರಾಯವನ್ನು, ಅಂದರೆ ಕಳ್ಳತನದ ವಿರುದ್ಧದ ನೈತಿಕ ಖಂಡನೆಯನ್ನು, ಇದರೊಡನೆ ಕಾನೂನಿನ ವ್ಯಾಖ್ಯಾನಕ್ಕೆ ಕಾರಣವಾಗುವ ಭಾವನೆಯನ್ನು, ಅವಲಂಬಿಸುತ್ತದೆ ಎಂದಂತಾಯಿತು. ಈ ಭಾವನೆಯು ಇಲ್ಲದಿರುವ ಅಥವಾ ದುರ್ಬಲವಾಗಿರುವೆಡೆಗಳಲ್ಲಿ ಆಸ್ತಿಯು ಅಪಾಯದಲ್ಲಿ ಸಿಲುಕುತ್ತದೆ; ನಿದರ್ಶನಕ್ಕೆ, ಸ್ಟಾಲಿನ್ ಕಮ್ಯುನಿಸಮ್‌ನ

ಹಿತಕ್ಕಾಗಿಯೇ ಅನುಸರಿಸುವ ಲೂಟಿಯಿಂದ ತನ್ನ ವೃತ್ತಿಜೀವನವನ್ನು ಆರಂಭಿಸಿದ. ಎಂಟನೆಯ ಆದೇಶ(ಕಮಾಂಡ್‌ಮೆಂಟ್)ದಿಂದ ಜನರನ್ನು ಮುಕ್ತಗೊಳಿಸಿದ ಪೋಪ್‌ನ ಅಧಿಕಾರವು ಹೇಗೆ ಹದಿಮೂರನೆಯ ಶತಮಾನದ ಲೇವಾದೇವಿದಾರರ ಮೇಲೆ ಹಿಡಿತ ಸಾಧಿಸಲು ಅವನಿಗೆ ಸಹಕಾರಿಯಾಯಿತು ಎಂಬುದನ್ನು ನಾವು ನೋಡಿದ್ದೇವೆ.

ದೇಶದೊಳಗಿನ ಆಂತರಿಕ ಆರ್ಥಿಕ ಅಧಿಕಾರವು ಕಾನೂನು ಹಾಗೂ ಜನಾಭಿಪ್ರಾಯಗಳ ಮೇಲೆ ಆಧರಿಸಿದ್ದರೂ, ಬಹು ಬೇಗ ಒಂದ ಮಟ್ಟದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುತ್ತದೆ. ಲಂಚದ ಮೂಲಕ ಅದು ಕಾನೂನಿನ ಮೇಲೂ, ಪ್ರಚಾರದ ಮೂಲಕ ಜನಾಭಿಪ್ರಾಯದ ಮೇಲೂ ಪ್ರಭಾವ ಬೀರಬಹುದು. ಮುಲಾಜಿಗೊಳಗಾಗಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ರೀತಿಯಲ್ಲಿ ಅದು ರಾಜಕಾರಣಿಗಳ ಮೇಲೆ ಒತ್ತಡ ತರಬಹುದು. ಅದರಿಂದ ಆರ್ಥಿಕ ಬಿಕ್ಕಟ್ಟು ಉಂಟಾಗುವ ಪರಿಸ್ಥಿತಿ ಏರ್ಪಡಬಹುದು. ಆದರೆ ಅದು ಸಾಧಿಸಬಹುದಾದುದಕ್ಕೆ ಖಚಿತವಾದ ಮಿತಿಗಳಿವೆ. ಸೀಸರ್ ಅಧಿಕಾರಕ್ಕೆ ಬರಲು ಅವನ ಸಾಲಗಾರರು ಸಹಾಯ ಮಾಡಿದರು; ಅವರಿಗೆ ಅವನ ಯಶಸ್ಸಿನ ಹೊರತು ಬೇರೆ ಬಗೆಯ ಮರುಪಾವತಿಯ ಆಸೆ ಉಳಿದಿರಲಿಲ್ಲ; ಆದರೆ ಅವನು ಗೆದ್ದ ಮೇಲೆ ಅವರನ್ನು ಮೀರಿ ನಡೆಯುವ ಅಧಿಕಾರವನ್ನು ಪಡೆದಿದ್ದ. ಸಮ್ರಾಟ ಹುದ್ದೆಯನ್ನು ಸಂಪಾದಿಕೊಳ್ಳಲು ಬೇಕಾದ ಹಣವನ್ನು ಐದನೆಯ ಚಾರ್ಲ್ಸ್ ಫಗ್ಗರ್ಸ್‌ಗಳಿಂದ ಪಡೆದ, ಆದರೆ ಅವನು ಚಕ್ರವರ್ತಿಯಾದ ಬಳಿಕ ಕೈ ಅಲ್ಲಾಡಿಸಿದ್ದರಿಂದ ತಾವು ಅವನಿಗಿತ್ತುದನ್ನೆಲ್ಲ ಅವರು ಕಳೆದುಕೊಂಡರು.[೧] ನಮ್ಮ ಕಾಲದಲ್ಲಿಯೇ ಜರ್ಮನ್ ಪುನರ್ವಶಕ್ಕೆ ಸಹಾಯ ಮಾಡಿದ್ದಕ್ಕಾಗಿ ಲಂಡನ್ ನಗರವು ಇದೇ ಅನುಭವ

[೧] ಹ್ಯಾಪ್ಸ್‌ಬರ್ಗ್‌ನ ಸಾಲಗಾರರಿಗೆ ಹಣ ಕೊಡುವುದನ್ನು ಫಗ್ಗರ್ಸ್ ನಿರಾಕರಿಸಲು ಸಾಧ್ಯವಿರಲಿಲ್ಲ. ಅವರು ಐದನೆಯ ಚಾರ್ಲ್ಸ್‌ಗೆ ಹಣ ಕೊಡುವ ಮುಂಚೆ ಚಕ್ರವರ್ತಿ ಮಾಕ್ಸಿಮಿಲಿಯನ್‌ಗೂ, ಅವನ ಬಳಿಕ ಅವನ ಸ್ಪಾನಿಷ್ ಉತ್ತರಾಧಿಕಾರಿಗಳಿಗೂ ಕೊಟ್ಟಿದ್ದರು. 'ಫಗ್ಗರ್ಸ್ ವಾರ್ತಾಪತ್ರಿಕೆ'ಯು ಹೇಳುವುದೇನೆಂದರೆ: "ಸ್ಪಾನಿಷ್ ರಾಜರು ಫಗ್ಗರ್ಸ್‌ಗಳಿಂದ ಕನಿಷ್ಠ ಪಕ್ಷ ನಾಲ್ಕು ದಶಲಕ್ಷ ಡ್ಯುಕಾಟ್‌ಗಳನ್ನಾದರೂ ತೆಗೆದುಕೊಂಡಿದ್ದರು, ಆದರೆ ಅದನ್ನವರು ವಾಪಸ್ಸು ಮಾಡಲೇ ಇಲ್ಲ. ಅವರು ಪೂರ್ವ ಮತ್ತು ಪಶ್ಚಿಮ ಹ್ಯಾಪ್ಸ್‌ಬರ್ಗ್‌ಗಳ ಜೊತೆ ಮಾಡಿದ ವ್ಯವಹಾರಗಳಿಂದಾಗಿ ಒಟ್ಟಾರೆ ನಷ್ಟವಾದ ಹಣದ ಅಂದಾಜು ಎಂಟು ದಶಲಕ್ಷ ಫ್ಲಾರಿನ್‌ಗಳು....ಆದರೆ ಅವರಿಲ್ಲದಿದ್ದರೆ (ಫಗ್ಗರ್ಸ್‌ಗಳು) ಪ್ರಾಯಶಃ ಜರ್ಮನಿಯಲ್ಲಿನ ರಿಫ಼ರ್ಮೇಷನ್ ವಿರೋಧವಿಲ್ಲದೆ ಯಶಸ್ವಿಯಾಗುತ್ತಿತ್ತು. ಈ ಸದನದ ಅತ್ಯಂತ ಸಮರ್ಥ ಸದಸ್ಯರು ಒಂದು ಶತಮಾನ ಪರ್ಯಂತ ಶ್ರಮಿಸಿದರು, ಆದರೆ ಅವರ ಅಸಂಖ್ಯ ಉತ್ತರಾಧಿಕಾರಿಗಳಿಗೆ ಮಾತ್ರ ಬೆಲೆಬಾಳುವ ದೊಡ್ಡ ಪಾರ್ಚ್‌ಮೆಂಟಿನ ಹೊರೆ ಮತ್ತು ಸಿಕ್ಕಾಪಟ್ಟೆ ಅಡವಿಗೆ ಒಳಗಾಗಿದ್ದ ಭೂ ಆಸ್ತಿಯ ಹೊರತು ಬೇರೇನೂ ಉಳಿಯಲಿಲ್ಲ".

ಹೊಂದುವಂತಾಯಿತು; ಅದೇ ರೀತಿ ಹಿಟ್ಲರ್ ಅಧಿಕಾರ ಪಡೆಯಲು ಸಹಾಯ ಮಾಡಿದ್ದಕ್ಕಾಗಿ ಥೈಸೆನ್‌ಗೆ ಆದುದೂ ಇದೇ.

ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ ಧನಿಕವರ್ಗಕ್ಕಿರುವ ಅಧಿಕಾರದ ಬಗ್ಗೆ ಒಂದು ಕ್ಷಣ ಯೋಚಿಸೋಣ. ಕ್ಯಾಲಿಫೋರ್ನಿಯ ಅಥವಾ ಆಸ್ಟ್ರೇಲಿಯಗಳಲ್ಲಿ ಏಷಿಯಾಟಿಕ್ ಕಾರ್ಮಿಕ ಪದ್ಧತಿಯನ್ನು ಜಾರಿಗೆ ತರಲು, ಮೊದಮೊದಲಿಗೆ ಅಲ್ಪ ಪ್ರಮಾಣದಲ್ಲಿ ಹೊರತು, ಹೆಚ್ಚು ಸಾಧ್ಯವಾಗಲಿಲ್ಲ; ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕಲೂ ಅದಕ್ಕೆ ಸಾಧ್ಯವಾಗಲಿಲ್ಲ; ಬ್ರಿಟನ್ ಹೊರತು ಮಿಕ್ಕೆಡೆ ಶ್ರೀಮಂತರ ಮೇಲೆ ಭಾರಿ ತೆರಿಗೆಯನ್ನು ಹೊರಿಸುವುದರಿಂದ ಪಾರು ಮಾಡಲು ಅದಕ್ಕೆ ಸಾಧ್ಯವಾಗಲಿಲ್ಲ; ಹಾಗೆಯೇ, ಸಮಾಜವಾದಿ ಪ್ರಚಾರವನ್ನು ತಡೆಗಟ್ಟಲು ಅದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಸೋಷಿಯಲಿಸ್ಟರಿಂದ ಕೂಡಿದ ಸರ್ಕಾರವು ಸಮಾಜವಾದವನ್ನು ಜಾರಿಗೊಳಿಸುವುದನ್ನು ಅದು ತಡೆಗಟ್ಟಬಹುದು; ಅದೇನಾದರೂ ಹಟಮಾಡಿದರೆ, ಅದನ್ನು ಅಧಿಕಾರದಿಂದ ಕೆಳಗಿಳಿಸಲು ಬೇಕಾದ ಬಿಕ್ಕಟ್ಟು ಸೃಷ್ಟಿಯಾಗುವಂತೆಯೂ ವಿರುದ್ಧ ಪ್ರಚಾರವನ್ನೂ ಅದು ಕೈಗೊಳ್ಳಬಹುದು. ಈ ಕ್ರಮಗಳು ವಿಫಲವಾಗುವ ಸನ್ನಿವೇಶದಲ್ಲಿ, ಸಮಾಜವಾದವು ಸ್ಥಾಪಿತವಾಗದ ಹಾಗೆ ಮಾಡಲು ಅದು ನಾಗರಿಕ ಸಂಘರ್ಷವನ್ನು ಪ್ರಚೋದಿಸಬಹುದು. ಅಂದರೆ, ಸಮಸ್ಯೆಯು ಸರಳವಾದುದೂ ಜನಾಭಿಪ್ರಾಯವು ಖಚಿತವಾದುದೂ ಆಗಿದ್ದರೆ ಶ್ರೀಮಂತಪ್ರಭುತ್ವವು ಬಲಹೀನವಾಗುತ್ತದೆ; ಆದರೆ ಜನಾಭಿಪ್ರಾಯವು ಎಲ್ಲಿ ಖಚಿತವಾಗಿಲ್ಲವೋ ಅಥವಾ ಸಮಸ್ಯೆಯ ಸಂಕೀರ್ಣ ಸ್ವರೂಪದಿಂದಾಗಿ ಗೊಂದಲವಿದೆಯೋ ಅಲ್ಲಿ ಶ್ರೀಮಂತಪ್ರಭುತ್ವವು ಅಪೇಕ್ಷಿತ ರಾಜಕೀಯ ಫಲವನ್ನು ಹೊಂದಬಹುದು.

ಕಾರ್ಮಿಕ ಸಂಘಟನೆಗಳ ಅಧಿಕಾರವು ಶ್ರೀಮಂತರದಕ್ಕೆ ವ್ಯತಿರಿಕ್ತ ಸ್ವರೂಪದ್ದು. ಕಾರ್ಮಿಕ ಸಂಘಟನೆಗಳು ಕಪ್ಪುಜನರ ಶ್ರಮವನ್ನು ದೂರಮಾಡಬಹುದು, ತಮ್ಮ ವಿನಾಶವನ್ನು ತಪ್ಪಿಸಬಹುದು, ದುಬಾರಿ ವಾರಸುದಾರ ಶುಲ್ಕ ಹಾಗೂ ಆದಾಯ ತೆರಿಗೆಗಳನ್ನು ಜಾರಿಗೊಳಿಸಬಹುದು, ತಮ್ಮ ಪ್ರಚಾರಕ್ಕಷ್ಟೇ ಸೀಮಿತವಾದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಹುದು. ಆದರೆ ಅವರಿಗೆ ಇದುವರೆಗೂ ಸಮಾಜವಾದವನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ, ಅಥವಾ ತಮಗೆ ಇಷ್ಟವಾದ ಆದರೆ ದೇಶದ ಬಹುಸಂಖ್ಯಾತರ ವಿಶ್ವಾಸವನ್ನು ಕಳೆದುಕೊಂಡ ಸರ್ಕಾರಗಳನ್ನು ಅಧಿಕಾರದಲ್ಲಿ ಮುಂದುವರಿಯುವಂತೆ ಮಾಡಲು ಶಕ್ಯವಾಗಿಲ್ಲ.

ಹೀಗೆ ಪ್ರಜಾಪ್ರಭುತ್ವದಲ್ಲಿನ ರಾಜಕೀಯ ನಿರ್ಧಾರಗಳ ಮೇಲೆ ಆರ್ಥಿಕ ಸಂಘಟನೆಗಳ ಅಧಿಕಾರವು ಬೀರಬಹುದಾದ ಪ್ರಭಾವವು ಜನಾಭಿಪ್ರಾಯದಿಂದಾಗಿ ಸೀಮಿತಗೊಳ್ಳುತ್ತದೆ. ಅನೇಕ ಪ್ರಮುಖ ವಿಷಯಗಳ ಬಗ್ಗೆ ಜನಾಭಿಪ್ರಾಯವು, ತೀವ್ರ ಪ್ರಚಾರವಿದ್ದರೂ, ವ್ಯತ್ಯಾಸಗೊಳ್ಳಲು ತಿರಸ್ಕರಿಸುತ್ತದೆ. ಪ್ರಜಾಪ್ರಭುತ್ವವಿರುವೆಡೆಗಳಲ್ಲಿ ಬಂಡವಾಳಶಾಹಿಯ ವಿರೋಧಿಗಳು ಒಪ್ಪಿಕೊಳ್ಳಲು ಸಿದ್ಧವಿರುವ ಪ್ರಮಾಣಕ್ಕಿಂತ ಅಧಿಕವಾದ ವಾಸ್ತವ ಸತ್ಯಗಳಿರುತ್ತವೆ.

ಆರ್ಥಿಕ ಅಧಿಕಾರವು, ಕಾನೂನಿನಿಂದ ಕ್ರಮಬದ್ಧವಾಗಿರುವ ಮಟ್ಟಿಗೆ, ಅಂತಿಮವಾಗಿ ಆಧರಿಸುವುದು ಭೂಮಾಲೀಕತ್ವದ ಮೇಲೆಯೇ ಹೊರತು, ಆಧುನಿಕ ಸಮಾಜದಲ್ಲಿ ಅದರ ಮೇಲೆ ಅತ್ಯಂತ ಹೆಚ್ಚಿನ ಒಡೆತನವಿರುವ ನಾಮಮಾತ್ರ ಒಡೆಯರ ಮೇಲಲ್ಲ. ಊಳಿಗಮಾನ್ಯ ಪದ್ಧತಿಯಿದ್ದ ಕಾಲದಲ್ಲಿ, ಭೂಮಿಯ ಒಡೆತನ ಹೊಂದಿದ್ದವರಿಗೇ ಅಧಿಕಾರವಿರುತ್ತಿತ್ತು; 'ಸ್ಟ್ಯಾಚ್ಯೂಟ್ ಆಫ್ ಲೇಬರರರ್ಸ್'ನಂತಹ ಸಾಧನಗಳ ಅಥವಾ ವ್ಯವಸ್ಥಿತ ಕಗ್ಗೊಲೆಯಿಂದ ಹೊಸತಾಗಿ ಪಡೆದ ಆಧಿಕಾರದ ಮೂಲಕ ಅವರು ಕೂಲಿಯನ್ನು ನಿಗದಪಡಿಸಬಹುದಾಗಿತ್ತು. ಆದರೆ ಕೈಗಾರಿಕೀಕರಣವು ಬೆಳೆದಿರುವೆಡೆಗಳಲ್ಲಿ, ನಾಮಮಾತ್ರ ಭೂ ಒಡೆತನಕ್ಕಿಂತ ಸಾಲವು ಹೆಚ್ಚು ಬಲಿಷ್ಠವಾಗಿದೆ. ಭೂಮಾಲೀಕರು, ವಿವೇಕವಿದ್ದೋ ಇಲ್ಲದೆಯೋ, ಸಾಲಮಾಡುತ್ತಾರೆ, ಮತ್ತು ಆ ಮೂಲಕ ಬ್ಯಾಂಕ್‌ಗಳ ಮೇಲೆ ಅವಲಂಬಿತರಾಗುತ್ತಾರೆ. ಇದು ಸಾಮಾನ್ಯವಾದುದು, ಅಲ್ಲದೆ ಇದು ಉತ್ಪಾದನೆಯ ತಂತ್ರಗಳಲ್ಲಾದ ಬದಲಾವಣೆಗಳಿಂದಾದುದು ಎಂದು ಭಾವಿಸಲಾಗುತ್ತದೆ. ಆದರೆ ವಾಸ್ತವದಲ್ಲಿ, ಕೃಷಿತಂತ್ರಗಳು ಆಧುನಿಕವಾಗಿರದ ಇಂಡಿಯದಲ್ಲಿ ನಡೆದಿರುವುದರ ಮೇಲೆ ಹೇಳುವುದಾದರೆ, ಅದು ಕಾನೂನನ್ನು ಜಾರಿಗೊಳಿಸಲು ಸರ್ಕಾರವು ಹೊಂದಿರುವ ಅಧಿಕಾರ ಮತ್ತು ಸಂಕಲ್ಪಗಳ ಮೇಲೆಯೂ ಆಧರಿತವಾಗುತ್ತದೆ ಎಂದು ಹೇಳಬಹುದು. ಎಲ್ಲಿ ಕಾನೂನಿಗೆ ಪರಮಾಧಿಕಾರವಿಲ್ಲವೋ ಅಲ್ಲೆಲ್ಲ ಸಾಲ ಕೊಡುವವರನ್ನು ಸಾಲ ಪಡೆದವರು ಕೊಲೆಗೈಯುವುದೇನೂ ಅಪರೂಪವಲ್ಲ, ಹಾಗೆಯೇ ಅವರು ಸಾಲದ ದಾಖಲೆಗಳಿರುವ ಆಧಾರಗಳನ್ನೆಲ್ಲ ಸುಟ್ಟುಹಾಕುವುದೂ. ಭೂಮಿಯೊಡನೆ ಸಂಬಂಧ ಹೊಂದಿದವರೆಲ್ಲ, ರಾಜನಾಗಲೀ ರೈತನಾಗಲೀ, ಸಾಲ ನೀಡುವ ಪರಿಪಾಟ ಶುರುವಾದ ಕಾಲದಿಂದ, ಸಾಲಮಾಡುವ ಚಟಕ್ಕೆ ಬಲಿಯಾದವರೇ; ಆದರೆ ಕಾನೂನಿಗೆ ಗೌರವವಿರುವ ಮತ್ತು ಅದು ಜಾರಿಗೊಳ್ಳುವೆಡೆಗಳಲ್ಲಿ ಸಾಲಮಾಡಿದವನು ಬಡ್ಡಿ ತೆತ್ತು ತೆತ್ತು ಹಾಳಾಗುತ್ತಾನೆ. ಈ ಪರಿಸ್ಥಿತಿಯಿರುವ ಕಡೆಗಳಲ್ಲಿ, ಭೂ ಒಡೆತನದಿಂದ

ಪಡೆದ ಆರ್ಥಿಕ ಅಧಿಕಾರವು ಸಾಲ ಮಾಡಿದವನಿಂದ ಸಾಲ ಕೊಡುವವನಿಗೆ ವರ್ಗಾವಣೆಗೊಳ್ಳುತ್ತದೆ. ಆಧುನಿಕ ಸಂದರ್ಭದಲ್ಲಿ ಸಾಲಕೊಡುವುದು ಸಾಮಾನ್ಯವಾಗಿ ಬ್ಯಾಂಕೇ.

ಆಧುನಿಕ ಕಾಲದ ದೊಡ್ಡ ಸಂಸ್ಥೆಯಲ್ಲಿ ಒಡೆತನ ಹಾಗೂ ಅಧಿಕಾರಗಳು ಸದಾ ಕೂಡಿಕೊಂಡಿರುತ್ತವೆ ಎಂದು ಹೇಳಬರುವುದಿಲ್ಲ. ಇದಕ್ಕೆ ಸಂಬಂಧಿಸಿದ ಪರಿಸ್ಥಿತಿ ಸಂಯುಕ್ತ ಸಂಸ್ಥಾನಗಳಲ್ಲಿ ಹೇಗಿದೆ ಎಂಬುದನ್ನು ಕುರಿತು ಪರ್ಲ್ ಮತ್ತು ಮೀನ್ಸ್ ಅವರು ರಚಿಸಿರುವ *'ದಿ ಮಾಡರ್ನ್ ಕಾರ್ಪೋರೇಷನ್ ಅಂಡ್ ಪ್ರೈವೇಟ್ ಪ್ರಾಪರ್ಟಿ'* (೧೯೩೨) ಎಂಬ ಪ್ರಮುಖ ಕೃತಿಯಲ್ಲಿ ಅಧಿಕಾರಯುತವಾಗಿ ವಿವರಿಸಲಾಗಿದೆ. ಒಡೆತನವು ಕೇಂದ್ರಾಪಗಾಮಿಯಾದರೂ, ಆರ್ಥಿಕ ಅಧಿಕಾರವು ಮಾತ್ರ ಕೇಂದ್ರಗಾಮಿಯಾಗಿರುತ್ತದೆ ಎಂದು ಗ್ರಂಥದ ಲೇಖಕರು ವಾದಿಸುತ್ತಾರೆ; ಜಾಗರೂಕವೂ ತಲಸ್ಪರ್ಶಿಯೂ ಆದ ಪರಿಶೀಲನೆಯ ಬಳಿಕ, ಅಮೆರಿಕದ ಕೈಗಾರಿಕೆಯ ಅರ್ಧಭಾಗದ ಮೇಲೆ ಕೇವಲ ಎರಡು ಸಾವಿರ ಮಂದಿ ನಿಯಂತ್ರಣ ಹೊಂದಿದ್ದಾರೆ ಎಂಬ ತೀರ್ಮಾನಕ್ಕೆ ಅವರು ಬರುತ್ತಾರೆ (ಪು. ೩೩). ಆಧುನಿಕ ಯುಗದ ಕಾರ್ಯನಿರ್ವಹಣಾಧಿಕಾರಿಯು ಹಿಂದಿನ ಕಾಲದ ರಾಜ ಅಥವಾ ಪೋಪ್‌ನಂತೆಯೇ ಎಂದವರು ಹೇಳುತ್ತಾರೆ; ಅವರ ಪ್ರಕಾರ, ಅಲೆಕ್ಸಾಂಡರ್ ಮಹಾಶಯನಂತಹವರ ಬಗ್ಗೆ ತಿಳಿಯುವ ಮೂಲಕ ಅವನ ಸ್ವಭಾವವನ್ನು ಅರ್ಥಮಾಡಿಕೊಳ್ಳಬೇಕೇ ಹೊರತು, ಅವನು ಆಡಮ್ ಸ್ಮಿತ್‌ನ ಗ್ರಂಥಗಳಲ್ಲಿ ಉಲ್ಲೇಖಿತರಾದ ವ್ಯಾಪಾರಿಗಳ ಸಂತತಿಯವನೆಂದು ಪರಿಗಣಿಸುವುದರ ಮೂಲಕ ಅಲ್ಲ. ಈ ದೊಡ್ಡ ಆರ್ಥಿಕ ಸಂಘಟನೆಗಳಲ್ಲಿನ ಅಧಿಕಾರ ಕೇಂದ್ರೀಕರಣವು ಮಧ್ಯಯುಗೀನ ಚರ್ಚ್ ಅಥವಾ ರಾಷ್ಟ್ರಸರ್ಕಾರದಲ್ಲಿದ್ದುದಕ್ಕೆ ಸಂವಾದಿಯಾದುದು, ಸರ್ಕಾರಗಳೊಡನೆ ಈ ಸಂಘಟನೆಗಳು ಸರಿದೊರೆಯಾಗಿ ನಿಂತು ಪೈಪೋಟಿ ನಡೆಸುವ ರೀತಿಯದು ಎಂಬುದು ಅವರ ವಾದ.

ಉದಾಹರಣೆಗೆ, ರೈಲ್ವೆ ಕಂಪನಿಯೊಂದರ ಸಾಧಾರಣ ಷೇರುದಾರನೊಬ್ಬನಿಗೆ ಅದರ ಕಾರ್ಯನಿರ್ವಹಣೆಯಲ್ಲಿ ಯಾವುದೇ ಪಾತ್ರವಿರುವುದಿಲ್ಲ; ತಾತ್ವಿಕವಾಗಿ ಅವನಿಗಿರುವುದು ಪಾರ್ಲಿಮೆಂಟಿನ ಚುನಾವಣೆಯಲ್ಲಿ ಸಾಮಾನ್ಯ ಮತದಾರನಿಗೆ ದೇಶದ ಆಡಳಿತದಲ್ಲಿ ಎಷ್ಟು ಅಧಿಕಾರವಿದೆಯೋ ಸುಮಾರು ಅಷ್ಟೇ; ವಾಸ್ತವವಾಗಿ ಅವನಿಗಿರುವುದು ಇನ್ನೂ ಕಡಿಮೆ. ರೈಲ್ವೆಯ ಆರ್ಥಿಕ ಅಧಿಕಾರವಿರುವುದು ಕೆಲವೇ ಮಂದಿಯ ಕೈಲಿ; ಅಮೆರಿಕದಲ್ಲಾದರೆ ಅದು ಇರುವುದು ಒಬ್ಬ ವ್ಯಕ್ತಿಯ ಕೈನಲ್ಲಿಯೇ. ಅಭಿವೃದ್ಧಿಗೊಂಡ ದೇಶಗಳಲ್ಲಿ ಆರ್ಥಿಕ ಅಧಿಕಾರವು ಕೆಲವೇ ಮಂದಿಯಲ್ಲಿ

ಕೇಂದ್ರೀಕರಿಸಿರುತ್ತದೆ. ಕೆಲವು ವೇಳೆ ಇವರು, ಅಮೆರಿಕ, ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್‌ಗಳಲ್ಲಿಯಂತೆ, ಖಾಸಗಿ ಬಂಡವಾಳಗಾರರಾಗಿರುತ್ತಾರೆ; ಅವರು ಕೆಲವು ವೇಳೆ, ಜರ್ಮನಿ, ಇಟಲಿ ಮತ್ತು ರಷ್ಯಾಗಳಲ್ಲಿಯಂತೆ, ರಾಜಕಾರಣಿಗಳಾಗಿರುತ್ತಾರೆ. ಎರಡನೆಯ ಬಗೆಯನ್ನು ಕಾಣುವುದು ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳೆರಡೂ ಸೇರಿರುವ ಕಡೆಗಳಲ್ಲಿ. ಆರ್ಥಿಕ ಅಧಿಕಾರವು ಕೆಲವೇ ಮಂದಿಯಲ್ಲಿ ಕೇಂದ್ರೀಕರಣಗೊಳ್ಳುವ ಪ್ರವೃತ್ತಿಯು ಸಾಮಾನ್ಯವಾದುದು, ಆದರೇ ಈ ಪ್ರವೃತ್ತಿಯು ಕೇವಲ ಆರ್ಥಿಕ ಅಧಿಕಾರಕ್ಕೆ ಸೀಮಿತವಾದುದಾಗಿರದೆ, ಎಲ್ಲ ಬಗೆಯ ಅಧಿಕಾರಕ್ಕೂ ಅನ್ವಯಿಸುತ್ತದೆ. ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳೆರಡೂ ಯಾವ ವ್ಯವಸ್ಥೆಯಲ್ಲಿ ಒಂದುಗೂಡಿರುತ್ತದೆಯೋ ಅಲ್ಲಿ ಹಾಗಿರದ ಕಡೆಗಳಿಗಿಂತ ಹೆಚ್ಚಿನ ಪ್ರಗತಿ ಆಗಿರುತ್ತದೆ, ಹೇಗೆ ಪರಸ್ಪರ ಸ್ಪರ್ಧೆಯಲ್ಲಿ ತೊಡಗಿರುವ ಅನೇಕ ಸಣ್ಣ ಸಣ್ಣ ಉಕ್ಕು ತಯಾರಕರಿಗಿಂತ ಒಂದು ಉಕ್ಕು ಪ್ರಾಧಿಕಾರವು ಹೆಚ್ಚು ಪ್ರಗತಿಯನ್ನು ಸಾಧಿಸುತ್ತದೋ ಹಾಗೆಯೇ ಇದೂ. ಆದರೆ ಈಗಲೇ ನಿರಂಕುಶ ಪ್ರಭುತ್ವದ (ಟೊಟಾಲಿಟೇರಿಯನ್) ಬಗ್ಗೆ ಚರ್ಚಿಸಲು ನಾನು ತೊಡಗುವುದಿಲ್ಲ.

ಆರ್ಥಿಕ ಅಧಿಕಾರವನ್ನು ಹೊಂದಿರುವುದು ಸೈನಿಕ ಪ್ರಚಾರದ ಮೇಲೆ ನಿಯಂತ್ರಣ ಹೊಂದಲೂ ಕಾರಣವಾಗಬಹುದು, ಹಾಗೆಯೇ ಇದರ ವಿರುದ್ಧ ಪ್ರಕ್ರಿಯೆಯೂ ಅಷ್ಟೇ ಸಾಧ್ಯ. ಪ್ರಾಚೀನ ಪರಿಸ್ಥಿತಿಗಳಲ್ಲಿ, ವಿವಿಧ ದೇಶಗಳ ನಡುವಣ ಸಂಬಂಧಕ್ಕೆ ಸಂಬಂಧಿಸಿದಂತೆ, ಸೈನಿಕ ಅಧಿಕಾರದಿಂದ ಸಾಮಾನ್ಯವಾಗಿ ಮಿಕ್ಕೆಲ್ಲ ಅಧಿಕಾರಗಳೂ ಲಭ್ಯವಾಗುತ್ತಿದ್ದವು. ಅಲೆಕ್ಸಾಂಡರ್ ಪರ್ಷಿಯನ್ನರಷ್ಟು ಶ್ರೀಮಂತನಾಗಿರಲಿಲ್ಲ, ರೋಮನ್‌ರು ಕಾರ್ಥೇಜಿಯನ್ನರಷ್ಟು ಧನಿಕರಾಗಿರಲಿಲ್ಲ; ಆದರೆ ಯುದ್ಧಗಳಲ್ಲಿ ಗೆದ್ದ ಕಾರಣದಿಂದ ಈ ಜಯಶಾಲಿಗಳು ತಮ್ಮ ಶತ್ರುಗಳಿಗಿಂತ ಹೆಚ್ಚು ಧನಿಕರಾದರು. ತಮ್ಮ ಗೆಲವಿನ ಪರಂಪರೆಯ ಆರಂಭದಲ್ಲಿ ಮಹಮ್ಮದೀಯರು ಬೈಜಾಂಟಿಯನ್ನರಿಗಿಂತ ತುಂಬ ಬಡತನದಿಂದ ಕೂಡಿದ್ದರು, ಅಂತೆಯೇ ಟ್ಯೂಟೋನಿಕ್ ಆಕ್ರಮಣಕಾರರು ಪಾಶ್ಚಾತ್ಯ ಸಾಮ್ರಾಜ್ಯಕ್ಕಿಂತ ಬಡವರಾಗಿದ್ದರು. ಈ ಎಲ್ಲ ಪ್ರಸಂಗಗಳಲ್ಲಿಯೂ ಸೈನಿಕ ಅಧಿಕಾರವು ಮಿಕ್ಕೆಲ್ಲ ಬಗೆಯ ಅಧಿಕಾರದ ಮೂಲವಾಗಿತ್ತು. ಆದರೆ ಅರಬ್ ದೇಶದೊಳಗೆ, ಪ್ರವಾದಿ ಮತ್ತವನ ಕುಟುಂಬದ ಆರ್ಥಿಕ ಮತ್ತು ಸೈನಿಕ ಅಧಿಕಾರಗಳು ಬಂದದ್ದು ಪ್ರಚಾರದಿಂದ; ಹಾಗೆಯೇ ಪಶ್ಚಿಮದ ಚರ್ಚ್‌ನ ಅಧಿಕಾರ ಮತ್ತು ಸಂಪತ್ತುಗಳು.

ತಮ್ಮ ಆರ್ಥಿಕ ಪ್ರಾಬಲ್ಯದ ಕಾರಣದಿಂದ ಸೈನಿಕ ಅಧಿಕಾರವನ್ನು ಸ್ಥಾಪಿಸಿದ ಅನೇಕ ದೇಶಗಳ ನಿದರ್ಶನಗಳನ್ನು ಉಲ್ಲೇಖಿಸಬಹುದು.

ಪ್ರಾಚೀನ ಕಾಲದ ಗ್ರೀಕ್ ನೌಕಾಯಾನ ಕರಾವಳಿಯ ನಗರಗಳು ಹಾಗೂ ಕಾರ್ಥೇಜ್‌ಗಳು ಎದ್ದು ಕಾಣುವ ನಿದರ್ಶನಗಳು; ಮಧ್ಯಯುಗದಲ್ಲಾದರೆ, ಇಟಾಲಿಯನ್ ಗಣರಾಜ್ಯಗಳು; ಆಧುನಿಕ ಯುಗದಲ್ಲಿ, ಮೊದಲು ಹಾಲಂಡ್ ಆನಂತರ ಇಂಗ್ಲಂಡ್. ಈ ಎಲ್ಲ ನಿದರ್ಶನಗಳಲ್ಲಿಯೂ, ಕೈಗಾರಿಕಾ ಕ್ರಾಂತಿಯ ನಂತರದ ಇಂಗ್ಲಂಡ್ ಅನ್ನು ಸ್ವಲ್ಪಮಟ್ಟಿಗೆ ಹೊರತುಪಡಿಸಿ, ಆರ್ಥಿಕ ಅಧಿಕಾರವು ವಾಣಿಜ್ಯವನ್ನವಲಂಬಿಸಿದ್ದಿತೇ ಹೊರತು ಕಚ್ಚಾ ಸಾಮಗ್ರಿಗಳ ಒಡೆತನವನ್ನಲ್ಲ. ಕೆಲವು ನಗರಗಳೂ ದೇಶಗಳೂ ತಮ್ಮ ಕೌಶಲ ಮತ್ತು ಭೌಗೋಳಿಕ ಸೌಲಭ್ಯಗಳಿಂದಾಗಿ ಭಾಗಶಃ ವಾಣಿಜ್ಯ ಏಕಸ್ವಾಮ್ಯವನ್ನು ಗಳಿಸಿದವು. (ಇವುಗಳಲ್ಲಿ ಎರಡನೆಯ ಅಂಶವಷ್ಟೇ ಸಾಕಾಗಿರಲಿಲ್ಲ, ಹದಿನೇಳನೆಯ ಶತಮಾನದಲ್ಲಿ ಹೊಂದಿದ ಸ್ಪೈನ್‌ನ ಅವನತಿಯಿಂದ ಇದನ್ನು ಮನಗಾಣಬಹುದು). ವಾಣಿಜ್ಯದಿಂದ ಗಳಿಸಿದ ಸಂಪತ್ತನ್ನು ಸ್ವಲ್ಪಮಟ್ಟಿಗೆ ಕೂಲಿ ಸೈನಿಕರಿಗೆ ನೀಡಲು ವ್ಯಯಮಾಡಲಾಯಿತು, ಅದು ಸೈನಿಕ ಬಲವನ್ನು ಪಡೆಯುವ ಸಾಧನವಾಯಿತು. ಆದರೆ ಈ ವಿಧಾನದಲ್ಲಿ ಒಂದು ಕೊರತೆಯಿತ್ತು: ದಂಗೆ ಅಥವಾ ವ್ಯಾಪಕ ದ್ರೋಹಕಾರ್ಯ ನಡೆಯುವ ಸಂಭವವನ್ನು ಅದು ಒಡಲಲ್ಲೇ ಹುದುಗಿಸಿಕೊಂಡಿತ್ತು. ಈ ಕಾರಣದಿಂದಿಗಾಯೇ ಮೆಕಿಯವಿಲ್ಲಿ ಅದನ್ನು ಒಪ್ಪುವುದಿಲ್ಲ, ಅದರ ಬದಲು ನಾಗರಿಕರಿಂದ ಕೂಡಿದ ಪರ್ಯಾಯ ಸೈನ್ಯರಚನೆಯನ್ನವನು ಸೂಚಿಸುತ್ತಾನೆ. ವಾಣಿಜ್ಯದಿಂದ ಬಲಿಷ್ಠವಾದ ದೊಡ್ಡ ದೇಶಗಳ ಮಟ್ಟಿಗೆ ಈ ಸಲಹೆ ಸೂಕ್ತವಾದುದೇ ಹೊರತು, ಗ್ರೀಕ್ ನಗರ ರಾಷ್ಟ್ರಗಳು ಅಥವಾ ಇಟಾಲಿಯನ್ ಗಣರಾಜ್ಯಗಳ ವಿಷಯದಲ್ಲಿ ಅಲ್ಲ. ವಾಣಿಜ್ಯಾವಲಂಬಿಯಾದ ಆರ್ಥಿಕ ಅಧಿಕಾರವು ವಿಶಾಲ ಸಮುದಾಯದಲ್ಲಿ ಅಥವಾ ತನ್ನ ನೆರೆಹೊರೆಯವಕ್ಕಿಂತ ಹೆಚ್ಚು ನಾಗರಿಕವಾದ ದೇಶದಲ್ಲಿ ಸ್ಥಿರವಾಗಿರಬಹುದು, ಅಷ್ಟೆ.

ಆದರೆ ವಾಣಿಜ್ಯ ಈಗ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿದೆ. ಸಂಪರ್ಕ ಸಾಧನಗಳ ಆಧುನೀಕರಣದಿಂದಾಗಿ ಭೌಗೋಳಿಕ ಪರಿಸ್ಥಿತಿಯು ಹಿಂದಿಗಿಂತ ಈಗ ಕಡಿಮೆ ಪ್ರಾಮುಖ್ಯವುಳ್ಳದ್ದಾಗಿದೆ; ಮತ್ತು, ಸಾಮ್ರಾಜ್ಯಶಾಹಿ ಮನೋಭಾವದಿಂದಾಗಿ ಪ್ರಮುಖ ದೇಶಗಳಿಗೆ ವಿದೇಶಿ ವಾಣಿಜ್ಯದ ಆವಶ್ಯಕತೆಯು ಹಿಂದಿಗಿಂತಲೂ ಈಗ ಕಡಿಮೆಯಾಗಿದೆ. ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ, ಕಚ್ಚಾ ಸಾಮಗ್ರಿಗಳು ಮತ್ತು ಆಹಾರದ ಒಡೆತನವೇ ಈಗ ಆರ್ಥಿಕ ಅಧಿಕಾರದ ಬಹು ಪ್ರಮುಖ ರೂಪವಾಗಿದೆ; ಅಲ್ಲದೆ, ಬಹು ಮುಖ್ಯ ಕಚ್ಚಾ ಸಾಮಗ್ರಿಗಳೆಂದರೆ ಯುದ್ಧಸಂಬಂಧಿಯಾದವು. ಹೀಗಾಗೀ ಈಗ ಸೈನಿಕ ಮತ್ತು ಆರ್ಥಿಕ ಅಧಿಕಾರಗಳ ನಡುವೆ ವ್ಯತ್ಯಾಸ ಮಾಡುವುದೇ

ಕಷ್ಟ. ನಿದರ್ಶನಕ್ಕೆ ತೈಲದ ವಿಷಯವನ್ನೇ ತೆಗದುಕೊಳ್ಳಿ; ತೈಲವಿಲ್ಲದೆ ದೇಶವೊಂದು ಯುದ್ಧದಲ್ಲಿ ತೊಡಗಲಾರದು, ಹೋರಾಟದಿಂದಲ್ಲದೆ ತೈಲಮೂಲಗಳ ಒಡೆತನ ಸಾಧ್ಯವಾಗದು. ಎರಡರಲ್ಲಿ ಯಾವುದೊಂದೇ ಯಶಸ್ವಿಯಾಗದು. ಪರ್ಷಿಯದ ತೈಲಸಂಪತ್ತು ಸಮರ್ಪಕ ಸೈನ್ಯಬಲವಿಲ್ಲದ ಕಾರಣ ಅದಕ್ಕೆ ನಿಷ್ಪ್ರಯೋಜಕವಾಗಿತ್ತು, ಹಾಗೆಯೇ ಜರ್ಮನಿಯು ತೈಲವನ್ನು ಸಂಪಾದಿಸದಿದ್ದರೆ ಜರ್ಮನರಿಗೆ ಸೈನ್ಯಬಲದಿಂದ ಏನೂ ಉಪಯೋಗವಾಗುವಂತಿರಲಿಲ್ಲ. ಆಹಾರದ ವಿಷಯದಲ್ಲಿಯೂ ಇಂತಹುದೇ ಪರಿಸ್ಥಿತಿ ಇದೆ: ಒಂದು ಪ್ರಬಲ ಯುದ್ಧಸಾಧನಕ್ಕೆ ಆಹಾರೋತ್ಪಾದನೆಗಿಂತ ವಿಭಿನ್ನವಾದ ರೀತಿಯಲ್ಲಿ ರಾಷ್ಟ್ರಸಾಮರ್ಥ್ಯವನ್ನು ಬಳಸಿಕೊಳ್ಳುವ ಆವಶ್ಯಕತೆಯಿರುತ್ತದೆ, ಹೀಗಾಗಿ ಅದು ಫಲವತ್ತಾದ ಪ್ರದೇಶಗಳ ಮೇಲೆ ವ್ಯಾಪಕ ಸೈನಿಕ ನಿಯಂತ್ರಣವನ್ನು ಹೊಂದುವುದು ಅನಿವಾರ್ಯವಾಗುತ್ತದೆ.

ಹಿಂದೆಂದೂ ಆರ್ಥಿಕ ಮತ್ತು ಸೈನಿಕ ಅಧಿಕಾರಗಳು ಈಗಿನಷ್ಟು ಪರಸ್ಪರಾವಲಂಬಿಗಳಾಗಿರಲಿಲ್ಲ. ಕೈಗಾರಿಕೆಯಲ್ಲಿ ಮುಂದುವರಿಯದೆ ಹಾಗೂ ಕಚ್ಚಾ ಸಾಮಗ್ರಿಗಳು ಮತ್ತು ಆಹಾರದ ಸಮೃದ್ಧಿಯಿಲ್ಲದೆ ಯಾವ ದೇಶವೂ ಪ್ರಬಲವಾಗಲಾರದು. ಅದಕ್ಕೆ ವ್ಯತಿರಿಕ್ತವಾಗಿ, ತಮ್ಮಲ್ಲಿ ಆಂತರಿಕವಾಗಿ ಲಭ್ಯವಿಲ್ಲದ ಕಚ್ಚಾ ಸಾಮಗ್ರಿಯಂತಹ ವಸ್ತುಗಳ ಮೇಲಿನ ಒಡೆತನವು ದೇಶಗಳಿಗೆ ಸಾಧ್ಯವಾಗುವುದು ಸೈನಿಕ ಬಲದ ಮೂಲಕ. ಯುದ್ಧಕಾಲದಲ್ಲಿ ಜರ್ಮನರು ರುಮೇನಿಯದ ತೈಲ ಮತ್ತು ಉಕ್ರೇನ್‌ನ ಬೆಳೆಗಳ ಮೇಲೆ ಜಯ ಸಾಧಿಸಿದರು; ತಮ್ಮ ವಶವರ್ತಿ ಪ್ರದೇಶಗಳಿಂದ ಕಚ್ಚಾ ಸಾಮಗ್ರಿಗಳನ್ನು ಪಡೆಯುವ ದೇಶಗಳು ಅಲ್ಲಿ ತಮ್ಮದೇ ಅಥವಾ ಜೊತೆಗಾರರ ಸೈನಿಕ ಬಲದಿಂದ ವಸಾಹತುಗಳನ್ನು ಸ್ಥಾಪಿಸಿರುತ್ತಾರೆ.

ರಾಷ್ಟ್ರೀಯ ಅಧಿಕಾರದಲ್ಲಿ ಪ್ರಚಾರವು ವಹಿಸುವ ಪಾತ್ರವು ಶಿಕ್ಷಣವು ಹೆಚ್ಚು ಹೆಚ್ಚು ವ್ಯಾಪಕವಾದಂತೆಲ್ಲ ಹೆಚ್ಚುತ್ತಿದೆ. ಒಂದು ದೇಶವು ಆಧುನಿಕ ಯುದ್ಧಗಳಲ್ಲಿ ಗೆಲವು ಸಾಧಿಸಬೇಕಾದರೆ ಅದರಲ್ಲಿನ ಬಹುಮಂದಿ ಕಷ್ಟಗಳನ್ನು ಅನುಭವಿಸಲು ಸಿದ್ಧರಿರಬೇಕು ಹಾಗೂ ಹೆಚ್ಚು ಮಂದಿ ಸಾಯಲೂ ಸಿದ್ಧರಿರಬೇಕು. ಈ ಮನೋಭಾವವನ್ನು ಸೃಷ್ಟಿಸಲು ಯುದ್ಧವು ಬಹು ಮುಖ್ಯವಾದುದು, ಹುತಾತ್ಮರಾಗಲು ಸಿದ್ಧರಾಗಿರಬೇಕಾದಷ್ಟು ಮುಖ್ಯವಾದುದು ಎಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬಿತ್ತಬೇಕು. ಮಹಾಯುದ್ಧದಲ್ಲಿ ಒಕ್ಕೂಟಕ್ಕೆ ಗೆಲವು ದೊರೆಯುವಲ್ಲಿ ಪ್ರಚಾರದ ಪಾತ್ರ ಹಿರಿದಾಗಿತ್ತು, ೧೯೧೮–೨೦ ರಲ್ಲಿ ಸೋವಿಯತ್ ದೇಶದ ಗೆಲವಿನಲ್ಲಿ ಅದರ ಪಾತ್ರ ಏಕೈಕ ಎನ್ನಬಹುದಾದಷ್ಟು ದೊಡ್ಡದು. ಸೈನಿಕ ಮತ್ತು ಆರ್ಥಿಕ ಅಧಿಕಾರಗಳ ಹೊಂದಾಣಿಕೆಯುಂಟಾಗಲು ಸಹಕಾರಿಯಾದ ಕಾರಣಗಳೇ

ಇವೆರಡೂ ಒಗ್ಗೂಡಲು ಪ್ರಚಾರದ ಬಲದಿಂದ ಕಾರ್ಯಶೀಲವಾಗುತ್ತಿವೆ. ಹಾಗೆ ನೋಡಿದರೆ, ಈಗ ಎಲ್ಲ ಬಗೆಯ ಅಧಿಕಾರಗಳೂ ಒಂದೇ ಸಂಘಟನೆಯಲ್ಲಿ, ಅದು ಅನಿವಾರ್ಯವಾಗಿ ಸರ್ಕಾರವೇ ಆಗಿರಬೇಕು, ಒಗ್ಗೂಡುವ ಪ್ರವೃತ್ತಿ ಸಾಮಾನ್ಯವಾಗಿ ತೋರುತ್ತಿದೆ. ವಿರುದ್ಧ ಶಕ್ತಿಗಳು ಕ್ರಿಯಾಶೀಲವಾಗುವವರೆಗೂ ವಿವಿಧ ಬಗೆಯ ಅಧಿಕಾರಗಳ ನಡುವಣ ವ್ಯತ್ಯಾಸವು ಕೇವಲ ಐತಿಹಾಸಿಕ ಸಂಗತಿಗಳಾಗಿ ಉಳಿಯುತ್ತವೆ.

ಈ ಸನ್ನಿವೇಶದಲ್ಲಿ, ಮಾರ್ಕ್ಸಿಸಂ ಪರಿಚಯಿಸಿರುವ ಒಂದು ದೃಷ್ಟಿಕೋನವನ್ನು ಕುರಿತು ನಾವು ಆಲೋಚಿಸಬೇಕು, ಅದೆಂದರೆ ಬಂಡವಾಳಶಾಹಿಯು ವರ್ಗಕಲಹವನ್ನು ಸೃಷ್ಟಿಸುತ್ತದೆ ಮತ್ತು ಅದು ಕೊನೆಯಲ್ಲಿ ಮಿಕ್ಕೆಲ್ಲ ಬಗೆಯ ಸಂಘರ್ಷಗಳಿಗಿಂತ ಮಿಗಿಲಾದುದಾಗುತ್ತದೆ ಎಂಬುದು. ಮಾರ್ಕ್ಸ್‌ನನ್ನು ವ್ಯಾಖ್ಯಾನಿಸುವುದು ಸುಲಭವಲ್ಲ, ಆದರೆ ಶಾಂತಿಕಾಲದಲ್ಲಿ ಎಲ್ಲ ಆರ್ಥಿಕ ಅಧಿಕಾರವೂ ಭೂಮಾಲೀಕರಿಗೂ ಬಂಡವಾಳದಾರರಿಗೂ ಸೇರಿ ಅವರು ಆತ್ಯಂತಿಕ ನಿಯಂತ್ರಣವನ್ನು ಸಾಧಿಸುತ್ತಾರೆ, ಮತ್ತು ಆ ಮೂಲಕ ಶ್ರಮಿಕವರ್ಗವು ಬಂಡಾಯವೇಳುವ ಪರಿಸ್ಥಿತಿಯನ್ನು ಸೃಷ್ಟಿಸುತ್ತಾರೆ ಎಂಬುದು ಅವನ ಆಲೋಚನೆಯಾಗಿರಬೇಕು. ಶ್ರಮಿಕವರ್ಗವೆಂದರೆ ಬಹುಸಂಖ್ಯಾತರಾದ್ದರಿಂದ ಅವರು ಒಗ್ಗೂಡಿದರೆ ಈ ಸಂಘರ್ಷದಲ್ಲಿ ಬಹು ಬೇಗ ಗೆಲವು ಸಾಧಿಸುತ್ತಾರೆ ಹಾಗೂ ಭೂಮಿ ಮತ್ತು ಬಂಡವಾಳಗಳಿಂದ ಒದಗುವ ಆರ್ಥಿಕ ಅಧಿಕಾರವನ್ನು ಇಡೀ ಸಮಾಜಕ್ಕೆ ವರ್ಗಾಯಿಸುವ ವ್ಯವಸ್ಥೆಯೊಂದನ್ನು ಸ್ಥಾಪಿಸುತ್ತಾರೆ. ಇದೇ ಮಾರ್ಕ್ಸ್‌ನ ಸಿದ್ಧಾಂತವೆಂಬುದು ಸರಿಯೋ ಅಲ್ಲವೋ, ಆದರೆ ಸ್ಥೂಲವಾಗಿ ಇವತ್ತಿನ ಕಮ್ಯುನಿಸ್ಟರ ನಿಲವು ಇದೇ ಆಗಿರುವುದರಿಂದ, ಅದನ್ನು ನಾವು ಪರಿಶೀಲಿಸಬೇಕಾಗಿದೆ.

ಉದ್ಭವವಾಗುವ ಎರಡನೆಯ ಪ್ರಶ್ನೆಯೆಂದರೆ: ಬಂಡವಾಳದಾರರು ವಾಸ್ತವವಾಗಿ ಆತ್ಯಂತಿಕ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತಾರೆಯೇ ಎಂಬುದು. ಅವರು ವಿವೇಕಿಗಳಾಗಿದ್ದರೆ, ಮಾರ್ಕ್ಸ್ ಆಲೋಚಿಸಿದ ಪರಿಣಾಮಗಳ ಕಾರಣವಾಗಿಯೇ ಹಾಗೆ ಮಾಡಲಾರರು. ತಮ್ಮ ಲಾಭದ ಒಂದಂಶವನ್ನು ಕಾರ್ಮಿಕರಿಗೂ ನೀಡಲು ತಯಾರಿದ್ದರೆ ಅವರು ದಂಗೆಯೇಳುವುದ್ನು ತಡೆಗಟ್ಟಬಹುದು; ಇದಕ್ಕೆ ಕೊಡಬಹುದಾದ ಎದ್ದು ಕಾಣುವ ನಿದರ್ಶನವೆಂದರೆ ಅಮೆರಿಕದ್ದು; ಅಲ್ಲಿನ ಕುಶಲಕಾರ್ಮಿಕರು ಸಾಮಾನ್ಯವಾಗಿ ಸಾಂಪ್ರದಾಯಿಕ ಮನೋಭಾವದವರು.

ಶ್ರಮಿಕವರ್ಗವೇ ಸಮಾಜದ ಬಹುಸಂಖ್ಯಾತರು ಎಂಬ ಕಲ್ಪನೆಯೇ ಪ್ರಶ್ನಾರ್ಹವಾದದ್ದು. ಕೃಷಿಪ್ರಧಾನ ದೇಶಗಳ ಮಟ್ಟಿಗಂತೂ ಇದು ಖಂಡಿತವಾಗಿ ನಿಜವಲ್ಲ, ಅಲ್ಲಿ ರೈತ ಒಡೆತನ ಮುಖ್ಯವಾಗಿರುತ್ತದೆ. ನೆಲೆಗೊಂಡ ಸಂಪತ್ತು ಹೆಚ್ಚಿರುವ ದೇಶಗಳಲ್ಲಿ ಬಹು ಜನರು, ಆರ್ಥಿಕ ದೃಷ್ಟಿಕೋನದಿಂದ ನೋಡಿದರೆ, ರಾಜಕೀಯವಾಗಿ ಶ್ರೀಮಂತರ ಪರವಾಗಿರುತ್ತಾರೆ, ಏಕೆಂದರೆ ಅವರ ಕೆಲಸವು ಭೋಗಸಾಮಗ್ರಿಗಳ ಮೇಲೆ ಅವಲಂಬಿತವಾಗಿರುತ್ತದೆ. ವರ್ಗಸಂಘರ್ಷವೇನಾದರೂ ಸಂಭವಿಸಿದರೆ ಶ್ರಮಿಕವರ್ಗಕ್ಕೆ ಗೆಲವು ಸಿಕ್ಕುವುದು ಖಚಿತವೇನಲ್ಲ.

ಕೊನೆಯದಾಗಿ, ಸಂದಿಗ್ಧ ಸಮಯದಲ್ಲಿ ಬಹು ಸಂಖ್ಯಾತ ಜನರು ತಮ್ಮ ನಿಷ್ಠೆಯನ್ನು ದೇಶದ ಬಗ್ಗೆ ತೋರಿಸುತ್ತಾರೆಯೇ ವಿನಾ ವರ್ಗದ ಬಗ್ಗೆ ಅಲ್ಲ. ಎಲ್ಲ ಸಂದರ್ಭಗಳಲ್ಲೂ ಇದು ನಿಜವಲ್ಲದಿರಬಹುದು, ಆದರೆ ೧೯೧೪ ರಿಂದೀಚೆಗೆ ಅದು ಬದಲಾದಂತೆ ಕಾಣಿಸದು, ಆಗ ಬಹುತೇಕ ನಾಮಮಾತ್ರ ಅಂತಾರಾಷ್ಟ್ರೀಯವಾದಿಗಳೆಲ್ಲ ದೇಶಭಕ್ತಿಯುಳ್ಳವರೂ ಯುದ್ಧಾಸಕ್ತರೂ ಆಗಿಬಿಟ್ಟರು. ಹೀಗಾಗಿ ವರ್ಗಸಂಘರ್ಷವೆಂಬುದು ದೂರ ಭವಿಷ್ಯದಲ್ಲಿ ಸಂಭವಿಸಬಹುದಾದದ್ದೇ ಹೊರತು, ರಾಷ್ಟ್ರೀಯ ಯುದ್ಧಗಳ ಅಪಾಯವು ಹೆಚ್ಚಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಸಂಭವಿಸಬಹುದೆಂದು ನಿರೀಕ್ಷಿಸಲಾಗದು.

ಈಗ ಸ್ಪೈನ್‌ನಲ್ಲಿ ನಡೆಯುತ್ತಿರುವ ಅಂತರ್ಯುದ್ಧ ಹಾಗೂ ಇತರ ದೇಶಗಳ ಮೇಲೆ ಅದರಿಂದಾಗಿರುವ ಪರಿಣಾಮಗಳನ್ನು ನೋಡಿದರೆ, ವರ್ಗಸಂಘರ್ಷವು ರಾಷ್ಟ್ರೀಯತೆಯನ್ನು ಆಧರಿಸಿರುತ್ತದೆ ಎಂಬುದು ಸಾಬೀತಾಗಿದೆ ಎನ್ನಬಹುದು. ಆದರೆ, ಘಟನಾವಳಿಗಳು ಈ ಅಭಿಪ್ರಾಯಕ್ಕೆ ಪೋಷಕವಾಗಿದೆ ಎಂದು ನಾನು ಹೇಳಲಾರೆ. ಜರ್ಮನಿ ಮತ್ತು ಇಟಲಿಗಳು ಫ್ರಾನ್ಸ್ ಪರವಾಗಿರಲು ಬೇಕಾದ ರಾಷ್ಟ್ರೀಯತೆಯ ನೆಲೆಯಿದ್ದರೂ, ಇಂಗ್ಲಂಡ್ ಮತ್ತು ಫ್ರಾನ್ಸ್‌ಗಳಿಗೂ ಅದನ್ನು ವಿರೋಧಿಸಲು ಬೇಕಾದ ರಾಷ್ಟ್ರೀಯತೆಯ ಆಧಾರವಿದೆ. ಬ್ರಿಟನ್‌ಗಿರುವ ಫ್ರಾನ್ಸ್ ವಿರೋಧಿಭಾವನೆಯು ಸರ್ಕಾರದ ಧೋರಣೆಗೆ ಬ್ರಿಟಿಷ್ ಹಿತಾಸಕ್ತಿಗಳಷ್ಟೇ ಕಾರಣವಾಗಿದ್ದರೆ ಎಷ್ಟಿರುತ್ತಿತ್ತೋ, (ಏಕೆಂದರೆ ಕನ್ಸರ್ವೇಟಿವ್‌ಗಳು ಸಹಜವಾಗಿ ಆ ಬಗ್ಗೆ ಸಹಾನುಭೂತಿಪರರಾಗಿರುತ್ತಾರೆ) ಅದಕ್ಕಿಂತ ಇಲ್ಲಿಯವರೆಗೆ ತುಂಬ ಕಡಿಮೆ ಎಂಬುದು ನಿಜ. ಇಷ್ಟಾದರೂ, ಮೊರಾಕೋದ ಅದಿರು ಅಥವಾ ಮೆಡಿಟರೇನಿಯನ್‌ನಲ್ಲಿನ ನೌಕಾನಿಯಂತ್ರಣದಂತಹ ವಿಷಯಗಳು ಎದುರಾದರೆ, ಬ್ರಿಟಿಷ್ ಹಿತಾಸಕ್ತಿಗಳು ರಾಜಕೀಯ ಸಹಾನುಭೂತಿಯನ್ನು ಮೀರಿ ನಿಲ್ಲುತ್ತವೆ. ದೊಡ್ಡ ದೇಶಗಳು, ರಷ್ಯಾದ ಕ್ರಾಂತಿಯು ನಡೆದಿದ್ದರೂ,

೧೯೧೪ ಕ್ಕೆ ಹಿಂದಿದ್ದಂತಹ ರೀತಿಯಲ್ಲೇ ಮತ್ತೆ ಒಗ್ಗೂಡಿವೆ. ಉದಾರವಾದಿಗಳು ಝಾರ್‌ಗಳನ್ನು ಇಷ್ಟಪಡುವುದಿಲ್ಲ, ಕನ್ಸರ್ವೇಟಿವ್‌ಗಳು ಸ್ಟಾಲಿನ್ ಅನ್ನು ಇಷ್ಟಪಡುವುದಿಲ್ಲ; ಆದರೆ ಸರ್ ಇ. ಗ್ರೇ ಆಗಲೀ ಈಗಿನ ಸರ್ಕಾರವಾಗಲೀ ಅಭಿರುಚಿಗೆ ಸಂಬಂಧಿಸಿದ ಇಂತಹ ಅಂಶವು ಬ್ರಿಟಿಷ್ ಹಿತಾಸಕ್ತಿಗಳನ್ನು ಕಾಪಾಡುವ ಪ್ರಯತ್ನದಲ್ಲಿ ಮಧ್ಯಪ್ರವೇಶ ಮಾಡಲು ಆಸ್ಪದ ಕೊಡುವುದಿಲ್ಲ.

ಈ ಅಧ್ಯಾಯದಲ್ಲಿ ಮಂಡಿಸಿದ ವಾದವನ್ನು ಈ ರೀತಿ ಸಂಗ್ರಹಿಸಬಹುದು: ಸೈನಿಕ ಘಟಕದ (ಅದು ಅನೇಕ ಸ್ವತಂತ್ರ ದೇಶಗಳಿಂದ ಕೂಡಿರಬಹುದು) ಆರ್ಥಿಕ ಅಧಿಕಾರವು (ಅ) ತನ್ನ ಪ್ರದೇಶವನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ, (ಆ) ಇತರ ದೇಶಗಳ ಪ್ರದೇಶಗಳ ಬಗ್ಗೆ ಹೆದರಿಕೆಯುಂಟುಮಾಡುವ ಸಾಮರ್ಥ್ಯ, (ಇ) ಕಚ್ಚಾ ಸಾಮಗ್ರಿಗಳು, ಆಹಾರ ಮತ್ತು ಕೈಗಾರಿಕಾ ಕೌಶಲ ಇವುಗಳ ಒಡೆತನ, (ಈ) ಇತರ ಸೈನಿಕ ಘಟಕಗಳಿಗೆ ಬೇಕಾದ ವಸ್ತುಗಳು ಮತ್ತು ಕೌಶಲವನ್ನು ಸರಬರಾಜು ಮಾಡಬಲ್ಲ ಸಾಮರ್ಥ್ಯ, ಇವುಗಳನ್ನು ಅವಲಂಬಿಸಿರುತ್ತದೆ. ಈ ಎಲ್ಲದರಲ್ಲಿ ಸೈನಿಕ ಮತ್ತು ಆರ್ಥಿಕ ಅಂಶಗಳು ಬೇರ್ಪಡಿಸಲಾಗದ ರೀತಿಯಲ್ಲಿ ಮಿಳಿತವಾಗಿರುತ್ತವೆ; ಉದಾಹರಣೆಗೆ, ಭಾರಿ ಸೈನಿಕ ಸಾಮರ್ಥ್ಯಕ್ಕೆ ಆವಶ್ಯಕವಾದ ಚೈನಾದಲ್ಲಿರುವ ಕಚ್ಚಾ ಸಾಮಗ್ರಿಗಳ ಒಡೆತನವನ್ನು ಜಪಾನ್ ಶುದ್ಧ ಸೈನಿಕ ಸಾಧನದ ಮೂಲಕ ತನ್ನದಾಗಿಸಿಕೊಂಡಿದೆ; ಅದರಂತೆಯೇ ಇಂಗ್ಲಂಡ್ ಮತ್ತು ಫ್ರಾನ್ಸ್‌ಗಳು ಸಮೀಪ ಪ್ರಾಚ್ಯದಲ್ಲಿನ ತೈಲದ ಮೇಲೆ ಒಡೆತನವನ್ನು ಸ್ಥಾಪಿಸಿಕೊಂಡಿವೆ. ಆದರೆ ಗಣನೀಯ ಪ್ರಮಾಣದ ಕೈಗಾರಿಕಾಭಿವೃದ್ಧಿಯು ಈಗಾಗಲೇ ನಡೆದಿರದಿದ್ದರೆ ಇವೆರಡೂ ಸಾಧ್ಯವಾಗುತ್ತಿರಲಿಲ್ಲ. ಯಾಂತ್ರೀಕೃತಗೊಂಡಷ್ಟೂ ವೈಜ್ಞಾನಿಕವಾದಷ್ಟೂ ಯುದ್ಧಗಳ ಆರ್ಥಿಕ ಪ್ರಾಮುಖ್ಯವು ಹೆಚ್ಚುತ್ತ ಹೋಗುತ್ತದೆ, ಆದರೆ ಹೆಚ್ಚು ಆರ್ಥಿಕ ಸಂಪನ್ಮೂಲಗಳಿದ್ದ ಪಕ್ಷಕ್ಕೇ ಗೆಲವು ದೊರೆಯುತ್ತದೆಂದು ಊಹಿಸುವುದು ಸಮಂಜಸವಾಗುವುದಿಲ್ಲ. ರಾಷ್ಟ್ರೀಯ ಭಾವನೆಯನ್ನು ತೀವ್ರಗೊಳಿಸುವಲ್ಲಿ ಆರ್ಥಿಕ ಅಂಶಗಳಷ್ಟೇ ಪ್ರಚಾರದ ಪ್ರಾಮುಖ್ಯವೂ ಇರುತ್ತದೆ.

ಒಂದು ದೇಶದ ಆಂತರಿಕ ಆರ್ಥಿಕ ಸಂಬಂಧಗಳಲ್ಲಿ ಇತರರಿಂದ ಸಂಪತ್ತನ್ನು ಕಬಳಿಸುವ ಮಾರ್ಗಗಳಲ್ಲಿ ಕಾನೂನು ಅನೇಕ ಮಿತಿಗಳನ್ನೊಡ್ಡುತ್ತದೆ. ಇತರರು ಬಯಸುವ ವಸ್ತುಗಳ ಮೇಲೆ ಒಬ್ಬ ವ್ಯಕ್ತಿಯೋ ಒಂದು ಗುಂಪೋ ಏಕಸ್ವಾಮ್ಯವನ್ನು ಹೊಂದಿರಬೇಕು. ಏಕಸ್ವಾಮ್ಯಗಳನ್ನು ಕಾನೂನೇ ಸೃಷ್ಟಿಸಬಹುದು; ಉದಾಹರಣೆಗೆ,

ಪೇಟೆಂಟ್‌ಗಳು, ಕಾಪಿರೈಟ್‌ಗಳು ಮತ್ತು ಭೂಮಿಯ ಒಡೆತನ. ವಿಶ್ವಸ್ಥ ಸಂಸ್ಥೆಗಳು ಮತ್ತು ಕಾರ್ಮಿಕ ಸಂಘಟನೆಗಳಲ್ಲಿರುವಂತೆ ಅದನ್ನು ಅನೇಕ ಕಾನೂನುಗಳು ಸೇರಿ ನಿರ್ಮಿಸಬಹುದು. ಚೌಕಾಸಿಯಿಂದ ಖಾಸಗಿ ಅಥವಾ ಗುಂಪುಗಳು ಸೆಳೆಯಬಹುದಾದನ್ನು ಬಿಟ್ಟು, ತನಗೆ ಆವಶ್ಯಕವೆನಿಸಿದುದನ್ನು ಬಲವಂತವಾಗಿ ವಶಪಡಿಸಿಕೊಳ್ಳುವ ಹಕ್ಕನ್ನು ಸರ್ಕಾರವೇ ಉಳಿಸಿಕೊಂಡಿರುತ್ತದೆ. ಇಡೀ ದೇಶಕ್ಕಲ್ಲದಿದ್ದರೂ ತಮಗೆ ಅನುಕೂಲಕರವಾಗುವಂತೆ ಪ್ರಭಾವಶಾಲೀ ಖಾಸಗಿ ಗುಂಪುಗಳು ಈ ಹಕ್ಕನ್ನು ಚಲಾಯಿಸುವಂತೆಯೂ, ಅಂತೆಯೇ ಯುದ್ಧವನ್ನು ಕೈಗೊಳ್ಳುವಂತೆಯೂ, ಸರ್ಕಾರವನ್ನು ಪ್ರಚೋದಿಸಬಹುದು; ಹಾಗೆಯೇ, ತಮಗೆ ಅನುಕೂಲಕರವಾಗುವಂತಹ, ನಿದರ್ಶನಕ್ಕೆ, ಉದ್ದಿಮೆದಾರರ ಒಕ್ಕೂಟಕ್ಕೆ ಅವಕಾಶವಿರುವಂತಹ ಆದರೆ ಕಾರ್ಮಿಕರು ಒಗ್ಗೂಡಲಾಗದಂತಹ, ಕಾನೂನುಗಳನ್ನು ಸೃಷ್ಟಿಸುವಂತೆಯೂ ಅವು ಪ್ರಭಾವ ಬೀರಬಹುದು. ಹೀಗೆ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಹೊಂದಿರಬಹುದಾದ ಆರ್ಥಿಕ ಅಧಿಕಾರದ ವಾಸ್ತವ ಪ್ರಮಾಣವು ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಪರಿಗಣಿಸುವ ಅಂಶಗಳಷ್ಟೇ ಮುಖ್ಯವಾಗಿ ಸೈನಿಕ ಸಾಮರ್ಥ್ಯವನ್ನೂ ಪ್ರಚಾರದ ಮೂಲಕ ಪರಿಣಾಮಕಾರಿಯಾಗುವುದನ್ನೂ ಅವಲಂಬಿಸಿರುತ್ತದೆ. ಒಂದು ಪ್ರತ್ಯೇಕ ಅಧ್ಯಯನವಿಷಯವಾಗಿ ಅರ್ಥಶಾಸ್ತ್ರವು ಅವಾಸ್ತವವಾದುದು, ಅನುಸರಣೆಯ ಮಾರ್ಗದರ್ಶಕ ಸೂತ್ರವಾಗಿ ತಪ್ಪು ದಾರಿಗೆಳೆಯುವಂತಹುದು. ಈ ಒಂದು ಅಧ್ಯಯನವು – ಮುಖ್ಯವಾದ ಅಧ್ಯಯನವೆಂಬುದು ನಿಜ – ವಿಶಾಲವಾದ ಅಧ್ಯಯನ, ಅಧಿಕಾರವಿಜ್ಞಾನ.

–೦–೦–೦–೦–

ಅಧ್ಯಾಯ ಒಂಬತ್ತು

ಜನಾಭಿಪ್ರಾಯದ ಮೇಲಿನ ಅಧಿಕಾರ

ಜನಾಭಿಪ್ರಾಯವು ಸರ್ವಶಕ್ತವಾದುದು ಮತ್ತು ಇತರ ಎಲ್ಲ ಬಗೆಯ ಅಧಿಕಾರಗಳನ್ನೂ ಅದರಿಂದಲೇ ಸಾಧಿಸಲಾಗುತ್ತದೆ ಎಂಬ ದೃಷ್ಟಿಕೋನದ ಪರವಾಗಿ ವಾದ ಮಾಡಲು ಸಾಧ್ಯ. ತಾವು ಹೋರಾಡುತ್ತಿರುವ ಉದ್ದೇಶದ ಬಗ್ಗೆ ಸೈನಿಕರಿಗೆ ನಂಬಿಕೆಯಿರದಿದ್ದರೆ ಸೈನ್ಯವು ನಿಷ್ಪ್ರಯೋಜಕವಾಗುತ್ತದೆ, ಅಥವಾ, ಹಣಕ್ಕೆ ಹೋರಾಡುವ ಸೈನಿಕರ ವಿಷಯದಲ್ಲಾದರೆ, ಜಯ ದೊರಕಿಸುವ ಸಾಮರ್ಥ್ಯ ತಮ್ಮ ನಾಯಕನಿಗಿದೆ ಎಂಬ ವಿಶ್ವಾಸವಿರಬೇಕಾಗುತ್ತದೆ. ಕಾನೂನು ಸರ್ವಮಾನ್ಯವಾಗದಿದ್ದರೆ ಅದು ನಿರ್ವೀರ್ಯಗೊಳ್ಳುತ್ತದೆ. ಆರ್ಥಿಕ ಸಂಸ್ಥೆಗಳು ಕಾನೂನು ಬಗೆಗಿನ ಗೌರವವನ್ನು ಅವಲಂಬಿಸಿರುತ್ತವೆ; ಫೋರ್ಜರಿಗೆ ಸಾಮಾನ್ಯ ಜನತೆಯ ಅಭ್ಯಂತರವಿಲ್ಲದಿದ್ದರೆ ಬ್ಯಾಂಕಿಂಗ್ ವ್ಯವಸ್ಥೆಯ ಪರಿಸ್ಥಿತಿ ಏನಾಗುತ್ತದೆಂದೆಂದು ಒಂದು ಕ್ಷಣ ಯೋಚಿಸಿ. ಧಾರ್ಮಿಕ ಅಭಿಪ್ರಾಯಗಳು ಸರ್ಕಾರಕ್ಕಿಂತ ಹೆಚ್ಚು ಬಲಿಷ್ಠವಾದುದೆಂಬುದನ್ನು ಅನೇಕ ಸಂದರ್ಭಗಳು ತೋರಿಸಿಕೊಟ್ಟಿವೆ. ಯಾವುದಾದರೂ ದೇಶದಲ್ಲಿ ಅತಿ ಹೆಚ್ಚಿನ ಜನರು ಸೋಷಿಯಲಿಸಂ ಬಗ್ಗೆ ಒಲವು ತೋರಿದರೆ, ಬಂಡವಾಳಶಾಹಿಯು ನಿಷ್ಕ್ರಿಯವಾಗುತ್ತದೆ. ಈ ನೆಲೆಯಲ್ಲಿ ನಾವು ಸಾಮಾಜಿಕ ವ್ಯವಹಾರಗಳಲ್ಲಿ ಜನಾಭಿಪ್ರಾಯವೇ ಅಂತಿಮ ಅಧಿಕಾರವನ್ನು ಹೊಂದಿರುವುದು ಎಂದು ವಾದಿಸಬಹುದು.

ಆದರೆ ಈ ಮಾತು ಅರ್ಧಸತ್ಯ ಮಾತ್ರ, ಏಕೆಂದರೆ ಅದು ಜನಾಭಿಪ್ರಾಯವನ್ನು ರೂಪಿಸುವ ಶಕ್ತಿಗಳನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಸೈನಿಕ ಶಕ್ತಿಯ ಬಳಕೆಯಲ್ಲಿ ಜನಾಭಿಪ್ರಾಯವು ಅನಿವಾರ್ಯ ಅಂಗ ಎಂಬುದು ನಿಜವಾದರೂ, ಸೈನಿಕ ಶಕ್ತಿಯೂ ಜನಾಭಿಪ್ರಾಯವನ್ನು ರೂಪಿಸಬಲ್ಲುದು ಎಂಬುದು ನಿಜ. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಸರ್ಕಾರದ್ದೇ ಆಗಿದ್ದ ಮತಧರ್ಮವೇ ಬಹುತೇಕ ಎಲ್ಲ ಯೂರೋಪಿಯನ್ ದೇಶಗಳಲ್ಲಿ ಈಗಲೂ ಉಳಿದುಬಂದಿದೆ. ಇದಕ್ಕೆ ಮುಖ್ಯ ಕಾರಣ ಅನೇಕ ದೇಶಗಳಲ್ಲಿ ಸೈನ್ಯ ಬಲದ ಮೂಲಕ ಶಿಕ್ಷೆ ಮತ್ತು ಪ್ರಚಾರಗಳ ನಿಯಂತ್ರಣವನ್ನು ಸಾಧಿಸಿದ್ದು. ಜನಾಭಿಪ್ರಾಯವು ಮಾನಸಿಕ ಕಾರಣಗಳಿಂದ ರೂಪಿತವಾದುದು ಎಂಬುದು

ಸಾಮಾನ್ಯ ತಿಳಿವಳಿಕೆ, ಆದರೆ ಇದು ನಿಕಟ ಕಾರಣ ಅಷ್ಟೇ: ಹಿನ್ನೆಲೆಯಲ್ಲಿ ಯಾವುದೋ ಸಿದ್ಧಾಂತದ ಬೆಂಬಲಕ್ಕೆ ಬಲಪ್ರಯೋಗವು ಕೆಲಸ ಮಾಡಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಆರಂಭದಲ್ಲಿ ಯಾವುದೇ ಸಿದ್ಧಾಂತಕ್ಕೆ ಸಾಮರ್ಥ್ಯವಿರುವುದಿಲ್ಲ, ಹಾಗಾಗಿ ವ್ಯಾಪಕ ಜನಾಭಿಪ್ರಾಯ ರೂಪಿಸಲು ಮನವೊಲಿಸುವ ವಿಧಾನವನ್ನೇ ಅನುಸರಿಸಬೇಕಾಗುತ್ತದೆ.

ಇದು ಒಂದು ಬಗೆಯ ಮೇಲುಕೆಳಗಾಟ: ಮೊದಲು, ಮನವೊಲಿಕೆಯಿಂದ ಸ್ವಲ್ಪ ಜನರ ಮತಾಂತರ; ಆನಂತರ ಸಮಾಜದ ಉಳಿದ ವರ್ಗಗಳ ಬೆಂಬಲ ಪಡೆಯಲು ಬಳಸಿಕೊಂಡ ಬಲದ ಬಗ್ಗೆ ಸಮಂಜಸ ಪ್ರಚಾರ; ಕೊನೆಯದಾಗಿ, ಬಹುಸಂಖ್ಯಾತರಲ್ಲಿ ಅದರ ಬಗ್ಗೆ ಸಹಜ ನಂಬಿಕೆ, ಇದರಿಂದಾಗಿ ಮತ್ತೆ ಬಲಪ್ರಯೋಗ ಅನವಶ್ಯಕವಾಗುತ್ತದೆ. ಕೆಲವು ಅಭಿಪ್ರಾಯಗಳು ಮೊದಲ ಹಂತವನ್ನು ಮೀರಿ ಹೋಗಲಾರದು, ಮತ್ತೆ ಕೆಲವು ಎರಡನೆಯದನ್ನು ತಲುಪಿ ವಿಫಲಗೊಳ್ಳುತ್ತವೆ, ಉಳಿದವು ಮೂರೂ ಹಂತಗಳಲ್ಲಿ ಯಶಸ್ಸನ್ನು ಸಾಧಿಸುತ್ತವೆ. 'ಸೊಸೈಟಿ ಆಫ್ ಫ್ರೆಂಡ್ಸ್' ಮನವೊಲಿಕೆಯ ಹಂತದಿಂದ ಎಂದೂ ಮುಂದೆ ಸಾಗಲೇ ಇಲ್ಲ. ಇತರ ನಾನ್‌ಕನ್‌ಫಾರ್ಮಿಸ್ಟ್‌ಗಳು ಕ್ರಾಮ್‌ವೆಲ್‌ನ ಕಾಲದಲ್ಲಿ ಸರ್ಕಾರದ ಬಲವನ್ನು ಗಳಿಸಿಕೊಂಡವು. ಆದರೆ ಅಧಿಕಾರ ಹಿಡಿದ ಮೇಲೆ ಪ್ರಚಾರ ಸಾಮರ್ಥ್ಯದಲ್ಲಿ ವಿಫಲಗೊಂಡವು. ಮೂರು ಶತಮಾನಗಳ ಕಾಲದ ಮನವೊಲಿಕೆಯ ನಂತರ ಕ್ಯಾಥೋಲಿಕ್ ಚರ್ಚ್ ಕಾನ್‌ಸ್ಟಾಂಟೈನ್‌ನ ಕಾಲದಲ್ಲಿ ಸರ್ಕಾರವನ್ನು ವಶಪಡಿಸಿಕೊಂಡಿತು, ಆನಂತರ, ಬಲಪ್ರಯೋಗದಿಂದ ಎಲ್ಲ ಪಾಗನ್‌ರನ್ನು ಮತಾಂತರಗೊಳಿಸುವ ಮೂಲಕ ಕ್ರಿಶ್ಚಿಯಾನಿಟಿಯು ಅನಾಗರಿಕ ಆಕ್ರಮಣವನ್ನು ಹಿಮ್ಮೆಟ್ಟಿಸಬಲ್ಲಂತಹ ಪ್ರಚಾರ ವ್ಯವಸ್ಥೆಯೊಂದನ್ನು ಸ್ಥಾಪಿಸಿತು. ಮಾರ್ಕ್ಸಿಸ್ಟ್ ಸಿದ್ಧಾಂತವು ರಷ್ಯಾದಲ್ಲಿ ಮೂರನೆಯದನ್ನಲ್ಲದಿದ್ದರೂ ಎರಡನೆಯ ಹಂತವನ್ನು ತಲುಪಿದೆ, ಆದರೆ ಉಳಿದೆಡೆಗಳಲ್ಲಿ ಅದಿನ್ನೂ ಮೊದಲ ಹಂತದಲ್ಲಿಯೇ ಉಳಿದಿದೆ.

ಆದರೆ ಯಾವ ಹಂತದಲ್ಲಿಯೂ ಬಲಪ್ರಯೋಗದ ಅನಿವಾರ್ಯವುಂಟಾಗದೆಯೇ ಜನಾಭಿಪ್ರಾಯದ ಮೇಲೆ ಪ್ರಭಾವ ಬೀರುವ ಕೆಲವು ನಿದರ್ಶನಗಳಿವೆ. ಇವುಗಳಲ್ಲಿ ಬಹು ಮುಖ್ಯವಾದುದು ವಿಜ್ಞಾನದ ಉದಯ. ಇವತ್ತು ನಾಗರಿಕ ದೇಶಗಳಲ್ಲಿ ಸರ್ಕಾರಗಳೇ ವಿಜ್ಞಾನವನ್ನು ಪ್ರೋತ್ಸಾಹಿಸುತ್ತಿವೆ, ಆದರೆ ಅದರ ಪ್ರಾಥಮಿಕ ಹಂತಗಳಲ್ಲಿ ಪರಿಸ್ಥಿತಿ ಹೀಗಿರಲಿಲ್ಲ. ತನ್ನ ಅಭಿಪ್ರಾಯ ತಪ್ಪೆಂದು ಒಪ್ಪಿಕೊಳ್ಳಲು ಗೆಲಿಲಿಯೊನನ್ನು ಬಲವಂತಪಡಿಸಲಾಯಿತು, ಟಂಕಸಾಲೆಯ ಅಧ್ಯಕ್ಷನ್ನಾಗಿ ನೇಮಿಸುವುದರ ಮೂಲಕ ನ್ಯೂಟನ್‌ನನ್ನು ಸ್ಥಗಿತಗೊಳಿಸಲಾಯಿತು, ಲವಾಸಿಯರ್‌ನನ್ನು

ಗಿಲೋಟಿನ್‌ಗೆ ಆಹುತಿ ಕೊಡಲಾಯಿತು. ಇಷ್ಟಾದರೂ ಈ ವ್ಯಕ್ತಿಗಳು ಮತ್ತು ಅವರಂತಹ ಇತರ ಕೆಲವರು ಆಧುನಿಕ ಯುಗದ ನಿರ್ಮಾಪಕರೆನಿಸಿದರು; ಅವರು ಸಾಮಾಜಿಕ ಬದುಕಿನ ಮೇಲೆ ಮಾಡಿರುವ ಪ್ರಭಾವವು, ಕ್ರಿಸ್ತ ಮತ್ತು ಅರಿಸ್ಟಾಟಲ್‌ರನ್ನೊಳಗೊಂಡಂತೆ, ಇತಿಹಾಸದಲ್ಲಿ ಉಲ್ಲಿಖಿತನಾದ ಬೇರಾವುದೇ ವ್ಯಕ್ತಿ ಮಾಡಿರುವುದಕ್ಕಿಂತ ಹೆಚ್ಚಿನದು. ಇದಕ್ಕೆ ಹೋಲಿಸಬಹುದಾದಂತಹ ಮಹತ್ವದ ಪ್ರಭಾವವನ್ನು ಬೀರಿದವನು ಪೈಥಾಗೊರಾಸ್, ಆದರೆ ಅವನಿದ್ದುದೇ ಅನುಮಾನಾಸ್ಪದ.

ಈಚೆಗೆ ಮಾನವ ವ್ಯವಹಾರಗಳಲ್ಲಿ ಪ್ರಭಾವಶಾಲಿ ಶಕ್ತಿಯಾಗಿರುವ ವೈಚಾರಿಕತೆಯನ್ನು ಅಲ್ಲಗಳೆಯುವುದು ವಾಡಿಕೆಯಾಗಿದೆ, ಆದರೆ ಅದರ ವಿರುದ್ಧದ ಪ್ರಬಲ ವಾದಮಂಡನೆ ಮಾಡಲು ವಿಜ್ಞಾನದ ಉದಯವು ಕಾರಣವಾಗಿದೆ. ಸ್ವಲ್ಪಮಟ್ಟಿಗಿನ ಬೌದ್ಧಿಕ ದೃಷ್ಟಿಕೋನವು ಸೈನಿಕ ಶಕ್ತಿಗೂ ಸಂಪತ್ತಿನ ಗಳಿಕೆಗೂ ಅನುಕೂಲಕರವಾಗುತ್ತದೆಂಬುದನ್ನು ವಿಜ್ಞಾನಿಗಳು ಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ; ಈ ಉದ್ದೇಶಗಳು ಎಷ್ಟರ ಮಟ್ಟಿಗೆ ಪ್ರಬಲವಾಗಿದ್ದವೆಂದರೆ ಈ ಹೊಸ ಬೌದ್ಧಿಕ ದೃಷ್ಟಿಕೋನವು, ಸಂಪ್ರದಾಯ ಮತ್ತು ಚರ್ಚ್‌ನ ಆದಾಯ ಮತ್ತು ಕ್ಯಾಥೋಲಿಕ್ ದೈವಜ್ಞಾನಗಳ ಪ್ರಭಾವವನ್ನೂ ಮೀರಿ ಮಧ್ಯಯುಗದ ಮನೋಭಾವವನ್ನು ಮೆಟ್ಟಿ ನಿಂತಿತು. ಸೂರ್ಯನು ನಿಶ್ಚಲನಾಗಿ ನಿಲ್ಲುವಂತೆ ಜೋಷುವ ಮಾಡುತ್ತಾನೆ ಎಂಬ ನಂಬಿಕೆಯನ್ನು ಜಗತ್ತು ತೊರೆಯಿತು, ಅದಕ್ಕೆ ಕಾರಣ ಕೊಪರ್ನಿಕಸ್‌ನ ಖಗೋಳವಿಜ್ಞಾನವು ನೌಕಾಯಾನದಲ್ಲಿ ಅನುಕೂಲಕರವಾದುದು; ಅದು ಅರಿಸ್ಟಾಟಲ್‌ನ ಭೌತವಿಜ್ಞಾನವನ್ನು ನಿರಾಕರಿಸಿತು, ಏಕೆಂದರೆ ಬೀಳುವ ವಸ್ತುವನ್ನು ಕುರಿತ ಗೆಲಿಲಿಯೋನ ಸಿದ್ಧಾಂತದಿಂದ ಫಿರಂಗಿ ಗುಂಡಿನ ವೇಗ(ಟ್ರೆಜೆಕ್ಟರಿ)ವನ್ನು ಲೆಕ್ಕಾಚಾರ ಮಾಡಲು ಸಾಧ್ಯವಾಯಿತು; ಅದು ಪ್ರವಾಹದ ಕತೆಯನ್ನು ತಿರಸ್ಕರಿಸಿತು, ಅದಕ್ಕೆ ಕಾರಣ ಭೂಗರ್ಭವಿಜ್ಞಾನವು ಗಣಿಗಾರಿಕೆಯಲ್ಲಿ ಸಹಕಾರಿಯಾದುದು; ಹೀಗೇ. ವಿಜ್ಞಾನವು ಯುದ್ಧ ಮತ್ತು ಶಾಮತಿಕಾಲಗಳೆರಡರಲ್ಲೂ ನಮಗೆ ಅನಿವಾರ್ಯ ಎಂಬುದೂ, ಹಾಗೆಯೇ ವಿಜ್ಞಾನವಿಲ್ಲದೆ ಯಾವ ದೇಶವೂ ಸಂಪದ್ಭರಿತವಾಗಲೂ ಶಕ್ತಿಶಾಲಿಯಾಗಲೂ ಸಾಧ್ಯವಿಲ್ಲ ಎಂಬುದೂ ಈಗ ಮನವರಿಕೆಯಾಗಿದೆ.

ಜನಾಭಿಪ್ರಾಯದ ಮೇಲಿನ ಈ ಪರಿಣಾಮವನ್ನು ವಿಜ್ಞಾನವು ಕೇವಲ ಮನವೊಲಿಕೆಯ ಮೂಲಕವೇ ಸಾಧಿಸಿದೆ: ವಿಜ್ಞಾನವು ಮಂಡಿಸುವ ಸಾಮನ್ಯ ಸಿದ್ಧಾಂತಗಳು ಪ್ರಶ್ನಾರ್ಹವಾಗಿರಬಹುದು, ಆದರೆ ತಂತ್ರಜ್ಞಾನದ ಮೂಲಕ ಅದು ತೋರಿಸಿದ ಫಲಿತಾಂಶವು ಮಾತ್ರ ಎಲ್ಲರಲ್ಲೂ ಆದರ

ಹುಟ್ಟಿಸಿತು. ವಿಜ್ಞಾನದಿಂದ ಬಿಳಿಯ ಜನರು ಜಗತ್ತಿನ ಮೇಲೆ ಹಿಡಿತ ಸಾಧಿಸುವಂತಾಯಿತು, ಅದನ್ನು ಅವರು ಕಳೆದುಕೊಳ್ಳಲು ಆರಂಭಗೊಂಡದ್ದು ಜಪಾನ್ ಅವರ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಮೇಲೆ.

ಈ ನಿದರ್ಶನದಿಂದ ವೈಚಾರಿಕತೆಯ ವ್ಯಾಪಕ ಸಾಮರ್ಥ್ಯದ ಬಗ್ಗೆ ಸ್ವಲ್ಪ ಮಟ್ಟಿಗೆ ಅರಿವುಂಟಾದೀತು. ವಿಜ್ಞಾನದಲ್ಲಿ ಪೂರ್ವಾಗ್ರಹಕ್ಕಿಂತ ವೈಚಾರಿಕತೆಯು ಮೇಲುಗೈಯಾಯಿತು, ಇದಕ್ಕೆ ಕಾರಣ ಅದು ಈಗಿನ ಉದ್ದೇಶಗಳನ್ನು ಪೂರೈಸಿಕೊಳ್ಳಲು ಅನುಕೂಲಕರವಾದುದು ಎಂಬ ಬಗ್ಗೆ ಯಥೇಚ್ಛ ಆಧಾರ ದೊರೆತದ್ದು. ಮಾನವ ವ್ಯವಹಾರಗಳಲ್ಲಿ ವೈಚಾರಿಕತೆಗೆ ಸ್ಥಾನವಿಲ್ಲ ಎನ್ನುವವರು ಈ ಎರಡು ಪರಿಸ್ಥಿತಿಗಳನ್ನು ಕಡೆಗಣಿಸುತ್ತಾರೆ. ವೈಚಾರಿಕತೆಯ ಹೆಸರಿನಲ್ಲಿ ನೀವು ಮೂಲಭೂತ ಆಕಾಂಕ್ಷೆಗಳನ್ನು ಬದಲಾಯಿಸಿಕೊಳ್ಳಲು ಮನುಷ್ಯನಿಗೆ ಕರೆಯಿತ್ತರೆ – ಉದಾಹರಣೆಗೆ, ವೈಯಕ್ತಿಕ ಸಾಮರ್ಥ್ಯದ ಬದಲು ಸರ್ವರ ಸುಖಕ್ಕೆ ಹೆಣಗಲು ಕರೆಕೊಟ್ಟರೆ – ನೀವು ವಿಫಲರಾಗುತ್ತೀರಿ. ಅದು ಸಮರ್ಥನೀಯವೂ ಹೌದು, ಯಾಕೆಂದರೆ ವೈಚಾರಿಕತೆಯು ಮಾತ್ರವೇ ಬದುಕಿನ ಉದ್ದೇಶಗಳನ್ನು ನಿರ್ಣಯಿಸಲಾರದು. ನಿಮ್ಮ ವಾದವಿನ್ನೂ ಪ್ರಶ್ನಾರ್ಹವಾಗಿರುವಾಗಲೇ ಅಥವಾ ಇನ್ನೂ ವಿಜ್ಞಾನಿಗಳು ಮಾತ್ರವೇ ಅದರ ಸಾಮರ್ಥ್ಯವನ್ನು ಕಾಣಲು ಸಾಧ್ಯವಿರುವಾಗ, ಆಳವಾಗಿ ಬೇರೂರಿದ ಪೂರ್ವಾಗ್ರಹಗಳ ಬಗ್ಗೆ ಟೀಕಿಸಿದರೆ ನೀವು ಕೂಡ ಅದೇ ಮಟ್ಟಿಗಿನ ವೈಫಲ್ಯವನ್ನು ಎದುರಿಸುವಿರಿ. ಪರಿಶೀಲಿಸುವ ವ್ಯವಧಾನ ಹೊಂದಿರುವ ಎಲ್ಲ ಸಮಚಿತ್ತದ ವ್ಯಕ್ತಿಗಳಿಗೂ ಮನವರಿಕೆಯಾಗುವಂತಹ ಆಧಾರಗಳಿಂದ, ಈಗಿನ ಆಕಾಂಕ್ಷೆಗಳನ್ನು ಪೂರೈಸುವ ಸಾಧನಗಳು ನಿಮ್ಮಲ್ಲಿವೆ ಎಂದು ಸಾಧಿಸಬಲ್ಲಿರಾದರೆ, ನೀವು ಹೇಳುವುದನ್ನು ಜನ ಕೇಳುತ್ತಾರೆ ಎಂದು ಸ್ವಲ್ಪ ಮಟ್ಟಿಗಿನ ಆತ್ಮವಿಶ್ವಾಸದಿಂದ ಭರವಸೆಯಿಟ್ಟುಕೊಳ್ಳಬಹುದು. ಅಲ್ಲದೆ, ಇದು ಅಧಿಕಾರದಲ್ಲಿರುವವರ ಅಥವಾ ಪಡೆಯುವ ಸಂಭವವಿರುವವರ ಸದ್ಯದ ಆಕಾಂಕ್ಷೆಗಳನ್ನು ಪೂರೈಸಬಲ್ಲ ಸಾಧ್ಯತೆಯನ್ನಿದು ಒಳಗೊಂಡಿದೆ, ಎಂಬುದನ್ನು ವಿವರಿಸಿ ಹೇಳಬೇಕಿಲ್ಲ.

ಮಾನವ ವ್ಯವಹಾರಗಳಲ್ಲಿನ ವೈಚಾರಿಕತೆಯ ಬಗ್ಗೆ ಇಷ್ಟು ಸಾಕು. ಮತ್ತೊಂದು ಬಗೆಯ ಬಲಪ್ರಯೋಗರಹಿತ ಮನವೊಲಿಕೆಯ ಬಗೆಯನ್ನು ಕುರಿತು ನಾನೀಗ ಪ್ರಸ್ತಾಪಿಸುತ್ತೇನೆ, ಅದೆಂದರೆ ಧರ್ಮಸ್ಥಾಪಕರದು. ಇಲ್ಲಿನ ಪ್ರಕ್ರಿಯೆಯು ಕೇವಲ ಸೂತ್ರದ ಮಟ್ಟಕ್ಕೆ ಇಳಿಸಿದಾಗ ಹೀಗಾಗುತ್ತದೆ: ಯಾವುದಾದರೂ ಪ್ರಸ್ತಾವನೆಯು ನಿಜವಾಗಿದ್ದರೆ, ಅದರಿಂದ ನಾನು ನನ್ನ

ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಬಲ್ಲೆ; ಹೀಗಾಗಿ ಈ ಪ್ರಸ್ತಾವನೆಯು ನಿಜವಾಗಿರಲೆಂಬುದು ನನ್ನ ಹಾರೈಕೆ; ಆದ್ದರಿಂದ, ನನಗೆ ಅಪರೂಪದ ಬೌದ್ಧಿಕ ಆತ್ಮನಿಯಂತ್ರಣವಿರದಿದ್ದರೆ, ಅದನ್ನು ನಿಜವೆಂದೇ ನಂಬುತ್ತೇನೆ. ಸಾಂಪ್ರದಾಯಿಕತೆ ಮತ್ತು ಸಚ್ಚಾರಿತ್ರ್ಯಗಳಿಂದ ನಾನು ಸತ್ತ ಮೇಲೆ ಸ್ವರ್ಗಕ್ಕೆ ಹೋಗುತ್ತೇನೆ; ಇದನ್ನು ನಂಬುವುದರಲ್ಲಿ ಒಂದು ಸುಖವಿದೆ, ಹೀಗಾಗಿ ಅದನ್ನು ಬಲವಂತದಿಂದ ಹೇರಿದರೆ ಪ್ರಾಯಶಃ ನಾನದನ್ನು ನಂಬುತ್ತೇನೆ. ನಂಬಿಕೆಯ ಇಲ್ಲಿನ, ಈ ಕಾರಣವು, ವಿಜ್ಞಾನದಲ್ಲಿನಂತೆ, ವಸ್ತುಸ್ಥಿತಿಯ ಆಧಾರದ್ದಲ್ಲ, ನಂಬಿಕೆಯಿಂದ ಪಡೆದ ಸುಖದ ಭಾವನೆ, ಜೊತೆಗೆ ಈ ನಂಬಿಕೆಯು ನಂಬಿಕೆಗೆ ಅನರ್ಹವೇನಲ್ಲ ಎಂದು ಒತ್ತಿ ಹೇಳುವ ಸುತ್ತಲಿನ ಪರಿಸರ.

ಜಾಹೀರಾತಿನ ಸಾಮರ್ಥ್ಯವೂ ಈ ಶೀರ್ಷಿಕೆಯಡಿಯಲ್ಲೇ ಬರುತ್ತದೆ. ಯಾರದೋ ಮಾತ್ರೆಗಳಲ್ಲಿ ನಂಬಿಕೆಯಿಡುವುದು ಸುಖಕರ, ಅದರಿಂದ ಉತ್ತಮ ಆರೋಗ್ಯದ ಭರವಸೆಯುಂಟಾಗುತ್ತದೆ; ಅವುಗಳ ಶಕ್ತಿಯ ಬಗ್ಗೆ ಪದೇ ಪದೇ ಮತ್ತು ಒತ್ತಿ ಒತ್ತಿ ಹೇಳಿದಾಗ ಆ ಬಗ್ಗೆ ನಂಬಿಕೆಯುಂಟಾಗುವುದು ಸಾಧ್ಯ. ಅವಿಚಾರಿತ ಪ್ರಚಾರವು ವಿಚಾರಪೂರ್ಣವಾದುದರಂತೆಯೇ ಸದ್ಯದ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಬಲ್ಲುದನ್ನು ಮನವರಿಕೆ ಮಾಡಿಕೊಡಬೇಕು, ಆದರೆ ಮನವೊಲಿಸಲು ಅದು ಅನುಸರಿಸುವ ಮಾರ್ಗ ವಾಸ್ತವದ ಬದಲು ಪುನರುಕ್ತಿಯದು.

ವೈಚಾರಿಕ ಮತ್ತು ಅವೈಚಾರಿಕ ಮನವೊಲಿಕೆಯ ನಡುವಣ ವಿರೋಧವು, ಅನುಷ್ಠಾನದಲ್ಲಿ, ಮೇಲಿನ ವಿಶ್ಲೇಷಣೆಗಿಂತ ಕಡಿಮೆ ಖಚಿತವಾದುದು. ಸಾಮಾನ್ಯವಾಗಿ ಅದರಲ್ಲಿ ಯಾವುದೋ ವೈಚಾರಿಕ ಆಧಾರವಿರುತ್ತದೆ, ಆದರೆ ಅದು ನಿರ್ಧಾರಕವಾದುದಾಗಿರುವುದಿಲ್ಲ; ಅವೈಚಾರಿಕತೆಯಿರುವುದು ಅದಕ್ಕೆ ಹೆಚ್ಚಿನ ಮಹತ್ವ ಕೊಡುವುದರಲ್ಲಿ. ನಂಬಿಕೆಯು ಬರೀ ಸಾಂಪ್ರದಾಯಿಕವಾಗಿದ್ದರೆ ಅದು ಅನೇಕ ಕಾರಣಗಳಿಂದ ಉಂಟಾಗಿರುತ್ತದೆ: ಆಸೆ, ಆಧಾರ ಮತ್ತು ಪುನರುಕ್ತಿ. ಆಸೆ ಅಥವಾ ಆಧಾರಗಳಿಲ್ಲದಿರುವಾಗ ನಂಬಿಕೆಯಿರುವುದಿಲ್ಲ; ಬಾಹ್ಯ ಒತ್ತಡವಿಲ್ಲದಾಗ ನಂಬಿಕೆ ಉದ್ಭವಿಸುವುದು ವಿರಳ ವ್ಯಕ್ತಿಗಳಲ್ಲಿ ಮಾತ್ರ, ಧರ್ಮಸಂಸ್ಥಾಪಕರು, ವೈಜ್ಞಾನಿಕ ಅನ್ವೇಷಕರು ಮತ್ತು ಹುಚ್ಚರು ಇಂಥವರಲ್ಲಿ. ಸಾಮುದಾಯಿಕ ಅಥವಾ ಸಾಮಾಜಿಕವಾಗಿ ಮುಖ್ಯವೆನಿಸುವ ನಂಬಿಕೆಯುಂಟುಮಾಡಲು ಈ ಎಲ್ಲ ಅಂಶಗಳು ಸ್ವಲ್ಪ ಪ್ರಮಾಣದಲ್ಲಿಯಾದರೂ ಇರಬೇಕು. ಒಂದು ಹೆಚ್ಚಿನ ಪ್ರಮಾಣದಲ್ಲಿದ್ದು ಮತ್ತೊಂದು ಅಂಶವು ಕಡಿಮೆಯಿದ್ದರೆ ಅದರ

ಪರಿಣಾಮವಾಗಿ ನಂಬಿಕೆಯ ಪ್ರಮಾಣವೇನೂ ಕಡಿಮೆಯಾಗುವುದಿಲ್ಲ. ಸಮಪ್ರಮಾಣದಲ್ಲಿ ಆಸೆಯನ್ನು ಪೂರೈಸುವಂತಿದ್ದಾಗ, ಅಲ್ಪ ಆಧಾರವಿರುವ ನಂಬಿಕೆಯನ್ನು ಜನರು ಒಪ್ಪಿಕೊಳ್ಳುವಂತೆ ಮಾಡಲು ಹೆಚ್ಚಿನ ಪ್ರಮಾಣದ ಆಧಾರವಿರುವುದಕ್ಕಿಂತ ಅಧಿಕ ಪ್ರಮಾಣದ ಪ್ರಚಾರ ಆವಶ್ಯಕವಾಗುತ್ತದೆ, ಇತ್ಯಾದಿ.

ಪುನರುಕ್ತಿಯ ಸಾಮರ್ಥ್ಯದ ಮೂಲಕ ಅಧಿಕಾರಸ್ಥರು ನಂಬಿಕೆಯ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿರುತ್ತಾರೆ. ಅಧಿಕೃತ ಪ್ರಚಾರಕ್ಕೆ ಹಳೆಯ ಮತ್ತು ಹೊಸ ಸ್ವರೂಪಗಳಿವೆ. ಚರ್ಚ್‌ಗೆ ಅನೇಕ ರೀತಿಯಲ್ಲಿ ಅಪೇಕ್ಷಣೀಯ ಎನ್ನಬಹುದಾದ ತಂತ್ರವಿರುತ್ತದೆ, ಆದರೆ ಅದನ್ನು ಮುದ್ರಣ ತಂತ್ರ ಬರುವುದಕ್ಕೆ ಮುಂಚೆಯೇ ರೂಪಿಸಲಾಗಿತ್ತು, ಹಾಗಾಗಿ ಹಿಂದಿಗಿಂತ ಅದರ ಪ್ರಭಾವ ಈಗ ಕಡಿಮೆ. ಸರ್ಕಾರವು ಅನೇಕ ಶತಮಾನಗಳಿಂದಲೂ ಕೆಲವು ಮಾರ್ಗಗಳನ್ನು ಅನುಸರಿಸಿಕೊಂಡು ಬಂದಿದೆ: ನಾಣ್ಯಗಳ ಮೇಲೆ ರಾಜನ ಚಿತ್ರವನ್ನು ಅಚ್ಚಿಸುವುದು, ಪಟ್ಟಾಭಿಷೇಕ ಮತ್ತಿತರ ಮಹೋತ್ಸವಗಳು, ಭೂ ಮತ್ತು ನೌಕಾ ಸೈನ್ಯಗಳ ಅದ್ದೂರಿ ಪ್ರದರ್ಶನ, ಮುಂತಾದವು. ಆದರೆ ಇವೆಲ್ಲ ಶಿಕ್ಷಣ, ಪತ್ರಿಕೆ, ಸಿನಿಮ, ರೇಡಿಯೋ ಮುಂತಾದ ಆಧುನಿಕ ಮಾರ್ಗಗಳಿಗಿಂತ ತೀರ ಕಡಿಮೆ ಶಕ್ತಿಶಾಲಿಯಾದವು. ಇವುಗಳನ್ನು ನಿರಂಕುಶ ಪ್ರಭುತ್ವಗಳಲ್ಲಿ ಅತೀವವಾಗಿ ಬಳಸಿಕೊಳ್ಳಲಾಗುತ್ತದೆ, ಆದರೆ ಅದರ ಯಶಸ್ಸಿನ ಬಗ್ಗೆ ಮಾತನಾಡಲು ಈಗಲೇ ಆಗುವುದಿಲ್ಲ.

ಪ್ರಚಾರವು ಆಸೆಯನ್ನು ಉದ್ದೇಶಿಸಬೇಕು ಎಂದು ಹೇಳಿದೆ, ಯುದ್ಧಕ್ಕೆ ಮೊದಲು ಆಸ್ಟ್ರಿಯ–ಹಂಗರಿಗಳ ಅಧಿಕ ಪ್ರದೇಶಗಳಲ್ಲಿಯೂ, ೧೯೨೨ ಕ್ಕೆ ಮುಂಚಿನ ಐರ್ಲಂಡ್‌ನಲ್ಲಿಯೂ ಈಚಿನವರೆಗಿನ ಇಂಡಿಯಾದಲ್ಲಿಯೂ ಆದಂತೆ, ರಾಷ್ಟ್ರೀಯ ಭಾವನೆಯ ಮುಂದೆ ಸರ್ಕಾರೀ ಪ್ರಚಾರವು ವಿಫಲಗೊಂಡ ನಿದರ್ಶನದಿಂದ ನನ್ನ ಈ ಮಾತನ್ನು ಸಮರ್ಥಿಸಬಹುದು. ಪ್ರಚಾರವು ಯಶಸ್ವಿಗೊಳ್ಳುವುದು ರೋಗಿಯಲ್ಲಿರುವ ಯಾವುದಾದರೊಂದು ಅಂಶದೊಡನೆ ಅದು ಸಾಮರಸ್ಯ ಹೊಂದಿರುವಾಗ ಮಾತ್ರ; ಅವನ ಆತ್ಮದ ಅಮರತೆ, ಆರೋಗ್ಯ ಕುರಿತ ಆಕಾಂಕ್ಷೆ, ದೇಶದ ಔನ್ನತ್ಯ, ಇಂತಹ ಯಾವುದೇ ಆಗಬಹುದು. ಹೊಂದಾಣಿಕೆಗೆ ಕಾರಣವಾಗುವ ಇಂಥ ಯಾವುದೇ ಮೂಲಭೂತ ಅಂಶವಿಲ್ಲದಿರುವಾಗ, ಅಧಿಕಾರಸ್ಥಾನದ ಪುನರುಕ್ತಿಯನ್ನು ನೈರಾಶ್ಯದಿಂದ ಕೂಡಿದ ಅನುಮಾನದಿಂದ ನೋಡಲಾಗುತ್ತದೆ. ಸರ್ಕಾರದ ದೃಷ್ಟಿಯಿಂದ ನೋಡಿದಾಗ ಪ್ರಜಾಪ್ರಭುತ್ವದಲ್ಲಿರುವ ಒಂದು ಅನುಕೂಲವೆಂದರೆ, ಸಾಮಾನ್ಯ ಪ್ರಜೆಯನ್ನು ಸುಲಭವಾಗಿ ವಂಚಿಸಬಹುದಾದ ಸೌಲಭ್ಯ,

ಯಾಕೆಂದರೆ ಅವನಿಗೆ ಸರ್ಕಾರವು 'ತನ್ನ'ದೇ ಎಂಬ ಭಾವನೆಯಿರುತ್ತದೆ. ಬೇಗ ಜನಪ್ರಿಯವಾಗದ ಯುದ್ಧವಿರೋಧಿ ಭಾವನೆಯು, ಮಿಕ್ಕಾವುದೇ ಬಗೆಯ ಸರ್ಕಾರಕ್ಕಿಂತ ಪ್ರಜಾಪ್ರಭುತ್ವವಿರುವೆಡೆಯಲ್ಲಿ ಬೇಗ ಒಪ್ಪಿತವಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತ ಜನರು ಸರ್ಕಾರದ ವಿರುದ್ಧ ನಿಲ್ಲುವುದು, ತಮ್ಮ ಚುನಾಯಿತ ಪ್ರತಿನಿಧಿಗಳ ಬಗ್ಗೆ ತಾವು ಹೊಂದಿದ್ದ ಸದ್ಭಾವನೆಯು ತಪ್ಪಾದುದೆಂದು ತಿಳಿದು ಆ ಬಗ್ಗೆ ಕಠಿಣವೂ ಕಹಿಯಾದುದೂ ಆದ ಮನೋಭಾವವನ್ನು ತಾಳಿದಾಗ ಮಾತ್ರ.

ವ್ಯಾಪಕವಾದ ಸುವ್ಯವಸ್ಥಿತ ಪ್ರಚಾರವು ಪ್ರಸ್ತುತ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಚರ್ಚ್‌ಗಳು, ವ್ಯಾಪಾರೀ ಜಾಹೀರಾತುದಾರರು, ರಾಜಕೀಯ ಪಕ್ಷಗಳು, ಶ್ರೀಮಂತವರ್ಗ ಮತ್ತು ಸರ್ಕಾರಗಳ ನಡುವೆ ಹಂಚಿಹೋಗಿದೆ. ಮುಖ್ಯವಾಗಿ ಇವೆಲ್ಲ ಒಂದೇ ಉದ್ದೇಶದಿಂದ ಕಾರ್ಯಪ್ರವೃತ್ತವಾಗುತ್ತವೆ, ಇದಕ್ಕೆ ಅಪವಾದವೆಂದರೆ ವಿರೋಧ ರಾಜಕೀಯ ಪಕ್ಷಗಳು. ಅವರೂ ಸಹ, ಅಧಿಕಾರ ಹೊಂದುವ ಆಸೆ ಭರವಸೆಯನ್ನಿಟ್ಟುಕೊಂಡಿದ್ದರೆ, ಸರ್ಕಾರದ ಪ್ರಚಾರದ ಮೂಲಾಂಶಗಳನ್ನು ವಿರೋಧಿಸುವುದಿಲ್ಲ. ನಿರಂಕುಶ ರಾಷ್ಟ್ರಗಳಲ್ಲಿ ಸರ್ಕಾರವು ಏಕೈಕ ಪ್ರಚಾರಕ ಸಂಸ್ಥೆಯಾಗಿರುತ್ತದೆ. ಆದರೆ ಆಧುನಿಕ ಪ್ರಚಾರದ ಎಲ್ಲ ಸಾಮರ್ಥ್ಯವಿದ್ದರೂ, ಯುದ್ಧದಲ್ಲಿ ಸೋತ ಸಂದರ್ಭದಲ್ಲಿ ಮಾತ್ರ, ಅಧಿಕೃತ ನಿಲವಿಗೆ ಮಾನ್ಯತೆ ದೊರೆಯುವುದೆಂಬ ಬಗ್ಗೆ ನನಗೆ ನಂಬಿಕೆಯಿಲ್ಲ. ಈ ಸಂದರ್ಭದಲ್ಲಿ ಸರ್ಕಾರವು ಅನುಭವಿಸುವ ನಿಶ್ಶಕ್ತಿಯು ದೇಶದ ಮೇಲೆ ಆಕ್ರಮಣ ಮಾಡಿ ರಚನೆಗೊಂಡ ಸರ್ಕಾರದ ವಿರುದ್ಧ ರಾಷ್ಟ್ರೀಯ ಭಾವನೆಯು ಉಂಟುಮಾಡುವ ನಿಶ್ಶಕ್ತಿಯಂತಹುದು. ಯುದ್ಧೋತ್ಸಾಹವನ್ನುಂಟುಮಾಡಲು ಗೆಲವಿನ ಭರವಸೆಯನ್ನು ಉಂಟುಮಾಡಿದ್ದಷ್ಟೂ ಅದು ಸಾಧ್ಯವಾಗದಾದಾಗ ವಿರುದ್ಧ ಪ್ರತಿಕ್ರಿಯೆ ಹೆಚ್ಚು ಮೊನಚಾಗಿರುತ್ತದೆ. ಹೀಗಾಗಿ ಮುಂದಿನ ಯುದ್ಧವು, ಹಿಂದಿನದರಂತೆಯೇ, ಅನೇಕ ಕ್ರಾಂತಿಗಳಿಗೆ ಅವಕಾಶ ಮಾಡಿಕೊಟ್ಟು ಕೊನೆಗೊಳ್ಳುತ್ತದೆ ಎಂದು ನಿರೀಕ್ಷಿಸಬಹುದು. ಅವುಗಳು ೧೯೧೭ ಮತ್ತು ೧೯೧೮ ರದಕ್ಕಿಂತ ಹೆಚ್ಚು ಭೀಕರವಾಗಿರುತ್ತವೆ, ಏಕೆಂದರೆ ಯುದ್ಧವೂ ಹೆಚ್ಚು ವಿನಾಶಕಾರಕವಾಗಿರುತ್ತದೆ. ಜನರು ತಮ್ಮನ್ನು ಕೊಂದುಬಿಡುವ ಅಪಾಯವನ್ನು ಆಡಳಿತಸೂತ್ರ ಹಿಡಿದವರು ಅರ್ಥಮಾಡಿಕೊಂಡಾರೆಂದು ನಿರೀಕ್ಷಿಬಹುದೇನೋ; ಅದು ಸೈನಿಕರು ಶತ್ರುಗಳ ಕೈಗೆ ಸಿಕ್ಕಿ ಸಾಯುವುದರಷ್ಟೇ ದೊಡ್ಡ ಪ್ರಮಾಣದ್ದಾಗಿರುತ್ತದೆ

ಅಧಿಕೃತ ಪ್ರಚಾರದ ಪ್ರಭಾವದ ಬಗ್ಗೆ ಅತಿ ಮಹತ್ವ ನೀಡುವುದು ಸುಲಭ, ಅದೂ ಪೈಪೋಟಿಯೇ ಇಲ್ಲದಿರುವಾಗ. ಕಾಲ ಸರಿದಂತೆ

ಸುಳ್ಳೆನಿಸುವ ಪೊಳ್ಳು ಭರವಸೆಗಳನ್ನು ಹುಟ್ಟಿಸುವುದರ ಕಡೆಗೆ ಅದು ಗಮನ ಹರಿಸಿದಾಗ, ಪರಿಣಾಮವು ಗೆಲಿಲಿಯೋನ ಎದುರಲ್ಲಿರಬೇಕಾದ ಅರಿಸ್ಟಾಟಲೀಯರ ಸ್ಥಿತಿಯಷ್ಟೇ ಕೆಟ್ಟುದಾಗಿರುತ್ತದೆ. ಪರಸ್ಪರ ವಿರುದ್ಧವಾದ ಸರ್ಕಾರಗಳ ಎರಡು ಬಣಗಳು ಯುದ್ಧದಲ್ಲಿ ತನಗೇ ಗೆಲವು ಎಂಬ ನಂಬಿಕೆಯನ್ನು ಬಿತ್ತುವ ಪ್ರಯತ್ನದಲ್ಲಿದ್ದರೆ, ಅವುಗಳಲ್ಲಿ ಎರಡೂ ಅಲ್ಲದಿದ್ದರೂ ಒಂದಾದರೂ ತನ್ನ ಅಧಿಕೃತ ಘೋಷಣೆ ಸುಳ್ಳಾಗುವ ನಾಟಕೀಯ ದುರಂತವನ್ನು ಎದುರಿಸಬೇಕು. ಎಲ್ಲ ಬಗೆಯ ವಿರುದ್ಧ ಪ್ರಚಾರವನ್ನೂ ನಿಷೇಧಿಸಿರುವಾಗ ಜನರು ಏನು ಬೇಕಾದರೂ ನಂಬುವಂತೆ ತಾವು ಮಾಡಬಹುದು ಎಂದು ಆಡಳಿತಗಾರರು ಯೋಚಿಸುವುದು ಸಹಜ, ಇದರಿಂದಾಗಿ ಅವರು ಅತಿ ಆತ್ಮವಿಶ್ವಾಸ ಮತ್ತು ಅಜಾರೂಕರಾಗತೆಯಿಂದ ಕೂಡಿರುವುದೂ ಅಷ್ಟೇ ಸಹಜ. ಸುಳ್ಳುಗಳಿಗೆ ರೆಕ್ಕೆಪುಕ್ಕ ಬರಬೇಕಾದರೆ ಪೈಪೋಟಿ ಇರಲೇಬೇಕು.

ಜನಾಭಿಪ್ರಾಯದ ಮೇಲಿನ ಅಧಿಕಾರವೂ, ಮಿಕ್ಕೆಲ್ಲ ಬಗೆಯ ಅಧಿಕಾರಗಳಂತೆಯೇ, ಕೂಡಿಕೊಳ್ಳುತ್ತ ಕೇಂದ್ರೀಕರಣಗೊಳ್ಳುವ ಪ್ರವೃತ್ತಿಯದು., ತಾರ್ಕಿಕವಾಗಿ ಅದು ಸರ್ಕಾರದ ಏಕಸ್ವಾಮ್ಯದಲ್ಲಿ ಕೊನೆಗೊಳ್ಳುತ್ತದೆ. ಯುದ್ಧವನ್ನು ಹೊರತುಪಡಿಸಿದರೂ ಪ್ರಚಾರದ ಮೇಲಿನ ಸರ್ಕಾರದ ಏಕಸ್ವಾಮ್ಯವು ಅದನ್ನು ಹಾನಿಗೊಳಿಸಲಾರದು ಎಂದು ಊಹಿಸುವುದು ಆತುರದ ತೀರ್ಮಾನವಾಗುತ್ತದೆ. ದೀರ್ಘಾವಧಿಯಲ್ಲಿ, ಲೂಥರ್‌ನ ಕಾಲದಲ್ಲಿ ಪೋಪ್‌ಗಳಿದ್ದಂತೆ, ಅಧಿಕಾರದಲ್ಲಿರುವವರು ಸಾಮಾನ್ಯದ ಹಿತವನ್ನು ಎದ್ದು ಕಾಣುವಂತೆ ಅಲಕ್ಷಿಸುವ ಸಾಧ್ಯತೆಯಿರುತ್ತದೆ. ಯಾವಾಗಲಾದರೂ ಸರ್ಕಾರದ ಅಧಿಕಾರದ ವಿರುದ್ಧ ಹೊಸ ಲೂಥರ್ ಸವಾಲೆಸೆಯುತ್ತಾನೆ, ಮತ್ತು ತನ್ನ ಪೂರ್ವವರ್ತಿಯಂತೆ ಬಹು ಬೇಗ ಗೆಲವು ಸಾಧಿಸುತ್ತಾನೆ ಹಾಗೂ ಅವನನ್ನು ಬಗ್ಗುಬಡಿಯುವುದು ಅಸಾಧ್ಯವಾಗುತ್ತದೆ. ಇದು ಸಂಭವಿಸುವುದಕ್ಕೆ ಕಾರಣ ಆಳುವವರಿಗೆ ಇದು ಸಂಭವನೀಯ ಎನ್ನಿಸದೇ ಇರುವುದು. ಆದರೆ ಈ ಬದಲಾವಣೆಯಿಂದ ಪರಿಸ್ಥಿತಿ ಉತ್ತಮವಾಗುತ್ತದೆ ಎಂದು ಹೇಳುವುದು ಮಾತ್ರ ಅಸಾಧ್ಯ.

ಸಂಘಟನೆ ಮತ್ತು ಒಗ್ಗೂಡುವಿಕೆಗಳ ಪರಿಣಾಮವು, ಇತರ ವಿಷಯಗಳಲ್ಲಿಯಂತೆ ಪ್ರಚಾರದ ವಿಷಯದಲ್ಲಿಯೂ, ಕ್ರಾಂತಿಯನ್ನು ನಿಧಾನಗೊಳಿಸುತ್ತದೆ, ಆದರೆ ಅದು ಸಂಭವಿಸಿದಾಗ ಹೆಚ್ಚು ಉಗ್ರವಾಗುವಂತೆ ಮಾಡುತ್ತದೆ. ಅಧಿಕೃತವಾಗಿ ಒಂದು ಸಿದ್ಧಾಂತಕ್ಕೆ ಮಾತ್ರ ಅವಕಾಶವಿದ್ದಾಗ, ಜನರಿಗೆ ಪರ್ಯಾಯಗಳ ಬಗ್ಗೆ ಆಲೋಚಿಸಲಾಗಲೀ ಹೋಲಿಸಲಾಗಲೀ ಅಭ್ಯಾಸವಿರುವುದಿಲ್ಲ; ರೊಚ್ಚಿನ ದಂಗೆಯ ಮಹಾ ಪ್ರವಾಹವು

ಸಂಪ್ರದಾಯವನ್ನು ಕೊಚ್ಚಿಹಾಕಿಬಿಡುತ್ತದೆ; ಅಲ್ಲದೆ ಜಯವನ್ನು ಸಾಧಿಸಲು ಬೇಕಾಗುವಷ್ಟು ಮನಃಪೂರ್ವಕವಾಗಿಯೂ ಉಗ್ರವಾಗಿಯೂ ವಿರೋಧ ಮಾಡಲು, ಸರ್ಕಾರದ ಸಿದ್ಧಾಂತದಲ್ಲಿ ಸಮರ್ಪಕವಾದುದನ್ನೂ ಅಲ್ಲಗಳೆಯುವುದು ಆವಶ್ಯಕವೆನಿಸುವಂತೆ ಮಾಡಿಬಿಡುತ್ತದೆ. ಅಲ್ಲಗಳೆಯಲಾಗದ ಒಂದೇ ಅಂಶವೆಂದರೆ ತಕ್ಷಣವೇ ಮತ್ತೊಂದು ಸಂಪ್ರದಾಯವನ್ನು ಸ್ಥಾಪಿಸಬೇಕಾದ ಪ್ರಾಮುಖ್ಯ., ಗೆಲವನ್ನು ಸಾಧಿಸಲು ಇದು ಆವಶ್ಯಕವೆಂದು ಪರಿಗಣಿಸಲಾಗುತ್ತದೆ. ಹೀಗಾಗಿ, ವೈಚಾರಿಕವಾಗಿ ಪರಿಶೀಲಿಸಿದರೆ, ನಿರಂಕುಶ ಪ್ರಭುತ್ವದಲ್ಲಿ ಸಂಭವಿಸುವ ಕ್ರಾಂತಿಯ ಬಗ್ಗೆ ಸಂಭ್ರಮ ಪಡಬೇಕಾದದದೇನೂ ಕಾಣಿಸುವುದಿಲ್ಲ. ಹೆಚ್ಚು ಅಪೇಕ್ಷಣಿಯವಾದುದೆಂದರೆ, ಕ್ರಮಕ್ರಮವಾಗಿ ಹೆಚ್ಚಾಗುವ ಸುರಕ್ಷಿತ ಭಾವನೆ, ಇದರಿಂದ ಉದ್ವೇಗ ಕಡಿಮೆಯಾಗುತ್ತ, ನಿರಂಕುಶಪ್ರಭುತ್ವದಲ್ಲಿನ ಏಕೈಕ ಅಪವಾದವಾದ ಅಸ್ತಿತ್ವಹೀನತೆಯನ್ನು ಹೊರತುಪಡಿಸಿದಂತೆ, ಅತ್ಯಂತ ದೊಡ್ಡ ಸದ್ಗುಣವಾದ ಆಲಸ್ಯಕ್ಕೆ ಅವಕಾಶವಾಗುತ್ತದೆ.

–೦–೦–೦–೦

ಅಧ್ಯಾಯ ಹತ್ತು

ಅಧಿಕಾರದ ಆಕರವಾಗಿ ಮತಸಿದ್ಧಾಂತಗಳು

ಸಮಾಜವೊಂದರ ಅಧಿಕಾರವು ಕೇವಲ ಅದರ ಸಂಖ್ಯೆಯ ಮೇಲಾಗಲೀ, ಅದರ ಆರ್ಥಿಕ ಸಂಪನ್ಮೂಲಗಳ ಮತ್ತು ತಾಂತ್ರಿಕ ಸಾಮರ್ಥ್ಯದ ಮೇಲಾಗಲೀ ಆಧರಿಸಿರದೆ, ಅದರ ನಂಬಿಕೆಗಳ ಮೇಲೆಯೂ ಆಧರಿಸಿರುತ್ತದೆ. ಒಂದು ಸಮಾಜವು ಅನುಸರಿಸುವ ಅಂಧಾಭಿಮಾನವ ಮತಸಿದ್ಧಾಂತ (ಛಿಡಿಜಿಜ) ವೊಂದು ಎಷ್ಟೋ ಬಾರಿ ಅದರ ಅಧಿಕಾರವನ್ನು ಹೆಚ್ಚಿಸುತ್ತದೆ; ಹಾಗೆಯೇ, ಕೆಲವೊಮ್ಮೆ ಅದನ್ನು ಕುಗ್ಗಿಸುತ್ತದೆ ಕೂಡ. ಹತ್ತೊಂಬತ್ತನೆಯ ಶತಮಾನಕ್ಕಿಂತ ಈಗ ಅಂಧಾಭಿಮಾನವ ಮತಸಿದ್ಧಾಂತಗಳು ಹೆಚ್ಚು ಚಾಲ್ತಿಯಲ್ಲಿವೆ, ಅಧಿಕಾರದ ಮೇಲೆ ಅದು ಹೊಂದಿರುವ ಪರಿಣಾಮವು ತುಂಬ ವ್ಯಾವಹಾರಿಕ ಪ್ರಾಮುಖ್ಯವುಳ್ಳದ್ದು. ಪ್ರಜಾಪ್ರಭುತ್ವದ ವಿರೋಧಿಯಾದ ಒಂದು ವಾದವೆಂದರೆ, ಮುಖ್ಯ ಅಂಶವೆಂದರೆ ಅಂಧಾಭಿಮಾನಿಗಳಿಂದ ಕೂಡಿದ ಒಂದು ದೇಶವು ಬಹುಸಂಖ್ಯೆಯಲ್ಲಿ ವಿವೇಕಿಗಳನ್ನು ಹೊಂದಿರುವ ದೇಶಕ್ಕಿಂತ ಯುದ್ಧದಲ್ಲಿ ಗೆಲ್ಲುವ ಸಂಭಾವ್ಯತೆ ಹೆಚ್ಚು ಎಂಬುದು. ಇತಿಹಾಸದ ಬೆಳಕಿನಲ್ಲಿ ಈ ಅಭಿಪ್ರಾಯವನ್ನು ನಾವೀಗ ಪರಿಶೀಲಿಸೋಣ.

ಮೊದಲಿಗೆ, ಮತಾಂಧತೆಯಿಂದ ಜಯ ಗಳಿಸಿದ ಪ್ರಸಂಗಗಳು ಅದರಿಂದಾಗಿ ಸೋಲು ಅನುಭವಿಸಿದ ಪ್ರಸಂಗಗಳಿಗಿಂತ ಸಹಜವಾಗಿಯೇ ಹೆಚ್ಚು ಜನಜನಿತವಾಗಿರುತ್ತವೆ, ಇದಕ್ಕೆ ಕಾರಣ ಅಂತಹ ಸೋಲಿನ ಪ್ರಸಂಗಗಳು ಕತ್ತಲೆಯಲ್ಲಿಯೇ ಉಳಿದುಬಿಡುತ್ತವೆ ಎಂಬ ಅಂಶವನ್ನು ನಾವು ಗಮನಿಸಬೇಕು. ಹೀಗಾಗಿ ಆತುರದ ಸಮೀಕ್ಷೆಯು ತಪ್ಪುದಾರಿಗೆ ಎಳೆಯುವಂತಹುದು; ಈ ತಪ್ಪಿಗೆ ಕಾರಣವಾಗುವ ಸಾಧ್ಯತೆಯ ಬಗ್ಗೆ ಅರಿವಿದ್ದರೆ, ಅದನ್ನು ನಿವಾರಿಸಕೊಳ್ಳುವುದು ಕಷ್ಟವಲ್ಲ.

ಮತಾಂಧತೆಯಿಂದಾಗಿ ಅಧಿಕಾರವನ್ನು ಗಳಿಸಿದ ಮಹಾ ಉದಾಹರಣೆಯೆಂದರೆ ಇಸ್ಲಾಂ. ಅರಬ್ಬರು ಹೊಂದಿದ್ದ ಜ್ಞಾನಕ್ಕಾಗಲೀ ಲೌಕಿಕ ಸಂಪನ್ಮೂಲಗಳಿಗಾಗಲೀ ಮಹಮದ್ ಹೊಸದೇನನ್ನೂ ಸೇರಿಸದಿದ್ದರೂ, ತಾನು ಸತ್ತ ಕೆಲವೇ ವರ್ಷಗಳ ಅವಧಿಯಲ್ಲಿ, ಅವರು ನೆರೆಹೊರೆಯ ಬಹುತೇಕ ಬಲಿಷ್ಠರನ್ನೆಲ್ಲ ಗೆದ್ದು ದೊಡ್ಡ ಸಾಮ್ರಾಜ್ಯವೊಂದನ್ನು

ಗಳಿಸಿದ್ದರು. ಪ್ರವಾದಿಯು ಸ್ಥಾಪಿಸಿದ ಮತಧರ್ಮವು ಅವನ ದೇಶವು ಪಡೆದ ಗೆಲವಿಗೆ ಮೂಲಕಾರಣವಾಗಿತ್ತೆಂಬುದು ನಿರ್ವಿವಾದ. ಅವನ ಬದುಕಿನ ಕೊನೆಯಲ್ಲಿ, ಅವನು ಬೈಜ಼ಾಂಟಿಯಮ್ ಸಾಮ್ರಾಜ್ಯದ ಮೇಲೆ ಸಮರ ಸಾರಿದ. "ಮುಸ್ಲಿಮರು ಉತ್ಸಾಹ ಕುಂದಿದರು: ಹಣ, ಕುದುರೆಗಳು ಅಥವಾ ಆಹಾರಸಾಮಗ್ರಿಗಳ ಕೊರತೆಯೆಂದರು: ಸುಗ್ಗಿಯ ಕಾಲ ಮತ್ತು ಬೇಸಿಗೆಯ ಅಸಾಧ್ಯ ಸೆಕೆ ಎಂದರು. 'ನರಕದಲ್ಲಿ ಇದಕ್ಕಿಂತ ಸೆಕೆ ಹೆಚ್ಚು' ಎಂದ ಕೋಪಗೊಂಡ ಪ್ರವಾದಿ. ಅವರನ್ನು ಬಲವಂತಪಡಿಸದೆ ಕಡೆಗಣಿಸಿದ; ಆದರೆ ತಾನು ವಾಪಸಾದ ಮೇಲೆ, ತೀರ ತಪ್ಪಿತಸ್ಥರನ್ನು ಐವತ್ತು ದಿನಗಳ ಕಾಲ ಬಹಿಷ್ಕರಿಸುವ ಮೂಲಕ ದಂಡಿಸಿದ."[೧] ಅಂಧಾಭಿಮಾನವು ಮಹಮದ್‌ನ ಜೀವಿತಕಾಲದಲ್ಲಿಯೂ ಅವನ ಸಾವಿನನಂತರ ಕೆಲವು ವರ್ಷಗಳ ಅವಧಿಯಲ್ಲಿಯೂ ಅರಬ್ ದೇಶವನ್ನು ಒಗ್ಗೂಡಿಸಿತು, ಯುದ್ಧದಲ್ಲಿ ಗೆಲ್ಲುವ ಆತ್ಮವಿಶ್ವಾಸವನ್ನು ತುಂಬಿತು, ಧರ್ಮವಿರೋಧಿಗಳ ವಿರುದ್ಧ ಹೋರಾಡಿ ಸತ್ತವರಿಗೆ ಸ್ವರ್ಗ ದೊರೆಯುತ್ತದೆಂಬ ಭರವಸೆಯಿಂದ ಧೈರ್ಯವನ್ನು ತುಂಬಿತು.

ಅಂಧಾಭಿಮಾನವು ಅರಬ್ಬರ ಮೊದಲ ಪ್ರಯತ್ನಗಳಿಗೆ ಸ್ಫೂರ್ತಿಯನ್ನು ನೀಡಿದರೂ, ಅವರಿಗೆ ದೀರ್ಘಕಾಲದ ಗೆಲವು ದೊರೆಯಲು ಬೇರೆ ಕಾರಣಗಳಿದ್ದವು. ಬೈಜ಼ಾಂಟಿಯನ್ ಮತ್ತು ಪರ್ಷಿಯನ್ ಸಾಮ್ರಾಜ್ಯಗಳೆರಡೂ ದೀರ್ಘವೂ ಅನಿಶ್ಚಿತವೂ ಆದ ಯುದ್ಧಗಳಿಂದ ಸೊರಗಿದ್ದವು; ಎಲ್ಲ ಕಾಲಗಳಲ್ಲಿಯೂ ರೋಮನ್ ಸೈನ್ಯವು ದುರ್ಬಲವಾಗಿದ್ದುದರ ಜೊತೆಗೆ ಅಶ್ವಪಡೆಯ ವಿರುದ್ಧವಾಗಿದ್ದಿತು. ಅರಬ್ ರಾವುತರು ಅನೂಹ್ಯ ಚಟುಲತೆಯಿದ್ದವರು, ಹೆಚ್ಚು ಸೌಲಭ್ಯದಿಂದ ಕೂಡಿದ್ದ ತಮ್ಮ ನೆರೆಯವರಿಗೆ ಸಹಿಸಲಸಾಧ್ಯವೆನಿಸಿದ ಕಷ್ಟನಿಷ್ಠುರಗಳಿಗೆ ಹೊಂದಿಕೊಂಡಿದ್ದವರು. ಈ ಪರಿಸ್ಥಿತಿಗಳು ಮುಸ್ಲಿಮರ ಮೊದಮೊದಲ ಗೆಲವುಗಳಿಗೆ ಆವಶ್ಯಕವಾಗಿದ್ದವು.

ಬಹು ಬೇಗ, ಮಿಕ್ಕಾವುದೇ ಮತದ ಆರಂಭದಲ್ಲಿದ್ದುದಕ್ಕಿಂತ ಬೇಗ, ಸರ್ಕಾರದಿಂದ ಅಂಧಾಭಿಮಾನವನ್ನು ಹೊರದೂಡಲಾಯಿತು. ಪ್ರವಾದಿಯ ಅಳಿಯ ಅಲಿ ನಿಷ್ಠಾವಂತರ ಒಂದು ಬಣದಲ್ಲಿ ಮೂಲದ ಉತ್ಸಾಹವನ್ನು ಜೀವಂತವಾಗಿರಿಸಿದ, ಆದರೆ ಅವನು ಅಂತರ್ಯುದ್ಧದಲ್ಲಿ ಸೋತ, ಕೊನೆಗೆ ಕೊಲೆಗೂ ಗುರಿಯಾದ. ಕಲೀಫ಼ನಾಗಿ ಅವನನಂತರ ಒಮ್ಮಿಯ ವಂಶದವನು ಬಂದ, ಅವನು ಮಹಮ್ಮದನ ಅತ್ಯುಗ್ರ ಶತ್ರುವಾಗಿದ್ದ,

೧ ಈ.ಗಿಬ್ಬನ್: ಅಧ್ಯಾಯ ಐವತ್ತು

ಅವನೆಂದೂ ತನ್ನ ಮತಕ್ಕೆ ರಾಜಕೀಯ ಒಪ್ಪಿಗೆಗಿಂತ ಮಿಗಿಲಾದುದನ್ನು ನೀಡಲಿಲ್ಲ. "ಮಹಮ್ಮದನ ಪೀಡಕರು ಅವನ ಮಕ್ಕಳ ವಾರಸುತನವನ್ನು ಆಕ್ರಮಿಸಿಕೊಂಡರು; ಪ್ರತಿಮಾಪೂಜೆಯ ಸಮರ್ಥಕರು ಅವನ ಮತ ಹಾಗೂ ಸಾಮ್ರಾಜ್ಯದ ಮಹಾ ನಾಯಕರಾದರು. ಅಬು ಸೋಫಿಯಾನ್‌ನ[೧] ವಿರೋಧವು ಬಹು ತೀವ್ರವಾದುದೂ ದೀರ್ಘಕಾಲಿಕವೂ ಆಗಿತ್ತು; ಅವನ ಮತಾಂತರಕಾರ್ಯವು ಮಂದವೂ ಅರೆಮನಸ್ಸಿನಿಂದ ಕೂಡಿದುದೂ ಆಗಿತ್ತು; ಅವನ ಹೊಸ ಮತವು ಆವಶ್ಯಕತೆ ಮತ್ತು ಆಸಕ್ತಿಗಳಿಂದ ಬಲಿಷ್ಠವಾಗಿತ್ತು; ಸೇವೆ ಸಲ್ಲಿಸಿದ, ಹೋರಾಡಿದ, ಪ್ರಾಯಶಃ ನಂಬಿಕೆಯಿಟ್ಟ; ಅಜ್ಞಾನಕಾಲದ ಪಾತಕಗಳು ಒಮ್ಮಿಯನ ಕುಟುಂಬದ ಆನಂತರದ ಸದ್ಗುಣಗಳಿಂದ ಪ್ರಾಯಶ್ಚಿತ್ತವಾಯಿತು,"[೨] ಆ ಕ್ಷಣಾನಂತರ ಬಹು ದೀರ್ಘಕಾಲ ಕಲೀಫ಼ ವಂಶವು ತನ್ನ ಮುಕ್ತ ಆಲೋಚನೆಯಿಂದ ಕೂಡಿದ ಸಹಿಷ್ಣುತೆಯಿಂದ ವಿಭಿನ್ನವೆನಿಸಿತು, ಆಗಲೂ ಕ್ರಿಶ್ಚಿಯನ್‌ರು ಮತಾಂಧರಾಗಿಯೇ ಇದ್ದರು. ಆರಂಭದಿಂದಲೂ ಮಹಮ್ಮದೀಯರು ತಾವು ಸೋಲಿಸಿದ ಕ್ರಿಶ್ಚಿಯನ್‌ರ ಬಗ್ಗೆ ಸಹಿಷ್ಣುತೆಯನ್ನೇ ಪ್ರದರ್ಶಿಸಿದರು. ಈ ಸಹಿಷ್ಣುತೆಗೆ – ಇದು ಕ್ಯಾಥೋಲಿಕ್ ಚರ್ಚ್‌ನ ಪೀಡನೋತ್ಸಾಹಕ್ಕೆ ತೀರ ವಿರುದ್ಧವಾದ ಮನೋಭಾವವಾಗಿತ್ತು – ತಮ್ಮ ಸುಲಭ ಗೆಲವು ಹಾಗೂ ಸಾಮ್ರಾಜ್ಯದ ಸ್ಥಿರತೆಗಳು ಮುಖ್ಯ ಕಾರಣ.

ಮತಾಂಧತೆಗೆ ದೊರೆತ ಯಶಸ್ಸಿನ ಮತ್ತೊಂದು ಸ್ಪಷ್ಟ ನಿದರ್ಶನವೆಂದರೆ, ಕ್ರಾಮ್‌ವೆಲ್ ಕಾಲದಲ್ಲಿ ಇಂಡಿಪೆಂಡೆಂಟರು ಪಡೆದ ಗೆಲವು. ಆದರೆ ಕ್ರಾಮ್‌ವೆಲ್‌ನ ಸಾಧನೆಗಳಿಗೆ ಅಂಧಾಭಿಮಾನವು ಎಷ್ಟರಮಟ್ಟಿಗೆ ಕಾರಣ ಎಂಬುದನ್ನು ಪ್ರಶ್ನಿಸಬೇಕಾಗಿದೆ. ರಾಜನೊಡನೆ ಉಂಟಾದ ಸಂಘರ್ಷದಲ್ಲಿ, ಪಾರ್ಲಿಮೆಂಟ್ ಗೆದ್ದುದಕ್ಕೆ ಮುಖ್ಯ ಕಾರಣ ಅದು ಲಂಡನ್ ಮತ್ತು ಪೂರ್ವ ಕೌಂಟಿಗಳನ್ನು ವಶಪಡಿಸಿಕೊಂಡಿದ್ದುದು; ಅದರ ಜನಬಲ ಮತ್ತು ಆರ್ಥಿಕ ಸಂಪನ್ಮೂಲಗಳೆರಡೂ ರಾಜನದಕ್ಕಿಂತ ಬಹು ಮಿಗಿಲಾಗಿದ್ದವು. ಪ್ರೆಸ್ಬಿಟೇರಿಯನ್ನರು – ಕ್ರಾಂತಿಕಾಲದಲ್ಲಿ ಯಾವಾಗಲೂ ಮಂದವಾದಿಗಳಿಗಾಗುವಂತೆಯೇ – ಮನಃಪೂರ್ವಕವಾಗಿ ಗೆಲವನ್ನು ಬಯಸಿರದ ಕಾರಣ ಪಕ್ಕಕ್ಕೆ ದೂಡಲ್ಪಟ್ಟರು. ಅಧಿಕಾರವನ್ನು ಪಡೆದ ನಂತರ ಕ್ರಾಮ್‌ವೆಲ್‌ನೇ ಒಬ್ಬ ವ್ಯಾವಹಾರಿಕ ರಾಜಕಾರಣಿಯಾದ, ಕಷ್ಟ ಪರಿಸ್ಥಿತಿಯಲ್ಲಿ ಆದಷ್ಟೂ ಲಾಭ ಪಡೆದುಕೊಳ್ಳಲು ಆತುರನಾದ; ಆದರೆ ಅವನು ತನ್ನ ಅನುಯಾಯಿಗಳ ಅಂಧಾಭಿಮಾನವನ್ನು ಕಡೆಗಣಿಸಲಾಗಲಿಲ್ಲ.

---

[೧] ಹೊಸ ಕಲೀಫ಼ ಮೋವಿಯಾಹ್‌ನ ತಂದೆ

[೨] ಈ. ಗಿಬ್ಬನ್, ಪೂರ್ವೋಕ್ತ

ಅದು ಜನಪ್ರಿಯತೆಯನ್ನು ಎಷ್ಟು ಕಳೆದುಕೊಂಡಿತ್ತೆಂದರೆ, ಕೊನೆಯಲ್ಲಿ ಅವನ ಪಕ್ಷವು ಸಂಪೂರ್ಣ ಪತನವನ್ನು ಕಂಡಿತು. ದೀರ್ಘಾವಧಿಯಲ್ಲಿ ಅಂಧಾಭಿಮಾನಮ ಇಂಗ್ಲಿಷ್ ಇಂಡಿಪೆಂಡೆಂಟರಿಗೆ ಯಶಸ್ಸು ದೊರೆಯಲು ಅವರ ಪೂರ್ವಾಧಿಕಾರಿಗಳಾಗಿದ್ದ ಮುನ್ಸ್ಟರ್‌ನ ಅನಾಬ್ಯಾಪ್ಟಿಸ್ಟ್‌ರಿಗಿಂತ ಏನಾದರೂ ಹೆಚ್ಚಿನದನ್ನು ಮಾಡಿತೇ ಎಂಬುದನ್ನು ನಿರ್ಧರಿಸಲಾಗದು.

ವ್ಯಾಪಕ ನೆಲೆಯಲ್ಲಿ ಫ್ರೆಂಚ್ ಕ್ರಾಂತಿಯ ಇತಿಹಾಸವು ಮತಾಂಧತೆ, ಗೆಲವು, ದೌರ್ಜನ್ಯ, ಪತನ ಮತ್ತು ಪ್ರತಿಕ್ರಿಯೆ ಇವುಗಳ ದೃಷ್ಟಿಯಿಂದ ಇಂಗ್ಲಂಡ್‌ನ ಕಾಮನ್‌ವೆಲ್ತ್‌ನದಕ್ಕೆ ಸಂವಾದಿಯಾದುದು. ಈ ಎರಡೂ ಅನುಕೂಲಕರ ನಿದರ್ಶನಗಳಲ್ಲಿ ಮತಾಂಧರ ಯಶಸ್ಸು ಅಲ್ಪಕಾಲಿಕವಾಯಿತು.

ಅಂಧಾಭಿಮಾನಮ ಕೇವಲ ವಿನಾಶವನ್ನು ಮಾತ್ರ ತಂದ ಸಂದರ್ಭಗಳು ತಾತ್ಕಾಲಿಕವಾದುವನ್ನೂ ಒಳಗೊಂಡಂತೆ ಯಶಸ್ಸನ್ನು ತಂದ ಸಂದರ್ಭಗಳಿಗೆ ಹೋಲಿಸಿದರೆ ತೀರ ಅಧಿಕ ಸಂಖ್ಯೆಯವು. ಅದರಿಂದಾಗಿ ಜೆರೂಸಲೆಮ್ ಟೈಟಸ್‌ನ ಕಾಲದಲ್ಲಿಯೂ, ಪೂರ್ವ ಮತ್ತು ಪಶ್ಚಿಮ ಚರ್ಚ್‌ಗಳ ನಡುವಣ ಸಣ್ಣ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ಪಶ್ಚಿಮವು ಮುಖಭಂಗಕ್ಕೊಳಗಾದಾಗ ಕಾನ್‌ಸ್ಟಾಂಟಿನೋಪಲ್ ೧೪೫೩ ರಲ್ಲಿಯೂ ನಾಶಗೊಂಡವು. ಅದರಿಂದಾಗಿ ಸ್ಪೈನ್ ಕುಂಠಿತಗೊಂಡಿತು, ಮೊದಲು ಯೆಹೂದಿಗಳನ್ನೂ ಮೂರರನ್ನೂ ಉಚ್ಚಾಟನೆ ಮಾಡಿದಾಗ, ಆನಂತರ ನೆದರ್ಲಂಡ್ಸ್‌ನಲ್ಲಿ ಬಂಡಾಯವುಂಟಾಗಲು ನೀಡಿದ ಪ್ರೇರಣೆ ಮತ್ತು ಮತಗಳ ನಡುವಣ ಯುದ್ಧಗಳಿಂದಾಗಿ ಉಂಟಾದ ಬಹುಕಾಲದ ಬಳಲಿಕೆಯುಂಟಾದಾಗ. ಮತ್ತೊಂದೆಡೆ, ಅತ್ಯಂತ ಯಶಸ್ವಿಯೆನಿಸಿದ ದೇಶಗಳೆಂದರೆ, ಆಧುನಿಕ ಕಾಲದುದ್ದಕ್ಕೂ, ಧರ್ಮದ್ರೋಹಿಗಳ ಬಗ್ಗೆ ಅತ್ಯಂತ ಕಡಿಮೆ ಹಿಂಸಕಪ್ರವೃತ್ತಿಯನ್ನು ತೋರಿಸಿದಂಥವು.

ಇಷ್ಟಾದರೂ, ದೇಶದ ಸಬಲತೆಗೆ ಸೈದ್ಧಾಂತಿಕ ಏಕತೆಯು ಆವಶ್ಯಕ ಎಂಬ ಭಾವನೆ ಈಗ ವ್ಯಾಪಕವಾಗಿದೆ. ಜರ್ಮನಿ ಮತ್ತು ರಷ್ಯಾಗಳಲ್ಲಿ ಈ ದೃಷ್ಟಿಯಿದ್ದು ಅತ್ಯಂತ ಹೆಚ್ಚಿನ ಭರದಿಂದ ಆ ದಿಸೆಯಲ್ಲಿ ಕಾರ್ಯ ನಡೆಯುತ್ತಿದೆ, ಇಟಲಿ ಮತ್ತು ಜಪಾನ್‌ಗಳಲ್ಲಿನ ಪರಿಸ್ಥಿತಿಯು ಇದೇ ಅದರೂ ತೀವ್ರತೆ ಸ್ವಲ್ಪ ಕಡಿಮೆ. ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್‌ಗಳಲ್ಲಿನ ಅನೇಕ ಮಂದಿ ಫ್ಯಾಸಿಸಂವಿರೋಧಿಗಳು ಆಲೋಚನಾಸ್ವಾತಂತ್ರ್ಯವು ಸೈನಿಕ ದೌರ್ಬಲ್ಯದ ಮೂಲವೆಂದು ಒಪ್ಪಿಕೊಳ್ಳಲು ತಯಾರಾಗಿದ್ದಾರೆ. ಹೀಗಾಗಿ

ನಾವು ಈ ಪ್ರಶ್ನೆಯ ಬಗ್ಗೆ ಮತ್ತೊಮ್ಮೆ, ಹೆಚ್ಚು ಅಮೂರ್ತ ರೂಪದಲ್ಲಿಯೂ ವಿಶ್ಲೇಷಣಾತ್ಮಕವಾಗಿಯೂ ಪರಿಶೀಲಿಸಬೇಕಾಗಿದೆ.

ನಾನು ಎತ್ತಿರುವ ಪ್ರಶ್ನೆಯು ಆಲೋಚನಾಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಬೇಕೇ ಅಥವಾ, ಕನಿಷ್ಠ ಪಕ್ಷ, ಸಹಿಸಿಕೊಳ್ಳಬೇಕೇ ಎಂಬ ವಿಶಾಲ ಸ್ವರೂಪದ್ದಲ್ಲ. ನನ್ನದು, ಸೈದ್ಧಾಂತಿಕ ಏಕತೆಯು, ಸ್ವಯಂಪ್ರೇರಿತವಾದುದಾಗಿರಲಿ ಬಲವಂತದಿಂದ ಹೇರಿದ್ದಾಗಿರಲಿ, ಎಷ್ಟರ ಮಟ್ಟಿಗೆ ಅಧಿಕಾರದ ಮೂಲವಾಗುತ್ತದೆ ಎಂಬ ಸಣ್ಣ ಪ್ರಶ್ನೆ. ಮತ್ತೊಂದೆಡೆ, ಆಲೋಚನಾಸ್ವಾತಂತ್ರ್ಯವು ಎಷ್ಟರ ಮಟ್ಟಿಗೆ ಅಧಿಕಾರದ ಮೂಲವಾಗುತ್ತದೆ ಎಂಬುದು.

೧೯೦೪ ರಲ್ಲಿ ಬ್ರಿಟಿಷ್ ಮಿಲಿಟರಿಯು ಟಿಬೆಟ್ ಮೇಲೆ ಆಕ್ರಮಣ ಮಾಡಿದಾಗ, ಮೊದಲು ಟಿಬೆಟನ್‌ರು ಧೈರ್ಯವಾಗಿ ಮುನ್ನುಗ್ಗಿದರು, ಏಕೆಂದರೆ ಅವರಿಗೆ ಲಾಮಾಗಳು ಬುಲೆಟ್‌ಗಳನ್ನೆದುರಿಸುವ ಮಂತ್ರವನ್ನು ಉಪದೇಶಿಸಿದ್ದರು. ಆದರೆ ಸಾವುನೋವುಗಳುಂಟಾದಾಗ, ಲಾಮಾಗಳು ಹೇಳಿದ್ದೇನೆಂದರೆ, ಬುಲೆಟ್‌ಗಳಿಗೆ ನಿಕಲ್ ತುದಿಗಳನ್ನು ಅಳವಡಿಸಿದ್ದರು, ಆದರೆ ತಾವು ಉಪದೇಶಿಸಿದ್ದ ಮಂತ್ರಗಳು ಸೀಸದ ತುದಿಗಳನ್ನುಳವನ್ನು ಎದುರಿಸಲು ಮಾತ್ರ ಎಂದು ವಿವರಣೆ ನೀಡಿದರು. ಇದಾದ ಮೇಲೆ, ಟಿಬೆಟನ್ ಸೈನ್ಯವು ತೋರಿಸಿದ್ದು ಕಡಿಮೆ ಶೌರ್ಯವನ್ನು. ಬೇಲಾ ಕುನ್ ಮತ್ತು ಕುರ್ಟ್ ಐಸ್ನರ್‌ಗಳು ಕಮ್ಯುನಿಸ್ಟ್ ಕ್ರಾಂತಿಯನ್ನು ಮಾಡಿದಾಗ, ತಮ್ಮ ಪರವಾಗಿ ದ್ವಂದ್ವಮಾನಕ ಭೌತವಾದವು (ಡಯಲೆಕ್ಟಿಕಲ್ ಮೆಟೀರಿಯಲಿಸಂ) ಹೋರಾಡುತ್ತದೆ ಎಂಬ ನಂಬಿಕೆಯಿತ್ತು. ಆಗ ಕೊಮಿಂಟರ್ನ್‌ನ ಲಾಮಾಗಳು ವೈಫಲ್ಯಕ್ಕೆ ನೀಡಿದ ಕಾರಣವೇನು ಎಂಬುದು ನನಗೆ ಮರೆತು ಹೋಗಿದೆ. ಈ ಎರಡೂ ನಿದರ್ಶನಗಳಲ್ಲಿ, ಸೈದ್ಧಾಂತಿಕ ಏಕತೆಯಿಂದ ಗೆಲವು ದೊರೆಯಲಿಲ್ಲ.

ಈ ಬಗ್ಗೆ ಸತ್ಯವನ್ನು ಮನವರಿಕೆ ಮಾಡಿಕೊಳ್ಳಲು, ಎರಡು ಸತ್ಯಗಳ ನಡುವಣ ರಾಜೀಸೂತ್ರವೊಂದನ್ನು ಕಂಡುಕೊಳ್ಳುವುದು ಸೂಕ್ತವಾಗುತ್ತದೆ. ಇವುಗಳಲ್ಲಿ ಮೊದಲನೆಯದೆಂದರೆ: ಒಂದೇ ಬಗೆಯ ನಂಬಿಕೆಗಳನ್ನು ಹೊಂದಿರುವವರು ಭಿನ್ನ ನಂಬಿಕೆಗಳನ್ನು ಹೊತ್ತವರಿಗಿಂತ ಹೆಚ್ಚಿನ ಮಟ್ಟದ ಸಹಕಾರವನ್ನು ಹೊಂದಿರುತ್ತಾರೆ. ಎರಡನೆಯದೆಂದರೆ: ಯಾರ ನಂಬಿಕೆಗಳು ವಾಸ್ತವಕ್ಕೆ ಅನುಗುಣವಾಗಿರುತ್ತದೆಯೋ ಅಂಥವರಿಗೆ ಸುಳ್ಳು ನಂಬಿಕೆಗಳನ್ನು ಹೊತ್ತವರಿಗಿಂತ ಗೆಲುವು ಸಾಧಿಸುವ ಸಾಧ್ಯತೆ ಹೆಚ್ಚಿರುತ್ತದೆ. ಈ ಎರಡು ಸತ್ಯಗಳನ್ನು ಕುರಿತು ಈಗ ಪರಿಶೀಲಿಸೋಣ.

ಒಪ್ಪಂದವು ಸಹಕಾರಕ್ಕೆ ಮಾಡುವ ಒಂದು ಸಹಾಯ ಎಂಬುದು ಸುಸ್ಪಷ್ಟ. ಸ್ಪೈನ್‌ನ ಅಂತರ್ಯುದ್ಧದಲ್ಲಿ ಅನಾಯಕತ್ವವಾದಿಗಳು, ಕಮ್ಯುನಿಸ್ಟರು ಮತ್ತು ಬಾಸ್ಕ್ ರಾಷ್ಟ್ರೀಯವಾದಿಗಳ ನಡುವೆ, ಎಲ್ಲರೂ ಫ್ರಾಂಕೋದ ಸೋಲನ್ನು ಬಯಸುವವರಾದರೂ, ಸಹಕಾರವು ಕಷ್ಟಕರವೆನಿಸಿದೆ. ಅದೇ ರೀತಿಯಲ್ಲಿ, ಆದರೆ ತುಂಬ ಕಡಿಮೆ ಪ್ರಮಾಣದಲ್ಲಿ, ಮತ್ತೊಂದೆಡೆ, ಕಾರ್ಲಿಸ್ಟ್‌ರ ಮತ್ತು ಆಧುನಿಕ ಶೈಲಿಯ ಫ್ಯಾಸಿಸ್ಟ್‌ರ ನಡುವಣ ಸಹಕಾರವೂ ಕಷ್ಟಕರವಾಗಿದೆ. ತತ್‌ಕ್ಷಣದ ಉದ್ದೇಶಗಳ ಸಾಧನೆಗೆ ಸಹಕಾರವು ಅಗತ್ಯ, ಜೊತೆಗೆ ಸ್ವಲ್ಪ ಮಟ್ಟಿಗಿನ ಮನೋಭಾವದ ಹೊಂದಾಣಿಕೆಯೂ; ಇವು ಇರುವೆಡೆಗಳಲ್ಲಿ ದೊಡ್ಡ ಭಿನ್ನಾಭಿಪ್ರಾಯಗಳು ಹಾನಿಕಾರಕವಾಗುವುದಿಲ್ಲ. ಪರ್ಯಾಯದ್ವೀಪ ಯುದ್ಧದ ಇತಿಹಾಸಕಾರರಾದ ಸರ್ ವಿಲಿಯಮ್ ನೇಪಿಯರ್ ನೆಪೋಲಿಯನ್‌ನನ್ನು ಮೆಚ್ಚಿಕೊಂಡರು, ಆದರೆ ವೆಲಿಂಗ್‌ಟನ್ ಅವರಿಗೆ ಇಷ್ಟವಾಗಲಿಲ್ಲ; ನೆಪೋಲಿಯನ್‌ನ ಸೋಲು ವಿಷಾದಕರ ಎಂಬ ಭಾವನೆ ಅವರ ಪುಸ್ತಕದಲ್ಲಿ ವ್ಯಕ್ತವಾಗಿದೆ. ಜಾತಿಯ ಬಗೆಗಿನ ಅವರ ಭಾವನೆ ಮತ್ತು ಸೈನಿಕ ಕರ್ತವ್ಯದ ಬಗೆಗಿನ ಧೋರಣೆಗಳು ಅಂತಹ ಶುದ್ಧ ಬೌದ್ಧಿಕ ನಂಬಿಕೆಗಳನ್ನೂ ಆವರಿಸುತ್ತವೆ, ಅಲ್ಲದೆ ಉಗ್ರ ಟೋರಿಯ ಹಾಗೆ ಅವರು ಫ್ರೆಂಚ್‌ರ ವಿರುದ್ಧ ಸಮರ್ಥವಾಗಿ ಹೋರಾಡಿದರು. ಅದೇ ರೀತಿಯಲ್ಲಿಯೇ, ಸಂದರ್ಭ ಒದಗಿದರೆ, ಇಂದಿನ ಬ್ರಿಟಿಷ್ ಟೋರಿಗಳು ಹಿಟ್ಲರ್ ವಿರುದ್ಧ ಅವನ ಬಗ್ಗೆ ಮೆಚ್ಚಿಕೆಯಿಲ್ಲದಿದ್ದರೆ ಹೇಗೋ ಹಾಗೆ ಉತ್ಸಾಹದಿಂದ ಹೋರಾಡುತ್ತಾರೆ.

ಒಂದು ರಾಷ್ಟ್ರ ಅಥವಾ ಪ್ರದೇಶ ಅಥವಾ ಪಕ್ಷವೊಂದಕ್ಕೆ ಅಧಿಕಾರ ನೀಡಲು ಆವಶ್ಯಕವಾದ ಏಕತ್ವವು, ಭಾವನೆ ಮತ್ತು ಅಭ್ಯಾಸವನ್ನು ಅವಲಂಬಿಸಿದ ಅನುಷ್ಠಾನದ ಏಕತೆ. ಇದು ಇರುವೆಡೆಯಲ್ಲಿ ಬೌದ್ಧಿಕ ನಂಬಿಕೆಗಳನ್ನು ಕಡೆಗಣಿಸಬಹುದು. ಪ್ರಸ್ತುತದಲ್ಲಿ ಅದು ಗ್ರೇಟ್ ಬ್ರಿಟನ್‌ನಲ್ಲಿ ಇದೆ, ಆದರೆ ೧೭೪೫ ರನಂತರ ಅದು ಇರಲಿಲ್ಲ. ೧೭೯೨ ರಲ್ಲಿ ಅದು ಫ್ರಾನ್ಸ್‌ನಲ್ಲಿರಲಿಲ್ಲ, ಅಥವಾ ಮಹಾಯುದ್ಧಕಾಲದಲ್ಲಿಯೂ ಆನಂತರ ಅಂತರ್ಯುದ್ಧದಲ್ಲಿಯೂ ರಷ್ಯಾದಲ್ಲಿ ಇರಲಿಲ್ಲ. ಈಗಲೂ ಸ್ಪೈನ್‌ನಲ್ಲಿ ಅದು ಇಲ್ಲ. ಕಾರ್ಯನಿಷ್ಠೆಯ ಮೇಲೆ ನಂಬಿಕೆಯಿರುವ ಸರ್ಕಾರವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡುವುದು ಕಷ್ಟಕರವೇನಲ್ಲ; ಆದರೆ ಹಾಗಾಗದಾದಾಗ ಪರಿಸ್ಥಿತಿಯು ಕಷ್ಟಕರವಾಗುತ್ತದೆ. ಪ್ರಚಾರ ಸ್ವಾತಂತ್ರ್ಯವು ಅಂತರ್ಯುದ್ಧದ ಸನ್ನಿವೇಶದಲ್ಲಿ ಅಸಾಧ್ಯ ಎಂಬುದು ಸುಸ್ಪಷ್ಟ; ಹಾಗೆಯೇ ಅಂತರ್ಯುದ್ಧದ ಸಮೀಪ ಸಂಭವದ ಸ್ಥಿತಿಯಲ್ಲಿ ಪ್ರಚಾರಕ್ಕೆ ಕಡಿವಾಣ ಹಾಕಬೇಕೆಂಬ ವಾದವು ಕಡಿಮೆ ತೀವ್ರವಾದುದು ಅಷ್ಟೆ. ಹಾಗಾಗಿ ಅಪಾಯಕಾರಿ

ಸನ್ನಿವೇಶಗಳಲ್ಲಿ, ಒತ್ತಾಯಪೂರ್ವಕ ಏಕತೆಯನ್ನು ಹೇರುವುದು ಆವಶ್ಯಕವೆನಿಸುತ್ತದೆ.

ಈಗ ನಾವು ಎರಡನೆಯ ಸತ್ಯದ ಬಗ್ಗೆ ಪರಿಶೀಲಿಸೋಣ: ಅದೆಂದರೆ ವಾಸ್ತವಕ್ಕೆ ಅನುಗುಣವಾದ ನಂಬಿಕೆಗಳನ್ನು ಹೊಂದುವುದು ಅನುಕೂಲಕರ ಎಂಬುದು. *'ನೇರ'* ಅನುಕೂಲಗಳ ಮಟ್ಟಿಗೆ ಹೇಳುವುದಾದರೆ, ನಂಬಿಕೆಗಳ ಸೀಮಿತ ವಲಯಕ್ಕೆ ಮಾತ್ರ ಇದು ಅನ್ವಯಿಸುವಂಥದು: ಮೊದಲನೆಯದಾಗಿ, ಭಾರಿ ಸ್ಫೋಟಕಗಳು ಮತ್ತು ವಿಷಪೂರಿತ ಅನಿಲಗಳ ಮೇಲಣ ಒಡೆತನದಂತಹ ತಾಂತ್ರಿಕ ವಿಷಯಗಳು; ಎರಡನೆಯದಾಗಿ, ವಿರುದ್ಧ ಶಕ್ತಿಗಳ ಸಾಪೇಕ್ಷ ಬಲಕ್ಕೆ ಸಂಬಂಧಿಸಿದ ವಿಷಯಗಳು. ಈ ವಿಷಯಗಳಿಗೆ ಸಂಬಂಧಿಸಿದಂತೆಯೂ, ಧೋರಣೆಗಳನ್ನು ರೂಪಿಸುವವರು ಮತ್ತು ಸೈನಿಕ ಕಾರ್ಯಾಚರಣೆಗಳನ್ನು ನಡೆಸುವವರು ಮಾತ್ರವೇ ಈ ಬಗ್ಗೆ ಸರಿಯಾದ ದೃಷ್ಟಿಕೋನವನ್ನು ಹೊಂದಿರಬೇಕು: ಸಾಮಾನ್ಯ ಜನತೆಯು ಗೆಲವಿನ ಬಗ್ಗೆ ಖಚಿತ ಭರವಸೆಯನ್ನು ಹೊಂದಿರಬೇಕಾದುದು, ಜೊತೆಗೆ ಆಕಾಶದ ಮೂಲಕ ಆಗಬಹುದಾದ ದಾಳಿಗಳ ಅಪಾಯಕ್ಕೆ ಸಿದ್ಧರಾಗಿರಬೇಕಾದುದು ಆವಶ್ಯಕ. ಸರ್ಕಾರ, ಸೈನ್ಯಗಳ ಮುಖ್ಯಸ್ಥರು ಮತ್ತವರ ತಾಂತ್ರಿಕ ಸಿಬ್ಬಂದಿ ಇವರಿಗೆ ಮಾತ್ರ ವಸ್ತುಸ್ಥಿತಿಯ ಅರಿವಿರಬೇಕು. ಮಿಕ್ಕ ಎಲ್ಲರಲ್ಲಿಯೂ ಕುರುಡು ವಿಶ್ವಾಸ ಮತ್ತು ಕುರುಡು ವಿಧೇಯತೆಗಳಿರಬೇಕಾದುದು ಅತ್ಯಂತ ಅಪೇಕ್ಷಣೀಯ.

ಚದುರಂಗದ ಆಟದಂತೆ ಮಾನವ ವ್ಯವಹಾರಗಳನ್ನೂ ಕರಾರುವಾಕ್ಕಾಗಿ ಲೆಕ್ಕಾಚಾರ ಹಾಕಬಹುದಾಗಿದ್ದಿದ್ದರೆ ಹಾಗೂ ರಾಜಕಾರಣಿಗಳೂ ಸೇನಾಧಿಪತಿಗಳೂ ಒಳ್ಳೆಯ ಚದುರಂಗದಾಟಗಾರರಂತೆ ಬುದ್ಧಿವಂತರಾಗಿದ್ದರೆ, ಈ ದೃಷ್ಟಿಕೋನದಲ್ಲಿ ಸ್ವಲ್ಪಮಟ್ಟಿಗಿನ ಸತ್ಯವಿರುತ್ತಿತ್ತು. ಯುದ್ಧದಲ್ಲಿ ಗೆದ್ದರೆ ಆಗುವ ಅನುಕೂಲಗಳು ಸಂಶಯಾಸ್ಪವಾದವು, ಆದರೆ ಯುದ್ಧದಲ್ಲಿ ಸೋತರೆ ಆಗುವ ಅನನುಕೂಲಗಳು ಮಾತ್ರ ನಿಶ್ಚಿತ. ಹೀಗಾಗಿ, ವ್ಯವಹಾರಗಳನ್ನು ನೋಡಿಕೊಳ್ಳುವ ಪರಮೋಚ್ಚ ನಾಯಕರು ಗೆಲವು ಯಾರಿಗೆ ದೊರೆಯುವುದೆಂಬುದನ್ನು ಮೊದಲೇ ಊಹಿಸಬಲ್ಲ ಶಕ್ತಿಯಿರುವವರಾದರೆ ಯುದ್ಧಗಳೇ ನಡೆಯುವುದಿಲ್ಲ. ಆದರೆ ವಾಸ್ತವದಲ್ಲಿ ಯುದ್ಧಗಳು ನಡೆಯುತ್ತಲೇ ಇವೆ; ಮತ್ತು ಪ್ರತಿ ಯುದ್ಧದ ಸಂದರ್ಭದಲ್ಲಿಯೂ, ಎರಡು ಕಡೆಯೂ ಅಲ್ಲದಿದ್ದರೂ, ಒಂದು ಕಡೆಯ ಸರ್ಕಾರವಂತೂ ಗೆಲವಿನ ಬಗ್ಗೆ ತಪ್ಪು ಲೆಕ್ಕಾಚಾರ ಹಾಕಿರುತ್ತದೆ. ಇದಕ್ಕೆ ಅನೇಕ ಕಾರಣಗಳು: ಹೆಮ್ಮೆ, ಒಣಜಂಬ, ಅಜ್ಞಾನ, ಸಾಂಕ್ರಾಮಿಕ ಉತ್ಸಾಹ – ಇಂತಹವು. ಜನತೆಯಲ್ಲಿ ಗೆಲವಿನ ಬಗ್ಗೆ ತಿಳಿವಳಿಕೆಯಿಲ್ಲದ

ಆತ್ಮವಿಶ್ವಾಸವನ್ನು ಬಿತ್ತಿದರೆ, ಅದು ಆತ್ಮವಿಶ್ವಾಸ ಹಾಗೂ ಯುದ್ಧೋತ್ಸಾಹಗಳನ್ನು ಆಳುವವರಿಗೆ ಸುಲಭವಾಗಿ ತಿಳಿಸಬಹುದು, ಹಿತಕರವಾದ ವಿಷಯಗಳನ್ನು ಎಲ್ಲ ಪತ್ರಿಕೆಗಳಲ್ಲಿಯೂ ಪ್ರತಿಯೊಂದು ಸಂಭಾಷಣೆಯಲ್ಲಿಯೂ ಉದ್ಘೋಷಿಸುತ್ತಾರೆ, ಆದರೆ ಅವರು ಅಹಿತಕರ ವಿಷಯಗಳನ್ನು ತಿಳಿದಿದ್ದರೂ ಮುಚ್ಚಿಟ್ಟುಕೊಳ್ಳುತ್ತಾರೆ. ಭಾವೋದ್ರೇಕ ಹಾಗೂ ಸ್ವಪ್ರಶಂಸೆಗಳು ಆಕರ್ಷಕವಾದವು, ಸರ್ಕಾರಗಳು ಇದಕ್ಕೆ ಹೊರತಲ್ಲ.

ಯುದ್ಧ ಬಂದಾಗ, ವಿಷಯಗಳನ್ನು ಮುಚ್ಚಿಟ್ಟುಕೊಳ್ಳುವುದರಿಂದ ಬಯಸಿದುದಕ್ಕೆ ನೇರವಾಗಿ ವಿರುದ್ಧವಾದ ಪರಿಣಾಮಗಳೇ ಆಗುವುದು. ಕನಿಷ್ಠ ಪಕ್ಷ ಮುಚ್ಚಿಟ್ಟುಕೊಂಡ ಕೆಲವು ವಾಸ್ತವಾಂಶಗಳಾದರೂ, ಎಲ್ಲರಿಗೂ ಎದ್ದುಕಾಣಬಹುದು; ಭ್ರಮಾಲೋಕದಲ್ಲಿ ದೂಡಿದಷ್ಟೂ ಜನರು ವಾಸ್ತವಗಳಿಂದ ಭಯ ನಿರುತ್ಸಾಹಗಳಿಗೊಳಗಾಗುವುದೇ ಹೆಚ್ಚು. ಮುಕ್ತ ಚರ್ಚೆಯ ಮೂಲಕ ಜನರಲ್ಲಿ ನೋವಿನ ಪರಿಣಾಮಗಳ ಬಗ್ಗೆ ಅರಿವುಂಟು ಮಾಡಿದ ಸಂದರ್ಭಗಳಿಗಿಂತ ಇಂತಹ ಪರಿಸ್ಥಿತಿಯಲ್ಲಿ ಕ್ರಾಂತಿ ಅಥವಾ ಕ್ಷಿಪ್ರ ಪತನ ಸಂಭವಿಸುವ ಸಾಧ್ಯತೆ ಹೆಚ್ಚು.

ವಿಧೇಯ ಮನೋಭಾವವು, ಅಧೀನರಾದವರಿಂದ ಬಲವಂತವಾಗಿ ಪಡೆದಾಗ, ಅದು ಬೌದ್ಧಿಕತೆಗೆ ವಿರುದ್ಧವಾಗಿರುತ್ತದೆ. ಯಾವುದಾದರೊಂದು ಅರ್ಥಹೀನ ಸಿದ್ಧಾಂತವನ್ನು ಬಲವಂತದಿಂದ ಹೇರಿದಾಗ ಅದನ್ನು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿಯಿರುವ ಸಮಾಜದಲ್ಲಿ, ಕನಿಷ್ಠ ಪಕ್ಷ ಹೊರ ನಡತೆಯಲ್ಲಿ, ಉತ್ಕೃಷ್ಟ ವ್ಯಕ್ತಿಗಳು ಇಲ್ಲವೇ ಮೂರ್ಖರಂತಿರಬೇಕು ಅಥವಾ ಏನೂ ಆಗದಂತೆ ತೋರಿಸಿಕೊಳ್ಳಬೇಕು. ಅದರ ಪರಿಣಾಮವಾಗಿ ಬೌದ್ಧಿಕ ಮಟ್ಟವು ಕುಸಿಯುತ್ತದೆ, ಇದರಿಂದ ಅನತಿಕಾಲದಲ್ಲಿಯೇ ತಾಂತ್ರಿಕ ಪ್ರಗತಿ ಕುಂಠಿತಗೊಳ್ಳುವಂತಾಗುತ್ತದೆ. ಸರ್ಕಾರದ ಅಧಿಕೃತ ಸಿದ್ಧಾಂತವು ಪ್ರಾಮಾಣಿಕ ಬುದ್ಧಿಜೀವಿಗಳಿಗೆ ಒಪ್ಪಿತವಾಗದಾಗ ಈ ಪರಿಸ್ಥಿತಿ ಮತ್ತಷ್ಟು ನಿಜವೆನಿಸುತ್ತದೆ. ನಾಜ಼ಿಗಳು ಬಹುಸಂಖ್ಯೆಯ ಅತ್ಯಂತ ಸಮರ್ಥ ವ್ಯಕ್ತಿಗಳನ್ನು ದೇಶದಿಂದ ಹೊರಗೋಡಿಸಿದೆ; ಇದರಿಂದ ತಕ್ಷಣ ಅಥವಾ ನಿಧಾನವಾಗಿಯಾದರೂ, ಅವರ ಸೈನಿಕ ತಂತ್ರಗಳ ಮೇಲೆ ವಿನಾಶಕಾರಕ ಪರಿಣಾಮವನ್ನು ಬೀರಿಯೇ ತೀರುತ್ತದೆ. ವಿಜ್ಞಾನದ ನೆರವಿಲ್ಲದೆ ತಂತ್ರಜ್ಞಾನವು ಹೆಚ್ಚು ಕಾಲ ಪ್ರಗತಿಯನ್ನು ಸಾಧಿಸಲಾರದು, ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದ ಕಡೆ ವಿಜ್ಞಾನವು ಮುಂದುವರಿಯಲಾರದು. ಸೈದ್ಧಾಂತಿಕ ಏಕತೆಯ ಒತ್ತಾಯದ ಈ ಪರಿಣಾಮವು, ಯುದ್ಧದಿಂದ ಬಹು ದೂರವಾದ ವಿಷಯಗಳ ಬಗ್ಗೆಯೂ, ಕೊನೆಗೆ ವೈಜ್ಞಾನಿಕ ಯುಗದ ಯುದ್ಧಸಾಮರ್ಥ್ಯದ ಬಗ್ಗೆಯೂ ಮಾರಕವನಿಸುತ್ತದೆ.

ನಾವೀಗ ನಮ್ಮ ಎರಡು ಸತ್ಯಗಳ ಬಗ್ಗೆ ವ್ಯಾವಹಾರಿಕ ವಿಶ್ಲೇಷಣೆಗೆ ತೊಡಗೋಣ. ಸಮಾಜದ ಒಗ್ಗಟ್ಟು ಸಾಧಿತವಾಗಬೇಕಾದರೆ ಆದರ್ಶ ನಡವಳಿಕೆ ಅಥವಾ ಭಾವನೆಗಳ ಬಗೆಗಿನ ನೀತಿಸಂಹಿತೆಯೊಂದರ, ಅಥವಾ ಈ ಮೂರರ ಒಂದು ಹದವಾದ ಮಿಶ್ರಣವು ಇರಬೇಕಾಗುತ್ತದೆ; ಇಂಥದೊಂದು ಇಲ್ಲದೆ, ಸಮಾಜವು ಛಿದ್ರವಾಗುತ್ತದೆ, ಒಬ್ಬ ನಿರಂಕುಶ ಪ್ರಭುವಿನ ಅಥವಾ ಪರಕೀಯ ದಾಳಿಯ ಕೈಗೆ ಸಿಕ್ಕಿಬಿಡುತ್ತದೆ. ಆದರೆ ಒಗ್ಗಟ್ಟಿನ ಈ ಬಗೆಯ ಸಾಧನವು ಪರಿಣಮಕಾರಿಯಾಗಬೇಕಾದರೆ, ಅದರ ಬಗ್ಗೆ ಜನರಲ್ಲಿ ಆಳವಾದ ಒಲವಿರಬೇಕು; ಸಣ್ಣ ಅಲ್ಪಸಂಖ್ಯಾತ ಗುಂಪಿನ ಮೇಲೆ ಇದನ್ನು ಹೇರಬಹುದು, ಆದರೆ ಅದರಲ್ಲಿ ಜಾಣ್ಮೆ ನಡವಳಿಕೆಗಳ ದೃಷ್ಟಿಯಿಂದ ಅತ್ಯುತ್ಕೃಷ್ಟ ಎನಿಸುವ ವ್ಯಕ್ತಿಗಳಿರಬಾರದು; ಹಾಗೆಯೇ ಅದರ ಬಗೆಗಿನ ಒಲವು ಬಹುಪಾಲು ಜನತೆಯಲ್ಲಿ ಸಹಜವಾಗಿ ಸ್ಫುರಿಸಿರಬೇಕು. ನಾಯಕ ಅಥವಾ ರಾಷ್ಟ್ರದ ಬಗೆಗಿನ ಹೆಮ್ಮೆ ಅಥವಾ ಧಾರ್ಮಿಕ ನಿಷ್ಠೆ – ಇವುಗಳು ಇಂತಹ ಸಾಮಾಜಿಕ ಏಕತೆಯನ್ನು ಸಾಧಿಸುವ ಅತ್ಯುತ್ತಮ ಸಾಧನಗಳೆಂಬುದು ಇತಿಹಾಸದಲ್ಲಿ ಸಿದ್ಧವಾಗಿವೆ. ಆದರೆ ನಾಯಕನಿಷ್ಠೆಯು ಈಗ ಹಿಂದಿನಷ್ಟು ದೀರ್ಘಕಾಲಿಕವಾದುದಾಗಿರಲಾರದು; ಇದಕ್ಕೆ ಕಾರಣ ಆನುವಂಶಿಕ ಸಾರ್ವಭೌಮತ್ವವು ಕೊನೆಗೊಂಡಿರುವುದು. ಹಾಗೆಯೇ ಧಾರ್ಮಿಕ ನಿಷ್ಠೆಯು ಮುಕ್ತ ವೈಚಾರಿಕತೆಯ ಹರಡುವಿಕೆಯ ಕಾರಣದಿಂದ ಸಡಿಲಗೊಳ್ಳುತ್ತಿದೆ. ಕೊನೆಗೆ ಉಳಿಯುವುದು ರಾಷ್ಟ್ರದ ಬಗೆಗಿನ ಹೆಮ್ಮೆ, ಇದು ಹಿಂದಿಗಿಂತ ಈಗ ಹೆಚ್ಚು ಪ್ರಮುಖವಾಗಿದೆ. ಈ ಭಾವನೆಯು, ಸರ್ಕಾರದ ಅಧಿಕೃತ ಸಿದ್ಧಾಂತವು ಅದಕ್ಕೆ ವಿರುದ್ಧವಾಗಿದ್ದರೂ, ಕ್ರಿಶ್ಚಿಯನ್ ಮತದಷ್ಟಲ್ಲದಿದ್ದರೂ, ಅದು ಈಚೆಗೆ ಸೋವಿಯತ್ ರಷ್ಯಾದಲ್ಲಿ ಮತ್ತೆ ತಲೆಯೆತ್ತುತ್ತಿರುವುದು ಸ್ವಾರಸ್ಯಕರ ವಿಷಯವಾಗಿದೆ.

ರಾಷ್ಟ್ರದ ಬಗೆಗಿನ ಹೆಮ್ಮೆಯನ್ನುಳಿಸಿಕೊಳ್ಳಲು ಸ್ವಾತಂತ್ರ್ಯದಲ್ಲಿ ಎಷ್ಟರ ಮಟ್ಟಿಗಿನ ಮೂಗು ತೂರಿಸುವುದು ಅನಿವಾರ್ಯ? ಈ ಮೂಗು ತೂರಿಸುವ ಪ್ರಸಂಗಗಳೆಲ್ಲ ಸಾಮಾನ್ಯವಾಗಿ ನಡೆಯುವುದು ಈ ಉದ್ದೇಶದ ಸಾಧನೆಗಾಗಿಯೇ. ಸರ್ಕಾರದ ಸಾಂಪ್ರದಾಯಿಕತೆಯ ಬಗ್ಗೆ ಭಿನ್ನಾಭಿಪ್ರಾಯವುಳ್ಳವರನ್ನು ರಷ್ಯಾದಲ್ಲಿ ಅರಾಷ್ಟ್ರೀಯರೆಂದು ಪರಿಗಣಿಸಲಾಗುತ್ತದೆ; ಜರ್ಮನಿ ಮತ್ತು ಇಟಲಿಗಳಲ್ಲಾದರೋ, ಸರ್ಕಾರದ ಶಕ್ತಿ ನಿಂತಿರುವುದೇ ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸುವುದರ ಮೂಲಕ, ಅದಕ್ಕೆ ವ್ಯಕ್ತಪಡಿಸುವ ವಿರೋಧವನ್ನು ರಷ್ಯಾದ ಬಗೆಗಿನ ಒಲವು ಎಂದೇ ಪರಿಗಣಿಸಲಾಗುತ್ತದೆ; ಫ್ರಾನ್ಸ್‌ನಲ್ಲಿ, ಸ್ವಾತಂತ್ರ್ಯವು ಮೊಟಕಾದರೆ ಅದಕ್ಕೆ ಕಾರಣ ಜರ್ಮನಿಯ ಪರ ದೇಶದ್ರೋಹವನ್ನು ತಪ್ಪಿಸುವುದು. ಈ

ಎಲ್ಲ ದೇಶಗಳಲ್ಲಿರುವ ಕಷ್ಟ ಪರಿಸ್ಥಿತಿಯೆಂದರೆ, ವರ್ಗಸಂಘರ್ಷವು ದೇಶಗಳ ನಡುವಣ ಸಂಘರ್ಷವನ್ನು ಮೀರುತ್ತದೆ ಎಂಬುದು; ಇದರಿಂದಾಗಿ ಪ್ರಜಾಪ್ರಭುತ್ವ ರಾಷ್ಟ್ರಗಳ ಬಂಡವಾಳದಾರರನ್ನೂ, ಫ್ಯಾಸಿಸ್ಟ್ ರಾಷ್ಟ್ರಗಳ ಸಮಾಜವಾದಿಗಳು ಹಾಗೂ ಕಮ್ಯುನಿಸ್ಟರನ್ನೂ ಸ್ವಲ್ಪಮಟ್ಟಿಗೆ ರಾಷ್ಟ್ರಹಿತಕ್ಕೆ ಹೊರತಾದ ಪರಿಗಣನೆಗಳಿಂದ ನೋಡಲಾಗುತ್ತದೆ. ರಾಷ್ಟ್ರೀಯ ಗುರಿಗಳಿಂದ ದೂರವಾದ ಇಂತಹವನ್ನು ತಪ್ಪಿಸಿದರೆ, ರಾಷ್ಟ್ರವೊಂದರ ಶಕ್ತಿಯು ಹೆಚ್ಚುವ ಸಂಭವವಿರುತ್ತದೆ, ಆದರೆ ಈ ಕಾರಣಕ್ಕಾಗಿ ಇಡೀ ಬೌದ್ಧಿಕತೆಯ ಮಟ್ಟವೇ ಕುಸಿಯುವಂತೆ ಮಾಡುವುದು ಅನವಶ್ಯಕ. ಈ ಸಮಸ್ಯೆಯು ಸರ್ಕಾರಗಳಿಗೆ ಎದುರಿಸಲು ಕಷ್ಟಕರವಾದುದು, ಏಕೆಂದರೆ ರಾಷ್ಟ್ರೀಯತೆ ಎಂಬುದೇ ಮೂರ್ಖತನದ ಆದರ್ಶ, ಇದರಿಂದಾಗಿ ಯೂರೋಪ್ ನಾಶದೆಡೆಗೆ ಸಾಗುತ್ತಿದೆ ಎಂಬುದು ಬುದ್ಧಿಜೀವಿಗಳ ನಂಬಿಕೆ. ಇದಕ್ಕೆ ಅತ್ಯುತ್ತಮ ಪರಿಹಾರವೆಂದರೆ, ಅದನ್ನು – ಪ್ರಜಾಪ್ರಭುತ್ವವೋ ಕಮ್ಯುನಿಸಮ್ಮೋ ಸಾಮೂಹಿಕ ಸುರಕ್ಷಿತತೆಯೊ – ಯಾವುದಾದರೂ ಅಂತಾರಾಷ್ಟ್ರಿಯ ಘೋಷಣೆಗಳಲ್ಲಿ ಹುದುಗಿಸಿಬಿಡುವುದು. ಇದನ್ನು ಜರ್ಮನಿ ಅಥವಾ ಇಟಲಿಯಂತಹ ಅನುಷ್ಠಾನ ಮಾಡಲಾಗದೆಡೆಗಳಲ್ಲಿ, ಬಾಹ್ಯ ಏಕತೆಯು ಸಾಧಿತವಾಗಬೇಕಾದರೆ ದೌರ್ಜನ್ಯ ಆವಶ್ಯಕವಾಗುತ್ತದೆ, ಇದರಿಂದ ಭಾವನೆಯ ಸಹಜ ಸ್ಫುರಣೆ ಸುಲಭವಾಗಿ ಹುಟ್ಟಲಾರದು.

ಒಟ್ಟಾರೆ, ದೇಶದ ಏಕತೆಗೆ ಯಾವುದಾದರೂ ಒಂದು ಸಿದ್ಧಾಂತವೋ ಭಾವನೆಯೋ ಆವಶ್ಯಕವಾಗುತ್ತದೆ. ಆದರೆ ಅದು ಶಕ್ತಿಮೂಲವಾಗಬೇಕಾದರೆ, ಬಹುಪಾಲು ಜನತೆಯು ಅದನ್ನು ಸಹಜವಾಗಿಯೂ ಆಳವಾಗಿಯೂ ಅನುಭವಿಸಬೇಕು, ತಾಂತ್ರಿಕ ಸಾಮರ್ಥ್ಯಕ್ಕಾಗಿ ಅವಲಂಬಿಸಬೇಕಾದವರಲ್ಲಿಯೂ ಗಣನೀಯ ಪ್ರಮಾಣವನ್ನೊಳಗೊಂಡಂತೆ. ಈ ಪರಿಸ್ಥಿತಿಯು ಎಲ್ಲಿ ಇರುವುದಿಲ್ಲವೋ ಅಲ್ಲಿ ಸರ್ಕಾರವು ಸೆನ್ಸಾರ್‌ಷಿಪ್ ಮತ್ತು ಕಠಿಣಕ್ರಮಗಳಿಂದ ಅದನ್ನು ಜಾರಿಗೊಳಿಸಲು ಪ್ರಯತ್ನಿಸಬಹುದು; ಆದರೆ ಸೆನ್ಸಾರ್‌ಷಿಪ್ ಮತ್ತು ಕಠಿಣಕ್ರಮಗಳು ತೀವ್ರವಾದರೆ ಅದರಿಂದ ಜನತೆಯು ವಾಸ್ತವದಿಂದ ದೂರ ಉಳಿಯುವಂತೆ ಆಗುತ್ತದೆ, ತಿಳಿದುಕೊಳ್ಳಲೇಬೇಕಾದ ಸಂಗತಿಗಳ ಬಗ್ಗೆ ಅಜ್ಞಾನವೋ ಅರಿವಿಲ್ಲದ ಸ್ಥಿತಿಯೋ ಉಂಟಾಗುತ್ತದೆ. ಆದರೆ ಅಧಿಕಾರಸೂತ್ರ ಹಿಡಿದವರು ತಮ್ಮದೇ ಅಧಿಕಾರಪ್ರೇರಿತ ಭಾವನೆಯಿಂದ ಕೂಡಿರುವುದರಿಂದ, ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸಲು ಆವಶ್ಯಕವೆಂದು ಅವರು ಭಾವಿಸುವ ಮೂಗು ತೂರಿಸುವಿಕೆಯ ಪ್ರಮಾಣವು ಬೇಕಾದುದಕ್ಕಿಂತ ಯಾವಾಗಲೂ ಕಡಿಮೆ ಪ್ರಮಾಣದ್ದೇ ಆಗಿರುತ್ತದೆ. ಹೀಗಾಗಿ ಈ ಮೂಗು

ತೂರಿಸುವಿಕೆಯ ವಿರುದ್ಧದ ಭಾವನೆಯು ಅಲ್ಲಲ್ಲಿ ಉಂಟಾಗುತ್ತದೆ; ಅದು ಅನಾಯಕತ್ವವನ್ನುಂಟುಮಾಡುವಷ್ಟು ಪ್ರಮಾಣದಲ್ಲಿಲ್ಲದಿದ್ದರೆ, ಅದರಿಂದ ರಾಷ್ಟ್ರಶಕ್ತಿಗೆ ಪೂರಕವೇ ಆಗುತ್ತದೆ. ಆದರೆ ಈ ವಿಷಯದಲ್ಲಿ ಇದಕ್ಕಿಂತ ಹೆಚ್ಚಿನ ಸಾಮಾನ್ಯೀಕರಣ ಸಾಧ್ಯವಾಗದು, ಏನಿದ್ದರೂ ನಿರ್ದಿಷ್ಟ ಸನ್ನಿವೇಶಗಳನ್ನೇ ಪರಿಶೀಲಿಸಬೇಕು.

ಮೇಲಿನ ಚರ್ಚೆಯುದ್ದಕ್ಕೂ ನಾವು ಪರಿಶೀಲಿಸಿರುವುದು ಅಂಧಾಭಿಮಾನೀ ಸಿದ್ಧಾಂತವೊಂದರ ತಕ್ಷಣದ ಪರಿಣಾಮಗಳನ್ನು ಕುರಿತು. ಆದರೆ ದೀರ್ಘಕಾಲೀನ ಪರಿಣಾಮಗಳು ಇವುಗಳಿಂದ ಬೇರೆಯೇ ಆಗಿರುತ್ತವೆ. ಅಧಿಕಾರದ ಆಕರವನ್ನಾಗಿ ಬಳಸಿಕೊಂಡ ಸಿದ್ಧಾಂತವೊಂದು ಸ್ವಲ್ಪ ಕಾಲ ತೀವ್ರ ಪ್ರಯತ್ನಗಳನ್ನು ಉತ್ತೇಜಿಸುತ್ತದೆ; ಆದರೆ ಈ ಪ್ರಯತ್ನಗಳು, ವಿಶೇಷವಾಗಿ ಅವು ಯಶಸ್ವಿಯಾಗದಿದ್ದರೆ, ದಣಿವನ್ನು ಉಂಟುಮಾಡುತ್ತದೆ, ದಣಿವು ಸಂದೇಹಕ್ಕೆ ಕಾರಣವಾಗುತ್ತದೆ – ಮೊದಮೊದಲಿಗೆ ಇದು ಖಚಿತ ಅಪನಂಬಿಕೆಯಾಗದಿದ್ದರೂ, ಸಶಕ್ತವಾದ ಮನಸ್ಸಿನಲ್ಲಿ ಗಾಢವಾದ ನಂಬಿಕೆಯ ಕೊರತೆಯನ್ನುಂಟುಮಾಡುತ್ತದೆ.[೧]

---

[೧] ಈ ವಿಷಯದ ಬಗೆಗಿನ ತುಂಬ ಸ್ವಾರಸ್ಯಕರವಾದ ಬರವಣಿಗೆಗ ಇ. ಲ್ಯಾನ್ಸ್ ಅವರ *'ಅಸೈನ್‌ಮೆಂಟ್ ಇನ್ ಯುಟೋಪಿಯ'* ಎಂಬ ಗ್ರಂಥದಲ್ಲಿನ 'ರಷ್ಯಾದ ಆಗಸದಲ್ಲಿ ಸಂದೇಹದ ಕಾವಳ' ಎಂಬ ಅಧ್ಯಾಯವನ್ನು ನೋಡಿ. ಅಲ್ಲಿ ಪಂಚವಾರ್ಷಿಕ ಯೋಜನೆ ಜಾರಿಯಾದಾಗ ಹೇಗೆ ಉತ್ಸಾಹಭರಿತ ಪ್ರತಿಕ್ರಿಯೆ ಸಿಕ್ಕಿತು ಎಂಬುದನ್ನು ವಿವರಿಸಿದ ಬಳಿಕ, ಅದರಿಂದ ನಿರೀಕ್ಷಿತ ಸೌಲಭ್ಯಗಳು ದೊರೆಯದಿದ್ದಾಗ ಕ್ರಮೇಣ ಆದ ಭ್ರಮನಿರಸನವನ್ನು ನಿರೂಪಿಸುತ್ತ ಅವರೆನ್ನುತ್ತಾರೆ: "ಸಂದೇಹವೆಂಬ ದಟ್ಟ ಕಾವಳವು ರಷ್ಯಾವನ್ನೆಲ್ಲ ಆವರಿಸಿದುದನ್ನು, ಜನರ ಮನಸ್ಸು ಬದುಕುಗಳಲ್ಲಿ ಆಳವಾಗಿ ಇಳಿದುದನ್ನು ನಾನು ಗಮನಿಸಿದೆ. ಜನರಿಗಾದಂತೆಯೇ ನಾಯಕರ ಹೃದಯಗಳನ್ನೂ ಅದು ನಿರಾಶೆಗೊಳಿಸಿತು. ಜನರಲ್ಲಿ ಉತ್ಸಾಹ ತುಂಬುವ ಪ್ರಚಾರಕಾರ್ಯದಲ್ಲಿ ತಮ್ಮ ಕಾಲವನ್ನೆಲ್ಲ ಕಳೆಯುತ್ತಿದ್ದವರು ಖಾಸಗಿ ಮಾತುಕತೆಗಳಲ್ಲಿ ಯೋಜನೆಯ ಯೋಜನಾರಾಹಿತ್ಯದ ಬಗ್ಗೆ, ವಸ್ತು ಮತ್ತು ಸಾಮರ್ಥ್ಯಗಳ ಅಪಾರ ಅಪವ್ಯಯದ ಬಗ್ಗೆ, ಒಂದು ಭಾಗದಲ್ಲಿ ಊದಿ ಮಿಕ್ಕ ಕಡೆಗಳಲ್ಲಿ ಕ್ಷೀಣಿಸಿಸಿದ್ದ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬಗ್ಗೆ ಖಾರವಾಗಿ ಮಾತನಾಡುತ್ತಿದ್ದರು. ಒಂದೆಡೆ ನಗದು ಪ್ರೋತ್ಸಾಹಧನ ನೀಡಿಕೆ, ಮತ್ತೊಂದು ಕಡೆ ದಂಡನೆ ವಿಧಿಸುವುದರ ಪರಿಣಾಮಕಾರಿಕತೆಯ ಬಗ್ಗೆಯೂ ಸಂದೇಹಗಳು ವ್ಯಕ್ತವಾಗುತ್ತಿದ್ದವು....ಸಾಮಾನ್ಯ ಕಾರ್ಮಿಕರಲ್ಲಿ ಶಿಸ್ತು ಮೂಡಿಸಲು ಮತ್ತು ಅವರನ್ನು ದಮನ ಮಾಡಲು ಸುಮಾರು ಪ್ರತಿ ವಾರವೂ ಭಯಂಕರ ವಿಧಾನಗಳನ್ನು ಸೃಷ್ಟಿಸಲಾಗುತ್ತಿತ್ತು. ಅವುಗಳಲ್ಲಿ ಒಂದು ಎಂದರೆ, ಒಂದು ದಿನದ ಮಟ್ಟಿಗೆ ಕೆಲಸಕ್ಕೆ ಗೈರುಹಾಜರಾದರೂ ಕೆಲಸದಿಂದ ವಜಾಗೊಳಿಸುವುದು, ದಿನಸಿ ಪುಸ್ತಕ ಮತ್ತು ವಾಸಸ್ಥಳವನ್ನು ರದ್ದುಗೊಳಿಸುವ ಶಿಕ್ಷೆ. ಇದು ಒಂದು ಬಗೆಯ ನಿಧಾನ ಮರಣದಂಡನೆಯೇ ಸರಿ." ಮತ್ತೊಂದು ಅಧ್ಯಾಯದಲ್ಲಿ ಅವರು ಬರೆಯುತ್ತಾರೆ: "ಸರ್ವಾಧಿಕಾರದಲ್ಲಿ ಜನರು ಜೀವನಪರ್ಯಂತ ಉತ್ಸಾಹಪಡಬೇಕಾದ ಶಿಕ್ಷೆಗೆ ಗುರಿಯಾಗುತ್ತಾರೆ ಎಂದು ಹೇಳುವ ಮಾತು ಸರಿಯಾಗಿದೆ. ಆದರೆ ಅದು ಮಹಾ ಕಠಿಣ

ಉತ್ಸಾಹವನ್ನು ಹೆಚ್ಚಿಸಲು ಹೆಚ್ಚು ಹೆಚ್ಚು ಪ್ರಚಾರಕಾರ್ಯ ಕೈಗೊಂಡಷ್ಟೂ ಉಂಟಾಗುವ ಪ್ರತಿಕ್ರಿಯೆ ಹೆಚ್ಚು ತೀವ್ರವಾಗಿರುತ್ತದೆ, ನೆಮ್ಮದಿಯ ಜೀವನವನ್ನಷ್ಟೇ ನಾವು ಬಯಸಬೇಕಾದದ್ದು ಎಂಬ ಸತ್ಯ ಗೋಚರವಾಗುವವರೆಗೂ ಇದು ಸಾಗುತ್ತದೆ. ಕೊಂಚ ಕಾಲದ ವಿರಾಮದನಂತರ ಜನತೆಯು ಮತ್ತೆ ಉತ್ಸಾಹಕ್ಕೆ ಅಣಿಗೊಂಡಿರುವಾಗ, ಉತ್ಸಾಹ ತುಂಬಲು ಹೊಸದೇ ಒಂದು ಪ್ರೇರಣೆ ಆವಶ್ಯಕವಾಗುತ್ತದೆ, ಏಕೆಂದರೆ ಹಳೆಯದೆಲ್ಲ ಆ ಹೊತ್ತಿಗೆ ಬೇಸರವೆನಿಸಿಬಿಟ್ಟಿರುತ್ತದೆ. ಹೀಗಾಗಿ ತೀರ ಹೆಚ್ಚು ಮಟ್ಟಿಗೆ ಬಳಕೆಗೊಂಡ ಸಿದ್ಧಾಂತಗಳ ಪರಿಣಾಮವೆಲ್ಲ ಕೇವಲ ತಾತ್ಕಾಲಿಕವಾಗಿರುತ್ತದೆ. ಹದಿಮೂರನೆಯ ಶತಮಾನದಲ್ಲಿ ಜನರ ಕಲ್ಪನೆಯನ್ನು ಗರಿಗೆದರುತ್ತಿದ್ದವರು ಮೂವರು ಮಹನೀಯರು: ಪೋಪ್, ಸಮ್ರಾಟ ಮತ್ತು ಸುಲ್ತಾನ. ಈಗ ಸಮ್ರಾಟ ಮತ್ತು ಸುಲ್ತಾನರು ಕಣ್ಮರೆಯಾಗಿದ್ದಾರೆ, ಪೋಪ್‌ನ ಅಧಿಕಾರ ಈಗ ಹಿಂದಿದ್ದುದರ ಪೇಲವ ನೆರಳು ಮಾತ್ರ. ಹದಿನಾರನೆಯ ಶತಮಾನ ಮತ್ತು ಹದಿನೇಳರ ಮೊದಲನೆಯ ಭಾಗದಲ್ಲಿ ಯೂರೋಪ್‌ನೆಲ್ಲ ವ್ಯಾಪಿಸಿದ್ದುದು ಕೆಥೋಲಿಕ್ ಮತ್ತು ಪ್ರಾಟೆಸ್ಟಂಟ್‌ರ ನಡುವಣ ಸಂಘರ್ಷ, ಆಗಿನ ಭರಾಟೆಯ ಪ್ರಚಾರವು ಇವೆರಡರಲ್ಲಿ ಯಾವುದಾದರೊಂದು ಸಿದ್ಧಾಂತದ ಪರವಾಗಿರುತ್ತಿತ್ತು. ಆದರೆ ಅಂತಿಮ ವಿಜಯವು ಇವೆರಡರ ಪರವಾಗಿಯೂ ಇರದೆ, ಇವೆರಡರ ಸಿದ್ಧಾಂತಗಳನ್ನೂ ಅಮುಖ್ಯ ಎಂದು ಭಾವಿಸಿದವರ ಪರವಾಗಿತ್ತು. ಸ್ವಿಫ್ಟ್ ಈ ಸಂಘರ್ಷವನ್ನು ಬಿಗ್–ಎಂಡಿಯನ್ಸ್ ಮತ್ತು ಲಿಟ್ಲ್–ಎಂಡಿಯನ್‌ರ ನಡುವಣ ಯುದ್ಧದಂತೆ ಚಿತ್ರಿಸಿ ವಿಡಂಬಿಸಿದ್ದಾನೆ. ವಾಲ್ಟೇರ್‌ನ ಹ್ಯೂರಾನ್, ಜೇನ್ಸೆನಿಸ್ಟ್‌ನ ಜೊತೆ ಸೆರೆವಾಸ ಅನುಭವಿಸುವಾಗ, ಸರ್ಕಾರ ಒತ್ತಾಯಿಸುತ್ತಿರುವ ತನ್ನ ತಪ್ಪೊಪ್ಪಿಗೆಯಾಗಲೀ ಅಥವಾ ಅದನ್ನು ತಾನು ನಿರಾಕರಿಸುವುದಾಗಲೀ ಕ್ಷುಲ್ಲಕ ವಿಚಾರವಲ್ಲವೇ ಎಂದು ಆಲೋಚಿಸುತ್ತಾನೆ. ಅನತಿ ಭವಿಷ್ಯದಲ್ಲಿ ಜಗತ್ತೇನಾದರೂ ಕಮ್ಯುನಿಸ್ಟ್‌ರು ಮತ್ತು ಫ್ಯಾಸಿಸ್ಟ್‌ರ ನಡುವೆ ಒಡೆದು ಹೋದರೆ, ವಿಜಯವು ಇವರಿಬ್ಬರಿಗೂ ದಕ್ಕುವುದಿಲ್ಲ, ಬದಲಾಗಿ ಕಾಂಡೀಡ್‌ನಂತೆ ತಮ್ಮ ಭುಜವನ್ನು ಕುಣಿಸಿ 'ಸಿದ್ಧಾಂತಹಹೀನತೆಯೇ ಸುಖಕರ' ಎನ್ನುವವರಿಗೆ ಸಲ್ಲಬಹುದು.

ಶಿಕ್ಷೆ, ತಮ್ಮ ಹೃದಯಗಳಲ್ಲಿಯೇ ಕಷ್ಟಕಾರ್ಪಣ್ಯಗಳಲ್ಲಿ ಹುದುಗಿಸಿಕೊಂಡು ಒಳಗೊಳಗೇ ನೋವನ್ನು ಅನುಭವಿಸುವುದನ್ನವರು ಸಂತೋಷವಾಗಿ ಎದುರಿಸಬಲ್ಲರು. ಆದರೆ ಅವರು ಹಾಗೆ ಮಾಡಲಾರರು; ಏಕೆಂದರೆ ಕೊರಗು ದೇಶದ್ರೋಹದಂತೆ. ದೀರ್ಘಕಾಲದ ನಡಿಗೆಯಿಂದ ಸೈನಿಕರು ಸಾಯುವ ಹಾಗೆ ಸುಸ್ತಾದರೂ ಪೆರೇಡಿಗೆ ಉತ್ಸಾಹದಿಂದ ಸಾಲುಗಟ್ಟಬೇಕಾದಂತೆಯೇ ಅವರ ಸ್ಥಿತಿಯೂ."

ಸಿದ್ಧಾಂತಗಳ ಮೂಲಕ ಪಡೆದ ಅಧಿಕಾರದ ಗರಿಷ್ಠ ಸೀಮೆಯೆಂದರೆ ಬೇಸರ, ದಣಿವು ಮತ್ತು ನೆಮ್ಮದಿಯ ಹಂಬಲಗಳಾಗಿರುತ್ತವೆ.

–೦–೦–೦–೦–

ಅಧ್ಯಾಯ ಹನ್ನೊಂದು

ಸಂಘಟನೆಗಳ ಜೈವಿಕತೆ

ಇಲ್ಲಿಯವರೆಗೆ ನಾವು ಅಧಿಕಾರದ ಅತ್ಯಂತ ಪ್ರಮುಖ ಮಾನಸಿಕ ನೆಲೆಗಳಾದ ಭಾವನೆಗಳನ್ನು ಕುರಿತು ಪರಿಶೀಲಿಸಿದೆವು; ಅವುಗಳೆಂದರೆ, ಸಂಪ್ರದಾಯ, ಅದರಲ್ಲೂ ವಿಶೇಷವಾಗಿ ಪುರೋಹಿತರು ಮತ್ತು ರಾಜರ ಬಗೆಗಿನ ಗೌರವಸ್ವರೂಪದ್ದು; ಭಯ ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆ, ಇವು ನಗ್ನ ಅಧಿಕಾರದ ಮೂಲಗಳು; ಹಳೆಯದರ ಜಾಗದಲ್ಲಿ ಹೊಸ ಸಿದ್ಧಾಂತವೊಂದರ ಸ್ಥಾಪನೆ, ಇದು ಕ್ರಾಂತಿಕಾರಿ ಅಧಿಕಾರದ ಮೂಲ; ಮತ್ತು ಸಿದ್ಧಾಂತಗಳು ಹಾಗೂ ಅಧಿಕಾರದ ಇತರ ನೆಲೆಗಳ ನಡುವಣ ಸಂಘರ್ಷ. ಈಗ ನಮ್ಮ ವಿಷಯದ ಹೊಸ ವಿಭಾಗವೊಂದಕ್ಕೆ ಬರುತ್ತೇವೆ. ಅದೆಂದರೆ ಅಧಿಕಾರ ಚಲಾವಣೆಯ ಮಾಧ್ಯಮವಾದ ಸಂಘಟನೆಗಳು. ತಮ್ಮದೇ ಜೀವಸ್ವರೂಪವುಳ್ಳ ಜೀವಿಗಳಾಗಿ ಇವುಗಳನ್ನು ಮೊದಲು ಪರಿಶೀಲಿಸೋಣ; ಆನಂತರ ಅದು ಸರ್ಕಾರದ ಇತರ ಬಗೆಗಳೊಂದಿಗೆ ಹೊಂದಿರುವ ಸಂಬಂಧದ ಕುರಿತ ಚರ್ಚೆ; ಕೊನೆಯಲ್ಲಿ ಅವುಗಳನ್ನು ನಿರ್ಮಿಸಿರುವ ವ್ಯಕ್ತಿಗಳ ಬದುಕಿನ ಮೇಲೆ ಪರಿಣಾಮ ಮಾಡುವ ರೀತಿಯನ್ನು ಕುರಿತ ವಿಚಾರ. ಈ ವಿಷಯದ ಬಗೆಗಿನ ಚರ್ಚೆಯ ಪ್ರಸ್ತುತ ಭಾಗದಲ್ಲಿ, ಜೀವಿಗಳನ್ನು ಸಾಧ್ಯವಾದಷ್ಟೂ ಅವುಗಳ ಉದ್ದೇಶವನ್ನು ಬದಿಗಿರಿಸಿ ಕುರಿತ ಪರಿಶೀಲಿಸಬೇಕಾಗುವುದು, ಮಾನವನನ್ನು ದೇಹರಚನೆ ಮತ್ತು ಜೀವರಾಸಾಯನಿಕ ದೃಷ್ಟಿಕೋನಗಳಿಂದ ಪರಿಶೀಲನೆ ನಡೆಸಿದಂತೆ.

ಈ ಅಧ್ಯಾಯದಲ್ಲಿನ ಚರ್ಚೆಯ ವಿಷಯವಾದ ಸಂಘಟನೆಗಳ ಜೈವಿಕತೆಯು, ಸಂಘಟನೆಯನ್ನು ಜೀವ ಮತ್ತು ಬೆಳವಣಿಗೆ ಮತ್ತು ವಿನಾಶಗಳಲ್ಲಿ ತನ್ನದೇ ಆದ ವಿಧಾನಗಳನ್ನು ಹೊಂದಿರುವ ಒಂದು ಜೀವಿ ಎಂಬ ಕಲ್ಪನೆಯನ್ನು ಆಧರಿಸಿದೆ. ಸಂಘಟನೆಗಳ ನಡುವಣ ಸ್ಪರ್ಧೆಯು ಬಿಡಿ ಸಸ್ಯಗಳು ಮತ್ತು ಪ್ರಾಣಿಗಳ ನಡುವಣ ಸ್ಪರ್ಧೆಯನ್ನು ಹೋಲುತ್ತದೆ, ಹಾಗಾಗಿ ಇದನ್ನು ಹೆಚ್ಚು ಕಡಿಮೆ ಡಾರ್ವಿನಿಯನ್ ವಿಧಾನದಲ್ಲಿ ಪರಿಶೀಲಿಸಬಹುದು. ಆದರೆ ಈ ಸಾಮ್ಯವನ್ನು, ಇತರವುಗಳಂತೆಯೇ, ಅತಿರೇಕಕ್ಕೆ ಒಯ್ಯಬಾರದು; ಸ್ಪಷ್ಟೀಕರಣ ಮತ್ತು ವಿವರಣೆಗಳಿಗೆ ಮಾತ್ರ ಇದು ಸೀಮಿತವಾಗಿರಬೇಕೇ ವಿನಾ ಸಾಬೀತುಪಡಿಸಲು ಹೋಗಬಾರದು.

ಉದಾಹರಣೆಗೆ, ಸಾಮಾಜಿಕ ಸಂಘಟನೆಗಳ ವಿಷಯದಲ್ಲಿ ವಿನಾಶವು ಅನಿವಾರ್ಯ ಎಂದೇನೂ ಭಾವಿಸಬೇಕಾಗಿಲ್ಲ.

ಅಧಿಕಾರವು, ಪೂರ್ತಿಯಾಗಲ್ಲದಿದ್ದರೂ ಮುಖ್ಯವಾಗಿ ಸಂಘಟನೆಯನ್ನು ಅವಲಂಬಿಸಿರುತ್ತದೆ. ಪೂರ್ಣ ಮಾನಸಿಕ ಅಧಿಕಾರವು, ಪ್ಲೇಟೋ ಅಥವಾ ಗೆಲಿಲಿಯೋದರಂತೆ, ಸಂವಾದಿಯಾದ ಯಾವುದೇ ಸಾಮಾಜಿಕ ಸಂಸ್ಥೆಗಳಿಲ್ಲದೆಯೇ ಇರಬಹುದು. ಆದರೆ ಅಂತಹ ಅಧಿಕಾರವು ಯಾವುದಾದರೊಂದು ಧಾರ್ಮಿಕ ಸಂಸ್ಥೆಯೋ, ರಾಜಕೀಯ ಪಕ್ಷವೋ ಅಥವಾ ಅಂತದೇ ಒಂದು ಸಾಮಾಜಿಕ ಸಂಘಟನೆಯಿಂದಲೋ ಬೆಂಬಲಿತವಾಗದಿದ್ದರೆ ಮುಖ್ಯವಾಗುವುದಿಲ್ಲ ಎಂಬ ಅಂಶವಂತೂ ಸತ್ಯ. ಪ್ರಸ್ತುತದಲ್ಲಿ, ಸಂಘಟನೆಗೆ ಸಂಬಂಧಪಡದ ಅಧಿಕಾರದ ವಿಷಯವನ್ನು ನಾನು ಬದಿಗಿರಿಸುತ್ತೇನೆ.

ಸಂಘಟನೆಯೆಂದರೆ ಸಾಮಾನ್ಯ ಉದ್ದೇಶಗಳ ಈಡೇರಿಕೆಗಾಗಿ ನಡೆಯುವ ಚಟುವಟಿಕೆಗಳನ್ನು ನಡೆಸುವ ಸಮಾನಮನಸ್ಕರ ಒಂದು ಗುಂಪು. ಅದು ಒಂದು ಕ್ಲಬ್‌ನಂತೆ ಶುದ್ಧ ಸ್ವಯಂಪ್ರೇರಿತವಾಗಿರಬಹುದು; ಒಂದು ಕುಟುಂಬ ಅಥವಾ ಬುಡಕಟ್ಟಿನಂತೆ ಸಹಜ ಜೈವಿಕ ಗುಂಪಾಗಿರಬಹುದು; ಅದು ದೇಶವೊಂದರಂತೆ ಕಡ್ಡಾಯವಾದುದಾಗಿರಬಹುದು; ಅಥವಾ ಅದು ಒಂದು ರೈಲ್ವೆ ಕಂಪೆನಿಯಂತೆ ಸಂಕೀರ್ಣರಚನೆಯಾಗಿರಬಹುದು. ಸಂಘಟನೆಯ ಉದ್ದೇಶ ಸ್ಪಷ್ಟವಾಗಿ ನಿರೂಪಿತವಾಗಿರಬಹುದು ಅಥವಾ ಇಲ್ಲದಿರಬಹುದು; ಪ್ರಜ್ಞಾಪೂರ್ವಕವಾಗಿರಬಹುದು ಅಥವಾ ಇಲ್ಲದಿರಬಹುದು; ಅದು ಸೈನಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಅಥವಾ ರಸಾಭಿಜ್ಞತೆಯ ಸ್ವರೂಪದ್ದಾಗಿರಬಹುದು; ಹೀಗೇ. ಸ್ವರೂಪ ಮತ್ತು ಉದ್ದೇಶಗಳು ಯಾವುದೇ ಆಗಿರಲಿ, ಅದರ ಅಧಿಕಾರವು ಮರುಹಂಚಿಕೆಗೆ ಒಳಗಾಗಿರುತ್ತದೆ. ಇಡೀ ಸಂಘಟನೆಯ ಪರವಾಗಿ ನಿರ್ಧಾರಗಳನನ್ನು ತೆಗೆದುಕೊಳ್ಳಲು ಅದಕ್ಕೊಂದು ಕಾರ್ಯನಿರ್ವಾಹಕ ಸಮಿತಿಯಿರಬೇಕು, ಕನಿಷ್ಠ ಪಕ್ಷ, ಸಂಘಟನೆಯ ಉದ್ದೇಶಗಳ ಮಟ್ಟಿಗಾದರೂ, ಅದಕ್ಕೆ ಬಿಡಿ ಸದಸ್ಯರಿಗಿರುವುದಕ್ಕಿಂತ ಹೆಚ್ಚಿನ ಅಧಿಕಾರವಿರಬೇಕು. ಜನರು ಹೆಚ್ಚು ನಾಗರಿಕರಾದಂತೆ, ತಂತ್ರಗಳು ಹೆಚ್ಚು ಸಂಕೀರ್ಣವಾದಂತೆ, ಒಗ್ಗೂಡುವಿಕೆಯ ಅನುಕೂಲಗಳು ಹೆಚ್ಚು ಸುಸ್ಪಷ್ಟವಾಗುತ್ತ ಹೋಗುತ್ತವೆ. ಆದರೆ ಒಗ್ಗೂಡುವಿಕೆಯೆಂದರೆ ಕೊಂಚ ಮಟ್ಟಿಗಿನ ಸ್ವಾತಂತ್ರ್ಯತ್ಯಾಗ; ಅದರಿಂದಾಗಿ ನಮಗೆ ಇತರರಿಗಿಂತ ಹೆಚ್ಚು ಶಕ್ತಿ ಬರಬಹುದು, ಆದರೆ ಅದಕ್ಕೆ ನಮ್ಮ ಮೇಲೆಯೂ ಅಧಿಕಾರ ಬಂದಿರುತ್ತದೆ. ಪ್ರಮುಖ ನಿರ್ಧಾರಗಳೆಲ್ಲ

ವ್ಯಕ್ತಿಸದಸ್ಯರಿಗಿಂತ ಸಂಸ್ಥೆಯದಾಗಿರುತ್ತವೆ. ಸದಸ್ಯರು ತೀರ ಕಡಿಮೆಯಿರುವ ಸಂದರ್ಭಗಳನ್ನು ಹೊರತುಪಡಿಸಿ, ಸಂಸ್ಥೆಯ ನಿರ್ಧಾರಗಳನ್ನು ಕಾರ್ಯನಿರ್ವಾಹಕ ಸಮಿತಿಯ ಮೂಲಕವೇ ಜಾರಿಗೊಳಿಸಬೇಕು. ಹೀಗಾಗಿ ಆಧುನಿಕ ನಾಗರಿಕ ಸಮುದಾಯಗಳ ಬದುಕಿನಲ್ಲಿ ಸರ್ಕಾರವು ಕೈಗಾರಿಕೀಕರಣಪೂರ್ವ ಕಾಲಕ್ಕಿಂತ ಹೆಚ್ಚಿನ ಪಾತ್ರವನ್ನು ಅನಿವಾರ್ಯವಾಗಿ ನಿರ್ವಹಿಸುತ್ತದೆ.

ಪೂರ್ಣ ಪ್ರಜಾಪ್ರಭುತ್ವ ಸರ್ಕಾರದಲ್ಲಿ ಕೂಡ – ಅಂಥದೊಂದು ಸಾಧ್ಯವಿದ್ದರೆ – ಅಧಿಕಾರದ ಮರುಹಂಚಿಕೆ ನಡೆಯುತ್ತದೆ. ಜಂಟಿ ನಿರ್ಧಾರಗಳಲ್ಲಿ ಪ್ರತಿಯೊಬ್ಬನಿಗೂ ಸಮಾನ ದನಿಯಿದ್ದರೆ, ಅಂದರೆ ನಿದರ್ಶನಕ್ಕೆ ದಶಲಕ್ಷ ಸದಸ್ಯರಿದ್ದರೆ, ಒಬ್ಬನಿಗೆ, ಒಂಟಿ ಕಾಡುಪ್ರಾಣಿಗಿದ್ದಂತೆ, ತನ್ನ ಮೇಲೆ ಪೂರ್ತಿ ಅಧಿಕಾರವಿದ್ದು ಮಿಕ್ಕವರ ಮೇಲೆ ಏನೂ ಇಲ್ಲದ ಪರಿಸ್ಥಿತಿಯ ಬದಲು, ಪ್ರತಿಯೊಬ್ಬನಿಗೂ ಎಲ್ಲ ದಶಲಕ್ಷ ಸದಸ್ಯರ ಗುಂಪಿನ ಮೇಲೆ, ದಶಲಕ್ಷದೊಂದನೇ ಭಾಗದ ಅಧಿಕಾರವಿರುತ್ತದೆ. ಇದು ಅನಾಯಕತ್ವವಿರುವ ವ್ಯಕ್ತಿಗಳ ಗುಂಪಿನಲ್ಲಿರುವುದಕ್ಕಿಂತ ಭಿನ್ನವಾದ ಮನೋಭಾವವನ್ನು ಉಂಟುಮಾಡುತ್ತದೆ. ಎಲ್ಲಿ ಪೂರ್ಣ ಪ್ರಜಾಪ್ರಭುತ್ವದ ಸರ್ಕಾರವಿಲ್ಲವೋ ಅಲ್ಲಿ – ಎಲ್ಲ ಕಡೆಯೂ ಸ್ವಲ್ಪಮಟ್ಟಿಗಾದರೂ ಇರುವಂತೆ – ವಿಭಿನ್ನವಾದ ಮನಃಸ್ಥಿತಿಯನ್ನು ಸೃಷ್ಟಿಸುತ್ತದೆ. ಸರ್ಕಾರದ ಸದಸ್ಯರಿಗೆ, ಅವರಂತೆಯೇ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದರೂ, ಉಳಿದವರಿಗಿಂತ ಹೆಚ್ಚಿನ ಅಧಿಕಾರವಿರುತ್ತದೆ; ಹಾಗೆಯೇ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಿಗೂ. ಸಂಘಟನೆ ದೊಡ್ಡದಾದಷ್ಟೂ ಅದರ ಕಾರ್ಯನಿರ್ವಾಹಕ ಸಮಿತಿಗೆ ಅಧಿಕಾರ ಹೆಚ್ಚು. ಹೀಗಾಗಿ ಸಂಘಟನೆಗಳ ಗಾತ್ರ ಹೆಚ್ಚಾದಂತೆಲ್ಲ ಅದರ ಬಿಡಿ ಸದಸ್ಯರ ಸ್ವಾತಂತ್ರ್ಯ ಕಡಿಮೆಯಾಗುತ್ತ ಮತ್ತು ಸರ್ಕಾರದ ಪ್ರಯತ್ನಗಳ ವ್ಯಾಪ್ತಿ ವಿಶಾಲಗೊಳ್ಳುತ್ತ ಅವರ ನಡುವಣ ಅಧಿಕಾರದ ಅಸಮಾನತೆ ಜಾಸ್ತಿಯಾಗುತ್ತ ಹೋಗುತ್ತದೆ. ವೈಯಕ್ತಿಕ ಪ್ರಯತ್ನಕ್ಕಿಂತ ಸಹಕಾರದಿಂದ ಹೆಚ್ಚಿನದನ್ನು ಸಾಧಿಸಲು ಸಾಧ್ಯವಾಗುವುದರಿಂದ ಸಾಮಾನ್ಯ ವ್ಯಕ್ತಿ ವಿಧೇಯನಾಗುತ್ತಾನೆ; ಅಲ್ಲಿ ಅಧಿಕಾರಲೋಲುಪನಿಗೆ ಸಂತೋಷವುಂಟಾಗುತ್ತದೆ, ಏಕೆಂದರೆ ಅದರಿಂದ ಅವನಿಗೆ ಅವಕಾಶವೊದಗುತ್ತದೆ. ಸರ್ಕಾರವು ಆನುವಂಶಿಕವಾಗಿರುವೆಡೆ ಅಥವಾ ಅಧಿಕಾರಲೋಲುಪನು ಯಾವುದೇ ಪ್ರಮುಖ ಸ್ಥಾನವನ್ನು ಹೊಂದಲು ಅವಕಾಶವಿರದಿರುವ ಒಂದು ಗುಂಪಿಗೆ (ಕೆಲವು ದೇಶಗಳಲ್ಲಿನ

ಯೆಹೂದಿಗಳಂತೆ) ಸೇರಿರುವೆಡೆ ಇದು ಅನ್ವಯವಾಗದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಅಧಿಕಾರಕ್ಕಾಗಿ ನಡೆಯುವ ಸ್ಪರ್ಧೆಯು ಎರಡು ಬಗೆಯದು: ಸಂಘಟನೆಗಳ ನಡುವಣದು ಮತ್ತು ಒಂದು ಸಂಘಟನೆಯೊಳಗೇ ನಾಯಕತ್ವಕ್ಕಾಗಿ ನಡೆಯುವ ವ್ಯಕ್ತಿಗಳ ನಡುವಣದು. ಸಂಘಟನೆಗಳ ನಡುವೆ ಸ್ಪರ್ಧೆಯುಂಟಾಗುವುದು ಅವುಗಳಲ್ಲಿ ಹೆಚ್ಚು ಕಡಿಮೆ ಒಂದೇ ಬಗೆಯ ಆಶೋತ್ತರಗಳಿದ್ದು – ಅವುಗಳು ಆರ್ಥಿಕ, ಸೈನಿಕ, ಪ್ರಚಾರಸಂಬಂಧಿತ ಅಥವಾ ಈ ಎಲ್ಲ ಅಥವಾ ಇವುಗಳಲ್ಲಿ ಯಾವುದಾದರೂ ಒಂದು ಮಾರ್ಗಕ್ಕೆ ಸಂಬಂಧಿಸಿದಂತೆ – ಅವುಗಳ ನಡುವೆ ಹೊಂದಾಣಿಕೆಯಿಲ್ಲದಾಗ ಮಾತ್ರ. ಮೂರನೆಯ ನೆಪೋಲಿಯನ್ ಸಮ್ರಾಟನಾಗಲು ಪ್ರಯತ್ನಗಳನ್ನು ನಡೆಸುತ್ತಿರುವಾಗ ತನ್ನ ಆಶೋತ್ತರಗಳಿಗೆ ಮೀಸಲಾದ ಒಂದು ಸಂಘಟನೆಯ ಮತ್ತು ಅದರ ನಾಯಕತ್ವವನ್ನು ತಾನು ಹೊಂದುವ ಆವಶ್ಯಕತೆ ಅವನಿಗುಂಟಾಯಿತು. ಈ ಉದ್ದೇಶಕ್ಕಾಗಿ ಅವನು ಕೆಲವರಿಗೆ ಸಿಗಾರ್‌ಗಳನ್ನು ಕೊಟ್ಟ – ಇದು ಆರ್ಥಿಕ ರೂಪದ್ದು; ಮಿಕ್ಕ ಕೆಲವರಿಗೆ ತಾನು ತನ್ನ ಸೋದರಮಾವನ ಸೋದರಳಿಯ ಎಂದು ಹೇಳಿಕೊಂಡ – ಇದು ಪ್ರಚಾರರೂಪದ್ದು; ಕೊನೆಗೆ ಅವನು ಅನೇಕ ಮಂದಿ ವಿರೋಧಿಗಳಿಗೆ ಗುಂಡಿಕ್ಕಿದ – ಇದು ಸೈನಿಕರೂಪದ್ದು.[೧] ಈ ಮಧ್ಯೆ, ಅವನ ವಿರೋಧಿಗಳು ಗಣರಾಜ್ಯದಲ್ಲಿನ ಸರ್ಕಾರದ ಸ್ವರೂಪವನ್ನು ಹೊಗಳುವುದಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಂಡು ಸಿಗಾರ್‌ಗಳನ್ನೂ ಬುಲೆಟ್‌ಗಳನ್ನೂ ಕಡೆಗಣಿಸಿದ್ದರು. ಪ್ರಜಾಪ್ರಭುತ್ವದ ಮೇಲೆ ಸರ್ವಾಧಿಕಾರವನ್ನು ಸಾಧಿಸುವ ತಂತ್ರವು ಗ್ರೀಕ್ ಕಾಲದಿಂದಲೂ ಪರಿಚಿತವಾದುದೇ, ಎಲ್ಲ ಕಾಲಕ್ಕೂ ಅದು ಲಂಚ, ಪ್ರಚಾರ ಮತ್ತು ಹಿಂಸೆಗಳ ಮಿಶ್ರಣದಿಂದಾದುದೇ. ಆದರೆ ಇದು ನಮ್ಮ ಈಗಿನ ಚರ್ಚಾವಿಷಯವಲ್ಲ, ಪ್ರಸ್ತುತವಾದುದು ಸಂಘಟನೆಗಳ ಜೈವಿಕತೆ.

ಸಂಘಟನೆಗಳಲ್ಲಿನ ವ್ಯತ್ಯಾಸಗಳು ಮುಖ್ಯವಾಗಿ ಎರಡು ಅಂಶಗಳಿಗೆ ಸಂಬಂಧಿಸಿರಬಹುದು: ಒಂದು ಅದರ ಗಾತ್ರ, ಮತ್ತೊಂದು ಅದರ ಅಧಿಕಾರಸಾಂದ್ರತೆ ಎಂದು ಕರೆಯಬಹುದಾದುದು, ಅಂದರೆ ತನ್ನ ಸದಸ್ಯರ ಮೇಲೆ ಅದು ಹೊಂದಿರಬಹುದಾದ ನಿಯಂತ್ರಣ. ಸರ್ಕಾರದ ಹುದ್ದೆಗಳನ್ನು ಅಲಂಕರಿಸಿರುವವರಲ್ಲಿ ಸಹಜವೆನಿಸುವ ಅಧಿಕಾರ ವ್ಯಾಮೋಹದಿಂದಾಗಿ, ಪ್ರತಿಯೊಂದು ಸಂಘಟನೆಯೂ, ಯಾವುದೇ ಪ್ರತಿಬಂಧಕ ಶಕ್ತಿಗಳಿಲ್ಲದಿದ್ದರೆ,

---

[೧] ನೋಡಿ, ಎಫ್.ಎ. ಸಿಂಪ್ಸನ್, *‘ದ ರೈಸ್ ಆಫ್ ಲೂಯಿ ನೆಪೋಲಿಯನ್’*

ಗಾತ್ರ ಮತ್ತು ಅಧಿಕಾರಸಾಂದ್ರತೆಗಳ ದೃಷ್ಟಿಯಿಂದ ಬೆಳೆಯುತ್ತ ಹೋಗುತ್ತದೆ. ಈ ಎರಡೂ ಬಗೆಯ ಬೆಳವಣಿಗೆಗಳು ಆಂತರಿಕ ಕಾರಣಗಳಿಂದಾಗಿ ನಿಂತುಹೋಗಬಹುದು. ಉದಾಹರಣೆಗೆ, ಒಂದು ಅಂತಾರಾಷ್ಟ್ರೀಯ ಚೆಸ್ ಕ್ಲಬ್ ತಕ್ಕಮಟ್ಟಿಗೆ ಕುಶಲರಾದ ಎಲ್ಲ ಚೆಸ್ ಆಟಗಾರರನ್ನೂ ತನ್ನ ವ್ಯಾಪ್ತಿಯಲ್ಲಿ ತಂದುಕೊಳ್ಳಬಹುದು, ಚೆಸ್‌ಗೆ ಸಂಬಂಧಿಸಿದವರ ಹೊರತು ತನ್ನ ಸದಸ್ಯರ ಬೇರಾವುದೇ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದುವ ರೀತಿಯಲ್ಲಿಲ್ಲದಿರಬಹುದು. ಒಬ್ಬ ಸಮರ್ಥನಾದ ಕಾರ್ಯದರ್ಶಿಯ ನೇತೃತ್ವದಲ್ಲಿ ಅದು ಹೆಚ್ಚು ಜನಗಳಲ್ಲಿ ಚೆಸ್–ಪ್ರಜ್ಞೆ ಬೆಳೆಸಲು ಕಾರ್ಯಶೀಲವಾಗಬಹುದು; ಆದರೆ ಕಾರ್ಯದರ್ಶಿಯು ಒಳ್ಳೆಯ ಚೆಸ್ ಆಟಗಾರನಾಗಿರಬೇಕೆಂದು ನಿರೀಕ್ಷಿಸಿದರೆ ಇದು ಸಫಲವಾಗುವ ಸಂಭವ ಕಡಿಮೆ. ಅದು ಸಾಧ್ಯವಾದರೆ, ಒಳ್ಳೆಯ ಚೆಸ್ ಆಟಗಾರರು ಪಕ್ಷಾಂತರಗೊಳ್ಳುವ ಮೂಲಕ ಕ್ಲಬ್ ಹಾಳಾಗಬಹುದು. ಆದರೆ ಇಂತಹ ನಿದರ್ಶನಗಳು ಬಹು ಅಪರೂಪವಾದವು; ಸಂಘಟನೆಯು ಸಂಪತ್ತು ಅಥವಾ ರಾಜಕೀಯ ಬಲಿಷ್ಠತೆಯಂತಹ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ್ದರೆ, ಅಂತಹವುಗಳ ಗಾತ್ರವನ್ನು ಇತರ ಸಂಘಟನೆಗಳು ಕುಂಠಿತಗೊಳಿಸಬಹುದು ಅಥವಾ ಅದೇ ಸಂಘಟನೆಯು ವಿಶ್ವವ್ಯಾಪಿಯಾಗಿ ಬೆಳೆಯಬಹುದು. ವೈಯಕ್ತಿಕ ಸ್ವಾತಂತ್ರ್ಯದ ಹಂಬಲವು ತುಂಬ ಪ್ರಬಲವಾಗಿ ಬೆಳೆದಾಗ ಸಾಂದ್ರತೆಯ ಬೆಳವಣಿಗೆಯು ಕುಂಠಿತಗೊಳ್ಳುತ್ತದೆ.

ಇದರ ಅತ್ಯಂತ ಸ್ಪಷ್ಟ ಉದಾಹರಣೆಯೆಂದರೆ ದೇಶ. ಸಾಕಷ್ಟು ಪ್ರಬಲವಾಗಿರುವ ಯಾವುದೇ ದೇಶವು ವಿದೇಶೀ ಗೆಲವನ್ನು ಗುರಿಯಾಗಿರಿಸಿಕೊಳ್ಳುತ್ತದೆ; ಇದಕ್ಕೆ ವಿರುದ್ಧವಾದ ನಿದರ್ಶನಗಳೆಂದರೆ ಯಾವುದೇ ದೇಶವು, ಸ್ವಂತ ಅನುಭವದಿಂದ, ತಾನು ಕಾಣುವುದಕ್ಕಿಂತ ಕಡಿಮೆ ಬಲಿಷ್ಠವೆಂಬುದನ್ನು ಅರಿತಾಗಲೋ ಅಥವಾ ಅನುಭವವಿಲ್ಲದೆಯೇ ತಾನು ವಾಸ್ತವವಾಗಿರುವುದಕ್ಕಿಂತ ಕಡಿಮೆ ಬಲಿಷ್ಠವೆಂದು ನಂಬಿದಾಗಲೋ ಮಾತ್ರ ಕಾಣುವಂಥವು. ವ್ಯಾಪಕ ನಿಯಮವೆಂದರೆ, ದೇಶವೊಂದು ತನಗೆ ಸಾಧ್ಯವಾಗುವುದನ್ನು ಜಯಿಸುತ್ತದೆ, ಮತ್ತೊಂದು ದೇಶವೋ ದೇಶಗಳೋ ತನ್ನಷ್ಟೇ ಒತ್ತಡವನ್ನು ಹೇರಬಲ್ಲವು ಎಂಬ ಅರಿವಿನ ಗಡಿಯನ್ನು ತಲುಪಿದಾಗ ಮಾತ್ರ ತಡೆದುಕೊಳ್ಳುತ್ತದೆ. ಗ್ರೇಟ್ ಬ್ರಿಟನ್ ಆಫ್ಘನಿಸ್ತಾನವನ್ನು ವಶಪಡಿಸಿಕೊಳ್ಳದಿರುವುದಕ್ಕೆ ಕಾರಣ ರಷ್ಯಾವು ಅಲ್ಲಿ ಬ್ರಿಟಿಷರಷ್ಟೇ ಪ್ರಬಲವಾಗಿದೆ ಎಂಬುದನ್ನು ಅರಿತಿರುವುದರಿಂದ; ನೆಪೋಲಿಯನ್ ಲೂಯಿಸಿಯಾನವನ್ನು ಸಂಯುಕ್ತ ಸಂಸ್ಥಾನಗಳಿಗೆ ಮಾರಿದ್ದು ಅದನ್ನು ರಕ್ಷಿಸಿಕೊಳುವುದು ತನಗೆ ಅಸಾಧ್ಯ ಎಂಬ ಕಾರಣದಿಂದ; ಇತ್ಯಾದಿ.

ಆಂತರಿಕ ಶಕ್ತಿಗಳಿಗೆ ಸಂಬಂಧಪಟ್ಟಂತೆ, ಪ್ರತಿ ದೇಶಕ್ಕೂ ವಿಶ್ವವ್ಯಾಪಿಯಾಗುವ ಹಂಬಲವಿರುತ್ತದೆ. ಆದರೆ ದೇಶದ ಶಕ್ತಿಯು ಹೆಚ್ಚು ಅಥವಾ ಕಡಿಮೆ ಪ್ರಮಾಣದಲ್ಲಿ ಭೌಗೋಳಿಕವಾದುದು: ಅದು ಕೇಂದ್ರವೊಂದರಿಂದ ಹೊಮ್ಮುತ್ತದೆ, ಕೇಂದ್ರದಿಂದ ದೂರವಾದಂತೆ ಕಡಿಮೆಯಾಗುತ್ತ ಹೋಗುತ್ತದೆ. ಪರಿಣಾಮವೆಂದರೆ, ಸಂಪ್ರದಾಯವು ಮೇಲುಗೈಯಾಗಿ ಮಧ್ಯಪ್ರವೇಶಿಸದಿದ್ದರೆ, ಕೇಂದ್ರದಿಂದ ಹೆಚ್ಚೋ ಕಡಿಮೆಯೋ ದೂರದಲ್ಲಿ ಅದರ ಶಕ್ತಿಯು, ಹಾಗೆಯೇ ಗಡಿಗಳೂ, ಇತರ ನೆರೆ ದೇಶಗಳದರೊಡನೆ ಸಮತೋಲದಲ್ಲಿರುತ್ತವೆ.

ಈಗ ತಾನೇ ಹೇಳಿದುದು ಅಮೂರ್ತವಾಗಿದ್ದು, ಕೆಲವು ಪರಿಷ್ಕಾರಗಳನ್ನು ಮಾಡದಿದ್ದರೆ ನಿಜವಾಗಲಾರದು. ಸಣ್ಣ ಸಣ್ಣ ದೇಶಗಳು ಅಸ್ತಿತ್ವದಲ್ಲಿರುವುದಕ್ಕೆ ಕಾರಣ, ಅವುಗಳ ಸ್ವಂತ ಬಲವಲ್ಲ, ದೊಡ್ಡ ದೇಶಗಳ ನಡುವಣ ದ್ವೇಷಾಸೂಯೆಗಳು; ಉದಾಹರಣೆಗೆ, ಬೆಲ್ಜಿಯಂ ಉಳಿದಿರುವುದು ಅದರ ಇರುವಿಕೆ ಇಂಗ್ಲಂಡ್ ಮತ್ತು ಫ್ರಾನ್ಸ್ ಎರಡಕ್ಕೂ ಅನುಕೂಲಕರವಾಗಿರುವುದಿಂದ. ಪೋರ್ಚುಗಲ್ ದೊಡ್ಡ ವಸಾಹತುಗಳನ್ನು ಹೊಂದಿರುವುದಕ್ಕೆ ಕಾರಣ, ತಮ್ಮಲ್ಲಿ ಅವುಗಳನ್ನು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಪ್ರಬಲ ದೇಶಗಳು ಒಪ್ಪಂದಕ್ಕೆ ಬರಲಾರದ್ದು. ಯುದ್ಧ ಎಂಬುದು ಒಂದು ಗಂಭೀರ ವಿಷಯವಾದ್ದರಿಂದ, ಒಂದು ದೇಶವು ತನ್ನ ಪ್ರದೇಶವನ್ನು, ದೊಡ್ಡ ದೇಶವು ಕಬಳಿಸುವವರೆಗೂ, ಸಾಕಷ್ಟು ಕಾಲ ಉಳಿಸಿಕೊಳ್ಳಲು ಸಾಧ್ಯವಾಗಬಹುದು. ಆದರೆ ಅಂತಹ ಅಂಶಗಳು ನಮ್ಮ ಸಾಮಾನ್ಯ ಸಿದ್ಧಾಂತವನ್ನು ಹಾಳುಮಾಡಲಾರದು; ತೀರ ಒರಟು ಶಕ್ತಿ ಪ್ರಯೋಗವನ್ನು ವಿಳಂಬ ಮಾಡುವಂತಹ ಘರ್ಷಣಾತ್ಮಕ ಸನ್ನಿವೇಶಗಳನ್ನು ಅವು ಸೃಷ್ಟಿಸುತ್ತವೆ, ಅಷ್ಟೆ.

ದೇಶವೊಂದು ತನಗೆ ಸಾಧ್ಯವಾದುದನ್ನೆಲ್ಲ ಗೆಲ್ಲಬಹುದು ಎಂಬ ಸಿದ್ಧಾಂತಕ್ಕೆ ಸಂಯುಕ್ತ ಸಂಸ್ಥಾನಗಳು ಮಾತ್ರ ಒಂದು ಅಪವಾದ ಎಂದು ಹೇಳಬಹುದು. ಹಾಗೆ ಮಾಡಲು ನಿರ್ಧರಿಸಿದರೆ, ಮೆಕ್ಸಿಕೋವನ್ನು, ಅಷ್ಟೇಕೆ ಇಡೀ ಲ್ಯಾಟಿನ್ ಅಮೆರಿಕವನ್ನೆಲ್ಲ, ವಶಪಡಿಸಿಕೊಳ್ಳುವುದು ಅದಕ್ಕೆ ಅಂತಹ ಕಠಿಣ ಕೆಲಸವೇನಾಗಲಾರದು. ಆದರೆ, ರಾಜಕೀಯ ಆಕ್ರಮಣಕ್ಕೆ ಇರುವ ಸಾಮಾನ್ಯ ಪ್ರೇರಣೆಗಳೆಲ್ಲ, ಈ ವಿಷಯಕ್ಕೆ ಸಂಬಂಧಿಸಿದಂತೆ, ಸದ್ಯದ ಪರಿಸ್ಥಿತಿಯಲ್ಲಿ, ಪರಸ್ಪರ ಹೊಂದಿಕೊಂಡಿರುವ ವಿವಿಧ ಅಂಶಗಳಿಂದಾಗಿ ಅಡಗಿಕೊಂಡಿವೆ. ಅಂತರ್ಯುದ್ಧಕ್ಕೆ ಮುನ್ನ, ದಕ್ಷಿಣ ದೇಶಗಳಿಗೆ ಸಾಮ್ರಾಜ್ಯಶಾಹಿ ಧೋರಣೆಗಳಿದ್ದವು, ಅವು ಮೆಕ್ಸಿಕೊ ಯುದ್ಧದ ವಿಷಯದಲ್ಲಿ ಹೊರಹೊಮ್ಮಿ, ಅಪಾರ ಪ್ರಮಾಣದ ಪ್ರದೇಶಗಳ ಕಬಳಿಕೆಗೆ

ಕಾರಣವಾದವು. ಅಂತರ್ಯುದ್ಧದ ಆನಂತರ, ಪಶ್ಚಿಮದ ದಣಿವಾರಿಕೆ ಮತ್ತು ಅಭಿವೃದ್ಧಿಗಳ ಕಡೆ ಗಮನ ಹರಿಸುವುದರಲ್ಲೇ ಅತ್ಯಂತ ಶಕ್ತಿಯುತ ದೇಶವೂ ತಮ್ಮ ಕಸುವನ್ನೆಲ್ಲ ವ್ಯಯಿಸಬೇಕಾಗಿತ್ತು. ಈ ಕಾರ್ಯವು ಒಂದು ನೆಲೆಯನ್ನು ತಲುಪಿದ ಮೇಲೆ, ೧೮೬೮ ರ ಸ್ಪಾನಿಶ್–ಅಮೆರಿಕನ್ ಯುದ್ಧವು ಹೊಸದೊಂದು ಸಾಮ್ರಾಜ್ಯಾಶಾಹೀ ಪ್ರೇರಣೆಗೆ ಎಡೆಯಿತ್ತಿತು. ಆದರೆ ಅಮೆರಿಕನ್ ಸಂವಿಧಾನದಲ್ಲಿ ಅನ್ಯ ಪ್ರದೇಶಗಳ ಕಬಳಿಕೆಗೆ ಪ್ರತಿರೋಧಗಳಿವೆ: ಅವೆಂದರೆ, ಅನಪೇಕ್ಷಣೀಯರಾದ ಹೊಸಬ ಮತದಾರರಿಗೆ ಅವಕಾಶವೀಯಬೇಕಾದುದು, ಮತ್ತು – ಅದಕ್ಕಿಂತ ಮುಖ್ಯವಾಗಿ – ಆಂತರಿಕ ಮುಕ್ತ ವ್ಯಾಪಾರ ವಲಯವು ವಿಸ್ತೃತಗೊಳ್ಳುವುದು, ಅದರಿಂದಾಗಿ ಪ್ರಮುಖ ಆರ್ಥಿಕ ಆಸಕ್ತಿಗಳಿಗೆ ಧಕ್ಕೆಯುಂಟಾಗುವುದು. ಹೀಗಾಗಿ, ವಸ್ತುತಃ ಲ್ಯಾಟಿನ್ ಅಮೆರಿಕದ ರಕ್ಷಣೆಯ ಅಂಶವನ್ನೊಳಗೊಂಡಿರುವುದರಿಂದ ಮನ್ರೋ ಸಿದ್ಧಾಂತವು ಪ್ರದೇಶಗಳ ಲಗತ್ತೀಕರಣಕ್ಕಿಂತ ಸ್ವಹಿತವನ್ನು ಕಾಪಾಡುವಲ್ಲಿ ಹೆಚ್ಚು ತೃಪ್ತಿಕರವಾಗಿದೆ. ರಾಜಕೀಯ ಗೆಲವುಗಳಿಂದ ಆರ್ಥಿಕ ಲಾಭವಾಗುವುದಿದ್ದರೆ, ಹಾಗಾಗುವುದಕ್ಕೆ ಹೆಚ್ಚು ಕಾಲ ಕಾಯಬೇಕಾದ್ದಿಲ್ಲ.

ಎಲ್ಲ ಕಾಲಗಳಲ್ಲೂ ರಾಜಕೀಯ ವಲಯದಲ್ಲಿ ಆಳ್ವಿಕೆಗಾರರು ಅಧಿಕಾರ ಕೇಂದ್ರೀಕರಣಕ್ಕಾಗಿ ಹಂಬಲಿಸಿದರು; ಬಹುಪಾಲು ಸಂದರ್ಭಗಳಲ್ಲಿ ಇದನ್ನು ಆಳ್ವಿಕೆಗೊಳಗಾದವರು ಪ್ರತಿಭಟಿಸಲೇ ಇಲ್ಲ. ಆಧುನಿಕ ಕಾಲದ ನಿಷ್ಠುರ ಸರ್ವಾಧಿಕಾರಗಳಲ್ಲಿಗಿಂತ ಪ್ರಾಚೀನ ಕಾಲದ ಸಾಮ್ರಾಜ್ಯಗಳಲ್ಲಿ ಅದು ಹೆಸರಿಗೆ ಹೆಚ್ಚು ಪೂರ್ಣವಾಗಿತ್ತು; ಆದರೆ ವಾಸ್ತವವಾಗಿ ಅದು ತಾಂತ್ರಿಕವಾಗಿ ಸಾಧ್ಯವಾದುದಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಹಿಂದಿನ ಕಾಲದ ಸಮ್ರಾಟರು ಎದುರಿಸಿದ ಅತ್ಯಂತ ತುರ್ತು ಸಮಸ್ಯೆಯೆಂದರೆ ಚಲನಶೀಲತೆ. ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಲ್ಲಿ ದೊಡ್ಡ ನದಿಗಳ ಕಾರಣದಿಂದಾಗಿ ಪ್ರಯಾಣ ಸುಲಭವಾಗಿತ್ತು; ಆದರೆ ಪರ್ಷಿಯನ್ ಆಡಳಿತವು ರಸ್ತೆಗಳನ್ನು ಅವಲಂಬಿಸಿಬೇಕಾಗಿತ್ತು. ಸರ್ದಿಸ್‌ನಿಂದ ಸುಸವರೆಗಿನ ಮಹಾ ರಾಜಮಾರ್ಗವು ಹದಿನೈದು ಸಾವಿರ ಮೈಲಿಗಳಷ್ಟು ಉದ್ದವಾಗಿತ್ತೆಂದು ಹೆರೊಡೊಟಸ್ ವರ್ಣಿಸುತ್ತಾನೆ. ಈ ಮಾರ್ಗದ ಮೂಲಕವಾಗಿಯೇ ಶಾಂತಿಕಾಲದಲ್ಲಿ ರಾಜನ ಸಂದೇಶವಾಹಕರು ಹಾಗೂ ಯುದ್ಧಕಾಲಗಳಲ್ಲಿ ಸೈನ್ಯಗಳು ಸಂಚರಿಸುತ್ತಿದ್ದುದು. ಅನು ಹೇಳುತ್ತಾನೆ: "ಸದರಿ ರಸ್ತೆಯ ನಿಜವಾದ ಸ್ವರೂಪ ಹೀಗಿದೆ: ಇಡೀ ರಸ್ತೆಯುದ್ದಕ್ಕೂ ರಾಜತಾಣಗಳಿವೆ, ಹಾಗೆಯೇ ಅತ್ಯುತ್ತಮ ತಂಗುದಾಣಗಳು ಮತ್ತು ಛತ್ರಗಳು; ಮಾರ್ಗದುದ್ದಕ್ಕೂ ಜನವಸತಿಯಿದೆ, ಯಾವ ಅಪಾಯವೂ ಇಲ್ಲ...ಫ್ರಿಜಿಯವನ್ನು ಬಿಟ್ಟ ತಕ್ಷಣ ಹಾಲಿಸ್ ನದಿಯನ್ನು ದಾಟಬೇಕು;

ದ್ವಾರಗಳನ್ನು ಹಾದುಹೋಗಬೇಕು, ಇಲ್ಲದಿದ್ದರೆ ನೀವು ನದಿಯಲ್ಲಿ ಕೊಚ್ಚಿ ಹೋಗಬಹುದು. ಈ ತಾಣವನ್ನು ಬಲಿಷ್ಠ ರಕ್ಷಣಾದಳ ಕಾಯುತ್ತದೆ... ಯೂಫ್ರೆಟಿಸ್ ನದಿಯೇ ಸಿಲ್ಸಿಯ ಮತ್ತು ಆರ್ಮೇನಿಯಗಳ ನಡುವಣ ಗಡಿರೇಖೆ, ಇದನ್ನು ದಾಟಲು ದೋಣಿಗಳು ಬೇಕೇ ಬೇಕು. ಆರ್ಮೇನಿಯದಲ್ಲಿ ಹದಿನೈದು ವಿಶ್ರಾಂತಿಧಾಮಗಳಿವೆ, ಸಾಗಬೇಕಾದ ಹಾದಿ ಐವತ್ತಾರೂವರೆ ಪರಸಂಗ್‌ಗಳಷ್ಟು (ಸುಮಾರು ೧೮೦ ಮೈಲಿಗಳು). ಒಂದು ಕಡೆ ಕಾವಲುಗಾರನಿದ್ದಾನೆ. ಈ ಜಿಲ್ಲೆಯುದ್ದಗಲದಲ್ಲಿ ನಾಲ್ಕು ದೊಡ್ಡ ಹೊಳೆಗಳು ಹರಿಯುತ್ತವೆ, ಇವೆಲ್ಲವನ್ನೂ ದೋಣಿಗಳ ಸಹಾಯದಿಂದಲೇ ದಾಟಬೇಕು... ಒಟ್ಟಾರೆ ತಂಗುದಾಣಗಳನ್ನು ೧೧೧ ಕ್ಕೇರಿಸಲಾಗಿದೆ; ಇದು ವಾಸ್ತವವಾಗಿ ಸರ್ದಿಸ್ ಮತ್ತು ಸುಸಾಗಳ ನಡುವೆ ಇರುವ ವಿಶ್ರಾಂತಿಧಾಮಗಳ ಸಂಖ್ಯೆ." ಮುಂದೆ ಅವನು ಹೀಗೆನ್ನುತ್ತಾನೆ: "ದಿನಕ್ಕೆ ನೂರೈವತ್ತು ಫರ್ಲಾಂಗ್‌ಗಳಂತೆ ಪ್ರಯಾಣ ಮಾಡಿದರೆ (ಇದು ಸೈನ್ಯದ ಸರಾಸರಿ ವೇಗ) ಇಡೀ ಪ್ರಯಾಣಕ್ಕೆ ಸರಿಯಾಗಿ ತೊಂಬತ್ತು ದಿನಗಳು ಬೇಕು."[೧]

ಇಂತಹ ರಸ್ತೆಯು ಸಾಮ್ರಾಜ್ಯದ ವಿಸ್ತರಣೆಗೆ ಅನುಕೂಲಕರವಾದರೂ, ದೂರದ ಪ್ರಾಂತಗಳ ಸತ್ರಪರ ಮೇಲೆ ವ್ಯಾಪಕ ನಿಯಂತ್ರಣ ಹೊಂದಲು ರಾಜನಿಗೆ ಸಾಧ್ಯವಾಗುತ್ತಿರಲಿಲ್ಲ. ಸಂದೇಶವಾಹಕನೊಬ್ಬ ಸರ್ದಿಸ್‌ನಿಂದ ಸೂಸಾಗೆ ಕುದುರೆಯ ಮೇಲೆ ಕುಳಿತು ಒಂದು ತಿಂಗಳಲ್ಲಿ ಸುದ್ದಿ ಮುಟ್ಟಿಸಬಹುದಾಗಿತ್ತು, ಆದರೆ ಸೂಸಾದಿಂದ ಸರ್ದಿಸ್‌ಗೆ ಹೋಗಲು ಸೈನ್ಯಕ್ಕೆ ಮೂರು ತಿಂಗಳು ಬೇಕಾಗುತ್ತಿತ್ತು. ಅಯೋನಿಯನ್ನರು ಪರ್ಷಿಯ ವಿರುದ್ಧ ಬಂಡೆದ್ದಾಗ ಅವರು, ಈಗಾಗಲೇ ಏಷ್ಯಾ ಮೈನರ್‌ನಲ್ಲಿ ಇರದಿದ್ದ, ಸೈನ್ಯವನ್ನು ಎದುರಿಸುವ ಮುಂಚೆ ಅನೇಕ ತಿಂಗಳುಗಳ ಕಾಲ ಬಿಡುವಿತ್ತು. ಹಿಂದಿನ ಎಲ್ಲ ಸಾಮ್ರಾಜ್ಯಗಳ ವಿರುದ್ಧವೂ ಬಂಡಾಯವಿರುತ್ತಿತ್ತು, ಕೆಲವೇಳೆ ಇವುಗಳ ಮುಂದಾಳುಗಳು ಮಂಡಲಗಳ ಸಾಮಂತರೇ ಆಗಿರುತ್ತಿದ್ದರು. ಬಹಿರಂಗ ಬಂಡಾಯವಿರದಿದ್ದಾಗಲೂ ಸ್ಥಳೀಯ ಸ್ವಾಯತ್ತತೆಯು ಅನಿವಾರ್ಯ ಎನ್ನಿಸುವ ಪರಿಸ್ಥಿತಿಯೇ ಇತ್ತು. ಈಚೆಗೆ ಸ್ವಾಧೀನಪಡಿಸಿಕೊಂಡ ಪ್ರಾಂತಗಳಲ್ಲಿ ಈ ಪರಿಸ್ಥಿತಿ ಇರುತ್ತಿರಲಿಲ್ಲ, ಅಷ್ಟೆ. ಆದರೆ ಅಲ್ಲೂ ಕಾಲಾನುಕ್ರಮದಲ್ಲಿ ಸ್ವಾತಂತ್ರ್ಯ ಪಡೆಯುವ ಹಂಬಲ

---

[೧] ಸಂಪುಟ ೫, ಅಧ್ಯಾಯಗಳು ೫೨, ೫೩. ರಾಲಿನ್ಸ್‌ಸನ್ ಅವರ ಅನುವಾದ

ಮೂಡುವುದು ಸ್ವಾಭಾವಿಕವಾಗಿತ್ತು. ಈಗ ಸಾಮಾನ್ಯವಾಗಿರುವಂತೆ ಹಿಂದಿನ ಕಾಲದ ಯಾವುದೇ ದೊಡ್ಡ ಸಾಮ್ರಾಜ್ಯದಲ್ಲಿಯೂ ಕೇಂದ್ರದಿಂದ ಅಧಿಕಾರ ಚಲಾವಣೆ ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಶೀಘ್ರ ಚಲನೆಯ ಕೊರತೆ.

ರಸ್ತೆಗಳ ಮೂಲಕ ಕೇಂದ್ರ ಸರ್ಕಾರವನ್ನು ಬಲಿಷ್ಠಗೊಳಿಸುವ ಪರಿಯನ್ನು ರೋಮ್ ಸಾಮ್ರಾಜ್ಯವು ಮ್ಯಾಸಿಡೋನಿಯನ್‌ರ ಮೂಲಕ ಪರ್ಷಿಯನ್‌ರಿಂದ ಕಲಿತುಕೊಂಡಿತು. ಸಮ್ರಾಟನ ಸಂದೇಶವಾಹಕನು ದಿನಕ್ಕೆ ಸರಾಸರಿ ಹತ್ತು ಮೈಲಿಗಳ ವೇಗದಲ್ಲಿ ಹಗಲಿರುಳು ಪಶ್ಚಿಮ ಹಾಗೂ ದಕ್ಷಿಣ ಯೂರೋಪು, ಉತ್ತರ ಅಮೆರಿಕ ಮತ್ತು ಏಷ್ಯಾ ಮೈನರ್‌ಗಳನ್ನು ಸಂಚರಿಸಬಹುದಾಗಿತ್ತು. ಆದರೆ ಪ್ರತಿಯೊಂದು ಪ್ರಾಂತದಲ್ಲಿಯೂ ಸಮ್ರಾಟನ ಸಂದೇಶವನ್ನು ಸೈನಿಕ ದಳಪತಿಯೊಬ್ಬ ನಿಯಂತ್ರಿಸುತ್ತಿದ್ದ. ಇದರಿಂದ ಅವನು ತನ್ನೊಡನಿರದ ಬೇರಾರಿಗೂ ತಿಳಿಯದ ರೀತಿಯಲ್ಲಿ ತನ್ನ ಸೈನ್ಯ ತುಕಡಿಯನ್ನು ಕಳಿಸಬಹುದಾಗಿತ್ತು. ಸೈನ್ಯ ತುಕಡಿಗಳ ಶೀಘ್ರ ಪಯಣ ಹಾಗೂ ಸಂದೇಶದ ನಿಧಾನಗತಿಗಳು ಅನೇಕ ವೇಳೆ ರೋಮ್ ಸಮ್ರಾಟನ ವಿರುದ್ಧದ ಬಂಡಾಯಗಾರರಿಗೆ ಅನುಕೂಲಕರವಾಗುತ್ತಿದ್ದವು. ಇಟಲಿಯ ಮೇಲೆ ದಾಳಿ ಮಾಡಲು ಗೌಲ್‌ನ ಉತ್ತರದಿಂದ ಹೊರಟ ಕಾನ್‌ಸ್ಟಾಂಟೈನ್‌ನ ಚಲನೆಯ ಸುಭಗತೆಯನ್ನು ಹ್ಯಾನಿಬಾಲ್‌ನ ಕಷ್ಟದೊಂದಿಗೆ ಹೋಲಿಸುವ ಸಂದರ್ಭದಲ್ಲಿ ಗಿಬ್ಬನ್ ಹೀಗೆನ್ನುತ್ತಾನೆ: 'ಹ್ಯಾನಿಬಾಲ್ ಗೌಲ್‌ನಿಂದ ಇಟಲಿಗೆ ನಡೆದಾಗ, ಹಿಂದೆಂದೂ ಸೈನ್ಯದ ಪಯಣಕ್ಕೆ ತೆರೆದುಕೊಂಡಿರದ ದಾರಿಯೊಂದನ್ನು ಪರ್ವತಗಳ ಮೇಲೆ ಹಾಗೂ ಅನಾಗರಿಕ ಪ್ರದೇಶಗಳ ಮೂಲಕ ಗುರುತಿಸಿ ತೆರೆಯಬೇಕಾಯಿತು. ಆನಂತರ ಆಲ್ಪ್ಸ್ ಪರ್ವತಶ್ರೇಣಿಗಳನ್ನು ಪ್ರಕೃತಿಯು ರಕ್ಷಿಸಿತೇ ವಿನಾ ರಕ್ಷಣೆಯ ಕೌಶಲವಲ್ಲ. ಆದರೆ ಈ ನಡುವಣ ಅವಧಿಯಲ್ಲಿ ಮುನ್ನಡೆಯಲು ಪ್ರಯತ್ನಿಸಿದ್ದ ಸೈನಾಧಿಪತಿಗಳು ಯಾವುದೇ ಬಗೆಯ ಕಷ್ಟಗಳನ್ನಾಗಲೀ ಪ್ರತಿರೋಧವನ್ನಾಗಲೀ ಎದುರಿಸಲಿಲ್ಲ. ಕಾನ್‌ಸ್ಟಾಂಟೈನ್‌ನ ಕಾಲದಲ್ಲಿ ಪರ್ವತಪ್ರದೇಶಗಳ ರೈತಾಪಿ ಜನರು ನಾಗರಿಕರಾಗಿದ್ದರು, ವಿಧೇಯ ಪ್ರಜೆಗಳಾಗಿದ್ದರು; ದೇಶದಲ್ಲಿ ಸಮೃದ್ಧವಾದ ಆಹಾರ ಸಾಮಗ್ರಿಗಳ ಶೇಖರಣೆಯಿತ್ತು; ರೋಮನ್‌ರು ಆಲ್ಪ್ಸ್ ಪರ್ವತಗಳ ಮೇಲೆ ನಿರ್ಮಿಸಿದ್ದ ಅನುಕೂಲಕರ ಹೆದ್ದಾರಿಗಳು ಗೌಲ್ ಮತ್ತು ಇಟಲಿಗಳ ನಡುವೆ ಅನೇಕ ಸಂಪರ್ಕಸಾಧನಗಳನ್ನು ತೆರೆದಿದ್ದವು. ಕಾನ್‌ಸ್ಟಾಂಟೈನ್ ಈಗ ಮೌಂಟ್ ಸೆನಿಸ್ ಎಂದು ಕರೆಯಲಾಗುವ ಕೋಟ್ಟಿಯನ್ ಆಲ್ಪ್ಸ್ ದಾರಿಯನ್ನು ಅನುಸರಿಸಿ ಚುರುಕಾಗಿ ಮುನ್ನಡೆದು, ರ್ಹೈನ್ ನದಿಯ ದಂಡೆಯನ್ನು ಬಿಟ್ಟು

ಹೊರಟ ಬೇಹು ಮಾಹಿತಿಯು ರೋಮ್‌ನಲ್ಲಿದ್ದ ಮ್ಯಾಕ್ಸೆಂಟಿಯಸ್ ಆಸ್ಥಾನವನ್ನು ತಲುಪುವ ಮುಂಚೆಯೇ ಅವನು ಹೋಗಿ ತಲುಪಿದ.'

ಇದರ ಫಲಿತಾಂಶವೆಂದರೆ, ಮ್ಯಾಕ್ಸೆಂಟಿಯಸ್ ಸೋತು ಕ್ರಿಶ್ಚಿಯಾನಿಟಿಯು ದೇಶದ ಮತವಾಗಿ ನೆಲಗೊಂಡುದು. ರೋಮನ್‌ರು ಕೆಟ್ಟ ರಸ್ತೆಗಳನ್ನು ಹೊಂದಿದ್ದರೆ ಅಥವಾ ಸುದ್ದಿಯನ್ನು ಶೀಘ್ರವಾಗಿ ಮುಟ್ಟಿಸುವ ವ್ಯವಸ್ಥೆಯನ್ನು ಹೊಂದಿದ್ದರೆ ಜಗತ್ತಿನ ಚರಿತ್ರೆಯೇ ಬದಲಾಗಿರುತ್ತಿತ್ತು.

ಉಗಿಹಡಗುಗಳು, ರೈಲ್ವೆ ಮತ್ತು, ಇತ್ತೀಚೆಗೆ ವಿಮಾನಗಳ ಕಾರಣದಿಂದಾಗಿ ಸರ್ಕಾರಗಳು ಬಹು ದೂರದ ಪ್ರದೇಶಗಳ ಮೇಲೆಯೂ ತಮ್ಮ ಅಧಿಕಾರವನ್ನು ಚಲಾಯಿಸುವ ಸಾಮರ್ಥ್ಯವನ್ನು ಪಡೆದಿವೆ. ಸಹಾರದಲ್ಲಿಯೋ ಮೆಸೋಪೊಟಾಮಿಯದಲ್ಲಿಯೋ ನಡೆಯುವ ಬಂಡಾಯವನ್ನು ಈಗ ಕೆಲವೇ ಗಂಟೆಗಳಲ್ಲಿ ಹತ್ತಿಕ್ಕುವ ಸಾಧ್ಯತೆಯುಂಟಾಗಿದೆ. ಅದೇ ಒಂದು ಶತಮಾನದ ಹಿಂದಾಗಿದ್ದರೆ ಅಲ್ಲಿಗೆ ಸೈನ್ಯವನ್ನು ಕಳಿಸಲು ತಿಂಗಳುಗಳೇ ಬೇಕಾಗುತ್ತಿದ್ದವು; ಅಲೆಕ್ಸಾಂಡರ್‌ನ ಸೈನ್ಯಕ್ಕೆ ಬಲೂಚಿಸ್ತಾನದಲ್ಲಿ ಆದ ಹಾಗೆ ಬಾಯಾರಿಕೆಗೆ ಬಲಿಯಾಗುವುದರಿಂದ ದನ್ನು ತಪ್ಪಿಸುವುದು ಬಹಳ ಕಷ್ಟವಾಗುತ್ತಿತ್ತು.

ವ್ಯಕ್ತಿಗಳು ಹಾಗೂ ಸರಕುಗಳ ಸಾಗಾಣಿಕೆಯಷ್ಟೇ ಮುಖ್ಯವಾದುದು ಸುದ್ದಿಯನ್ನು ಕಳಿಸುವುದು. ೧೮೧೨ ರ ಯುದ್ಧದಲ್ಲಿ ನ್ಯೂ ಆರ್ಲಿಯನ್ಸ್‌ನ ಕದನವು ನಡೆದದ್ದು ಶಾಂತಿ ಒಪ್ಪಂದವಾದ ಏಳು ವರ್ಷಗಳ ನಂತರ; ಆದರೆ ಶತ್ರು ಪಕ್ಷಗಳ ಸೈನ್ಯಗಳಿಗೆ ಈ ವಿಷಯ ಗೊತ್ತೇ ಇರಲಿಲ್ಲವೆನ್ನಿ. ಏಳು ವರ್ಷಗಳ ಈ ಯುದ್ಧದ ಕೊನೆಗೆ, ಬ್ರಿಟಿಷ್ ದಳವು ಕ್ಯೂಬ ಮತ್ತು ಫಿಲಿಪ್ಪೀನ್ಸ್‌ಗಳನ್ನು ಆಕ್ರಮಿಸಿಕೊಂಡಿದ್ದರೂ, ಶಾಂತಿ ಒಪ್ಪಂದಕ್ಕೆ ಸಹಿ ಬೀಳುವವರೆಗೆ ಈ ವಿಷಯವು ಯೂರೋಪಿನಲ್ಲಿ ತಿಳಿದೇ ಇರಲಿಲ್ಲ. ಟೆಲಿಗ್ರಾಫ಼್ ಅನ್ನು ಕಂಡುಹಿಡಿಯುವವರೆಗೂ, ಶಾಂತಿಕಾಲದಲ್ಲಿ ರಾಯಭಾರಿಗಳಿಗೆ ಹಾಗೂ ಯುದ್ಧಕಾಲದಲ್ಲಿ ಸೈನ್ಯಾಧಿಕಾರಿಗಳಿಗೆ ತಿಳಿವಳಿಕೆಯ ಅಂತರ ಇರುತ್ತಿದ್ದುದು ಸಹಜವಾಗಿಯೇ ಅನಿವಾರ್ಯವಾಗಿತ್ತು; ಅವರು ನೀಡುತ್ತಿದ್ದ ಆದೇಶಗಳು ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸುತ್ತಿರಲಿಲ್ಲ. ದೂರ ಸ್ಥಳಗಳಲ್ಲಿದ್ದ ಸರ್ಕಾರದ ಪ್ರತಿನಿಧಿಗಳು ತಮಗೆ ಸರಿಯೆಂದು ತೋಚಿದಂತೆ ನಡೆದುಕೊಳ್ಳುವುದು ಸಹಜವಾಗಿತ್ತು; ಹೀಗಾಗಿ ಅವರು ಕೇಂದ್ರ ನಿರ್ದೇಶನವನ್ನು ಅನುಸರಿಸುವರಿಗಿಂತ ಹೆಚ್ಚಿನವರಾಗಿರುತ್ತಿದ್ದರು.

ಸಂದೇಶವನ್ನು ಅತ್ಯಂತ ಕ್ಷಿಪ್ರವಾಗಿ ರವಾನಿಸುವುದು ಮಾತ್ರವೇ ಮುಖ್ಯವಾಗಿರಲಿಲ್ಲ, ಅದರೊಡನೆ, ಅದಕ್ಕಿಂತ ಹೆಚ್ಚಿನದಾಗಿ, ವ್ಯಕ್ತಿಗಳಿಗಿಂತ ಸಂದೇಶವು ಹೆಚ್ಚು ಕ್ಷಿಪ್ರತೆಯಿಂದ ರವಾನೆಯಾಗುವುದು ಮುಖ್ಯವಾಗಿರುತ್ತಿತ್ತು. ಈ ಹಿಂದಿನ ಒಂದು ನೂರು ವರ್ಷಗಳಿಗಿಂತ ಸ್ವಲ್ಪ ಹೆಚ್ಚಿನ ಕಾಲದಲ್ಲಿ, ಸಂದೇಶಗಳಾಗಲೀ ಬೇರೇನೇ ಆಗಲಿ ಕುದುರೆಗಿಂತ ಹೆಚ್ಚು ಕ್ಷಿಪ್ರವಾಗಿ ಸಾಗುವುದು ಅಶಕ್ಯವಾಗಿತ್ತು. ದರೋಡೆಕಾರನೊಬ್ಬನು ಪಕ್ಕದ ಊರುಗಳಿಗೆ ತನ್ನ ಕೃತ್ಯದ ವಿಷಯ ತಿಳಿಯುವುದಕ್ಕಿಂತ ಮುಂಚೆಯೇ ಅಲ್ಲಿಂದ ಪರಾರಿಯಾಗುವುದು ಸುಲಭವಾಗಿತ್ತು. ಯುದ್ಧ ಸಮಯದಲ್ಲಿ ಎಲ್ಲ ವೇಗಸಂಪರ್ಕ ಸಾಧನಗಳನ್ನೂ ಸರ್ಕಾರಗಳೇ ನಿಯಂತ್ರಿಸುತ್ತವೆ, ಇದರಿಂದ ಅವುಗಳ ಅಧಿಕಾರವು ಹೆಚ್ಚು ಬಲಿಷ್ಠಗೊಳ್ಳುತ್ತದೆ.

ಆಧುನಿಕ ತಾಂತ್ರಿಕತೆಯು, ಸಂದೇಶಗಳ ಕ್ಷಿಪ್ರ ರವಾನೆಯ ಮೂಲಕ ಮಾತ್ರವಲ್ಲ, ರೈಲ್ವೆ, ಟೆಲಿಗ್ರಾಫ್, ಸಾರಿಗೆ ವಾಹನಗಳು ಹಾಗೂ ಸರ್ಕಾರದ ಪ್ರಚಾರಗಳ ಮೂಲಕವೂ, ವಿಶಾಲ ಸಾಮ್ರಾಜ್ಯಗಳು ಹಿಂದಿಗಿಂತ ಹೆಚ್ಚಾಗಿ ಈಗ ಸ್ಥಿರತೆಯನ್ನು ಸಾಧಿಸಲು ಸಹಾಯಕವಾಗಿವೆ. ಪರ್ಷಿಯದ ಸತ್ರಪರಿಗಾಗಲೀ ರೋಮನ್ ರಾಜಪ್ರತಿನಿಧಿಗಳಿಗಾಗಲೀ ಹೆಚ್ಚು ಸುಲಭವಾಗಿ ಬಂಡಾಯವೇಳುವ ಸ್ವಾತಂತ್ರ್ಯವಿರುತ್ತಿತ್ತು. ಅಲೆಕ್ಸಾಂಡರ್‌ನ ಸಾಮ್ರಾಜ್ಯ ಛಿದ್ರಗೊಂಡದ್ದು ಅವನ ಸಾವಿನ ಕಾರಣದಿಂದ. ಆಟ್ಟಿಲ ಮತ್ತು ಚೆಂಗಿಸ್ ಖಾನ್‌ರ ಸಾಮ್ರಾಜ್ಯಗಳು ಅಲ್ಪಕಾಲಿಕವಾದವು; ಹೊಸ ಜಗತ್ತಿನಲ್ಲಿ ಯೂರೋಪ್‌ನ ದೇಶಗಳು ತಮ್ಮ ಬಹುಪಾಲಿನ ಸ್ವಾಮ್ಯವನ್ನು ಕಳೆದುಕೊಂಡವು. ಆದರೆ ಆಧುನಿಕ ತಾಂತ್ರಿಕತೆಯಿಂದಾಗಿ ಬಹುಪಾಲು ಸಾಮ್ರಾಜ್ಯಗಳು, ಪರಕೀಯ ದಾಳಿಯ ಕಾಲದ ಹೊರತಾಗಿ, ಹೆಚ್ಚು ಸುರಕ್ಷಿತವಾಗಿವೆ; ಬಂಡಾಯವೆನ್ನುವುದನ್ನು ಯುದ್ಧದಲ್ಲಿ ಸೋತ ಸಂದರ್ಭದಲ್ಲಿ ಮಾತ್ರವೇ ನಿರೀಕ್ಷಿಸಬಹುದಾಗಿದೆ.

ಅಧಿಕಾರದ ದಟ್ಟತೆ ಅಥವಾ ಸಂಘಟನೆಯ ಸಾಂದ್ರತೆ (ಹೀಗೂ ಕರೆಯಬಹುದು) ವಿಷಯದಲ್ಲಿ ಅಡಕವಾಗಿರುವ ಪ್ರಶ್ನೆಗಳು ಸಂಕೀರ್ಣವೂ ಹೌದು, ಮುಖ್ಯವೂ ಹೌದು. ಎಲ್ಲ ನಾಗರಿಕ ದೇಶಗಳಲ್ಲಿನ ಸರ್ಕಾರಗಳು ಹಿಂದೆಂದಿಗಿಂತಲೂ ಈಗ ಹೆಚ್ಚು ಚುರುಕಾಗಿವೆ. ರಷ್ಯಾ, ಜರ್ಮನಿ ಹಾಗೂ ಇಟಲಿಗಳಲ್ಲಿ ಅವು ಮಾನವ ಚಟುವಟಿಕೆಗಳೆಲ್ಲದರಲ್ಲಿಯೂ ಮೂಗು ಹಾಕುತ್ತವೆ. ಮಾನವನಿಗಿರುವ ಅಧಿಕಾರದ ವ್ಯಾಮೋಹದಿಂದಾಗಿಯೂ, ಅಧಿಕಾರವನ್ನು ಹೊಂದಿರುವವರು ಸಾಮಾನ್ಯವಾಗಿ ಇತರರಿಗಿಂತ ಅದನ್ನು ಹೆಚ್ಚು ಬಯಸುವವರಾದ್ದರಿಂದ, ಸರ್ಕಾರದ ಚುಕ್ಕಾಣಿ ಹಿಡಿದಿರುವವರು,

ಸಾಧರಣ ಸಂದರ್ಭಗಳಲ್ಲಿ, ಅಧಿಕಾರದ ವ್ಯಾಪ್ತಿಯಂತೆಯೇ ಅದರ ಆಂತರಿಕ ಚಟುವಟಿಕೆಗಳನ್ನು ಹೆಚ್ಚಿಸಲು ಬಯಸುತ್ತಿರುತ್ತಾರೆ. ಸರ್ಕಾರದ ಕಾರ್ಯಗಳನ್ನು ಹೆಚ್ಚಿಸಲು ಪ್ರಬಲವಾದ ಕಾರಣಗಳಿರುವುದರಿಂದಾಗಿ, ಸಾಮಾನ್ಯ ನಾಗರಿಕರು ಸರ್ಕಾರದ ಈ ಬಯಕೆಯನ್ನು ಪೂರೈಸಲು ತಮ್ಮ ಒಪ್ಪಿಗೆ ನೀಡುವ ಮನೋಭಾವವನ್ನು ಹೊಂದಿರುತ್ತಾರೆ. ಆದರೆ ಕೆಲವು ವೇಳೆ ಅವರಿಗೆ ಸ್ವಲ್ಪ ಮಟ್ಟಿಗಿನ ಸ್ವಾತಂತ್ರ್ಯದ ಹಂಬಲೂ ಕಾಣಿಸಿಕೊಳ್ಳುತ್ತದೆ; ಅದರಿಂದಾಗಿ, ತಾತ್ಕಾಲಿಕವಾಗಿಯಾದರೂ, ಸಂಘಟನೆಯ ಅಧಿಕಾರವು ಮತ್ತಷ್ಟು ಹೆಚ್ಚಾಗುವುದನ್ನು ತಡೆಗಟ್ಟುವಷ್ಟು ಅವರು ಬಲಿಷ್ಠರಾಗುತ್ತಾರೆ. ಹೀಗಾಗಿ, ಸಂಘಟನೆಗೆ ಒಂದು ನಿರ್ದಿಷ್ಟ ಹಂತದ ಅಧಿಕಾರ ಸಾಂದ್ರತೆಯು ಸಾಧ್ಯವಾದಾಗ, ನಾಗರಿಕರ ಸ್ವಾತಂತ್ರ್ಯಪ್ರೇಮ ಮತ್ತು ಅಧಿಕಾರಿಗಳ ಅಧಿಕಾರವ್ಯಾಮೋಹಗಳ ನಡುವೆ ಕೆಲಕಾಲದವರೆಗಾದರೂ ಒಂದು ರೀತಿಯ ಸಮತೋಲನವುಂಟಾಗುತ್ತದೆ. ಇದರಿಂದಾಗಿ ಸಂಘಟನೆಯ ಬಲಿಷ್ಠಗೊಂಡರೆ ಸ್ವಾತಂತ್ರ್ಯಪ್ರೇಮವು ತೀವ್ರವಾಗುತ್ತದೆ, ಅದು ಕಡಿಮೆಯಾದರೆ ಅಧಿಕಾರಸ್ಥರ ಅಧಿಕಾರವ್ಯಾಮೋಹವೂ ತಗ್ಗುತ್ತದೆ.

ಸ್ವಾತಂತ್ರ್ಯಪ್ರೇಮವು, ಬಹು ಸಂದರ್ಭಗಳಲ್ಲಿ, ಬಾಹ್ಯ ಹಸ್ತಕ್ಷೇಪದ ಬಗೆಗಿನ ಅಮೂರ್ತ ಅಸಹನೆಯಾಗಿರದೆ, ಸರ್ಕಾರವು ಯಾವುದನ್ನು ಅಪೇಕ್ಷಣೀಯವೆಮದು ಭಾವಿಸುತ್ತದೆಯೋ ಅಂತಹ ನಿರ್ದಿಷ್ಟ ರೂಪದ ಬಗ್ಗೆ ಹೇವರಿಕೆಯಾಗುತ್ತದೆ; ಉದಾಹರಣೆಗೆ, ಮದ್ಯಪಾನನಿಷೇಧ, ಕಡ್ಡಾಯ ಸೈನಿಕಶಿಕ್ಷಣ, ಮತೀಯ ನಿರ್ಬಂಧ ಇಂತಹವು. ಕೆಲವು ವೇಳೆ ಇಂತಹ ಮನೋಭಾವವನ್ನು ಪ್ರಚಾರ ಅಥವಾ ಶಿಕ್ಷಣದ ಮೂಲಕ ನಿಧಾನವಾಗಿ ತೊಡೆದುಹಾಬಹುದು, ಇದಿರಿಂದಾಗಿ ವೈಯಕ್ತಿಕ ಸ್ವಾತಂತ್ರ್ಯದ ಹಂಬಲನ್ನು ಅನಿರ್ದಿಷ್ಟವಾಗಿ ಕುಗ್ಗಿಸಬಹುದು. ಆಧುನಿಕ ಸಮಾಜಗಳಲ್ಲಿ ಸಮರೂಪವನ್ನು ಹೇರಲು ಅನೇಕ ಶಕ್ತಿಗಳು ಸಂಚು ಹೂಡುತ್ತವೆ: ಶಾಲೆಗಳು, ವೃತ್ತಪತ್ರಿಕೆಗಳು, ಸಿನಿಮ, ರೇಡಿಯೋ, ದೈಹಿಕಶಿಕ್ಷಣ ಮುಂತಾದವು. ಜನಸಾಂದ್ರತೆಯಿಂದಲೂ ಇಂತಹುದೇ ಪರಿಣಾಮವಾಗುತ್ತದೆ. ಹೀಗಾಗಿ, ಸ್ವಾತಂತ್ರ್ಯಪ್ರೇಮ ಮತ್ತು ಅಧಿಕಾರವ್ಯಾಮೋಹಗಳ ನಡುವಣ ತಾತ್ಕಾಲಿಕ ಸಮತೋಲನದ ಪರಿಸ್ಥಿತಿಯು, ಆಧುನಿಕ ಪರಿಸ್ಥಿತಿಗಳಲ್ಲಿ, ಅಧಿಕಾರದ ಕಡೆಗೇ ಹೆಚ್ಚು ಹೆಚ್ಚು ಓಲುತ್ತ ಸಾಗುವುದು ಸಹಜವಾಗುತ್ತದೆ; ಇದರಿಂದಾಗಿ ನಿರಂಕುಶಪ್ರಭುತ್ವದ ಸ್ಥಾಪನೆ ಹಾಗೂ ಯಶಸ್ಸಿಗೆ ಕಾರಣವಾಗುತ್ತದೆ. ಶಿಕ್ಷಣದ ಮೂಲಕ ಸ್ವಾತಂತ್ರ್ಯಪ್ರೇಮವನ್ನು ಕ್ಷೀಣಗೊಳಿಸುವುದು ಸಾಧ್ಯ; ಸದ್ಯಕ್ಕೆ ಇದಕ್ಕಿರುವ ಪರಿಮಿತಿಯು ನಮಗೆ ತಿಳಿಯದು. ಜನರ ಬಂಡಾಯ ಮನೋಭಾವವನ್ನು

ಉದ್ರೇಕಿಸದೆ ಸರ್ಕಾರದ ಆಂತರಿಕ ಅಧಿಕಾರವನ್ನು ಎಷ್ಟರಮಟ್ಟಿಗೆ ಹಿಗ್ಗಲಿಸಬಹುದು ಎಂಬುದನ್ನು ಹೇಳುವುದು ಅಸಾಧ್ಯ. ಆದರೆ, ಸಂದರ್ಭ ಒದಗಿದರೆ, ನಿರಂಕುಶಪ್ರಭುತ್ವಗಳಲ್ಲಿರುವುದಕ್ಕಿಂತ ಮಿಗಿಲಾದ ಪ್ರಮಾಣದಲ್ಲಿ ಅದನ್ನು ಹಿಗ್ಗಲಿಸಬಹುದು ಎಂಬುದರಲ್ಲಿ ಅನುಮಾನವಿಲ್ಲ.

ಸರ್ಕಾರವನ್ನುಳಿದ ಇತರ ಸಂಘಟನೆಗಳು ಮುಖ್ಯವಾಗಿ ನಾವೀಗ ಪರಿಶೀಲಿಸುತ್ತಿರುವಂತಹುದೇ ಕಾನೂನುಗಳನ್ನು ಹೊಂದಿರುತ್ತವೆ, ಆದರೆ ಅವುಗಳಿಗೆ ಸೈನ್ಯಾಧಿಕಾರವಿರುವುದಿಲ್ಲ, ಅಷ್ಟೆ. ಇವುಗಳಲ್ಲಿ ನಾನು ಕ್ಲಬ್‌ಗಳಂತಹ ಅಧಿಕಾರಾಸಕ್ತಿ ಹೊಂದಿಲ್ಲದ ಸಂಘಟನೆಗಳನ್ನು ಸೇರಿಸುತ್ತಿಲ್ಲ. ನಮ್ಮ ಪರಿಶೀಲನೆಗೆ ಮುಖ್ಯವಾಗಿ ಒಳಪಡುವವು ರಾಜಕೀಯ ಪಕ್ಷಗಳು, ಚರ್ಚ್‌ಗಳು ಮತ್ತು ವ್ಯಾಪಾರಿ ಸಂಸ್ಥೆಗಳು. ಬಹುಪಾಲು ಚರ್ಚ್‌ಗಳ ಮಹತ್ವಾಕಾಂಕ್ಷೆ ಎಂದರೆ, ಅದೆಷ್ಟೇ ದೂರದ ಆಸೆಯಾಗಿರಲಿ, ಪ್ರಪಂಚಾದ್ಯಂತ ಹರಡುವುದು; ಅಲ್ಲದೆ, ಅವುಗಳು ಮದುವೆ ಮತ್ತು ಮಕ್ಕಳ ಶಿಕ್ಷಣದಂತಹ ತನ್ನ ಸದಸ್ಯರ ಕೆಲವು ತೀರ ಖಾಸಗೀ ವ್ಯವಹಾರಗಳನ್ನೂ ನಿಯಂತ್ರಿಸಲು ಪ್ರಯತ್ನಿಸುತ್ತವೆ. ಅದು ಸಾಧ್ಯವೆನ್ನಿಸಿದ ಸಂದರ್ಭಗಳಲ್ಲಿ ಚರ್ಚ್‌ಗಳು, ಟಿಬೆಟ್‌ನಲ್ಲಿನಂತೆ ಮತ್ತು ಸಂತ ಪೀಟರ್‌ನ ಪುದುವಟ್ಟಿನ ವಿಷಯದಲ್ಲಿಯಂತೆ, ಮತ್ತು ಸ್ವಲ್ಪ ಮಟ್ಟಿಗೆ, ಪಶ್ಚಿಮ ಯೂರೋಪ್‌ನಲ್ಲಿ ರಿಫಾರ್ಮೇಷನ್‌ವರೆಗೂ, ಸರ್ಕಾರದ ಕಾರ್ಯಗಳಲ್ಲಿ ಕೆಲವನ್ನೂ ಅತಿಕ್ರಮಿಸಿವೆ. ಕೆಲವು ಅಪವಾದಗಳನ್ನು ಹೊರತುಪಡಿಸಿದರೆ, ಅವಕಾಶರಾಹಿತ್ಯ ಅಥವಾ ಧರ್ಮದ್ರೋಹ ಅಥವಾ ವಿಭಜನೆಯ ರೂಪದಲ್ಲಿನ ಬಂಡಾಯದ ಹೆದರಿಕೆಗಳಿಂದ ಚರ್ಚ್‌ಗಳ ಅಧಿಕಾರಾಸಕ್ತಿಯು ಸೀಮಿತಗೊಂಡಿದೆ. ಆದರೆ ರಾಷ್ಟ್ರೀಯತೆಯು ಅನೇಕ ದೇಶಗಳಲ್ಲಿ ಅದರ ಅಧಿಕಾರವನ್ನು ಬಹುಮಟ್ಟಿಗೆ ಕುಂಠಿತಗೊಳಿಸಿದೆ, ಇದರಿಂದ ಹಿಂದೆ ಧರ್ಮದ ಮೂಲಕ ಅಭಿವ್ಯಕ್ತಗೊಳ್ಳುತ್ತಿದ್ದ ಅನೇಕ ಭಾವನೆಗಳು ಸರ್ಕಾರದ ಪರವಾಗಿ ವರ್ಗಾವಣೆಗೊಂಡಿವೆ.[೧] ಮತಧರ್ಮದ ಶಕ್ತಿಯು ಕುಂಠಿತಗೊಳ್ಳಲು ಭಾಗಶಃ ಕಾರಣ ರಾಷ್ಟ್ರೀಯತೆ ಮತ್ತದರ ಪರಿಣಾಮ ಹಾಗೂ ರಾಷ್ಟ್ರಗಳ ಅಧಿಕಗೊಂಡ ಅಧಿಕಾರ.

---

[1] ಜೋಸೆಫ್ ಚೇಂಬರ್‌ಲೀನ್‌ನನ್ನು ಸುಂಕ ಸುಧಾರಣೆಗೆ ಮನವೊಲಿಸಲು ಕಾರಣರಾದ ಡಬ್ಲ್ಯು.ಎ.ಎಸ್. ಹ್ಯೂಇನ್ಸ್ ಅವರು ನನಗೆ ತಿಳಿಸಿದ್ದೇನೆಂದರೆ, ತಮ್ಮ ವಂಶಜರು ಹಿಂದೆ ರೋಮನ್ ಕ್ಯಾಥೋಲಿಕ್‌ನ ಬಹು ನಿಷ್ಠಾವಂತ ಅನುಯಾಯಿಗಳಾಗಿದ್ದರು, ಆದರೆ ಹಿಂದಿನವರ ಭಾವನೆಗಳು ಚರ್ಚ್‌ಗೆ ನಿಷ್ಠವಾಗಿದ್ದಂತೆ ತಮ್ಮ ಭಾವನೆಗಳು ಮಾತ್ರ ಬ್ರಿಟಿಷ್ ಸಾಮ್ರಾಜ್ಯಕ್ಕೆ ನಿಷ್ಠವಾಗಿತ್ತೆಂದು. ಇದೊಂದು ಗಮನಾರ್ಹ ಬೆಳವಣಿಗೆ.

ಇತ್ತೀಚಿನವರೆಗೂ ರಾಜಕೀಯ ಪಕ್ಷಗಳು ಬಹು ಸಡಿಲವಾದ ಸಂಘಟನೆಗಳಾಗಿದ್ದವು, ತಮ್ಮ ಸದಸ್ಯರ ಚಟುವಟಿಕೆಗಳ ಮೇಲೆ ಅವು ಅತ್ಯಲ್ಪ ಹಿಡಿತವನ್ನು ಸಾಧಿಸಿದ್ದವು. ಹತ್ತೊಂಬತ್ತನೆಯ ಶತಮಾನಾದ್ಯಂತ ಪಾರ್ಲಿಮೆಂಟ್ ಸದಸ್ಯರು ಬಹು ಸನ್ನಿವೇಶಗಳಲ್ಲಿ ತಮ್ಮ ಪಕ್ಷ ಧುರೀಣರ ವಿರುದ್ಧವೇ ಮತ ಚಲಾಯಿಸುತ್ತಿದ್ದರು; ಇದರಿಂದ ಗುಂಪುಗಳ ಫಲಿತಾಂಶಗಳ ಬಗ್ಗೆ ಭವಿಷ್ಯ ನುಡಿಯುವುದು ಈಗಿಗಿಂತ ಬಹಳ ಕಷ್ಟಕರವಾಗಿತ್ತು. ವಾಲ್‌ಪೋಲ್, ನಾರ್ತ್ ಮತ್ತು ಕಿರಿಯ ಪಿಟ್ ತಮ್ಮ ಬೆಂಬಲಿಗರನ್ನು ಲಂಚದಿಂದಾಗಿ ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಲ್ಲವರಾಗಿದ್ದರು; ಆದರೆ ಲಂಚಗುಳಿತನವು ಕಡಿಮೆಯಾದ ಮೇಲೆ, ರಾಜಕೀಯವು ಇನ್ನೂ ಶ್ರೀಮಂತಾವಲಂಬಿಯಾಗಿದ್ದುದರಿಂದ, ಸರ್ಕಾರ ಮತ್ತು ಪಕ್ಷ ಧುರೀಣರಿಗೆ ತಮ್ಮ ವರ್ಚಸ್ಸು ಬೀರಲು ಸಾಧ್ಯವಾಗುತ್ತಿರಲಿಲ್ಲ. ಈಗಲಾದರೆ, ಅದರಲ್ಲೂ ಲೇಬರ್ ಪಕ್ಷದಲ್ಲಿ, ಜನರು ಸಂಪ್ರದಾಯಕ್ಕೆ ಬದ್ಧರಾಗಿದ್ದಾರೆ, ಮತ್ತು ಈ ಬದ್ಧತೆಯನ್ನು ಕಾಪಾಡಿಕೊಳ್ಳುವುದರಲ್ಲಿನ ವೈಫಲ್ಯದಿಂದಾಗಿ ಸಾಮಾನ್ಯವಾಗಿ ರಾಜಕೀಯ ಸಾವು ಅಥವಾ ಆರ್ಥಿಕ ನಷ್ಟ ಸಂಭವಿಸುತ್ತದೆ. ಇವರಿಂದ ನಿರೀಕ್ಷಿಸುವುದು ಇಬ್ಬಗೆಯ ನಿಷ್ಠೆಯನ್ನು: ಒಪ್ಪಿತವಾದ ಅಭಿಪ್ರಾಯಗಳಿಗೆ ಹಾಗೂ ಕಾರ್ಯಕ್ರಮಗಳಿಗೆ; ಮತ್ತು ಅನುದಿನದ ಕಾರ್ಯವಿಧಾನದಲ್ಲಿ ತಮ್ಮ ನಾಯಕರುಗಳಿಗೆ. ಕಾರ್ಯಕ್ರಮವು ನಿರ್ಧರಿತವಾಗುವುದು ಹೆಸರಿಗೆ ಮಾತ್ರ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ, ಇದರ ಮೇಲೆ ಪ್ರಭಾವ ಬೀರಬಲ್ಲವರು ಕೆಲವು ಮಂದಿ ಸೂತ್ರಧಾರರು ಮಾತ್ರವೇ. ಪಾರ್ಲಿಮೆಂಟಿನ ಅಥವಾ ಸರ್ಕಾರದ ಕಾರ್ಯಕ್ರಮದಲ್ಲಿ ಅವರು ಅವನ್ನು ಜಾರಿಗೊಳಿಸುವರೋ ಇಲ್ಲವೋ ಎಂಬುದು ನಾಯಕರಿಗೆ ಬಿಟ್ಟ ವಿಚಾರ. ಜಾರಿಗೊಳಿಸಲು ನಿರಾಕರಿಸುವುದಾದರೆ, ಭಾಷಣಗಳಲ್ಲಿ ಹೀಗೆ ನಡೆಯಿತು ಎಂಬುದನ್ನು ವಿವರಿಸುತ್ತಲೇ, ತಮ್ಮ ಮತಗಳ ಮೂಲಕ ಈ ವಿಶ್ವಾಸದ್ರೋಹವನ್ನು ಬೆಂಬಲಿಸುವುದು ಹಿಂಬಾಲಕರ ಕರ್ತವ್ಯ. ಈ ಪದ್ಧತಿಯಿಂದಾಗಿಯೇ ತಮ್ಮ ಎಲ್ಲ ವಿಧದ ಬೆಂಬಲಿಗರನ್ನು ಕುಂಠಿತಗೊಳಿಸುವುದು ಹಾಗೂ ಜಾರಿಗೊಳಿಸಲೇ ಬಾಕಾಗಿಲ್ಲದ ಸುಧಾರಣೆಗಳನ್ನು ಬೆಂಬಲಿಸುವುದು ನಾಯಕರಿಗೆ ಸಾಧ್ಯವಾಗುವುದು.

ಎಲ್ಲ ರಾಜಕೀಯ ಪಕ್ಷಗಳಲ್ಲಿನ ಸಂಘಟನಾ ಸಾಂದ್ರತೆಯು ಈಗಾಗಲೇ ಹೆಚ್ಚಾಗಿದ್ದರೂ, ಕಮ್ಯುನಿಸ್ಟರು, ಫ್ಯಾಸಿಸ್ಟರು ಮತ್ತು ನಾಝಿಗಳಲ್ಲಿರುವುದಕ್ಕಿಂತ ಪ್ರಜಾಸತ್ತಾತ್ಮಕ ಪಕ್ಷಗಳಲ್ಲಿ ಅದಿನ್ನೂ ತುಂಬ ಕಡಿಮೆಯೇ. ಆ ಗುಂಪುಗಳು ರಾಜಕೀಯ ಪಕ್ಷಗಳಾಗಿಯಲ್ಲದಿದ್ದರೂ ರಹಸ್ಯ ಸಮಾಜವಾಗಿ ಚಾರಿತ್ರಿಕವಾಗಿಯೂ ಮಾನಸಿಕವಾಗಿಯೂ ಇತ್ತೀಚಿನ

ಬೆಳವಣಿಗೆಗಳು. ನಿರಂಕುಶ ಸರ್ಕಾರದಲ್ಲಿ ಆಮೂಲಾಗ್ರ ಬದಲಾವಣೆ ತರುವ ಗುರಿಯಿರಿಸಿಕೊಂಡವರನ್ನು ಗೊತ್ತಿಲ್ಲದೆಡೆಗೆ ದೂಡಲಾಗುತ್ತದೆ; ಅಂಥವರೇನಾದರೂ ಒಗ್ಗೂಡಿದರೆ, ಅವರನ್ನು ದೇಶದ್ರೋಹದ ಹೆಸರಿನಲ್ಲಿ ಕಠಿಣತಮ ಶಿಸ್ತಿಗೆ ಒಳಪಡಿಸಲಾಗುತ್ತದೆ. ಬೇಹುಗಾರರನ್ನು ದೂರವಿರಿಸಲು ಒಂದು ಬಗೆಯ ಜೀವನವಿಧಾನವನ್ನು ನಿರೀಕ್ಷಿಸುವುದು ಸಹಜವಾಗುತ್ತದೆ. ಅಪಾಯ, ರಹಸ್ಯ, ಈಗಿನ ನರಳಿಕೆ ಮತ್ತು ಭವಿಷ್ಯದ ಗೆಲುವಿನ ಭರವಸೆಗಳು ಒಂದು ಬಗೆಯ ಅರೆಧಾರ್ಮಿಕ ಮನೋನ್ನತಿಯನ್ನು ಉಂಟುಮಾಡುತ್ತವೆ, ಈ ಭಾವನೆಯು ಯಾರಲ್ಲಿ ಸುಲಭವಾಗಿ ಮೂಡುವುದೋ ಅವರನ್ನು ಆಕರ್ಷಿಸುತ್ತದೆ. ಹೀಗಾಗಿ ಕ್ರಾಂತಿಕಾರಕವಾದ ರಹಸ್ಯಪೂರ್ಣ ಸಮಾಜವೊಂದರಲ್ಲಿ, ಅದರ ಗುರಿ ಅನಾಯಕತ್ವವಾದರೂ, ತೀವ್ರ ದಬ್ಬಾಳಿಕೆಯುಂಟಾಗುವ ಸಂಭವವಿರುತ್ತದೆ, ಅಂತೆಯೇ ಸಾಮಾನ್ಯವಾಗಿ ರಾಜಕೀಯ ಎನ್ನಬಹುದಾದ ಚಟುವಟಿಕೆಗಳನ್ನೂ ಮೀರಿದಂತೆ ಮೇಲ್ವಿಚಾರಣೆಯಿರುತ್ತದೆ. ನೆಪೋಲಿಯನ್‌ನ ಪತನದ ನಂತರ ಇಟಲಿಯಲ್ಲಿ ರಹಸ್ಯ ಸಮುದಾಯಗಳು ತುಂಬಿಕೊಂಡವು, ಅವುಗಳ ಕ್ರಾಂತಿಕಾರೀ ಸಿದ್ಧಾಂತದಿಂದ ಕೆಲವು ಆಕರ್ಷಿತರಾದರೆ, ಮತ್ತೆ ಕೆಲವರು ಅಪರಾಧ ಸಾಧ್ಯತೆಗಳಿಂದ ಆಕರ್ಷಿತರಾಗುತ್ತಾರೆ. ರಷ್ಯಾದಲ್ಲಿ ಭಯೋತ್ಪಾದನೆ ಹೆಚ್ಚಾದಂತೆ ಆದುದೂ ಇದೇ. ರಷ್ಯಾದ ಕಮ್ಯುನಿಸ್ಟರ ಹಾಗೂ ಇಟಲಿಯ ಫ಼ಾಸಿಸ್ಟರ ಮನಸ್ಸುಗಳಲ್ಲಿ ರಹಸ್ಯ ಸಮುದಾಯ ಮನೋಭಾವವು ಆಳವಾಗಿ ಬೇರೂರಿದ್ದಿತು. ನಾಜ಼ಿಗಳೂ ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿದರು. ಅದರ ಅನೇಕ ಮಂದಿ ನಾಯಕರು ಸರ್ಕಾರವನ್ನು ವಶಪಡಿಸಿಕೊಂಡಾಗ ಅವರು ಆಡಳಿತ ನಡಸಿದ್ದೂ ಹಿಂದೆ ತಮ್ಮ ಪಕ್ಷಗಳ ಆಡಳಿತವನ್ನು ನಡೆಸಿದ ಮನೋಭಾವದಿಂದಲೇ. ಜಗತ್ತಿನಾದ್ಯಂತ ಅದಕ್ಕೆ ಪೂರಕವಾದ ಶರಣಾಗತಿ ಮನೋಭಾವವನ್ನೇ ಅವರು ತಮ್ಮ ಹಿಂಬಾಲಕರಲ್ಲಿ ನಿರೀಕ್ಷಿಸಿದರು.

ಆರ್ಥಿಕ ಸಂಘಟನೆಗಳ ಗಾತ್ರದ ಬೆಳವಣಿಗೆಯು ಮಾರ್ಕ್ಸ್‌ನಲ್ಲಿ ಅಧಿಕಾರದ ಚಾಲಕ ಶಕ್ತಿಯ ಬಗೆಗಿನ ದೃಷ್ಟಿಕೋನವನ್ನು ಪ್ರೇರಿಸಿತು. ಈ ವಿಷಯದ ಬಗ್ಗೆ ಅವನು ಹೇಳಿದ ಸಾಕಷ್ಟು ಅಂಶಗಳು ಸತ್ಯವೆನಿಸಿದವು, ಆದರೆ ಇದು ಆರ್ಥಿಕ ಸಂಘಟನೆಗಳಿಗೆ ಮಾತ್ರವಲ್ಲದೆ ಅಧಿಕಾರ ಮನೋಭಾವದ ಅಭಿವ್ಯಕ್ತಿಗೆ ಅವಕಾಶವಿರುವ ಎಲ್ಲ ಸಂಘಟನೆಗಳ ಕಾರ್ಯಗಳಿಗೂ ಅನ್ವಯಿಸುತ್ತದೆ. ಉತ್ಪಾದನೆಯ ಬಗೆಗಿನ ಮನೋಭಾವವು ಕೆಲವು ದೊಡ್ಡ ಸರ್ಕಾರ ಮತ್ತದರ ಆನುಷಂಗಿಕ ಸಂಘಟನೆಗಳೊಡನೆ ಸಮವ್ಯಾಪಕವಾದ ಟ್ರಸ್ಟ್‌ಗಳ ಉಗಮಕ್ಕೆ ಕಾರಣವಾಗುವ ಅವಕಾಶ

ನೀಡುವಂಥದು. ಆದರೆ ಶಸ್ತ್ರೋದ್ಯಮದ ವಿಷಯದಲ್ಲಿ ಮಾತ್ರ ಜಾಗತಿಕ ವ್ಯಾಪ್ತಿಯ ಟ್ರಸ್ಟ್‌ಗಳ ಸ್ಥಾಪನೆಗೆ ಕಾರಣವಾಗದು. ಭಾರಿ ವ್ಯಾಪಾರೋದ್ಯಮಗಳು ಸರ್ಕಾರದೊಡನೆ ನಿಕಟ ಸಂಪರ್ಕ ಹೊಂದುವಂತೆ ಆಗಲು ತೆರಿಗೆಗಳೂ ವಸಾಹತುಗಳೂ ಕಾರಣವಾಗುತ್ತವೆ. ಆರ್ಥಿಕ ವಲಯದಲ್ಲಿನ ವಿದೇಶೀ ಆಕ್ರಮಣವು ಟ್ರಸ್ಟ್ ಯಾವ ದೇಶದ್ದೋ ಅದರ ಸೈನಿಕ ಬಲವನ್ನು ಅವಲಂಬಿಸುತ್ತದೆ. ಸ್ವಲ್ಪಮಟ್ಟಿಗೆ ಹೊರತಾಗಿ ಅದರ ವಹಿವಾಟುಗಳು ಹಳೆಯ ಕಾಲದ ಶುದ್ಧ ವ್ಯಾಪಾರೀ ಪೈಪೋಟಿಗೆ ಸೀಮಿತಗೊಳ್ಳುವುದಿಲ್ಲ. ಇಟಲಿ ಮತ್ತು ಜರ್ಮನಿಗಳಲ್ಲಿ ಭಾರಿ ವ್ಯಾಪಾರೋದ್ಯಮ ಹಾಗೂ ಸರ್ಕಾರದ ನಡುವಣ ಸಂಬಂಧವು ಪ್ರಜಾಪ್ರಭುತ್ವ ದೇಶಗಳಲ್ಲಿರುವುದಕ್ಕಿಂತ ಹೆಚ್ಚು ನಿಕಟವೂ ಎದ್ದು ಕಾಣುವಂಥದೂ ಆಗಿರುವಂಥದು. ಆದರೆ ಇಂಗ್ಲಂಡ್, ಫ್ರಾನ್ಸ್, ಅಥವಾ ಅಮೆರಿಕದಲ್ಲಿ ಭಾರಿ ವ್ಯಾಪಾರೋದ್ಯಮವು ಸರ್ಕಾರದ ಮೇಲೆ ಹೊಂದಿರುವ ನಿಯಂತ್ರಣಕ್ಕಿಂತ ಹೆಚ್ಚಾಗಿ ಫ್ಯಾಸಿಸಂನ ಆಡಳಿತದಲ್ಲಿ ಹೊಂದಿರುತ್ತದೆಂದು ಭಾವಿಸುವುದು ತಪ್ಪು. ಅದಕ್ಕೆ ವ್ಯತಿರಿಕ್ತವಾಗಿ, ಇಟಲಿ ಮತ್ತು ಜರ್ಮನಿಗಳಲ್ಲಿ ಸರ್ಕಾರವು ಮಿಕ್ಕೆಲ್ಲದರಂತೆ ಭಾರಿ ವ್ಯಾಪಾರೋದ್ಯಮದ ಮೇಲೆ ತನ್ನ ಗರಿಮೆಯನ್ನು ಸ್ಥಾಪಿಸಿಕೊಳ್ಳಲು ಕಮ್ಯುನಿಸಂ ಬಗೆಗಿನ ಭಯವನ್ನೇ ಬಳಸಿಕೊಂಡಿದೆ. ಉದಾಹರಣೆಗೆ, ಇಟಲಿಯಲ್ಲಿ ತೀವ್ರ ಬಂಡವಾಳ ತೆರಿಗೆಯನ್ನು ಜಾರಿಗೊಳಿಸಲಾಗಿದೆ; ಆದರೆ ಅದಕ್ಕಿಂತ ತೀರ ಕಡಿಮೆ ಪ್ರಮಾಣದ ತೆರಿಗೆಯನ್ನು ಬ್ರಿಟಿಷ್ ಲೇಬರ್ ಪಕ್ಷವು ಜಾರಿಗೊಳಿಸಲು ಮುಂದಾದಾಗ ಬಂಡವಾಳದಾರರು ಭಾರಿ ಹುಯಿಲೆಬ್ಬಿಸಿ ಮೇಲುಗೈ ಸಾಧಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಗಳಾದರು.

ವಿಭಿನ್ನ, ಆದರೆ ಹೊಂದಾಣಿಕೆ ಅಸಾಧ್ಯವೇನೂ ಅಲ್ಲದ, ಗುರಿಗಳನ್ನು ಹೊಂದಿದ ಎರಡು ಸಂಘಟನೆಗಳು ಸೇರ್ಪಡೆಯಾದಾಗ ಆಗುವ ಪರಿಣಾಮವು ಮೊದಲಿನದಕ್ಕಿಂತ ಬಿಡಿಯಾಗಿ ಅಥವಾ ಮೊದಲೆರಡನ್ನೂ ಸೇರಿಸಿದರೆ ಆಗುವುದಕ್ಕಿಂತಲೂ ಹೆಚ್ಚು ಬಲಿಷ್ಠವಾದುದು. ಮಹಾಯುದ್ಧಕ್ಕೆ ಮೊದಲು ಗ್ರೇಟ್ ನಾರ್ದರ್ನ್ ಲಂಡನ್‌ನಿಂದ ಯಾರ್ಕ್‌ಗೆ, ನಾರ್ತ್ ಈಸ್ಟರ್ನ್ ಯಾರ್ಕ್‌ನಿಂದ ನ್ಯೂಕ್ಯಾಸಲ್‌ಗೆ ಮತ್ತು ನಾರ್ತ್ ಬ್ರಿಟಿಷ್ ನ್ಯೂಕ್ಯಾಸಲ್‌ನಿಂದ ಎಡಿನ್‌ಬರೋಗೆ ಹೋದವು; ಈಗ ಎಲ್‌ಎನ್‌ಈಆರ್ ಎಲ್ಲ ಕಡೆಗೂ ಹೋಗುತ್ತಿದೆ ಮತ್ತು ಎದ್ದು ಕಾಣುವಂತೆ ಮೊದಲ ಮೂರೂ ಕಂಪೆನಿಗಳು ಒಟ್ಟಾರೆ ಇದ್ದುದಕ್ಕಿಂತ ಹೆಚ್ಚು ಬಲಿಷ್ಠವಾಗಿದೆ. ಹಾಗೆಯೇ ಅದಿರು ತೆಗೆಯುವುದರಿಂದ ಹಿಡಿದು ಹಡಗು ನಿರ್ಮಾಣದವರೆಗಿನ ಇಡೀ ಉಕ್ಕು ಕೈಗಾರಿಕೋದ್ಯಮವು ಒಂದೇ ಕೇಂದ್ರದ

ನಿಯಂತ್ರಣಕ್ಕೊಳಗಾದರೆ ಅನುಕೂಲವಾಗುವುದು ನಿಶ್ಚಿತ. ಹೀಗಾಗಿ ಒಗ್ಗೂಡುವಿಕೆಯ ಬಗೆಗೆ ಸಹಜವೆನಿಸುವ ಒಲವು ಕಂಡುಬರುತ್ತದೆ; ಈ ಮನೋಭಾವವು ಆರ್ಥಿಕ ವಲಯಕ್ಕೆ ಮಾತ್ರ ಸೀಮಿತವಾದದ್ದೇನಲ್ಲ. ಈ ಪ್ರಕ್ರಿಯೆಯಿಂದಾಗುವ ತಾರ್ಕಿಕ ಪರಿಣಾಮವೆಂದರೆ ಅತ್ಯಂತ ಬಲಿಷ್ಠವಾದ ಸಂಘಟನೆ, ಅಂದರೆ ಸರ್ಕಾರವು, ಮಿಕ್ಕೆಲ್ಲವನ್ನೂ ಹೀರಿಕೊಳ್ಳುವುದು. ಈ ಮನೋಭಾವವು ಕಾಲಾನುಕ್ರಮದಲ್ಲಿ, ವಿವಿಧ ಸರ್ಕಾರಗಳ ಗುರಿಗಳು ಪರಸ್ಪರ ಅಸಮಂಜಸವಾಗಿಲ್ಲದಿದ್ದಾಗ, ವಿಶ್ವದ ಏಕೈಕ ಸರ್ಕಾರದ ಸೃಷ್ಟಿಗೆ ಕಾರಣವಾಗುತ್ತದೆ. ತಮ್ಮ ಪ್ರಜೆಗಳ ಸಂಪತ್ತು, ಆರೋಗ್ಯ, ಬುದ್ಧಿವಂತಿಕೆ ಅಥವಾ ಸೌಖ್ಯಗಳು ಸರ್ಕಾರಗಳ ಗುರಿಗಳಾದರೆ ಅಸಮಂಜಸತೆಯೇನೂ ಇರುವುದಿಲ್ಲ; ಆದರೆ ಇವುಗಳು ಬಿಡಿಯಾಗಿ ಅಥವಾ ಒಟ್ಟಾಗಿ ರಾಷ್ಟ್ರಶಕ್ತಿಗಿಂತ ಕಡಿಮೆ ಮುಖ್ಯವಾದುದೆಂದು ಭಾವಿಸುವುದರಿಂದ ವಿವಿಧ ಸರ್ಕಾರಗಳ ಗುರಿಗಳಲ್ಲಿ ವಿರೋಧವುಂಟಾಗಿ ಅವು ಒಗ್ಗೂಡುವುದರಿಂದ ಬಲಿಷ್ಠಗೊಳಿಸಲಾಗುವುದಿಲ್ಲ. ಹೀಗಾಗಿ, ಯಾವುದೋ ಒಂದು ದೇಶವು ಜಗತ್ತಿನ ಮಿಕ್ಕೆಲ್ಲ ದೇಶಗಳನ್ನು ಗೆದ್ದ ಸಂದರ್ಭದಲ್ಲಿ ಮಾತ್ರ ಈ ವಿಶ್ವೈಕ ಸರ್ಕಾರವನ್ನು ನಿರೀಕ್ಷಿಸಬಹುದು; ಅಥವಾ ರಾಷ್ಟ್ರೀಯ ಭಾವನೆಯನ್ನು ಮೀರಿದ, ತಮ್ಮ ಮೊದಲ ದಿನಗಳಲ್ಲಿದ್ದ ಸೊಷಿಯಲಿಸಂ ಆನಂತರ ಕಮ್ಯುನಿಸಂನಂತಹ, ಯಾವುದಾದರೂ ಸಿದ್ಧಾಂತವೊಂದರ ಕಡೆಗೆ ಇಡೀ ಜಗತ್ತು ಒಲವು ತೋರಿದಾಗ ಇದು ಸಾಧ್ಯವೆನಿಸೀತು.

ಸರ್ಕಾರಗಳ ಬೆಳವಣಿಗೆಯನ್ನು ರಾಷ್ಟ್ರೀಯತೆಯು ಸೀಮಿತಗೊಳಿಸುವುದು ಸೀಮಿತತೆಯ ಬಹು ಮುಖ್ಯ ನಿದರ್ಶನ; ಇಂಥದನ್ನು ಪಕ್ಷ ರಾಜಕಾರಣದಲ್ಲೂ ಮತಧರ್ಮಗಳಲ್ಲೂ ಕಾಣಬಹುದು. ನಾನು ಈ ಅಧ್ಯಾಯದಲ್ಲಿ ಪ್ರತಿಪಾದಿಸಲು ಪ್ರಯತ್ನಿಸುತ್ತಿರುವುದು ಸಂಘಟನೆಗಳಿಗೆ ತಮ್ಮ ಗುರಿಯನ್ನು ಮೀರಿದ ಜೀವಂತಿಕೆಯಿದೆಯೆಂಬ ಅಂಶವನ್ನು. ಒಂದು ಹಂತದವರೆಗೂ ಇದು ಸಾಧ್ಯವೆಂಬುದನ್ನು ಗುರುತಿಸುವುದು ನನ್ನ ಭಾವನೆಯಲ್ಲಿ ಮುಖ್ಯವೆ; ಅದು *ಒಂದು ಹಂತ*ದವರೆಗೆ ಮಾತ್ರ ಸಾಧ್ಯ. ಈ ಹಂತದ ನಂತರ ಸಂಘಟನೆಯು ಯಾವ ಭಾವನೆಗೆ ಪ್ರಾಧಾನ್ಯವೀಯುತ್ತದೆಂಬುದನ್ನು ಪರಿಗಣಿಸುವುದು ಆವಶ್ಯಕ.

ವ್ಯಕ್ತಿಯ ಬಯಕೆಗಳನ್ನು ಗುಂಪುಗಳಾಗಿ ವಿಂಗಡಿಸಲು ಸಾಧ್ಯ, ಆಗ ಪ್ರತಿಯೊಂದು ಗುಂಪೂ, ಕೆಲವು ಮನೋವಿಜ್ಞಾನಿಗಳು ಕರೆಯುವಂತೆ, 'ಭಾವನೆ' ಎನಿಸುತ್ತದೆ. ರಾಜಕೀಯವಾಗಿ ಮುಖ್ಯವಾದ ಭಾವನೆಗಳನ್ನು ಪರಿಗಣಿಸುವುದಾದರೆ, ಮನೆ, ಕುಟುಂಬ, ದೇಶದ ಬಗ್ಗೆಗಿನ ಪ್ರೀತಿ, ಅಧಿಕಾರದ ವ್ಯಾಮೋಹ, ಸುಖಪಡುವ ಆಸೆ ಮುಂತಾದವು ಸೇರುತ್ತವೆ:

ಹಾಗೆಯೇ ಹೇವರಿಕೆಯ ಭಾವನೆಗಳೂ ಇರುತ್ತವೆ: ನೋವು ಸೋಮಾರಿತನಗಳ ಬಗ್ಗೆ, ವಿದೇಶೀಯರ ಬಗೆಗಿನ ವಿರೋಧ, ಪರಕೀಯ ಸಿದ್ಧಾಂತಗಳ ಬಗೆಗಿನ ದ್ವೇಷ ಮುಂತಾದವು. ಯಾವುದೇ ಕ್ಷಣದಲ್ಲಿನ ಮಾನವನ ಭಾವನೆಗಳು ಅವನ ಸಂಕೀರ್ಣ ಸ್ವಭಾವ, ಅವನ ಹಿಂದಿನ ಚರಿತ್ರೆ, ಸದ್ಯದ ಪರಿಸ್ಥಿತಿ ಇವುಗಳ ಉತ್ಪನ್ನವಾಗಿರುತ್ತವೆ. ತನ್ನಿಂದ ಮಾತ್ರವೇ ಆಗದೆ ಸಹಕಾರದಿಂದ ಪೂರೈಕೆಗೊಳ್ಳುವ ಯಾವುದೇ ಭಾವನೆಯು, ಸಂದರ್ಭ ಒದಗಿದರೆ, ತೃಪ್ತಿ ಹೊಂದುವ ಸಲುವಾಗಿ ಒಂದೋ ಹೆಚ್ಚಿನವೋ ಸಂಘಟನೆಗಳ ಸೃಷ್ಟಿಗೆ ಕಾರಣವಾಗುತ್ತವೆ. ನಿದರ್ಶನಕ್ಕೆ, ಕುಟುಂಬ ಭಾವನೆಯನ್ನೇ ತೆಗೆದುಕೊಳ್ಳಿ. ಇದರಿಂದಾಗಿ ಕುಟುಂಬದ ವಿವಿಧ ಹಿತಾಸಕ್ತಿಗಳಿಗೆ ಹೊಂದಿಕೆಯಾಗುವ ಮನೆ ಕಟ್ಟುವಿಕೆ, ಶಿಕ್ಷಣ, ಜೀವ ವಿಮೆ ಮುಂತಾದ ಉದ್ದೇಶ ಹೊಂದಿದ ಸಂಘಟನೆಗಳಿಗೆ ಪ್ರೇರಣೆಯೊದಗಿಸುತ್ತವೆ. ಆದರೆ ಅದರಿಂದ – ಇಂದಿಗಂತಲೂ ಹಿಂದಿನ ಕಾಲದಲ್ಲಿ – ಬೇರೆಲ್ಲವನ್ನೂ ಕಡೆಗಣಿಸಿ ಯಾವುದೋ ಒಂದು ಕುಟುಂಬದ ಹಿತಾಸಕ್ತಿಗಳಿಗೆ ಅನುಗುಣವಾದ ಸಂಘಟನೆಗಳು ಸ್ಥಾಪನೆಗೊಂಡ ಪ್ರಸಂಗಗಳೂ ಇವೆ. ಮಾಂಟೆಗ್ಯೂಗಳು ಕಾಪ್ಯುಲೆಟ್‌ಗಳ ಸೇವೆಗೆ ಬದ್ಧವಾದಂತಹವು. ಆನುವಂಶಿಕ ಸರ್ಕಾರ ಇಂಥದೊಂದು ಬಗೆ. ಶ್ರೀಮಂತಪ್ರಭುತ್ವಗಳೆಂದರೆ ಇನ್ನುಳಿದ ಸಮುದಾಯಗಳ ಹಿತಾಸಕ್ತಿಗಳನ್ನು ಬದಿಗೊತ್ತಿ ತಮ್ಮ ಸವಲತ್ತುಗಳನ್ನು ಪಡೆದುಕೊಳ್ಳುವ ಕೆಲವೇ ಕುಟುಂಬಗಳನ್ನೊಳಗೊಂಡ ಸಂಘಟನೆಗಳೇ. ಇಂಥ ಸಂಘಟನೆಗಳು ಯಾವಾಗಲೂ, ಕಡಿಮೆಯೋ ಹೆಚ್ಚಿನದೋ ಪ್ರಮಾಣದಲ್ಲಿ, ಭಯ, ದ್ವೇಷ, ತಿರಸ್ಕಾರ, ಮುಂತಾದ ಹೇವರಿಕೆಯ ಭಾವನೆಗಳನ್ನು ಒಳಗೊಳ್ಳುವಂಥವು. ಇಂಥ ಭಾವನೆಗಳು ತೀವ್ರ ಪ್ರಮಾಣದಲ್ಲಿರುವ ಕಡೆಗಳಲ್ಲಿ ಅವು ಸಂಘಟನೆಗಳಿಗೆ ಮಾರಕಗಳಾಗುತ್ತವೆ.

ಮತಧರ್ಮಶಾಸ್ತ್ರವು ಇಂಥ ಸೀಮಿತತೆಯ ನಿದರ್ಶನ. ಕ್ರಿಸ್ತಶಕದ ಸುತ್ತುಮುತ್ತಲ ಕೆಲವು ಶತಮಾನಗಳ ಅವಧಿಯನ್ನು ಹೊರತುಪಡಿಸಿದರೆ ಯೆಹೂದಿಗಳಿಗೆ ಜೆಂಟೈಲ್(ಯೆಹೂದ್ಯೇತರ)ಗಳನ್ನು ಮತಾಂತರಿಸುವ ಇರಾದೆಯಿರಲಿಲ್ಲ; ತಾವು ದೇವರಿಗೆ ಹತ್ತಿರದವರು ಎಂಬ ಮೇಲರಿಮೆಯಲ್ಲಿಯೇ ಅವರು ತೃಪ್ತಿಪಟ್ಟುಕೊಂಡಿದ್ದರು. ಜಗತ್ತಿನ ಇತರ ಭಾಗಗಳಿಗಿಂತ ಮುಂಚೆಯೇ ಜಪಾನ್ ಸೃಷ್ಟಿಯಾಯಿತು ಎಂದು ಹೇಳಿಕೊಳ್ಳುವ ಶಿಂಟೋ ತಾತ್ವಿಕತೆಯು ಜಪಾನೀಯರಲ್ಲದವರಿಗೆ ಇಷ್ಟವಾಗಲಾರದು ಅಥವಾ ಆಗಬೇಕೆಂದು ಅದು ನಿರೀಕ್ಷಿಸುವುದೂ ಇಲ್ಲ. ಓಲ್ಡ್ ಲೈಟ್‌ಗಳು ಸ್ವರ್ಗಕ್ಕೆ ಹೋದುದು, ಸ್ವರ್ಗಸುಖದ ಆನಂದ

ಕುಂದದಿರಲು ಅಲ್ಲಿ ಇತರರೂ ಇರುವರೆಂಬುದನ್ನು ತಿಳಿಯಲು ಅವರಿಗೆ ಅವಕಾಶ ನೀಡದಿದ್ದುದು – ಈ ಕತೆ ಎಲ್ಲರಿಗೂ ಗೊತ್ತು. ಇಂಥದೇ ಭಾವನೆಯು ಮತ್ತಷ್ಟು ಕಟುವಾದ ಸ್ವರೂಪವನ್ನು ತಾಳಬಹುದು: ಧರ್ಮದ್ರೋಹಿಗಳನ್ನು ಶಿಕ್ಷಿಸುವ ಪೀಡಕನಿಗೆ ಪೀಡನೆ ನೀಡುವುದು ಎಷ್ಟು ಆಹ್ಲಾದಕಾರಿಯಾಗಿರುತ್ತದೆಂದರೆ ಧರ್ಮದ್ರೋಹಿಗಳಿಲ್ಲದ ಜಗತ್ತು ಸಹಿಸಲಸಾಧ್ಯವಾದಷ್ಟು ನೀರಸವೆಂಬಂತೆ ತೋರುತ್ತದೆ. ಹಾಗೆಯೇ ಹಿಟ್ಲರ್ ಮತ್ತು ಮುಸೋಲಿನಿಗಳು ಯುದ್ಧವೆಂಬುದು ಮಾನವನ ಅತ್ಯಂತ ಉದಾತ್ತ ಕಾರ್ಯವೆಂದು ಬೋಧಿಸುತ್ತಿರುವುದರಿಂದ, ಇಡೀ ಜಗತ್ತನ್ನೇ ಗೆದ್ದು ಯುದ್ಧಮಾಡಲು ತಮಗೆ ಶತ್ರುಗಳೇ ಉಳಿದಿಲ್ಲದ ಪರಿಸ್ಥಿತಿಯೊದಗಿದಾಗ ಅವರಿಗೆ ಸಂತೋಷವುಂಟಾಗಲಾರದು. ಅದರಂತೆಯೇ, ಪಕ್ಷವೊಂದಕ್ಕೆ ಪ್ರಶ್ನಾತೀತವಾದ ಗರಿಷ್ಠ ಸ್ಥಾನ ಸಿಕ್ಕಾಗ ಪಕ್ಷ ರಾಜಕಾರಣವೂ ನೀರಸವಾಗಿಬಿಡುತ್ತದೆ.

ಹೀಗೆ, ಹೆಮ್ಮೆ, ಅಸೂಯೆ, ದ್ವೇಷ, ತಿರಸ್ಕಾರ ಅಥವಾ ಸ್ಪರ್ಧಾ ಸಂತೋಷ[೧] ಮುಂತಾದ ವ್ಯಕ್ತಿಯ ರಾಗಭಾವಗಳನ್ನು ಬಡಿದೆಬ್ಬಿಸುವ ಮೂಲಕ ಆಕರ್ಷಿಸಲು ಪ್ರಯತ್ನಿಸುವ ಸಂಘಟನೆಯೊಂದು ಜಗದ್ವ್ಯಾಪಿಯಾದರೆ ತನ್ನ ಉದ್ದೇಶವನ್ನು ಈಡೇರಿಸಕೊಳ್ಳುವುದು ಅಸಾಧ್ಯ. ಇಂತಹ ರಾಗಭಾವಗಳು ತೀವ್ರವಾಗಿರುವ ಜಗತ್ತಿನಲ್ಲಿ, ಯಾವುದಾದರೊಂದು ಸಂಘಟನೆಯು ಜಗದ್ವ್ಯಾಪಿಯಾದರೆ, ಅದು ಒಡೆಯುವುದು ಖಂಡಿತ, ಯಾಕೆಂದರೆ ಹಾಗಾದಾಗ ಅದರ ಪ್ರೇರಕಶಕ್ತಿಯೇ ಮಾಯವಾಗಿರುತ್ತದೆ.

ಈಗ ವಿವರಿಸಿದ್ದರಲ್ಲಿ ನಾವು ಪರಿಶೀಲಿಸಿರುವುದು ಸಂಘಟನೆಗಳ ಸಾಮಾನ್ಯ ಸದಸ್ಯರ ಭಾವನೆಗಳನ್ನೇ ಹೊರತು ಅವುಗಳ ಆಡಳಿತಗಳದ್ದಲ್ಲ ಎಂಬುದನ್ನು ನೀವು ಗಮನಿಸಿರಬೇಕು. ಒಂದು ಸಂಘಟನೆಯ ಉದ್ದೇಶ ಯಾವುದೇ ಆಗಿರಲಿ, ಅದರ ಆಡಳಿತವು ಅಧಿಕಾರದಿಂದಲೇ ತೃಪ್ತಿಯನ್ನು ಪಡೆಯುವುದು, ಮತ್ತು ಅದರ ಪರಿಣಾಮವೆಂದರೆ, ಅದರ ಹಿತಾಸಕ್ತಿಯು ತನ್ನ ಸದಸ್ಯರದರ ಹಾಗಿಲ್ಲದಿರುವುದು. ಹೀಗಾಗಿ ಸಾರ್ವತ್ರಿಕ ಜಯಸಾಧನೆಯ ಬಯಕೆಯು ಆಡಳಿತಕ್ಕೆ ತನ್ನ ಸದಸ್ಯರಲ್ಲಿನದಕ್ಕಿಂತ ತೀವ್ರವಾಗಿರುತ್ತದೆ.

---

[೧] ಇದರಿಂದ ನಾನು ಕ್ರೀಡಾಸ್ಪರ್ಧೆಗಳನ್ನಷ್ಟೇ ಹೊರತುಪಡಿಸುತ್ತಿದ್ದೇನೆ, ಏಕೆಂದರೆ ಇವುಗಳನ್ನು ಎಂಸಿಸಿಯಂತಹ ಒಂದೇ ಪ್ರಾಧಿಕಾರದಡಿಯಲ್ಲಿ ವ್ಯವಸ್ಥೆಗೊಳಿಸಬಹುದು.

ಆದರೆ ಸಹಕಾರದಿಂದ ತನ್ನ ನೆರವೇರಿಸಿಕೊಳ್ಳಬಹುದಾದ ಭಾವನೆಗಳನ್ನು ಹೊಂದಿದ ಸಂಘಟನೆಯ ಚಾಲಕಶಕ್ತಿಗೂ ಉದ್ದೇಶಗಳಲ್ಲಿ ಸಂಘರ್ಷಾತ್ಮಕ ಮನೋಭಾವವನ್ನು ಪ್ರಧಾನವಾಗುಳ್ಳ ಸಂಘಟನೆಗಳ ಚಾಲಕಶಕ್ತಿಗೂ ಒಂದು ಮುಖ್ಯವಾದ ವ್ಯತ್ಯಾಸವಿರುತ್ತದೆ. ಇದು ವ್ಯಾಪಕವಾದ ವಿಷಯ, ಹೀಗಾಗಿ ಸಂಘಟನೆಗಳ ಮಿತಿಗಳ ಬಗೆಗಿನ ವಿವೇಚನೆಗೆ ಸದ್ಯಕ್ಕೆ ನಾನು ಗಮನವೀಯುತ್ತೇನೆಯೇ ಹೊರತು ಅವುಗಳ ಉದ್ದೇಶಗಳ ಕಡೆಗಲ್ಲ.

ಸಂಘಟನೆ ಮತ್ತು ಪ್ರತಿಸ್ಪರ್ಧಿಗಳ ಜೊತೆಗಿನ ಅದರ ಪೈಪೋಟಿಯ ಬಗ್ಗೆ ನಾನು ಮಾತನಾಡಿದ್ದೇನೆ. ಡಾರ್ವಿನ್‌ನ ಹೋಲಿಕೆಯನ್ನು ಪೂರ್ಣಗೊಳಿಸುವುದಾದರೆ, ಅದರ ಮುಪ್ಪು ಮತ್ತು ವಿನಾಶಗಳ ಬಗ್ಗೆಯೂ ಹೇಳಬೇಕು. ಮನುಷ್ಯನು ಸಾಯುತ್ತಾನೆ ಎನ್ನುವುದು ಸಂಘಟನೆಯೂ ಸಾಯುತ್ತದೆ ಎನ್ನಲು ಕಾರಣವಾಗಲಾರದು, ಆದರೆ ಅವುಗಳಲ್ಲಿ ಬಹುಪಾಲು ಆಗುವುದೂ ಹಾಗೆಯೇ. ಕೆಲವೇಳೆ ಅವುಗಳಿಗೆ ಹೊರಗಿನಿಂದ ಘೋರ ಸಾವು ಪ್ರಾಪ್ತವಾಗುತ್ತದೆ, ಆದರೆ ಸದ್ಯಕ್ಕೆ ಈ ಕುರಿತು ನಾನೇನೂ ಹೇಳುವುದಿಲ್ಲ. ನಾನು ಹೇಳಬಯಸುವುದು ಮುದುಕನಂತೆಯೇ ಹಳೆಯ ಸಂಘಟನೆಗಳಲ್ಲಿ ಕಾಣುವ ದೌರ್ಬಲ್ಯ ಮತ್ತು ಮಂದಗತಿಯ ಬಗ್ಗೆ. ಅದಕ್ಕೆ ಒಂದು ಅತ್ಯಂತ ಸಮಂಜಸ ನಿದರ್ಶನವೆಂದರೆ ೧೯೧೧ ರ ಕ್ರಾಂತಿಗೆ ಮೊದಲಿನ ಚೀನಾ ಸಾಮ್ರಾಜ್ಯ. ಅದೇನೂ ಜಗತ್ತಿನ ಅತಿ ಹಳೆಯ ಆಡಳಿತವಾಗಿರಲಿಲ್ಲ; ರೋಮ್ ಸ್ಥಾಪನೆಗೊಂಡ ಕಾಲದಲ್ಲಿಯೂ ಕಲೀಫ್ ಆಡಳಿತದಲ್ಲಿಯೂ ಅದು ತನ್ನ ಸೈನಿಕ ಶಕ್ತಿಯನ್ನು ಪ್ರದರ್ಶಿಸಿತ್ತು; ಅದಕ್ಕೆ ಸತತವಾದ ಉನ್ನತ ನಾಗರಿಕತೆಯಿತ್ತು, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಿದ ದಕ್ಷ ಅಧಿಕಾರಿಗಳಿಂದ ಕೂಡಿದ ಸರ್ಕಾರದ ದೀರ್ಘ ಪರಂಪರೆಯಿತ್ತು. ಪರಂಪರೆಯ ಬೆನ್ನೆಲುಬು, ಶತಮಾನಗಳ ಕಾಲದ ಅಭ್ಯಾಸಬಲವಾದ ದೌರ್ಜನ್ಯ ಇವುಗಳೇ ಅದರ ಪತನಕ್ಕೆ ಕಾರಣವಾದವು. ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ಸಮಹೆಜ್ಜೆ ಇಡಲು ಕನ್‌ಫ್ಯೂಷಿಯನ್ ಗ್ರಂಥಗಳಲ್ಲಿಲ್ಲದ ಇತರ ಜ್ಞಾನವೂ ಆವಶ್ಯಕ ಎಂಬುದನ್ನಾಗಲೀ, ಗಡಿನಾಡುಗಳಲ್ಲಿದ್ದ ಅರೆಬರ್ಬರರ ವಿರುದ್ಧ ಪರಿಣಾಮಕಾರಿಯಾದ ಸೂತ್ರಗಳು ಯೂರೋಪಿಯನ್ನರ ವಿರುದ್ಧ ಕೆಲಸಕ್ಕೆ ಬಾರದವು ಎಂಬುದನ್ನಾಗಲೀ ಅಲ್ಲಿನ ವಿದ್ಯಾವಂತರು ಮನಗಾಣಲಿಲ್ಲ. ಒಂದು ಸಂಘಟನೆಗೆ ಮುಪ್ಪಡರಲು ಕಾರಣ ಯಶಸ್ಸಿನ ಮೇಲೆ ಅವಲಂಬಿತವಾದ ಹಳೆಯ ಅಭ್ಯಾಸ; ಪರಿಸ್ಥಿತಿ ಬದಲಾದಾಗ ಇಂಥ ಅಭ್ಯಾಸಗಳನ್ನು ತೊರೆಯುವುದು ತೀರ ಕಷ್ಟಕರ. ಆಜ್ಞಾಪಿಸುವ ಅಭ್ಯಾಸದವರು

ಅದಕ್ಕನುಗುಣವಾದ ವಿಧೇಯತೆಯನ್ನು ಕ್ರಾಂತಿಯ ಸಂದರ್ಭದಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು ಅರಿಯಲಾರರು. ಅದಕ್ಕೂ ಮಿಗಿಲಾಗಿ, ಉನ್ನತ ಸ್ಥಾನದಲ್ಲಿರುವವರು ತಮ್ಮ ಅಧಿಕಾರವನ್ನು ಚಲಾಯಿಸಲು ಆರಂಭಿಸಿ ಪಡೆಯುತ್ತಿದ್ದ ಗೌರವವು ಬರಬರುತ್ತ ಕೇವಲ ಶಿಷ್ಟಾಚಾರವಾಗಿ ಬದಲುಗೊಂಡು ಅವರ ಕ್ರಿಯಾಶೀಲತೆಗೆ ತೊಡಕಾಗಿ ಬದಲಾದ ಸನ್ನಿವೇಶದಲ್ಲಿ ಯಶಸ್ಸು ಪಡೆಯಲು ಆವಶ್ಯಕವಾದ ತಿಳಿವಳಿಕೆಯನ್ನು ಹೊಂದಲು ಬಿಡುವುದಿಲ್ಲ. ರಾಜರುಗಳು ಯುದ್ಧದಲ್ಲಿ ಮುಂದಾಳುತ್ವವನ್ನು ವಹಿಸಲು ಸಾಧ್ಯವಾಗದಿರುವುದು ಅವರು ತುಂಬ ಪವಿತ್ರ ಎಂಬುದರಿಂದ; ಅವರ ಮುಂದೆ ಕಹಿಸತ್ಯಗಳನ್ನು ಹೇಳಲು ಸಾಧ್ಯವಾಗದು, ಏಕೆಂದರೆ ಹಾಗೆ ಹೇಳಿದವರನ್ನು ಅವರು ಗಲ್ಲಿಗೇರಿಸುವಂಥವರು. ಕಾಲಾನುಕ್ರಮದಲ್ಲಿ ಅವರು ಕೇವಲ ಸಂಕೇತಮಾತ್ರರಾಗುತ್ತಾರೆ, ಆನಂತರ ಅವರು ಯಾವುದೇ ಬೆಲೆಬಾಳುವುದರ ಸಂಕೇತವಲ್ಲವೆಂದು ಜನರು ಅರಿತುಕೊಳ್ಳುತ್ತಾರೆ.

ಆದರೆ ಎಲ್ಲ ಸಂಘಟನೆಗಳೂ ಕೊನೆಗೊಳ್ಳಬೇಕೆಂಬುದಕ್ಕೆ ಕಾರಣಗಳೇನಿಲ್ಲ. ಉದಾಹರಣೆಗೆ, ಅಮೆರಿಕ ಸಂವಿಧಾನವು, ಯಾವುದೇ ವ್ಯಕ್ತಿ ಅಥವಾ ಗುಂಪಿಗೆ ಅಜ್ಞಾನ ಮತ್ತು ನಿರ್ವೀರ್ಯತೆಗಳನ್ನುಂಟುಮಾಡುವಂತಹ ಭಕ್ತಿಯನ್ನು ಸಮರ್ಪಿಸುವುದಿಲ್ಲ, ಹಾಗೆಯೇ ಸ್ವಲ್ಪಮಟ್ಟಿಗೆ ಸುಪ್ರೀಂ ಕೋರ್ಟ್‌ಗೆ ಸಂಬಂಧಪಟ್ಟಂತೆ ಬಿಟ್ಟರೆ, ಹೊಸ ಸಂದರ್ಭಕ್ಕೆ ಹೊಂದಿಕೊಳ್ಳಲಾಗದಂತೆ ಮಾಡುವ ಅಭ್ಯಾಸ ಮತ್ತು ಸೂತ್ರಗಳಿಗೆ ಕಟ್ಟುಬಿದ್ದಿಲ್ಲ. ಇಂತಹ ಸಂಘಟನೆಯೊಂದು ನಿರಂತರವಾಗಿ ಮುಂದುವರಿಯದಿರಲು ಯಾವ ಕಾರಣವೂ ಇಲ್ಲ. ಹೀಗಾಗಿ ಬಹುಸಂಖ್ಯೆಯ ಸಂಘಟನೆಗಳು, ಜಡತೆಯಿಂದ ಅಥವಾ ಬಾಹ್ಯ ಕಾರಣದಿಂದ ಬೇಗಲೋ ನಿಧಾನವಾಗಿಯೋ ಕಣ್ಮರೆಯಾದರೂ, ಇದು ಎಲ್ಲಕ್ಕೂ ಅನಿವಾರ್ಯವೆನ್ನುವಂತಹ ಯಾವುದೇ ಕಾರಣ ನನಗೆ ಕಾಣಿಸದು. ಈ ಹಂತದಲ್ಲಿ ಸಜೀವವಾದದ್ದರ ಜೊತೆಗಿನ ಹೋಲಿಕೆಯನ್ನು ಕೊಡುವುದು ಅಸಮಂಜಸವಾಗುತ್ತದೆ.

–೦–೦–೦–೦–

ಅಧ್ಯಾಯ ೧೨

ಸರ್ಕಾರಗಳ ಅಧಿಕಾರಗಳು ಮತ್ತು ಪ್ರಭೇದಗಳು

ಸಂಘಟನೆಯೊಂದರ ಉದ್ದೇಶವಲ್ಲದೆ ಅದರ ಇತರ ಅತ್ಯಂತ ಪ್ರಮುಖ ಲಕ್ಷಣಗಳೆಂದರೆ, (೧) ಗಾತ್ರ, (೨) ಸದಸ್ಯರ ಮೇಲಿನ ಅಧಿಕಾರ, (೩)ಸದಸ್ಯರಲ್ಲದವರ ಮೇಲಿನ ಅಧಿಕಾರ, ಮತ್ತು (೪) ಆಡಳಿತದ ಸ್ವರೂಪ. ಗಾತ್ರವನ್ನು ಕುರಿತು ನಾನು ಮುಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸುತ್ತೇನೆ; ಈಗಿನ ಚರ್ಚೆಯ ವಿಷಯಗಳು ಮಿಕ್ಕವು.

ಸರ್ಕಾರವಲ್ಲದೆ ಕಾನೂನುಬದ್ಧವಾದ ಸಂಘಟನೆಗಳು ತಮ್ಮ ಸದಸ್ಯರ ಮೇಲೆ ಅಧಿಕಾರ ಹೊಂದಿರುತ್ತವೆ, ಅದಕ್ಕೂ ಕಾನೂನಿನಿಂದಾಗಿ ಮಿತಿ ಇರುತ್ತದೆ. ನೀವು ಬ್ಯಾರಿಸ್ಟರ್, ಸಾಲಿಸಿಟರ್, ವೈದ್ಯವ್ಯಕ್ತಿ ಅಥವಾ ಒಂದು ರೇಸ್ ಕುದುರೆಯ ಒಡೆಯರಾಗಿದ್ದರೆ, ನಿಮ್ಮನ್ನು ಹೊರದೂಡಬಹುದು, ಸದಸ್ಯ ಪಟ್ಟಿಯಿಂದ ನಿಮ್ಮ ಹೆಸರನ್ನು ಹೊಡೆದುಹಾಕಬಹುದು, ಅನರ್ಹಗೊಳಿಸಬಹುದು ಅಥವಾ ಟರ್ಫ್‌ನ ಹೊರಗೆ ಹೋಗಲು ಹೇಳಬಹುದು. ಈ ಎಲ್ಲ ಶಿಕ್ಷೆಗಳಿಂದಲೂ ಅವಮಾನವಾಗುತ್ತದೆ, ಮೊದಲ ಮೂರು ಬಗೆಯ ಶಿಕ್ಷೆಗಳಿಂದ ತೀವ್ರ ಆರ್ಥಿಕ ಸಂಕಷ್ಟ ಉಂಟಾಗುವ ಸಂಭವವೂ ಇರುತ್ತದೆ. ಆದರೆ ನಿಮ್ಮ ವೃತ್ತಿಯಲ್ಲಿ ನೀವೆಷ್ಟೇ ಅಪಖ್ಯಾತಿ ಪಡೆದಿರಲಿ, ನೀವು ವೃತ್ತಿಯನ್ನು ಅನುಸರಿಸುವುದನ್ನು ನಿಲ್ಲಿಸುವುದಕ್ಕಿಂತ ಹೆಚ್ಚಿನದೇನನ್ನೂ ವೃತ್ತಿಬಾಂಧವರು ಮಾಡಲಾರರು. ನೀವು ರಾಜಕಾರಣಿಯಾಗಿದ್ದರೆ, ನೀವು ಯಾಂತ್ರಿಕತೆಗೆ ಒಗ್ಗಿಕೊಂಡಿರಬೇಕು; ಆದರೆ ಮತ್ತೊಂದು ಪಕ್ಷ ಸೇರುವುದರಿಂದಾಗಲೀ ಅಥವಾ ಚುನಾವಣೆಯಿಂದ ದೂರವಾಗಿ ಪ್ರಶಾಂತ ಜೀವನ ನಡೆಸುವುದರಿಂದಾಗಲೀ ನಿಮ್ಮನ್ನು ತಡೆಯಲು ಸಾಧ್ಯವಿಲ್ಲ. ಸರ್ಕಾರವನ್ನು ಬಿಟ್ಟರೆ ತಮ್ಮ ಸದಸ್ಯರ ಮೇಲೆ ಮಿಕ್ಕ ಸಂಘಟನೆಗಳಿಗಿರುವ ಅಧಿಕಾರವು ಹೊರಹಾಕುವ ಅಧಿಕಾರವನ್ನು ಅವಲಂಬಿಸಿರುತ್ತದೆ, ಮತ್ತು ಇದರಿಂದಾಗುವ ಅವಮಾನ ಮತ್ತು ಆರ್ಥಿಕ ಸಂಕಷ್ಟಗಳ ಪ್ರಮಾಣಕ್ಕೆ ಅನುಗುಣವಾಗಿ ಕಠಿಣವಾಗಿರುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, ಪ್ರಜೆಗಳ ಮೇಲೆ ಸರ್ಕಾರಕ್ಕಿರುವ ಅಧಿಕಾರಕ್ಕೆ ದಸ್ತಗಿರಿ ಅಥವಾ ಸುಲಿಗೆಯಂತಹ ಸಂವಿಧಾನಬಾಹಿರ ಕ್ರಮಗಳ ಹೊರತು,

ಕೊನೆಯೇ ಇಲ್ಲ. ಅಮೆರಿಕದಲ್ಲಿ ಯಾವುದೇ ಪ್ರಜೆಯ ಬದುಕು, ಸ್ವಾತಂತ್ರ್ಯ, ಆಸ್ತಿಗಳ ಹಕ್ಕುಗಳನ್ನು ಹತ್ತಿಕ್ಕಲು ಕಾನೂನಿನ ಪ್ರಕಾರ, ಅಂದರೆ ವ್ಯಕ್ತಿಯು ತಪ್ಪಿತಸ್ಥ ಎಂದು ನ್ಯಾಯಾಂಗಕ್ಕೆ ರುಜುವಾತು ಮಾಡಿ ಅಂತಹ ತಪ್ಪಿಗೆ ಹಿಂದೆ ಇಂತಹ ಶಿಕ್ಷೆಯನ್ನು ವಿಧಿಸಲಾಗಿತ್ತು ಎಂದು ಸಾಬೀತುಗೊಳಿಸುವ ಮೂಲಕ ನಿರ್ಣಯಪಡಿಸುವುದರ ಹೊರತು, ಆಗುವುದಿಲ್ಲ. ಇಂಗ್ಲಂಡ್‌ನಲ್ಲಿ ಕಾರ್ಯಾಂಗದ ಅಧಿಕಾರಕ್ಕೆ ಇಂತಹುದೇ ಮಿತಿಗಳಿದ್ದರೂ, ಶಾಸಕಾಂಗವು ಮಾತ್ರ ಸರ್ವಶಕ್ತವಾದದ್ದು; ಅದಕ್ಕೆ ಜಾನ್ ಸ್ಮಿತ್‌ಗೆ ಮರಣದಂಡನೆ ವಿಧಿಸಬೇಕು ಎಂದೋ ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದೋ ಅವನ ಅಪರಾಧವನ್ನು ಸಾವಬೀತುಪಡಿಸದೆಯೇ ಶಾಸನ ಮಾಡಲು ಅವಕಾಶವಿದೆ. ಹಕ್ಕುನಾಶ ವಿಧಿಯ ರೂಪದಲ್ಲಿ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸುವ ಅಧಿಕಾರವನ್ನು ಪಾರ್ಲಿಮೆಂಟ್ ಪಡೆದುಕೊಂಡಿತು. ಇಂಡಿಯ ಮತ್ತು ನಿರಂಕುಶ ಪ್ರಭುತ್ವಗಳಲ್ಲಿ ಈ ಅಧಿಕಾರವಿರುವುದು ಕಾರ್ಯಾಂಗದ ಕೈಯಲ್ಲಿ ಇದನ್ನು ಅಲ್ಲಿ ಬೇಕಾದಂತೆ ಬಳಸುತ್ತಾರೆ. ಇದು ಅಲ್ಲಿನ ಸಂಪ್ರದಾಯಕ್ಕನುಗುಣವಾದುದು; ಈ ಸರ್ವಶಕ್ತಿಯು ಸರ್ಕಾರಗಳಿಗೆ ಎಲ್ಲೆಲ್ಲಿ ಇಲ್ಲವೋ ಅಲ್ಲೆಲ್ಲ ಇದನ್ನು ಮನುಷ್ಯನ ಹಕ್ಕು ಎಂಬ ಹೆಸರಿನ ಸಿದ್ಧಾಂತದ ಫಲವಾಗಿ ಮಾಡಲಾಗಿದೆ.

ಸದಸ್ಯರಲ್ಲದವರ ಮೇಲೆ ಸಂಘಟನೆಗಳಿಗಿರುವ ಅಧಿಕಾರದ ಸ್ವರೂಪವನ್ನು ನಿರ್ಧರಿಸುವುದು ಕಷ್ಟ. ವಿದೇಶೀಯರ ಮೇಲೆ ಸರ್ಕಾರಕ್ಕಿರುವ ಅಧಿಕಾರವು ಯುದ್ಧ ಮತ್ತು ಯುದ್ಧಭಯಗಳನ್ನು ಅವಲಂಬಿಸಿರುತ್ತದೆ; ಈ ಮಾತು ತೆರಿಗೆ, ವಲಸೆ ನಿಯಮಗಳಂತಹ ವಿಷಯಗಳಿಗೂ ಅನ್ವಯಿಸುತ್ತದೆ. ಯುದ್ಧದಲ್ಲಿ ಸೋತ ಸಂದರ್ಭದಲ್ಲಿ ಮಾಡಿಕೊಂಡ ಒಪ್ಪಂದಲ್ಲಿಯೇ ಚೈನಾವು ಈ ಎರಡು ವಿಷಯಗಳಿಗೆ ಸಂಬಂಧಿಸಿದ ನಿಯಮಗಳು ಒಳಗೊಂಡಿದ್ದವು. ಸೈನ್ಯಶಕ್ತಿಯಿಲ್ಲದಿದ್ದರೆ ಒಂದು ಸರ್ಕಾರದ ಅಧಿಕಾರವು ಮತ್ತೊಂದರ ಮೇಲೆ ಸೀಮಿತಗೊಳ್ಳುತ್ತದೆ. ಮೇಲುಗೈ ಸಾಧಿಸಿದರೆ, ಇಡೀ ಜನಸಂಖ್ಯೆಯನ್ನು ಹೊರದೂಡುವ ಅಥವಾ ನಿರ್ಮೂಲಮಾಡುವ ತೀರ್ಮಾನವನ್ನೇ ತೆಗದುಕೊಳ್ಳಬಹುದು, ಇಂಥದು ಅನೇಕ ವೇಳೆ ಸಂಭವಿಸಿಯೂ ಇದೆ. ನಿದರ್ಶನಕ್ಕೆ, ಬೈಬಲ್‌ನ ಜೋಶುವ ಸಂಪುಟ, ಬ್ಯಾಬಿಲೋನಿಯದ ಕೈಸೆರೆ ಮತ್ತು ಉತ್ತರ ಅಮೆರಿಕದ ಇಂಡಿಯನ್ನರ ಮೇಲಿನ ನಿರ್ಬಂಧ ಈ ಸಂದರ್ಭಗಳಲ್ಲಿ ನಿರ್ನಾಮ ಮಾಡದಿದ್ದಾಗಿನ ಹಿಂಜರಿಕೆಯನ್ನು ಗಮನಿಸಿ.

ಖಾಸಗಿ ಸಂಘಟನೆಗಳ ಬಾಹ್ಯ ಅಧಿಕಾರಗಳ ಬಗ್ಗೆ ಸರ್ಕಾರವು ಮಾತ್ಸರ್ಯದಿಂದ ನೋಡುವುದು ಸಹಜ; ಹಾಗಾಗಿ ಅಂತಹವು ಬಹುತೇಕ ಕಾನೂನುಬಾಹಿರವೆನ್ನಿಸಿಕೊಳ್ಳುತ್ತವೆ. ಬಹಿಷ್ಕಾರ ಮತ್ತು ಇನ್ನೂ ಹೆಚ್ಚು ತೀವ್ರ ರೂಪದ ಬೆದರಿಕೆಗಳನ್ನು ಒಡ್ಡುವುದನ್ನೇ ಅವು ಬಹುತೇಕ ಅವಲಂಬಿಸುತ್ತವೆ. ಇಂತಹ ಭಯೋತ್ಪಾದಕ ಪ್ರಭಾವಗಳು ಸಾಮಾನ್ಯವಾಗಿ ಕ್ರಾಂತಿ ಅಥವಾ ಅನಾಯಕತ್ವದ ಮುನ್‌ಸೂಚನೆಗಳು. ಐರ್ಲಂಡ್‌ನಲ್ಲಿ ರಾಜಕೀಯ ಕೊಲೆಗಳು, ಮೊದಲು ಜಮೀನುದಾರರ, ಆನಂತರ ಇಂಗ್ಲಂಡ್‌ನ ದಬ್ಬಾಳಿಕೆಯ, ಪತನಕ್ಕೆ ಕಾರಣವಾದವು. ಝಾರ್‌ನ ರಷ್ಯಾದಲ್ಲಿ ಕ್ರಾಂತಿಕಾರಿಗಳು ಬಹುತೇಕ ಅವಲಂಬಿಸಿದುದು ಭಯೋತ್ಪಾದಕ ಮಾರ್ಗಗಳನ್ನೇ. ನಾಝಿಗಳು ಗೆಲವನ್ನು ಪಡೆದದ್ದೂ ಕಾನೂನುಬಾಹಿರ ಹಿಂಸೆಯ ವಿಧಾನದಿಂದಲೇ. ಸದ್ಯದ ಕ್ಷಣದಲ್ಲಿ, ಝೆಕೋಸ್ಲೋವೇಕಿಯದಲ್ಲಿ, ಹೆನ್‌ಲೀನ್ ಪಕ್ಷವನ್ನು ಸೇರದ ಜರ್ಮನ್ ಜನಸಮುದಾಯವು "ನೀನು ಕಪ್ಪುಪಟ್ಟಿಯಲ್ಲಿದ್ದೀಯೆ" ಅಥವಾ "ನಿನ್ನ ಸರದಿ ಬಂದೇ ಬರುತ್ತದೆ" ಎಂಬಂತಹ ಸೂಚನೆಗಳನ್ನು ಪಡೆಯುತ್ತಾರೆ. ಜರ್ಮನ್‌ರು ಆಸ್ಟ್ರಿಯವನ್ನು ಆಕ್ರಮಿಸಿದಾಗ ವಿರೋಧಿಗಳಿಗೆ ಯಾವ ಪಾಡು ಬಂದಿತೋ ಅಂತಹವೇ ಬೆದರಿಕೆಗಳು ತುಂಬ ಪರಿಣಾಮಕಾರಿಯಾಗುತ್ತಿವೆ. ಇಂತಹ ಕಾನೂನುಬಾಹಿರ ಕಾರ್ಯಗಳಿಗೆ ಹೊಂದಿಕೊಂಡು ಹೋಗಲಾರದ ಸರ್ಕಾರವು ಬಹು ಬೇಗ ಸಂಕಷ್ಟಕ್ಕೆ ಸಿಕ್ಕುವುದು ಸಹಜ. ಇಂತಹ ಕಾನೂನುಬಾಹಿರ ಕಾರ್ಯಗಳು ನಿರ್ದಿಷ್ಟ ರಾಜಕೀಯ ಕಾರ್ಯಕ್ರಮಗಳನ್ನು ಹೊಂದಿದ ಯಾವುದೋ ಒಂದು ಸಂಘಟನೆಗೆ ಸೀಮಿತವಾಗಿದ್ದರೆ, ಆಗುವ ಪರಿಣಾಮವೆಂದರೆ ಕ್ರಾಂತಿಯೇ; ಆದರೆ ಅವು ವಿವಿಧ ಬಂಡಾಯಗಾರ ಗುಂಪುಗಳಿಗೋ ಅಥವಾ ದಂಗೆಕೋರ ಸಿಪಾಯಿಗಳಿಗೋ ಸಂಬಂಧಿಸಿದ್ದರೆ ಉಂಟಾಗುವುದು ಕೇವಲ ಅನಾಯಕತ್ವ ಅಥವಾ ಗೊಂದಲ.

ಪ್ರಜಾಸತ್ತಾತ್ಮಕ ದೇಶಗಳಲ್ಲಾದರೆ, ಬಹು ಮುಖ್ಯವಾದ ಖಾಸಗಿ ಸಂಘಟನೆಗಳು ಆರ್ಥಿಕ ಉದ್ದೇಶದವು. ಮುಚ್ಚಿದ ಸಮಾಜಗಳಲ್ಲಿನ ಪರಿಸ್ಥಿತಿಗೆ ವಿರುದ್ಧವಾಗಿ, ತಮ್ಮ ಭಯೋತ್ಪಾಕ ಕೃತ್ಯಗಳನ್ನು ಕಾನೂನುಬಾಹಿರ ಎನ್ನಿಸದ ರೀತಿಯಲ್ಲಿ ತೋರ್ಪಡಿಸಬಲ್ಲವು; ಯಾಕೆಂದರೆ ಅವು ತಮ್ಮ ಶತ್ರುಗಳಿಗೆ ಕೊಲ್ಲುವ ಬೆದರಿಕೆ ಹಾಕುವುದಿಲ್ಲ, ಅವನನ್ನು ಉಪವಾಸ ಬೀಳಿಸುತ್ತವೆ, ಅಷ್ಟೆ. ಗಟ್ಟಿಯಾಗಿ ಹೇಳಬೇಕಾಗಿಲ್ಲದ ಅಂತಹ ಬೆದರಿಕೆಗಳ ಮೂಲಕ ಅವು ಎಷ್ಟೋ ವೇಳೆ ಸರ್ಕಾರಗಳನ್ನು ಗುಟ್ಟಾಗಿ ಸೋಲಿಸಿವೆ. ಇದಕ್ಕೆ ಉದಾಹರಣೆಯೆಂದರೆ, ಇತ್ತೀಚಿಗೆ ಫ್ರಾನ್ಸ್‌ನಲ್ಲಾದುದು. ತಮ್ಮ ವ್ಯಾಪ್ತಿಯಲ್ಲಿ ಬರದ ವ್ಯಕ್ತಿಗಳು ಹೊಟ್ಟೆ ತುಂಬ ತಿನ್ನಬೇಕೋ

ಬೇಡವೋ ಎಂಬುದನ್ನು ಖಾಸಗಿ ಸಂಘಟನೆಗಳು ಎಲ್ಲಿಯವರೆಗೆ ನಿರ್ಧರಿಸಿಬಲ್ಲವೋ ಅಲ್ಲಿಯವರೆಗೂ ಸರ್ಕಾರಕ್ಕೆ ಗಂಭೀರಸ್ವರೂಪದ ಮಿತಿಗಳಿರುತ್ತವೆ. ಜರ್ಮನಿ ಮತ್ತು ಇಟಲಿಗಳಲ್ಲಿ, ರಷ್ಯಾದಲ್ಲಿಗಿಂತ ಕಡಿಮೆಯಲ್ಲದಂತೆ, ಸರ್ಕಾರವು ಈ ಬಗೆಗಿನ ಖಾಸಗಿ ಬಂಡವಾಳದ ಮೇಲೆ ಪರಮಾಧಿಕಾರವನ್ನು ಹೊಂದಿದೆ.

ಈಗ ನಾನು ಸರ್ಕಾರದ ಬಗೆಗಳ ಪ್ರಶ್ನೆಗೆ ಬರುತ್ತೇನೆ. ಪೂರ್ಣ ರಾಜಪ್ರಭುತ್ವದಿಂದ ಈ ಚರ್ಚೆಯನ್ನು ಪ್ರಾರಂಭಿಸುವುದು ಸಹಜವೇ ಆಗಿದೆ, ಏಕೆಂದರೆ ಅದು ಚಾರಿತ್ರಿಕ ಕಾಲದಲ್ಲಿ ಬಳಕೆಯಲ್ಲಿದ್ದ ಅತ್ಯಂತ ಹಳೆಯ ಸಂವಿಧಾನಬದ್ಧ ಬಗೆಯಾಗಿರುವುದರ ಜೊತೆಗೆ, ಅತ್ಯಂತ ಸರಳವೂ ವ್ಯಾಪಕವೂ ಆದ ಪದ್ಧತಿಯಾಗಿರುವುದು. ಸದ್ಯಕ್ಕೆ ನಾನು ರಾಜ ಮತ್ತು ನಿರಂಕುಶಪ್ರಭುವಿನ ನಡುವೆ ವ್ಯತ್ಯಾಸ ಮಾಡುತ್ತಿಲ್ಲ; ನನ್ನ ಮುಂದಿರುವುದು ಏಕವ್ಯಕ್ತಿ ಪ್ರಭುತ್ವ, ಅದು ಆನುವಂಶಿಕ ಆಡಳಿತಗಾರನದಾಗಿರಬಹುದು ಅಥವಾ ಆಕ್ರಮಣಕಾರನದಾಗಿರಬಹುದು. ಈ ಬಗೆಯ ಸರ್ಕಾರವು ಏಷ್ಯಾದಲ್ಲಿ ಎಲ್ಲ ಕಾಲಗಳಲ್ಲಿಯೂ, ಬ್ಯಾಬಿಲೋನಿಯನ್ ದಾಖಲೆಗಳ ಕಾಲದಿಂದ ಹಿಡಿದು ಪರ್ಷಿಯನ್, ಮ್ಯಾಸಿಡೋನಿಯನ್ ಮತ್ತು ರೋಮನ್ ರಾಜಪ್ರಭುತ್ವಗಳ ಮೂಲಕ ಮಹಾ ಮೊಘಲ್‌ರ ಕಾಲದವರೆಗೂ ಪ್ರಚಲಿತವಾಗಿತ್ತು. ಚೈನಾದಲ್ಲಿ, ಧರ್ಮಗ್ರಂಥಗಳನ್ನು ಸುಟ್ಟುಹಾಕಿದ ಷೀ ಹುವಾಂಗ್ ತಿ (ಕ್ರಿ.ಪೂ. ಮೂರನೆಯ ಶತಮಾನ)ಯ ಆಡಳಿತಕಾಲವನ್ನು ಹೊರತುಪಪಡಿಸಿದಂತೆ, ಸಮ್ರಾಟನು ಸಾರ್ವಭೌಮನಾಗಿರಲಿಲ್ಲ ಎಂಬುದು ನಿಜ; ಇನ್ನುಳಿದ ಕಾಲದಲ್ಲಿ, ಸಾಮಾನ್ಯವಾಗಿ ಪಂಡಿತವಲಯವು ಅವನನ್ನು ಸೋಲಿಸಬಹುದಾಗಿತ್ತು. ಆದರೆ ಚೈನಾವು ಎಲ್ಲ ನಿಯಮಗಳಿಗೂ ಅಪವಾದವೇ ಆಗಿದೆ. ಪ್ರಸ್ತುತದಲ್ಲಿ, ಪೂರ್ಣ ರಾಜಪ್ರಭುತ್ವವು ಇಳಿಮುಖವಾಗಿದೆಯೆಂದು ಭಾವಿಸಲಾಗಿದೆಯಾದರೂ, ಅದನ್ನು ಹೋಲುವಂತಹ ಯಾವುದೋ ಒಂದು ಜರ್ಮನಿ, ಇಟಲಿ, ರಷ್ಯಾ, ಟರ್ಕಿ ಮತ್ತು ಜಪಾನ್‌ಗಳಲ್ಲಿ ಪ್ರಚಲಿತವಾಗಿದೆ. ಈ ಬಗೆಯ ಪ್ರಭುತ್ವವನ್ನು ಜನರು ಸಹಜವೆಂದು ಭಾವಿಸುವುದು ಸ್ಪಷ್ಟವಾಗಿದೆ.

ಮಾನಸಿಕವಾಗಿ, ಅದರ ಪ್ರಯೋಜನಗಳು ಸ್ಪಷ್ಟವಾದವು. ಸಾಮಾನ್ಯವಾಗಿ, ಆಳುವವನು ಒಂದು ಜನಾಂಗವನ್ನೋ ಪಂಗಡವನ್ನೋ ಮುನ್ನಡೆಸುತ್ತಾನೆ ಅಥವಾ ಅದಕ್ಕೆ ಗೆಲವು ತಂದುಕೊಡುತ್ತಾನೆ, ಅವನ ವೈಭವದಲ್ಲಿ ತಾವೂ ಭಾಗಿಗಳೆಂದು ಆ ಜನ ಭಾವಿಸುತ್ತಾರೆ. ಪರ್ಷಿಯನ್ನರು ಮೆಡಿಸ್‌ರ ವಿರುದ್ಧ ಎದ್ದ ದಂಗೆಯಲ್ಲಿ ಸೈರಸ್ ನಾಯಕನಾಗಿದ್ದ;

ಅಲೆಕ್ಸಾಂಡರ್ ಮ್ಯಾಸಿಡೋನಿಯನ್‌ರಿಗೆ ಅಧಿಕಾರ ಮತ್ತು ಸಂಪತ್ತುಗಳನ್ನು ಕೊಟ್ಟ; ಕ್ರಾಂತಿಯ ಸೈನಿಕರಿಗೆ ನೆಪೋಲಿಯನ್ ಗೆಲವನ್ನು ತಂದಿತ್ತ. ಲೆನಿನ್ ಮತ್ತು ಹಿಟ್ಲರ್‌ಗಳು ತಮ್ಮ ಪಕ್ಷಗಳೊಡನೆ ಹೊಂದಿದ್ದ ಸಂಬಂಧವೂ ಇಂತಹುದೇ. ವಿಜಯಿಯು ಯಾವ ಜನಾಂಗ ಅಥವಾ ಪಂಗಡದ ನಾಯಕನಾಗಿರುತ್ತಾನೆಯೋ ಅದು ಅವನನ್ನು ಸ್ವಇಚ್ಛೆಯಿಂದ ಅನುಸರಿಸುತ್ತದೆ, ಅಲ್ಲದೆ ಅವನ ಗೆಲವುಗಳಿಂದ ತಾನು ಹಿರಿಮೆಯನ್ನು ಸಾಧಿಸಿದೆನೆಂದು ಭಾವಿಸುತ್ತದೆ; ಅವನಿಂದ ಮಣಿಸಲ್ಪಟ್ಟವರು ಅಭಿಮಾನದಿಂದೊಡಗೂಡಿದ ಭಯವನ್ನು ಹೊಂದುತ್ತಾರೆ. ಯಾವುದೇ ರಾಜಕೀಯ ಶಿಕ್ಷಣವಾಗಲೀ, ರಾಜಿಯ ಅನುಸರಣೆಯಾಗಲೀ ಇದಕ್ಕೆ ಬೇಕಿಲ್ಲ; ಆವಶ್ಯಕವಾದ ಸಹಜ ಭಾವನೆಯೆಂದರೆ, ಎಲ್ಲವೂ ನಾಯಕನ ಸಾಧನೆಯನ್ನು ಅವಲಂಬಿಸಿದೆ ಎಂದು ನಂಬುವ ಹಿಂಬಾಲಕರ ಒಂದು ಸಣ್ಣ ಒಳಗುಂಪು ತೋರಿಸುವ ಸಾಮಾಜಿಕ ಒಗ್ಗಟ್ಟು. ಅವನು ಸತ್ತಾಗ, ಅವನ ಸಾಧನೆಯೆಲ್ಲ, ಅಲೆಕ್ಸಾಂಡರ್‌ನ ವಿಷಯದಲ್ಲಾದಂತೆ, ಛಿದ್ರಗೊಳ್ಳಬಹುದು; ಆದರೆ ಅದೃಷ್ಟವಿದ್ದರೆ ಅವನ ನಂತರ ಒಬ್ಬ ಸಮರ್ಥ ಉತ್ತರಾಧಿಕಾರಿ ಕಾಣಿಸಿಕೊಂಡು ಮತ್ತೊಂದು ಅಧಿಕಾರ ನೆಲೆಯೂರುವವರೆಗೆ ಅದನ್ನು ಮುಂದುವರೆಸಬಹುದು.

ಆನರನ್ನು ಒಂದು ಸಮುದಾಯವಾಗಿ ಬೆಸೆಯುವ ಬೇರಾವುದೇ ಸಂಬಂಧವನ್ನು, ಆಜ್ಞಾಪಿಸುವ–ವಿಧೇಯವಾಗಿರುವ ಸಂಬಂಧದ ಹೊರತು, ದೇಶಗಳ ನಡುವಣ ಸಂಬಂಧವಾಗಿ ನಿದರ್ಶಿಸಬಹುದು. ಯುದ್ಧದಲ್ಲಿ ಗೆಲ್ಲುವುದರ ಮೂಲಕ ಸಣ್ಣ ದೇಶಗಳು ಮಹಾ ಸಾಮ್ರಾಜ್ಯಗಳಾಗಿ ಬೆಳೆಯುವ ಅಸಂಖ್ಯ ನಿದರ್ಶನಗಳನ್ನು ನೀಡಬಹುದು, ಆದರೆ ಸ್ವಯಂಪ್ರೇರಿತ ಒಕ್ಕೂಟವಾಗಿ ಹೀಗೆ ಬೆಳೆದಿರುವ ಉದಾಹರಣೆ ಇಲ್ಲ. ಫಿಲಿಪ್‌ನ ಕಾಲದ ಗ್ರೀಸ್, ನವೋದಯಕಾಲದ ಇಟಲಿಗಳಲ್ಲಿ ಕೆಲಮಟ್ಟಿಗಿದ್ದ ಸಾರ್ವಭೌಮದೇಶಗಳ ನಡುವಣ ಸಹಕಾರವು ಸಾವುಬದುಕಿನ ಪ್ರಶ್ನೆಯಾಗಿತ್ತು, ಆದರೂ ಅದನ್ನು ಸಾಧಿಸಲಾಗಲಿಲ್ಲ. ಈಗಿನ ಯುರೋಪ್‌ನ ದೇಶಗಳ ಮಟ್ಟಿಗೂ ಈ ಮಾತು ನಿಜ. ಆಜ್ಞಾಪಿಸಿ ಅಭ್ಯಾಸವಾಗಿರುವವರನ್ನು, ಅಥವಾ ಬರಿ ಸ್ವತಂತ್ರರಾಗಿರುವವರನ್ನು, ಮತ್ತೊಂದು ಬಾಹ್ಯ ಆಡಳಿತಕ್ಕೆ ಸ್ವಯಂಪ್ರೇರಿತವಾಗಿ ಒಳಪಡುವಂತೆ ಮಾಡುವುದು ಸುಲಭವಲ್ಲ. ಸಾರ್ವಜನಿಕರಿಗೆ ತೊಂದರೆಯಿತ್ತು ಭಾರಿ ಲಾಭ ಗಳಿಸುವ ನಿರೀಕ್ಷೆಯುಳ್ಳ ಒಂದು ಸಣ್ಣ ಬಣವು ಒಬ್ಬ ಮುಂದಾಳುವಿನಲ್ಲಿ ನಂಬಿಕೆಯಿಟ್ಟು ಕಾರ್ಯವನ್ನು ಮುನ್ನಡೆಸುವ ಇಡೀ ಅಧಿಕಾರವನ್ನು ಅವನ ಕೈಯಲ್ಲಿ ಇಡುವುದು ದರೋಡೆಕೋರ ಗುಂಪಿನಲ್ಲಿ ಸಾಧ್ಯವಾಗಬಹುದು.

ಇಂಥ ಸಂದರ್ಭದಲ್ಲಿ ಮಾತ್ರ 'ಸಾಮಾಜಿಕ ಒಪ್ಪಂದ'ದ ಮೂಲಕ ಆಡಳಿತವೇರ್ಪಡುವ ಸನ್ನಿವೇಶದ ಬಗ್ಗೆ ಮಾತನಾಡಬಹುದು, ಆಗ ಉಂಟಾಗುವುದೂ ಹಾಬ್ಸ್‌ನ ಒಪ್ಪಂದವೇ ವಿನಾ ರೂಸೋನದಲ್ಲ, ಅಂದರೆ ಅದರಲ್ಲಿ ಪ್ರಜೆಗಳು (ಅಥವಾ ದರೋಡೆಕೋರರು) ಪರಸ್ಪರ ಹುಸಿ ಒಡಂಬಡಿಕೆ ಮಾಡಿಕೊಂಡಿರುತ್ತಾರೆಯೇ ಹೊರತು ಮುಂದಾಳುಗಳು ಮತ್ತು ಹಿಂಬಾಲಕರ ನಡುವಣ ಒಪ್ಪಂದವಿರುವುದಿಲ್ಲ. ಮನೋಭಾವನೆಯ ದೃಷ್ಟಿಯಿಂದ ಮುಖ್ಯವಾದ ವಿಚಾರವೆಂದರೆ ಭಾರಿ ಲೂಟಿ ಅಥವಾ ಗೆಲವಿನ ನಿರೀಕ್ಷೆಯಿದ್ದಾಗ ಮಾತ್ರ ಅಂಥ ಒಂದು ಒಪ್ಪಂದಕ್ಕೆ ಬರಲು ಜನರು ಒಪ್ಪುತ್ತಾರೆ. ಈ ಮನೋಭಾವವೇ, ಸಾಮಾನ್ಯವಾಗಿ ಎದ್ದು ಕಾಣದಿದ್ದರೂ, ಯುದ್ಧದಲ್ಲಿ ಗೆದ್ದರೂ ಪರಮಾಧಿಕಾರವನ್ನು ಹೊಂದಿರದ ರಾಜರಲ್ಲಿರುತ್ತಿದ್ದುದು.

ಇವೆಲ್ಲವನ್ನೂ ಪರಿಶೀಲಿಸಿದ ನಂತರ ನಾವು ಬರಬಹುದಾದ ತೀರ್ಮಾನವೆಂದರೆ, ಸಿಂಹಾಸನಕ್ಕೆ ಹತ್ತಿರವಿರುವ ಕೆಲಮಂದಿ ಸಮಾನಮನಸ್ಕರು ರಾಜನ ನಿರಂಕುಶ ಪರಮಾಧಿಕಾರಕ್ಕೆ ಸ್ವಯಮೇಚ್ಛೆಯಿಂದ ಎಂಬಂತೆ ಕಾಣುವ ಒಪ್ಪಿಗೆಯನ್ನು ನೀಡಿದರೂ, ಬಹುಸಂಖ್ಯಾತ ಪ್ರಜೆಗಳು ಮೊದಲು ಭಯದಿಂದ, ಆನಂತರ ಸಂಪ್ರದಾಯ ಮತ್ತು ರೂಢಿಗಳ ಕಾರಣದಿಂದ, ಅವನಿಗೆ ಶರಣಾಗುತ್ತಾರೆ. 'ಸಾಮಾಜಿಕ ಒಪ್ಪಂದ'ವು, ಅದು ಸಂಪೂರ್ಣವಾಗಿ ಕಲ್ಪಕವಲ್ಲ ಎಂಬ ಒಂದೇ ಕಾರಣದಿಂದ, ಗೆದ್ದವರ ನಡುವಣ ಒಪ್ಪಂದವಾಗಿರುತ್ತದೆ; ಅವರಿಗೆ ಗೆಲವಿನ ಫಲಗಳನ್ನು ನೀಡದಿದ್ದರೆ ಅದರ ಅಸ್ತಿತ್ವಕ್ಕೆ ಕಾರಣವಿರುವುದಿಲ್ಲ. ಬಹುಸಂಖ್ಯಾತ ಪ್ರಜೆಗಳಾದರೋ, ಯಾವುದೊಂದು ಜನಾಂಗಕ್ಕೆ ಸೀಮಿತವಾಗದ ಅಧಿಕಾರವುಳ್ಳ ರಾಜನಿಗೆ ಶರಣಾಗುವುದರ ಹಿಂದಿನ ಪ್ರಮುಖ ಕಾರಣ ಭಯವೇ ಹೊರತು ಸ್ವಯಂಪ್ರೇರಣೆಯಲ್ಲ.

ಒಂದು ಒಳ ಗುಂಪಿನ ನಿಷ್ಠೆ ಮತ್ತು ಸಾಮಾನ್ಯರ ಭಯ ಇವುಗಳ ಮೂಲ ಪ್ರೇರಣೆ ಇವುಗಳು ತೀರ ಸರಳವೂ ಸುಲಭವೂ ಆದವು; ಹಾಗಾಗಿ ಸಾರ್ವಭೌಮ ದೇಶಗಳು ವಿಸ್ತರಣೆಯನ್ನು ಗೆಲವಿನಿಂದ ಸಾಧಿಸುತ್ತವೆಯೇ ಹೊರತು ಸ್ವಯಮೇಚ್ಛೆಯ ಒಡಂಬಡಿಕೆಯಿಂದಲ್ಲ. ಈ ಕಾರಣದಿಂದಲೇ ರಾಜಪ್ರಭುತ್ವವು ಇತಿಹಾಸದಲ್ಲಿ ಅಷ್ಟು ಮಹತ್ವದ ಪಾತ್ರವನ್ನು ನಿರ್ವಹಿಸಿರುವುದು.

ಆದರೆ ರಾಜಪ್ರಭುತ್ವಕ್ಕೆ ಹಲವಾರು ಅನನುಕೂಲಗಳಿವೆ. ಅದು ಆನುವಂಶಿಕವಾದುದು, ರಾಜರುಗಳೆಲ್ಲ ಸಮರ್ಥರಾಗಿರುತ್ತಾರೆಂದು

ಹೇಳಲಾಗುವುದಿಲ್ಲ; ಉತ್ತರಾಧಿಕಾರಿತ್ವದ ಕಾನೂನಿನಲ್ಲಿ ಏನಾದರೂ ಅನಿಶ್ಚಿತತೆಯಿದ್ದರೆ, ಅದರಿಂದ ರಾಜವಂಶಿಕರಲ್ಲೇ ಅಂತರ್ಯುದ್ಧ ಉಂಟಾಗಬಹುದು. ಪೂರ್ವದ ದೇಶಗಳಲ್ಲಿ ಸಾಮಾನ್ಯವಾಗಿ ತನ್ನ ಸೋದರರರನ್ನು ಕೊಂದು ಪಟ್ಟಕ್ಕೆ ಬಂದಿರುವ ಪ್ರಸಂಗಗಳೇ ಹೆಚ್ಚು; ಅವರಲ್ಲಿ ಯಾವನಾದರೂ ಒಬ್ಬ ತಪ್ಪಿಸಿಕೊಂಡರೆ, ಮರಣದಂಡನೆಯನ್ನು ತಪ್ಪಿಸಿಕೊಳ್ಳಲು ಏಕೈಕ ದಾರಿಯಾಗಿ ಸಿಂಹಾಸನಕ್ಕೆ ತನ್ನ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದ. ನಿದರ್ಶನಗಳಿಗೆ ಮೈನುಕ್ಸಿಯ *'ಸ್ಟೋರಿಯ ದ ಮೊಗೋರ್'* ಅನ್ನು ಓದಿ; ಅದರಲ್ಲಿ ಮಹಾ ಮೊಘಲರ ಬಗೆಗಿನ ಸಂಗತಿಗಳಿವೆ, ಉತ್ತರಾಧಿಕಾರಿತ್ವದ ಯುದ್ಧಗಳು ಬೇರಾವ ಕಾರಣಗಳಿಗಿಂತಲೂ ಸಾಮ್ರಾಜ್ಯಗಳನ್ನು ಹೆಚ್ಚು ದುರ್ಬಲಗೊಳಿಸಿದವು ಎಂಬುದನ್ನು ಅಲ್ಲಿ ಪ್ರತಿಪಾದಿಸಲಾಗಿದೆ. ನಮ್ಮ ದೇಶದಲ್ಲಿಯೇ, ರೋಸಸ್‌ರ ಯುದ್ಧಗಳು ಅದೇ ನೀತಿಯನ್ನೇ ಪೃಥಕ್ಕರಿಸುತ್ತವೆ.

ಅದರ ಬದಲು, ರಾಜಪ್ರಭುತ್ವವು ಆನುವಂಶಿಕವಾಗಿರದಿದ್ದರೆ, ಇನ್ನೂ ಹೆಚ್ಚಿನ ಅಂತರ್ಯುದ್ಧದ ಸಂಭವಗಳಿರುತ್ತವೆ. ಕಮೋಡಸ್‌ನ ಮರಣಾನಂತರ ಕಾನ್‌ಸ್ಟಾಂಟೈನ್‌ನ ಸಿಂಹಾಸನಾರೋಹಣದವರೆಗಿನ ರೋಮನ್ ಸಾಮ್ರಾಜ್ಯದ ಪರಿಸ್ಥಿತಿಯನ್ನು ಗಮನಿಸಿದರೆ ಈ ಅಂಶವು ಸ್ಪಷ್ಟವಾಗುತ್ತದೆ. ಈ ಸಮಸ್ಯೆಯ ನಿವಾರಣೆಗೆ ಕಂಡುಹಿಡಿಯಲಾದ ಏಕೈಕ ಪರಿಣಾಮಕಾರಿ ಪರಿಹಾರವೆಂದರೆ, ಪೋಪ್ ಚುನಾಯಿತನಾಗುವ ಪದ್ಧತಿಯ ಅನುಸರಣೆ. ಆದರೆ ಇದು ಬೆಳವಣಿಗೆಯ ಕೊನೆಯ ಹಂತದಲ್ಲಿ ಪ್ರಜಾಪ್ರಭುತ್ವದಿಂದ ರೂಪಿತವಾದ ಪರಿಹಾರ, ಆದರೆ ಈ ಪದ್ಧತಿ ಸಹ ದೋಷಮುಕ್ತವಲ್ಲವೆಂಬುದನ್ನು ಮಹಾ ಛಿದ್ರತೆ (ಉಡಿಜಚಿಣ ಖಛಿಜಿ) ತೋರಿಸಿದೆ.

ರಾಜಪ್ರಭುತ್ವದ ಮತ್ತಷ್ಟು ತೀಕ್ಷ್ಣವಾದ ಅನನುಕೂಲವೆಂದರೆ, ರಾಜನ ಹಿತಾಸಕ್ತಿಗೆ ಅನುಗುಣವಾಗಿದ್ದಾಗ ಹೊರತು ಪ್ರಜೆಗಳ ಹಿತವನ್ನು ಸದಾ ಕಡೆಗಣಿಸುವುದು. ಹಿತಾಸಕ್ತಿಗಳ ಅನುಗುಣತೆಯು ಒಂದು ಹಂತದವರೆಗೆ ಮಾತ್ರ ಇರಲು ಸಾಧ್ಯ. ರಾಜನಿಗೆ ಆಂತರಿಕ ಅನಾಯಕತ್ವವನ್ನು ಹತ್ತಿಕ್ಕುವ ಆಸಕ್ತಿ, ಆದ್ದರಿಂದ ಅನಾಯಕತ್ವದ ಅಪಾಯ ಹೆಚ್ಚಾದಾಗ ಕಾನೂನಭೀರುಗಳು ರಾಜನನ್ನು ಬೆಂಬಲಿಸುತ್ತಾರೆ. ರಾಜನಿಗೆ ತನ್ನ ಪ್ರಜೆಗಳ ಸಂಪತ್ತಿನ ಬಗ್ಗೆ ಆಸಕ್ತಿ, ಏಕೆಂದರೆ ಅದರಿಂದ ತೆರಿಗೆಯ ಸಂಗ್ರಹ ಹೆಚ್ಚುತ್ತದೆ. ಪರಕೀಯರೊಡನೆ ಯುದ್ದದ ಸನ್ನಿವೇಶದಲ್ಲಿ ರಾಜ ಮತ್ತು ಪ್ರಜೆಗಳ ನಡುವೆ ಸಮಾನ ಆಸಕ್ತಿಯಿರುತ್ತದೆಂದು ಭಾವಿಸಲಾದರೂ, ಅದು ರಾಜನ ಗೆಲುವಿರುವರೆಗೆ ಮಾತ್ರ. ತನ್ನ ಸಾಮ್ರಾಜ್ಯವನ್ನು ಅವನು

ವಿಸ್ತರಿಸುವ ಹೊತ್ತಿನಲ್ಲಿ, ಪ್ರಭುವಿಗಿಂತ ಒಳ ಗುಂಪಿನ ನಾಯಕನಾಗಿರುವವರೆಗೆ, ಅವನ ಸೇವೆಯು ಲಾಭಕರವೆಂದು ಭಾವಿಸಲಾಗುತ್ತದೆ. ಆದರೆ ರಾಜರು ದಿಕ್ಕುಗೆಡಲು ಎರಡು ಕಾರಣಗಳಿವೆ: ಹೆಮ್ಮೆ, ಮತ್ತು ತನ್ನ ಪ್ರಾಬಲ್ಯ ಕಳೆದುಕೊಂಡ ಒಳ ಗುಂಪು. ಹೆಮ್ಮೆಯ ಬಗ್ಗೆ ಹೇಳುವುದಾದರೆ, ಈಜಿಪ್ಷಿಯನ್ನರು ಪಿರಮಿಡ್ಡುಗಳ ಬಗೆಗಿನ ಹೆಮ್ಮೆಯನ್ನು ಉಳಿಸಿಕೊಂಡರೂ, ಕೊನೆಗೆ ಫ್ರೆಂಚರು ವರ್ಸೇಲ್ಸ್ ಮತ್ತು ಲೂವ್ರ್ ಬಗ್ಗೆ ಗೊಣಗಿದರು; ನೀತಿವಾದಿಗಳು ಆಸ್ಥಾನಗಳ ವೈಭವದ ವಿರುದ್ಧ ಯಾವಾಗಲೂ ಆಕ್ರೋಶ ವ್ಯಕ್ತಪಡಿಸಿದರು. ಅಪೋಕ್ರಿಫ಼ದಲ್ಲಿ ಹೇಳಿರುವುದೇನೆಂದರ, "ಮದ್ಯದಿಂದ ಕೇಡು, ಹೆಣ್ಣಿನಿಂದ ಕೇಡು, ರಾಜನಿಂದ ಕೇಡು" ಎಂದು.

ರಾಜಪ್ರಭುತ್ವದ ಪತನಕ್ಕೆ ಕಾರಣವಾದ ಮತ್ತೊಂದು ಕಾರಣವು ಇನ್ನೂ ಮುಖ್ಯವಾದುದು. ರಾಜರು ಹೆಚ್ಚು ಹೆಚ್ಚಾಗಿ ತಮ್ಮ ಪ್ರಜೆಗಳಲ್ಲಿನ ಒಂದು ಗುಂಪನ್ನೇ ಅವಲಂಬಿಸುವುದು ಸಾಮಾನ್ಯ; ಶ್ರೀಮಂತವರ್ಗ, ಚರ್ಚ್, ಮೇಲು ಮಧ್ಯಮವರ್ಗ, ಅಥವಾ ಕೊಸಾಕ್ಸ್‌ನಂತಹ ಯಾವುದಾದರೊಂದು ಭೌಗೋಳಿಕ ಪ್ರದೇಶದ ಜನ – ಹೀಗೆ. ಕ್ರಮೇಣ ಬದಲಾವಣೆಗಳಿಗನುಗುಣವಾಗಿ ಇಂಥ ನಂಬಿಕಸ್ಥ ಗುಂಪಿನ ಪ್ರಾಬಲ್ಯವು ಸಾಂಸ್ಕೃತಿಕವಾಗಿ ತಗ್ಗುತ್ತದೆ, ಅದರ ಜನಾಕ್ರೋಶವನ್ನು ರಾಜನೂ ಅನುಭವಿಸಬೇಕಾಗುತ್ತದೆ. ಎರಡನೇ ನಿಕೋಲಸ್‌ನ ವಿಷಯದಲ್ಲಾದಂತೆ, ಪೂರ್ತಿ ತನ್ನ ಪರವೇ ಇರಬೇಕಾದ ಗುಂಪುಗಳ ಬೆಂಬಲವನ್ನೂ ಅವನು ಕಳೆದುಕೊಳ್ಳಬೇಕಾಗಬಹುದು. ಆದರೆ ಇದು ಅಪರೂಪದ ಅಪವಾದ ಎನ್ನಿ. ಮೊದಲನೆಯ ಚಾರ್ಲ್ಸ್ ಮತ್ತು ಹದಿನಾರನೆಯ ಲೂಯಿ ಇವರನ್ನು ಶ್ರೀಮಂತವರ್ಗ ಬೆಂಬಲಿಸಿತು, ಆದರೆ ಮಧ್ಯಮವರ್ಗವು ಅವರಿಗೆ ವ್ಯತಿರಿಕ್ತವಾಗಿದ್ದುದರಿಂದ ಅವರು ಅಧಿಕಾರವನ್ನು ಕಳೆದುಕೊಂಡರು.

ಆಂತರಿಕ ರಾಜಕಾರಣದಲ್ಲಿಯೂ ಬಾಹ್ಯ ವ್ಯವಹಾರಗಳಲ್ಲಿಯೂ ಚಾಣಾಕ್ಷನಾದರೆ ರಾಜನೋ ನಿರಂಕುಶಪ್ರಭುವೋ ತನ್ನ ಅಧಿಕಾರವನ್ನು ಉಳಿಸಕೊಳ್ಳಬಹುದು. ಅವನು ದೈವಾಂಶನೆನಿಸಿಕೊಂಡರೆ, ಅವನ ವಂಶದ ಆಳಿಕೆಯು ದೀರ್ಘಕಾಲ ಮುಂದುವರಿಯಬಹುದು. ಆದರೆ ನಾಗರಿಕತೆ ಬೆಳವಣಿಗೆ ಹೊಂದಿದಂತೆ ದೈವಾಂಶದ ನಂಬಿಕೆಯು ಕೊನೆಗೊಳ್ಳಬಹುದು; ಯುದ್ಧದಲ್ಲಿ ಎಲ್ಲ ಕಾಲಕ್ಕೂ ಸೋಲನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ; ಅಲ್ಲದೆ, ರಾಜಕೀಯ ಚಾಣಾಕ್ಷತೆ ಎಲ್ಲ ರಾಜರುಗಳಲ್ಲಿಯೂ ಇರುತ್ತದೆಂದು ಹೇಳಲಾಗುವುದಿಲ್ಲ. ಹೀಗಾಗಿ ಅನ್ಯ ಆಕ್ರಮಣವಿಲ್ಲದಿದ್ದರೆ, ಕ್ರಾಂತಿ

ಸಂಭವಿಸದಿದ್ದರೆ, ಕಾಲಕ್ರಮೇಣ, ರಾಜಪ್ರಭುತ್ವವೇ ರದ್ದುಗೊಳ್ಳುತ್ತದೆ ಅಥವಾ ರಾಜನಿಂದ ಅಧಿಕಾರವನ್ನು ಕಸಿದುಕೊಳ್ಳಲಾಗುತ್ತದೆ.

ಪೂರ್ಣ ರಾಜಪ್ರಭುತ್ವದ ಸಹಜ ಉತ್ತರಾಧಿಕಾರಿಯೆಂದರೆ, ಸ್ವಲ್ಪಜನಾಧಿಪತ್ಯ. ಆದರೆ ಸ್ವಲ್ಪಜನಾಧಿಪತ್ಯವು ನಾನಾ ಸ್ವರೂಪದ್ದಾಗಿರಬಹುದು; ಆನುವಂಶೀಯ ಶ್ರೀಮಂತಪ್ರಭುತ್ವವಾಗಿರಬಹುದು, ಶ್ರೀಮಂತವರ್ಗದ್ದಾಗಿರಬಹುದು, ಚರ್ಚ್‌ನದೋ ಒಂದು ರಾಜಕೀಯ ಪಕ್ಷದ್ದೋ ಆಗಿರಬಹುದು. ಇವುಗಳಿಂದ ವಿಭಿನ್ನ ಪರಿಣಾಮಗಳಾಗುತ್ತವೆ. ಆನುವಂಶೀಯ ಶ್ರೀಮಂತಪ್ರಭುತ್ವವು ಸಂಪ್ರದಾಯಶರಣವೂ ಗರ್ವಿಷ್ಟವೂ ಮೂರ್ಖತನದ್ದೂ ಮಹಾಕ್ರೌರ್ಯದ್ದೂ ಆಗಿರುವುದು ಸಾಮಾನ್ಯ; ಯಾಕೆಂದರೆ, ಇವುಗಳೊಡನೆ ಮಿಕ್ಕ ಕಾರಣಗಳೂ ಸೇರಿ ಅದನ್ನು ಮೇಲು ಮಧ್ಯಮವರ್ಗದೊಡನೆ ಸದಾ ಸಂಘರ್ಷದಲ್ಲಿ ತೊಡಗಿರುವಂತೆ ಮಾಡುತ್ತದೆ. ಮಧ್ಯಯುಗದಲ್ಲಿನ ಎಲ್ಲ ಮುಕ್ತ ನಗರಗಳಲ್ಲಿಯೂ ಶ್ರೀಮಂತರ ಸರ್ಕಾರವು ಆಡಳಿತ ನಡೆಸುತ್ತಿತ್ತು, ವೆನಿಸ್‌ನಲ್ಲಂತೂ ನೆಪೋಲಿಯನ್ ಬಂದು ನಾಶಪಡಿಸುವವರೆಗೆ ಅದು ಮುಂದುವರೆಯಿತು. ಅಂತಹ ಸರ್ಕಾರಗಳು ಸಾಧಾರಣವಾಗಿ ಹೆಚ್ಚು ತಿಳಿವಳಿಕೆಯುಳ್ಳವು, ಇತಿಹಾಸದಲ್ಲಿ ನಮಗೆ ತಿಳಿದ ಬೇರೆಲ್ಲ ಬಗೆಯ ಸರ್ಕಾರಗಳಿಗಿಂತ ಹೆಚ್ಚು ಚಾಣಾಕ್ಷತನವನ್ನು ಪ್ರದರ್ಶಿಸಿದವು. ಅದರಲ್ಲಿಯೂ, ವೆನಿಸ್ ಹಲವಾರು ಶತಮಾನಗಳ ಕಾಲ ಸಂಕೀರ್ಣ ಸ್ವರೂಪದ ಸಂಚುಗಳನ್ನೂ ವಿವೇಕದಿಂದಲೇ ನಿಭಾಯಿಸಿತು, ಮಿಕ್ಕ ಯಾವುದೇ ಸರ್ಕಾರಕ್ಕಿಂತ ಹೆಚ್ಚಿನ ಸಮರ್ಥ ರಾಜನೈತಿಕ ಕರ್ತವ್ಯಗಳನ್ನು ನಿರ್ವಹಿಸಿತು. ಅದು ವ್ಯಾಪಾರದ ಮೂಲಕ ಹಣವನ್ನು ಗಳಿಸಿದ್ದು ಜಾಣತನದಿಂದಲೇ ಹೊರತು ಸರ್ವಾಧಿಕಾರದಿಂದಲ್ಲ, ಇದು ಬುದ್ಧಿವಂತರಾದ ಯಶಸ್ವೀ ವ್ಯಾಪಾರಿಗಳಿಂದ ಕೂಡಿ ಆದ ಸರ್ಕಾರವು ತೋರ್ಪಡಿಸಿದ ಮುಖ್ಯ ಲಕ್ಷಣ. ಆಧುನಿಕ ಕೈಗಾರಿಕಾ ಕುಳವು ಇದಕ್ಕಿಂತ ಪೂರ್ತಿ ಭಿನ್ನ, ಅದಕ್ಕೆ ಭಾಗಶಃ ಕಾರಣ, ಅವನು ಸಾಮಗ್ರಿಗಳನ್ನು ನಿಭಾಯಿಸುವುದು ಹೆಚ್ಚಾಗಿ ತಾಂತ್ರಿಕತೆಯಿಂದ, ಭಾಗಶಃ ಅವನು ವ್ಯವಹರಿಸಬೇಕಾದ ಮಾನವ ಜೀವಿಗಳೆಂದರೆ ಬಹುತೇಕ ನೌಕರರ ಸಮೂಹವೇ ಹೊರತು ತಾನು ಶಕ್ತಿಪ್ರಯೋಗ ಮಾಡದೆ ಮನವೊಲಿಸಬೇಕಾದ ಸಮಾನಸ್ಕಂದರಲ್ಲ.

ಚರ್ಚ್ ಅಥವಾ ಒಂದು ರಾಜಕೀಯ ಪಕ್ಷವು ರಚಿಸುವ ಧರ್ಮಾಧಾರಿತವಾದುದೆಂದು ಕರೆಯಲಾಗುವ ಸರ್ಕಾರವು ಈಚಿನ ವರ್ಷಗಳಲ್ಲಿ ಪ್ರಾಮುಖ್ಯಕ್ಕೆ ಬರುತ್ತಿದೆ. ಅದಕ್ಕೆ ಹಿಂದೆ ಒಂದು ರೂಪವಿತ್ತು, ಅದು ಸಂತ ಪೀಟರ್‌ನ ಪಿತ್ರಾರ್ಜಿತ(ಪ್ಯಾಟ್ರಿಮೊನಿ)ದ ರೂಪದಲ್ಲಿಯೂ

ಪರಗ್ವೇನಲ್ಲಿ ಜೆಸೂಟ್ ಆಡಳಿತದ ಕಾಲದಲ್ಲಿಯೂ ಉಳಿದುಕೊಂಡು ಬಂದು (ಮುನ್‌ಸ್ಟರ್‌ನ ಅನಾಬ್ಯಾಪ್ಟಿಸ್ಟ್‌ರ ಕಾಲದಲ್ಲಿ ಕೆಲಕಾಲ ಅಸ್ಥಿರಗೊಂಡಿದ್ದು) ಆಧುನಿಕ ಯುಗದಲ್ಲಿ ಜಿನೀವದಲ್ಲಿ ಕಾಲ್ವಿನ್‌ನ ಆಡಳಿತ ಕಾಲದಲ್ಲಿ ಪ್ರಾರಂಭಗೊಂಡಿತು. ಅದಕ್ಕೂ ಹೆಚ್ಚು ಆಧುನಿಕವಾದುದೆಂದರೆ ಸಂತರ ಆಡಳಿತ. ಅದು ರೆಸ್ಟೋರೇಷನ್ ಕಾಲದಲ್ಲಿ ಇಂಗ್ಲಂಡ್‌ನಲ್ಲಿ ಕೊನೆಗೊಂಡರೂ ನ್ಯೂ ಇಂಗ್ಲಂಡ್‌ನಲ್ಲಿ ಸಾಕಷ್ಟು ಕಾಲ ಮುಂದುವರಿಯಿತು. ಈ ಬಗೆಯ ಆಡಳಿತವು ಶಾಶ್ವತವಾಗಿ ಕೊನೆಗೊಂಡಿತೆಂದು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಭಾವಿಸಲಾಗಿತ್ತು. ಆದರೆ ಅದು ಲೆನಿನ್‌ನಿಂದ ಮರುಜೀವ ಪಡೆಯಿತು, ಇಟಲಿ ಮತ್ತು ಇಂಗ್ಲಂಡ್‌ನಲ್ಲಿ ಪುನರುಜ್ಜೀವನಗೊಂಡಿತು, ಚೀನಾದಲ್ಲಿಯೂ ಅದರ ಸ್ಥಾಪನೆಗೆ ಗಂಭೀರ ಪ್ರಯತ್ನಗಳಾದವು.

ಬಹುಪಾಲು ಪ್ರಜೆಗಳು ಅನಕ್ಷರಸ್ಥರಾಗಿಯೂ ರಾಜಕೀಯ ಅನುಭವರಹಿತರಾಗಿಯೂ ಇರುವ ರಷ್ಯಾ ಅಥವಾ ಚೀನಾದಂತಹ ದೇಶಗಳಲ್ಲಿ, ಯಶಸ್ಸು ಪಡೆಯಲು ಕ್ರಾಂತಿಕಾರಿಯು ಬಹು ಕಠಿಣ ಪರಿಸ್ಥಿತಿಗಳನ್ನೆದುರಿಸಬೇಕಾಯಿತು. ಪಾಶ್ಚಾತ್ಯ ಮಾದರಿಯ ಪ್ರಜಾಪ್ರಭುತ್ವವು ಅಲ್ಲಿ ಪ್ರಾಯಶಃ ಯಶಸ್ಸು ಪಡೆಯಲಾಗಲಿಲ್ಲ; ಅದರ ಸ್ಥಾಪನೆಗೆ ಚೀನಾದಲ್ಲೇನೋ ಪ್ರಯತ್ನಗಳು ನಡದವು, ಆದರೆ ಆರಂಭದಿಂದಲೂ ಅದು ಗೊಂದಲವುಂಟುಮಾಡಿತು. ಮತ್ತೊಂದೆಡೆ, ರಷ್ಯಾದಲ್ಲಿನ ಕ್ರಾಂತಿಕಾರಿ ಪಕ್ಷಗಳು ಲೌಕಿಕ ಶ್ರೀಮಂತಿಕೆ ಮತ್ತು ಮಧ್ಯಮವರ್ಗದವರ ಹಾಗೂ ಸಾಹುಕಾರರ ಬಗ್ಗೆ ತಿರಸ್ಕಾರಭಾವನೆಯನ್ನು ಮಾತ್ರ ಹೊಂದಿದ್ದವು; ಈ ವರ್ಗಗಳಿಂದ ಆರಿಸಲ್ಪಟ್ಟ ಸ್ವಲ್ಪಜನಾಧಿಪತ್ಯದಿಂದ ಯಾವುದೇ ಗುರಿಯನ್ನು ತಲುಪಲು ಸಾಧ್ಯವಾಗಲಿಲ್ಲ. ಅದಕ್ಕನುಗುಣವಾಗಿ ಅವು ಹೇಳಿದ್ದು: "ದೇಶವು ಪ್ರಜಾಪ್ರಭುತ್ವವನ್ನು ನಿಭಾಯಿಸಲು ಪಕ್ವವಾಗುವವರೆಗೂ ಕ್ರಾಂತಿಯನ್ನು ನಡೆಸಿದ ಪಕ್ಷಕ್ಕೆ ಸೇರಿದ ನಾವೇ ರಾಜಕೀಯ ಅಧಿಕಾರವನ್ನು ಹೊಂದಿರುತ್ತೇವೆ. ಈ ಮಧ್ಯೆ ನಮ್ಮ ತತ್ವಗಳ ಬಗ್ಗೆ ಜನರಿಗೆ ತಿಳಿವಳಿಕೆ ನೀಡುತ್ತೇವೆ."

ಆದರೆ ಫಲಿತಾಂಶವು ಹಿಂದಿನ ಬೋಲ್ಷೆವಿಕ್‌ರು ನೀರೀಕ್ಷಿಸಿದುದು ಮಾತ್ರ ಆಗಿರಲಿಲ್ಲ. ಅಂತರ್ಯುದ್ಧ, ಕ್ಷಾಮ, ಮತ್ತು ರೈತರ ಅಸಂತೃಪ್ತಿಗಳಿಂದಾದ ಒತ್ತಡದಿಂದಾಗಿ ಸರ್ವಾಧಿಕಾರವು ಬರಬರುತ್ತ ಹೆಚ್ಚು ಹೆಚ್ಚು ಗಡುಸಾಯಿತು, ಅದೇ ಸಮಯಕ್ಕೆ ಲೆನಿನ್ ಸಾವಿನ ಬಳಿಕ ಕಮ್ಯುನಿಸ್ಟ್ ಪಕ್ಷದಲ್ಲಿನ ಕಚ್ಚಾಟದಿಂದಾಗಿ ಸರ್ಕಾರವು ಒಂದು ಪಕ್ಷದ್ದಾಗುವುದರ ಬದಲು ಒಬ್ಬ ವ್ಯಕ್ತಿಯದಾಗಿ ಮಾರ್ಪಟ್ಟಿತು. ಇದೆಲ್ಲವೂ

ಆಗುತ್ತದೆಂಬುದನ್ನು ಊಹಿಸುವುದು ಕಷ್ಟವಿರಲಿಲ್ಲ. ನಾನು ೧೯೨೦ರಲ್ಲಿಯೇ ಬರೆದಿದ್ದೆ: "ಬೋಲ್ಷೆವಿಕ್‌ರ ಸಿದ್ಧಾಂತದ ಪ್ರಕಾರ ಪ್ರತಿ ದೇಶವೂ ರಷ್ಯಾ ಈಗ ಇರುವ ಸ್ಥಿತಿಯಲ್ಲಿ ಬೇಗಲೋ ನಿಧಾನವಾಗಿಯೋ ಇರಲೇಬೇಕು. ಇಂಥ ಸ್ಥಿತಿಯಲ್ಲಿರುವ ಪ್ರತಿಯೊಂದು ದೇಶದಲ್ಲಿಯೂ ಸರ್ಕಾರವು ಹೃದಯಹೀನರ ಕೈಗೆ ಸಿಕ್ಕುತ್ತದೆಂಬುದನ್ನು ನಾವು ನಿರೀಕ್ಷಿಸಬಹುದು, ಅಂಥವರ ಸ್ವಭಾವದಲ್ಲಿ ಸ್ವಾತಂತ್ರ್ಯದ ಬಗ್ಗೆ ಯಾವುದೇ ಸಹಜ ಕಳಕಳಿ ಇರುವುದಿಲ್ಲ. ಸರ್ವಾಧಿಕಾರದಿಂದ ಸ್ವಾತಂತ್ರ್ಯದ ಸ್ಥಿತಿಗೆ ದೇಶವನ್ನು ಕೊಂಡೊಯ್ಯುವುದು ಮುಖ್ಯವೆಂದು ಅವರಿಗೆ ಅನ್ನಿಸುವುದಿಲ್ಲ... ಬೋಲ್ಷೆವಿಕ್‌ರ ಹೆಸರಿನಲ್ಲಿ ರಷ್ಯಾದಲ್ಲಿ ಸಂಸ್ಥಾಪಿತಗೊಂಡಿರುವವರು... ತಮ್ಮ ಕೈಯಲ್ಲಿ ಘನೀಕರಣಗೊಂಡ ಅಧಿಕಾರವನ್ನು ತ್ಯಜಿಸಲು ಬಯಸಬೇಕಾದುದು ಅನಿವಾರ್ಯವಾದುದೂ ಅಲ್ಲ... ಹೀಗಾಗಿ ಅವರು ಹೊಸದೊಂದು ಕ್ರಾಂತಿ ಜರುಗಿ ತಮ್ಮನ್ನು ಹೊಡೆದೋಡಿಸುವವರೆಗೂ ಅಧಿಕಾರದಲ್ಲಿ ಉಳಿಯಲು ನೆವಗಳನ್ನು ಕಂಡುಕೊಳ್ಳುತ್ತಲೇ ಇರುತ್ತಾರೆ, ಅಲ್ಲವೇ? ಇಂಥ ಕಾರಣಗಳಿಂದಾಗಿ, ಮಿಕ್ಕ ವಿಷಯಗಳಲ್ಲಿ, ಅದರಲ್ಲಿ ಒಳ್ಳೆಯ ಅಂಶಗಳಿರಬಹುದಾದರೂ, ದೇವಪ್ರಭುತ್ವವು (ಥಿಯೋಕ್ರೆಸಿ) ಪ್ರಜಾಪ್ರಭುತ್ವ ಸ್ಥಾಪನೆಯ ಕಡೆಗಿನ ಒಂದು ಮೆಟ್ಟಿಲು ಎಂದು ಭಾವಿಸುವುದು ಕಷ್ಟವಾಗುತ್ತದೆ."

ದೇವಪ್ರಭುತ್ವಗಳ ಒಳ್ಳೆ ಅಂಶಗಳು, ಅವು ಹೊಸ ಸಿದ್ಧಾಂತವೊಂದನ್ನು ಪ್ರತಿಪಾದಿಸುವಾಗ, ಕೆಲವು ವೇಳೆ ಮಿಗಿಲಾದವು ಎನ್ನಿಸಬಹುದು, ಇನ್ನು ಕೆಲವು ವೇಳೆ ಕಣ್ಮರೆಯಾಗಲೂಬಹುದು. ಮೊದಲನೆಯದಾಗಿ, ಕ್ರಾಂತಿಯ ನಂತರ ಧಾರ್ಮಿಕ ಮನೋಭಾವದವರು ಸಾಮಾಜಿಕ ಒಗ್ಗಟ್ಟನ್ನು ಸಾಧಿಸುವ ಗುಂಪಾಗಬಹುದು; ಅವರೆಲ್ಲರೂ ಮೂಲತತ್ವಗಳ ಮೇಲೆ ಅವಲಂಬಿಸುವುದರಿಂದ ಪರಸ್ಪರ ಸಹಕಾರವೂ ಸುಲಭವಾಗುತ್ತದೆ. ಹೀಗಾಗಿ ಅವರಿಗೆ ತನ್ನ ಇಂಗಿತವನ್ನು ಅರಿತ ಶಕ್ತಿಶಾಲಿ ಸರ್ಕಾರವೊಂದನ್ನು ರಚಿಸುವುದು ಸಾಧ್ಯವಾಗುತ್ತದೆ. ಎರಡನೆಯದಾಗಿ, ಈಗಾಗಲೇ ಗಮನಿಸಿರುವಂತೆ, ಯಾವುದಾದರೊಂದು ಕಾರಣಕ್ಕೆ ಪ್ರಜಾಪ್ರಭುತ್ವವು ಪತನಗೊಂಡರೆ, ರಾಜಕೀಯ ಅಧಿಕಾರವನ್ನು ಹಸ್ತಾಂತರಿಸಬೇಕಾಗುವ ಪಕ್ಷ ಅಥವಾ ಚರ್ಚ್ ಹುಟ್ಟು ಅಥವಾ ಸಂಪತ್ತಿನ ಕಾರಣದಿಂದ ಅಲ್ಪಸಂಖ್ಯಾತವಾಗಿಯೇನೂ ಇರುವುದಿಲ್ಲ. ಮೂರನೆಯದಾಗಿ, ಧಾರ್ಮಿಕ ಮನೋಭಾವದವರು ಸಾಮಾನ್ಯರಿಗಿಂತ ಹೆಚ್ಚು ಕಸುವುಳ್ಳವರೂ ರಾಜಕೀಯ ಪ್ರಜ್ಞೆಯುಳ್ಳವರೂ, ಅನೇಕ ಸಂದರ್ಭಗಳಲ್ಲಿ ಅವರಿಗಿಂತ ಹೆಚ್ಚು ಬುದ್ಧಿವಂತರೂ ಆಗಿರುತ್ತಾರೆ. ಆದರೆ

ಕೆಲವು ಸಿದ್ಧಾಂತಗಳು – ಬಲಿಷ್ಠವಾಗಿರುವ ಕೆಲವನ್ನೂ ಒಳಗೊಂಡಂತೆ – ವಿವಿಧ ಸ್ಥಾನಗಳನ್ನು ಹಿಡಿಯುವಷ್ಟು ಪ್ರಭಾವಶಾಲಿಗಳಾದರೂ ಮೂರ್ಖರಾದವರನ್ನು ಮಾತ್ರ ಆಕರ್ಷಿಸುತ್ತವೆ. ಹೀಗಾಗಿ, ದೇವಪ್ರಭುತ್ವಗಳಲ್ಲಿ ಬುದ್ಧಿವಂತಿಕೆ ಎಂಬುದು ಕೆಲವರಿಗೆ ಮಾತ್ರ ಇರುವ ಲಕ್ಷಣವಾಗಿರುತ್ತದೆ ಎನ್ನಬಹುದು.

ಅಧಿಕಾರವು ಯಾವುದೋ ಒಂದು ಪಂಗಡಕ್ಕೆ ಮಾತ್ರ ಸೀಮಿತವಾಗಿದ್ದರೆ, ಅನಿವಾರ್ಯವಾಗಿ ತಾತ್ವಿಕತೆಯ ಸೆನ್ಸಾರ್‌ಶಿಪ್ ಇರುತ್ತದೆ. ಪ್ರಾಮಾಣಿಕ ಧಾರ್ಮಿಕ ಮನೋಭಾವದವರು ನೈಜ ಧರ್ಮವನ್ನು ಪ್ರಸಾರ ಮಾಡಲು ಉತ್ಸುಕರಾಗಿರುತ್ತಾರೆ; ಬಾಹ್ಯ ಅನುಸರಣೆಯಷ್ಟು ಮಾತ್ರ ಸಾಕು ಅವರಿಗೆ. ಮೊದಲಿನ ಮನೋಭಾವವು ಬುದ್ಧಿವಂತಿಕೆಯ ಮುಕ್ತ ಬಳಕೆಯನ್ನು ಕೊಂದುಹಾಕುತ್ತದೆ, ಎರಡನೆಯದು ಬೂಟಾಟಿಕೆಯನ್ನು ಬೆಳೆಸುತ್ತದೆ. ಶಿಕ್ಷಣ ಮತ್ತು ಸಾಹಿತ್ಯಗಳು ಏಕರೂಪದವಾಗುತ್ತವೆ, ಹೊಸತನ ಮತ್ತು ವಿಮರ್ಶಾತ್ಮಕತೆಯ ಬದಲು ಭೋಳೆ ನಂಬಿಕೆಯನ್ನು ಬೆಳೆಸುವಂತೆ ರೂಪುಗೊಳ್ಳುತ್ತವೆ. ನಾಯಕರುಗಳಿಗೆ ತಮ್ಮ ಸಿದ್ಧಾಂತದಲ್ಲಿ ಆಸಕ್ತಿಯಿದ್ದರೆ, ಧರ್ಮದ್ರೋಹದ ನಿದರ್ಶನಗಳಿರುತ್ತವೆ, ಸಾಂಪ್ರದಾಯಿಕತೆಯನ್ನು ಹೆಚ್ಚು ಹೆಚ್ಚು ನಿಷ್ಠುರತೆಯಿಂದ ನಿರೂಪಿಸಲಾಗುತ್ತದೆ. ಸಿದ್ಧಾಂತದ ಆಳವಾದ ಪ್ರಭಾವಕ್ಕೆ ಒಳಗಾದವರು ಅಮೂರ್ತವೆನ್ನಿಸಬಹುದಾದುದರಿಂದಲೂ ದೈನಿಕ ಜೀವನದಿಂದ ದೂರವಾದುದರಿಂದಲೂ ಬದಲಾವಣೆಗೊಳ್ಳುವ ವಿಷಯದಲ್ಲಿ ಸಾಧಾರಣ ಜನರಿಗಿಂತ ಭಿನ್ನರಾಗಿರುತ್ತಾರೆ. ಇಂತಹ ಜನರು ಜನಪ್ರಿಯವಲ್ಲದ ಸರ್ಕಾರದ ಮೇಲೆ ನಿಯಂತ್ರಣ ಹೊಂದಿದ್ದರೆ ಅದರಿಂದಾಗುವ ಪರಿಣಾಮವೆಂದರೆ, ತಾನಾಗಿಯೇ ಆಗಿದ್ದರೆ ಹೇಗಿರುತ್ತಿತ್ತೋ ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಜನಸಂಖ್ಯೆಯ ಬಹುಭಾಗವನ್ನು ಟೊಳ್ಳುತನದಿಂದ ಮತ್ತು ಅವೈಚಾರಿಕವಾಗಿ ಮಾಡುವುದು; ಈ ಪರಿಣಾಮದ ಸ್ವರೂಪವೆಂದರೆ ಎಲ್ಲ ಆಲೋಚನೆಗಳೂ ಮೂಲತಃ ಧರ್ಮದ್ರೋಹವೆಸಗುವಂತಹವು, ಹಾಗಾಗಿ ಅಪಾಯಕಾರಿ ಎಂಬ ತಿಳಿವಳಿಕೆಯನ್ನು ಬಿತ್ತುವುದು. ದೇವಪ್ರಭುತ್ವದಲ್ಲಿನ ಆಡಳಿತಗಾರರು ಮತಾಂಧರಾಗಿರುವ ಸಂಭವ ಹೆಚ್ಚು; ಮತಾಂಧರಾಗಿರುವುದರಿಂದ ಅವರು ನಿಷ್ಠುರಿಗಳೂ ಆಗಿರುತ್ತಾರೆ; ನಿಷ್ಠುರಿಗಳಾಗಿರುವುದರಿಂದ ಅವರಿಗೆ ಪ್ರತಿರೋಧವಿರುತ್ತದೆ; ಪ್ರತಿರೋಧದ ಕಾರಣದಿಂದಾಗಿ ಅವರು ಮತ್ತಷ್ಟು ನಿಷ್ಠುರಿಗಾಳಾಗುತ್ತಾರೆ. ಅವರ ಅಧಿಕಾರವ್ಯಾಮೋಹವು, ತಮ್ಮ ವಿಷಯಕ್ಕೆ ಕೂಡ, ಧರ್ಮೋತ್ಸಾಹದ ಕವಚವು ಸವೆಯುವಂತೆ ಮಾಡುತ್ತದೆ, ಇದರಿಂದಾಗಿ ಅವರು

ಅಂಕೆಯಿಲ್ಲದವರಾಗುತ್ತಾರೆ. ಇದರಿಂದ ಪಂಜರಗಳೂ ಬಲಿಗಂಬಗಳೂ, ಗೆಸ್ಟಪೋಗಳೂ ಛೆಕಾಗಳೂ[೧] ಸಿದ್ಧಗೊಳ್ಳುತ್ತವೆ.

ರಾಜಪ್ರಭುತ್ವ ಹಾಗೂ ಸ್ವಲ್ಪಜನಾಧಿಪತ್ಯಗಳು ಗುಣ–ಅವಗುಣಗಳೆರಡನ್ನೂ ಹೊಂದಿವೆ ಎಂಬುದನ್ನು ನೋಡಿಯಾಯಿತು. ಇವೆರಡರ ಬಹು ಮುಖ್ಯವಾದ ಅವಗುಣವೆಂದರೆ, ಕಾಲಾನುಕ್ರಮದಲ್ಲಿ ಸರ್ಕಾರಗಳು ಸಾಮಾನ್ಯ ಜನರ ಆಶೋತ್ತರಗಳನ್ನು ಹೆಚ್ಚು ಹೆಚ್ಚಾಗಿ ಕಡೆಗಣಿಸುತ್ತ ಕ್ರಾಂತಿಗೆ ದಾರಿ ಮಾಡಿಕೊಡುವುದು. ಪ್ರಜಾಪ್ರಭುತ್ವವು, ದೃಢವಾಗಿ ನೆಲೆಗೊಂಡ ಬಳಿಕ, ಇಂತಹ ಅಸ್ಥಿರತೆಯ ವಿರುದ್ಧದ ಒಂದು ರಕ್ಷಣೆಯಾಗುತ್ತದೆ. ಅಂತರ್ಯುದ್ಧವು ಬಹು ದೊಡ್ಡ ಕೆಡುಕಾದುದರಿಂದ, ಅದಕ್ಕೆ ಅವಕಾಶ ನೀಡದಂತಹ ಸರ್ಕಾರವು ಅಪೇಕ್ಷಣೀಯವಾಗುತ್ತದೆ. ಈಗ ಅಂತರ್ಯುದ್ಧಗಳು ಅಪರೂಪ; ಅಂಥದೇನಾರೂ ಸಂಭವಿಸಿದರೆ, ಹಿಂದೆ ಅಧಿಕಾರವನ್ನು ಹೊಂದಿದವರೇ ಮತ್ತೆ ಗೆಲ್ಲುತ್ತಾರೆ. ಮಿಕ್ಕ ವಿಷಯಗಳಲ್ಲಿ ಒಂದೇ ಆದರೂ, ಅಧಿಕಾರವು ಬಹುಸಂಖ್ಯಾತರ ಕೈಯಲ್ಲಿದ್ದರೆ, ಸರ್ಕಾರವು ಅಲ್ಪಸಂಖ್ಯಾತರ ಕೈಯಲ್ಲಿದ್ದಿದ್ದರೆ ಇರುತ್ತಿದ್ದುದಕ್ಕಿಂತ ಅಂತರ್ಯುದ್ಧದಲ್ಲಿ ಗೆಲವು ಸಾಧಿಸುವ ಸಂಭವ ಹೆಚ್ಚು. ಇದು ಪ್ರಜಾಪ್ರಭುತ್ವದ ಪರವಾದ ವಾದ; ಆದರೆ ಇದಕ್ಕೆ ಅನೇಕ ಮಿತಿಗಳಿಯೆಂಬುದು ಈಚಿನ ಅನೇಕ ನಿದರ್ಶನಗಳಿಂದ ಗೊತ್ತಾಗುತ್ತದೆ.

ಜನಸಂಖ್ಯೆಯ ಗಣನೀಯ ಬಹುಸಂಖ್ಯಾತರು ರಾಜಕೀಯ ಅಧಿಕಾರದಲ್ಲಿ ಪಾಲುದಾರರಾಗಿದ್ದರೆ, ಅಂತಹ ಸರ್ಕಾರವನ್ನು 'ಪ್ರಜಾಸತ್ತಾತ್ಮಕ' ಎಂದು ಕರೆಯುವುದು ವಾಡಿಕೆ. ಅತಿರೇಕದ ಗ್ರೀಕ್ ಪ್ರಜಾಪ್ರಭುತ್ವಗಳು ಹೆಂಗಸರು ಮತ್ತು ಗುಲಾಮರನ್ನು ಇದರ ವ್ಯಾಪ್ತಿಯಿಂದ ಹೊರಗಿರಿಸಿದ್ದವು, ಹೆಂಗಸರು ಮತದಾನದ ಹಕ್ಕು ಪಡೆಯುವುದಕ್ಕೆ ಮೊದಲೂ ಅಮೆರಿಕ ತನ್ನನ್ನು ಪ್ರಜಾಪ್ರಭುತ್ವ ಎಂದೇ ಕರೆದುಕೊಂಡಿತ್ತು. ರಾಜಕೀಯ ಅಧಿಕಾರದಲ್ಲಿ ಪಾಲುದಾರರಾಗುವ ಜನಸಂಖ್ಯೆಯ ಪ್ರಮಾಣವು ಹೆಚ್ಚಾದಂತೆಲ್ಲ ಅಷ್ಟಷ್ಟರಮಟ್ಟಿಗೆ ಸ್ವಲ್ಪಜನಾಧಿಪತ್ಯವು ಪ್ರಜಾಪ್ರಭುತ್ವಕ್ಕೆ ಹತ್ತಿರವಾಗುತ್ತ ಹೋಗುತ್ತದೆ. ಈ ಪ್ರಮಾಣವು ಅತ್ಯಲ್ಪವಾದಾಗ ಮಾತ್ರ ಸ್ವಲ್ಪಜನಾಧಿಪತ್ಯದ ಲಕ್ಷಣಗಳು ಮೇಲೆದ್ದು ಕಾಣುತ್ತವೆ.

---

[೧] ಕ್ರಮವಾಗಿ ಜರ್ಮನಿಯ ನಾಜ಼ಿ ರಹಸ್ಯ ಪೋಲೀಸು ದಳ ಹಾಗೂ ಕ್ರಾಂತಿಪೂರ್ವದ ರಷ್ಯಾದ ರಹಸ್ಯ ಪೋಲೀಸುದಳಗಳ ಹೆಸರುಗಳು

ಎಲ್ಲ ಸಂಘಟನೆಗಳ, ವಿಶೇಷವಾಗಿ ಸರ್ಕಾರದ ಸಮಸ್ಯೆಗಳು ಇಬ್ಬಗೆಯವು: ಸರ್ಕಾರದ ದೃಷ್ಟಿಯಿಂದ, ತನ್ನ ಆಳ್ವಿಕೆಗೊಳಗಾದ ಜನರ ವಿಧೇಯತೆಯನ್ನು ಸಂಪಾದಿಸುವುದು; ಹಾಗೂ ಜನರ ದೃಷ್ಟಿಯಿಂದ, ತನ್ನ ಮಾತ್ರವಲ್ಲದೆ ತನ್ನ ಅಧಿಕಾರಕ್ಕೊಳಗಾದವರ ಹಿತಗಳನ್ನು ಗಮನಿಸುವುದು. ಇವೆರಡರಲ್ಲಿ ಯಾವುದನ್ನಾದರೂ ಸಂಪೂರ್ಣವಾಗಿ ಪರಿಹರಿಸಿದಾಗ, ಮತ್ತೊಂದು ಸಮಸ್ಯೆಯು ಉದ್ಭವಿಸುವುದೇ ಇಲ್ಲ; ಎರಡನ್ನೂ ಪರಿಹರಿಸಲು ಆಗದಾಗ, ಕ್ರಾಂತಿಯುಂಟಾಗುತ್ತದೆ. ಆದರೆ ಇಬ್ಬರ ನಡುವೆ ಒಂದು ರಾಜಿ ಏರ್ಪಡುವುದೇ ಸಾಮಾನ್ಯ. ನಿಷ್ಠುರ ಸೈನಿಕಬಲವಲ್ಲದೆ, ಸರ್ಕಾರದ ಪ್ರಮುಖ ಸಹಾಯಕ ಪರಿಕರಗಳೆಂದರೆ, ಸಂಪ್ರದಾಯ, ಮತಧರ್ಮ, ಪರಕೀಯ ದಾಳಿಯ ಭಯ ಮತ್ತು ಬಹುತೇಕ ಜನರಲ್ಲಿನ ನಾಯಕನನ್ನು ಅನುಸರಿಸುವ ತುಡಿತಗಳು. ಆಳ್ವಿಕೆಗೊಳಗಾದವರ ರಕ್ಷಣೆಗೆಂದು ಪರಿಣಾಮಕಾರಿ ಎನ್ನಬಹುದಾದ ಒಂದು ಮಾರ್ಗವನ್ನು ಮಾತ್ರ ಇದುವರೆಗೆ ಕಂಡುಕೊಳ್ಳಲಾಗಿದೆ, ಅದೆಂದರೆ ಪ್ರಜಾಪ್ರಭುತ್ವ.

ಸರ್ಕಾರದ ಒಂದು ಮಾದರಿಯಾಗಿ ಪ್ರಜಾಪ್ರಭುತ್ವವು ಕೆಲವು ಮಿತಿಗಳಿಂದ ಕೂಡಿದೆ, ಅವು ಸಹಜವಾದರೂ, ಕೆಲವರ ದೃಷ್ಟಿಯಲ್ಲಿ ತಾತ್ವಿಕವಾಗಿಯಾದರೂ ನಿವಾರಿಸಬಹುದಾದವು. ಈ ಸಹಜ ಮಿತಿಗಳು ಉದ್ಭವಿಸುವುದು ಮುಖ್ಯವಾಗಿ ಎರಡು ನೆಲೆಗಳಿಂದ: ಬೇಗ ತೆಗೆದುಕೊಳ್ಳಬೇಕಾದ ನಿರ್ಧಾರಗಳು ಕೆಲವು, ಪರಿಣತಜ್ಞಾನದ ಸಹಾಯದಿಂದ ತೆಗೆದುಕೊಳ್ಳಬೇಕಾದವು ಮತ್ತೆ ಕೆಲವು. ೧೯೩೧ ರಲ್ಲಿ ಗ್ರೇಟ್ ಬ್ರಿಟನ್ ಸುವರ್ಣಮಾನ(ಗೋಲ್ಡ್ ಸ್ಟಾಂಡರ್ಡ್)ವನ್ನು ಕೈಬಿಟ್ಟಾಗ ಈ ಎರಡೂ ಬಗೆಯ ನಿರ್ಧಾರಗಳು ಆವಶ್ಯಕವಾಗಿದ್ದವು; ಅತ್ಯಂತ ಶೀಘ್ರವಾಗಿ ಕ್ರಿಯಾಶೀಲವಾಗುವುದೂ ಆವಶ್ಯಕವಾಗಿತ್ತು ಹಾಗೂ ವಿಷಯ ಎಷ್ಟು ಜಟಿಲವಾದುದೆಂದರೆ ಬಹಳ ಜನರಿಗೆ ಅದು ಅರ್ಥವೇ ಅಗುತ್ತಿರಲಿಲ್ಲ. ಹೀಗಾಗಿ ಪ್ರಜಾಪ್ರಭುತ್ವವು ತನ್ನ ಅಭಿಪ್ರಾಯವನ್ನು ಹಿಂದಿನಿಂದ ಅನ್ವಯವಾಗುವಂತೆ ವ್ಯಕ್ತಪಡಿಸಬೇಕಾಗಿತ್ತು. ಯುದ್ಧವು ನಾಣ್ಯಚಲಾವಣೆಗಿಂತ ಕಡಿಮೆ ಜಟಿಲವಾದ ವಿಷಯವಾದರೂ, ಹೆಚ್ಚು ತುರ್ತಿನದು, ಆ ಬಗ್ಗೆ ಸಂಸತ್ತಿನ ಸಲಹೆಯನ್ನು ಪಡೆಯುವುದು ಸಾಧ್ಯವಾದರೂ (ಇದು ಸಾಮಾನ್ಯವಾಗಿ ಒಂದು ಅಣಕ, ಏಕೆಂದರೆ ವಾಸ್ತವದಲ್ಲಿ ಆ ಬಗ್ಗೆ ಆಗಲೇ ತೀರ್ಮಾನಕ್ಕೆ ಬಂದಿರಲಾಗುತ್ತದೆ) ಮತದಾರರ ಅಭಿಪ್ರಾಯವನ್ನು ಕೇಳುವುದು ಅಸಾಧ್ಯ.

ಈ ಸಹಜ ಮಿತಿಗಳ ಕಾರಣದಿಂದಾಗಿ, ತುಂಬ ಮುಖ್ಯ ವಿಷಯಗಳ ಬಹುಪಾಲನ್ನು ಮತದಾರರು ಸರ್ಕಾರಕ್ಕೆ

ವಹಿಸಿಕೊಡಬೇಕಾಗುತ್ತದೆ. ಸರ್ಕಾರವು ಎಷ್ಟರಮಟ್ಟಿಗೆ ಜನಾಭಿಪ್ರಾಯವನ್ನು ಗೌರವಿಸುವುದೋ ಅಷ್ಟರಮಟ್ಟಿಗೆ ಪ್ರಜಾಪ್ರಭುತ್ವವು ಯಶಸ್ವಿಯಾಗುತ್ತದೆ. ದೀರ್ಘಾವಧಿ ಸಂಸತ್ತು (ಲಾಂಗ್ ಪರ್ಲಿಮೆಂಟ್)[೧] ತನ್ನ ಅನುಮತಿಯಿಲ್ಲದೆ ಸಂಸತ್ತನ್ನು ವಿಸರ್ಜಿಸಬಾರದೆಂಬ ತೀರ್ಪು ನೀಡಿತು; ಆ ಮುಂದಿನ ಸಂಸತ್ತುಗಳು ಹಾಗೇ ಮಾಡುವುದಕ್ಕೆ ಇರುವ ಅಡ್ಡಿಗಳಾವುವು? ಇದಕ್ಕೆ ಉತ್ತರವು ಸರಳವೂ ಅಲ್ಲ ಭರವಸೆಯದೂ ಅಲ್ಲ. ಮೊದಲನೆಯದಾಗಿ, ಕ್ರಾಂತಿಕಾರಿ ಸನ್ನಿವೇಶವಿಲ್ಲದಾಗ, ವಿಸರ್ಜಿತವಾಗುವ ಸಂಸತ್ತಿನ ಸದಸ್ಯರಿಗೆ, ಅವರು ಸೋತ ಪ್ಷಕಕ್ಕೆ ಸೇರಿದವರಾದರೂ, ಸುಖಮಯ ಜೀವನವನ್ನು ನೀಡಲಾಗಿರುತ್ತದೆ; ಅವರಲ್ಲಿ ಬಹುಮಂದಿ ಪುನರಾಯ್ಕೆಗೊಳ್ಳುತ್ತಾರೆ, ತಮ್ಮದು ಆಳುವ ಪಕ್ಷವಾಗಿ ಹೊರಹೊಮ್ಮದಿದ್ದರೂ, ತಮ್ಮ ಎದುರಾಳಿಗಳ ತಪ್ಪುಗಳನ್ನು ಸಾರ್ವಜನಿಕವಾಗಿ ಟೀಕಿಸುವ ಮೂಲಕ ಅದರಲ್ಲಿರುವವರಷ್ಟೇ ತೃಪ್ತಿಯನ್ನು ಪಡೆಯಬಹುದು. ಕಾಲಕ್ರಮೇಣ ಅವರು ಅಧಿಕಾರವನ್ನೂ ಹಿಡಿಯಬಹುದು. ಅದಕ್ಕೆ ವ್ಯತಿರಿಕ್ತವಾಗಿ, ಸಂವಿಧಾನಾತ್ಮಕವಾಗಿ ತಮ್ಮನ್ನು ನಿವಾರಿಸಿಕೊಳ್ಳುವ ಅವಕಾಶವನ್ನು ಅವರು ಮತದಾರರಿಗೆ ಅಸಾಧ್ಯವನ್ನಾಗಿಸಿದರೆ, ಅದರಿಂದ ತಮ್ಮ ಆಸ್ತಿ ಹಾಗೂ ಪ್ರಾಣಗಳಿಗೆ ಅಪಾಯವುಂಟುಮಾಡಬಹುದಾದ ಕ್ರಾಂತಿಕಾರಿ ಸನ್ನಿವೇಶವನ್ನು ತಾವಾಗಿಯೇ ಸೃಷ್ಟಿಸಿದಂತಾಗುತ್ತದೆ. ಸ್ಟ್ರಾಫ್ಫೋರ್ಡ್ ಮತ್ತು ಮೊದಲನೆಯ ಚಾರ್ಲ್ಸ್‌ರು ಎದುರಿಸಿದ ಸನ್ನಿವೇಶವು ಅವರ ದುಡುಕಿನ ವಿರುದ್ಧದ ಎಚ್ಚರಿಕೆಯ ಗಂಟೆ.

ಈಗಾಗಲೇ ಕ್ರಾಂತಿಕಾರಿ ಸನ್ನಿವೇಶವೇನಾದರೂ ಸೃಷ್ಟಿತವಾಗಿದ್ದರೆ ಇದೆಲ್ಲವೂ ಬದಲಾಗುತ್ತವೆ. ಮುಂದಿನ ಚುನಾವಣೆಯನಂತರ, ಯಾವುದೇ ಪರಿಹಾರಧನವನ್ನು ನೀಡದೆಯೇ ಎಲ್ಲ ಖಾಸಗೀ ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಕಮ್ಯುನಿಸ್ಟ್ ಸರ್ಕಾರವು ಅಧಿಕಾರಕ್ಕೆ ಬರಬಹುದೆಂಬ ಬಗ್ಗೆ ಸಾಂಪ್ರದಾಯಿಕ ಸಂಸತ್ತಿಗೆ ಸಕಾರಣ ಭಯವಿದೆ ಎಂದು ಭಾವಿಸಿ. ಆ ಸಂದರ್ಭದಲ್ಲಿ, ಅಧಿಕಾರದಲ್ಲಿರುವ ಪಕ್ಷವು ಸಂಸತ್ತನ್ನು ದೀರ್ಘಾವಧಿಗೊಳಿಸಲು ಪ್ರಯತ್ನಿಸಬಹುದು, ತನ್ನ ಮುಂದುವರಿಕೆಗೆ ನಿರ್ಣಯಿಸಬಹುದು. ಪ್ರಜಾಪ್ರಭುತ್ವದ ತತ್ವಗಳನ್ನು ಗೌರವಿಸಿ ಈ ರೀತಿ ಮಾಡದಿರುವ ಸಂಭವ ಕಡಿಮೆ; ಹಾಗೇನಾದರೂ ಮಾಡದಿರುವುದು ಸೈನ್ಯದ ನಿಷ್ಠೆಯ ಬಗ್ಗೆ ತನಗೆ ಅನುಮಾನಗಳಿದ್ದಾಗ ಮಾತ್ರ.

---

[೧] ೧೬೪೦ ರಲ್ಲಿ ತೊಡಗಿ ೧೬೬೦ ರವರೆಗೂ ಮುಂದುವರೆದ ಬ್ರಿಟಿಷ್ ಪಾರ್ಲಿಮೆಂಟ್

ಇದರ ನೀತಿಯೆಂದರೆ, ಚುನಾಯಿತ ಪ್ರತಿನಿಧಿಗಳ ಕೈಗಳಿಗೆ ಅಧಿಕಾರವನ್ನು ನೀಡುವುದು ಅನಿವಾರ್ಯವಾದ್ದರಿಂದ, ಕ್ರಾಂತಿಕಾರಿ ಸನ್ನಿವೇಶದಲ್ಲಿ ಪ್ರತಿನಿಧಿಗಳು ತನ್ನ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಭರವಸೆಯಿಲ್ಲದ್ದರಿಂದ ಪ್ರಜಾಪ್ರಭುತ್ವಕ್ಕೆ ಯಾವುದೇ ರಕ್ಷಣೆ ದೊರೆಯುವುದಿಲ್ಲ ಎಂಬುದು. ಸುಲಭವಾಗಿ ಊಹಿಸಿಕೊಳ್ಳಬಹುದಾದ ಸಂದರ್ಭದಲ್ಲಿ ಸಂಸತ್ತಿನ ಆಶೋತ್ತರಗಳು ದೇಶದ ಬಹುಸಂಖ್ಯಾತರ ಆಶಯಗಳಿಗೆ ವಿರುದ್ಧವಾಗಿರಬಹುದು. ಅಂಥ ಸಂದರ್ಭಗಳಲ್ಲಿ, ಸಂಸತ್ತು ಮೇಲುಗೈ ಸಾಧಿಸಿ ಬಹುಸಂಖ್ಯಾತರನ್ನು ನಿರ್ಭಯವಾಗಿ ಬಗ್ಗುಬಡಿಯಬಹುದು.

ಇದನ್ನು ಹೇಳುತ್ತಿರುವುದು ಪ್ರಜಾಪ್ರಭುತ್ವಕ್ಕಿಂತ ಉತ್ತಮ ಮಾದರಿಯ ಸರ್ಕಾರವಿರಬಹುದು ಎಂದು ಸೂಚಿಸುವುದಕ್ಕಲ್ಲ, ಜನರು ಶತಾಯಗತಾಯ ಹೋರಾಡುವ, ಅವರು ಮೇಲೆದ್ದರೆ ಯಾವ ಬಗೆಯ ಸರ್ಕಾರವೂ ಅಂತರ್ಯುದ್ಧವನ್ನು ತಡೆಯಲಾರದಂತಹ ವಿಷಯಗಳಿರುತ್ತವೆ ಎಂಬುದನ್ನು ಸೂಚಿಸಲು. ಸರ್ಕಾರವು ಹೊಂದಿರಬೇಕಾದ ಅತ್ಯಂತ ಪ್ರಮುಖ ಉದ್ದೇಶವೆಂದರೆ ವಿಷಯಗಳನ್ನು ಅಂತರ್ಯುದ್ಧಕ್ಕೆ ಕಾರಣವಾಗುವ ಮಟ್ಟಕ್ಕೆ ಕೊಂಡೊಯ್ಯದಿರುವುದು; ಈ ದೃಷ್ಟಿಯಿಂದ ಪ್ರಜಾಪ್ರಭುತ್ವವು, ಅದು ಪದ್ಧತಿಯೇ ಆಗಿರುವ ಕಡೆಗಳಲ್ಲಿ, ಮಿಕ್ಕ ಯಾವುದೇ ಬಗೆಯ ಸರ್ಕಾರಕ್ಕಿಂತ ಹೆಚ್ಚು ಅಪೇಕ್ಷಣೀಯ.

ಸರ್ಕಾರದ ಒಂದು ಮಾದರಿಯಾಗಿ ಪ್ರಜಾಪ್ರಭುತ್ವದಲ್ಲಿರುವ ತೊಂದರೆಯೆಂದರೆ, ರಾಜಿಸೂತ್ರಕ್ಕೆ ಸಿದ್ಧವಾಗಿರಬೇಕಾದುದು. ಒಡಂಬಡಿಕೆಗೆ ಸಿದ್ಧವಾದರೆ ಅದು ಹೇಡಿತನದ ಪ್ರತೀಕ ಎಂಬ ಭಾವನೆಯನ್ನು ಸೋತ ಪಕ್ಷವು ತಾಳದಿರುವುದು. ಹಾಗೆಯೇ, ಬಹುಸಂಖ್ಯಾತ ಪಕ್ಷವು ಬಂಡಾಯವನ್ನು ಪ್ರಚೋದಿಸುವಷ್ಟರಮಟ್ಟಿಗೆ ಸಂದರ್ಭದ ದುರುಪಯೋಗ ಮಾಡಿಕೊಳ್ಳದಿರುವುದು. ಇದಕ್ಕೆ ಅಭ್ಯಾಸ, ಕಾನೂನಿನ ಬಗ್ಗೆ ಗೌರವ ಹಾಗೂ ತನ್ನದಕ್ಕಿಂತ ಭಿನ್ನವಾದ ಅಭಿಪ್ರಾಯಗಳು ದುಷ್ಟತನದ ಪ್ರತೀಕವಲ್ಲ ಎಂಬ ನಂಬಿಕೆಗಳು ಆವಶ್ಯಕ. ಇದಕ್ಕಿಂತ ಹೆಚ್ಚು ಆವಶ್ಯವಾದುದೆಂದರೆ, ತೀವ್ರ ಭಯದ ವಾತಾವರಣ ಇರಬಾರದ್ದು, ಯಾಕೆಂದರೆ ಅಂತಹ ವಾತಾವರಣ ಉಂಟಾದಲ್ಲಿ ಜನರು ಒಬ್ಬ ನಾಯಕನಿಗಾಗಿ ಹುಡುಕಿ ಅಂಥವನು ದೊರಕಿದಾಗ ಅವನಿಗೆ ಶರಣಾಗುತ್ತಾರೆ. ಇದರಿಂದ ಮುಂದೆ ಅವನು ಸರ್ವಾಧಿಕಾರಿಯಾಗಿಬಿಡುವ ಸಂಭವವಿರುತ್ತದೆ. ಈ ಪರಿಸ್ಥಿತಿಗಳನ್ನು ಬಿಟ್ಟರೆ, ಪ್ರಜಾಪ್ರಭುತ್ವವು ಇದುವರೆಗೆ ಕಂಡುಕೊಂಡ ಮಾದರಿಗಳಲ್ಲಿಯೇ ಅತ್ಯಂತ ಸ್ಥಿರವಾದ ಸರ್ಕಾರವಾಗುವ ಸಾಮರ್ಥ್ಯವನ್ನು ಹೊಂದಿದೆ. ಅಮೆರಿಕ, ಗ್ರೇಟ್

ಬ್ರಿಟನ್, ಡೊಮಿನಿಯನ್‌ಗಳು, ಸ್ಕಾಂಡಿನೇವಿಯ ಮತ್ತು ಸ್ವಿಟ್ಸರ್ಲಂಡ್‌ಗಳಲ್ಲಿ ಅದಕ್ಕೆ ಅನ್ಯ ಆಕ್ರಮಣದ ಹೊರತು ಯಾವ ಅಪಾಯವೂ ಇದ್ದಂತಿಲ್ಲ; ಫ್ರಾನ್ಸ್‌ನಲ್ಲಿ ಅದು ದಿನೇ ದಿನೇ ದೃಢವಾಗಿ ನೆಲೆಯೂರುತ್ತಿದೆ. ಸ್ಥಿರತೆಯಲ್ಲದೆ, ಪ್ರಜೆಗಳ ಹಿತದ ಕಡೆಗೂ ಕೊಂಚ ಗಮನ ಹರಿಸುವ ಗುಣವನ್ನು ಹೊಂದಿದೆ, ಇದು ನಿರೀಕ್ಷಿತ ಪ್ರಮಾಣದಲ್ಲಿಲ್ಲದಿರಬಹುದು, ಆದರೆ ಇದು ಸಂಪೂರ್ಣ ರಾಜಪ್ರಭುತ್ವ, ಸ್ವಲ್ಪಜನಾಧಿಪತ್ಯ ಅಥವಾ ಸರ್ವಾಧಿಕಾರಗಳಲ್ಲಿರುವುದಕ್ಕಿಂತ ಸಾಕಷ್ಟು ಹೆಚ್ಚು ಎಂಬುದು ಸತ್ಯ.

ಆಧುನಿಕ ಕಾಲದ ವಿಶಾಲ ದೇಶಗಳಲ್ಲಿ, ಅದರ ಜನಸಂಖ್ಯೆಯ ದಟ್ಟಣೆಯ ಕಾರಣದಿಂದಾಗಿ, ಪ್ರಜಾಪ್ರಭುತ್ವಕ್ಕೆ ಕೆಲವು ಅನನುಕೂಲಗಳಿವೆ, ಆದರೆ ಅದೇ ವಿಸ್ತಾರದಲ್ಲಿ ಇತರ ಮಾದರಿಯ ಸರ್ಕಾರಗಳಿದ್ದರೆ ಇರಬಹುದಾದಷ್ಟು ಪ್ರಮಾಣದಲ್ಲಿ ಅಲ್ಲ. ಪ್ರಾಚೀನ ಕಾಲದಲ್ಲಿ, ಜನಪ್ರಾತಿನಿಧ್ಯದ ಪರಿಕಲ್ಪನೆ ಇರಲಿಲ್ಲ; ಆಗ ಜನರು ಮಾರುಕಟ್ಟೆ ಪ್ರದೇಶದಲ್ಲಿ ಸೇರಿ, ಪ್ರತಿಯೊಂದು ವಿಷಯದ ಬಗ್ಗೆಯೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ದೇಶದ ವ್ಯಾಪ್ತಿಯು ಒಂದು ನಗರಕ್ಕೆ ಮಾತ್ರ ಸೀಮಿತಗೊಂಡಿದ್ದಾಗ, ಈ ಪದ್ಧತಿಯಿಂದ ಪ್ರತಿಯೊಬ್ಬ ಪ್ರಜೆಯ ಕೈಯಲ್ಲೂ ನಿಜವಾದ ಅಧಿಕಾರ ಮತ್ತು ಜವಾಬ್ದಾರಿಗಳು ಇರುವ ಭಾವನೆಯುಂಟಾಗುತ್ತಿತ್ತು, ಎಲ್ಲ ವಿಷಯಗಳನ್ನೂ ತಮ್ಮ ಅನುಭವದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಸಾಧ್ಯತೆ ಪ್ರಜೆಗಳಿಗಿರುತ್ತಿತ್ತು. ಆದರೆ ಚುನಾಯಿತ ಶಾಸಕಾಂಗವಿರದಿದ್ದ ಕಾರಣದಿಂದಾಗಿ, ಪ್ರಜಾಪ್ರಭುತ್ವವು ವಿಶಾಲ ಭೌಗೋಳಿಕ ವ್ಯಾಪ್ತಿಗೆ ವಿಸ್ತಾರಗೊಳ್ಳಲು ಸಾಧ್ಯವಾಗಲಿಲ್ಲ. ಇಟಲಿಯ ಮಿಕ್ಕ ಭಾಗಗಳ ಜನರಿಗೂ ರೋಮನ್ ಪ್ರಜೆತನವನ್ನು ನೀಡಿದಾಗ, ಯಾಕೆಂದರೆ ರೋಮ್‌ನಲ್ಲಿ ವಾಸಿಸುತ್ತಿದ್ದವರಿಗೆ ಮಾತ್ರ ಇಂಥ ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗುತ್ತಿದ್ದುದರಿಂದ, ಹೊಸ ಪ್ರಜೆಗಳು ವಾಸ್ತವವಾಗಿ ರಾಜಕೀಯ ಅಧಿಕಾರವನ್ನು ಪಡೆಯಲು ಆಗಲಿಲ್ಲ. ಆಧುನಿಕ ಯುಗದಲ್ಲಾದರೆ, ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ಕಂಡುಕೊಂಡದ್ದರಿಂದ ಈ ಭೌಗೋಳಿಕ ವಿಸ್ತಾರವನ್ನು ಮೀರಲು ಸಾಧ್ಯವಾಯಿತು. ಚುನಾಯಿತ ಪ್ರತಿನಿಧಿಗೆ ಗಣನೀಯ ಪ್ರಮಾಣದ ಸ್ವತಂತ್ರ ಅಧಿಕಾರ ಹೊಂದುವ ಅವಕಾಶ ಇತ್ತೀಚಿನವರೆಗೂ ಇತ್ತು, ಯಾಕೆಂದರೆ ರಾಜಧಾನಿಯಿಂದ ದೂರವಿದ್ದವರೆಗೆ ಏನಾಗುತ್ತಿದೆ ಎಂಬುದನ್ನು ಅಥವಾ ಸಂಭವಿಸಿದುದರ ಬಗೆಗಿನ ಎಲ್ಲ ವಿವರಗಳನ್ನು ಬೇಗ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ, ಹೀಗಾಗಿ ಅವರು

ಪರಿಣಾಮಕಾರಿಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಾಗುತ್ತಿರಲಿಲ್ಲ. ಆದರೆ ಈಗ, ಪ್ರಸಾರ ಮಾಧ್ಯಮ, ವೇಗಪ್ರಯಾಣ ವೃತ್ತಪತ್ರಿಕೆಗಳು ಮುಂತಾದವುಗಳ ನೆರವಿನಿಂದಾಗಿ, ವಿಶಾಲ ದೇಶಗಳೂ ಹೆಚ್ಚು ಕಡಿಮೆ ಪ್ರಾಚೀನ ಕಾಲದ ನಗರ ದೇಶಗಳ ಹಾಗೆ ಆಗಿವೆ; ಕೇಂದ್ರದಲ್ಲಿನ ಜನರು ಮತ್ತು ದೂರದ ಮತದಾರರ ನಡುವೆ (ಒಂದು ಬಗೆಯ) ವೈಯಕ್ತಿಕ ಸಂಪರ್ಕ ಉಂಟಾಗಿದೆ. ಇದರಿಂದಾಗಿ, ಹದಿನೆಂಟು ಮತ್ತು ಹತ್ತೊಂಬತ್ತನೆಯ ತಮಾನಗಲಲ್ಲಿ ಅಸಾಧ್ಯವಾದ ರೀತಿಯಲ್ಲಿ ಹಿಂಬಾಲಕರು ತಮ್ಮ ನಾಯಕನ ಮೇಲೆ ಒತ್ತಡ ತರಬಹುದು; ಹಾಗೆಯೇ ನಾಯಕರು ತಮ್ಮ ಹಿಂಬಾಲಕರ ಮೇಲೆ ಪ್ರಭಾವ ಬೀರಬಹುದು. ಇದರಿಂದಾದ ಪರಿಣಾಮವೆಂದರೆ ಪ್ರತಿನಿಧಿಯ ಪ್ರಾಮುಖ್ಯವು ಕಡಿಮೆಯಾಗಿರುವುದು ಹಾಗೂ ನಾಯಕರ ಪ್ರಭಾವ ಹೆಚ್ಚಾಗಿರುವುದು. ಸಂಸತ್ತುಗಳು ಈಗ ಮತದಾರರು ಹಾಗೂ ಸರ್ಕಾರದ ನಡುವಣ ಪರಿಣಾಮಕಾರಿ ಮಧ್ಯವರ್ತಿಗಳಾಗಿ ಉಳಿದಿಲ್ಲ. ಹಿಂದೆ ಚುನಾವಣಾ ಕಾಲಕ್ಕೆ ಮಾತ್ರ ಸೀಮಿತವಾಗಿದ್ದ ಅನುಮಾನಾಸ್ಪದ ರೀತಿಯ ಎಲ್ಲ ಪ್ರಚಾರ ಸಾಧನಗಳನ್ನು ಈಗ ಸತತವಾಗಿ ಬಳಸಿಕೊಳ್ಳಬಹುದು. ಭಾರಿ ಪ್ರಚಾರ ಸಾಧನಗಳ ಲಭ್ಯತೆಯಿಂದಾಗಿ ಪುಡಾರಿಗಳು, ರೌಡಿಗಳು, ಮೈಗಾವಲಿನವರು ಮತ್ತು ದೇಶಭ್ರಷ್ಟರಿಂದ ಕೂಡಿದ ಗ್ರೀಕ್ ನಗರ ದೇಶಗಳು ಈಗ ಮತ್ತೆ ಜೀವ ತಳೆದಂತಾಗಿದೆ.

ತನ್ನ ನಾಯಕನ ಬಗ್ಗೆ ಉತ್ಸುಕನಾಗಿರದಿದ್ದರೆ, ವಿಶಾಲ ಪ್ರಜಾಪ್ರಭುತ್ವ ದೇಶದಲ್ಲಿ ಮತದಾರನು ತನ್ನ ಕೈಯಲ್ಲಿ ಅಧಿಕಾರವಿದೆ ಎಂದು ಕಿಂಚಿತ್ತಾದರೂ ಭಾವಿಸುವ ಪರಿಸ್ಥಿತಿಯಿಲ್ಲ; ಹೀಗಾಗಿ ತನ್ನ ಮತವನ್ನು ಚಲಾಯಿಸುವುದೂ ವ್ಯರ್ಥ ಎಂದು ಅವನು ಭಾವಿಸುವಂತಾಗಿದೆ. ಅವನು ಯಾವುದಾದರೊಂದು ಪಕ್ಷದ ಗಾಢ ಪ್ರಚಾರಕನಾಗಿರದಿದ್ದರೆ, ಆಳುವವರನ್ನು ನಿರ್ಧರಿಸುವ ಭಾರಿ ಶಕ್ತಿಗಳ ನಡುವೆ ತಾನು ಏನೂ ಅಲ್ಲ ಭಾವನೆಯನ್ನೂ ಉಂಟುಮಾಡುತ್ತದೆ. ವಾಸ್ತವದಲ್ಲಿ ಅವನು ಮಾಡಬಹುದಾದುದೆಂದರೆ, ತನ್ನಲ್ಲಿ ಆಸಕ್ತಿಯುಂಟುಮಾಡದ ಪ್ರಣಾಳಿಕೆಯಿರುವ ಅಥವಾ ಬಹು ಕಡಿಮೆ ವ್ಯತ್ಯಾಸವಿರುವ ಮತ್ತು, ಚುನಾಯಿತನಾದ ಕೂಡಲೇ ಎಲ್ಲ ಕಾರ್ಯಕ್ರಮಗಳನ್ನು ಗಾಳಿಗೆ ತೂರಿಬಿಡುವ ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬನಿಗೆ ಮತ ಹಾಕುವುದು, ಇದೊಂದು ವಾಡಿಕೆಯೇ ಆಗಿಬಿಟ್ಟಿದೆ. ಇದರ ಬದಲು, ತನ್ನ ಮೆಚ್ಚಿಕೆಗೆ ಪಾತ್ರವಾದ ನಾಯಕನೇನಾದರೂ ಇರುವ ಪಕ್ಷದಲ್ಲಿ, ಅವನ ಮನೋಭಾವವು ಹಿಂದೆ ನಾವು ರಾಜಪ್ರಭುತ್ವದ ವಿಷಯದಲ್ಲಿ ಪರಿಶೀಲಿಸಿದಂತಹುದಾಗಿರುತ್ತದೆ; ಅಂದರೆ ಅದು ರಾಜ ಮತ್ತು

ಅವನ ಬೆಂಬಲಿಗ ಬುಡಕಟ್ಟು ಅಥವಾ ಪಂಗಡದ ನಡುವೆ ಇದ್ದಂತಹ ರೀತಿಯದಾಗಿರುತ್ತದೆ. ಕುಶಲನಾದ ರಾಜಕೀಯ ಚಳವಳಿಗಾರ ಅಥವಾ ಸಂಘಟಕನು ವ್ಯಕ್ತಿಯೊಬ್ಬನ ಬಗ್ಗೆ ನಿಷ್ಠೆಯನ್ನು ಪ್ರಚೋದಿಸುವಂತಹ ಕಾರ್ಯಕ್ಕೆ ತನ್ನನ್ನು ತೊಡಗಿಸಿಕೊಂಡಿರುತ್ತಾನೆ. ಅಂತಹ ವ್ಯಕ್ತಿಯು ದೊಡ್ಡ ನಾಯಕನಾಗಿದ್ದರೆ, ಅದರ ಪರಿಣಾಮ ಏಕವ್ಯಕ್ತಿ ಆಡಳಿತ; ಹಾಗಿಲ್ಲದಿದ್ದರೆ, ಅವನ ಆಯ್ಕೆಗೆ ಕಾರಣವಾದ ಕಿರುಗುಂಪಿನಲ್ಲಿ ಅಧಿಕಾರವು ನೆಲೆಗೊಳ್ಳುತ್ತದೆ.

ಇಂತಹುದು ನಿಜವಾದ ಪ್ರಜಾಪ್ರಭುತ್ವವಲ್ಲ. ಸರ್ಕಾರದ ವ್ಯಾಪ್ತಿಗೆ ಒಳಪಡುವ ಪ್ರದೇಶವು ವಿಶಾಲವಾಗಿದ್ದರೆ, ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದು ಕಷ್ಟಕರವಾಗುತ್ತದೆ; ಈ ಬಗ್ಗೆ ನಾನು ಮುಂದಿನ ಅಧ್ಯಾಯವೊಂದರಲ್ಲಿ ವಿವೇಚಿಸುತ್ತೇನೆ.

ಇಲ್ಲಿಯವರೆಗೆ ನಾವು ರಾಜಕೀಯವಲಯದಲ್ಲಿನ ವಿವಿಧ ಬಗೆಯ ಆಡಳಿತಗಳನ್ನು ಗಮನಿಸಿದೆವು. ಆದರೆ ಆರ್ಥಿಕ ಸಂಘಟನೆಗಳ ಆಡಳಿತಗಳು ಎಷ್ಟು ಮುಖ್ಯ ಮತ್ತು ವಿಚಿತ್ರವಾದವು ಎಂದರೆ ಅವುಗಳ ಬಗ್ಗೆ ವಿಶೇಷ ವಿಶ್ಲೇಷಣೆಯನ್ನೇ ಮಾಡಬೇಕು.

ಮೊದಲಿಗೆ ಕೈಗಾರಿಕೆಯಿಂದ ಆರಂಭಿಸೋಣ; ಅಲ್ಲಿನದು ಪ್ರಾಚೀನ ಕಾಲದ ನಾಗರಿಕರು ಮತ್ತು ಗುಲಾಮರ ನಡುವಣ ಸಂಬಂಧವನ್ನು ಹೋಲುವಂಥದು. ನಾಗರಿಕರು ಎಂದರೆ ಕೈಗಾರಿಕೆಯಲ್ಲಿ ಬಂಡವಾಳವನ್ನು ತೊಡಗಿಸಿದವರು, ಗುಲಾಮರೆಂದರೆ ಅಲ್ಲಿನ ಕಾರ್ಮಿಕರು. ಈ ಹೋಲಿಕೆಯನ್ನು ನಾನು ಮುಂದುವರಿಸಬಯಸುವುದಿಲ್ಲ. ಸಾಧ್ಯವಾದರೆ ತನ್ನ ಕೆಲಸವನ್ನು ಬದಲಾಯಿಸುವ ಸ್ವಾತಂತ್ರ್ಯವನ್ನು ಹೊಂದಿರುವುದು ಮತ್ತು ಕಾರ್ಖಾನೆಯ ಹೊರಗಿನ ಸಮಯವನ್ನು ತನಗೆ ಇಷ್ಟ ಬಂದಂತೆ ಕಳೆಯಬಹುದು ಎಂಬುವಷ್ಟು ಮಟ್ಟಿಗೆ ಕಾರ್ಮಿಕನು ಗುಲಾಮನಿಗಿಂತ ಭಿನ್ನನಾಗಿರುತ್ತಾನೆ. ನಾನು ಹೋಲಿಸಬಯಸುವುದು ಆಡಳಿತಕ್ಕೆ ಸಂಬಂಧಿಸಿದಂತೆ. ನಿರಂಕುಶಪ್ರಭುತ್ವ, ಸ್ವಲ್ಪಜನಾಧಿಪತ್ಯ ಮತ್ತು ಪ್ರಜಾಪ್ರಭುತ್ವಗಳು ಬೇರೆಯಾಗುವುದು ಅಲ್ಲಿನ ಸ್ವತಂತ್ರ ಜನಗಳ ನಡುವಣ ಸಂಬಂಧವನ್ನು ಅವಲಂಬಿಸಿ; ಆದರೆ ಗುಲಾಮರಾದರೋ ಒಂದೇ ರೀತಿಯವರು. ಹಾಗೆಯೇ ಬಂಡವಾಳಗಾರರ ಕೈಗಾರಿಕೆಯಲ್ಲಿ ಅಧಿಕಾರವು ರಾಜಪ್ರಭುತ್ವ, ಸ್ವಲ್ಪಜನಾಧಿಪತ್ಯ ಹಾಗೂ ಪ್ರಜಾಪ್ರಭುತ್ವ ರೀತ್ಯಾ ಹಂಚಿಕೆಯಾಗಬಹುದು, ಆದರೆ ಕಾರ್ಮಿಕರು, ಅವರೂ ಹಣ ತೊಡಗಿಸಿದವರಾದ ಹೊರತು, ಅದರಲ್ಲಿ ಯಾವ ಪಾಲನ್ನೂ

ಹೊಂದಿರುವುದಿಲ್ಲ, ಪ್ರಾಚೀನ ಕಾಲದ ಗುಲಾಮರಂತೆಯೇ ಅವರಿಗೆ ಅದರ ಮೇಲೆ ಯಾವ ಹಕ್ಕೂ ಇಲ್ಲ ಎಂದೇ ಭಾವಿಸಲಾಗುತ್ತದೆ.

ವ್ಯಾಪಾರಿ ಸಂಸ್ಥೆಗಳು ಸ್ವಲ್ಪಜನಾಧಿಪತ್ಯದ ವಿವಿಧ ಬಗೆಯ ಸಂರಚನೆಯನ್ನು ಹೊಂದಿರುತ್ತವೆ. ಅವು ನೌಕರರನ್ನು ಆಡಳಿತದಿಂದ ಹೊರಗಿರಿಸುವ ಬಗ್ಗೆ ಸದ್ಯಕ್ಕೆ ನಾನು ಆಲೋಚಿಸುತ್ತಿಲ್ಲ; ನನಗಿರುವ ಗಮನವೆಲ್ಲ ಷೇರುದಾರರ ಬಗ್ಗೆ. ಈ ವಿಷಯವನ್ನು ಕುರಿತ ಅತ್ಯುತ್ತಮ ಪುಸ್ತಕದ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ, ಅದೆಂದರೆ ಬರ್ಲ್ ಮತ್ತು ಮೀನ್ಸ್ ಅವರ *'ದ ಮಾಡರ್ನ್ ಕಾರ್ಪೋರೇಷನ್ ಅಂಡ್ ಪ್ರೈವೇಟ್ ಪ್ರಾಪರ್ಟಿ'.* ಅದರಲ್ಲಿನ 'ನಿಯಂತ್ರಣ ಪದ್ಧತಿಯ ವಿಕಾಸ' ಎಂಬ ಅಧ್ಯಾಯದಲ್ಲಿ, ಒಡೆತನದ ವಿಷಯದಲ್ಲಿ ಎಷ್ಟೋ ಸಲ ಅತ್ಯಂತ ಕಡಿಮೆ ಪಾಲು ಪಡೆದ ಸ್ವಲ್ಪಜನಾಧಿಪತ್ಯವು ವ್ಯಾಪಕ ಬಂಡವಾಳದ ಆಡಳಿತದ ಮೇಲೆ ಹಿಡಿತವನ್ನು ಹೊಂದಿರುತ್ತದೆ ಎಂಬ ಅಂಶವು ವಿಶ್ಲೇಷಣೆಗೊಂಡಿದೆ. ಹುಸಿ ಸಮಿತಿಗೆ ಸಂಬಂಧಿಸಿದ ಸಾಧನಗಳ ಮೂಲಕ ಆಡಳಿತಮಂಡಳಿಯು "ವಸ್ತುತಃ ತಮ್ಮ ಉತ್ತರಾಧಿಕಾರಿಗಳನ್ನು ಬೇಕಾದಂತೆ ನಿಯಂತ್ರಿಸಬಲ್ಲರು. ಒಡೆತನವು ಸಾಕಷ್ಟು ಹಂಚಿಕೆಗೊಂಡಿರುವೆಡೆಯಲ್ಲಿ, ತನ್ನ ಭಾಗವು ನಗಣ್ಯವಾಗಿರುವ ಸಂದರ್ಭದಲ್ಲಿಯೂ ಆಡಳಿತಮಂಡಳಿಯು ನಿರಂತರವಾಗಿ ಮುಂದುವರಿಯಬಲ್ಲುದು. ಪ್ರಸ್ತುತ ಲೇಖಕನು ಬೇರೆಡೆಯಲ್ಲಿ ಕಂಡುಕೊಂಡಿರುವ ಇದಕ್ಕೆ ಅತ್ಯಂತ ಸನಿಹದ ಪರಿಸ್ಥಿತಿಯೆಂದರೆ ಕ್ಯಾಥೋಲಿಕ್ ಚರ್ಚ್‌ನ ಸಂಘಟನೆ. ಪೋಪ್ ಕಾರ್ಡಿನಲ್‌ಗಳನ್ನು ಆಯ್ಕೆಮಾಡುತ್ತಾನೆ ಹಾಗೂ ಕಾರ್ಡಿನಲ್‌ಗಳ ಕೂಟವು ಪೋಪ್‌ನ ಉತ್ತರಾಧಿಕಾರಿಯನ್ನು ಆಯ್ಕೆಮಾಡುತ್ತದೆ."[೧] ಈ ಬಗೆಯ ಆಡಳಿತವು *'ಅಮೆರಿಕನ್ ಟೆಲಿಫೋನ್ ಅಂಡ್ ಟೆಲಿಗ್ರಾಫ್ ಕಂಪೆನಿ'* ಮತ್ತು *'ಯುನೈಟೆಡ್ ಸ್ಟೇಟ್ಸ್ ಸ್ಟೀಲ್ ಕಾರ್ಪೋರೇಷನ್'* (ಜನವರಿ ೧ ೧೯೩೦ರಂದು ಇವುಗಳ ಆಸ್ತಿಯು ಕ್ರಮವಾಗಿ ನಾಲ್ಕು ಮತ್ತು ಎರಡು ಬಿಲಿಯನ್ ಡಾಲರ್‌ಗಳು) ಅಂತಹ ಈಗಿನ ಕೆಲವು ಭಾರಿ ವ್ಯಾಪಾರೋದ್ಯಮಗಳಲ್ಲೂ ಇದೆ. ಇವುಗಳಲ್ಲಿ ಎರಡನೆಯ ಕಂಪನಿಯ ಡೈರಕ್ಟರುಗಳು ಎಲ್ಲ ಸೇರಿ ಹೊಂದಿರುವುದು ಶೇಕಡ ಹದಿನಾಲ್ಕರಷ್ಟು ಭಾಗದ ಷೇರುಗಳನ್ನು ಮಾತ್ರ; ಆದರೂ ಆರ್ಥಿಕ ಅಧಿಕಾರವೆಲ್ಲ ಅವರ ಕೈಯಲ್ಲಿ.

---

[೧] ಪುಟಗಳು ೮೭–೮

ವ್ಯಾಪಾರೋದ್ಯಮದ ಸಂಘಟನೆಯ ಸಂಕೀರ್ಣತೆಯು ಯಾವುದೇ ರಾಜಕೀಯ ಸಂಸ್ಥೆಯದಕ್ಕಿಂತಲೂ ಹೆಚ್ಚಿನದು. ಡೈರಕ್ಟರುಗಳು, ಷೇರುದಾರರು, ಡಿಬೆಂಚರ್‌ದಾರರು, ಆಡಳಿತಾಧಿಕಾರಿಗಳು ಮತ್ತು ಸಾಮಾನ್ಯ ನೌಕರರು ಇವರಿಗೆಲ್ಲ ಪ್ರತ್ಯೇಕ ಕಾರ್ಯಗಳಿರುತ್ತವೆ. ಆಡಳಿತಾಧಿಕಾರವು ಸಾಮಾನ್ಯವಾಗಿ ಕೆಲವರಲ್ಲಿ ಮಾತ್ರ ಕೇಂದ್ರೀಕೃತವಾಗಿರುತ್ತದೆ, ಇದರಲ್ಲಿನ ಬಿಡಿ ಘಟಕಗಳೆಂದರೆ ಷೇರುಗಳು, ಷೇರುದಾರರಲ್ಲ, ಡೈರಕ್ಟರುಗಳು ಅವುಗಳ ಚುನಾಯಿತ ಪ್ರತಿನಿಧಿಗಳು. ವಾಸ್ತವದಲ್ಲಿ, ಸಾಧಾರಣವಾಗಿ ಡೈರಕ್ಟರುಗಳಿಗೆ ಷೇರುದಾರರಿಗಂತ ಹೆಚ್ಚಿನ ಅಧಿಕಾರವಿರುತ್ತದೆ, ರಾಜಕೀಯ ಸ್ವಲ್ಪಜನಾಧಿಪತ್ಯದಲ್ಲಿ ವ್ಯಕ್ತಿಗಳಿಗಿಂತ ಅದರ ಸರ್ಕಾರಕ್ಕಿರುವಂತೆ. ಇದಕ್ಕೆ ವಿರುದ್ಧವಾಗಿ, ಕಾರ್ಮಿಕ ಸಂಘಟನೆಗಳು ಪ್ರಬಲವಾಗಿರುವೆಡೆ, ನೌಕರರಿಗೆ ತಮ್ಮ ನೌಕರಿಗೆ ಸಂಬಂಧಿಸಿರುವ ಮಟ್ಟಿಗೆ ಗಣನೀಯ ಅಧಿಕಾರವಿರುತ್ತದೆ. ಬಂಡವಾಳಶಾಹಿ ಉದ್ಯಮಗಳಲ್ಲಿ ವಿಚಿತ್ರವಾದ ಇಬ್ಬಗೆಯ ಉದ್ದೇಶಗಳಿರುತ್ತವೆ: ಒಂದೆಡೆ ಅವು ಸಾರ್ವಜನಕರಿಗೆ ಸಾಮಗ್ರಿಗಳನ್ನೋ ಸೇವೆಯನ್ನೋ ಒದಗಿಸುವುದು ಮತ್ತು ಇನ್ನೊಂದೆಡೆ ಷೇರುದಾರರಿಗೆ ಲಾಭವನ್ನು ನೀಡುವುದು. ರಾಜಕೀಯ ಸಂಘಟನೆಗಳಲ್ಲಾದರೆ, ರಾಜಕಾರಣಿಗಳ ಉದ್ದೇಶ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಮಾತ್ರವಲ್ಲ, ಸಾರ್ವಜನಿಕರ ಒಳಿತನ್ನು ಸಾಧಿಸುವುದು ಕೂಡ. ದಬ್ಬಾಳಿಕೆಯ ಸಂದರ್ಭದಲ್ಲಿಯೂ ಈ ಸೋಗು ಹಾಕುತ್ತಾರೆ. ಹೀಗಾಗಿಯೇ ರಾಜಕಾರಣದಲ್ಲಿ ವ್ಯವಹಾರರಂಗಕ್ಕಿಂತ ಹೆಚ್ಚಿನ ಸೋಗಲಾಡಿತನವಿರುವುದು. ಆದರೆ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ವಿಮರ್ಶೆಗಳ ಸಂಮಿಶ್ರ ಪ್ರಭಾವಕ್ಕೊಳಗಾಗಿ, ಅನೇಕ ಭಾರಿ ವ್ಯಾಪಾರೀ ಕುಳಗಳು ರಾಜಕೀಯ ಠಕ್ಕುತನದ ಕಲೆಯನ್ನು ರೂಢಿಸಿಕೊಂಡಿದ್ದಾರೆ, ಸಾರ್ವಜನಿಕ ಸೇವೆಯ ಮೂಲಕ ಸಂಪತ್ತನ್ನು ಗಳಿಸುವುದೇ ತಮ್ಮ ಗುರಿ ಎಂಬಂತೆ ನಟಿಸುತ್ತಾರೆ. ಇದು ಆಧುನಿಕ ಯುಗದಲ್ಲಿ ರಾಜಕಾರಣ ಮತ್ತು ಆರ್ಥಿಕರಂಗಗಳು ಸಂಯೋಗಗೊಳ್ಳುವ ರೀತಿಯ ಮತ್ತೊಂದು ನಿದರ್ಶನ.

ಸಂಸ್ಥೆಯೊಂದರ ಆಡಳಿತ ಮಾದರಿಯು ಬದಲಾವಣೆಗೊಳ್ಳುವ ರೀತಿಗಳನ್ನು ಕುರಿತು ಕೆಲವು ಮಾತಗಳನ್ನು ಹೇಳಬೇಕಾಗಿದೆ. ಈ ಬಗ್ಗೆ ಚರಿತ್ರೆಯು ಯಾವುದೇ ನಿರ್ದಿಷ್ಟ ಮಾರ್ಗಸೂಚಿಯನ್ನು ನೀಡುವುದಿಲ್ಲ. ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಲ್ಲಿ ಸಂಪೂರ್ಣ ರಾಜಪ್ರಭುತ್ವವು ಚಾರಿತ್ರಿಕ ದಾಖಲೆಗಳ ಆರಂಭಕಾಲದ ಹೊತ್ತಿಗೇ ಪೂರ್ತಿಯಾಗಿ ರೂಪುಗೊಂಡಿತ್ತು ಎಂಬುದನ್ನಾಗಲೇ ಗಮನಿಸಿದ್ದೇವೆ; ಮನವಶಾಸ್ತ್ರೀಯ ಪುರಾವೆಗಳ ಆಧಾರದ ಮೇಲೆ, ಅದು ಮೊದಲು ಹಿರಿಯರ ಪರಿಷತ್ತಿಗೆ

ಸೀಮಿತವಾಗಿದ್ದ ಮುಖ್ಯಸ್ಥರ ಅಧಿಕಾರದಿಂದ ಚಿಗುರೊಡೆಯಿತೆಂದು ಹೇಳಬಹುದು. ಇಡೀ ಏಷ್ಯಾದಲ್ಲಿ (ಚೀನಾವನ್ನು ಬಿಟ್ಟು) ಸಂಪೂರ್ಣ ರಾಜಪ್ರಭುತ್ವವು ಮಿಕ್ಕಾವುದೇ ಬಗೆಯ ಆಡಳಿತಕ್ಕೆ ಬದಲಾವಣೆಗೊಂಡ, ಯೂರೋಪಿಯನ್ ಪ್ರಭಾವಕ್ಕೆ ಒಳಗಾದ ಪ್ರಸಂಗಗಳ ಹೊರತು, ಯಾವ ಚಿಹ್ನೆಗಳೂ ಕಾಣುವುದಿಲ್ಲ. ಯೂರೋಪ್‌ನಲ್ಲಿ, ಇದಕ್ಕೆ ವಿರುದ್ಧವಾಗಿ, ಅದು ಚಾರಿತ್ರಿಕ ಕಾಲದಲ್ಲಿ ಎಂದೂ ಹೆಚ್ಚು ಅವಧಿಗಳಲ್ಲಿ ಸ್ಥಿರವಾಗಿರಲಿಲ್ಲ. ಮಧ್ಯಯುಗಗಳಲ್ಲಿ ಊಳಿಗಮಾನ್ಯ ಪ್ರಭುಗಳ ಅಧಿಕಾರ ಹಾಗೂ ಹೆಚ್ಚು ಪ್ರಮುಖವಾದ ವಾಣಿಜ್ಯ ನಗರಗಳ ಸ್ವಾಯತ್ತತೆಗಳು ರಾಜರ ಅಧಿಕಾರಕ್ಕೆ ಮಿತಿಯನ್ನುಂಟುಮಾಡಿದ್ದವು. ರಿನೇಸಾನ್ಸ್‌ನ ಬಳಿಕ ಯೂರೋಪ್‌ನಾದ್ಯಂತ ರಾಜರ ಅಧಿಕಾರವು ಹೆಚ್ಚಿತು, ಆದರೆ ಈ ಹೆಚ್ಚಳವು ಮಧ್ಯಮ ವರ್ಗದ ಉದಯದಿಂದಾಗಿ ಕೊನೆಗೊಂಡಿತು; ಇದು ಮೊದಲು ಇಂಗ್ಲಂಡ್‌ನಲ್ಲಿ, ಆನಂತರ ಫ್ರಾನ್ಸ್‌ನಲ್ಲಿ, ಮುಂದೆ ಪಶ್ಚಿಮ ಯೂರೋಪ್‌ನ ಉಳಿದ ಕಡೆಗಳಲ್ಲಿ ಸಂಭವಿಸಿತು. ೧೯೧೮ರ ಆರಂಭದಲ್ಲಿ ಬೋಲ್ಷೆವಿಕ್‌ರು ಸಂವಿಧಾನ ಸಭೆಯನ್ನು ರದ್ದುಗೊಳಿಸುವವರೆಗೂ ಇಡೀ ನಾಗರಿಕ ಜಗತ್ತಿನಾದ್ಯಂತ ಸಂಸದೀಯ ಪ್ರಜಾಪ್ರಭುತ್ವವೇ ಸ್ಥಾಪನೆಗೊಳ್ಳುತ್ತದೆಂದು ಭಾವಿಸಿದ್ದಂತೆ ತೋರುತ್ತದೆ.

ಪ್ರಜಾಪ್ರಭುತ್ವದಿಂದ ದೂರ ಸರಿಯುವುದೇನೂ ಹೊಸ ಸಂಗತಿಯಲ್ಲ. ಸಾಮ್ರಾಜ್ಯಗಳು ಸ್ಥಾಪನೆಗೊಂಡಾಗ ಅನೇಕ ಗ್ರೀಕ್ ನಗರ ದೇಶಗಳಲ್ಲಿ, ರೋಮ್‌ನಲ್ಲಿ ಹಾಗೂ ಮಧ್ಯಯುಗೀನ ಇಟಲಿಯ ವಾಣಿಜ್ಯ ಗಣರಾಜ್ಯಗಳಲ್ಲಿ ಹೀಗಾಯಿತು. ಪ್ರಜಾಪ್ರಭುತ್ವ ಸ್ಥಾಪನೆಗೆ ಅಥವಾ ಅದರಿಂದ ದೂರ ಸರಿಯುವುದಕ್ಕೆ ಕಾರಣವಾಗುವ ವಿವಿಧ ಬೆಳವಣಿಗೆಗಳನ್ನು ನಿರ್ದಿಷ್ಟವಾಗಿ ಕಂಡುಕೊಳ್ಳಲು ಸಾಧ್ಯವೇ?

ಹಿಂದೆ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದ್ದ ಎರಡು ಮಹಾ ಪ್ರಭಾವಗಳೆಂದರೆ ಸಂಪತ್ತು ಮತ್ತು ಯುದ್ಧ. ಮೆಡಿಸಿ ಮತ್ತು ನೆಪೋಲಿಯನ್‌ರನ್ನು ಈ ಎರಡರ ಸಂಕೇತವೆಂದು ನಾವು ಪರಿಗಣಿಸಬಹುದು. ವ್ಯಾಪಾರದ ಮೂಲಕ ಸಂಪತ್ತನ್ನು ಗಳಿಸುವ ಜನರು ಸಾಮಾನ್ಯವಾಗಿ ಭೂಮಾಲೀಕತ್ವದಿಂದಾಗಿ ಅಧಿಕಾರ ಗಳಿಸಿಕೊಂಡ ಜನರಿಗಿಂತಲೂ ಕಡಿಮೆ ಒರಟುತನದಿಂದ ಕೂಡಿರುತ್ತಾರೆ ಹಾಗೂ ಹೆಚ್ಚು ಹೊಂದಾಣಿಕೆಯ ಸ್ವಭಾವದವರಾಗಿರುತ್ತಾರೆ; ಹೀಗಾಗಿಯೇ ಅವರು ಆನುವಂಶೀಯವಾಗಿಯೋ ಸಾಂಪ್ರದಾಯಿಕ ಮಾರ್ಗದಿಂದಲೋ ಅಧಿಕಾರವನ್ನು ಪಡೆದವರಿಗಿಂತ ಹೆಚ್ಚು ಚಾಕಚಕ್ಯತೆಯಿಂದ ಅಧಿಕಾರವನ್ನು ಹಿಡಿಯುವ ದಿಸೆಯಲ್ಲಿ ಪ್ರವರ್ತಿಸುತ್ತಾರೆ, ಹಾಗೂ ತಮ್ಮ ವಿರುದ್ಧ ಜನರು

ಸೆಟೆದೇಳದ ರೀತಿಯಲ್ಲಿ ಆನಂತರ ಆಡಳಿತವನ್ನು ನಿರ್ವಹಿಸುತ್ತಾರೆ. ನಿದರ್ಶನಕ್ಕೆ, ವೆನಿಸ್‌ನಲ್ಲಿ ಅಥವಾ ಹ್ಯಾನ್ಸಿಯಾಟಿಕ್ ಲೀಗ್‌ನ ನಗರಗಳಲ್ಲಿ ವ್ಯಾಪಾರ ಮಾಡಿ ಪರಕೀಯರನ್ನು ಸುಲಿಯುವ ಮೂಲಕ ಸಂಪತ್ತನ್ನು ಗಳಿಸಿದ್ದರಿಂದ ವ್ಯಾಪಾರಿಗಳಿಗೆ, ದುಡಿಮೆದಾರರ ಬೆವರಿನಿಂದ ತನ್ನ ಮಹಲನ್ನು ನಿರ್ಮಿಸಿಕೊಳ್ಳುವ ಕೈಗಾರಿಕೋದ್ಯಮಿಗಾಗುವಂತೆ, ಸ್ವಂತ ನೆಲದಲ್ಲಿ ಯಾವ ವಿರೋಧವೂ ವ್ಯಕ್ತಗೊಳ್ಳಲಿಲ್ಲ. ಹೀಗಾಗಿ ವ್ಯಾಪಾರಪ್ರಧಾನ ಸಮುದಾಯದಲ್ಲಿ ಅತ್ಯಂತ ಸಹಜವೂ ಸ್ಥಿರವೂ ಆದ ಆಡಳಿತದ ಬಗೆಯೆಂದರೆ ಪ್ರಭಾವೀ ಕುಟುಂಬಗಳ ಆಧಿಪತ್ಯ. ಅವರಲ್ಲಿ ಒಂದು ಕುಟುಂಬವು ಮಿಕ್ಕವಕ್ಕಿಂತ ಬಹು ಹೆಚ್ಚು ಶ್ರೀಮಂತವಾಗಿದ್ದರೆ, ಅದು ಸಲೀಸಾಗಿ ರಾಜಪ್ರಭುತ್ವಕ್ಕೆ ಎಡೆಮಾಡಿಕೊಡುತ್ತದೆ.

ಯುದ್ಧವು ಮತ್ತಷ್ಟು ತೀವ್ರವೂ ಭಿನ್ನವೂ ಆದ ಉಗ್ರ ಮನೋಭಾವದ ಕಾರಣದಿಂದ ನಡೆಯುತ್ತದೆ. ಜನರು ನಾಯಕನ್ನು ಬಯಸುವುದು ಭಯದ ಕಾರಣದಿಂದ, ಯಶಸ್ವೀ ಮುಂದಾಳು ಹಿಂಬಾಲಕರಲ್ಲಿ ಗಾಢವಾದ ಮೆಚ್ಚಿಕೆಯನ್ನುಂಟುಮಾಡುತ್ತಾನೆ. ಮೆಚ್ಚಿಕೆ ಎಂಬುದು ಭಯದ ಹಿಂಬದಿಯ ಮಗ್ಗುಲು. ಸದ್ಯಕ್ಕೆ ಗೆಲುವು ನಿಜವಾದ ಪ್ರಾಮುಖ್ಯವಿರುವ ವಿಷಯವಾದ್ದರಿಂದ, ಪರಮಾಧಿಕಾರವನ್ನು ತನ್ನ ಕೈಯಲ್ಲಿಡುವಂತೆ ಯಶಸ್ವೀ ಮುಂದಾಳು ದೇಶವನ್ನು ಒಲಿಸಿಕೊಳ್ಳುತ್ತಾನೆ. ಬಿಕ್ಕಟ್ಟು ಎಲ್ಲಿಯವರೆಗೆ ಮುಂದುವರಿಯವುದೋ, ಅವನು ಅನುವಾರ್ಯವೆಂಬಂತೆ ಜನರು ಭಾವಿಸುತ್ತಾರೆ; ಅದು ಮುಗಿಯುವ ಹೊತ್ತಿಗೆ ಅವನನ್ನು ಕೆಳಗಿಳಿಸುವುದು ತೀರ ಕಷ್ಟದಾಯಕವಾಗಬಹುದು.

ಪ್ರಜಾಪ್ರಭುತ್ವ ವಿರುದ್ಧದ ಆಧುನಿಕ ಚಳುವಳಿಗಳು, ಯುದ್ಧಮನೋಭಾವದೊಂದಿಗೆ ಸಂಬಂಧಿಸಿದ್ದರೂ, ಅವುಗಳನ್ನು ನೆಪೋಲಿಯನ್‌ನ ದೃಷ್ಟಾಂತಕ್ಕೆ ಹೋಲಿಸಲಾಗದು. ಒಟ್ಟಾರೆ ಹೇಳುವುದಾದರೆ, ಜರ್ಮನ್ ಮತ್ತು ಇಟಾಲಿಯನ್ ಪ್ರಜಾಪ್ರಭುತ್ವಗಳು ಪತನಗೊಂಡಿದ್ದಕ್ಕೆ ಕಾರಣ ಬಹುಸಂಖ್ಯೆಯ ಜನರು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದ್ದರು ಎಂಬುದರಿಂದಲ್ಲ, ಸೈನ್ಯಬಲವು ಬಹುಸಂಖ್ಯಾತರ ಪರವಾಗಿರಲಿಲ್ಲ ಎಂಬುದರಿಂದ. ನಾಗರಿಕ ಸರ್ಕಾರವು ಸೈನ್ಯದ ಮುಖ್ಯಸ್ಥನಿಗಿಂತ ಯಾವಾಗಲಾದರೂ ಹೆಚ್ಚು ಬಲಿಷ್ಠವಾಗಿರಬಲ್ಲುದೆಂಬುದು ವಿಚಿತ್ರವಾಗಿ ಕಾಣಿಸಿದರೂ, ಪ್ರಜಾಪ್ರಭುತ್ವವು ಜನರ ಸ್ವಭಾವದಲ್ಲಿ ಆಳವಾಗಿ ನೆಲೆಯೂರಿದ ದೇಶಗಳಲ್ಲಿ ಇದು ನಿಜ. ಸೈನ್ಯದ ಮುಖ್ಯಸ್ಥನ್ನು ನೇಮಿಸುವಾಗ ಲಿಂಕನ್ ಹೇಳಿದ: "ಸರ್ವಾಧಿಕಾರವೇ ನಿಮ್ಮ ಮನಸ್ಸಿನಲ್ಲಿರುವ ಗುರಿ ಎಂದು ಜನ ಹೇಳುತ್ತಾರೆ. ಇದನ್ನು ಸಾಧಿಸುವ

ಮಾರ್ಗವೆಂದರೆ ಯುದ್ಧಗಳಲ್ಲಿ ಗೆಲುವನ್ನು ಪಡೆಯುವುದು. ಈ ಗೆಲವನ್ನು ನಾನು ನಿಮ್ಮಿಂದ ನಿರೀಕ್ಷಿಸುತ್ತೇನೆ, ಅದರಿಂದ ಸರ್ವಾಧಿಕಾರ ಸ್ಥಾಪನೆಯಾಗುವ ಅಪಾಯವಿದ್ದರೂ ಸರಿಯೇ." ಇದನ್ನು ಅವನು ಅನಾಯಾಸವಾಗಿ ಸಾಧಿಸಬಹುದಾಗಿತ್ತು, ಯಾಕೆಂದರೆ ನಾಗರಿಕ ಸರ್ಕಾರದ ವಿರುದ್ಧದ ದಾಳಿಯಲ್ಲಿ ಯಾವ ಅಮೆರಿಕನ್ ಸೈನ್ಯವೂ ತನ್ನ ಮುಖ್ಯಸ್ಥನನ್ನು ಅನುಸರಿಸುತ್ತಿರಲಿಲ್ಲ. ಹದಿನೇಳನೆಯ ಶತಮಾನದಲ್ಲಿ, ದೀರ್ಘಾವಧಿಯ ಸಂಸತ್ತನ್ನು (ಲಾಂಗ್ ಪಾರ್ಲಿಮೆಂಟ್) ವಿಸರ್ಜಿಸುವ ವಿಷಯದಲ್ಲಿ ಕ್ರಾಮ್‌ವೆಲ್‌ನ ಸೈನಿಕರು ಅವನ ಆಜ್ಞೆಯನ್ನು ಪಾಲಿಸಲು ತಯಾರಾಗಿದ್ದರು; ಆದರೆ ಅದೇ ಹತ್ತೊಂಬತ್ತನೆಯ ಶತಮಾನದಲ್ಲಿ, ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಅಂಥದೊಂದು ಆಲೋಚನೆಯನ್ನು ಪಡೆದಿದ್ದರೆ ಅವನ್ನು ಒಬ್ಬನಾದರೂ ಅನುಸರಿಸುತ್ತಿರಲಿಲ್ಲ.

ಪ್ರಜಾಪ್ರಭುತ್ವವು ಹೊಸತಾಗಿ ಹುಟ್ಟಿಕೊಳ್ಳುವುದು ಹಿಂದಿನ ಅಧಿಕಾರಸ್ಥರ ವಿರುದ್ಧದ ಆಕ್ರೋಶದ ಕಾರಣದಿಂದ; ಆದರೆ ಹೊಸತಾಗಿರುವಷ್ಟು ಕಾಲವೂ ಅದು ಅಸ್ಥಿರವಾಗಿರುತ್ತದೆ. ಹಿಂದಿನ ರಾಜರು ಅಥವಾ ಸ್ವಲ್ಪಜನಾಧಿಪತ್ಯಗಳ ವಿರುದ್ಧವಾಗಿದ್ದ ಜನರು ರಾಜಪ್ರಭುತ್ವವನ್ನೋ ಸ್ವಲ್ಪಜನಾಧಿಪತ್ಯವನ್ನೋ ಮತ್ತೆ ಸ್ಥಾಪಿಸುವಲ್ಲಿ ಸಫಲರಾಗಬಹುದು: ಬೂರ್ಬನ್‌ರು ಮತ್ತು ಹೊಹೆಂಝೋಲರ್ನ್‌ರು ಪಡೆಯಲಾಗದ ಜನಬೆಂಬಲವನ್ನು ನೆಪೋಲಿಯನ್ ಮತ್ತು ಹಿಟ್ಲರ್ ಪಡೆದರು. ಪ್ರಜಾಪ್ರಭುತ್ವವು ಪರಂಪರೆಯ ಭಾಗವಾಗಿರುವ ದೇಶಗಳಲ್ಲಿ ಮಾತ್ರ ಅದು ಸ್ಥಿರವಾಗಿರಬಲ್ಲುದು. ಕ್ರಾಮ್‌ವೆಲ್, ನೆಪೋಲಿಯನ್ ಮತ್ತು ಹಿಟ್ಲರ್‌ಗಳು ಆಯಾ ದೇಶದಲ್ಲಿನ ಪ್ರಜಾಪ್ರಭುತ್ವದ ಆರಂಭದ ದಿನಗಳಲ್ಲಿ ಕಾಣಿಸಿಕೊಂಡವರು. ಮೊದಲೆರಡು ನಿದರ್ಶನಗಳ ಹಿನ್ನೆಲೆಯಲ್ಲಿ, ಮೂರನೆಯದು ಆಶ್ಚರ್ಯಕರವಾಗಿ ಕಾಣಿಸಲಾರದು. ಅಂತೆಯೇ ಹಿಟ್ಲರ್ ತನ್ನ ಹಿಂದಿನವರಿಗಿಂತ ಹೆಚ್ಚು ಶಾಶ್ವತನೆಂದೂ ಭಾವಿಸಲಾಗದು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಡೆದಿದ್ದ ಘನತೆಯನ್ನು ಪ್ರಜಾಪ್ರಭುತ್ವವು ಮತ್ತೆ ಅನತಿ ಭವಿಷ್ಯದಲ್ಲಿ ಗಳಿಸಲು ಸಾಧ್ಯವಾದೀತೇ ಎಂಬುದರ ಬಗ್ಗೆ ಕೆಲವು ಪ್ರಬಲವಾದ ಸಂದೇಹಗಳು ನಮ್ಮನ್ನು ಕಾಡುತ್ತವೆ. ಪ್ರಜಾಪ್ರಭುತ್ವದ ಸ್ಥಿರತೆಗೆ ಅದೊಂದು ರೂಢಿಯಾಗಬೇಕು ಎಂಬ ಅಂಶವನ್ನು ನಾವು ಪ್ರತಿಪಾದಿಸುತ್ತಲೇ ಬಂದಿದ್ದೇವೆ. ಹಾಗೆ ರೂಢಿಯಂತೆ ನೆಲೆಯೂರಲು ಬೇಕಾಗುವ ಪ್ರಕ್ರಿಯೆಗಳು ಪೂರ್ವ ಯೂರೋಪ್ ಮತ್ತು ಏಷ್ಯಾಗಳಲ್ಲಿ ನಡೆಯುವುದು ಎಷ್ಟರಮಟ್ಟಿಗೆ ಸಾಧ್ಯವಾದೀತು?

ಎಲ್ಲ ಕಾಲದಲ್ಲಿಯೂ ಸರ್ಕಾರಗಳ ಮೇಲೆ ಸೈನಿಕ ತಂತ್ರಗಳು ಗಾಢ ಪ್ರಭಾವವನ್ನು ಬೀರುತ್ತಲೇ ಬಂದಿವೆ. ರೋಮ್ ಪ್ರಜಾಪ್ರಭುತ್ವದ ಕಡೆಗೆ ಸಾಗುತ್ತಿದ್ದ ದಿನಗಳಲ್ಲಿ, ರೋಮನ್ ಸೈನ್ಯದಲ್ಲಿದ್ದವರು ರೋಮನ್ ಪ್ರಜೆಗಳು; ವೃತ್ತಿ ಸೈನಿಕರನ್ನು ಸೇರಿಸಿಕೊಂಡದ್ದೇ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾಯಿತು. ಪಾಳೇಗಾರ ಶ್ರೀಮಂತ ಬಲವು ದುರ್ಗಮವಾದ ಕೋಟೆಗಳ ಮೇಲೆ ಅವಲಂಬಿತವಾಗಿತ್ತು, ಇದು ಫರಂಗಿಪಡೆಯ ಸ್ಥಾಪನೆಯಿಂದ ಕೊನೆಗೊಂಡಿತು. ಫ್ರೆಂಚ್ ಕ್ರಾಂತಿಯ ತರಬೇತಿಯೇ ಇಲ್ಲದ ಎನ್ನಬಹುದಾದ ಭಾರಿ ಸೈನ್ಯಗಳು ತಮಗೆದುರಾದ ಸಣ್ಣ ಸಣ್ಣ ವೃತ್ತಿಪರ ಸೈನ್ಯಗಳನ್ನು ಸೋಲಿಸಿದ್ದು ಉದ್ದೇಶಸಾಧನೆಯಲ್ಲಿ ಜನರ ಉತ್ಸಾಹವು ಎಂತಹ ಪ್ರಮುಖ ಪಾತ್ರವಹಿಬಲ್ಲುದೆಂಬುದನ್ನು ತೋರಿಸಿತು; ಇದರಿಂದ ಪ್ರಜಾಪ್ರಭುತ್ವಕ್ಕೆ ಸೈನ್ಯದಿಂದ ಆಗಬಹುದಾದ ಅನುಕೂಲಗಳ ಪರಿಯನ್ನು ಸೂಚಿಸಿತು. ಸಂಖ್ಯೆ ಕಡಿಮೆಯಾದರೂ ಬಹು ಒಳ್ಳೆಯ ತರಬೇತಿ ಪಡೆದ ಜನರಿಂದ ಕೂಡಿದ ಸೈನ್ಯವು ಎಷ್ಟು ಆವಶ್ಯಕವೆಂಬುದು ವಿಮಾನಪಡೆಯ ಮೂಲಕ ಅರಿತುಕೊಳ್ಳುವ ಪರಿಸ್ಥಿತಿಗೆ ನಾವು ಮರಳುತ್ತಿರುವಂತೆ ತೋರುತ್ತದೆ. ಹೀಗಾಗಿ, ಭಾರಿ ಯುದ್ಧದ ಭಯವನ್ನು ಎದುರಿಸುತ್ತಿರುವ ಯಾವುದೇ ದೇಶದ ಸರ್ಕಾರವು ಪ್ರಜಾಪ್ರಭುತ್ವದಂತಿರದ ಆದರೆ ವಿಮಾನಪಡೆಯು ಇಷ್ಟಪಡುವ ಮಾದರಿಯದಾಗಿರುತ್ತದೆಂದು ನಿರೀಕ್ಷಿಸಬಹುದು.

ಆದರೆ ಇದರ ವಿರುದ್ಧವಾದ ಕೆಲವು ಅಂಶಗಳಿವೆ. ಯುದ್ಧದಲ್ಲಿ ಪಾಲುಗೊಂಡಿರಲಿ ಇಲ್ಲದಿರಲಿ, ಮಹಾಯುದ್ಧದಲ್ಲಿ ಅಮೆರಿಕವು ಮಾತ್ರವೇ ಗೆಲ್ಲವುದೆಂದು ಭಾವಿಸಬಹುದು, ಆದರೆ ಅದು ಪ್ರಜಾಪ್ರಭುತ್ವವನ್ನು ಕಿತ್ತೆಸೆಯುತ್ತದೆಂದು ನಿರೀಕ್ಷಿಸಲಾಗದು. ಫ್ಯಾಸಿಸಂನ ಶಕ್ತಿಯ ಬಹುಪಾಲು ಯುದ್ಧದಲ್ಲಿ ಅದಕ್ಕಿರುವ ಅನುಕೂಲಗಳಿಂದ ಪ್ರಾಪ್ತವಾಗಿರುವಂತಹುದು; ಇವುಗಳು ಕಣ್ಮರೆಯಾದ ಪಕ್ಷದಲ್ಲಿ ಪ್ರಜಾಪ್ರಭುತ್ವವು ಮತ್ತೆ ಪೂರ್ವದತ್ತ ಪಸರಿಸುವ ಸಾಧ್ಯತೆಯಿದೆ. ದೀರ್ಘ ಭವಿಷ್ಯದಲ್ಲಿ, ಶಿಕ್ಷಣ ಮತ್ತು ದೇಶಭಕ್ತಿಗಳ ಹೊರತಾಗಿ ಬೇರಾವುದೂ ಒಂದು ದೇಶಕ್ಕೆ ಯುದ್ಧಾನುಕೂಲಗಳನ್ನು ಒದಗಿಸಲಾರದು. ಫ್ಯಾಸಿಸಂನ ಪುನರುಜ್ಜೀವಕ ಶಕ್ತಿಗಳು ದೇಶಭಕ್ತಿಯನ್ನು ತಾತ್ಕಾಲಿಕವಾಗಿ ಉಕ್ಕಿಸಬಹುದಾದರೂ ಅಂತಹ ಮಾರ್ಗಗಳು, ಮತಧಾರ್ಮಿಕ ಕ್ಷೇತ್ರದ ಸುದೀರ್ಘ ಅನುಭವವು ಈಗಾಗಲೇ ಸಾಬೀತುಪಡಿಸಿರುವಂತೆ, ಕೊನೆಯಲ್ಲಿ ಬೇಸರಿಕೆ ಮತ್ತು ಹಿನ್ನಡೆಗಳನ್ನುಂಟುಮಾಡುವುದು ನಿಶ್ಚಿತ. ಹೀಗಾಗಿ, ಒಟ್ಟಾರೆ, ಈಗ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಅದು ಉಳಿಯುವುದನ್ನೂ

ಸದ್ಯಕ್ಕೆ ಗ್ರಹಣಕ್ಕೊಳಗಾಗಿರುವ ದೇಶಗಳಲ್ಲಿ ಅದು ಮರಳುವುದನ್ನೂ ಸೈನ್ಯಪರ ವಾದಗಳು ಮುನ್‌ಸೂಚಿಸುತ್ತವೆ. ಆದರೆ ಇದಕ್ಕೆ ವಿರುದ್ಧವಾದುದು ಸಂಭವಿಸುವುದೂ ಅಸಾಧ್ಯವಾದುದೇನಲ್ಲ.

–೦–೦–೦–

ಅಧ್ಯಾಯ ೧೩

ಸಂಘಟನೆಗಳು ಹಾಗೂ ವ್ಯಕ್ತಿ

ಸಮುದಾಯಗಳಲ್ಲಿ ವಾಸಿಸುವುದು ಲಾಭಕರವೆಂದು ಮಾನವರು ಭಾವಿಸುತ್ತಾರೆ, ಆದರೆ ಅವರ ಬಯಕೆಗಳು ಜೇನುಗೂಡಿನಲ್ಲಿರುವ ಹುಳುಗಳಿಗಿರುವಂತಿರದೆ ವೈಯಕ್ತಿಕವಾಗಿರುತ್ತವೆ; ಹೀಗಾಗಿ ಸಮಾಜ ಜೀವನದ ಕಷ್ಟಗಳು ಹಾಗೂ ಆಡಳಿತ ವ್ಯವಸ್ಥೆಯೊಂದರ ಆವಶ್ಯಕತೆಗಳು ಉದ್ಭವಿಸುತ್ತವೆ. ಅಲ್ಲದೆ ಮತ್ತೊಂದು ಕಾರಣಕ್ಕೂ ಸರ್ಕಾರದ ಆವಶ್ಯಕತೆಯಿರುತ್ತದೆ: ಅದಿಲ್ಲದೆ ಉಳಿಯುವುದು ನಾಗರಿಕ ಜನರಿರುವ ದೇಶಗಳಿಗೆ ಕಷ್ಟದಾಯಕ, ಉಳಿದರೂ ತೀರ ನಿಕೃಷ್ಟ ಪರಿಸ್ಥಿಯಲ್ಲಿರಬೇಕಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಸಕಾರ್ರವೆಂದರೆ ಅಧಿಕಾರದ ಅಸಮಾನ ಹಂಚಿಕೆ, ಅದು ಯಾರ ಕೈಲಿ ಗರಿಷ್ಠವಾಗಿರುತ್ತದೋ ಅವರು ತಮ್ಮ ಬಯಕೆಗಳನ್ನು ಪೂರೈಸಿಕೊಳ್ಳುವ ಸಲುವಾಗಿಯೇ ಅದನ್ನು ಬಳಸುತ್ತಾರೆಯೇ ವಿನಾ ಎಲ್ಲರ ಹಿತ ಕಾಪಾಡಲು ಅಲ್ಲ. ಹೀಗಾಗಿ ಅನಾಯಕತ್ವ ಹಾಗೂ ದರ್ಪಿಷ್ಟಪ್ರಭುತ್ವಗಳೆರಡೂ ವಿನಾಶಕಾರಕವೇ; ಅದರಿಂದಾಗಿ ಮಾನವ ಕಲ್ಯಾಣ ಸಾಧನಗೆ ಸ್ವಲ್ಪಮಟ್ಟಿಗೆ ಹೊಂದಾಣಿಕೆ ಅಗತ್ಯ.

ಈ ಅಧ್ಯಾಯದಲ್ಲಿ ನಾನು ಪರಿಶೀಲಿಸಬಯಸುವುದು, ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದ ಸಂಘಟನೆಯನ್ನು ಕುರಿತೇ ಹೊರತು ಒಂದು ನಿರ್ದಿಷ್ಟ ಸಂಘಟನೆಗೆ ಸಂಬಂಧಿಸಿದ ವ್ಯಕ್ತಿಗಳ ಬಗ್ಗೆ ಅಲ್ಲ. ಈ ಪರಿಸ್ಥಿತಿಯು ಪ್ರಜಾಸತ್ತಾತ್ಮಕ ಹಾಗೂ ಸರ್ವಾಧಿಕಾರಿ ದೇಶಗಳಲ್ಲಿ ತೀರ ಭಿನ್ನವಾಗಿರುತ್ತದೆ. ಯಾಕೆಂದರೆ ಸರ್ವಾಧಿಕಾರಿ ದೇಶಗಳಲ್ಲಿ ಕೆಲವನ್ನು ಹೊರತುಪಡಿಸಿ ಸಂಬಂಧಪಟ್ಟ ಎಲ್ಲ ಸಂಘಟನೆಗಳೂ ಸರ್ಕಾರದ ವಿವಿಧ ಇಲಾಖೆಗಳೇ ಆಗಿರುತ್ತವೆ. ಆದರೆ ಪ್ರಾಥಮಿಕ ವಿಶ್ಲೇಷಣೆಯಲ್ಲಿ ಈ ಭಿನ್ನತೆಯನ್ನು ಪರಿಗಣಿಸದಿರಲು ಆದಷ್ಟೂ ಪ್ರಯತ್ನಿಸುತ್ತೇನೆ.

ಸಾರ್ವಜನಿಕವಾಗಲೀ ಖಾಸಗಿಯಾಗಲೀ, ಸಂಘಟನೆಗಳು ವ್ಯಕ್ತಿಯೊಬ್ಬನ ಮೇಲೆ ಎರಡು ರೀತಿಗಳಲ್ಲಿ ಪ್ರಭಾವ ಬೀರುತ್ತವೆ. ಅವುಗಳಲ್ಲಿ ಕೆಲವು ವ್ಯಕ್ತಿಯ ಬಯಕೆಗಳ ಅಥವಾ ಅವನ ಆಸಕ್ತಿಗಳ ಪೂರೈಕೆಯ ದೃಷ್ಟಿಯಿಂದಲೇ ರೂಪಿತವಾದವು; ಮತ್ತೆ ಕೆಲವು ಇತರರ ನ್ಯಾಯಯುತ

ಹಿತಾಸಕ್ತಿಗಳಿಗೆ ವ್ಯಕ್ತಿಗಳು ಅಡ್ಡಗಾಲು ಹಾಕುವುದನ್ನು ತಪ್ಪಿಸಲೆಂದು ರೂಪಿತವಾದವು. ಈ ಎರಡರ ನಡುವಣ ವ್ಯತ್ಯಾಸ ಖಚಿತವಾದುದೇನಲ್ಲ: ಪೋಲೀಸರು ಇರುವುದು ಪ್ರಾಮಾಣಕ ವ್ಯಕ್ತಿಗಳ ಹಿತವನ್ನು ಕಾಪಾಡಲು, ಹಾಗೆಯೇ ಕಳ್ಳಕಾಕರನ್ನು ನಿಯಂತ್ರಿಸಲು; ಆದರೆ ಕಳ್ಳಕಾಕರ ಜೀವನದ ಮೇಲೆ ಅವರು ಬೀರುವ ಪ್ರಭಾವವು ಕಾನೂನುಪಾಲಕರ ಜೊತೆ ಇಟ್ಟುಕೊಳ್ಳುವ ಸಂಪರ್ಕಕ್ಕಿಂತ ತುಂಬ ಹೆಚ್ಚಿನದು. ಈ ಭಿನ್ನತೆಯ ಕುರಿತು ಚರ್ಚಿಸಲು ಇಷ್ಟರಲ್ಲಿಯೇ ಮರಳುತ್ತೇನೆ; ಆದರೆ ಈ ಕ್ಷಣದಲ್ಲಿ, ನಾಗರಿಕ ಸಮಾಜಗಳಲ್ಲಿನ ವ್ಯಕ್ತಿಗಳ ಜೀವನದಲ್ಲಿ ಕೆಲವು ಸಂಘಟನೆಗಳು ವಹಿಸುವ ಪಾತ್ರದ ಬಗೆಗಿನ ತುಂಬ ಪ್ರಮುಖವಾದ ಅಂಶಗಳನ್ನು ಕುರಿತು ಪರಿಶೀಲಿಸೋಣ

ಮೊದಲಿಗೆ, ಹುಟ್ಟಿನ ಸನ್ನಿವೇಶದ ಬಗ್ಗೆ: ಹಿಂದಾದರೆ ಸ್ವಲ್ಪವಾದರೂ ತರಬೇತಿಯಿಲ್ಲದ ಮಿಸಿಸ್ ಗ್ಯಾಂಪ್‌ಳಂತಹವರೇ ಸಾಕು ಎಂಬ ಭಾವನೆಯಿದ್ದದ್ದು ಈಗ, ಸಾರ್ವಜನಿಕ ಸಂಸ್ಥೆಯು ನಿಗದಿಪಡಿಸಿದ ತಕ್ಕಮಟ್ಟಿಗಿನ ಕೌಶಲವನ್ನು ಪಡೆದ ಒಬ್ಬ ವೈದ್ಯ ಅಥವಾ/ಮತ್ತು ಸೂಲಗಿತ್ತಿಯ ಸೇವೆಯು ಅತ್ಯವಶ್ಯಕ ಎಂದು ಭಾವಿಸುವಂತಾಗಿದೆ. ಇಡೀ ಶೈಶವ ಮತ್ತು ಬಾಲ್ಯಗಳ ಆರೋಗ್ಯವು ಸ್ವಲ್ಪಮಟ್ಟಿಗೆ ಸರ್ಕಾರದ ಜವಾಬ್ದಾರಿಯೆನಿಸಿದೆ; ವಿವಿಧ ದೇಶಗಳಲ್ಲಿನ ಈ ಜವಾಬ್ದಾರಿಯ ವ್ಯಾಪಕತೆಯನ್ನು ನಾವು ಆಯಾ ದೇಶಗಳಲ್ಲಿನ ಶಿಶು ಮತ್ತು ಬಾಲಮರಣಗಳ ಪ್ರಮಾಣದ ಮೇಲೆ ಸರಿಸುಮಾರು ಖಚತವಾಗಿಯೇ ನಿರ್ಧರಿಸಬಹುದು. ತಮ್ಮ ಜವಾಬ್ದಾರಿಯ ನಿರ್ವಹಣೆಯಲ್ಲಿ ತಂದೆತಾಯಿಗಳು ತೀರ ಹೊಣೆಗೇಡಿಗಳಾದರೆ, ಮಗುವಿನ ಹೊಣೆಯನ್ನು ಸಾರ್ವಜನಿಕ ಪ್ರಾಧಿಕಾರವೇ ತೆಗೆದುಕೊಂಡು ಯಾವುದೋ ಸಂಸ್ಥೆಯ ಪೋಷಕತ್ವಕ್ಕೆ ವಹಿಸಬಹುದು. ಮಗುವಿಗೆ ಐದಾರು ವರ್ಷಗಳು ತುಂಬಿದಾಗ ಅದು ಶೈಕ್ಷಣಿಕ ಪ್ರಾಧಿಕಾರದ ವ್ಯಾಪ್ತಿಗೊಳಪಡುತ್ತದೆ; ಆನಂತರ ಅನೇಕ ವರ್ಷಗಳ ಕಾಲ ಅದು ಪ್ರತಿಯೊಬ್ಬ ನಾಗರಿಕನೂ ತಿಳಿಯಬೇಕೆಂದು ಸರ್ಕಾರವು ನಿರೀಕ್ಷಿಸುವ ವಿಷಯಗಳನ್ನು ಕಲಿಯಬೇಕಾಗುತ್ತದೆ. ಈ ಪ್ರಕ್ರಿಯೆಯ ಕೊನೆಯಲ್ಲಿ, ಬಹುಪಾಲು ಸನ್ನಿವೇಶಗಳಲ್ಲಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಬಹುಪಾಲು ಅಭಿಪ್ರಾಯಗಳೂ ಅಭ್ಯಾಸಗಳೂ ರೂಪಿತವಾಗಿರುತ್ತವೆ.

ಈ ಮಧ್ಯೆ, ಪ್ರಜಾಸತ್ತಾತ್ಮಕ ದೇಶಗಳಲ್ಲಿ, ಸರ್ಕಾರವು ಹೇರುವಂತಹವುಗಳಲ್ಲದೆ ಮಗುವು ಇನ್ನೂ ಅನೇಕ ಪ್ರಭಾವಗಳಿಗೊಳಗಾಗುತ್ತದೆ. ತಾಯ್ತಂದೆಯರು ಧಾರ್ಮಿಕ ಅಥವಾ

ರಾಜಕೀಯ ಮನೋಭಾವದವರಾಗಿದ್ದರೆ, ಅವರು ಮಗುವಿಗೆ ಯಾವುದೋ ಮತದ ಅಥವಾ ಪಕ್ಷದ ಸಿದ್ಧಾಂತಗಳನ್ನು ಹೇಳಿಕೊಡುತ್ತಾರೆ. ಬೆಳೆದಂತೆಲ್ಲ ಮಗುವು, ಸಿನಿಮ ಅಥವಾ ಫುಟ್‌ಬಾಲ್‌ಗಳಂತಹ ಸಂಘಟಿತ ಮನರಂಜನಾ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸಕ್ತಿ ತಾಳುತ್ತದೆ. ಮಗು ತುಸುವೇ, ಹೆಚ್ಚಲ್ಲ, ಬುದ್ಧಿವಂತವಾಗಿದ್ದರೆ ಅದರ ಮೇಲೆ ಪತ್ರಿಕೆಗಳ ಪ್ರಭಾವವುಂಟಾಗಬಹುದು. ಅದು ಸರ್ಕಾರೇತರ ಶಾಲೆಗೆ ಹಾಜರಾದರೆ, ವಿಚಿತ್ರ ಎನ್ನಬಹುದಾದ ಕೆಲವು ಅಂಶಗಳಿಂದ ಕೂಡಿದ ಮನೋಭಾವವನ್ನು ರೂಪಿಸಿಕೊಳ್ಳಬಹುದು; ಇಂಗ್ಲಂಡ್‌ನಲ್ಲಾದರೆ, ಅದು ತಾನು ಸಾಮಾನ್ಯರಿಗಿಂತ ಮಿಗಿಲು ಎಂಬ ಸಾಮಾಜಿಕ ಮೇಲರಿಮೆ. ಈ ಮಧ್ಯೆ ಅದು ತನ್ನ ವಯಸ್ಸು ವರ್ಗ ಮತ್ತು ದೇಶದ ನೈತಿಕ ನಡಾವಳಿ ಸೂತ್ರಗಳನ್ನು ಅಳವಡಿಸಿಕೊಳ್ಳಬಹುದು. ನೈತಿಕ ನಡಾವಳಿ ಬಹು ಮುಖ್ಯ, ಆದರೆ ಅದನ್ನು ಸೂತ್ರೀಕರಿಸಿ ಹೇಳುವುದು ಕಷ್ಟ, ಏಕೆಂದರೆ ಅಷ್ಟೇನೂ ಖಚಿತವಾಗಿ ನಿರೂಪಿಸಲಾಗದ ಮೂರು ಮುಖ್ಯ ಬಗೆಗಳಿಗೆ ಅವು ಸೇರುತ್ತವೆ: ಮೊದಲನೆಯದಾಗಿ, ಜನರಿಗೆ ನೋವುಂಟುಮಾಡದಂತಹ ನಡಾವಳಿಯನ್ನು ನಿಜವಾಗಿ ಅನುಸರಿಸುವುದು; ಎರಡನೆಯದಾಗಿ, '*ರಾಜಾರೋಷ*'ವಾಗಿ ಉಲ್ಲಂಘಿಸಬಾರದಂತಹವು; ಮತ್ತು ಮೂರನೆಯದಾಗಿ, ಪರಿಪೂರ್ಣತೆಗೆ ಅನುವು ಮಾಡಿಕೊಡುವ, ಸಂತರು ಮಾತ್ರ ಅನುರಿಸಬಹುದಾದಂತಹವು. ಇಡೀ ಜನಮುದಾಯಕ್ಕೆ ಅನ್ವಯಿಸುವ ನೈತಿಕ ನಡಾವಳಿಯೆಂದರೆ, ಮುಖ್ಯವಾಗಿ ಆದರೆ ಇಡಿಯಾಗಿ ಎಂದೇನಲ್ಲ, ಧಾರ್ಮಿಕ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುವ, ಆದರೆ ಹೆಚ್ಚು ಕಡಿಮೆ ಕಾಲದಲ್ಲಿ ನಾಶವಾಗದ ಸಂಪ್ರದಾಯದ ಪರಿಣಾಮದಿಂದಾದವುಗಳು. ಕೆಲವು ವೃತ್ತಿ ನಡಾವಳಿಗಳೂ ಇವೆ: ಒಬ್ಬ ಅಧಿಕಾರಿ, ವೈದ್ಯ, ಬ್ಯಾರಿಸ್ಟರ್ ಮುಂತಾದವರು ಅನುಸರಣೆ ಮಾಡಬಾರದಂತಹವು. ಇಂತಹ ನಡಾವಳಿಗಳನ್ನು, ಆಧುನಿಕ ಯುಗದಲ್ಲಿ, ಸಾಮಾನ್ಯವಾಗಿ ವೃತ್ತಿನಿರತರ ಸಂಸ್ಥೆಗಳು ರೂಪಿಸಿರುತ್ತವೆ, ಅವು ಕಡ್ಡಾಯವಾದವು: ದ್ವಂದ್ವಯುದ್ಧದ ಬಗ್ಗೆ ಚರ್ಚ್ ಮತ್ತು ಸೈನ್ಯಗಳ ನಡುವೆ ಭಿನ್ನಾಭಿಪ್ರಾಯಗಳಿದ್ದರೆ, ಸೈನ್ಯಾಧಿಕಾರಿಗಳಿಗೆ ಸೈನಿಕ ನಡಾವಳಿ ಅನ್ವಯಿಸುತ್ತದೆ; ವೈದ್ಯಕೀಯ ಮತ್ತು ತಪ್ಪೊಪ್ಪಿಕೆಯ ರಹಸ್ಯವು ಕಾನೂನಿಗೆ ವಿರುದ್ಧವಾಗಿಯೂ ಚಾಲತಿಗೊಳ್ಳುತ್ತವೆ.

ಒಬ್ಬ ಯುವಕನೋ ಯುವತಿಯೋ ಸಂಪಾದನೆ ಮಾಡಲು ತೊಡಗಿದಾಕ್ಷಣ ಅನೇಕ ಸಂಘಟನೆಗಳು ಅವನ/ಳ ಚಟುವಟಿಕೆಗಳ ಮೇಲೆ ಪ್ರಭಾವ ಬೀರಲು ಆರಂಭಿಸುತ್ತವೆ. ನೌಕರಿದಾರ ಸಾಮಾನ್ಯವಾಗಿ ಒಂದು

ಸಂಘಟನೆಯೇ ಆಗಿರುತ್ತದೆ; ಇದಲ್ಲದೆ, ಅದೊಂದು ನೌಕರದಾರರ ಒಕ್ಕೂಟವೂ ಆಗಿರುವ ಸಾಧ್ಯತೆಗಳಿರುತ್ತವೆ. ಕಾರ್ಮಿಕ ಸಂಘ ಹಾಗೂ ಸರ್ಕಾರಗಳೆರಡೂ ಕೆಲಸದ ಹಲವಾರು ಮುಖ್ಯ ಅಂಶಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತವೆ: ವಿಮೆ ಮತ್ತು ಕೈಗಾರಿಕಾ ಕಾನೂನುಗಳಂತಹ ವಿಷಯಗಳಲ್ಲದೆ, ತೆರಿಗೆಗಳು ಹಾಗೂ ಸರ್ಕಾರಿ ಆಜ್ಞೆಗಳ ಮೂಲಕ ವ್ಯಕ್ತಿಯೊಬ್ಬನು ಆರಿಸಿಕೊಂಡಿರುವ ವೃತ್ತಿಯು ಏಳಿಗೆಗೊಳ್ಳುತ್ತದೆಯೋ ಅಥವಾ ಅದನ್ನು ದಮನಿಸಬೇಕೋ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ಸರ್ಕಾರವು ಸಹಾಯ ಮಾಡಬಹುದು. ಕೈಗಾರಿಕೆಯ ಅಭಿವೃದ್ಧಿಯು, ನಾಣ್ಯಚಲಾವಣೆ, ಅಂತಾರಾಷ್ಟ್ರೀಯ ಸಂದರ್ಭ ಅಥವಾ ಜಪಾನ್‌ನ ಮಹತ್ವಾಕಾಂಕ್ಷೆಯಂತಹ ಎಲ್ಲ ರೀತಿಯ ಪರಿಸ್ಥಿತಿಗಳಿಂದಲೂ ಪ್ರಭಾವಕ್ಕೊಳಗಾಗಬಹುದು.

ಮದುವೆ ಮತ್ತು ಮಕ್ಕಳ ಬಗೆಗಿನ ಕರ್ತವ್ಯಗಳ ಕಾರಣದಿಂದ ವ್ಯಕ್ತಿಯು ಮತ್ತೆ ಕಾನೂನಿನೊಡನೆ ಹಾಗೂ ಮುಖ್ಯವಾಗಿ ಚರ್ಚ್ ನಿಗದಿಗೊಳಿಸುವಂತಹ ನೀತಿ ನಡಾವಳಿಗಳೊಡನೆ ಸಂಪರ್ಕಕ್ಕೆ ಬರಬೇಬೇಕಾಗುತ್ತದೆ. ಅವನೇನಾದರೂ ದೀರ್ಘಾಯುಷಿಯಾದ ಬಡವನಾಗಿದ್ದರೆ ಕೊನೆಯಲ್ಲಿ ವೃದ್ಧಾಪ್ಯ ವೇತನದ ಸೌಲಭ್ಯವನ್ನು ಪಡೆಯಬಹುದು; ಸತ್ತಾಗ ಅವನ ಸಾವು ಸ್ವಂತ ಇಚ್ಛೆಯಿಂದ ಅಥವಾ ಬೇರೆಯವರಿಂದ ನಡೆದುದಲ್ಲ ಎಂದು ಖಚಿತಪಡಿಸಿಕೊಳ್ಳಲು ಕಾನೂನು ಹಾಗೂ ವೈದ್ಯ ಇಲಾಖೆಗಳು ಸಾಕಷ್ಟು ಗಮನ ಹರಿಸುತ್ತವೆ.

ಕೆಲವು ವಿಷಯಗಳನ್ನು ಮಾತ್ರ ವೈಯಕ್ತಿಕ ಆಸಕ್ತಿಯಿಂದ ಮಾತ್ರವೇ ನಿರ್ಧರಿಸಬೇಕಾಗುವುದು. ಗಂಡಸೊಬ್ಬನು ತನ್ನ ಆಸೆಯಂತೆ ಮದುವೆಯಾಗಬಹುದು, ಆದರೆ ಅವನು ಕೈಹಿಡಿಯಬಯಸುವ ಹೆಣ್ಣು ಅವನನ್ನು ಒಪ್ಪಬೇಕು; ಅವನಿಗೆ ಚಿಕ್ಕ ವಯಸ್ಸಿನಲ್ಲಿ ತಾನು ಕೈಗಳ್ಳಬೇಕಾದ ಜೀವನೋಪಾಯದ ಬಗ್ಗೆ ಪ್ರಾಯಶಃ ಸ್ವಲ್ಪಮಟ್ಟಿಗಿನ ಸ್ವಾತಂತ್ರ್ಯವಿರುತ್ತದೆ; ಬಿಡುವಿನ ವೇಳೆಯನ್ನು ಅವನು ತನಗೆ ಬೇಕಾದಂತೆ, ಆದರೆ ಕೈಗೆಟುಕುವ ಮಿತಿಯಲ್ಲಿ, ಕಳೆಯಬಹುದು; ಅವನಿಗೇನಾದರೂ ಮತಧರ್ಮದಲ್ಲಿಯೋ ರಾಜಕೀಯದಲ್ಲಿಯೋ ಆಸಕ್ತಿಯಿದ್ದರೆ ತನಗಿಷ್ಟ ಬಂದ ಪಂಥಕ್ಕೋ ಪಕ್ಷಕ್ಕೋ ಸೇರಿಕೊಳ್ಳಬಹುದು. ಮದುವೆಯ ವಿಚಾರದ ಹೊರತು, ಮಿಕ್ಕಂತೆ ಆಯ್ಕೆಯ ಸ್ವಾತಂತ್ರ್ಯವಿದ್ದರೂ ಅದರ ಪೂರೈಕೆಗಾಗಿ ಅವನು ಕೆಲವು ಸಂಘಟನೆಗಳನ್ನು ಅವಲಂಬಿಸಬೇಕಾಗುತ್ತದೆ; ಅಸಾಧಾರಣ ವ್ಯಕ್ತಿಯಾಗಿರದಿದ್ದರೆ ಅವನು ತನ್ನದೇ ಪಂಥವನ್ನೋ ಪಕ್ಷವನ್ನೋ ಫುಟ್‌ಬಾಲ್ ಕ್ಲಬ್ ಅನ್ನೋ ಸ್ಥಾಪಿಸಲಾರ ಅಥವಾ ತನಗೆ ಬೇಕಾದ ಮದ್ಯವನ್ನು ತಾನೇ

ತಯಾರುಮಾಡಿಕೊಳ್ಳಲಾರ. ಅವನಿಗಿರುವುದು ಈಗಾಗಲೇ ಅಸ್ತಿತ್ವದಲ್ಲಿರುವವುಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ; ಆದರೆ ಪೈಪೋಟಿಯ ಕಾರಣದಿಂದ, ಲಭ್ಯ ಆರ್ಥಿಕ ಮಿತಿಗಳಲ್ಲಿಯೇ, ಇವುಗಳು ಆದಷ್ಟೂ ಆಕರ್ಷಣೀಯವಾಗಿ ರೂಪುಗೊಂಡಿರುತ್ತವೆ.

ಇಲ್ಲಿಯವರೆಗೆ, ಸಂಘಟನೆಗಳ ಪ್ರಭಾವವು ನಾಗರಿಕ ಸಮಾಜಗಳಲ್ಲಿನ ವ್ಯಕ್ತಿಯ ಸ್ವಾತಂತ್ರ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಕಾರ್ಯಶೀಲವಾಗಿವೆಯೇ ಹೊರತು, ತೌಲನಿಕವಾಗಿ ಕಡಿಮೆ ಅಭಿವೃದ್ಧಿ ಪಡೆದ ರೈತಾಪಿ ಸಮುದಾಯದಲ್ಲಿನದಲ್ಲ. ಉದಾಹರಣೆಗೆ ಚೀನೀ ರೈತನೊಬ್ಬನ ಜೀವನವನ್ನು ಪೌರ್ವಾತ್ಯ ಜಗತ್ತಿನ ನೌಕರನದರೊಡನೆ ಹೋಲಿಸಿ. ಮಗುವಾಗಿದ್ದಾಗ ಅವನು ಶಾಲೆಗೆ ಹೋಗಬೇಕಾದದ್ದಿಲ್ಲ ಎಂಬುದು ನಿಜವಾದರೂ ಬಹು ಚಿಕ್ಕ ವಯಸ್ಸಿನಿಂದಲೇ ದುಡಿಮೆಗೆ ಆರಂಭಿಸಬೇಕು. ಅತಿ ಶ್ರಮದಿಂದಲೋ ವೈದ್ಯಕೀಯ ಸೌಲಭ್ಯದ ಕೊರತೆಯಿಂದಲೋ ಅವನು ಚಿಕ್ಕ ವಯಸ್ಸಿನಲ್ಲಿಯೇ ಸಾಯುವ ಸಂಭವವು ಹೆಚ್ಚು. ಬದುಕುಳಿದರೂ ತನ್ನ ಜೀವನೋಪಾಯದ ಬಗ್ಗೆ, ಸೈನಿಕನೋ ದರೋಡೆಕೋರನೋ ಆಗುವುದು ಅಥವಾ ನೌಕರಿಯನ್ನರಸಿಕೊಂಡು ದೊಡ್ಡ ನಗರವೊಂದಕ್ಕೆ ವಲಸೆ ಹೋಗುವುದನ್ನು ಬಿಟ್ಟರೆ, ಅವನಿಗೆ ಆಯ್ಕೆಯ ಅವಕಾಶವೇ ಇರುವುದಿಲ್ಲ. ಮದುವೆಯ ವಿಷಯದ ಹೊರತಾಗಿ ಸಂಪ್ರದಾಯವು ಅವನಿಗೆ ಕೊಡಮಾಡುವ ಸ್ವಾತಂತ್ರ್ಯವು ಕನಿಷ್ಠವಾದುದು. ಅವನಿಗೆ ಪುರುಸೊತ್ತೆಂಬುದು ಇರುವುದೇ ಇಲ್ಲ ಎನ್ನಬಹುದು, ಅಲ್ಪ ಸ್ವಲ್ಪ ಇದ್ದರೂ ಅದನ್ನು ಸಂತೋಷಾಗಿ ಕಳೆಯುವ ಅವಕಾಶಗಳಂತೂ ಇರುವುದಿಲ್ಲ. ಅವನ ಸಂಪಾದನೆಯೆಲ್ಲ ಬದುಕುಳಿಯಲಿಕ್ಕಷ್ಟೇ ಸಾಕು; ಬರಗಾಲದ ಸನ್ನಿವೇಶಗಳಲ್ಲಂತೂ ಅವನ ಸಂಸಾರದ ಬಹುಜನರು ಸಾವಿಗೆ ತುತ್ತಾಗುವ ಸಂಭವವಿರುತ್ತದೆ. ಗಂಡಸಿನ ಜೀವನವು ಕಷ್ಟದಾಯಕವಾದದ್ದಾದರೆ, ಅವನ ಹೆಂಡತಿ ಮತ್ತು ಹೆಣ್ಣುಮಕ್ಕಳ ಬದುಕು ಮತ್ತಷ್ಟು ದುರ್ಭರವಾದುದು. ಸಾಮಾನ್ಯ ಚೀನೀ ರೈತನದರೊಡನೆ ಹೋಲಿಸಿದರೆ ಇಂಗ್ಲಂಡ್‌ನ ನಿರುದ್ಯೋಗಿಯ ಜೀವನವು ಸ್ವರ್ಗಸದೃಶವೆನ್ನಬಹುದಾದುದು.

ಮತ್ತೊಂದು ಬಗೆಯ ಸಂಘಟನೆಗಳ ಬಗ್ಗೆ ಹೇಳಬಹುದಾದರೆ, ಅದು ಇತರರಿಗೆ ನೋವುಂಟುಮಾಡುವುದನ್ನು ತಪ್ಪಿಸಲು ರೂಪಿತವಾದವುಗಳು; ಇವುಗಳಲ್ಲಿ ಅತ್ಯಂತ ಮುಖ್ಯವಾದವು ಪೋಲೀಸ್ ವ್ಯವಸ್ಥೆ ಮತ್ತು ಅಪರಾಧ ಕಾನೂನು ಸಂಹಿತೆ. ಕೊಲೆ, ದರೋಡೆ, ಹಲ್ಲೆ ಮುಂತಾದ ಹಿಂಸಾತ್ಮಕ ಅಪರಾಧಗಳನ್ನು ನಿಯಂತ್ರಿಸುವುದರ ಮೂಲಕ

ಇವು ಕೆಲವು ಮಂದಿ ಹಿಂಸಾರಭಸಮತಿಗಳನ್ನು ಬಿಟ್ಟರೆ ಉಳಿದವರ ಸೌಖ್ಯ–ಸ್ವಾತಂತ್ರ್ಯವನ್ನು ಹೆಚ್ಚಿಸುತ್ತವೆ. ಪೋಲೀಸ್ ನಿಯಂತ್ರಣವಿಲ್ಲದ ಕಡೆಗಳಲ್ಲಿ ಕೊಲೆಗಾರರು ಬಹು ಬೇಗ ಭಯದ ವಾತಾವರಣವನ್ನು ಸೃಷ್ಟಿಸುತ್ತಾರೆ, ಇದರಿಂದಾಗಿ ಈ ಪುಂಡರ ಹೊರತು ನಾಗರಿಕ ಸಮಾಜದ ಸಂತೋಷಗಳಿಗೆ ಮುಕ್ಕಾಗುತ್ತದೆ. ಆದರೆ ಇದರಲ್ಲಿ ಒಂದು ಅಪಾಯವೂ ಇದೆ: ಪೋಲೀಸರೇ ಪುಂಡರಾಗುವುದೋ ಅಥವಾ ಸ್ವಲ್ಪ ಮಟ್ಟಿಗಿನ ದೌರ್ಜನ್ಯಕಾರಕ ಸನ್ನಿವೇಶ ನಿರ್ಮಾಣಮಾಡುವ ಸಾಧ್ಯತೆಯೋ ಇರುತ್ತದೆ. ಈ ಅಪಾಯ ಕೇವಲ ಕಲ್ಪನೆಯದೇನಲ್ಲ, ಆದರೆ ಅದರೊಡನೆ ಹೊಂದಿಕೊಳ್ಳುವ ಪರಿಗಳು ಮಾತ್ರ ಎಲ್ಲರಿಗೂ ತಿಳಿದದ್ದೇ. ಇನ್ನೊಂದು ಅಪಾಯವೆಂದರೆ, ಅಧಿಕಾರದ ಚುಕ್ಕಾಣಿ ಹಿಡಿದಿರುವವರು ಅಪೇಕ್ಷಣೀಯ ಸುಧಾರಣೆಗಳಾಗುವುದನ್ನು ತಪ್ಪಿಸಲು ಪೋಲೀಸರನ್ನು ಬಳಸಿಕೊಳ್ಳುವ ಸಾಧ್ಯತೆ. ಇಂತಹುದು ಸ್ವಲ್ಪಮಟ್ಟಿಗಾದರೂ ಸಂಭವಿಸುವುದನ್ನು ತಪ್ಪಿಸುವುದು ಪ್ರಾಯಶಃ ಅಸಾಧ್ಯ. ಅನಾಯಕತ್ವವನ್ನು ತಪ್ಪಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳುವುದರಲ್ಲಿಯೋ ಅಥವಾ ಬದಲಾವಣೆಯನ್ನು ತರಬೇಕಾದ ಅನಿವಾರ್ಯ ಸಂದರ್ಭದಲ್ಲಿಯೋ ಪರಿಸ್ಥಿತಿಯನ್ನು ಹೆಚ್ಚು ಕಷ್ಟಕರವಾಗಿಸಬೇಕಾದ ಮೂಲಭೂತ ತೊಂದರೆಯ ಭಾಗ ಇದು. ಇಂಥ ಕಷ್ಟಗಳಿದ್ದರೂ, ಇಡೀ ಪೋಲೀಸ್ ವ್ಯವಸ್ಥೆಯನ್ನೇ ತೆಗೆದುಹಾಕಬಹುದಾದ ಸಾಧ್ಯತೆಯ ಬಗ್ಗೆ ನಾಗರಿಕ ಸಮಾಜದ ಸದಸ್ಯರು ಆಲೋಚಿಸಲಾರರು.

ಇದುವರೆಗೆ ನಾವು ಯುದ್ಧ ಅಥವಾ ಕ್ರಾಂತಿಯ ಬಗ್ಗೆಯಾಗಲೀ ಅವುಗಳ ಭಯದ ಬಗ್ಗೆಯಾಗಲೀ ಗಮನ ಹರಿಸಿಲ್ಲ. ಇವುಗಳ ಹಿಂದೆ ಸರ್ಕಾರದ ಸ್ವರಕ್ಷಣೆಯ ಹಾಗೂ ಅದರಿಂದಾಗಿ ವೈಯಕ್ತಿಕ ಬದುಕಿನ ಮೇಲೆ ತೀವ್ರತರವಾದ ನಿಯಂತ್ರಣಗಳನ್ನು ಹೇರುವ ಪ್ರವತ್ತಿಯು ಅಡಗಿದೆ. ಯೂರೋಪಿನ ಬಹುತೇಕ ದೇಶಗಳಲ್ಲಿ ಕಡ್ಡಾಯ ಸೈನ್ಯ ಸೇವೆ ಜಾರಿಯಲ್ಲಿದೆ. ಯುದ್ಧವು ಆರಂಭಗೊಂಡರೆ ಯುದ್ಧದಲ್ಲಿ ಪಾಲ್ಗೊಳ್ಳಲು ಸೈನಿಕ ವಯೋಮಾನದ ಎಲ್ಲ ಗಂಡಸರಿಗೆ ಹಾಗೂ ಗೆಲವಿಗೆ ಪೂರಕವೆಂದು ಸರ್ಕಾರ ಭಾವಿಸುವ ಕಾರ್ಯಗಳನ್ನು ನಿರ್ವಹಿಸಲು ಎಲ್ಲ ಯುವಜನತೆಗೆ ಕರೆ ನೀಡಬಹುದಾದ ಪದ್ಧತಿ ಎಲ್ಲೆಡೆ ಇದೆ. ಶತ್ರುವಿಗೆ ಸಹಾಯಕವಾಗುವ ಎಲ್ಲ ಬಗೆಯ ಕಾರ್ಯಗಳಿಗೂ ಮರಣದಂಡನೆ ವಿಧಿಸಬಹುದಾದ ಅವಕಾಶವೂ ಇದೆ. ಎಲ್ಲ ಸರ್ಕಾರಗಳೂ, ಸಂದರ್ಭವೊದಗಿದಾಗ ಯುದ್ಧದಲ್ಲಿ ಪಾಲ್ಗೊಳ್ಳಲು ಸಿದ್ಧವಾಗುವಂತೆ ಹಾಗೂ ಎಲ್ಲ ಸಂದರ್ಭಗಳಲ್ಲೂ ದೇಶನಿಷ್ಠೆಯನ್ನು ಹೊಂದಿರಲು ಜನರ ಮನಸ್ಸನ್ನು ರೂಪಿಸಲು ಆವಶ್ಯಕವಾದ ಕ್ರಮಗಳನ್ನು – ಕೆಲವು ಹೆಚ್ಚು, ಮತ್ತೆ ಕೆಲವು

ಕಡಿಮೆ ತೀವ್ರತೆಯಿಂದ – ಶಾಂತಿಕಾಲದಲ್ಲಿ ಕೈಗೊಳ್ಳುತ್ತವೆ. ಕ್ರಾಂತಿಯ ಸಂಭಾವ್ಯತೆಗನುಗುಣವಾಗಿ ಅದರ ಬಗ್ಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳು ವ್ಯತ್ಯಾಸಗೊಳ್ಳುತ್ತವೆ. ಮಿಕ್ಕೆಲ್ಲ ಅಂಶಗಳು ಸಮಾನವಾಗಿದ್ದು, ಪ್ರಜೆಗಳ ಹಿತವನ್ನು ಲಕ್ಷಿಸದ ಸರ್ಕಾರವಿರುವೆಡೆ ಕ್ರಾಂತಿಯ ಸಂಭವನೀಯತೆಯು ಹೆಚ್ಚು. ಆದರೆ ಸರ್ವಾಧಿಕಾರವಿರುವ ಕಡೆಗಳಲ್ಲಿ, ಭೌತಿಕ ಹಿಂಸೆ ಮಾತ್ರವಲ್ಲ, ನೈತಿಕ ಹಾಗೂ ಆರ್ಥಿಕ ಅನುನಯವು ಕೂಡ ಸರ್ಕಾರದ ಏಕಸ್ವಾಮ್ಯಕ್ಕೆ ಸೇರಿರುವುದರಿಂದಲೂ, ಕ್ರಾಂತಿಕಾರಿ ಮನೋಭಾವದ ಪ್ರಚಾರ ಮತ್ತು ಸಂಘಟನೆ ಸುಲಭವಲ್ಲದ್ದರಿಂದಲೂ, ಕಡಿಮೆ ನಿಷ್ಠುರ ಸರ್ಕಾರವಿರುವ ಕಡೆಗಳಲ್ಲಿಗಿಂತ ಅದು ಇನ್ನೂ ದೂರ ಸಾಗಬಹುದು. ಸರ್ಕಾರವು ಜನಸಮುದಾಯಕ್ಕಿಂತ ಸ್ಪಷ್ಟವಾಗಿ ಭಿನ್ನವಾಗಿರುವಾಗ, ಅದರ ಅಧಿಕಾರ ಹೆಚ್ಚಾದಷ್ಟೂ ಜನರ ಹಿತದ ಬಗ್ಗೆ ಅದರ ಅವಗಣನೆಯೂ ಹೆಚ್ಚುವಂತಾಗುತ್ತದೆ.

ಈ ಮೇಲಿನ ಸಂಕ್ಷಿಪ್ತ ಸಮೀಕ್ಷೆಯಿಂದ ತಿಳಿದು ಬರುವ ವಿಷಯವೆಂದರೆ, ಮುಖ್ಯವಾಗಿ, ಸರ್ಕಾರದ ಸ್ವರಕ್ಷಣೆಯ ಕಾರಣದಿಂದಾಗುವುಗಳಲ್ಲದೆ ಸಂಘಟನೆಗಳಿಂದಾಗುವ ಪರಿಣಾಮಗಳು ವೈಯಕ್ತಿಕ ಸೌಖ್ಯ ಹಾಗೂ ಸಂತೋಷಗಳನ್ನು ಹೆಚ್ಚಿಸುವಂಥವು. ಶಿಕ್ಷಣ, ಆರೋಗ್ಯ, ಕೈಗಾರಿಕೋತ್ಪನ್ನಗಳು, ಬಡತನವನ್ನು ಹೋಗಲಾಡಿಸುವ ಕ್ರಮಗಳು ಇಂಥವು ತಾತ್ವಿಕವಾಗಿಯಾದರೂ ವಿವಾದಾತೀತವಾದವು; ಇವೆಲ್ಲವೂ ಅತ್ಯಂತ ಬಿಗಿಯಾದ ಸಂಘಟನೆಗಳ ಮೇಲೆ ಅವಲಂಬಿತವಾದವು. ಆದರೆ ಕ್ರಾಂತಿಯನ್ನಾಗಲೀ ಯುದ್ಧದ ಸೋಲನ್ನಾಗಲೀ ತಪ್ಪಿಸಲು ಕೈಗೊಳ್ಳುವ ಕ್ರಮಗಳ ಬಗೆಗಿನ ವಿಷಯವೇ ಬೇರೆ. ಅಂಥ ಕ್ರಮಗಳು ಎಷ್ಟೇ ಆವಶ್ಯಕವೆಂದು ಭಾವಿಸಲಿ, ಅವುಗಳಿಂದಾಗುವ ಪರಿಣಾಮಗಳು ಅಸಂತುಷ್ಟಿಯನ್ನುಂಟು ಮಾಡುವಂಥವು; ಕ್ರಾಂತಿ ಅಥವಾ ಯುದ್ಧದ ಸೋಲಿನ ಪರಿಣಾಮಗಳು ಇವುಗಳಿಗಿಂತಲೂ ಹೆಚ್ಚು ಭಯಾನಕವಾದವೆಂಬ ಕಾರಣ ಹೇಳಿ ಅವುಗಳನ್ನು ಸಮರ್ಥಿಸಿಕೊಳ್ಳಬಹುದು, ಅಷ್ಟೆ. ಅವುಗಳಲ್ಲಿನ ವ್ಯತ್ಯಾಸ ಕೇವಲ ಪ್ರಮಾಣದ್ದು ಮಾತ್ರ. ವ್ಯಾಕ್ಸಿನೇಷನ್, ಶಿಕ್ಷಣ ಮತ್ತು ರಸ್ತೆ ನಿರ್ಮಾಣ ಇವುಗಳು ಕೂಡ ಅಸಂತುಷ್ಟಿಯುಂಟುಮಾಡುವಂತಹವೇ, ಆದರೆ ಅವು ಕ್ರಮವಾಗಿ ಸಿಡುಬು, ಅಜ್ಞಾನ ಮತ್ತು ಮುಂದೆ ಸರಿಯಲಾಗದ ಕೆಸರು ದಾರಿಗಿಂತ ಉತ್ತಮ. ಇವುಗಳ ನಡುವಣ ವ್ಯತ್ಯಾಸ ಎಷ್ಟು ಹೆಚ್ಚೆಂದರೆ, ಅದು ಕೇವಲ ಪ್ರಮಾಣದ್ದು ಮಾತ್ರವಾಗಿರದೆ ಭಿನ್ನ ಸ್ವರೂಪದ್ದೇ ಆಗಿರುತ್ತದೆ. ಅಲ್ಲದೆ, ಶಾಂತಿಯುತ ಪ್ರಗತಿಯ ಕ್ರಮಗಳಿಂದ ಉಂಟಾಗುವ

ಅಸಂತುಷ್ಟಿಯು ತಾತ್ಕಾಲಿಕವಾದುದು ಮಾತ್ರ. ಸಿಡುಬನ್ನು ನಿರ್ಮೂಲ ಮಾಡಬಹುದು, ಆಗ ವ್ಯಾಕ್ಸಿನೇಷನ್ ಅನವಶ್ಯಕವಾಗುತ್ತದೆ. ಹೆಚ್ಚು ಸುಧಾರಿತ ಕ್ರಮಗಳಿಂದಾಗಿ ಶಿಕ್ಷಣ ಮತ್ತು ರಸ್ತೆ ನಿರ್ಮಾಣಗಳಿಂದಾಗುವ ಅಸಂತುಷ್ಟಿಯನ್ನು ಕಡಿಮೆ ಮಾಡಬಹುದು. ಆದರೆ ಪ್ರತಿಯೊಂದು ತಾಂತ್ರಿಕ ನೈಪುಣ್ಯದಿಂದಲೂ ಯುದ್ಧವು ಹೆಚ್ಚು ಹೆಚ್ಚು ವಿನಾಶಕಾರಿಯಾಗುತ್ತದೆ; ಅಂತೆಯೇ, ಕ್ರಾಂತಿಯನ್ನು ತಪ್ಪಿಸಲು ಕೈಗೊಳ್ಳುವ ನಿರಂಕುಶ ಕ್ರಮಗಳು ಮಾನವಕುಲ ಹಾಗೂ ಬುದ್ಧಿವಂತಿಕೆಗಳಿಗೆ ಮಾರಕವಾಗುತ್ತದೆ.

ವ್ಯಕ್ತಿ ಹಾಗೂ ವಿವಿಧ ಸಂಘಟನೆಗಳ ನಡುವಣ ಸಂಬಂಧವನ್ನು ಮತ್ತೊಂದು ರೀತಿಯಲ್ಲಿಯೂ ವರ್ಗೀಕರಿಸಬಹುದು: ಅವನು ಅವುಗಳ ಒಬ್ಬ ಗ್ರಾಹಕನಾಗಿರಬಹುದು, ಸ್ವಯಂಪ್ರೇರಿತ ಸದಸ್ಯನಾಗಿರಬಹುದು, ಅಥವಾ ಅನ್ಯಪ್ರೇರಣೆಯಿಂದ ಸದಸ್ಯನಾಗಿರಬಹುದು, ಅಥವಾ ಶತ್ರುವಾಗಿರಬಹುದು.

ವ್ಯಕ್ತಿಯು ಗ್ರಾಹಕನಾಗಿರುವ ಸಂಘಟನೆಗಳು ಅವನ ಸೌಲಭ್ಯಗಳನ್ನು ಹೆಚ್ಚಿಸುವಂಥವೆಂದು ಭಾವಿಸಲಾದವುಗಳಾಗಿರಬೇಕೇ ಹೊರತು ಅದರಿಂದ ಅಧಿಕಾರವು ಹೆಚ್ಚೀತೆಂಬ ಭಾವನೆ ಮಾತ್ರ ಉಂಟಾಗಲಾರದು. ಅದರ ಒಳ್ಳೆಯ ಸೇವೆಯ ಬಗ್ಗೆ ಅವನಿಗೆ ತಪ್ಪು ತಿಳಿವಳಿಕೆ ಇರಬಹುದು: ಅವನು ಕೊಳ್ಳುವ ಗುಳಿಗೆಗಳು ನಿರುಪಯುಕ್ತವಾಗಿರಬಹುದು, ಬೀರ್ ಚೆನ್ನಾಗಿಲ್ಲದಿರಬಹುದು, ರೇಸ್‌ನಲ್ಲಿ ಭಾಗವಹಿಸುವುದು ಬುಕ್–ಮೇಕರ್‌ಗಳಿಗೆ ಹಣ ಕಳೆದುಕೊಳ್ಳುವ ಸಂದರ್ಭವಾಗಿರಬಹುದು. ಆದರೂ, ಅಂಥ ಸನ್ನಿವೇಶಗಳಲ್ಲಿಯೂ, ತಾನು ಸದಸ್ಯನಾಗಿರುವ ಸಂಘಟನೆಗಳಿಂದ ಅವನಿಗೆ 'ಏನೋ' ಲಾಭವಿದೆ: ಭರವಸೆ, ಮನರಂಜನೆ ಮತ್ತು ವೈಯಕ್ತಿಕ ಉಮೇದಿನ ಭಾವನೆ. ಹೊಸ ಕಾರೊಂದನ್ನು ಕೊಳ್ಳುವ ನಿರೀಕ್ಷೆಯು ವ್ಯಕ್ತಿಗೆ ಯೋಚಿಸಲು ಮತ್ತು ಮಾತನಾಡಲು ಒಂದು ಅವಕಾಶವನ್ನು ಒದಗಿಸುತ್ತದೆ. ಒಟ್ಟಾರೆ, ಹಣವನ್ನು ವ್ಯಯಿಸುವ ಬಗ್ಗೆ ಇರುವ ಆಯ್ಕೆಯ ಸ್ವಾತಂತ್ರ್ಯವು ಸಂತೋಷದ ಒಂದು ಆಕರ; ಉದಾಹರಣೆಗೆ, ಇಷ್ಟವಾದ ಸಾಮಾನುಗಳ ಬಗೆಗಿನ ಒಲವು ವ್ಯಕ್ತಿಯಲ್ಲಿನ ಗಾಢವಾದ ಹಾಗೂ ವ್ಯಾಪಕವಾದ ಒಂದು ಭಾವನೆ, ಸರ್ಕಾರವೇ ಸರ್ವಸಜ್ಜಿತವಾದ ಮನೆಯನ್ನು ಒದಗಿಸಿದರೆ ಇಂಥ ಭಾವನೆಯುಂಟಾಗಲು ಸಾಧ್ಯವಾಗುವುದಿಲ್ಲ.

ವ್ಯಕ್ತಿಯು ಸ್ವಯಂಪ್ರೇರಿತ ಸದಸ್ಯನಾಗಿರುವ ಸಂಘಟನೆಗಳೆಂದರೆ ರಾಜಕೀಯ ಪಕ್ಷಗಳು, ಚರ್ಚ್‌ಗಳು, ಕ್ಲಬ್‌ಗಳು, ಸ್ನೇಹಕೂಟಗಳು, ಅವನು

ಹಣ ತೊಡಗಿಸಿರುವ ಉದ್ಯಮಗಳು ಇತ್ಯಾದಿ. ಇವುಗಳಲ್ಲಿ ಅನೇಕವಕ್ಕೆ ಅದೇ ವರ್ಗದ ವಿರೋಧಿ ಸಂಘಟನೆಗಳೂ ಇರಬಹುದು: ವಿರೋಧಿ ರಾಜಕೀಯ ಪಕ್ಷಗಳು, ಭಿನ್ನಮತೀಯ ಚರ್ಚ್‌ಗಳು, ಪೈಪೋಟಿ ನಡೆಸುವ ಉದ್ಯಮಗಳು ಇತ್ಯಾದಿ. ಇವುಗಳ ನಡುವಣ ಪೈಪೋಟಿಯು ಅವುಗಳಲ್ಲಿ ಆಸಕ್ತರಾಗಿರುವವರಿಗೆ ಒಂದು ಬಗೆಯ ನಾಟಕೀಯತೆಯನ್ನೂ ಅಧಿಕಾರಮೋಹಕ್ಕೆ ಅಭಿವ್ಯಕ್ತಿಯನ್ನೂ ನೀಡುತ್ತದೆ. ಸರ್ಕಾರವು ದುರ್ಬಲವಾಗಿರುವ ಕಡೆಗಳಲ್ಲಿ ಹೊರತು, ಅವುಗಳನ್ನು ಕಾನೂನಿನ ವ್ಯಾಪ್ತಿಯಲ್ಲಿರಿಸಲಾಗುತ್ತದೆ; ಅಲ್ಲದೆ ಒಳಗೇ ಶಾಮೀಲಾಗಿರದಿದ್ದರೆ, ಹಿಂಸೆ ಅಥವಾ ಭಾರಿ ವಂಚನೆಯ ಸಂದರ್ಭಗಳಲ್ಲಿ ಶಿಕ್ಷೆಯನ್ನು ವಿಧಿಸಲಾಗುತ್ತದೆ. ವಿರೋಧಿ ಸಂಘಟನೆಗಳ ನಡುವಣ ಕದನವು, ಅಹಿಂಸಾತ್ಮಕವಾಗಿರುವಂತೆ ಅಧಿಕಾರಸ್ಥರು ನಿಯಂತ್ರಿಸಿದಾಗ, ಸದಸ್ಯರಿಗೆ ತಮ್ಮ ಕದನಪ್ರವೃತ್ತಿ ಹಾಗೂ ಅಧಿಕಾರಮೋಹವನ್ನು ಅಭಿವ್ಯಕ್ತಗೊಳಿಸುವ ಅವಕಾಶವನ್ನೊದಗಿಸುತ್ತದೆ, ಹೀಗಿಲ್ಲದಿದ್ದರೆ ಇವುಗಳನ್ನು ತೃಪ್ತಿಪಡಿಸಿಕೊಳ್ಳಲು ವಾಮಮಾರ್ಗಗಳನ್ನು ಹಿಡಿಯುವ ಸಂಭವವಿರುತ್ತದೆ. ಸರ್ಕಾರವು ಬಿಗಿಯಾಗಿಲ್ಲದಿದ್ದರೆ ಅಥವಾ ನಿಷ್ಪಕ್ಷಪಾತವಾಗಿಲ್ಲದಿದ್ದರೆ ರಾಜಕೀಯ ಪೈಪೋಟಿಯಿಂದ ದೊಂಬಿ, ಕೊಲೆ ಮತ್ತು ಅಂತರ್ಯುದ್ಧಗಳುಂಟಾಗುವ ಅಪಾಯವಿರುತ್ತದೆ. ಆದರೆ ಈ ಅಪಾಯಗಳನ್ನು ನಿವಾರಿಸಿದಾಗ, ವ್ಯಕ್ತಿಗಳು ಹಾಗೂ ಸಮುದಾಯಗಳ ಬದುಕಿನಲ್ಲಿ ಇವು ಒಂದು ಬಗೆಯ ಆರೋಗ್ಯಕರ ಅಂಶಗಳನ್ನು ತುಂಬುತ್ತವೆ.

ಅನ್ಯಪ್ರೇರಣೆಯಿಂದ ವ್ಯಕ್ತಿಯು ಸದಸ್ಯನಾಗಿರುವ ಬಹು ಮುಖ್ಯ ಸಂಘಟನೆಯೆಂದರೆ ದೇಶ. ಇದುವರೆಗೆ ಅಸ್ತಿತ್ವದಲ್ಲಿರುವಂತೆ, ರಾಷ್ಟ್ರೀಯತೆಯ ತತ್ವದಿಂದಾಗಿ, ಸದಸ್ಯತ್ವವು ಪ್ರಜೆಯ ಇಚ್ಛೆಗೆ ಅನುಗುಣವಾಗಿರುತ್ತದೆ, ಆದರೆ ಅವನ ಇಚ್ಛೆಯ ಕಾರಣದಿಂದಲೇ ಅಲ್ಲ.

ಅವನು ರಷ್ಯದವನಾಗಿರಬಹುದು,
ಫ್ರೆಂಚ್‌ಮನ್, ಟರ್ಕ್ ಅಥವಾ ಪ್ರಷ್ಯನ್,
ಅಥವಾ ಇಟಾಲಿಯನ್ ಕೂಡ ಆಗಿರಬಹುದು,
ಆದರೆ ಇತರ ರಾಷ್ಟ್ರಗಗೆ ಸೇರಬೇಕೆಂಬ
ಎಲ್ಲ ಆಮಿಷಗಳ ನಡುವೆಯೂ
ಅವನು ಇಂಗ್ಲಿಷ್‌ಮನ್ ಆಗಿ ಉಳಿಯುತ್ತಾನೆ

ತಮ್ಮ ದೇಶವನ್ನು ಬದಲಿಸುವ ಅವಕಾಶವಿದ್ದರೂ, ಸರ್ಕಾರವೇ ವಿದೇಶಿ ರಾಷ್ಟ್ರೀಯತೆಯದಾಗಿರುವ ಸಂದರ್ಭದಲ್ಲಿ ಹೊರತು, ಬಹಳ ಮಂದಿ ಹಾಗೆ ಮಾಡಲಾರರು. ದೇಶವೊಂದರ ಸದೃಢತೆಗೆ ರಾಷ್ಟ್ರೀಯತೆಯ

ಭಾವನೆಯಷ್ಟು ಪ್ರಬಲವಾದ ಕಾರಣ ಮತ್ತೊಂದಿಲ್ಲ. ದೇಶಭಕ್ತಿ ಮತ್ತು ನಾಗರಿಕತೆಗಳು ಒಟ್ಟಿಗೇ ಇರುವೆಡೆಗಳಲ್ಲಿ, ವ್ಯಕ್ತಿಯ ನಿಷ್ಠೆಯು ಚರ್ಚ್‌ಗಳಂತಹ ಸ್ವಯಂಸೇವಾ ಸಂಘಟನೆಗಳ ಬಗೆಗಿನದಕ್ಕಿಂತ ತೀವ್ರತರವಾಗಿರುತ್ತದೆ.

ದೇಶನಿಷ್ಠೆಯ ಹಿಂದೆ ಧನಾತ್ಮಕ ಹಾಗೂ ಋಣಾತ್ಮಕವಾದ ಎರಡೂ ಬಗೆಯ ಪ್ರೇರಣೆಗಳಿರುತ್ತವೆ. ಇದರಲ್ಲಿ ಮನೆ ಮತ್ತು ಕುಟುಂಬದ ಬಗೆಗಿನ ಪ್ರೀತಿಗೆ ಸಂಬಂಧಿಸಿದ ಒಂದು ಅಂಶವಿರುತ್ತದೆ. ಆದರೆ, ಪ್ರೀತಿ ಮತ್ತು ಅಧಿಕಾರಮೋಹ ಎಂಬ ಯುಗಳ ಪ್ರೇರಣೆಗಳು ಹಾಗೂ ಪರಕೀಯ ಆಕ್ರಮಣದ ಭಯಗಳ ಪ್ರೇರಣೆಗಳಿಂದ ಗಟ್ಟಿಗೊಳ್ಳದಿದ್ದರೆ, ಈ ಅಂಶವು ದೇಶನಿಷ್ಠೆಯು ಹೊಂದುವ ಸ್ವರೂಪಗಳನ್ನು ಪಡಯಲಾರದು. ರಾಜಕೀಯ ಪಕ್ಷಗಳ ನಡುವೆ ಇರುವಂತಲ್ಲದೆ, ದೇಶಗಳ ನಡುವಣ ಪೈಪೋಟಿಗಳು ಸ್ವಯಂಪೂರ್ಣವಾದವು. ಲಿಂಡ್‌ಬರ್ಗ್ ಬೇಬಿಯ ಅಪಹರಣ ಮತ್ತು ಕೊಲೆಯಿಂದ ಇಡೀ ನಾಗರಿಕ ಜಗತ್ತು ಆಘಾತಗೊಂಡಿತು, ಆದರೆ ಇಂಥ ಪ್ರಕರಣಗಳು, ಮುಂದಿನ ಯುದ್ಧದಲ್ಲಿ ವ್ಯಾಪಕವಾಗಿ ನಡೆಯಲಿದೆ; ಇದಕ್ಕಾಗಿ, ಗ್ರೇಟ್ ಬ್ರಿಟನ್‌ನಲ್ಲಿ ನಾವೆಲ್ಲ ನಮ್ಮ ಆದಾಯದ ಕಾಲುಭಾಗಕ್ಕಿಂತ ಹೆಚ್ಚಿನದನ್ನು ತೆತ್ತು ಸಿದ್ಧರಾಗುತ್ತಿದ್ದೇವೆ. ಬೇರಾವ ಸಂಘಟನೆಯ ಬಗೆಗಿನ ನಿಷ್ಠೆಯೂ ದೇಶನಿಷ್ಠೆಯಂತಹಹುದನ್ನು ಪ್ರಚೋದಿಸಲಾರದು. ದೇಶದ ಪ್ರಮುಖ ಚಟುವಟಿಕೆಯೆಂದರೆ ಭಾರಿ ಪ್ರಮಾಣದ ಜನಹತ್ಯೆಗೆ ಸಿದ್ಧತೆ ನಡೆಸುವುದು. ನಿರಂಕುಶ ಸರ್ಕಾರವನ್ನು ಜನರು ಸಹಿಸಿಕೊಳ್ಳುವಂತೆ ಮಾಡುವುದು, ಪರಕೀಯ ಆಳ್ವಿಕೆಗೊಳಪಡುವ ಭಯಕ್ಕಿಂತ ಹೆಚ್ಚಾಗಿ ಮರಣದಂಡನೆಯ, ಮನೆ ಮತ್ತು ಮಕ್ಕಳ ಹಾಗೂ ಇಡೀ ನಮ್ಮ ನಾಗರಿಕತೆಯು ವಿನಾಶಗೊಳ್ಳುವ ಭಯದಿಂದ ಉಂಟಾಗುವ ನಿಷ್ಠೆ. ವ್ಯಕ್ತಿ ಮನೋಭಾವ ಹಾಗೂ ಸರ್ಕಾರವೆಂಬ ಸಂಘಟನೆಗಳು ಒಂದು ದುರಂತಪೂರ್ಣ ಹದದಲ್ಲಿ ಸೇರಿಕೊಳ್ಳುತ್ತವೆ, ವಿನಾಶದ ಹೊರತಾಗಿ ಒಂದು ಮಾರ್ಗವನ್ನು ಕಂಡುಕೊಳ್ಳುವಷ್ಟು ಅಧಿಕಾರ ಪಡೆಯಲು ನಮಗೆ ಸಾಧ್ಯವಾಗದೆ ಹೋದರೆ, ಇದರಿಂದಾಗಿ ನಾವು ಮತ್ತು ನಮ್ಮ ಮಕ್ಕಳು ಕಷ್ಟಪಡುವಂತಾಗುತ್ತದೆ.

–೦–೦–೦–

ಅಧ್ಯಾಯ ೧೪

ಸ್ಪರ್ಧೆ

ನಿರಂಕುಶಾಧಿಕಾರದ ಅಪಾಯಗಳ ಬಗ್ಗೆ ಗಾಢ ಅರಿವಿದ್ದ ಹತ್ತೊಂಬತ್ತನೆಯ ಶತಮಾನವು, ಅವುಗಳನ್ನು ನಿವಾರಿಸಿಕೊಳ್ಳಲು ನಚ್ಚಿಕೆಯ ಸಾಧನವೊಂದನ್ನು ಕಂಡುಕೊಂಡಿದ್ದಿತು, ಅದೇ ಸ್ಪರ್ಧೆ. ಸಾಂಪ್ರದಾಯಿಕವಾದ ಏಕಸ್ವಾಮ್ಯದ ಕೆಡುಕುಗಳ ಬಗ್ಗೆ ಚೆನ್ನಾಗಿಯೇ ಅರಿವಿದ್ದಿತು. ಸ್ಟುವರ್ಟ್‌ಗಳು, ಎಲಿಜ಼ಬೆತ್ ಕೂಡ, ಲಾಭದಾಯಕ ಏಕಸ್ವಾಮ್ಯಗಳನ್ನು ಬೇಕಾದ ಆಸ್ಥಾನಿಕರಿಗೆ ಮಂಜೂರುಮಾಡುತ್ತಿದ್ದರು. ಅದಕ್ಕೆ ಇದ್ದ ವಿರೋಧವೇ ಅಂತರ್ಯುದ್ಧದ ಒಂದು ಕಾರಣವೂ ಹೌದು. ಊಳಿಗಮಾನ್ಯ ಪದ್ಧತಿಯ ಕಾಲಗಳಲ್ಲಿ, ಜಹಗೀರು ಪಡೆದ ಶ್ರೀಮಂತರು ಧಾನ್ಯಗಳನ್ನು ಮಿಲ್‌ಗಳಲ್ಲಿ ಬೀಸುವಂತೆ ಒತ್ತಾಯಿಸುತ್ತಿದ್ದುದು ವಾಡಿಕೆಯಾಗಿತ್ತು. ೧೮೪೮ ರ ಹಿಂದಿನ ಯೋರೋಪಿಯನ್ ರಾಜಪ್ರಭುತ್ವಗಳು ಸ್ಪರ್ಧಾಸ್ವಾತಂತ್ರ್ಯಕ್ಕೆ ಅರೆಊಳಿಗಮಾನ್ಯ ನಿರ್ಬಂಧಗಳನ್ನು ಹೇರಿದ್ದವು. ಇವುಗಳನ್ನು ಹೇರಿದ್ದು ಉತ್ಪಾದಕರ ಹಾಗೂ ಗ್ರಾಹಕರ ಹಿತದೃಷ್ಟಿಯಿಂದಲ್ಲ, ರಾಜರ ಮತ್ತು ಭೂಮಾಲೀಕರ ಹಿತ ಕಾಪಾಡಲು. ಇದಕ್ಕೆ ವ್ಯತಿರಿಕ್ತವಾಗಿ, ಹದಿನೆಂಟನೆಯ ಶತಮಾನದ ಇಂಗ್ಲಂಡ್‌ನಲ್ಲಿ, ಭೂಒಡೆಯರಿಗೂ ಬಂಡವಾಳದಾರರಿಗೂ ಅನನುಕೂಲಕರವಾಗಿದ್ದ ಅನೇಕ ನಿರ್ಬಂಧಗಳು ಉಳಿದೇ ಇದ್ದವು; ಉದಾಹರಣೆಯೆಂದರೆ, ಕನಿಷ್ಠ ವೇತನಕ್ಕೆ ಸಂಬಂಧಿಸಿದ ಕಾನೂನುಗಳು ಮತ್ತು ಸಾರ್ವಜನಿಕ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುವುದಕ್ಕೆ ನಿಷೇಧ – ಇವುಗಳು. ಹೀಗಾಗಿ ಇಂಗ್ಲಂಡ್‌ನಲ್ಲಿ ಕಾರ್ನ್ ಲಾ ಪ್ರಶ್ನೆ ಉದ್ಭವಿಸುವವರೆಗೂ ಭೂಒಡೆಯರು ಹಾಗೂ ಬಂಡವಾಳದಾರರು ಒಟ್ಟಾರೆ 'ಲೇಸೆಸ್ ಫ್ಲೇರ್'[೧]ನ ಪರವಾಗಿ ವಾದಿಸಲು ಒಪ್ಪಿದ್ದರು.

ಯೂರೋಪ್‌ನಲ್ಲಿ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಮುಕ್ತ ಸ್ಪರ್ಧೆಯ ಪರವಾದ ಭಾವನೆ ಕೂಡ ಅತ್ಯಂತ ಬಲಿಷ್ಠವಾಗಿತ್ತು. ೧೮೧೫ ರಿಂದ ೧೮೪೮ ರವರೆಗೆ, ಇಡೀ ಖಂಡದಾದ್ಯಂತ, ಚರ್ಚ್ ಮತ್ತು ಸರ್ಕಾರಗಳು ಫ್ರೆಂಚ್ ಕ್ರಾಂತಿಯ ಆಲೋಚನೆಗಳನ್ನು ವಿರೋಧಿಸುವುದರಲ್ಲಿ

---

[೧] ವ್ಯಾಪಾರ ಸ್ವಾತಂತ್ರ್ಯ; ವ್ಯಕ್ತಿ ವ್ಯವಹಾರದಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡದಿರುವ ನೀತಿ

ಒಗ್ಗೂಡಿದ್ದವು. ಜರ್ಮನಿ ಮತ್ತು ಆಸ್ಟ್ರಿಯಗಳಲ್ಲಿ ಸೆನ್ಸಾರ್‌ಗಿರಿಯು ಒಮ್ಮೆಗೇ ತೀವ್ರವೂ ಪರಿಹಾಸಕರವೂ ಆಗಿತ್ತು. ಇದರ ಬಗ್ಗೆ ಹೆಯಿನ್ ಒಂದು ಅಧ್ಯಾಯದಲ್ಲಿ ಈ ಮುಂದಿನ ಪದಗಳನ್ನೊಳಗೊಂಡಂತೆ ತಮಾಷೆ ಮಾಡಿದ್ದಾನೆ:

"ಜರ್ಮನ್‌ಸೆನ್ಸಾರ್‌ಗಳು.. ....ಮೂರ್ಖರು........"

ಫ್ರಾನ್ಸ್ ಮತ್ತು ಇಟಲಿಗಳಲ್ಲಿ ನೆಪೋಲಿಯನ್ ಬಗೆಗಿನ ದಂತಕತೆಗಳು ಹಾಗೂ ಕ್ರಾಂತಿಯ ಬಗೆಗಿನ ಮೆಚ್ಚಿಕೆಗಳನ್ನು ದಮನಿಸುವುದು ಸರ್ಕಾರದ ಗುರಿಗಳಾಗಿದ್ದವು. ಸ್ಪೈನ್ ಮತ್ತು ಚರ್ಚ್‌ರಾಜ್ಯಗಳಲ್ಲಿ ಎಲ್ಲ ಉದಾರ ಧೋರಣೆಗಳನ್ನೂ, ಅತ್ಯಂತ ಸೌಮ್ಯವಾದವುಗಳನ್ನು ಕೂಡ, ನಿಷೇಧಿಸಲಾಗಿತ್ತು; ಪೋಪ್ ಸರ್ಕಾರವು ಇನ್ನೂ ಅಧಿಕೃತವಾಗಿಯೇ ರಹಸ್ಯಮಯತೆಯಲ್ಲಿ ನಂಬಿಕೆ ಹೊಂದಿತ್ತು. ಇಟಲಿ, ಜರ್ಮನಿ ಅಥವಾ ಆಸ್ಟ್ರಿಯ–ಹಂಗರಿಗಳಲ್ಲಿ ರಾಷ್ಟ್ರೀಯತೆಯ ತತ್ವಕ್ಕೆ ಅವಕಾಶವಿರಲಿಲ್ಲ. ಅಲ್ಲದೆ, ಎಲ್ಲೆಡೆಯೂ ಪ್ರತಿಕ್ರಿಯೆಯೊಡನೆ ವಾಣಿಜ್ಯ ಹಿತಾಸಕ್ತಿಗಳ ಬಗೆಗಿನ ವಿರೋಧ ಸೇರಿತ್ತು, ಹಳ್ಳಿಯ ಜನರ ಬದಲು ಊಳಿಗಮಾನ್ಯ ಹಕ್ಕುಗಳಿಗೆ ಮಾನ್ಯತೆಯಿತ್ತು; ಇದಕ್ಕೆ ಮೂರ್ಖ ರಾಜರುಗಳ ಹಾಗೂ ಸೋಮಾರಿ ಆಸ್ಥಾನಿಕವರ್ಗದ ಬೆಂಬಲವಿತ್ತು. ಈ ಪರಿಸ್ಥಿತಿಗಳಲ್ಲಿ, ಶಕ್ತಿಯ ನ್ಯಾಯಯುತ ಚಟುವಟಿಕೆಗಳನ್ನು ಹತ್ತಿಕ್ಕುವುದನ್ನು ವಿರೋಧಿಸಲು 'ಲೇಸಸ್ ಫ್ಲೇರ್' ಸಹಜ ಅಭಿವ್ಯಕ್ತಿರೂಪವಾಯಿತು.

ಉದಾರವಾದಿಗಳು ಬಯಸುತ್ತಿದ್ದ ಬಿಡುಗಡೆಯು ಅಮೆರಿಕದಲ್ಲಿ ಸ್ವಾತಂತ್ರ್ಯವನ್ನು ಪಡೆದ ಕಾಲದಲ್ಲಿ ದೊರೆಯಿತು; ಇಂಗ್ಲಂಡ್‌ನಲ್ಲಿ ೧೮೩೪ ಮತ್ತು ೧೮೪೬ ರ ನಡುವಣ ಅವಧಿಯಲ್ಲಿ ಸಿಕ್ಕಿತು; ಜರ್ಮನಿಯಲ್ಲಿ ೧೮೪೮ ರಿಂದ ೧೯೧೮ ವರೆಗೆ ಹಂತಹಂತವಾಗಿ ಬಂದಿತು; ಇಟಲಿಯಲ್ಲಿ 'ರಿಸಾರ್ಜಿಮೆಂಟೊ'[೧] ಕಾಲದಲ್ಲಿ ಸಿಕ್ಕಿತು; ರಷ್ಯಾದಲ್ಲಿ ಕೂಡ ಫೆಬ್ರವರಿ ಕ್ರಾಂತಿಯಲ್ಲಿ ಕೆಲಕಾಲ ಬಂದಿತು. ಆದರೆ ಫಲಿತಾಂಶವು ಮಾತ್ರ ಉದಾರವಾದಿಗಳು ನಿರೀಕ್ಷಿಸಿದುದಾಗಿರಲಿಲ್ಲ. ಕೈಗಾರಿಕಾ ಕ್ಷೇತ್ರದಲ್ಲಿ ಅದು ಮಾರ್ಕ್ಸ್ ನುಡಿದಿದ್ದ ವಿದ್ವೇಷಕಾರಿ ಭವಿಷ್ಯವಾಣಿಯನ್ನು ಹೋಲುತ್ತಿತ್ತು. ಅತ್ಯಂತ ದೀರ್ಘ ಉದಾರವಾದಿ ಪರಂಪರೆಯುಳ್ಳ ಅಮೆರಿಕವು ಮೊದಲ

[೧] ಇಟಲಿಯ ಏಕೀಕರಣಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ಮಾಡಿದ ಚಳುವಳಿ; ಇದು ೧೮೭೦ ರಲ್ಲಿ ಸಾಧಿತವಾಯಿತು.

ಬಾರಿಗೆ ನಂಬಿಕೆಯ ಸ್ಥಿತಿಯನ್ನು ಪ್ರವೇಶಿಸಿತು, ಅಂದರೆ ಹಿಂದಿನ ದಿನಗಳಲ್ಲಿದ್ದಂತೆ ಏಕಸ್ವಾಮ್ಯವು ಸರ್ಕಾರದ ಅನುಮತಿಯಿಂದ ದೊರೆಯದೆ ಸ್ಪರ್ಧೆಯ ಸಹಜ ಪ್ರಕ್ರಿಯೆಗಳ ಮೂಲಕ ಸಿಕ್ಕುವ ಫಲವಾಯಿತು. ಅಮೆರಿಕದ ಉದಾರವಾದಕ್ಕೆ ವಿರೋಧವಿದ್ದರೂ ಅದು ನಿರ್ವೀರ್ಯವಾಗಿತ್ತು. ಇತರ ದೇಶಗಳ ಕೈಗಾರಿಕಾ ಅಭಿವೃದ್ಧಿಯು ನಿಧಾನವಾಗಿ ರಾಕ್‌ಫ಼ೆಲರ್ ತೋರಿದ್ದ ಮಾರ್ಗವನ್ನು ಅನುಸರಿಸಿತು. ಕೃತಕವಾಗಿ ಉಳಿಸಿಕೊಳ್ಳದಿದ್ದ ಪಕ್ಷದಲ್ಲಿ, ಸ್ಪರ್ಧಿಗಳಲ್ಲಿಯೇ ಒಬ್ಬನು ಸಂಪೂರ್ಣ ಗೆಲವನ್ನು ಸಾಧಿಸಲು ಅವಕಾಶ ಮಾಡಿಕೊಟ್ಟು ಸ್ಪರ್ಧೆಯೇ ಕೊನೆಗಾಣುವಂತಾಗುತ್ತದೆ ಎಂಬ ಅಂಶವು ಅರಿವಿಗೆ ಬಂತು.

ಆದರೆ ಇದು ಎಲ್ಲ ಬಗೆಯ ಸ್ಪರ್ಧೆಗಳಿಗೆ ಅನ್ವಯಿಸುವ ಮಾತಲ್ಲ. ಸಂಘಟನೆಯ ಗಾತ್ರ ದೊಡ್ಡದಾಗುವುದರಿಂದ ಸಾಮರ್ಥ್ಯ ಹೆಚ್ಚುವ ಸನ್ನಿವೇಶಗಳಲ್ಲಿ ಮಾತ್ರ ಇದು ಹೆಚ್ಚು ಕಡಿಮೆ ನಿಜ. ಹೀಗಾಗಿ, ಎರಡು ಪ್ರಶ್ನೆಗಳು ಉಳಿಯುತ್ತವೆ: ಒಂದು, ಎಂತಹ ಬಗೆಯ ಸ್ಪರ್ಧೆಗಳು ತಾಂತ್ರಿಕವಾಗಿ ನಿರರ್ಥಕ? ಎರಡು, ಅದು ಯಾವ ಸಂದರ್ಭಗಳಲ್ಲಿ ತಾಂತ್ರಿಕೇತರ ಕಾರಣಗಳಿಂದ ಅಪೇಕ್ಷಣೀಯ?

ಸಾಮಾನ್ಯವಾಗಿ ಹೇಳಬೇಕೆಂದರೆ, ಯಾವುದೇ ವಿಷಯವನ್ನು ಸಮರ್ಥವಾಗಿ ನಿಭಾಯಿಸಲು ಬೇಕಾದ ಗರಿಷ್ಠ ಗಾತ್ರವನ್ನು ಹೊಂದಲು ತಾಂತ್ರಿಕ ಪರಿಗಣನೆಗಳಿಂದ ಸಾಧ್ಯವಾಗಿದೆ. ಹದಿನೇಳನೆಯ ಶತಮಾನದಲ್ಲಿ ರಸ್ತೆಗಳ ಉಸ್ತುವಾರಿಯನ್ನು ಪಾದ್ರಿ ಪ್ರದೇಶಗಳು (ಪ್ಯಾರಿಶ್‌ಗಳು) ನೋಡಿಕೊಳ್ಳುತ್ತಿದ್ದವು; ಈಗಾದರೆ, ಅದನ್ನು ಸಾಧಾರಣವಾಗಿ ರಾಷ್ಟ್ರೀಯ ಮಟ್ಟದ ಹಣ ವಿನಿಯೋಗ ಮತ್ತು ಮೇಲುಸ್ತುವಾರಿಗಳನ್ನು ಹೊಂದಿದ ಪ್ರಾದೇಶಿಕ ಪರಿಷತ್ತುಗಳು ನೋಡಿಕೊಳ್ಳುತ್ತವೆ. ಗಣನೀಯ ಪ್ರದೇಶವನ್ನು ನಿಯಂತ್ರಿಸುವ ಪ್ರಾಧಿಕಾರವೊಂದು ವಿದ್ಯುತ್ತನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು, ಅದೂ ನಯಾಗರದಂತಹ ಪ್ರಮುಖವಾದ ವಿದ್ಯುದಾಗರವಿರುವೆಡೆ. ನೀರಾವರಿಗೆ ಅಸ್ವನ್ ಅಣೆಕಟ್ಟಿನಂತಹ ನಿರ್ಮಾಣ ಬೇಕಾಗಬಹುದು, ಏಕೆಂದರೆ ವಿಶಾಲ ಪ್ರದೇಶವು ಅದಕ್ಕೊಳಪಡದಿದ್ದರೆ ಅಂಥದರ ನಿರ್ಮಾಣವೆಚ್ಚವನ್ನು ಭರಿಸಲು ಅಸಾಧ್ಯವಾಗುತ್ತದೆ. ಭಾರಿ ಉತ್ಪಾದನೆಗೆ ಬೇಕಾದ ಅರ್ಥವ್ಯವಸ್ಥೆಯು ಉತ್ಪಾದನೆಯ ವೆಚ್ಚವನ್ನು ಭರಿಸಲು ದೊಡ್ಡ ಮಾರುಕಟ್ಟೆಯನ್ನು ಅವಲಬಿಸಬೇಕಾಗುತ್ತದೆ. ಹೀಗೆ.

ವಿಶಾಲ ವ್ಯಾಪ್ತಿಯ ಅನುಕೂಲಗಳನ್ನು ಪೂರ್ಣವಾಗಿ ಬಳಸಿಕೊಳ್ಳದಿರುವ ಇನ್ನೂ ಅನೇಕ ವಲಯಗಳಿವೆ. ಸರ್ಕಾರವು

ತಯಾರಿಸುವ ಶೈಕ್ಷಣಿಕ ಚಲನಚಿತ್ರಗಳ ಹಾಗೂ ಆಕಾಶವಾಣಿಯು ಪ್ರಸಾರ ಮಾಡುವ ಪಾಠಗಳ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಮತ್ತಷ್ಟು ಉತ್ತಮಗೊಳಿಸಬಹುದು. ಅಂತಹ ಚಲನಚಿತ್ರಗಳನ್ನೂ ಪಾಠಗಳನ್ನೂ ಅಂತಾರಾಷ್ಟ್ರೀಯ ಪ್ರಾಧಿಕಾರವೊಂದು ಸಿದ್ಧಡಿಸಿದರೆ ಇನ್ನೂ ಒಳ್ಳೆಯದು; ಅದಿನ್ನೂ ಗಗನಕುಸುಮವಾಗಿದೆ ಎಂಬುದು ನಿಜ. ಅಂತಾರಾಷ್ಟ್ರೀಯ ವ್ಯಾಪ್ತಿಗೊಳಪಡದೆ ನಾಗರಿಕ ವಿಮಾನಯಾನವು ಕುಂಠಿತಗೊಂಡಿದೆ. ಬಹುಪಾಲು ಉದ್ದೇಶಗಳ ಸಾಧನೆಗೆ ಸಣ್ಣ ರಾಜ್ಯಗಳಿಗಿಂತಲೂ ದೊಡ್ಡವು ಉತ್ತಮ ಎಂಬುದೂ; ವಿಶ್ವವ್ಯಾಪಿಯಾಗದಿದ್ದರೆ ಯಾವ ದೇಶವೂ ತನ್ನ ಪ್ರಜೆಗಳ ಹಿತವನ್ನು ಕಾಪಾಡುವ ಮೂಲ ಉದ್ದೇಶವನ್ನು ಸಮರ್ಥವಾಗಿ ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದೂ ಸುಸ್ಪಷ್ಟವಾಗಿದೆ.

ಆದರೆ ಸಣ್ಣ ಸಣ್ಣ ಪ್ರದೇಶಗಳಿಂದ ಕೆಲವು ಅನುಕೂಲಗಳೂ ಇವೆ. ಅವುಗಳೆಂದರೆ, ಕಡಿಮೆ ನಿಧಾನಗತಿ, ಶೀಘ್ರ ನಿರ್ಧಾರ ಮತ್ತು ಸ್ಥಳೀಯ ಆವಶ್ಯಕತೆಗಳಿಗೂ ಪದ್ಧತಿಗಳಿಗೂ ಹೊಂದಾಣಿಕೆಯಾಗುವ ಹೆಚ್ಚಿನ ಸಾಧ್ಯತೆಗಳು. ಇದಕ್ಕೆ ತಕ್ಕ ಪರಿಹಾರವೆಂದರೆ ಸಾರ್ವಭೌಮ ಅಧಿಕಾರವಿರದ, ಆದರೆ ನಿಷ್ಕೃಷ್ಟವಾದ ಅಧಿಕಾರವಿರುವ ಮತ್ತು ವ್ಯಾಪಕ ವಿಷಯಗಳ ಮೇಲೆ ನಿಯಂತ್ರಣ ಹೊಂದಿದ ಹಾಗೂ ಆವಶ್ಯಕವಿರುವ ಸಂದರ್ಭಗಳಲ್ಲಿ ಆರ್ಥಿಕ ನೆರವನ್ನು ನೀಡುವ ಒಂದು ಕೇಂದ್ರಕ್ಕೆ ಅಧೀನವಾದ ಸ್ಥಳೀಯ ಆಡಳಿತ. ಈ ವಿಷಯವನ್ನು ವಿವರವಾಗಿ ಪರಿಶೀಲಿಸುವ ಆವಶ್ಯಕತೆಯಿದೆ; ಆದರೆ ಅದನ್ನು ನಾನು ಮಾಡಲಾರೆ.

ಸ್ಪರ್ಧೆಯ ಪ್ರಶ್ನೆಯಂತೂ ಮತ್ತಷ್ಟು ಕ್ಲಿಷ್ಟವಾದುದು. ಆರ್ಥಿಕ ಕ್ಷೇತ್ರದಲ್ಲಿ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಆದರೆ ಅದರ ಪ್ರಾಮುಖ್ಯವು ಕನಿಷ್ಠ ಪಕ್ಷ ಸೈನ್ಯ ಹಾಗೂ ಪ್ರಚಾರಗಳಿಗೆ ಸಂಬಂಧಪಟ್ಟಷ್ಟೇ ಹೆಚ್ಚಿನದು. ವ್ಯಾಪಾರ ಹಾಗು ಪ್ರಚಾರಗಳಿಗೆ ಸಂಬಂಧಿಸಿದಂತೆ ಮುಕ್ತ ಸ್ಪರ್ಧೆಯಿರಬೇಕೆಂಬುದು ಉದಾರವಾದಿ ದೃಷ್ಟಿಕೋನವಾದರೂ, ಇಟಾಲಿಯನ್ ಫ್ಯಾಸಿಸ್ಟ್‌ರು ಮತ್ತು ಜರ್ಮನ್ ನಾಜ಼ಿಗಳು ತದ್ವಿರುದ್ಧ ವಾದವನ್ನು ಮುಂದಿರಿಸಿದ್ದಾರೆ; ರಾಷ್ಟ್ರೀಯ ಯುದ್ಧದ ಸ್ವರೂಪವನ್ನು ಪಡೆದ ಹೊರತು ಸ್ಪರ್ಧೆಯು ಕೆಟ್ಟುದು, ಆ ಸನ್ನಿವೇಶದಲ್ಲಿ ಮಾತ್ರ ಅದು ಅತ್ಯಂತ ಉನ್ನತ ಮಾನವ ಚಟುವಟಿಕೆಯೆನಿಸುತ್ತದೆ ಎಂಬ ವಾದ ಅವರದು. ಪರಸ್ಪರ ವಿರುದ್ಧ ಶಕ್ತಿಗಳು ಅಧಿಕಾರಕ್ಕಾಗಿ ನಡೆಸುವ ಹೋರಾಟವಲ್ಲದೆ ಬೇರೆ ಸ್ವರೂಪದ ಸ್ಪರ್ಧೆಯನ್ನು ಮಾರ್ಕ್ಸಿಸ್ಟ್‌ರು ವಿರೋಧಿಸುತ್ತಾರೆ. ನನಗೆ ನೆನಪಿರುವ ಮಟ್ಟಿಗೆ, ಪ್ಲೇಟೋ ಒಂದು ಬಗೆಯ ಸ್ಪರ್ಧೆಯನ್ನು ಮಾತ್ರ ಮೆಚ್ಚುತ್ತಾನೆ, ಅದೆಂದರೆ ಆತ್ಮೀಯ ಗೆಳೆಯರು ಗೌರವಕ್ಕಾಗಿ ನಡೆಸುವ

ಪೈಪೋಟಿ, ಅದು ಸ್ವಲಿಂಗಪ್ರೇಮದಿಂದ ಪ್ರೇರಿತವಾದುದೆಂಬುದು ಅವನ ಅಭಿಮತ.

ಉತ್ಪಾದನೆಯ ವಲಯದಲ್ಲಾದರೆ, ಸಣ್ಣ ಸಣ್ಣ ಘಟಕಗಳ ನಡುವಣ ಸ್ಪರ್ಧೆಯು ಕೈಗಾರಿಕಾ ಕ್ರಾಂತಿಯ ಆರಂಭಿಕ ಕಾಲದ ಪ್ರಮುಖ ಲಕ್ಷಣವಾಗಿತ್ತು; ಉತ್ಪಾದನೆಯ ಅತ್ಯಂತ ಪ್ರಮುಖ ವಲಯಗಳಲ್ಲಿ ಯಾವುದಾದರೊಂದು ದೇಶದೊಡನೆ ಸಹವರ್ತಿಯಾದ ಟ್ರಸ್ಟ್‌ಗಳ ನಡುವಣ ಸ್ಪರ್ಧೆಗೆ ಇದು ಎಡೆಮಾಡಿಕೊಟ್ಟಿದೆ. ಇರುವ ಏಕೈಕ ಅಂತಾರಾಷ್ಟ್ರೀಯ ಟ್ರಸ್ಟ್ ಎಂದರೆ ಯುದ್ಧಸಾಮಗ್ರಿಗಳ ಕೈಗಾರಿಕೆ; ಒಂದು ಕಂಪೆನಿಗೆ ಕೊಡುವ ಉತ್ಪಾದನಾ ಆಜ್ಞೆಯು ಬೇರೆಯವಕ್ಕೂ ನೀಡಲು ಕಾರಣವಾಗುವುದರಿಂದ ಅದು ವಿಶಿಷ್ಟವೆನಿಸಿದೆ. ಒಂದು ದೇಶವು ಯುದ್ಧಸಿದ್ಧವಾದರೆ ಉಳಿದವೂ ಆಗುತ್ತವೆ; ಹೀಗಾಗಿ, ಸ್ಪರ್ಧೆಯ ಸಾಮಾನ್ಯ ಕಾರಣಗಳು ಅದರಲ್ಲಿರುವುದಿಲ್ಲ. ಈ ವಿಶಿಷ್ಟ ಕಾರಣವಲ್ಲದೆ, ಈಗಲೂ ವ್ಯವಹಾರ ವಲಯದಲ್ಲಿ ಸ್ಪರ್ಧೆಯು ಉಳಿದುಕೊಂಡಿದೆ, ಆದರೆ ಈಗದು ಭಿನ್ನ ದೇಶಗಳ ನಡುವಣ ಸ್ಪರ್ಧೆಯೊಡನೆ ಬೆರೆತುಕೊಂಡಿದೆ; ಇವೆಲ್ಲದರಲ್ಲಿಯೂ ಯುದ್ಧವೇ ಯಶಸ್ಸಿನ ನಿಜವಾದ ನಿರ್ಣಾಯಕ ಅಂಶ. ಆದ್ದರಿಂದ, ಆಧುನಿಕ ವ್ಯವಹಾರದಲ್ಲಿನ ಸ್ಪರ್ಧೆಯ ಒಳಿತು ಕೆಡುಕುಗಳು ದೇಶಗಳ ನಡುವಣ ಪೈಪೋಟಿಯಲ್ಲಿರುವಂತಹವೇ ಆಗಿರುತ್ತವೆ.

ಬೇರೆಯ ಸ್ವರೂಪದ ಆರ್ಥಿಕ ಸ್ಪರ್ಧೆಯೂ ಇದೆ, ಅದು ಎಂದಿನಂತೆಯೇ ಈಗಲೂ ತೀವ್ರವಾಗಿದೆ; ನಾನು ಹೇಳುತ್ತಿರುವುದು ನೌಕರಿಗಾಗಿನ ಸ್ಪರ್ಧೆಯನ್ನು ಕುರಿತು. ಇದು ಆರಂಭವಾಗುವುದು ಶಾಲೆಯಲ್ಲಿ ವಿದ್ಯಾರ್ಥಿವೇತನಕ್ಕಾಗಿ ನಡೆಯುವ ಪರೀಕ್ಷೆಗಳಿಂದ; ಬಹುತೇಕ ಎಲ್ಲರ ನೌಕರಿ ಜೀವನದಾದ್ಯಂತ ಇದು ಮುಂದುವರಿಯುತ್ತದೆ. ಈ ಬಗೆಯ ಸ್ಪರ್ಧೆಯನ್ನು ಸುಧಾರಿಸಬಹುದೇ ವಿನಾ ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಿಲ್ಲ. ಎಲ್ಲ ನಟರಿಗೂ ಒಂದೇ ಮೊತ್ತದ ವೇತನವನ್ನು ನೀಡಿದರೂ, ಒಬ್ಬನು ಫಸ್ಟ್ ಸೈಲರ್‌ಗಿಂತ ಹ್ಯಾಮ್ಲೆಟ್‌ನ ಪಾತ್ರವನ್ನು ಮಾಡಲು ಹೆಚ್ಚು ಇಷ್ಟಪಡಬಹುದು. ಎರಡು ಷರತ್ತುಗಳನ್ನು ಪರಿಗಣಿಸಬಹುದು: ಮೊದಲನೆಯದು, ಯಶಸ್ವಿಯಾಗದವನು ನಿವಾರ್ಯ ಕಷ್ಟಗಳಿಗೆ ಒಳಗಾಗಕೂಡದು; ಎರಡನೆಯದು, ಸಾಧ್ಯವಾದ ಮಟ್ಟಿಗೂ ಯಶಸ್ಸು ಎಂಬುದು ಯಾವುದಾದರೊಂದು ನಿಜವಾದ ಅರ್ಹತೆಯನ್ನು ಆಧರಿಸಿರಬೇಕೇ ಹೊರತು ಹೊಗಳಿಕೆಯ ಅಥವಾ ವಂಚನೆಯ ಫಲವಾಗಿರಬಾರದು. ಸಮಾಜವಾದಿಗಳು ಎರಡನೆಯ ಷರತ್ತಿನ ಕಡೆಗೆ ನೀಡಬೇಕಾದಷ್ಟು ಗಮನವನ್ನು ಹರಿಸಿಲ್ಲ. ಆದರೆ, ಇದರ ಚರ್ಚೆಯು

ವಿಷಯದಿಂದ ಬಹುದೂರ ಎಳೆದೊಯ್ಯುವುದರಿಂದ ನಾನು ಈ ವಿಷಯವನ್ನು ಮುಂದುವರಿಸುವುದಿಲ್ಲ.

ಈಗಿನ ಸನ್ನಿವೇಶದಲ್ಲಿನ ಸ್ಪರ್ಧೆಯ ಅತ್ಯಂತ ಮುಖ್ಯವಾದ ರೂಪವೆಂದರೆ ದೇಶಗಳ, ಅದೂ ಬಲಿಷ್ಠವೆನಿಸಿಕೊಂಡವುಗಳ, ನಡುವಣದು. ಅಧಿಕಾರ, ಸಂಪತ್ತು, ಜನರ ನಂಬಿಕೆಯ ಮೇಲಿನ ಹಿಡಿತ, ಎಲ್ಲಕ್ಕಿಂತ ಮಿಗಿಲಾಗಿ, ಮರಣದಂಡನೆಯನ್ನು ವಿಧಿಸುವುದೇ ಗೆಲವಿನ ಪ್ರಮುಖ ಸಾಧನವಾಗಿರುವುದರಿಂದ, ಜೀವನಕ್ಕಾಗಿಯೇ ನಡೆಯುವ ಸ್ಪರ್ಧೆಯು ನಿರಂಕುಶವಾಗಿದೆ. ಈ ಸ್ಪರ್ಧೆಯನ್ನು ಕೊನೆಗೊಳಿಸುವ ಏಕೈಕ ಮಾರ್ಗವೆಂದರೆ ರಾಷ್ಟ್ರೀಯ ಸಾರ್ವಭೌಮತ್ವ ಹಾಗೂ ರಾಷ್ಟ್ರೀಯ ಸೈನ್ಯಗಳನ್ನು ನಿಷೇಧಿಸಿ ಸೈನ್ಯದ ಮೇಲೆ ಏಕಸ್ವಾಮ್ಯವನ್ನು ಹೊಂದಿದ ಅಂತಾರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವುದು. ಈ ಮಾರ್ಗಕ್ಕಿರುವ ಪರ್ಯಾಯವೆಂದರೆ ನಾಗರಿಕ ದೇಶಗಳಲ್ಲಿನ ಹೆಚ್ಚಿನ ಸಂಖ್ಯೆಯ ಜನಗಳಿಗೆ ಮರಣವನ್ನು ವಿಧಿಸಿ, ಬದುಕುಳಿದವರನ್ನು ಕಾರ್ಪಣ್ಯ ಮತ್ತು ಅರೆಬರ್ಬರತೆಗಳಿಗೆ ದೂಡುವುದು. ಈಗ ಹೆಚ್ಚಿನ ಜನರು ಈ ಪರ್ಯಾಯವನ್ನೇ ಇಷ್ಟಪಡುತ್ತಾರೆ.

ಉದಾರವಾದಿಗಳು ತಾತ್ವಿಕವಾಗಿ ಮುಕ್ತವನ್ನಾಗಿಡುವ ಪ್ರಚಾರದಲ್ಲಿನ ಸ್ಪರ್ಧೆಯು ಸೈನ್ಯವನ್ನು ಪಡೆದ ದೇಶಗಳ ನಡುವಣ ಸ್ಪರ್ಧೆಯೊಂದಿಗೆ ತಳುಕುಹಾಕಿಕೊಂಡಿದೆ. ನೀವು ಫ಼ಾಸಿಸಂ ಅನ್ನು ಬೋಧಿಸುವುದಾದರೆ, ಅದರಿಂದಾಗುವ ಅತ್ಯಂತ ಪ್ರಮುಖ ಪರಿಣಾಮವೆಂದರೆ ಜರ್ಮನಿ ಮತ್ತು ಇಟಲಿಗಳನ್ನು ಬಲಪಡಿಸುವುದು; ನೀವು ಕಮ್ಯುನಿಸಂ ಅನ್ನು ಉಪದೇಶಿಸಿದರೆ, ಅದನ್ನು ಜಾರಿಗೊಳಿಸುವುದು ಸಾಧ್ಯವಾಗದಾದರೂ, ಅದರಿಂದ ರಷ್ಯಾ ಮುಂದಿನ ಯುದ್ಧದಲ್ಲಿ ಗೆಲವು ಪಡೆಯಲು ಸಹಾಯಕವಾದೀತು; ನೀವೇನಾದರೂ ಪ್ರಜಾಪ್ರಭುತ್ವದ ಪ್ರಾಮುಖ್ಯವನ್ನು ಪ್ರತಿಪಾದಿಸಿದರೆ, ಜ಼ೆಕೊಸ್ಲವೇಕಿಯದ ರಕ್ಷಣೆಗಾಗಿ ಫ಼್ರಾನ್ಸ್‌ನೊಂದಿಗೆ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವ ಧೋರಣೆಯನ್ನು ನೀವು ಬೆಂಬಲಿಸಿದ ಹಾಗಾಗುತ್ತದೆ. ರಷ್ಯಾ, ಇಟಲಿ ಮತ್ತು ಜರ್ಮನಿಗಳು ಪ್ರಚಾರಸ್ವಾತಂತ್ರ್ಯದ ತತ್ವವನ್ನು ಯಶಸ್ವಿಯಾಗಿ ನಿಷೇಧಿಸಿರುವುದು ಆಶ್ಚರ್ಯಕರವಲ್ಲ, ಯಾಕಂದರೆ ಅಲ್ಲಿನ ಹಿಂದಿನ ಸರ್ಕಾರಗಳು ಪ್ರಚಾರಸ್ವಾತಂತ್ರ್ಯ ತತ್ವವನ್ನು ಒಪ್ಪಿಕೊಂಡಿದ್ದುದೇ ಆಯಾ ದೇಶಗಳ ಈಗಿನ ಸರ್ಕಾರಗಳು ತಮ್ಮ ಪೂರ್ವಾಧಿಕಾರಿಗಳನ್ನು ಹೊಡೆದೋಡಿಸಲು ಸಹಾಯಕವಾಯಿತು ಹಾಗೂ ತಾವೂ ಅದೇ ತತ್ವವನ್ನು ಮುಂದುವರಿಸಿದ್ದರೆ ತಮ್ಮ ಧೋರಣೆಯನ್ನು ಅನುಷ್ಠಾನಗೊಳಿಸಲು ಅವಕ್ಕೇ ಸುತರಾಂ ಅವಕಾಶವಾಗುತ್ತಿರಲಿಲ್ಲ. ಈಗಿನ

ಜಗತ್ತು ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಿಗಿಂತ ಎಷ್ಟು ಭಿನ್ನವಾಗಿದೆಯೆಂದರೆ, ಪ್ರಚಾರದ ಮುಕ್ತ ಸ್ಪರ್ಧೆಯ ಬಗೆಗಿನ ಉದಾರವಾದಿ ಪ್ರತಿಪಾದನೆಯನ್ನು, ಅದು ಈಗಲೂ ಸಮಂಜಸವಾಗಿದ್ದರೆ, ಆಧುನಿಕ ಕಾಲದಲ್ಲಿ ಮತ್ತೆ ಎಚ್ಚರಿಕೆಯಿಂದ ಆರಂಭಿಸಬೇಕಾಗುತ್ತದೆ. ಆ ಪ್ರತಿಪಾದನೆಯು ಬಹುಪಾಲು ಸಮಂಜಸವಾಗಿದೆಯಾದರೂ, ಅವುಗಳಿಗೆ ಮಿತಿಗಳಿವೆ ಎಂಬುದನ್ನು ಮನಗಾಣುವುದು ಮುಖ್ಯವೆಂಬುದು ನನ್ನ ನಂಬಿಕೆಯಾಗಿದೆ.

ಉದಾರವಾದಿಗಳ ಸಿದ್ಧಾಂತವು, ಉದಾಹರಣೆಗೆ ಜಾನ್ ಸ್ಟುಅರ್ಟ್ ಮಿಲ್ ತನ್ನ ಪುಸ್ತಕ *'ಆನ್ ಲಿಬರ್ಟಿ'*ಯಲ್ಲಿ ಪ್ರತಿಪಾದಿಸಿರುವುದು, ಅನೇಕರು ಭಾವಿಸಿರುವುದಕ್ಕಿಂತ ಬಹು ಕಡಿಮೆ ಅತಿರೇಕದ್ದು. ಇತರರಿಗೆ ತೊಂದರೆಯಾಗದಿರುವಷ್ಟರಮಟ್ಟಿಗೆ ಜನಗಳಿಗೆ ಸ್ವಾತಂತ್ರ್ಯವಿರಬೇಕು, ಆದರೆ ಇತರರ ಪ್ರಶ್ನೆಯು ಒಳಗೊಂಡಿರುವಾಗ, ಆವಶ್ಯವೆನಿಸಿದರೆ ಅವರು ಸರ್ಕಾರದ ಕ್ರಮಗಳಿಂದ ಪ್ರತಿಬಂಧನಕ್ಕೆ ಒಳಗಾಗಬೇಕಾಗಬಹುದು. ನಿದರ್ಶನಕ್ಕೆ, ವಿಕ್ಟೋರಿಯ ರಾಣಿಯನ್ನು ಕೊಲೆಮಾಡುವುದು ಅತ್ಯಂತ ಆವಶ್ಯಕ ಎಂದು ಒಬ್ಬನಿಗೆ ಅನ್ನಿಸುತ್ತದೆ ಎಂದುಕೊಳ್ಳೋಣ, ಅಂಥ ಸಂದರ್ಭದಲ್ಲಿ ಆ ವ್ಯಕ್ತಿಗೆ ತನ್ನ ಅನ್ನಿಸಿಕೆಯನ್ನು ಪ್ರಚಾರ ಮಾಡಲು ಮಿಲ್ ಅವಕಾಶ ನೀಡುತ್ತಿರಲಿಲ್ಲ. ಇದೊಂದು ಅತಿರೇಕದ ಉದಾಹರಣೆಯಾದರೂ, ಯಾವುದನ್ನಾದರೂ ಸಮರ್ಥಿಸುವುದರಲ್ಲಿಯೂ ವಿರೋಧಿಸುವುದರಲ್ಲಿಯೂ ಮಿಕ್ಕ ಯಾರ ಮೇಲೋ ದುಷ್ಪರಿಣಾಮವನ್ನುಂಟುಮಾಡುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ. ಕೆಲವು ವ್ಯಕ್ತಿಗಳಿಗೋ ವರ್ಗಗಳಿಗೋ ಅಹಿತವನ್ನುಂಟುಮಾಡಬಹುದು ಎಂಬಂತಹುದನ್ನು ಹೇಳಲು ಅವಕಾಶವಿರದಿದ್ದರೆ ಅಂತಹ ವಾಕ್‌ಸ್ವಾತಂತ್ರ್ಯವು ನಿರರ್ಥಕವೆನಿಸುತ್ತದೆ. ಹೀಗಾಗಿ, ಪ್ರಚಾಸ್ವಾತಂತ್ರ್ಯಕ್ಕೆ ಸ್ವಲ್ಪವಾದರೂ ಅವಕಾಶವಿರಬೇಕಾದರೆ, ಅದಕ್ಕೆ ಮಿಲ್ ಪ್ರತಿಪಾದಿಸಿದ್ದಕ್ಕಿಂತ ಹೆಚ್ಚು ದೃಢವಾದ ಸೈದ್ಧಾಂತಿಕ ಬೆಂಬಲ ಬೇಕಾಗುತ್ತದೆ.

ಈ ಪ್ರಶ್ನೆಯನ್ನು ನಾವೀಗ ಸರ್ಕಾರದ, ಸಾಮಾನ್ಯ ಪ್ರಜೆಯ, ಅದರ ಪ್ರಬಲ ಪ್ರತಿಪಾದಕನ ಅಥವಾ ತಾತ್ವಿಕನ ದೃಷ್ಟಿಯಿಂದ ಪರಿಶೀಲಿಸಬೇಕು. ನಮ್ಮ ವಿಶ್ಲೇಷಣೆಯನ್ನು ಸರ್ಕಾರದ ದೃಷ್ಟಿಕೋನದಿಂದ ಆರಂಭಿಸೋಣ.

ನಾವಾಗಲೇ ಗಮನಿಸಿರುವಂತೆ, ಸರ್ಕಾರಗಳು ಎರಡು ಬಗೆಯ ಅಪಾಯಗಳನ್ನೆದುರಿಸುತ್ತವೆ: ಕ್ರಾಂತಿ ಮತ್ತು ಯುದ್ಧದಲ್ಲಿನ ಸೋಲು.

(ಸಂಸದೀಯ ವ್ಯವಸ್ಥೆಯಿರುವ ದೇಶದಲ್ಲಿ, ಅಧಿಕೃತ ವಿರೋಧ ಪಕ್ಷವನ್ನೂ ಸರ್ಕಾರದ ಭಾಗವೆಂದೇ ಪರಿಗಣಿಸಬೇಕು). ಈ ಅಪಾಯಗಳು ಸ್ವರಕ್ಷಣೆಯ ಪ್ರವೃತ್ತಿಯನ್ನು ಜಾಗ್ರತಗೊಳಿಸುತ್ತದೆ, ಹೀಗಾಗಿ ಅವುಗಳನ್ನು ನಿವಾರಿಸಿಕೊಳ್ಳಲು ಏನೆಲ್ಲ ಕ್ರಮಗಳು ಆವಶ್ಯಕವೋ ಅವನ್ನೆಲ್ಲ ಸರ್ಕಾರಗಳು ಕೈಗೊಳ್ಳುತ್ತವೆಂಬುದನ್ನು ನಾವು ನಿರೀಕ್ಷಿಸಬಹುದು. ಈ ದೃಷ್ಟಿಕೋನದಿಂದ ನೋಡಿದಾಗ ಉದ್ಭವಿಸುವ ಪ್ರಶ್ನೆಯೆಂದರೆ: ಎಷ್ಟರಮಟ್ಟಿಗಿನ ಪ್ರಚಾರ ಸ್ವಾತಂತ್ರ್ಯವು ಆಂತರಿಕ ಹಾಗೂ ಬಾಹ್ಯ – ಈ ಎರಡೂ ಬಗೆಯ ಅಪಾಯಗಳ ವಿರುದ್ಧ ಗರಿಷ್ಠ ಸ್ಥಿರತೆಯನ್ನು ಉಂಟುಮಾಡುತ್ತವೆ ಎಂಬುದು. ಇದಕ್ಕೆ ಉತ್ತರವು ಸರ್ಕಾರದ ಸ್ವರೂಪ ಹಾಗೂ ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಸರ್ಕಾರವೇ ಈಚಿನದೋ ಅಥವಾ ಕ್ರಾಂತಿಕಾರಕವೋ ಆಗಿದ್ದರೆ, ಜನತೆಗೆ ಅದರ ವಿರುದ್ಧ ತೀವ್ರ ಅಸಮಾಧಾನವಿದ್ದರೆ, ಸ್ವಾತಂತ್ರ್ಯವು ಪುನಃ ಕ್ರಾಂತಿಯನ್ನು ಉಂಟುಮಾಡುವುದು ನಿಶ್ಚಿತ. ಫ್ರಾನ್ಸ್‌ನಲ್ಲಿ ೧೭೯೩ ರಲ್ಲಿ, ರಷ್ಯಾದಲ್ಲಿ ೧೯೧೮ ರಲ್ಲಿ ಹಾಗೂ ಜರ್ಮನಿಯಲ್ಲಿ ೧೯೩೩ ರಲ್ಲಿ ಇಂಥದೇ ಪರಿಸ್ಥಿತಿಯಿತ್ತು; ಅದಕ್ಕನುಗುಣವಾಗಿ ಈ ಮೂರೂ ದೇಶಗಳಲ್ಲಿನ ಸರ್ಕಾರಗಳು ಪ್ರಚಾರಸ್ವಾತಂತ್ರ್ಯವನ್ನು ಹತ್ತಿಕ್ಕಿದವು. ಆದರೆ ಸರ್ಕಾರವು ಸಾಂಪ್ರದಾಯಿಕ ಸ್ವರೂಪದ್ದಾಗಿದ್ದು, ಜನತೆಯ ಆರ್ಥಿಕ ಪರಿಸ್ಥಿತಿಯು ತೀರ ಹದಗೆಟ್ಟಿಲ್ಲದ್ದರೆ, ಸ್ವಾತಂತ್ರ್ಯವು ಒಂದು ರಕ್ಷಣಾತ್ಮಕ ಕವಾಟವಾಗಿ ಅತೃಪ್ತಿಯ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಕಮ್ಯುನಿಸ್ಟ್ ಪ್ರಚಾರವನ್ನು ಅಡ್ಡಿಪಡಿಸಲು ಬ್ರಿಟಿಷ್ ಸಕಾರ್ರವು ಸಾಕಷ್ಟು ಪ್ರಯತ್ನಪಟ್ಟಿದ್ದರೂ, ಗ್ರೇಟ್ ಬ್ರಿಟನ್‌ನಲ್ಲಿ ಕಮ್ಯುನಿಸ್ಟರ ವೈಫಲ್ಯಕ್ಕೆ ಕಾರಣ ಅದಲ್ಲ; ಸರ್ಕಾರದ ದೃಷ್ಟಿಕೋನದಿಂದಲೂ ಅವರಿಗೆ ಗರಿಷ್ಠ ಸ್ವಾತಂತ್ರ್ಯವನ್ನು ನೀಡಿದ್ದರೆ ಅದು ವಿವೇಕಯುತವಾಗುತ್ತಿತ್ತು.

ಒಬ್ಬ ವ್ಯಕ್ತಿಯ ಕೊಲೆಯನ್ನು ಪ್ರಚೋದಿಸುವಂತಹ ಪ್ರಚಾರಕ್ಕೆ ಸರ್ಕಾರ ಎಂದೂ ಅವಕಾಶ ನೀಡಬಾರದು. ಏಕೆಂದರೆ ಇಂತಹ ಪ್ರಚಾರದಿಂದ ಕೆಲವರು ಮಾತ್ರವೇ ಪ್ರಭಾವಿತರಾದರೂ ಪ್ರಚೋದಿಸಿದ ಕೃತ್ಯ ನಡೆದೇ ಬಿಡಬಹುದು. ಕಾನೂನುಬದ್ಧವಾಗಿ ಮರಣದಂಡನೆಗೆ ಗುರಿಯಾದವರ ಹೊರತು ಉಳಿದ ನಾಗರಿಕರ ಜೀವವನ್ನು ಕಾಪಾಡುವುದು ಸರ್ಕಾರದ ಕರ್ತವ್ಯ, ಅಲ್ಲದೆ ಯಾರದಾದರೂ ಕೊಲೆಯ ಬಗ್ಗೆ ಒತ್ತಾಯವಿದ್ದರೆ ಅಂತಹ ವ್ಯಕ್ತಿಯನ್ನು ಕಾಪಾಡುವುದು ಕಷ್ಟವಾಗುತ್ತದೆ. ಈ ಬಗ್ಗೆ ವೀಮರ್ ಗಣರಾಜ್ಯವು ತೀರ ಸಡಿಲ ನೀತಿಯನ್ನು ಪಡೆದಿತ್ತು. ಆದರೆ ಕೆಲವು 'ವರ್ಗ'ದ ಜನರನ್ನು 'ಕಾನೂನುರೀತ್ಯಾ' ಮರಣದಂಡನೆಗೆ

ಗುರಿಪಡಿಬೇಕೆಂದು ನಡೆಸುವ ಚಳುವಳಿಯನ್ನು ಹತ್ತಿಕ್ಕಬೇಕೆಂದು ನನಗನ್ನಿಸುವುದಿಲ್ಲ.

ದೇಶದ ಅಸ್ತಿತ್ವಕ್ಕೆ ಅಪಾಯ ತಾರದ ಅಭಿಪ್ರಾಯಗಳಲ್ಲಿ ಮೂಗು ತೂರಿಸುವುದು ಸರ್ಕಾರದ ದೃಷ್ಟಿಕೋನದಿಂದಲೂ ಸಮರ್ಥನೀಯವಲ್ಲ. ಭೂಮಿಯು ಚಪ್ಪಟೆಯಾಗಿದೆ ಎಂದೋ, ಸಬ್ಬತ್ ಅನ್ನು ಶನಿವಾರ ಆಚರಿಸಬೇಕು ಎಂದೋ ಯಾವನಾದರೂ ವಾದಿಸಿದರೆ ಅವನಿಗೆ ತನ್ನ ಪರವಾಗಿ ಜನರು ನಿಲ್ಲುವಂತೆ ಪ್ರಚಾರ ನಡೆಸಲು ಅವಕಾಶವಿರಬೇಕು. ತಾನು ವಿಜ್ಞಾನ, ತತ್ವಜ್ಞಾನ ಅಥವಾ ನೈತಿಕ ಸತ್ಯದ ಹರಿಕಾರ ಎಂದು ಸರ್ಕಾರವು ಭಾವಿಸಬಾರದು. ಆದರೆ ಅಂತಹುದು ಬಹು ವೇಳೆ ನಡೆದಿದೆ, ಈಗ ಜರ್ಮನಿ, ಇಟಲಿ ಮತ್ತು ರಷ್ಯಾಗಳಲ್ಲಿ ನಡೆಯುತ್ತಿದೆ. ಇದು ತನ್ನ ದೌರ್ಬಲ್ಯವನ್ನು ಒಪ್ಪಿಕೊಂಡಂತೆ, ಇದರಿಂದ ಸ್ಥಿರ ಸರ್ಕಾರಗಳು ಹೊರತಾಗಬೇಕು.

ಈಗ ಸಾಮಾನ್ಯ ನಾಗರಿಕನ ಕಡೆ ಗಮನ ಹರಿಸೋಣ: ಸರ್ಕಾರಕ್ಕೆ ತೀವ್ರ ಅಪಾಯಕಾರಿ, ಅಂದರೆ ಸರ್ಕಾರದ ಅಸ್ತಿತ್ವಕ್ಕೆ ಸಂಚಕಾರ ತರುವಂತಹುದು, ಎನ್ನುವ ಪರಿಸ್ಥಿತಿಗಳನ್ನು ಬಿಟ್ಟರೆ ಅನ್ಯತಃ ಪ್ರಚಾರಸ್ವಾತಂತ್ರ್ಯದ ಬಗ್ಗೆ ಅವನಿಗೆ ಅಂತಹ ಆಸಕ್ತಿಯೇನೂ ಇರುವುದಿಲ್ಲ. ಮತಧರ್ಮ ಅಥವಾ ರಾಷ್ಟ್ರೀಯತೆಯ ವಿಷಯಗಳಲ್ಲಿ ಸರ್ಕಾರವು ತನ್ನ ಪ್ರಜೆಗಳ ಅಭಿಪ್ರಾಯಕ್ಕೆ ಭಿನ್ನವಾಗಿರಬಹುದು; ನೋಬಲ್‌ಗಳನ್ನು ಬಿಟ್ಟು ಅದು ರಾಜನ ಪಕ್ಷ ವಹಿಸಬಹುದು, ಅಥವಾ ಬಡವರನ್ನು ಕಡೆಗಣಿಸಿ ಬೂರ್ಜ್ವಾಗಳ ಪರವಿರಬಹುದು; ಅದಕ್ಕೆ ಎರಡನೆಯ ಚಾರ್ಲ್ಸ್‌ನಂತೆ ಅಥವಾ ಯುದ್ಧಾನಂತರದ ಜರ್ಮನ್ ಸರ್ಕಾರದಂತೆ ದೇಶಭಕ್ತಿಯ ಕೊರತೆ ಇರಬಹುದು. ಅಂತಹ ಸಂದರ್ಭಗಳಲ್ಲಿ ಸಾಮಾನ್ಯ ನಾಗರಿಕನು ಸರ್ಕಾರದ ವಿರುದ್ಧದ ಚಳುವಳಿಗಳಲ್ಲಿ ಆಸಕ್ತಿ ತಾಳಿ, ತಮ್ಮ ನಾಯಕರ ಬಂಧನದ ವಿರುದ್ಧ ವಾಕ್‌ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸಬಹುದು. ಆದರೆ ಇಂತಹವು ಕ್ರಾಂತಿಪೂರ್ವ ಸನ್ನಿವೇಶಗಳು; ಹಾಗಿರುವ ಕಡೆಯಲ್ಲಿ ತಮ್ಮ ವಿರುದ್ಧದ ಪ್ರಚಾರವನ್ನು ಸರ್ಕಾರಗಳು ಸಹಿಸಿಕೊಳ್ಳಬೇಕು ಎಂದರೆ ಅವುಗಳು ಅಧಿಕಾರತ್ಯಾಗ ಮಾಡಬೇಕು ಎಂದು ಹೇಳಿದಂತೆಯೇ ಆಗುತ್ತದೆ. ಅವುಗಳ ದೃಷ್ಟಿಯಿಂದಲೂ ಇದು ಅನೇಕ ವೇಳೆ ಸಮಂಜಸವೇ, ಏಕೆಂದರೆ ಕೆಳಗಿಳಿಯುವುದರಿಂದ ಅಧಿಕಾರ ಹೋಗುತ್ತದೆಯೇ ವಿನಾ, ಪಟ್ಟುಹಿಡಿದು ಕೂತರೆ ಅವರ ಪ್ರಾಣಕ್ಕೇ ಸಂಚಕಾರ ಬರಬಹುದು. ಆದರೆ ಇದನ್ನು ಅರಿತುಕೊಳ್ಳುವ ವಿವೇಕ ಮಾತ್ರ ಯಾವ ಸರ್ಕಾರಕ್ಕೂ ಇರುವುದಿಲ್ಲ. ಪ್ರಬಲ

ದೇಶವೊಂದು ದುರ್ಬಲವಾದುದರ ಮೇಲೆ ದೌರ್ಜನ್ಯ ನಡೆಸಿದಾಗಲೂ ಇದು ಬಹು ವೇಳೆ ಸತ್ಯವೇ.

ಅದು ಅತ್ಯಂತ ದಾರುಣ ಸ್ಥಿತಿಯ ದೇಶ
ಇಲ್ಲಿಯವರೆಗೆ ಕಾಣದಂಥದ್ದು,
ಅಲ್ಲಿ ಜನರ ಮಾರಣ ಹೋಮವೇ ನಡೆದಿದೆ
ಹಸಿರನ್ನು ತೊಟ್ಟ ಕಾರಣದಿಂದ

ಎಂಟು ಶತಮಾನಗಳಿಂದ ಇಂಗ್ಲಂಡ್ ಐರ್ಲಂಡ್‌ನ ಬಗ್ಗೆ ಇದೇ ಧೋರಣೆಯನ್ನೇ ಮುಂದುವರೆಸಲು ಸಾಧ್ಯವಾಯಿತು, ಇದರಿಂದ ಸ್ವಲ್ಪ ಹಣ ಮತ್ತು ಘನತೆಗೆ ಅಪಾರ ಕುಂದು ಉಂಟಾದವು. ಎಂಟು ಶತಮಾನಗಳ ಕಾಲ ಬ್ರಿಟಿಷ್ ಧೋರಣೆಯು ಯಶಸ್ಸು ಗಳಿಸಿತ್ತು, ಏಕೆಂದರೆ ಸಾಹುಕಾರರು ಮೆರೆಯುತ್ತಿದ್ದರು ಮತ್ತು ರೈತರು ಹಸಿದುಕೊಂಡಿದ್ದರು.

ಸಾಮಾನ್ಯ ನಾಗರಿಕನಲ್ಲಿ ಆಸಕ್ತಿಯುಂಟುಮಾಡುವ ಸಂದರ್ಭಗಳಲ್ಲಿ ಪ್ರಚಾರಸ್ವಾತಂತ್ರ್ಯ ಎಂದರೆ ಹಿಂಸಾತ್ಮಕ ಕ್ರಾಂತಿ ಅಥವಾ ಹೆಚ್ಚಿನ ಸ್ವಾತಂತ್ರ್ಯ ಅಥವಾ ಸರ್ಕಾರವನ್ನು ಆಯ್ದುಕೊಳ್ಳುವ ಹಕ್ಕಿನ ಪ್ರತಿಪಾದನೆಯಿರುತ್ತದೆ. ಅದರೊಡನೆ ಪ್ರಜಾಪ್ರಭುತ್ವ ಹಾಗೂ ಅಸಂತೃಪ್ತ ವರ್ಗದವರಿಂದ ಸ್ವಾಯತ್ತತೆಗೆ ಬೇಡಿಕೆ ಸೇರಿಕೊಂಡಿರುತ್ತದೆ; ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಅನ್ಯತಃ ಕ್ರಾಂತಿಯಿಂದ ಪಡೆಯಬಹುದಾದುದನ್ನು ಶಾಂತಿಯುತವಾಗಿ ಗಳಿಸುವುದರೊಡನೆ ಅದು ತಳುಕುಹಾಕಿಕೊಂಡಿರುತ್ತದೆ. ಇದು ಮಹತ್ವದ ಹಕ್ಕು, ಅದನ್ನು ಮಾನ್ಯ ಮಾಡುವುದು ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡುವ ದೃಷ್ಟಿಯಿಂದ ಮುಖ್ಯವಾದುದು; ಆದರೆ ಅದು ಪ್ರಚಾರಸ್ವಾತಂತ್ರ್ಯಕ್ಕಿಂತ ತುಂ ದುರ ಹೋದ ಪರಿಸ್ಥಿತಿ.

ಈಗ ಉಳಿದಿರುವುದು ಹೊಸತನದ ಪ್ರಬಲ ಪ್ರತಿಪಾದಕನ ದೃಷ್ಟಿಕೋನದ ಪರಿಶೀಲನೆ. ಕಾನ್‌ಸ್ಟಾಂಟೈನ್‌ಗಿಂತ ಮುಂಚಿನ ಕ್ರಿಶ್ಚಿಯನ್, ಲೂಥರ್ ಕಾಲದ ಪ್ರಾಟೆಸ್ಟಂಟ್ ಹಾಗೂ ಈಗಿನ ಕಮ್ಯುನಿಸ್ಟ್ ಅನ್ನು ಇದರ ಮಾದರಿಯಾಗಿ ತೆಗೆದುಕೊಳ್ಳಬಹುದು. ಇವರೆಲ್ಲ ವಾಕ್‌ಸ್ವಾತಂತ್ರ್ಯದ ಬಗ್ಗೆ ಕನಿಷ್ಠ ಕಾಳಜಿಯುಳ್ಳವರು. ಹುತಾತ್ಮರಾಗಲು ಬಯಸುವವರು ಅವರು, ಹಾಗೆಯೇ ಇತರರನ್ನು ಹಾಗೆ ಮಾಡಲೂ ಉತ್ಸುಕರಾದವರು. ಹಿಂದೆಯೂ ಗಟ್ಟಿ ವ್ಯಕ್ತಿತ್ವದ ಜನರು ಸರ್ಕಾರದ ಭಯದ ನಡುವೆಯೂ ಮುಕ್ತವಾಗಿ ಮಾತನಾಡುತ್ತಿದ್ದರೆಂಬುದು ಇತಿಹಾಸದಿಂದ ತಿಳಿಯುತ್ತದೆ. ಆದರೆ ಆಧುನಿಕ ಸರ್ಕಾರಗಳು ಹೆಚ್ಚು ಸಮರ್ಥವಾದವು, ಹೊಸತನವನ್ನು ಅಸಾಧ್ಯವಾಗಿ

ಮಾಡುವುದರಲ್ಲಿ ಪ್ರಾಯಶಃ ಬಲ್ಲಿದವಾದವು. ಮತ್ತೊಂದೆಡೆ, ಯುದ್ಧದಿಂದ ಕ್ರಾಂತಿಯಾಗಬಹುದು, ಅನಾಯಕತ್ವವೂ ಉಂಟಾಗಬಹುದು, ಇದರಿಂದ ಪ್ರಾಯಶಃ ಏನಾದರೂ ಹೊಸತು ಉದ್ಭವಿಸಬಹುದು. ಈ ಕಾರಣಕ್ಕಾಗಿಯೇ ಕೆಲವು ಮಂದಿ ಕಮ್ಯುನಿಸ್ಟರು ಮುಂದಿನ ಯುದ್ಧಕ್ಕೆ ತವಕದಿಂದ ಕಾಯುತ್ತಿದ್ದಾರೆ.

ಹೊಸತನದ ಪ್ರಬಲ ಪ್ರತಿಪಾದಕನು ಸಾಮಾನ್ಯವಾಗಿ ಹೊಸಯುಗದಲ್ಲಿ ನಂಬಿಕೆಯಿಟ್ಟವನು: ತನ್ನ ಸಿದ್ಧಾಂತವನ್ನು ಎಲ್ಲರೂ ಒಪ್ಪಿಕೊಳ್ಳುವ ಕಾಲ ಬರುತ್ತದೆಂದು ನಂಬಿದವನು. ಈಗ ಅವನು ಕ್ರಾಂತಿಕಾರಿಯಾಗಿದ್ದರೂ, ಮುಂದೆ ಅವನೇ ಸನಾತನವಾದಿಯಾಗುವವನು: ಪರಿಪೂರ್ಣ ಸರ್ಕಾರ ಸ್ಥಾಪನೆಯಾಗಬೇಕು, ಹಾಗಾದಾಗ ಅದನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕು ಎನ್ನುವವನು. ಈ ಮನೋಭಾವದ ಅವನು ಸಹಜವಾಗಿಯೇ ಪರಿಪೂರ್ಣ ಸರ್ಕಾರದ ಸ್ಥಾಪನೆಗಾಗಿಯಾಗಲೀ ಅದನ್ನು ಉರುಳಿಸುವುದನ್ನು ತಪ್ಪಿಸುವುದಕ್ಕಾಗಿಯಾಗಲೀ ಹಿಂಸೆಯಿಂದ ಕೊಂಚವೂ ಹಿಂಜರಿಯುವವನಲ್ಲ. ಎದುರಾಳಿಯ ದೃಷ್ಟಿಯಿಂದ ಅವನೊಬ್ಬ ಭಯೋತ್ಪಾದಕ; ಸರ್ಕಾರದ ದೃಷ್ಟಿಯಲ್ಲಿ ಒಬ್ಬ ಜನಪೀಡಕ. ಹಿಂಸೆಯಲ್ಲಿನ ಅವನ ನಂಬಿಕೆಯಿಂದಾಗಿ ಸಹಜವಾಗಿಯೇ ಎದುರಾಳಿಯಲ್ಲಿಯೂ ಅದೇ ಮನೋಭಾವವನ್ನೇ ಪ್ರಚೋದಿಸುವವನು: ಎದುರಾಳಿಗಳು ಅಧಿಕಾರದಲ್ಲಿದ್ದಾಗ ಅವನನ್ನು ಶಿಕ್ಷಿಸುತ್ತಾರೆ, ವಿರೋಧಪಕ್ಷದಲ್ಲಿದ್ದಾಗ ಅವನ ಕೊಲೆಗಾಗಿ ಸಂಚು ಮಾಡುತ್ತಾರೆ. ಹೀಗಾಗಿ ಅವನ ಹೊಸಯುಗವು ಎಲ್ಲರಿಗೂ ಪ್ರಿಯವಾದುದೇನಲ್ಲ; ಅದರಲ್ಲಿಯೂ ಬೇಹುಗಾರರಿರುತ್ತಾರೆ, ಆಡಳಿತಾತ್ಮಕ ಆಜ್ಞೆಗಳ ಮೂಲಕ ಬಂಧನಗಳಾಗುತ್ತವೆ, ಹಾಗೂ ಶ್ರಮಶಿಬಿರಗಳಿರುತ್ತವೆ. ಆದರೆ, ಟರ್‌ಟುಲಿಯ್‌ನಂತೆ ಅವನಿಗೆ ಅದರಲ್ಲಿ ತೊಂದರೆಯೇನೂ ಕಾಣಿಸದು.

ಹೊಸಯುಗದಲ್ಲಿ ನಂಬಿಕೆಯಿಟ್ಟವರಲ್ಲಿ ಕಡಿಮೆ ಉಗ್ರರೂ ಇರುತ್ತಾರೆಂಬುದು ನಿಜ. ವ್ಯಕ್ತಿಯಲ್ಲಿನ ಅತ್ಯುತ್ತಮ ಅಂಶಗಳು ಸಹಜವಾಗಿ ಹೊರಬರಬೇಕೇ ಹೊರತು ಅದನ್ನು ಹೊರಗಿನಿಂದ ಹೇರಬಾರದು ಎಂಬ ಆಭಿಪ್ರಾಯದವರೂ ಇದ್ದಾರೆ; ಇದಕ್ಕೆ ಉದಾಹರಣೆಯೆಂದರೆ ಗೆಳೆಯರ ಕೂಟ (ಸೊಸೈಟಿ ಆಫ಼್ ಫ಼್ರೆಂಡ್ಸ್). ಉಪಕಾರದೃಷ್ಟಿಯದೂ ಮನವೊಲಿಕೆಯದೂ ಆಗಿರುವಾಗ ಬಾಹ್ಯ ಪ್ರಭಾವಗಳು ಮುಖ್ಯವೂ ಸಹಾಯಕವೂ ಆದರೂ, ಅವು ಸೆರೆವಾಸ ಅಥವಾ ಮರಣದಂಡನೆಯ ರೂಪಗಳನ್ನು ಪಡೆದಾಗ ಅಲ್ಲ ಎಂಬುದು ಮತ್ತೆ ಕೆಲವರ ಅಭಿಪ್ರಾಯ.

ಹೊಸತರ ಪ್ರಬಲ ಪ್ರತಿಪಾದಕರಾದರೂ ಅವರು ಪ್ರಚಾರಸ್ವಾತಂತ್ರ್ಯದಲ್ಲಿ ನಂಬಿಕೆಯಿಟ್ಟವರು.

ಹೊಸತನದ ಮತ್ತೊಂದು ಬಗೆಯ ಪ್ರತಿಪಾದಕರಿರುತ್ತಾರೆ, ಅವರು ಅಸ್ತಿತ್ವದಲ್ಲಿರುವುದು ವಿಕಾಸವು ಫ್ಯಾಷನಬಲ್ ಎನಿಸಿದಾಗ; ಈ ಬಗೆಯಲ್ಲಿ ಕಾರ್ಮಿಕ ಸ್ವಾಮ್ಯವಾದಿ (ಸಿಂಡಿಕಲಿಸ್ಟ್) ಯಾಗಿದ್ದ ಕಾಲದ ಸೊರೆಲ್ ಅನ್ನು ಮಾದರಿಯಾಗಿ ಪರಿಗಣಿಸಬಹುದು. ಅಂಥವರ ವಾದವೆಂದರೆ ಮಾನವ ಜೀವನವು, ಪೂರ್ವನಿಶ್ಚಿತ ನಿರ್ದಿಷ್ಟ ರೂಪದ ಗುರಿಯೆಡೆಗಾಗಿರದ, ಅಂದರೆ ಸಾಧಿಸುವುದಕ್ಕೆ ಮುಂಚೆಯೇ ಪ್ರಗತಿಯನ್ನು ನಿರ್ದಿಷ್ಟವಾಗಿ ಸೂತ್ರೀಕರಿಸುವ ರೀತಿಯದಾಗಿರದ, ಆದರೆ ಇಟ್ಟ ಪ್ರತಿ ಹೆಜ್ಜೆಯೂ ಮುಂದುವರಿಕೆಯಾಗಿ ಕಾಣುವ ದಿಸೆಯಲ್ಲಿ, ನಿರಂತರವಾಗಿ ಪ್ರಗತಿಪರವಾಗಿರಬೇಕೆಂಬುದು. ಕಾಣಲಾಗದ್ದಕ್ಕಿಂತ ಕಾಣಲು ಸಾಧ್ಯವಾಗುವುದು, ಮೂಕನಾಗಿರುವುದಕ್ಕಿಂತ ಮಾತು ಬಲ್ಲುದು ಲೇಸು ಹೀಗೆ. ಎಲ್ಲ ಪ್ರಾಣಿಗಳೂ ಕುರುಡಾಗಿರುವಾಗ ಕಾಣುವ ಶಕ್ತಿಯನ್ನು ಸುಧಾರಣೆಯ ಮುಂದಿನ ಹೆಜ್ಜೆಯಾಗಿ ನಿಗದಿಗೊಳಿಸಲು ಸಾಧ್ಯವಾಗುವುದಿಲ್ಲ. ಆದರೆ, ಆನಂತರ ನೋಡಿದಾಗ, ಅದೇ ಮುಂದಿನ ಹೆಜ್ಜೆಯಾಯಿತೆಂಬುದನ್ನು ನೆನೆದರೆ, ಚಲನೆಯಿಲ್ಲದ ಸಂಪ್ರದಾಯಶರಣತೆಯು ಎಂಥ ಅವಿವೇಕತನದ್ದು ಎಂಬುದು ಅರಿವಾಗುತ್ತದೆ. ಹೀಗಾಗಿ ಎಲ್ಲ ಹೊಸ ಆವಿಷ್ಕಾರಗಳಿಗೂ ಉತ್ತೇಜನ ನೀಡಬೇಕು, ಅವುಗಳಲ್ಲಿ ಯಾವುದಾದರೊಂದು, ಯಾವುದೆಂಬುದು ಮೊದಲೇ ತಿಳಿಯದಿದ್ದರೂ, ವಿಕಾಸಶೀಲ ಸತ್ವವನ್ನೊಳಗೊಂಡಿರುವುದನ್ನು ದೃಢಪಡಿಸುತ್ತದೆ ಎಂಬುದು ಇಂಥವರ ವಾದ.

ಈ ದೃಷ್ಟಿಕೋನದಲ್ಲಿ ಸತ್ಯಾಂಶವಿದೆ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಇದರಿಂದ ಪ್ರಗತಿಯ ಪೊಳ್ಳು ಆಧ್ಯಾತ್ಮಿಕತೆಯು ಬೆಳೆಯುತ್ತದೆ, ಮತ್ತು ಅದರ ಅಸ್ಪಷ್ಟತೆಯಿಂದಾಗಿ ಅದನ್ನು ವ್ಯವಹಾರ್ಯ ರಾಜಕಾರಣಕ್ಕೆ ಬುನಾದಿಯನ್ನಾಗಿ ಮಾಡಿಕೊಳ್ಳುವುದು ಸಾಧ್ಯವಾಗದು. ಐತಿಹಾಸಿಕವಾಗಿ ಪ್ರಮುಖರಾದ ಆವಿಷ್ಕರಣಕಾರರು ಸ್ವರ್ಗಕ್ಕೆ ಕಿಚ್ಚು ಹಚ್ಚುವುದರಲ್ಲಿ ನಂಬಿಕೆಯಿಟ್ಟಿದ್ದವರು; ಹಲವು ವೇಳೆ ಅವರು ತಮ್ಮ ಸಾಮ್ರಾಜ್ಯಗಳನ್ನು ಸ್ಥಾಪಿಸಿದ್ದಾರೆ, ಆದರೆ ಅದು ಸ್ವರ್ಗಸಾಮ್ರಾಜ್ಯವೇನೂ ಅಲ್ಲ.

ಈಗ ನಾನು ಪ್ರಚಾರಸ್ವಾತಂತ್ರ್ಯದ ಬಗೆಗಿನ ತತ್ವಜ್ಞಾನಿಯ ದೃಷ್ಟಿಕೋನದ ವಿಷಯಕ್ಕೆ ಬರುತ್ತೇನೆ. ಪ್ರಾಚೀನ ಕಾಲದ ಸಹಿಷ್ಣು ಮನೋಭಾವವನ್ನು ಕುರಿತು ಗಿಬ್ಬನ್ ಹೇಳುತ್ತಾನೆ: "ರೋಮ್ ಜಗತ್ತಿನಲ್ಲಿದ್ದ ವಿವಿಧ ಬಗೆಯ ಆರಾಧನಾ ರೀತಿಗಳೆಲ್ಲವನ್ನೂ ಸಮಾನ ಸತ್ಯವೆಂದು

ಜನರು ಪರಿಗಣಿಸಿದ್ದರು; ತತ್ವಜ್ಞಾನಿಯು ಮಾತ್ರ ಎಲ್ಲವೂ ಸಮಾನ ಅಸತ್ಯವೆಂದು ಭಾವಿಸಿದ್ದ; ದಂಡಾಧಿಕಾರಿಯು ಎಲ್ಲವೂ ಸಮಾನ ಉಪಯುಕ್ತವೆಂದು ಪರಿಗಣಿಸಿದ್ದ." ನನ್ನ ಮನಸ್ಸಿನಲ್ಲಿರುವ ತತ್ವಜ್ಞಾನಿಯು ಮಾತ್ರ, ಅಸ್ತಿತ್ವದಲ್ಲಿರುವ ಎಲ್ಲ ಮತಸಿದ್ಧಾಂತಗಳು *ಸಮಾನ* ಅಸತ್ಯವೆಂದು ಸಾರುವಷ್ಟು ದೂರ ಹೋಗದಿದ್ದರೂ, ಅವುಗಳಲ್ಲಿ ಯಾವುದೂ ಅಸತ್ಯದಿಂದ ದೂರವಿದೆಯೆಂದಾಗಲೀ, ಅಥವಾ ಅಕಸ್ಮಾತ್ ಹಾಗೇನಾದರೂ ಆಗಿದ್ದರೆ ಆ ಮಹಾಸತ್ಯವನ್ನು ಮಾನವನ ಶಕ್ತಿಯು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದಾಗಲೀ ಹೇಳುವುದಿಲ್ಲ. ತಾತ್ವಿಕನಲ್ಲದ ಪ್ರಚಾರಕನಿಗೆ, ತನ್ನ ಪ್ರಚಾರವು ಮಾತ್ರ ಸತ್ಯದ್ದಾಗಿದ್ದು, ವಿರೋಧೀ ಪ್ರಚಾರವು ಅಸತ್ಯದ್ದಾಗಿರುತ್ತದೆ. ಅವನೇನಾದರೂ ಎರಡಕ್ಕೂ ಅವಕಾಶವೀಯುವುದಾದರೆ, ಅದಕ್ಕೆ ಕಾರಣ ತನ್ನದನ್ನೇ ನಿಷೇಧಿಸಬಹುದೆಂಬ ಭಯ. ತಾತ್ವಿಕ ಜಿಜ್ಞಾಸುವಿಗೆ ಈ ವಿಷಯವು ಅಷ್ಟು ಸರಳವಾದುದಲ್ಲ.

ತತ್ವಜ್ಞಾನಿಗೆ ಪ್ರಚಾರದಿಂದೇನು ಪ್ರಯೋಜನ? ಅವನು "ಪೇಯಗಳನ್ನು ತಯಾರಿಸುವುದಕ್ಕೆಂದು ಪೇಯ ಕೈಗಾರಿಕೆಗಳಿರುವಂತೆ, ಅಭಿಪ್ರಾಯ ಕೈಗಾರಿಕೆಗಳಿರುವುದು ಅಭಿಪ್ರಾಯಗಳನ್ನು ನಿರ್ಮಿಸಲು. ತಯಾರಿಸಿದ ಅಭಿಪ್ರಾಯಗಳು ಒಂದೇ ಬಗೆಯ ಎರಡು ಪೇಯಗಳಂತಿದ್ದು ಎರಡೂ ಒಳ್ಳೆಯವಾಗಿದ್ದರೇನು ಮಾಡುವುದು? ಏಕಸ್ವಾಮ್ಯದಿಂದಾಗಿ ಭಾರಿ ಉತ್ಪಾದನೆಯು ಸಣ್ಣ ಘಟಕಗಳ ಉತ್ಪಾದನೆಗಿಂತ ಅಗ್ಗವಾದರೆ, ಅದನ್ನು ಮತ್ತೊಂದರ ಉತ್ಪಾದನೆಗೂ ಅನ್ವಯಿಸುವುದಕ್ಕೂ ಅದೇ ಕಾರಣ ಅಷ್ಟೇ ಸಮಂಜಸವಾದೀತು. ಅಲ್ಲ, ಇನ್ನೂ ಹೆಚ್ಚು. ಸ್ಪರ್ಧೆಗಿಳಿಯುವ ಪೇಯ ಕೈಗಾರಿಕೆಗಳಂತೆ ಸ್ಪರ್ಧಿಸುವ ಅಭಿಪ್ರಾಯ ಕೈಗಾರಿಕೆಗಳೂ ಹಿಂದಿನದರಷ್ಟೇ ಒಳ್ಳೆಯ ವಿಭಿನ್ನ ಅಭಿಪ್ರಾಯಗಳನ್ನು ತಯಾರಿಸಬಹುದು: ನನ್ನ ಉತ್ಪನ್ನಗಳನ್ನು ಹಾಳುಮಾಡುವಂತಹ ಅಭಿಪ್ರಾಯಗಳನ್ನು ಅದು ಮಾಡುತ್ತಿದೆ, ಹೀಗಾಗಿ ಜನರಿಗೆ ನಿರಂತರವಾಗಿ ಸರಬರಾಜು ಮಾಡಲು ನಾನು ನನ್ನ ಉತ್ಪಾದನೆಗಳನ್ನು ಹೆಚ್ಚಿಸಬೇಕಾಗುತ್ತದೆ. ಹೀಗಾಗಿ ಸ್ಪರ್ಧಿಸುವ ಕಾರ್ಖಾನೆಗಳನ್ನು ನಿಷೇಧಿಸಬೇಕು" ಎಂದು ಅವನು ಹೇಳಲಾರ. ನಾನು ಹೇಳುತ್ತಿರುವುದು ತತ್ವಜ್ಞಾನಿಯು ಈ ದೃಷ್ಟಿಕೋನವನ್ನು ಹೊಂದಿರಲು ಸಾಧ್ಯವಿಲ್ಲ ಎಂದು. ಪ್ರಚಾರದಿಂದ ಏನಾದರೂ ಒಳಿತು ಉಂಟಾಗಬೇಕಾದರೆ, ಪ್ರಚಾರದಿಂದಾಗಿ ನೆಲೆಗೊಳ್ಳುವ ನಂಬಿಕೆಯು ಖಚಿತವಾದ ತಪ್ಪು ಅಭಿಪ್ರಾಯವನ್ನು ಮೂಡಿಸುವಂಥದ್ದಾಗಿರದೆ, ಅದಕ್ಕೆ ವಿರುದ್ಧವಾಗಿ, ತೀರ್ಮಾನಸಾಮರ್ಥ್ಯ, ವೈಚಾರಿಕ ಅನುಮಾನ ಹಾಗೂ ವಿರುದ್ಧಾಭಿಪ್ರಾಯಗಳನ್ನು ತೂಗಿ ನೋಡುವ ಶಕ್ತಿ ಇವುಗಳನ್ನು

ಹೆಚ್ಚಿಸುವಂಥದಾಗಿರಬೇಕು ಎಂದು ಅವನು ವಾದಿಸಬೇಕು. ಪ್ರಚಾರದಲ್ಲಿ ಸ್ಪರ್ಧೆಗೆ ಅವಕಾಶವಿದ್ದಾಗ ಮಾತ್ರ ಈ ಉದ್ದೇಶವು ನೆರವೇರುತ್ತದೆ. ಅವನು ಎರಡೂ ಪಕ್ಷಗಳ ವಾದವನ್ನು ಕೇಳುವ ನ್ಯಾಯಾಧೀಶನಿಗೆ ಜನರನ್ನು ಹೋಲಿಸುತ್ತಾನೆ, ಹಾಗೂ ಎರಡೂ ಕಡೆಯ ಪ್ರಚಾರದ ಏಕಸ್ವಾಮ್ಯವು, ಅಪರಾಧ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ನ ಇಲ್ಲವೇ ಆರೋಪಿಯ ವಾದವನ್ನು ಮಾತ್ರ ಕೇಳುವಷ್ಟೇ ಅಸಂಬದ್ಧವೆಂದು ಅವನು ತೀರ್ಮಾನಿಸುತ್ತಾನೆ. ಪ್ರಚಾರದ ಸಮರೂಪತೆಯ ಬದಲು ಜನರು ಸಮಸ್ಯೆಯ ಎಲ್ಲ ಬದಿಗಳನ್ನೂ ಸಾಧ್ಯವಾದಷ್ಟೂ ಕೇಳುವಂತಾಗಬೇಕೆಂದು ಅವನು ಅಪೇಕ್ಷಿಸುತ್ತಾನೆ. ಭಿನ್ನ ಪಕ್ಷಗಳ ಹಿತವನ್ನು ಕಾಪಾಡುವ ಹಾಗೂ ಓದುಗರಲ್ಲಿ ಅದರ ಸಿದ್ಧಾಂತಕ್ಕೆ ಒಲಿಯುವಂತೆ ಮಾಡಲು ಹೆಣಗುವ ವಿವಿಧ ಪತ್ರಿಕೆಗಳ ಬದಲು ಎಲ್ಲ ಪಕ್ಷಗಳ ದೃಷ್ಟಿಕೋನಗಳನ್ನೂ ಪ್ರತಿನಿಧಿಸುವ ಒಂದು ಪತ್ರಿಕೆಯನ್ನು ಅವನು ಸಮರ್ಥಿಸುತ್ತಾನೆ.

ಅಪಾರ ಬೌದ್ಧಿಕ ಅನುಕೂಲಗಳನ್ನು ಹೊಂದಿರುವ ಚರ್ಚಾಸ್ವಾತಂತ್ರ್ಯಕ್ಕೆ ಸ್ಪರ್ಧೆಯಲ್ಲಿ ತೊಡಗಿದ ಸಂಘಟನೆಗಳ ಆವಶ್ಯಕತೆಯೇನೂ ಇಲ್ಲ. ಬಿಬಿಸಿ ವಿವಾದಗಳಿಗೆ ಅವಕಾಶವೀಯುತ್ತದೆ. ವಿರುದ್ಧ ವೈಜ್ಞಾನಿಕ ಸಿದ್ಧಾಂತಗಳ ಮಂಡನೆಗೆ ರಾಯಲ್ ಸೋಸೈಟಿ ವೇದಿಕೆಯನ್ನೊದಗಿಸುತ್ತದೆ. ವಿದ್ವತ್ ಸಂಸ್ಥೆಗಳು ಸಾಮಾನ್ಯವಾಗಿ ತನ್ನ ಪರವಾದ ಪ್ರಚಾರದಲ್ಲಿ ತೊಡಗುವುದಿಲ್ಲ, ಆದರೆ ತನ್ನ ಸದಸ್ಯರ ವಿಭಿನ್ನ ಅಭಿಪ್ರಾಯಗಳ ಅಭಿವ್ಯಕ್ತಿಗೆ ಅಸ್ಪದವೀಯುತ್ತವೆ. ಒಂದೇ ಸಂಸ್ಥೆಯಡಿ ನಡೆಯುವ ಅಂಥ ಚರ್ಚೆಗಳ ಹಿಂದೆ ಒಂದು ಮೂಲಭೂತ ಅಂಶ ಅಡಕವಾಗಿದೆ; ಯಾವುದೇ ಈಜಿಪ್ಟ್‌ಶಾಸ್ತ್ರಜ್ಞ ತಾನು ಇಷ್ಟಪಡದ ಮತ್ತೊಬ್ಬ ತಜ್ಞನ ಸಿದ್ಧಾಂತಗಳನ್ನು ಹತ್ತಿಕ್ಕಲು ಸೈನ್ಯದ ನೆರವನ್ನು ಪಡೆಯಬಯಸುವುದಿಲ್ಲ. ಯಾವುದೇ ಸಮುದಾಯವು ತನ್ನ ಸರ್ಕಾರದ ಸ್ವರೂಪದ ಬಗ್ಗೆ ಮೂಲಭೂತ ಒಮ್ಮತವನ್ನು ಹೊಂದಿದ್ದರೆ, ಮುಕ್ತ ಸಂವಾದವು ಸಾಧ್ಯವಾಗುತ್ತದೆ; ಆದರೆ ಅಂಥ ಒಮ್ಮತವಿಲ್ಲದ ಕಡೆಗಳಲ್ಲಿ ಪ್ರಚಾರವು ಬಲಪ್ರಯೋಗಕ್ಕೆ ನಾಂದಿಯೇನೋ ಎನಿಸುತ್ತದೆ, ಅಂತೆಯೇ ಬಲವನ್ನು ಹೊಂದಿದವರು ಸಹಜವಾಗಿ ಪ್ರಚಾರದ ಏಕಸ್ವಾಮ್ಯವನ್ನು ಪಡೆಯುವ ಗುರಿ ಹೊಂದಿರುತ್ತಾರೆ. ಪ್ರಚಾರ ಸ್ವಾತಂತ್ರ್ಯವು ಸಾಧ್ಯವಾಗುವುದು ಒಂದೇ ಸರ್ಕಾರದಡಿಯಲ್ಲಿ ಭಿನ್ನಮತಗಳಿದ್ದರೂ ಶಾಂತಿಯುತ ಸಹಬಾಳ್ವೆಯು ಅಸಾಧ್ಯವೆನಿಸದ ವಾತಾವರಣವಿರುವ ಕಡೆಗಳಲ್ಲಿ. ಹದಿನಾರನೆಯ ಶತಮಾನದಲ್ಲಿ ಪ್ರಾಟೆಸ್ಟಂಟರೂ ಕ್ಯಾಥೋಲಿಕ್ಕರೂ ರಾಜಕೀಯ ಸಹಕಾರ ಹೊಂದಿರಲು ಸಾಧ್ಯವಾಗಿರಲಿಲ್ಲ,

ಆದರೆ ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಅದು ಸಾಧ್ಯವಾಯಿತು; ಈ ನಡುವೆ ಧಾರ್ಮಿಕ ಸಹಿಷ್ಣುತೆ ಬೆಳೆದು ಬಂತು. ಬೌದ್ಧಿಕ ಸ್ವಾತಂತ್ರ್ಯಕ್ಕೆ ಸ್ಥಿರ ಸರ್ಕಾರದ ಚೌಕಟ್ಟು ಅತ್ಯವಶ್ಯಕವಾದುದು; ಆದರೆ, ದುರದೃಷ್ಟವಶಾತ್ ಅದೇ ದೌರ್ಜನ್ಯದ ಮುಖ್ಯ ಚಾಲಕಶಕ್ತಿಯೂ ಆಗಿಬಿಡಬಹುದು. ಈ ತೊಂದರೆಗೆ ಪರಿಹಾರವು ಹೆಚ್ಚು ಕಡಿಮೆ ಸರ್ಕಾರದ ಸ್ವರೂಪವನ್ನು ಅವಲಂಬಿಸಿದೆ.

–೦–೦–೦–

ಅಧ್ಯಾಯ ೧೫

ಅಧಿಕಾರ ಮತ್ತು ನೀತಿಸಂಹಿತೆಗಳು

ನೈತಿಕತೆ ಎಂಬುದು, ಕನಿಷ್ಠ ಪಕ್ಷ ಹೀಬ್ರೂ ಪ್ರವಾದಿಗಳ ಕಾಲದಿಂದಲೂ, ಎರಡು ತೀರ ವಿಭಿನ್ನ ಮಗ್ಗುಲುಗಳನ್ನು ಪಡೆದಿದೆ. ಒಂದೆಡೆ, ಅದು ಕಾನೂನಿನಂತಹ ಒಂದು ಸಾಮಾಜಿಕ ಪದ್ಧತಿಯಾಗಿದೆ; ಮತ್ತೊಂದೆಡೆ, ಅದು ವೈಯಕ್ತಿಕ ಪ್ರಜ್ಞೆಗೆ ಸಂಬಂಧಿಸಿದ ವಿಚಾರವಾಗಿದೆ. ಮೊದಲನೆಯ ಮಗ್ಗುಲಿನಲ್ಲಿ, ಅದು ಅಧಿಕಾರಯಂತ್ರದ ಭಾಗ; ಎರಡನೆಯದರಲ್ಲಿ, ಅದು ಹಲವು ಸಂದರ್ಭಗಳಲ್ಲಿ ಕ್ರಾಂತಿಕಾರಕ. ಕಾನೂನಿನಂತಹ ಪದ್ಧತಿಯನ್ನು 'ಧನಾತ್ಮಕ' ನೈತಿಕತೆ ಎನ್ನುತ್ತಾರೆ; ಮತ್ತೊಂದು ಬಗೆಯನ್ನು 'ವೈಯಕ್ತಿಕ' ಎಂದು ಕರೆಯಬಹುದು. ನೈತಿಕತೆಯ ಈ ಎರಡೂ ಬಗೆಗಳ ಪರಸ್ಪರ ಹಾಗೂ ಅವು ಅಧಿಕಾರದೊಂದಿಗೆ ಪಡೆಯುವ ಸಂಬಂಧಗಳನ್ನು ಕುರಿತು ನಾನು ಈ ಅಧ್ಯಾಯದಲ್ಲಿ ಪರಿಶೀಲಿಸಬಯಸುತ್ತೇನೆ.

'ಧನಾತ್ಮಕ' ನೈತಿಕತೆಯು 'ವೈಯಕ್ತಿಕ' ನೈತಿಕತೆಗಿಂತ ಪ್ರಾಚೀನವಾದುದು, ಮತ್ತು ಪ್ರಾಯಶಃ ಕಾನೂನು ಮತ್ತು ಸರ್ಕಾರಕ್ಕಿಂತ ಹಳೆಯದು. ಮೂಲತಃ ಇದು ಬುಡಕಟ್ಟು ಪದ್ಧತಿಗಳಿಂದ ಕೂಡಿದ್ದು, ಅವೇ ಕ್ರಮೇಣ ಕಾನೂನುಗಳಾಗಿ ಮೂಡಿಬಂದವು. ಯಾರು ಯಾರನ್ನು ಮದುವೆಯಾಗಬಹುದು ಎಂಬ ಬಗೆಗಿನ ವಿಸ್ತಾರವಾದ ನಿಯಮಗಳನ್ನು ಪರಿಶೀಲಿಸಿ, ಇವು ಅತ್ಯಂತ ಪ್ರಾಚೀನ ಅನಾಗರಿಕರಲ್ಲಿ ಕಂಡುಬರುತ್ತವೆ. ನಮಗೆ ಇವು ಕೇವಲ ನಿಯಮಗಳಂತೆ ಕಾಣಬಹುದು, ಆದರೆ ಅವುಗಳನ್ನು ಅನುಸರಿಸುವವರಿಗೆ ಅವು ನಮ್ಮ ಧರ್ಮಬಾಹಿರ ಲೈಂಗಿಕತೆಯಂತೆಯೇ ನೈತಿಕ ಒತ್ತಡವಾಗಿರಬಹುದು. ಅವುಗಳ ಮೂಲ ಅಸ್ಪಷ್ಟವಾಗಿದ್ದರೂ, ಅದು ಒಂದು ಬಗೆಯ ಮತಧರ್ಮವೇ ಎಂಬುದರಲ್ಲಿ ಸಂಶಯವಿಲ್ಲ. 'ಧನಾತ್ಮಕ' ನೈತಿಕತೆಯ ಈ ಭಾಗವು ಸಾಮಾಜಿಕ ಅಸಮಾನತೆಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರಲಿಲ್ಲವೆಂದು ತೋರುತ್ತದೆ; ವಿಶೇಷ ಅಧಿಕಾರವಾಗಲೀ ಅಂತಹುದು ಇರಬಹುದೆಂಬುದಾಗಲೀ ಅದಕ್ಕೆ ತಿಳಿಯದು. ನಾಗರಿಕ ಜನರಲ್ಲಿ ಕೂಡ ಈ ಬಗೆಯ ನೈತಿಕ ನಿಯಮಗಳು ಇನ್ನೂ ರೂಢಿಯಲ್ಲಿವೆ. ಒಂದು ಮಗುವಿನ ದೈವಿಕ ತಾಯ್ತಂದೆಯರ (ಗಾಡ್ ಪೇರೆಂಟ್ಸ್) ನಡುವಣ ಮದುವೆಯನ್ನು ಗ್ರೀಕ್ ಚರ್ಚ್

ನಿಷೇಧಿಸುತ್ತದೆ, ಇದರಿಂದ ಯಾವುದೇ ಒಳ್ಳೆಯ ಅಥವಾ ಕೆಟ್ಟ ಸಾಮಾಜಿಕ ನಿಯಮವು ಪಾಲನೆಯಾಗದಿದ್ದರೂ, ಅದರ ಮೂಲವು ಮಾತ್ರ ದೈವಶಾಸ್ತ್ರ(ಥಿಯಾಲಜಿ)ದಲ್ಲಿದೆ. ಈಗ ಸಕಾರಣವಾಗಿ ಒಪ್ಪಿತವಾಗಿರುವ ಅನೇಕ ನಿಷೇಧಗಳು ಮೂಲತಃ ಕಂದಾಚಾರದ ರೂಪದಲ್ಲಿದ್ದಂತೆ ಕಾಣುತ್ತದೆ. ಕೊಲೆಯನ್ನು ಮಾಡಬಾರದ್ದಕ್ಕೆ ಕಾರಣ ದೆವ್ವದ ಕಾಟ; ಅದು ಕೊಲೆಗಾರನನ್ನು ಮಾತ್ರ ಕಾಡುತ್ತಿರಲಿಲ್ಲ, ಅವನು ಸೇರಿದ ಇಡೀ ಸಮುದಾಯವನ್ನು. ಹೀಗಾಗಿ ಸಮುದಾಯಕ್ಕೆ ಇದರ ಬಗ್ಗೆ ಆಸಕ್ತಿ, ಅದನ್ನು ಶಿಕ್ಷೆಯ ಮೂಲಕವಾಗಲೀ ಶುದ್ಧೀಕರಣ ಆಚರಣೆಗಳಿಂದಾಗಲೀ ಪರಿಹರಿಸಲಾಗುತ್ತಿತ್ತು. ಕ್ರಮೇಣ ಈ ಶುದ್ಧೀಕರಣ ಪ್ರಕ್ರಿಯೆಗಳಿಗೆ ಆಧ್ಯಾತ್ಮಿಕ ಅರ್ಥವಂತಿಕೆ ಪ್ರಾಪ್ತವಾಯಿತು, ಇದಕ್ಕೆ ಪಶ್ಚಾತ್ತಾಪ ಹಾಗೂ ಪ್ರಾಯಶ್ಚಿತ್ತಗಳ ಸ್ವರೂಪ ನೀಡಲಾಯಿತು; ಆದರೆ ಈಗಲೂ "ಕುರಿಮರಿಯ ರಕ್ತದಲ್ಲಿ ತೊಳೆದ" ಮುಂತಾದ ಮಾತುಗಳ ಮೂಲಕ ಅದನ್ನು ಉಳಿಸಿಕೊಳ್ಳಲಾಗಿದೆ.

'ಧನಾತ್ಮಕ' ನೈತಿಕತೆಯ ಈ ಅಂಶವು ಮುಖ್ಯವಾದುದು, ಆದರೆ ನಾನು ವಿಶ್ಲೇಷಿಸಬಯಸುವುದು ಇದರ ಬಗ್ಗೆ ಮಾತ್ರ ಅಲ್ಲ. ಒಪ್ಪಿತ ನೀತಿಸಂಹಿತೆಯಲ್ಲಿ ಅವು ತಮ್ಮ ಅಧಿಕಾರವನ್ನು ಚಲಾಯಿಸುವ ಬಗೆಯನ್ನು ಕುರಿತು ನಾನು ಪರಿಶೀಲಿಸುತ್ತೇನೆ. ಸಾಂಪ್ರದಾಯಿಕ ನೈತಿಕತೆಯ ಉದ್ದೇಶಗಳಲ್ಲಿ ಒಂದು – ಬಹುತೇಕ ಅರಿವಿರದಂತಹ ರೂಪದಲ್ಲಿ – ಪ್ರಸ್ತುತ ಸಮಾಜ ವ್ಯವಸ್ಥೆಯು ನಡೆದುಕೊಂಡು ಹೋಗುವಂತೆ ಮಾಡುವುದು. ಯಶಸ್ವಿಯಾದರೆ, ಅದರಿಂದಾಗಿ ಪೋಲೀಸ್ ದಳ ಮಾಡಬಹುದಾದ್ದಕ್ಕಿಂತ ಹೆಚ್ಚು ಸಮರ್ಥವಾಗಿ ಈ ಉದ್ದೇಶವು ನೆರವೇರುತ್ತದೆ. ಆದರೆ ಅದಕ್ಕೆ ಅಧಿಕಾರದ ಪುನರ್‌ಹಂಚಿಕೆಯ ಬಯಕೆಯಿಂದ ಪ್ರೇರಿತವಾದ ಕ್ರಾಂತಿಕಾರಕ ನೈತಿಕತೆಯನ್ನು ಎದುರಿಸಬೇಕಾಗುವ ಪರಿಸ್ಥಿತಿಯೊದಗಬಹುದು. ಈ ಅಧ್ಯಾಯದಲ್ಲಿ ಮೊದಲಿಗೆ, ನೀತಿಸಂಹಿತೆಯ ಮೇಲೆ ಅಧಿಕಾರ ಬೀರುವ ಪ್ರಭಾವವನ್ನು ಕುರಿತು ನಾನು ಪರಿಶೀಲಿಸುತ್ತೇನೆ, ಆನಂತರ ನೈತಿಕತೆಗೆ ಬೇರೇನಾದರೂ ಆಧಾರವಾಗಬಹುದೇ ಎಂಬುದರತ್ತ ಗಮನ ಹರಿಸುತ್ತೇನೆ.

ಅಧಿಕಾರ–ನೈತಿಕತೆಯ ಅತ್ಯಂತ ಸ್ಪಷ್ಟ ಉದಾಹರಣೆಯೆಂದರೆ, ವಿಧೇಯತೆಯ ಬೋಧನೆ. ತಂದೆತಾಯಿಯರು ಹೇಳಿದಂತೆ ಮಕ್ಕಳು, ಗಂಡನ ಮಾತನ್ನು ಹೆಂಡತಿ, ಯಜಮಾನರ ಮಾತನ್ನು ಆಳುಗಳು, ರಾಜರ ಮಾತನ್ನು ಪ್ರಜೆಗಳು ಹಾಗೂ (ಮತಧಾರ್ಮಿಕ ವಿಷಯಗಳಲ್ಲಿ) ಸಾಮಾನ್ಯ ಜನರು ಪುರೋಹಿತರ ಮಾತನ್ನು ಕೇಳುವುದು ಕರ್ತವ್ಯವೆಂದು

ಪರಿಗಣಿತವಾಗಿದೆ (ಅಥವಾ ಇತ್ತು). ಇದಕ್ಕಿಂತ ಹೆಚ್ಚಿನ ವಿಶಿಷ್ಟ ಬಗೆಯ ವಿಧೇಯತೆಯು ಸೈನ್ಯ ಹಾಗೂ ಧಾರ್ಮಿಕ ವ್ಯವಸ್ಥೆಯಲ್ಲಿತ್ತು. ಪ್ರತಿಯೊಂದು ಕರ್ತವ್ಯಕ್ಕೂ ದೀರ್ಘ ಇತಿಹಾಸವಿದೆ, ಅದು ಸಂಬಂಧಪಟ್ಟ ಧಾರ್ಮಿಕ ವಿಧಿಯೊಡನೆ ಸಮಾನಾಂತರವಾಗಿ ಸಾಗುವಂಥದು.

ಪೈತೃಕ ಪಾವಿತ್ರ್ಯದಿಂದಲೇ ನಮ್ಮ ಚರ್ಚೆಯನ್ನು ಆರಂಭಿಸೋಣ. ತಾಯ್ತಂದೆಯರು ತೀರ ಮುದುಕರಾಗಿ ಕೆಲಸ ಮಾಡಲಾರದಾದಾಗ ಅವರನ್ನು ಆಹಾರವಾಗಿ ಮಾರಾಟಮಾಡುವ ಬರ್ಬರರು ಈಗಲೂ ಇದ್ದಾರೆ. ನಾಗರಿಕತೆಯ ಬೆಳವಣಿಗೆಯ ಯಾವುದೋ ಹಂತದಲ್ಲಿ, ಅಪೂರ್ವ ದೂರದರ್ಶಿತ್ವವಿದ್ದ ಯಾವನಿಗೋ ತಾನು ಮುದುಕನಾದಾಗ ತನ್ನನ್ನು ಬದುಕುವಂತೆ ನೋಡಿಕೊಳ್ಳುವಂತಹ ಭಾವನೆಯುಳ್ಳ ಮನಃಸ್ಥಿತಿಯನ್ನು ತನ್ನ ಮಕ್ಕಳಲ್ಲಿ ತುಂಬುವ ಆಲೋಚನೆಯು ಅವರಿನ್ನೂ ತೀರ ಚಿಕ್ಕವರಿದ್ದಾಗಲೇ ಉಂಟಾಗಿರಬೇಕು; ಅವನು ಪ್ರಾಯಶಃ ತನ್ನ ತಾಯ್ತಂದೆಯರನ್ನು ಬಿಟ್ಟುಕೊಟ್ಟವನಾಗಿದ್ದಿರಬೇಕು. ತನ್ನ ಸಂಪ್ರದಾಯವಿರೋಧೀ ಯೋಜನೆಯನ್ನು ಬೆಂಬಲಿಸುವ ಗುಂಪನ್ನು ಕೂಡಿಸಲು ಮತ್ತವರಲ್ಲಿ ವಿವೇಕ ಮೂಡಿಸಲು ಅವನು ಪ್ರಯತ್ನಿಸಿರಬೇಕೆಂಬುದರ ಬಗ್ಗೆ ನನಗೆ ಸಂಶಯವಿದೆ. ಪ್ರಾಯಶಃ ಅವನು ಮಾನವನ ಹಕ್ಕಿನ ಬಗ್ಗೆ, ಹಣ್ಣುಹಂಪಲನ್ನೇ ಹೆಚ್ಚಾಗಿ ತಿನ್ನುವುದರ ಅನುಕೂಲಗಳ ಬಗ್ಗೆ, ತಮ್ಮನ್ನು ಸಾಕಲು ತಾಯ್ತಂದೆಯರು ಕಷ್ಟಪಟ್ಟಿರಬಹುದಾದ ನೈತಿಕ ಪರಿಶುದ್ಧತೆಯ ಬಗ್ಗೆ ಪ್ರತಿಪಾದಿಸಿರಬೇಕು ಎಂದೂ ನನಗನ್ನಿಸುತ್ತದೆ. ಬಹುಶಃ ಆಗ ತೀರ ಕೃಶನಾಗಿದ್ದರೂ ಅಸದೃಶ ವಿವೇಕಿಯಾದ ಹಿರಿಯನೊಬ್ಬನಿದ್ದಿರಬೇಕು, ಅವನ ದೇಹಕ್ಕಿಂತ ಅವನ ವಿವೇಕವು ಹೆಚ್ಚು ಬೆಲೆಬಾಳುವಂತಹುದೆಂದು ಇತರರಿಗೆ ಅನ್ನಿಸಿರಬೇಕು. ಅದು ಹೇಗಾದರೂ ಆಗಿರಲಿ, ತಂದೆತಾಯಿಗಳನ್ನು ಗೌರವಿಸಬೇಕೇ ಹೊರತು ತಿನ್ನಬಾರದು ಎಂಬ ಭಾವನೆ ಬಂದಿರಬೇಕು. ತಂದೆಯರ ಬಗೆಗಿನ ಗೌರವವು ಮೊದಮೊದಲು ಅತಿಯಾದುದು ಎಂದು ನಮಗನ್ನಿಸುತ್ತದೆ, ಆದರೆ ಅವರನ್ನು ಮಾರುವಂತಹ ಲಾಭದಾಯಕ ಪದ್ಧತಿಗೆ ಕೊನೆ ಹಾಡುವುದಕ್ಕಾಗಿ ಪ್ರಬಲ ವಿರೋಧವೊಂದು ಬೇಕಾಗಿತ್ತೆಂಬುದನ್ನು ನಾವು ಮರೆಯಬಾರದು. ಆದ್ದರಿಂದಲೇ, ತಂದೆತಾಯಿಯರಿಗೆ ಗೌರವ ನೀಡದವರು ಅಲ್ಪಾಯುಷಿಗಳಾಗುವರೆಂದು ದಶವಿಧಿ(*ಟೆನ್ ಕಮಾಂಡ್‌ಮೆಂಟ್ಸ್*)ಯಲ್ಲಿ ಹೇಳಿರುವುದು, ಪಿತೃಹತ್ಯೆಯನ್ನು ಅತ್ಯಂತ ಘೋರ ಪಾತಕವೆಂದು ರೋಮನ್‌ರು ಪರಿಗಣಿಸಿದುದು, ಪಿತೃಪಾವಿತ್ರ್ಯವನ್ನು ಎಲ್ಲ ನೈತಿಕತೆಯ ಆಧಾರವೆಂದು ಕನ್‌ಫ್ಯೂಷಿಯಸ್

ವಿಧಿಸಿದುದು. ಎಷ್ಟೇ ಸಹಜವಾದುದಾಗಿರಲಿ, ಅಪ್ರಜ್ಞಾಪೂರ್ವಕವಾದುದಾಗಿರಲಿ, ತಂದೆತಾಯಿಯರ ಅಧಿಕಾರವು ಚಿಕ್ಕ ಮಕ್ಕಳು ಅಸಹಾಯಕರಾಗಿರುವ ಕಾಲವನ್ನೂ ಮೀರಿ ಉಳಿಯುವುದಕ್ಕೆ ಇದೆಲ್ಲ ಸಾಧಕಗಳಾದವು. ತಾಯ್ತಂದೆಯರ ಅಧಿಕಾರವನ್ನು ಆಸ್ತಿಯು ಬಲಪಡಿಸಿತೆಂಬುದೂ ನಿಜ; ಆದರೆ ಪಿತೃಪಾವಿತ್ರ್ಯವು ಇರದಿದ್ದರೆ, ವಯಸ್ಸಾದ ಮೇಲೂ ದನಗಳ ಮಂದೆಗಳ ಹಾಗೂ ಕುರಿಗಳ ಹಿಂಡುಗಳ ಮೇಲೆ ತಮ್ಮ ತಾಯ್ತಂದೆಯರು ಹಿಡಿತ ಹೊಂದಿರಲು ಯುವಜನರು ಅವಕಾಶವೀಯುತ್ತಿರಲಿಲ್ಲ.

ಇದೇ ಬಗೆಯ ಬೆಳವಣಿಗೆಯು ಸ್ತ್ರೀಯ ಪರಾಧೀನತೆಯ ವಿಚಾರವಾಗಿಯೂ ಉಂಟಾಯಿತು. ಗಂಡು ಹೆಚ್ಚು ಶಕ್ತಿಶಾಲಿಯಾದ್ದರೂ ಬಹುತೇಕ ಪ್ರಾಣಿಜಾತಿಗಳಲ್ಲಿ ಹೆಣ್ಣನ್ನು ನಿರಂತರವಾಗಿ ತನಗೆ ಅಧೀನವನ್ನಾಗಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ, ಏಕೆಂದರೆ ಗಂಡಿಗೆ ಉದ್ದೇಶದ ಸ್ಥಿರತೆ ಇರುವುದಿಲ್ಲ. ಮನುಷ್ಯರಲ್ಲಿ ಸ್ತ್ರೀಪರಾಧೀನತೆಯು ಅನಾಗರಿಕ ಸ್ಥಿತಿಯಲ್ಲಿಗಿಂತ ಒಂದು ಮಟ್ಟದ ನಾಗರಿಕತೆ ಬೆಳೆದ ಹಂತದಲ್ಲಿ ಹೆಚ್ಚು ಪೂರ್ಣ. ಪರಾಧೀನತೆಯನ್ನು ನೈತಿಕತೆಯಿಂದ ಬಲಿಷ್ಠಗೊಳಿಸಲಾಗಿರುವುದು ಎಲ್ಲ ಕಾಲಗಳಲ್ಲಿಯೂ ಕಾಣುತ್ತದೆ. ಸಂತ ಪಾಲ್ ಹೇಳುತ್ತಾನೆ: "ಗಂಡು ದೇವರ ಮಹಿಮೆಯ ಸಂಕೇತ: ಆದರೆ ಹೆಣ್ಣು ಗಂಡಿನ ಮಹಿಮೆಯ ಸಂಕೇತ. ಏಕೆಂದರೆ ಗಂಡು ಹೆಣ್ಣಿಗೆ ಸೇರಿದವನಲ್ಲ; ಆದರೆ ಹೆಣ್ಣು ಗಂಡಿಗೆ ಸೇರಿದವಳು" (೫ ಕೊರಿಂಥಿಯನ್ಸ್ ೧ ೭–೯). ಅಂದರೆ ಹೆಂಡತಿಯು ಗಂಡನಿಗೆ ವಿಧೇಯಳಾಗಿರಬೇಕೆಂಬುದನ್ನೂ, ನಿಷ್ಠಾರಾಹಿತ್ಯವು ಗಂಡನಿಗಿಂತ ಹೆಂಡತಿಯಲ್ಲಿ ಹೆಚ್ಚು ಘೋರ ಪಾತಕ ಎಂಬುದನ್ನೂ ಇದು ಸೂಚಿಸುತ್ತದೆ. ಹಾದರವು ಗಂಡುಹೆಣ್ಣುಗಳಿಬ್ಬರಲ್ಲಿಯೂ ಸಮಾನ ಪಾತಕ, ಏಕೆಂದರೆ ಅದು ದೇವರ ವಿರುದ್ಧದ ಪಾತಕ ಎಂಬುದನ್ನು ಕ್ರಿಶ್ಚಿಯಾನಿಟಿಯು ತತ್ವಶಃ ಹೇಳುತ್ತದೆ. ಆದರೆ ಇದು ಅನುಷ್ಠಾನದಲ್ಲಿ ಬಂದಿಲ್ಲ, ಕ್ರಿಶ್ಚಿಯನ್‌ಪೂರ್ವ ಕಾಲದಲ್ಲಿ ಇದನ್ನು ತಾತ್ವಿಕವಾಗಿಯೂ ಒಪ್ಪಿರಲಿಲ್ಲ. ಮದುವೆಯಾದ ಹೆಂಗಸಿನೊಡನೆ ಮಾಡುವ ಹಾದರವು ಕೆಟ್ಟುದು, ಏಕೆಂದರೆ ಅದು ಅವಳ ಗಂಡನಿಗೆ ಮಾಡಿದ ಅಪಚಾರ; ಆದರೆ ಹೆಣ್ಣು ತೊತ್ತುಗಳೂ ಯುದ್ಧಬಂದಿಗಳೂ ಒಡೆಯನ ನ್ಯಾಯಬದ್ಧ ಆಸ್ತಿ, ಹೀಗಾಗಿ ಅವರೊಡನೆ ನಡೆಸುವ ಲೈಂಗಿಕ ಸಂಬಂಧವು ಅನೈತಿಕವಲ್ಲ. ಈ ದೃಷ್ಟಿಕೋನವನ್ನು ಹತ್ತೊಂಬತ್ತನೆಯ ಶತಮಾನದ ಅಮೆರಿಕದಲ್ಲಿ ಧಾರ್ಮಿಕಶ್ರದ್ಧೆಯ ತೊತ್ತುಗಳ ಒಡೆಯರು, ಆದರೆ ಅವರ ಹೆಂಡಂದಿರಲ್ಲದಿದ್ದರೂ, ಹೊಂದಿದ್ದರು.

ಗಂಡು ಮತ್ತು ಹೆಣ್ಣುಗಳಿಗೆ ಸಂಬಂಧಿಸಿದ ನೈತಿಕತೆಯ ವ್ಯತ್ಯಾಸಕ್ಕೆ ಆಧಾರವಾದುದು ಗಂಡಸಿನ ಅಧಿಕ ಶಕ್ತಿ ಎಂಬುದು ಸುವೇದ್ಯ. ಮೊದಮೊದಲು ಈ ಆಧಿಕ್ಯವು ಭೌತಿಕ ಶಕ್ತಿಗೆ ಸಂಬಂಧಿಸಿತ್ತು, ಆದರೆ ಇದು ಕ್ರಮೇಣ ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಿಗೂ ವಿಸ್ತರಿಸಿತು. ಈ ವಿಷಯದಲ್ಲಿ ಪೋಲೀಸರಿಗಿರುವ ನೈತಿಕತೆಯ ದೊಡ್ಡ ಅನುಕೂಲವು ಸ್ಪಷ್ಟವಾಗಿ ಗೋಚರಿಸುತ್ತದೆ; ಏಕೆಂದರೆ ಸುಮಾರು ಇತ್ತೀಚಿನವರೆಗೂ ಪುರುಷ ಮೇಲ್ಮೆಯನ್ನು ಪ್ರತಿಪಾದಿಸುವ ನೈತಿಕ ತತ್ವಗಳಲ್ಲಿ ಹೆಂಗಸರು ಸಹಜವಾಗಿಯೇ ಆಳವಾದ ನಂಬಿಕೆಯನ್ನು ಹೊಂದಿದ್ದರು, ಹೀಗಾಗಿ ಅವರ ಮೇಲೆ ಆವಶ್ಯಕವಾದುದಕ್ಕಿಂತ ಸಾಕಷ್ಟು ಕಡಿಮೆ ಒತ್ತಾಯವೇ ಸಾಕಾಯಿತು.

ಹಮ್ಮುರಬಿ ಸದಾಚಾರ ಸಂಹಿತೆಯು[೧] ಶಾಸಕನ ದೃಷ್ಟಿಯಲ್ಲಿ ಹೆಂಗಸು ಹೇಗೆ ಅಮುಖ್ಯ ಎಂಬದನ್ನು ಪ್ರತಿಪಾದಿಸಲು ಸ್ವಾರಸ್ಯಕರ ದೃಷ್ಟಾಂತವೊಂದನ್ನು ನೀಡುತ್ತದೆ. ಸದ್ಗೃಹಸ್ಥನೊಬ್ಬನ ಗರ್ಭಿಣಿ ಮಗಳನ್ನು ಗಂಡಸೊಬ್ಬನು ಹೊಡೆದರೆ ಹಾಗೂ ಅದರ ಪರಿಣಾಮವಾಗಿ ಅವಳು ಸತ್ತರೆ, ಹಾಗೆ ಹೊಡೆದವನ ಮಗಳನ್ನು ಮರಣದಂಡನೆಗೆ ಗುರಿಪಡಿಸಬೇಕೆಂದು ಅದು ವಿಧಿಸುತ್ತದೆ. ಸದ್ಗೃಹಸ್ಥ ಹಾಗೂ ಹೊಡೆಯುವವನ ನಡುವೆ ಅದೇ ನ್ಯಾಯ; ಮರಣದಂಡನೆಗೆ ಗುರಿಯಾಗುವ ಮಗಳು ಅವನ ಆಸ್ತಿ, ಹೀಗಾಗಿ ತನ್ನ ಜೀವದ ಮೇಲೆ ಅವಳಿಗೆ ಯಾವ ಹಕ್ಕೂ ಇಲ್ಲ. ಸದ್ಗೃಹಸ್ಥನ ಮಗಳನ್ನು ಕೊಲ್ಲುವ ಮೂಲಕ ಹೊಡೆದವನು ಅಪರಾಧಿಯಾಗುತ್ತಾನೆ, ಅವನೆಸಗಿದ ಅಪರಾಧ ಅವಳ ವಿರುದ್ಧವಲ್ಲ, ಆದರೆ ಸದ್ಗೃಹಸ್ಥನ ವಿರುದ್ಧ. ಹೆಣ್ಣುಮಕ್ಕಳಿಗೆ ಯಾವುದೇ ಹಕ್ಕುಗಳಿಲ್ಲ, ಏಕೆಂದರೆ ಅವರಿಗೆ ಅಧಿಕಾರವಿಲ್ಲ.

ಮೊದಲನೆಯ ಜಾರ್ಜ್‌ತನಕ ರಾಜರುಗಳು ದೈವಾಂಶಸಂಭೂತರೆನಿಸಿದ್ದರು.

ರಾಜನನ್ನು ಎಂಥ ದೈವಿಕತೆ ಆವರಿಸಿದೆಯೆಂದರೆ,
ರಾಜದ್ರೋಹವು ಅಲ್ಲಿ ಇಣುಕಬಹುದೇ ಹೊರತು,
ಅವನ ಇಚ್ಛೆಗೆ ವಿರುದ್ಧವಾಗಿ ನಡೆಯಲಾರದು.

'ರಾಜದ್ರೋಹ' ಎಂಬ ಪದಕ್ಕೆ, ಗಣರಾಜ್ಯಗಳಲ್ಲಿಯೂ, ಒಂದು ಬಗೆಯ ಅಪಾವಿತ್ರ್ಯವು ಅಂಟಿಕೊಂಡಿದೆ. ಇಂಗ್ಲಂಡ್‌ನಲ್ಲಿ ರಾಜತ್ವದ ಸಂಪ್ರದಾಯದ ಕಾರಣದಿಂದಾಗಿ ಸರ್ಕಾರವು ಸಾಕಷ್ಟು ಲಾಭ ಗಳಿಸುತ್ತದೆ. ವಿಕ್ಟೋರಿಯನ್

---

[೧] ಕ್ರಿಪೂ ೧೭೬೦ ರಲ್ಲಿ ಸಂಕಲನಗೊಂಡ ಜಗತ್ತಿನ ಅತ್ಯಂತ ಪ್ರಾಚೀನ ಆಚಾರ ಸಂಹಿತೆ

ಕಾಲದ ಮುತ್ಸದ್ದಿಗಳು, ಗ್ಲಾಡ್‌ಸ್ಟನ್ ಕೂಡ, ರಾಣಿಗೆ ಪ್ರಧಾನ ಮಂತ್ರಿಯೊಬ್ಬನು ಇಲ್ಲದಿರುವ ಸನ್ನಿವೇಶವನ್ನು ಸೃಷ್ಟಿಸದಿರುವುದೇ ತಾವು ಆಕೆಗೆ ಸಲ್ಲಿಸಬೇಕಾದ ಕರ್ತವ್ಯ ಎಂದು ಭಾವಿಸಿದ್ದರು. ಅಧಿಕಾರಕ್ಕೆ ಮಣಿಯುವುದೇ ಸಾರ್ವಭೌಮತೆಗೆ ಸಲ್ಲಿಸಬೇಕಾದ ಕರ್ತವ್ಯವೆಂದು ಈಗಲೂ ಭಾವಿಸಲಾಗುತ್ತದೆ. ಈ ಭಾವನೆಯು ಕ್ರಮೇಣ ಕ್ಷೀಣವಾಗುತ್ತಿದ್ದರೂ, ಅದು ಕ್ಷೀಣಗೊಂಡಂತೆ ಸರ್ಕಾರವು ಅಷ್ಟಷ್ಟರಮಟ್ಟಿಗೆ ದುರ್ಬಲವಾಗೊಳ್ಳುತ್ತದೆ, ಬಲಪಂಥೀಯದ್ದೋ ಎಡಪಂಥೀಯದ್ದೋ ಸರ್ವಾಧಿಕಾರದ ಸಾಧ್ಯತೆಗಳು ಹೆಚ್ಚಾಗುತ್ತವೆ.

ಬೇಜ್‌ಹಾಟ್ ಅವರ *'ಇಂಗ್ಲಿಷ್ ಕಾನ್ಸ್‌ಟಿಟ್ಯೂಷನ್'* – ಈಗಲೂ ಓದಬೇಕಾದ ಪುಸ್ತಕ – ಕೆಳಗಿನಂತೆ ರಾಜಪ್ರಭುತ್ವದ ಬಗ್ಗೆ ಚರ್ಚೆಯನ್ನು ಆರಂಭಿಸುತ್ತದೆ:

"ಘನತೆಯಿಂದ ಕೂಡಿರುವಂತೆ ರಾಣಿಯ ಉಪಯೋಗವನ್ನು ಪಡೆಯುವುದು ಲೆಕ್ಕಾಚಾರಕ್ಕೆ ಸಿಕ್ಕುವುದಲ್ಲ. ಆಕೆಯಿಲ್ಲದೆ ಇಂಗ್ಲಂಡ್‌ನಲ್ಲಿ ಅಧಿಕಾರದಲ್ಲಿರುವ ಸರ್ಕಾರವು ಬಿದ್ದುಹೋಗುತ್ತದೆ, ನಶಿಸಿಹೋಗುತ್ತದೆ. ರಾಣಿಯು ವಿಂಡ್ಸರ್‌ನ ಇಳಿಜಾರಿನ ಮೇಲೆ ನಡೆದ ವಿಷಯವನ್ನು – ಪ್ರಿನ್ಸ್ ಆಫ್ ವೇಲ್ಸ್ ಡರ್ಬಿಗೆ ಹೋದ ವಿಷಯವನ್ನು – ಓದಿದ ಬಹುಮಂದಿ ಅತಿ ಸಣ್ಣ ವಿಷಯದ ಬಗ್ಗೆ ಅತಿಯಾದ ಆಲೋಚನೆ ಮತ್ತು ಪ್ರಾಮುಖ್ಯವನ್ನು ನೀಡಲಾಗಿದೆಯೆಂದು ಭಾವಿಸುತ್ತಾರೆ. ಆದರೆ ಅವರದು ತಪ್ಪು ಆಲೋಚನೆ; ನಿವೃತ್ತಿ ಹೊಂದಿದ ವಿಧವೆ ಮತ್ತು ಕೆಲಸವಿಲ್ಲದ ಯುವಕನ ಕಾರ್ಯಗಳು ಅಂಥ ಪ್ರಾಮುಖ್ಯವನ್ನು ಪಡೆಯಲು ಕಾರಣಗಳೇನೆಂಬುದನ್ನು ಹುಡುಕುವುದು ಸಮಂಜಸವಾಗುತ್ತದೆ.

"ರಾಜಪ್ರಭುತ್ವವು ಒಂದು ಬಲಿಷ್ಠ ಪ್ರಭುತ್ವವಾಗಲು ಅತ್ಯಂತ ಸಮಂಜಸ ಕಾರಣವೆಂದರೆ, ಅದೊಂದು ಅರ್ಥಮಾಡಿಕೊಳ್ಳಬಹುದಾದ ಸರ್ಕಾರ ಎಂಬುದು. ಜನಸಮುದಾಯವು ಅದನ್ನು ಅರ್ಥಮಾಡಿಕೊಳ್ಳುತ್ತದೆ, ಜಗತ್ತಿನ ಯಾವುದೇ ಭಾಗದಲ್ಲಿಯಾದರೂ ಬೇರೇನನ್ನಾದರೂ ಅದು ಅರ್ಥಮಾಡಿಕೊಳ್ಳಲಾರದು. ಜನರನ್ನು ಆಳುವುದು ಅವರ ಕಲ್ಪನೆಯೇ ಎಂಬ ಮಾತೊಂದಿದೆ; ಆದರೆ ಅವರನ್ನು ಆಳುವುದು ಅವರ ಕಲ್ಪನೆಯ ದೌರ್ಬಲ್ಯದ ಕಾರಣದಿಂದ ಎಂಬುದು ಮತ್ತಷ್ಟು ಸತ್ಯ."

ಇದು ಸತ್ಯವಾದುದೂ ಹೌದು, ಮುಖ್ಯವಾದುದೂ ಹೌದು. ರಾಜಪ್ರಭುತ್ವವು ಸಾಮಾಜಿಕ ಒಗ್ಗಟ್ಟಿಗೆ ಸಹಕಾರಿಯಾಗುತ್ತದೆ; ಏಕೆಂದರೆ, ಮೊದಲನೆಯದಾಗಿ, ಅಮೂರ್ತವಾದುದರ ಬಗೆಗಿಂತ ವ್ಯಕ್ತಿಯೊಬ್ಬನ ಬಗ್ಗೆ

ನಿಷ್ಠೆಯನ್ನು ತಾಳುವುದು ಸುಲಭ, ಹಾಗೂ ಎರಡನೆಯದಾಗಿ, ರಾಜತ್ವವು ದೀರ್ಘ ಇತಿಹಾಸವನ್ನು ಹೊಂದಿದ್ದು ಬೇರಾವುದೇ ಹೊಸ ಸಂಸ್ಥೆಗಿಂತ ಜನರಲ್ಲಿ ಪೂಜ್ಯಭಾವನೆಯನ್ನು ಪ್ರೇರಿಸಬಲ್ಲುದು. ಆನುವಂಶೀಯ ರಾಜಪ್ರಭುತ್ವವನ್ನು ನಿಷೇಧಿಸಿರುವೆಡೆಗಳಲ್ಲಿ, ಕಾಲಕ್ರಮೇಣ ಬೇರೊಂದು ಬಗೆಯ ಏಕವ್ಯಕ್ತಿ ಆಳ್ವಿಕೆಯು ಮತ್ತೆ ಕಾಣಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ: ಗ್ರೀಸ್‌ನಲ್ಲಿ ದೌರ್ಜನ್ಯ ರೂಪದಲ್ಲಿ, ರೋಮ್‌ನಲ್ಲಿ ಸಾಮ್ರಾಜ್ಯ ರೂಪದಲ್ಲಿ, ಇಂಗ್ಲಂಡ್‌ನಲ್ಲಿ ಕ್ರಾಮ್‌ವೆಲ್ ರೂಪದಲ್ಲಿ, ಫ್ರಾನ್ಸ್‌ನಲ್ಲಿ ನೆಪೋಲಿಯನ್‌ರುಗಳ ರೂಪದಲ್ಲಿ, ನಮ್ಮ ಕಾಲದಲ್ಲಿಯೇ ಸ್ಟಾಲಿನ್ ಹಾಗೂ ಹಿಟ್ಲರ್‌ಗಳ ರೂಪದಲ್ಲಿ. ಅಂಥ ವ್ಯಕ್ತಿಗಳು ಹಿಂದೆ ರಾಜತ್ವದ ಬಗ್ಗೆ ಜನ ಹೊಂದಿದ್ದ ಭಾವನೆಗಳ ಸ್ವಲ್ಪ ಭಾಗವನ್ನು ಗಳಿಸಿರುತ್ತಾರೆ. ರಷ್ಯನ್ ವಿಚಾರಣೆಗಳ ಕಾಲದಲ್ಲಿ ಆರೋಪಿಗಳು ವ್ಯಕ್ತಪಡಿಸಿದ ತಪ್ಪೊಪ್ಪಿಗೆಗಳಲ್ಲಿ, ಅತ್ಯಂತ ಪ್ರಾಚೀನ ಕಾಲದಲ್ಲಿನ ಪೂರ್ಣ ರಾಜಪ್ರಭುತ್ವಗಳಲ್ಲಿ ಸೂಕ್ತವೆನಿಸಿದ್ದ ಒಡೆಯನಿಗೆ ಶರಣಾಗತಿ ನೈತಿಕತೆಯನ್ನು ಒಪ್ಪಿಕೊಳ್ಳುವುದು ತಮಾಷೆಯಾಗಿದೆ. ಆದರೆ ಹೊಸಬ ಸರ್ವಾಧಿಕಾರಿಯು, ಅವನು ಅತ್ಯಂತ ಅಸಾಧಾರಣನಾದ ವ್ಯಕ್ತಿಯಾಗಿರದ ಹೊರತು, ಹಿಂದಿನ ಕಾಲದಲ್ಲಿ ರಾಜರುಗಳ ಬಗ್ಗೆ ಇದ್ದ ಭಕ್ತಿಪೂರ್ವಕ ಗೌರವ ಭಾವನೆಯನ್ನು ಉದ್ದೀಪಿಸುವುದು ಅಸಂಭವ.

ಈಗಾಗಲೇ ನಾವು ಗಮನಿಸಿರುವಂತೆ. ರಾಜತ್ವದ ವಿಷಯದಲ್ಲಿ ಧಾರ್ಮಿಕತೆಯನ್ನು ಎಷ್ಟು ದೂರ ಎಳೆಯಲಾಯಿತೆಂದರೆ, ಅಧಿಕಾರದಲ್ಲಿ ಹಸ್ತಕ್ಷೇಪ ಮಡುವಷ್ಟರಮಟ್ಟಿಗೆ. ಆದರೂ, ಆಗಲೂ ರಾಜನನ್ನು ಸಂಕೇತವನ್ನಾಗಿ ಹೊಂದಿರುವ ಸಾಮಾಜಿಕ ವ್ಯವಸ್ಥೆಯ ಸ್ಥಿರತೆಗೆ ಅದು ಸಹಾಯಕವೇ ಆಯಿತು. ಜಪಾನ್ ಮತ್ತು ಇಂಗ್ಲಂಡ್‌ಗಳಂತಹ ಅನೇಕ ಅರೆನಾಗರಿಕ ದೇಶಗಳಲ್ಲಿ ಇದು ನಡೆಯಿತು. ಇಂಗ್ಲಂಡ್‌ನಲ್ಲಿ, ರಾಜನು ತಪ್ಪು ಮಾಡಲಾರ ಎಂಬಂತಹ ಸಿದ್ಧಾಂತಗಳನ್ನು ಅವನ ಅಧಿಕಾರವನ್ನು ಕಿತ್ತುಕೊಳ್ಳುವ ಅಸ್ತ್ರವನ್ನಾಗಿ ಬಳಸಲಾಯಿತು, ಇದರಿಂದಾಗಿ ರಾಜನಿಲ್ಲದಿದ್ದರೆ ಸಿಕ್ಕದೆ ಹೋಗುತ್ತಿದ್ದಂತಹ ಹೆಚ್ಚಿನ ಅಧಿಕಾರವನ್ನು ಅವನ ಮಂತ್ರಿಗಳು ಪಡೆಯುವಂತಾಯಿತು. ರೂಢಿಗತವಾದ ರಾಜಪ್ರಭುತ್ವವಿರುವೆಡೆಗಳಲ್ಲಿ, ಸರ್ಕಾರದವಿರುದ್ಧದ ಬಂಡಾಯವೆಂದರೆ ರಾಜನ ವಿರುದ್ಧದ ಅಪರಾಧ ಎಂದೇ ಪರಿಗಣಿಸಲಾಗುತ್ತದೆ, ಸನಾತನಿಗಳ ದೃಷ್ಟಿಯಲ್ಲಿ ಇದೊಂದು ಪಾತಕ ಹಾಗೂ ಅಧಾರ್ಮಿಕತೆ. ಹೀಗಾಗಿ, ಒಟ್ಟಾರೆ ಹೇಳಬೇಕೆಂದರೆ, ರಾಜತ್ವವು ಯಥಾಸ್ಥಿತಿಯ, ಅದು ಎಂಥದೇ ಆಗಿರಲಿ, ಪರವಾದ ಒಂದು ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಐತಿಹಾಸಿಕವಾಗಿ ಅದರಿಂದಾದ

ಅತ್ಯಂತ ಉಪಯುಕ್ತ ಕಾರ್ಯವೆಂದರೆ, ಸಾಮಾಜಿಕ ಒಗ್ಗಟ್ಟಿಗೆ ಸಹಾಯಕವಾದ ಮನೋಭಾವದ ವ್ಯಾಪಕತೆ. ಮಾನವರು ಗುಂಪುಮನೋಭಾವದಿಂದ ಎಷ್ಟು ದೂರವೆಂದರೆ, ಅನಾಯಕತ್ವವು ತೂಗುಕತ್ತಿಯಂತೆ ಅಪಾಯಕರವಾದುದು, ಇದನ್ನು ತಡೆಯಲು ರಾಜತ್ವವು ಅಪಾರ ಸಹಾಯ ಮಾಡಿದೆ. ಆದರೆ, ಈ ಸದ್ಗುಣಕ್ಕೆ ವಿರುದ್ಧವಾಗಿ, ಹಿಂದಿನ ಕೆಡುಕುಗಳನ್ನು ಮುಂದುವರೆಸುವ ಹಾಗೂ ಅಪೇಕ್ಷಣೀಯ ಬದಲಾವಣೆಗಳನ್ನು ವಿರೋಧಿಸುವ ಶಕ್ತಿಯನ್ನು ಅದರ ಅವಗುಣವೆಂದು ಹೇಳಬೇಕಾಗುತ್ತದೆ. ಆಧುನಿಕ ಕಾಲದಲ್ಲಿ ರಾಜಪ್ರಭುತ್ವವು ಜಗತ್ತಿನ ಬಹುಭಾಗದಿಂದ ಕಣ್ಮರೆಯಾಗುವಂತೆ ಮಾಡಿರುವುದು ಈ ಅವಗುಣವೇ.

ಪುರೋಹಿತಶಾಹಿಯ ಅಧಿಕಾರವು ಮಿಕ್ಕೆಲ್ಲ ಬಗೆಯ ಅಧಿಕಾರಕ್ಕಿಂತ ಹೆಚ್ಚು ನೀತಿಗೆ ಸಂಬಂಧಿಸಿದುದಾಗಿದೆ. ಕ್ರಿಶ್ಚಿಯನ್ ದೇಶಗಳಲ್ಲಿ, ಪುಣ್ಯಕರವಾದುದೆಂದರೆ ದೇವರ ಇಚ್ಛೆಗನುಗುಣವಾಗಿ ನಡೆಯುವುದು, ಮತ್ತು ಪುರೋಹಿತರು ದೇವರ ಇಚ್ಛೆ ಏನೆಂಬುದನ್ನು ತಿಳಿದವರು. ನಾವು ವಿಧೇಯರಾಗಿರಬೇಕಾದುದು ದೇವರಿಗೇ ಹೊರತು ಮನುಷ್ಯನಿಗಲ್ಲ ಎಂಬ ನೀತಿಯು, ಈಗಾಗಲೇ ಗಮನಿಸಿರುವಂತೆ, ಕ್ರಾಂತಿಕಾರಕವಾಗಬಲ್ಲುದು; ಅದು ಸಾಧ್ಯವಾಗುವುದು ಎರಡು ಬಗೆಯ ಪರಿಸ್ಥಿತಿಗಳಲ್ಲಿ: ಒಂದು, ಸರ್ಕಾರವು ಚರ್ಚ್‌ನ ವಿರುದ್ಧವಾಗಿರುವೆಡೆಗಳಲ್ಲಿ, ಹಾಗೂ ಎರಡು, ದೇವರು ನೇರವಾಗಿ ವ್ಯಕ್ತಿಪ್ರಜ್ಞೆಯೊಡನೆ ಸಂಭಾಷಿಸುತ್ತಾನೆ ಎಂಬುದರಲ್ಲಿ. ಮೊದಲನೆಯ ಪರಿಸ್ಥಿತಿಯು ಕಾನ್‌ಸ್ಟಾಂಟೈನ್‌ಗಿಂತ ಮುಂಚೆ ಇತ್ತು, ಎರಡನೆಯದು ಅನಾಬ್ಯಾಪ್ಟಿಸ್ಟ್‌ರು ಮತ್ತು ಸ್ವತಂತ್ರವಾದಿಗಳಲ್ಲಿ ಇತ್ತು. ಆದರೆ ಕ್ರಾಂತಿರಹಿತ ಕಾಲಗಳಲ್ಲಿ, ಸುಸ್ಥಾಪಿತವಾದ ಹಾಗೂ ಸನಾತನಿಯಾದ ಚರ್ಚ್ ಇರುವೆಡೆಗಳಲ್ಲಿ, 'ಧನಾತ್ಮಕ' ನೈತಿಕತೆಯನ್ನು ದೇವರು ಮತ್ತು ವೈಯಕ್ತಿಕ ಪ್ರಜ್ಞೆಗಳ ನಡುವಣದ್ದೆಂದು ಸ್ವೀಕರಿಸಲಾಗುತ್ತದೆ. ಎಲ್ಲಿಯವರೆಗೆ ಈ ಒಪ್ಪಿಗೆಯಿರುತ್ತದೆಯೋ ಅಲ್ಲಿಯವರೆಗೆ ಅದರ ಶಕ್ತಿಯು ಅಪಾರವಾದುದು, ಚರ್ಚ್‌ನ ವಿರುದ್ಧದ ಬಂಡಾಯವು ಬೇರೆಲ್ಲ ಬಗೆಯದಕ್ಕಿಂತ ಹೆಚ್ಚು ಕೆಡುಕಿನದೆಂದು ಭಾವಿಸಲಾಗುತ್ತದೆ. ಆದರೆ ಚರ್ಚ್‌ಗೆ ತನ್ನದೇ ಆದ ತೊಂದರೆಗಳಿವೆ, ಏಕೆಂದರೆ ಅದೇನಾದರೂ ತನ್ನ ಅಧಿಕಾರವನ್ನು ಢಾಳಾಗಿ ಕಾಣುವಂತೆ ಚಲಾಯಿಸಿದರೆ, ದೇವರ ಇಚ್ಛೆಯನ್ನು ಅದು ಸರಿಯಾಗಿ ಅರ್ಥೈಸುತ್ತಿದೆಯೇ ಎಂಬ ಬಗ್ಗೆ ಜನರಿಗೆ ಸಂಶಯವುಂಟಾಗಲು ಆರಂಭವಾಗುತ್ತದೆ; ಈ ಸಂಶಯವು ವ್ಯಾಪಕವಾದರೆ, ಮತಧಾರ್ಮಿಕ ಸೌಧವು ಕುಸಿಯುತ್ತದೆ. ರಿಫಾರ್ಮೇಷನ್ ಕಾಲದಲ್ಲಿ ಟ್ಯೂಟೋನಿಕ್ ದೇಶಗಳಲ್ಲಿ ಆದದ್ದು ಇದೇ.

ಚರ್ಚ್‌ನ ವಿಷಯದಲ್ಲಾದರೆ, ಅಧಿಕಾರ ಮತ್ತು ನೀತಿಗಳ ನಡುವಣ ಸಂಬಂಧವು ಇದುವರೆಗೆ ನಾವು ಪರಿಗಣಿಸಿದ ಸನ್ನಿವೇಶಗಳಿಗೆ ವ್ಯತಿರಿಕ್ತವಾದುದು. ಧನಾತ್ಮಕ ನೈತಿಕತೆಯೆಂದರೆ ತಾಯ್ತಂದೆಯರಿಗೆ, ಗಂಡಂದಿರಿಗೆ, ರಾಜರುಗಳಿಗೆ ವಿಧೇಯವಾಗಿರುವುದು, ಏಕೆಂದರೆ ಅವರೆಲ್ಲ ಬಲಶಾಲಿಗಳು; ಆದರೆ ಚರ್ಚ್ ಬಲಶಾಲಿಯಾಗಿರುವುದು ಅದರ ವಿಧಾಯಕ ಶಕ್ತಿಯಿಂದಾಗಿ. ಚರ್ಚ್ ಎಲ್ಲೆಲ್ಲಿ ಸುಭದ್ರವಾಗಿದೆಯೋ, ಅದಕ್ಕೆ ವಿಧೇಯವಾಗಿರಬೇಕಾದ ನೈತಿಕತೆಯು, ತಾಯ್ತಂದೆಯರಿಗೆ, ಗಂಡಂದಿರಿಗೆ, ರಾಜರುಗಳಿಗೆ ವಿಧೇಯವಾಗಿರುವುದರ ವಿಷಯದಲ್ಲಿಯಂತೇ, ಹೆಚ್ಚುತ್ತದೆ. ಈ ವಿಧೇಯತೆಯ ನೈತಿಕತೆಯನ್ನು ಕ್ರಾಂತಿಕಾರಕ ರೀತಿಯಲ್ಲಿ ತಿರಸ್ಕರಿಸುವುದು ಕೂಡ ಇದೇ ಬಗೆಯಲ್ಲಿ ಹೆಚ್ಚುತ್ತದೆ. ಧರ್ಮದ್ರೋಹ ಮತ್ತು ಒಡಕುಗಳು ಚರ್ಚ್‌ನ ವ್ಯವಸ್ಥೆಯಲ್ಲಿಯೇ ವಿಶೇಷವಾಗಿ ಅಡಕವಾಗಿದೆ; ಹೀಗಾಗಿ ಅವು ಕ್ರಾಂತಿಕಾರಕ ಕಾರ್ಯಗಳ ಅನಿವಾರ್ಯ ಅಂಶಗಳು. ಆದರೆ ಪುರೋಹಿತಾಧಿಕಾರದ ವಿರೋಧದಿಂದ ಹೆಚ್ಚು ಸಂಕೀರ್ಣವಾದ ಪರಿಣಾಮಗಳುಂಟಾಗುತ್ತವೆ. ಚರ್ಚ್ ನೀತಿಸಂಹಿತೆಯ ಅಧಿಕೃತ ಸಂರಕ್ಷಕ ಸಂಸ್ಥೆಯಾಗಿರುವುದರಿಂದ, ಅದನ್ನು ವಿರೋಧಿಸುವವರು ನೀತಿಸಂಹಿತೆ, ಧೋರಣೆ ಹಾಗೂ ಆಡಳಿತಗಳ ವಿರುದ್ಧವೂ ಬಂಡಾಯವೇಳುವ ಸಾಧ್ಯತೆಯಿರುತ್ತದೆ. ಪ್ಯೂರಿಟನ್[೧]ರಂತೆ ಅವರು ಅದರ ಅತಿ ನಿಷ್ಠುರತೆಯ ವಿರುದ್ಧವೋ, ಅಥವಾ ಫ್ರೆಂಚ್ ಕ್ರಾಂತಿಯಲ್ಲಾದಂತೆ ಅದರ ಅತಿ ಶಿಥಿಲತೆಯ ವಿರುದ್ಧವೋ ಬಂಡೇಳಬಹುದು. ಆದರೆ ಈ ಎರಡೂ ಸಂದರ್ಭಗಳಲ್ಲಿ ನೀತಿಯು ವೈಯಕ್ತಿಕ ವಿಷಯವೆನಿಸಿತು, ಹಿಂದಿದ್ದಂತೆ, ಸಾರ್ವಜನಿಕ ಸಂಸ್ಥೆಯೊಂದು ಅಧಿಕೃತವಾಗಿ ತೀರ್ಮಾನಿಸಬೇಕಾದ ವಿಷಯವಾಗಲಿಲ್ಲ.

ವೈಯಕ್ತಿಕ ನೈತಿಕತೆಯು ಅಧಿಕೃತವಾದ ಪುರೋಹಿತಪ್ರಣೀತ ನೈತಿಕತೆಗಿಂತ ಕಡಿಮೆ ನಿಷ್ಠುರವಾಗಿದ್ದಿರಬಹುದಾದ ಕಾಲದಲ್ಲಿಯೂ, ಸಾರಾಸಗಟಾಗಿ ಕಡಿಮೆ ಮಟ್ಟದ್ದಾಗಿರುವುದೆಂದು ಭಾವಿಸಬಾರದು. ಕ್ರಿಪೂ ಆರನೆಯ ಶತಮಾನದಲ್ಲಿ, ಗ್ರೀಕ್ ಮನೋಭಾವವು ನರಬಲಿಗೆ ಹೆಚ್ಚು ಹೆಚ್ಚು ವಿರುದ್ಧವಾಗುತ್ತಿರುವಾಗ, ಡೆಲ್ಫಿಯ ಒರಾಕಲ್ ಈ ಮಾನವೀಯ ಸುಧಾರಣೆಯನ್ನು ವಿರೋಧಿಸಿ ಹಳೆಯ ಕಠಿಣ ವಿಧಿಗಳನ್ನೇ ಜೀವಂತವಾಗಿರಿಸಲು ಪ್ರಯತ್ನಿಸಿತು ಎಂಬುದಕ್ಕೆ ಕೆಲವು ಆಧಾರಗಳಿವೆ.

---

[೧] ಇಂಗ್ಲಂಡ್‌ನಲ್ಲಿ ಮೊದಲ ಎಲಿಜ಼ಬೆತ್ ಕಾಲದಲ್ಲಿ ನಡೆದ ಸುಧಾರಣೆಗಳು ಅಸಂಪೂರ್ಣವೆಂದು ಭಾವಿಸಿ, ಪೂಜಾವಿಧಿಗಳನ್ನು ಸರಳಗೊಳಿಸಲು ಪ್ರಯತ್ನಿಸಿದ ಪ್ರಾಟೆಸ್ಟಂಟ್‌ರು.

ಅಂತೆಯೇ ನಮ್ಮದೇ ಕಾಲದಲ್ಲಿ, ಸತ್ತ ಹೆಂಡತಿಯ ಸೋದರಿಯನ್ನು ಮದುವೆಯಾಗುವುದಕ್ಕೆ ಸರ್ಕಾರ ಹಾಗೂ ಸಾರ್ವಜನಿಕ ಅಭಿಪ್ರಾಯಗಳು ಸಹಮತ ವ್ಯಕ್ತಪಡಿಸಿದಾಗಲೂ, ಚರ್ಚ್ ತನ್ನ ಅಧಿಕಾರವನ್ನು ಚಲಾಯಿಸಿ ಹಳೆಯ ನಿಷೇಧವನ್ನೇ ಎತ್ತಿಹಿಡಿಯುತ್ತಿದೆ.

ಚರ್ಚ್ ಅಧಿಕಾರವನ್ನು ಕಳೆದುಕೊಂಡ ಸಂದರ್ಭಗಳಲ್ಲಿ ನೈತಿಕತೆಯು, ಕೆಲವು ಮಂದಿ ವಿಶೇಷ ವ್ಯಕ್ತಿಗಳ ವಿಷಯಕ್ಕೆ ಹೊರತುಪಡಿಸಿ, ನಿಜವಾದ ಅರ್ಥದಲ್ಲಿ ವೈಯಕ್ತಿಕವಾಗಲಿಲ್ಲ. ಏಕೆಂದರೆ ಸಾರ್ವಜನಿಕ ಅಭಿಪ್ರಾಯವೆಂದರೆ ಬಹುಸಂಖ್ಯಾತ ಸಾಮಾನ್ಯ ಜನತೆ ಹಾಗೂ ಉದ್ಯೋಗದಾತರಂತಹ ಅಧಿಕಾರಸ್ಥರು – ಈ ಇಬ್ಬರದನ್ನೂ ಒಳಗೊಂಡದ್ದು. ಪಾಪಿಯ ದೃಷ್ಟಿಕೋನದಿಂದ ನೋಡಿದರೆ ಆದ ವ್ಯತ್ಯಾಸವು ಅಲ್ಪವಾಗಿರಬಹುದು, ಅದೂ ಅನಪೇಕ್ಷಣೀಯವಾಗಿ. ವ್ಯಕ್ತಿಲಾಭವು ಆಗುವುದು ಪಾಪಿಗಲ್ಲ, ನ್ಯಾಯಾಧಿಪತಿಗೆ: ಅವನು ಒಂದು ಅನೌಪಚಾರಿಕ ಪ್ರಜಾಸತ್ತಾತ್ಮಕ ನ್ಯಾಯಾಧಿಕರಣದ ಭಾಗವಾಗುತ್ತಾನೆ, ಅದೇ, ಚರ್ಚ್ ಬಲಿಷ್ಠವಾಗಿರುವೆಡೆಯಲ್ಲಿ, ಅವನೇ ಮೇಲಧಿಕಾರದ ತೀರ್ಪನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನೈತಿಕ ಪ್ರಜ್ಞೆಯು ಗಾಢವಾಗಿರುವ ಒಬ್ಬ ಪ್ರಾಟೆಸ್ಟಂಟ್ ಪುರೋಹಿತನ ನೈತಿಕ ಕರ್ತವ್ಯಗಳನ್ನು ಕಸಿದುಕೊಳ್ಳುತ್ತಾನೆ ಹಾಗೂ ಇತರರ ಸದಾಚಾರ–ದುರಾಚಾರಗಳ ವಿಷಯದಲ್ಲಿ ಅರೆಸರ್ಕಾರಿ ಧೋರಣೆಯನ್ನು ತಾಳುತ್ತಾನೆ, ಅದೂ ದುರಾಚಾರದ ವಿಷಯದಲ್ಲಿ:

ನಿನಗಿರುವ ಕರ್ತವ್ಯ ಬೇರೆಯೇನಲ್ಲ, ನೆರೆಯವರ
ತಪ್ಪು ದೋಷಗಳನ್ನು ಗಮನಿಸಿ ಹೇಳುವುದು, ಅಷ್ಟೆ.

ಇದು ಅನಾಯಕತ್ವವಲ್ಲ; ಪ್ರಜಾಪ್ರಭುತ್ವ.

ನೀತಿಸಂಹಿತೆಯು ಅಧಿಕಾರ ಚಲಾವಣೆಯ ಒಂದು ರೂಪ ಎಂಬ ವಾದವು, ನಾವಾಗಲೇ ಗಮನಿಸಿರುವಂತೆ, ಪೂರ್ತಿ ಸರಿಯಲ್ಲ. ಅನಾಗರಿಕರ ಅನ್ಯಬುಡಕಟ್ಟು ವಿವಾಹ ಪದ್ಧತಿಯ ಆನಂತರ, ನಾಗರಿಕತೆಯ ಎಲ್ಲ ಹಂತಗಳಲ್ಲಿಯೂ, ಅಧಿಕಾರದೊಂದಿಗೆ ಎದ್ದು ಕಾಣುವ ಸಂಬಂಧವಿಲ್ಲದ ನೀತಿ ತತ್ವಗಳು ಅಸ್ತಿತ್ವದಲ್ಲಿವೆ: ನಮ್ಮಲ್ಲಿಯೇ ಇರುವ ಸ್ವಲಿಂಗರತಿಖಂಡನೆಯನ್ನು ನಿದರ್ಶನವಾಗಿ ತೆಗೆದುಕೊಳ್ಳಬಹುದು. ನೀತಿಸಂಹಿತೆಯು *ಆರ್ಥಿಕ* ಅಧಿಕಾರದ ರೂಪ ಎಂಬ ಮಾರ್ಕ್ಸಿಸ್ಟ್ ವಾದವು, ಅದು ಒಟ್ಟಾರೆ ಅಧಿಕಾರ ಚಲಾವಣೆಯ ಒಂದು ರೂಪ ಎಂಬ ವಾದಕ್ಕಿಂತ ಅಸಮರ್ಪಕವಾದುದು. ಆದರೆ ಮಾರ್ಕ್ಸಿಸ್ಟ್ ವಾದವು ಬಹು ಸಂದರ್ಭಗಳಲ್ಲಿ ಸರಿಯಾದುದೇ. ಉದಾಹರಣೆಗೆ, ಮಧ್ಯಯುಗಗಳಲ್ಲಿ, ಸಾಮಾನ್ಯ ಜನರಲ್ಲಿನ

ಅತ್ಯಂತ ಬಲಿಷ್ಠರು ಭೂಮಾಲೀಕರಾಗಿದ್ದಾಗ, ಬಿಷಪ್‌ಧಾಮಗಳು ಮಠಗಳೂ ತಮ್ಮ ಆದಾಯವನ್ನು ಭೂಮಿಯಿಂದ ಪಡೆಯುತ್ತಿದ್ದಾಗ, ಹಾಗೂ ಹಣ ಹೂಡಿಕೆದಾರರು ಯೆಹೂದ್ಯರು ಮಾತ್ರವಾಗಿದ್ದಾಗ, ಚರ್ಚ್ ಎಲ್ಲ ಬಗೆಯ ಬಡ್ಡಿ ವ್ಯವಹಾರವನ್ನು ನಿಸ್ಸಂದಿಗ್ಧವಾಗಿ ಖಂಡಿಸಿತು. ಇದು ಸಾಲಪಡೆಯುವವರ ನೀತಿ. ಶ್ರೀಮಂತ ವರ್ಗದ ಉದಯದೊಡನೆ ಹಿಂದಿನ ನಿಷೇಧವನ್ನು ಮುಂದುವರೆಸುವುದು ಅಸಾಧ್ಯವೆನಿಸಿತು: ಪಟ್ಟಣಪ್ರದೇಶದ ಮತ್ತು ಸುಸ್ಥಿತಿಯಲ್ಲಿದ್ದವರನ್ನು ಮಾತ್ರವೇ ತಮ್ಮ ಗಿರಾಕಿಗಳಾಗಿ ಹೊಂದಿದ್ದ ಕ್ಯಾಲ್ವಿನ್[೧]ರು ಮೊದಲು ವಿನಾಯಿತಿ ನೀಡಿದರು, ಆನಂತರ ಇತರ ಪ್ರಾಟೆಸ್ಟಂಟರು ಮತ್ತು ಕೊನೆಯಲ್ಲಿ ಕ್ಯಾಥೋಲಿಕ್ ಚರ್ಚ್[೨]. ಮುಂದೆ ಸಾಲಪಡೆಯುವವರ ಈ ನೀತಿ ಒಂದು ರೂಢಿಯೇ ಆಯಿತು ಹಾಗೂ ಪಡೆದ ಸಾಲವನ್ನು ಹಿಂದಿರುಗಿಸದಿರುವುದು ಮಹಾ ಪಾಪ ಎನ್ನಿಸಿಕೊಂಡಿತು. ಇತ್ತೀಚಿನವರೆಗೂ 'ದಿ ಸೊಸೈಟಿ ಆಫ್ ಫ್ರೆಂಡ್ಸ್', ಅದನ್ನೊಂದು ಸಿದ್ಧಾಂತವನ್ನು ಪ್ರತಿಪಾದಿಸದಿದ್ದರೂ ಆಚರಣೆಯಲ್ಲಿ ದಿವಾಳಿಯಾದವರನ್ನು ದೂರವಿರಿಸಿತ್ತು.

ಶತ್ರುಗಳ ಬಗೆಗಿನ ನೀತಿಸಂಹಿತೆಯು ವಿವಿಧ ಕಾಲಗಳಲ್ಲಿ ತುಂಬ ವ್ಯತ್ಯಾಸವನ್ನು ಪಡೆದಿತ್ತು; ಅದಕ್ಕೆ ಕಾರಣ ಅಧಿಕಾರದ ಲಾಭಕರ ಉಪಯೋಗಗಳಲ್ಲಿ ವ್ಯತ್ಯಾಸವುಂಟಾದುದು. ಈ ವಿಷಯವನ್ನು ಕುರಿತು *'ಹಳೆಯ ಒಡಂಬಡಿಕೆ'* ಹೇಳುವುದನ್ನು ಕೇಳೋಣ:

"ನೀವು ಸ್ವಾಧೀನಮಾಡಿಕೊಳ್ಳುವುದಕ್ಕೆ ಹೋಗುವ ದೇಶದಲ್ಲಿ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಸೇರಿಸಿ ಸಂಖ್ಯೆಯಲ್ಲಿಯೂ ಬಲದಲ್ಲಿಯೂ ನಿಮಗೆ ಮೀರುವ ಹಿತ್ತೀಯರು, ಗಿರ್ಗಾಷಿಯನರು, ಅಮೋರಿಯರು, ಕಾನಾನ್ಯರು, ಪೆರಿಜ್ಜೀಯರು, ಹಿವ್ವಿಯರು, ಯೆಬೂಸಿಯರು ಎಂಬ ಏಳು ಜನಾಂಗಗಳನ್ನು ನಿಮ್ಮ ಎದುರಿನಿಂದ ಹೊರಡಿಸುವವನಾಗಿ ಅವರನ್ನು ನಿಮ್ಮಿಂದ ಪರಾಜಯಪಡಿಸುವಾಗ ನೀವು ಅವರನ್ನು ನಿಶ್ಶೇಷವಾಗಿ ಸಂಹರಿಸಬೇಕು;

---

[೧] ಮನುಷ್ಯನಿಗೆ ತನ್ನ ಉದ್ಧಾರ ತನ್ನಿಂದಲೇ ಸಾಧ್ಯವಿಲ್ಲ, ದೇವರೇ ಅವನನ್ನು ಉದ್ಧರಿಸಬೇಕು ಎಂಬ ಸಿದ್ಧಾಂತದ ಕ್ಯಾಲ್ವಿನ್‌ನ ಅನುಯಾಯಿಗಳು

[೨] ಈ ವಿಷಯದ ಬಗೆಗಿನ ಚರ್ಚೆಗೆ ನೊಡಿ, ಆರ್.ಎಚ್. ಟಾನಿ, *'ರಿಲಿಜನ್ ಅಂಡ್ ರೈಸ್ ಆಫ್ ಕ್ಯಾಪಿಟಲಿಸಮ್'* ಎಂಬ ಪುಸ್ತಕ

ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು; ಅವರೊಡನೆ ಬೀಗತನಮಾಡಬಾರದು. ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂಬಾರದು. ಅವರಿಂದ ತರಲೂ ಬಾರದು;

ಹಾಗೆ ಮಾಡಿದರೆ ಅವರು ನಿಮ್ಮ ಮಕ್ಕಳನ್ನು ಯೆಹೋವನ ಸೇವೆಯಿಂದ ತಪ್ಪಿಸಿ ಇತರ ದೇವರುಗಳನ್ನು ಪೂಜಿಸುವದಕ್ಕೆ ತಿರುಗಿಸಾರು; ಆಗ ಯೆಹೋವನು ನಿಮ್ಮ ಮೇಲೆ ಕೋಪಗೊಂಡು ಬೇಗನೆ ನಿಮ್ಮನ್ನು ನಾಶಮಾಡುವನು"

ಅವರು ಹೀಗೆಲ್ಲ ಮಾಡಿದರೆ *"ನಿಮ್ಮೊಳಗೆ ಸ್ತ್ರೀಪುರುಷರಲ್ಲಿಯಾಗಲೀ ಗಂಡುಹೆಣ್ಣು ಪಶುಗಳಲ್ಲಿಯಾಗಲೀ ಬಂಜೆತನವು ಇರುವದಿಲ್ಲ"*[೧]

ಈ ಏಳು ದೇಶಗಳ ಬಗ್ಗೆ, ಮುಂದಿನ ಒಂದು ಅಧ್ಯಾಯದಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿ ಹೀಗೆ ಹೇಳಿದೆ:

"ಉಸಿರುಬಿಡುವ ಒಬ್ಬರನ್ನಾದರೂ ಉಳಿಸಬಾರದು. ....ಇಲ್ಲವಾದರೆ ಅವರು ತಮ್ಮ ದೇವರುಗಳಿಗಾಗಿ ಆಚರಿಸುವ ನಿಷಿದ್ಧಚಾರಗಳನ್ನು ನಿಮಗೆ ಕಲಿಸಿಕೊಟ್ಟಾರು" (ಛಾ ೧೬, ೧೮)

ಆದರೆ *"ಈ ದೇಶದ ಜನಾಂಗಗಳಿಗೆ ಸೇರದೆ ದೂರವಾಗಿರುವ ಜನಾಂಗಗಳ ಪಟ್ಟಣಗಳ ವಿಷಯದಲ್ಲಿ"* ಹೆಚ್ಚು ಕರುಣೆ ತೋರಿಸಲು ಅವಕಾಶವಿರುತ್ತದೆ

"...ಅದರಲ್ಲಿರುವ ಗಂಡಸರೆಲ್ಲರನ್ನೂ ಕನಿಕರಿಸದೆ ಸಂಹಾರಮಾಡಬೇಕು. ಹೆಂಗಸರನ್ನೂ ಮಕ್ಕಳನ್ನೂ ದನಗಳನ್ನೂ ಊರಲ್ಲಿರುವ ಆಸ್ತಿಯನ್ನೂ ನೀವು ಸ್ವಂತಕ್ಕೆ ತೆಗೆದುಕೊಳ್ಳಬಹುದು."[೨]

ಈ ಉದ್ಧೃತಗಳಿಂದ ಸ್ಪಷ್ಟವಾಗುವುದೆಂದರೆ, ಜೆಂಟೈಲ್ (ಯೆಹೂದ್ಯೇತರರು)ಗಳದಕ್ಕೆ ವಿರುದ್ಧವಾಗಿದ್ದಾಗ ಇಸ್ರೇಲ್‌ನ ಮಕ್ಕಳ ಹಿತಾಸಕ್ತಿಗಳು ಪೂರ್ತಿ ಮೇಲುಗೈ ಪಡೆಯುವುದಾಗಿತ್ತು, ಆದರೆ ಆಂತರಿಕವಾಗಿ ಮತಧರ್ಮದವು, ಅಂದರೆ ಪುರೋಹಿತರವು, ಸಾಮಾನ್ಯ ಜನತೆಯ ಆರ್ಥಿಕ ಹಿತಾಸಕ್ತಿಗಳದಕ್ಕೆ ಮೇಲುಗೈ ಪಡೆಯುವುದಾಗಿತ್ತು.

[೧] ಧರ್ಮೋಪದೇಶಕಾಂಡ (ಡ್ಯೂಟೆರೋನಮಿ), vii, ೧–೪ ಮತ್ತು ೧೪ ಈ ಆಧ್ಯಾಯದಲ್ಲಿ ಉಲ್ಲೇಖಗೊಂಡ ಹಳೆಯ ಒಡಂಬಡಿಕೆಯ ಭಾಗಗಳ ಕನ್ನಡ ಅನುವಾದವು 'ಬೈಬಲ್ ಸೊಸೈಟಿ ಆಫ್ ಇಂಡಿಯ' ಸಿದ್ಧಡಿಸಿರುವ 'ಸತ್ಯವೇದವು' ಗ್ರಂಥದ್ದು.

[೨] ೧ ಸಮುವೇಲನು (I ಸ್ಯಾಮ್ಯುಯಲ್) XV, ೮–೧೧

ಭಗವಂತನ ವಾಕ್ಕು ಸ್ಯಾಮ್ಯುಯಲ್ ಬಳಿ ಇಳಿಯಿತು, ಆದರೆ ಸ್ಯಾಮ್ಯುಯಲ್‌ನ ವಾಕ್ಕು ಸೌಲ್‌ನ ಬಳಿ ಬಂತು ಆ ವಾಕ್ಕೆಂದರೆ: *"ನನ್ನ ಕಿವಿಗಳಲ್ಲಿ ಮೊರೆಯುವ ಕುರಿಗಳ ಕೂಗಿಗೆ, ಎತ್ತುಗಳ ಅಂಬಾ ಧ್ವನಿಗೆ ಏನು ಅರ್ಥ?"* ಅದಕ್ಕೆ ಸೌಲ್ ತನ್ನ ತಪ್ಪನ್ನು ಒಪ್ಪಿಕೊಳ್ಳುವ ಮೂಲಕ ಮಾತ್ರ ಉತ್ತರಿಸಬಹುದಾಗಿತ್ತು.

ಯೆಹೂದಿಗಳು ಮೂರ್ತಿಪೂಜೆಯ ತಮ್ಮ ಭೀತಿಯಿಂದ – ಇದರಿಂದಾಗಿ ಮೈಕ್ರೋಬ್‌ಗಳು ಕುರಿಗಳು ದನಗಳಲ್ಲಿಯೂ ಅವಿತುಕೊಂಡಿದ್ದವು – ಸೋತವರನ್ನು ಮುಗಿಸಿಬಿಡುವ ಕಾರ್ಯದಲ್ಲಿ ಅಪ್ರತಿಮ ಪರಿಪೂರ್ಣತೆಯೆಡೆಗೆ ಸಾಗಿದರು. ಆದರೆ ಪ್ರಾಚೀನಕಾಲದ ಯಾವ ದೇಶವೂ ಸೋತ ಜನರನ್ನು ಕಾಣಬೇಕಾದುದರ ಬಗ್ಗೆ ಯಾವುದೇ ಕಾನೂನುಬದ್ಧ ಅಥವಾ ನೈತಿಕ ಮಿತಿಯನ್ನು ಗಮನಿಸಲಿಲ್ಲ. ಅವರಲ್ಲಿ ಕೆಲವರನ್ನು ಕೊಲ್ಲುವುದು ಮತ್ತು ಉಳಿದವರನ್ನು ಗುಲಾಮರನ್ನಾಗಿ ಮಾರುವುದು ಸಾಮಾನ್ಯವಾಗಿತ್ತು. ಕೆಲವು ಗ್ರೀಕರು – ನಿದರ್ಶನಕ್ಕೆ, *'ಟ್ರೋಜನ್ ವಿಮೆನ್'*ನಲ್ಲಿ ಯೂರಿಪಿಡೀಸ್ – ಈ ಪದ್ಧತಿಯ ವಿರುದ್ಧ ಮನೋಭಾವನ್ನು ಸೃಷ್ಟಿಸಲು ಪ್ರಯತ್ನಿಸಿದರೂ ಸಫಲರಾಗಲಿಲ್ಲ. ಸೋತವರಿಗೆ, ಅಧಿಕಾರವಿಲ್ಲದ್ದರಿಂದ, ಕರುಣೆ ತೋರಿಸುವಂತೆ ಕೇಳುವ ಹಕ್ಕಿರಲಿಲ್ಲ. ಕ್ರಿಶ್ಚಿಯಾನಿಟಿಯ ಆರಂಭದವರೆಗೂ, ಈ ದೃಷ್ಟಿಕೋನವನ್ನು ತಾತ್ವಿಕವಾಗಿಯೂ ಅಲ್ಲಗಳೆಯಲಿಲ್ಲ.

ಶತ್ರುಗಳ ಬಗೆಗಿನ ಕರ್ತವ್ಯ ಎಂಬುದು ಊಹಿಸಲು ಕಷ್ಟಕರವಾದ ವಿಷಯ. ಹಿಂದಿನ ಕಾಲದಲ್ಲಿ ಕ್ಷಮಾದಾನವನ್ನು ಪುಣ್ಯಕರವೆಂದು ಭಾವಿಸಲಾಗಿತ್ತು, ಆದರೆ ಅದು ಯಶಸ್ವಿಯಾದಾಗ, ಅಂದರೆ ಶತ್ರುಗಳು ಮಿತ್ರರಾದಾಗ ಮಾತ್ರ; ಅನ್ಯತಃ, ಅದು ದೌರ್ಬಲ್ಯವೆಂದು ಖಂಡನೆಗೊಳಗಾಗುತ್ತಿತ್ತು. ಭಯವನ್ನು ಸೃಷ್ಟಿಸಿದ ಮೇಲೆ ಯಾರೂ ಔದಾರ್ಯವನ್ನು ನಿರೀಕ್ಷಿಸುವಂತಿರಲಿಲ್ಲ: ರೋಮನ್‌ರು ಹ್ಯಾನಿಬಾಲ್‌ರ ಬಗ್ಗೆಯಾಗಲೀ ಸ್ಪಾರ್ಟಕಸ್‌ನ ಅನುಯಾಯಿಗಳ ಬಗ್ಗೆಯಾಗಲೀ ಹೀಗೆ ನಡೆದುಕೊಳ್ಳಲಿಲ್ಲ. ಸಾಹಸಪ್ರದರ್ಶನದ(ಶಿವಲ್ರಿ) ಕಾಲದಲ್ಲಿ, ಒಬ್ಬ ನೈಟ್ ಸೆರೆ ಸಿಕ್ಕಿದ ನೈಟ್‌ನ ಬಗ್ಗೆ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದ. ಆದರೆ ನೈಟ್‌ಗಳ ನಡುವಣ ಸಂಘರ್ಷವು ನಿಷ್ಠುರವಾದುದಾಗಿರಲಿಲ್ಲ; ಆಲ್ಬಿಜೆನ್ಸೆಸ್‌ರ[೧] ಬಗ್ಗೆ ಕೊಂಚವಾದರೂ ಕರುಣೆಯನ್ನು ತೋರಿಸಲಿಲ್ಲ. ನಮ್ಮ ಕಾಲದಲ್ಲಿಯೇ,

[೧] ಫ್ರಾನ್ಸ್‌ನಲ್ಲಿ ೧೧–೧೩ ನೆಯ ಶತಮಾನಗಳಲ್ಲಿದ್ದು, ಪೋಪ್ ಇನ್ನೋಸೆಂಟ್ ಮೂರನೆಯ ಪ್ರೇರಣೆಯಿಂದ ಪಾಷಂಡಿಗಳೆಂದು ಹತರಾದ ಮ್ಯಾನಿಕಿಯನ್ ಪಂಥದವರು

ಫಿನ್‌ಲಂಡ್, ಹಂಗರಿ, ಜರ್ಮನಿ ಮತ್ತು ಸ್ಪೈನ್‌ಗಳಲ್ಲಿ ಶ್ವೇತ ಭಯೋತ್ಪಾದನೆಗೊಳಗಾದವರ (ವೈಟ್ ಟೆರರ್)[೧] ಬಗ್ಗೆ ಸರಿಸುಮಾರು ಒಂದೇ ಬಗೆಯ ಕ್ರೌರ್ಯವನ್ನು ತೋರಿಸಲಾಯಿತು, ಕೆಲವು ರಾಜಕೀಯ ವಿರೋಧಗಳನ್ನು ಬಿಟ್ಟರೆ ಇದರ ವಿರುದ್ಧ ಪ್ರತಿಭಟನೆಯೂ ನಡೆಯಲಿಲ್ಲ. ಹೀಗೆಯೇ, ರಷ್ಯದಲ್ಲಿನ ಭಯೋತ್ಪಾದನೆಯನ್ನು ಬಹುಮಂದಿ ಎಡಪಂಥೀಯರು ಮನ್ನಿಸಿದರು. ಈಗ, ಹಳೆಯ ಒಡಂಬಡಿಕೆಯ ಕಾಲದಲ್ಲಿದ್ದಂತೆ, ಶತ್ರುಗಳನ್ನು ಕಾಣಬೇಕಾದ ರೀತಿಯ ಕರ್ತವ್ಯದ ಬಗ್ಗೆ, ಅವರು ಸಾಕಷ್ಟು ಭಯವನ್ನು ಹುಟ್ಟಿಸುವವರಾಗಿರುವಾಗ, ವಾಸ್ತವದಲ್ಲಿ ಯಾವುದೇ ಪರಿಗಣನೆಯಿಲ್ಲ. ಧನಾತ್ಮಕ ನೈತಿಕತೆಯು ಈಗಲೂ ಸಂಬಂಧಪಟ್ಟ ಸಮುದಾಯದಲ್ಲಿ ಮಾತ್ರ ಆಚರಣೆಯಲ್ಲಿದೆ, ಹೀಗಾಗಿ, ಅದು ಇನ್ನೂ ಸರ್ಕಾರದ ಒಂದು ಇಲಾಖೆಯಾಗಿಯೇ ಉಳಿದಿದೆ. ನೈತಿಕ ಹೊಣೆಗಾರಿಕೆಯು ಮಾನವ ಜನಾಂಗದ ಯಾವುದೋ ಒಂದು ವರ್ಗಕ್ಕೆ ಮಾತ್ರ, ಪರಿಪೂರ್ಣತೆಯ ಬಗೆಗಿನ ಸಲಹೆಯ ಹೊರತಾಗಿ, ಸೀಮಿತವಾಗಿಲ್ಲವೆಂಬುದನ್ನು ಜಗಳಗಂಟ ಮನೋಭಾವದ ಜನರಿಗೆ ಮನವರಿಕೆ ಮಾಡಿಕೊಡಲು ವಿಶ್ವಸರ್ಕಾರದ ಹೊರತು ಬೇರಾವುದಕ್ಕೂ ಸಾಧ್ಯವಿಲ್ಲ.

ಈ ಅಧ್ಯಾಯದಲ್ಲಿ ನಾನು ಇದುವರೆಗೂ ಧನಾತ್ಮಕ ನೈತಿಕತೆಯ ಬಗ್ಗೆ ಚರ್ಚಿಸಿದ್ದೇನೆ, ಮತ್ತು ಇದಷ್ಟೇ ಸಾಲದು ಎಂಬುದು ಈಗಾಗಲೇ ವೇದ್ಯವಾಗಿದೆ. ಒಟ್ಟಾರೆ ಹೇಳುವುದಾದರೆ, ಅದು ಅಧಿಕಾರಸ್ಥರ ಪರವಾಗಿದೆಯೇ ಹೊರತು ಕ್ರಾಂತಿಗೆ ಎಡೆಮಾಡಿಕೊಡುವಂಥದಲ್ಲ, ಹೋರಾಟದ ತೀವ್ರತೆಯನ್ನು ಕಡಿಮೆ ಮಾಡುವಂಥದಲ್ಲ, ಹಾಗೂ ಹೊಸ ನೈತಿಕ ಒಳನೋಟಗಳನ್ನು ನೀಡಬಲ್ಲ ಪ್ರವಾದಿಗೆ ಆಸ್ಪದವೀಯುವಂಥದಲ್ಲ. ಇದರಲ್ಲಿ ತಾತ್ವಿಕತೆಗೆ ಸಂಬಂಧಿಸಿದ ಕೆಲವು ಕಠಿಣ ಪ್ರಶ್ನೆಗಳು ಅಡಕವಾಗಿವೆ; ಆದರೆ ಅವುಗಳ ಕುರಿತು ವಿವೇಚಿಸುವುದಕ್ಕಿಂತ ಮುಂಚೆ, ಧನಾತ್ಮಕ ನೈತಿಕತೆಯ ವಿರೋಧದಿಂದ ಮಾತ್ರವೇ ಸಾಧಿಸಬಹುದಾದ ಕೆಲವು ಅಂಶಗಳನ್ನು ಪರಿಶೀಲಿಸೋಣ.

ಕೆಲವು ವಿಷಯಗಳಲ್ಲಿ ಗಾಸ್ಪೆಲ್‌ಗಳಿಗೆ ಜಗತ್ತು ಋಣಿಯಾಗಿದೆ, ಆದರೆ ಅದೇನಾದರೂ ಹೆಚ್ಚು ಪ್ರಭಾವಶಾಲಿಯಾಗಿದ್ದರೆ ಇರಬಹುದಾಷ್ಟು ಪ್ರಮಾಣದಲ್ಲಿ ಅಲ್ಲ. ಗುಲಾಮಪದ್ಧತಿ ಹಾಗೂ ಸ್ತ್ರೀದಮನಗಳ ವಿರೋಧಕ್ಕೆ

---

[೧] ಸೋಷಿಯಲಿಸ್ಟರು ಹಾಗೂ ಕಮ್ಯುನಿಸ್ಟರರ (ಅಥವಾ ಹಾಗೆಂದು ಸಂಶಯಕ್ಕೊಳಗಾದವರ) ಮೇಲೆ ನಡೆದ ಹಿಂಸಾಚಾರ

ಅದು ಸ್ವಲ್ಪಮಟ್ಟಿಗೆ ಕಾರಣವಾಗಿದೆ. ಮುಂದೆ ಅದು ಯುದ್ಧ ಹಾಗೂ ಆರ್ಥಿಕ ಅನ್ಯಾಯಗಳ ವಿರೋಧಕ್ಕೂ ಕಾರಣವಾಗಬಹುದೆಂದು ನಿರೀಕ್ಷಿಸಬಹುದು. ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ, ಅದು ಸಹಿಷ್ಣುತೆಯ ಹರಿಕಾರರ ಉದಯಕ್ಕೆ ಬಹುಮಟ್ಟಿಗೆ ಕಾರಣವಾಯಿತು; ನಮ್ಮದಕ್ಕಿಂತ ಹೆಚ್ಚು ಸೌಖ್ಯವಿರುವ ಜಗತ್ತಿನಲ್ಲಿ ಮತ್ತೆ ಹಾಗಾಗಬಹುದು. ಮಧ್ಯಯುಗೀನ ಚರ್ಚ್‌ಗಳು, ರಿನೈಸಾನ್ಸ್‌ನ ರಾಜಪ್ರಭುತ್ವಗಳು ಹಾಗೂ ಈಗಿನ ಧನಿಕಪ್ರಭುತ್ವಗಳ ವಿರುದ್ಧದ ಕ್ರಾಂತಿಗಳು ಪರಿಸ್ಥಿತಿ ಜಡ್ಡುಗಟ್ಟುವುದನ್ನು ತಪ್ಪಿಸಲು ಆವಶ್ಯಕವಾದವು. ಮಾನವಜನಾಂಗಕ್ಕೆ ಕ್ರಾಂತಿ ಹಾಗೂ ವೈಯಕ್ತಿಕ ನೈತಿಕತೆಯು ಆವಶ್ಯಕವೆಂಬ ಅಂಶವನ್ನು ಒಪ್ಪಿಕೊಳ್ಳುತ್ತ, ಜಗತ್ತನ್ನು ಅನಾಯಕತ್ವದ ಕೂಪಕ್ಕೆ ಬೀಳಿಸದಂತೆ ಇವುಗಳಿಗೆ ಅವಕಾಶವಿರುವ ಸನ್ನಿವೇಶವನ್ನು ಕಂಡುಕೊಳ್ಳುವುದು ನಮ್ಮ ಮುಂದಿನ ಸಮಸ್ಯೆ.

ನಮ್ಮ ಎದುರು ಎರಡು ಪ್ರಶ್ನೆಗಳಿವೆ: ಒಂದು, ಧನಾತ್ಮಕ ನೈತಿಕತೆಯು, ತನ್ನ ದೃಷ್ಟಿಕೋನದಿಂದಲೇ, ವೈಯಕ್ತಿಕ ನೈತಿಕತೆಗೆ ಎಡೆ ಕೊಡುವ ಬಗೆಗಿನ ಅತ್ಯಂತ ವಿವೇಕಯುತ ಮನೋಭಾವ ಯಾವುದು? ಎರಡು, ವೈಯಕ್ತಿಕ ನೈತಿಕತೆಯು ಧನಾತ್ಮಕ ನೈತಿಕತೆಯ ಬಗೆಗೆ ಎಷ್ಟರ ಮಟ್ಟಿಗಿನ ಗೌರವವನ್ನು ಸಲ್ಲಿಬೇಕು? ಈ ಎರಡರ ಬಗ್ಗೆ ಚರ್ಚಿಸುವುದಕ್ಕೆ ಮುಂಚೆ, ವೈಯಕ್ತಿಕ ನೈತಿಕತೆ ಎಂದರೇನೆಂಬುದನ್ನು ವಿಶದಪಡಿಸಬೇಕು.

ವೈಯಕ್ತಿಕ ನೈತಿಕತೆಯನ್ನು ಒಂದು ಐತಿಹಾಸಿಕ ಸಂಗತಿಯಾಗಿ ಅಥವಾ ಒಬ್ಬ ತತ್ವಜ್ಞಾನಿಯ ದೃಷ್ಟಿಕೋನದಿಂದ ಪರಿಗಣಿಸಬಹುದು. ಮೊದಲನೆಯದರಿಂದ ನಮ್ಮ ಚರ್ಚೆಯನ್ನು ಅರಂಭಿಸೋಣ.

ಅಸ್ತಿತ್ವದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯೂ, ಇತಿಹಾಸ ತಿಳಿದಿರುವ ಮಟ್ಟಿಗೆ, ಕೆಲವು ಕೃತ್ಯಗಳ ಬಗ್ಗೆ ಗಾಢವಾದ ಭೀತಿಯನ್ನು ಹೊಂದಿದ್ದ. ಇವುಗಳ ಬಗ್ಗೆ ವ್ಯಕ್ತಿ ಮಾತ್ರವಲ್ಲ, ಇಡೀ ಒಂದು ಬುಡಕಟ್ಟೋ ದೇಶವೋ ವರ್ಗವೋ ಸಮುದಾಯವೋ ಭೀತಗೊಂಡಿದ್ದುದು ಸಾಮಾನ್ಯವಾಗಿತ್ತು. ಕೆಲವು ವೇಳೆ ಇಂಥ ಭೀತಿಯ ಮೂಲ ಯಾವುದೆಂಬುದು ತಿಳಿಯದಿದ್ದರೂ, ಮತ್ತೆ ಕೆಲವು ವೇಳೆ ಮೂಲವನ್ನು ಮರ್ತ್ಯ ಆವಿಷ್ಕರ್ತನಾದ ಒಬ್ಬ ಐತಿಹಾಸಿಕ ವ್ಯಕ್ತಿಯಲ್ಲಿ ಗುರುತಿಸಬಹುದು. ಮಹಮ್ಮದೀಯರೇಕೆ ಪ್ರಾಣಿಗಳ ಅಥವಾ ಮಾನವರ ಪ್ರತಿಮೆಗಳನ್ನು ಮಾಡುವುದಿಲ್ಲ ಎಂಬುದು ನಮಗೆ ಗೊತ್ತು; ಅದಕ್ಕೆ ಕಾರಣ ಪ್ರವಾದಿ ಅದನ್ನು ನಿಷೇಧಿಸಿದ. ಸನಾತನಿಗಳಾದ ಯೆಹೂದಿಗಳೇಕೆ ಮೊಲವನ್ನು

ತಿನ್ನುವುದಿಲ್ಲ ಎಂಬುದು ನಮಗೆ ಗೊತ್ತು; ಮೊಲವು ಶುದ್ಧವಲ್ಲ ಎಂದು ಮೋಸೆಸ್‌ನ ವಿಧಿಗಳು ಹೇಳುತ್ತವೆ ಅದಕ್ಕಾಗಿ. ಒಪ್ಪಿಕೊಂಡಾಗ ಇಂತಹ ನಿಷೇಧಗಳು ಧನಾತ್ಮಕ ನೈತಿಕತೆಯಾಗುತ್ತವೆ; ಆದರೆ ಮೂಲತಃ, ಕನಿಷ್ಠ ಪಕ್ಷ ಅವುಗಳ ಮೂಲವನ್ನು ತಿಳಿದಾಗ, ಅವು ಖಾಸಗಿ ನೈತಿಕತೆಗೆ ಸೇರಿದ್ದವು.

ಧನಾತ್ಮಕವೋ ಋಣಾತ್ಮಕವೋ ನೈತಿಕತೆ ಎಂಬುದು ನಮಗೆ ವಿಧ್ಯುಕ್ತ ಪರಿಕಲ್ಪನೆಗಳಿಗಿಂತ ಮಿಗಿಲಾದುದಾಗಿ ಕಾಣುತ್ತವೆ. ನಮಗೆ ತಿಳಿದಿರುವ ಸ್ವರೂಪದಲ್ಲಿ ಅದು ಆದಿಮವಲ್ಲ, ಆದರೆ ಅದಕ್ಕೆ ಅನೇಕ ಬೇರೆ ಬೇರೆ ಸ್ವತಂತ್ರ ಆಕರಗಳಿದ್ದುದು ಕಾಣುತ್ತದೆ: ಚೈನೀ ಸಂತರು, ಇಂಡಿಯದ ಬೌದ್ಧರು, ಹೀಬ್ರೂ ಪ್ರವಾದಿಗಳು ಮತ್ತು ಗ್ರೀಕ್ ತತ್ವಜ್ಞಾನಿಗಳು. ಐತಿಹಾಸಿಕವಾಗಿ ಈ ವ್ಯಕ್ತಿಗಳ ಪ್ರಾಮುಖ್ಯವನ್ನು ಅಲ್ಲಗಳೆಯುವುದು ಕಷ್ಟ, ಅವರು ಕೆಲವೇ ಶತಮಾನಗಳ ಅಂತರದಲ್ಲಿ ಜೀವಿಸಿದ್ದವರು. ತಮ್ಮ ಪೂರ್ವಿಕರಿಗಿಂತ ಭಿನ್ನವಾದ ಕೆಲವು ಸಮಾನ ಲಕ್ಷಣಗಳನ್ನು ಅವರು ಪಡೆದಿದ್ದರು. ಲಾವೋ–ತ್ಸೆ ಮತ್ತು ಚುಂಗ್–ತ್ಸೆ ತಾವೋ ಸಿದ್ಧಾಂತವನ್ನು ತಮ್ಮದೇ ಜ್ಞಾನಫಲವೆಂಬಂತೆ ಪ್ರತಿಪಾದಿಸಿದರೇ ವಿನಾ ಪಾರಂಪರಿಕವಾದ ಅಥವಾ ಅನ್ಯರ ವಿವೇಕವೆಂಬ ರೀತಿಯಲ್ಲಿ ಅಲ್ಲ. ಆ ಸಿದ್ಧಾಂತವು ನಿರ್ದಿಷ್ಟ ಕರ್ತವ್ಯಗಳ ರೂಪದಲ್ಲಿಲ್ಲ, ಬದಲಾಗಿ ಒಂದು ಜೀವನಕ್ರಮವೆಂಬಂತೆ, ಆಲೋಚನೆಯ ಹಾಗೂ ಅನುಭವದ ಒಂದು ರೀತಿಯಂತೆ ಇದೆ; ಇದರಿಂದಾಗಿ, ಯಾವ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದು ವಿಧಿರೂಪದ ಆವಶ್ಯಕತೆಯಿಲ್ಲದೆ ಸ್ಪಷ್ಟವಾಗುತ್ತದೆ. ಪ್ರಾಚೀನ ಬೌದ್ಧರ ವಿಷಯದಲ್ಲಿಯೂ ಈ ಮಾತನ್ನು ಹೇಳಬಹುದು. ಹೀಬ್ರೂ ಪ್ರವಾದಿಗಳು, ಹೆಚ್ಚೆಂದರೆ, ವಿಧಿಯನ್ನು ಮೀರಿ, ನವೀನವೂ ಹೆಚ್ಚು ಆಂತರಂಗಿಕವೂ ಆದ ಸತ್ಕೃತ್ಯವನ್ನು ಪ್ರತಿಪಾದಿಸುತ್ತಾರೆ, ಅದನ್ನು ಸಂಪ್ರದಾಯವು ಹೇಳದಿದ್ದರೂ "ಭಗವಾನುವಾಚ" ("ಙಖಞ ,ಚಿಥಿಜಙಖ ಙಖಜ ಐಡಿಔಜ") ಎಂಬಂತಹ ಮಾತುಗಳ ಮೂಲಕ ಸೂಚಿಸುತ್ತಾರೆ. ಸಾಕ್ರಟೀಸ್ ತನ್ನ ಭೂತವು ಹೇಳಿದಂತೆ ಘೋಷಿಸುತ್ತಿದ್ದನೇ ಹೊರತು ಕಾನೂನುಬದ್ಧ ಅಧಿಕಾರಿಗಳು ಬಯಸಿದಂತೆ ಅಲ್ಲ; ತನ್ನ ಅಂತರ್ವಾಣಿಗೆ ವಿರುದ್ಧವಾಗಿ ನುಡಿಯುವುದಕ್ಕಿಂತಲೂ ಅವನಿಗೆ ಬಲಿದಾನಗೊಳ್ಳುವುದು ಹೆಚ್ಚು ಉಪಾದೇಯವೆನಿಸಿತ್ತು. ಇವರೆಲ್ಲ ತಮ್ಮ ಕಾಲದಲ್ಲಿ ಬಂಡಾಯಗಾರರೇ, ಮುಂದಿನ ಕಾಲಗಳಲ್ಲಿ ಗೌರವಾರ್ಹರೆನಿಸಿದ್ದಾರೆ. ಅವರಲ್ಲಿನ ಯಾವುದೋ ನವೀನಾಂಶವನ್ನು ಮುಂದೆ ಸಹಜವೆಂಬಂತೆ ಸ್ವೀಕರಿಸಲಾಗಿದೆ. ಆದರೆ ಈ ಯಾವುದೋ ನಾವೀನ್ಯವು ಯಾವುದು ಎಂದು ಗುರುತಿಸುವುದು ಮಾತ್ರ ಸುಲಭವಲ್ಲ.

ಐತಿಹಾಸಿಕ ಆರಂಭವುಳ್ಳ ಅಥವಾ ಹಿಂದಿದ್ದುದಕ್ಕೆ ಸುಧಾರಣೆಗಳನ್ನು ತಂದದ್ದೆಂದು ಭಾವಿಸಲಾದ ಮತಧರ್ಮವೊಂದಕ್ಕೆ ನಿಷ್ಠನಾಗಿರುವ ತಿಳಿವಳಿಕೆಯುಳ್ಳ ಒಬ್ಬ ವ್ಯಕ್ತಿಯು ಒಪ್ಪಿಕೊಳ್ಳಬೇಕಾದ ಕನಿಷ್ಠವೆಂದರೆ: ಹಿಂದಿದ್ದ ಜೀವನಕ್ರಮವೊಂದಕ್ಕಿಂತ ಯಾವುದಾದರೂ ಬಗೆಯಲ್ಲಿ ಉತ್ತಮವಾದ ಜೀವನಕ್ರಮವನ್ನು ಮೊದಲು ಪ್ರತಿಪಾದಿಸಿದವರು, ಆಗಿನ ಒಂದು ಸರ್ಕಾರವೋ ಚರ್ಚೋ ಅಲ್ಲ, ಒಬ್ಬ ವ್ಯಕ್ತಿಯೋ ವ್ಯಕ್ತಿಗಳ ಸಮೂಹವೋ ಎಂಬುದು. ಮುಂದಿನದೆಂದರೆ, ತನ್ನ ಕಾಲದವರೆಗಿನ ಇಡೀ ಮಾನವ ಸಮುದಾಯದ ತೀರ್ಮಾನದ ವಿರುದ್ಧ ಕೂಡ ವ್ಯಕ್ತಿಯೊಬ್ಬನು ನೈತಿಕ ಪ್ರಶ್ನೆಗಳ ಜಿಜ್ಞಾಸೆಯಲ್ಲಿ ತೊಡಗುವುದು ಸದಾ ಅಸಮಂಜಸವಾಗಿರಲಾರದು ಎಂಬ ಅಂಶ. ವಿಜ್ಞಾನದಲ್ಲಾದರೆ, ಪ್ರತಿಯೊಬ್ಬನೂ ಈಗ ಪ್ರತಿಯೊಂದರ ಹಿಂದೆಯೂ ಒಂದು ಸಿದ್ಧಾಂತವಿರುವುದನ್ನು ಒಪ್ಪುತ್ತಾನೆ: ಆದರೆ ವಿಜ್ಞಾನದಲ್ಲಿ ಹೊಸ ಸಿದ್ಧಾಂತವೊಂದನ್ನು ಪರೀಕ್ಷಿಸುವ ವಿಧಾನಗಳು ತಿಳಿದಿರುತ್ತವೆ, ಹೀಗಾಗಿ ಅಂತಹ ಸಿದ್ಧಾಂತವೊಂದು ಬೇಗ ಒಪ್ಪಿಗೆಯನ್ನು ಪಡೆಯುತ್ತದೆ ಅಥವಾ ಸಂಪ್ರದಾಯದ ಹೊರತಾದ ಆಧಾರದಿಂದ ತಿರಸ್ಕೃತವಾಗುತ್ತದೆ. ನೀತಿಯಲ್ಲಿ, ಹೊಸ ಸಿದ್ಧಾಂತವೊಂದನ್ನು ಪರೀಕ್ಷಿಸುವ ಸ್ಪಷ್ಟ ವಿಧಾನಗಳಾವುವೂ ಇಲ್ಲ. ತನ್ನ ಉಪದೇಶದ ಹಿಂದೆ ಪ್ರವಾದಿಯೊಬ್ಬನು "ಭಗವಾನುವಾಚ" ಎಂದು ಸೇರಿಸಬಹುದು, ಅವನಿಗಷ್ಟು ಸಾಕು; ಆದರೆ ಅವನು ತನಗಾದ ಅಸಲಿ ದರ್ಶನವನ್ನೇ ಹೇಳುತ್ತಿದ್ದಾನೆಂದು ತಿಳಿಯುವುದಾರೂ ಹೇಗೆ? ಡ್ಯೂಟೆರೋನಮಿಯು, ವಿಚಿತ್ರವಾಗಿ, ವಿಜ್ಞಾನದಲ್ಲಿಯೂ ಕೆಲವೊಮ್ಮೆ ಆತ್ಯಂತಿಕವೆಂದು ಹೇಳಲಾಗುವ ಪರೀಕ್ಷೆಯನ್ನೇ ಸೂಚಿಸುತ್ತದೆ, ಅದೆಂದರೆ ಸರಿಯಾದ ಭವಿಷ್ಯನಿರ್ಧಾರ: *"ಪ್ರವಾದಿಯು ಹೇಳಿದ ಮಾತು ಯೆಹೋವನ ಮಾತಲ್ಲವೆಂದು ತಿಳಿದುಕೊಳ್ಳುವದು ಹೇಗೆ ಅಂದುಕೊಳ್ಳುತ್ತೀರೋ? ಪ್ರವಾದಿಯು ಯೆಹೋವನ ಮಾತೆಂದು ಹೇಳಿ ಮುಂತಿಳಿಸಿದ ಸಂಗತಿ ನಡೆಯದೆ ಹೋದರೆ ಅವನ ಮಾತು ಯೆಹೋವನದಲ್ಲವೆಂದು ನೀವು ತಿಳಿದುಕೊಳ್ಳಬೇಕು. ಅವನು ಅಧಿಕಾರವಿಲ್ಲದೆ ಮಾತಾಡಿದವನು."*[೧] ಆದರೆ ಇಂತಹುದೊಂದು ನೀತಿಸಿದ್ಧಾಂತವನ್ನು ಆಧುನಿಕ ಮನಸ್ಸು ಒಪ್ಪಿಕೊಳ್ಳಲಾರದು.

ನಾವು ಎದುರಿಸಬೇಕಾಗಿರುವ ಪ್ರಶ್ನೆ: ನೀತಿಸಿದ್ಧಾಂತ ಎಂದರೇನು ಮತ್ತು ಅದು ಇರುವುದೇ ಆದರೆ, ಅದನ್ನು ಪರೀಕ್ಷಿಸುವ ವಿಧಾನಗಳಾವುವು?

---

[೧] (ಧರ್ಮೋಪದೇಶಕಾಂಡ) ಡ್ಯೂಟೆರೋನಮಿ, xviii, ೨೧-೨೨

ಐತಿಹಾಸಿಕವಾಗಿ, ನೀತಿಯು ಮತಧರ್ಮದ ಒಂದು ಭಾಗ. ಬಹಳ ಮಂದಿಗೆ ಪ್ರಮಾಣವಾಕ್ಕು ಸಾಕು: ಬೈಬಲ್ ಅಥವಾ ಚರ್ಚ್ ಯಾವುದನ್ನು ಸರಿ ಅಥವಾ ತಪ್ಪು ಎಂದು ಹೇಳುತ್ತದೆಯೋ ಅದೇ ಸರಿ ಅಥವಾ ತಪ್ಪು. ಆದರೆ ಕೆಲವು ವ್ಯಕ್ತಿಗಳಿಗೆ ಆಗಾಗ್ಗೆ ದೈವಪ್ರೇರಣೆಯಾಗಿದೆ: ಸರಿ–ತಪ್ಪುಗಳ ಬಗ್ಗೆ ದೇವರು ತಮ್ಮೊಡನೆ ನೇರವಾಗಿ ಮಾತಾಡಿರುವುದರಿಂದ ತಮಗೆ ಸರಿ–ತಪ್ಪುಗಳು ಯಾವುವೆಂದು ತಿಳಿದಿದೆ. ಸನಾತನ ನಂಬಿಕೆಯ ಪ್ರಕಾರ, ಈ ವ್ಯಕ್ತಿಗಳು ಬಹಳ ಹಿಂದೆ ಬದುಕಿದ್ದವರು, ಇದೇ ರೀತಿ ನಮ್ಮದೇ ಕಾಲದ ವ್ಯಕ್ತಿಯೊಬ್ಬ ಹೇಳಿದರೆ, ಚರ್ಚ್ ಅವನ ಮಾತುಗಳನ್ನು ಅನುಮೋದಿಸದಿದ್ದ ಪಕ್ಷದಲ್ಲಿ, ಅವನನ್ನು ಸೆರೆಯಲ್ಲಿರಿಸಬೇಕು. ಇದು ಬಂಡಾಯಗಾರನೊಬ್ಬನು ಸರ್ವಾಧಿಕಾರಿಯಾಗುವ ಸಾಮಾನ್ಯ ಸನ್ನಿವೇಶ; ಆದರೆ ಬಂಡಾಯಗಾರರ ನ್ಯಾಯಯುತ ಕಾರ್ಯಗಳಾವುವು ಎಂಬುದನ್ನು ನಿರ್ಣಯಿಸಲು ಇದು ಸಹಾಯಕವಾಗಲಾರದು.

ನೀತಿಯನ್ನು ಮತಧಾರ್ಮಿಕವಲ್ಲದ ಪರಿಭಾಷೆಯಲ್ಲಿ ವಿವರಿಸಲು ಸಾಧ್ಯವೇ? ಇದು ಸಾಧ್ಯವೆಂದು ವಿಕ್ಟೋರಿಯನ್ ಕಾಲದ ಮುಕ್ತ ಚಿಂತಕರು ಬಲವಾಗಿ ಭಾವಿಸಿದ್ದರು. ನಿದರ್ಶನಕ್ಕೆ, ಉಪಯುಕ್ತವಾದಿಗಳು (ಣಾಟಟಾಚಿಡಿಚಿಟ್ಲ) ಮಹಾ ನೀತಿವಂತರಾಗಿದ್ದರು, ತಮ್ಮ ನೈತಿಕತೆಗೆ ವೈಚಾರಿಕ ನೆಲೆಗಟ್ಟು ಇರುವುದೆಂದು ನಂಬಿದ್ದರು. ಆದರೆ ವಿಷಯವು ಅವರು ಭಾವಿಸಿದುದಕ್ಕಿಂತ ಜಟಿಲವಾದುದಾಗಿತ್ತು.

ಉಪಯುಕ್ತವಾದಿಗಳ ಉಲ್ಲೇಖದಿಂದ ಸೂಚಿತವಾಗುವ ಒಂದು ಪ್ರಶ್ನೆಯನ್ನು ಪರಿಶೀಲಿಸೋಣ; ಅದೇಂದರೆ, ನೈತಿಕತೆಯ ಮುಂದುವರಿಕೆಗೆ ಆಚಾರ ಸಂಹಿತೆಯೊಂದು ಎಂದಾದರೂ ಸಾಕಾಗಬಹುದೇ, ಅಥವಾ ಅದು ಪರಿಣಾಮಗಳ ಒಳಿತು–ಕೆಡುಕುಗಳನ್ನು ಆಧರಿಸಿರಬೇಕೇ ಎಂಬುದು. ಸನಾತನವಾದದ ದೃಷ್ಟಿಕೋನದಲ್ಲಿ, ಪರಿಣಾಮಗಳನ್ನು ಲೆಕ್ಕಿಸದೆ ಹೇಳುವುದಾದರೆ, ಕೆಲವು ಕೃತ್ಯಗಳು ಪಾಪಕರವಾದವು, ಮತ್ತೆ ಕೆಲವು ಪುಣ್ಯಕರವಾದವು. ಕೆಲವು ವಿಷಯಗಳು ನೈತಿಕತೆಯ ದೃಷ್ಟಿಯಿಂದ ತಟಸ್ಥವಾದವು, ಅವುಗಳನ್ನು ಪರಿಣಾಮಗಳ ಆಧಾರದ ಮೇಲೆ ವರ್ಗೀಕರಿಸಬಹುದು. ದಯಾಮರಣವನ್ನೋ ಅಥವಾ ಸತ್ತ ಹೆಂಡತಿಯ ಸೋದರಿಯನ್ನು ಮದುವೆಯಾಗುವುದನ್ನೋ ವಿಧಿಬದ್ಧಗೊಳಿಸಬೇಕೇ ಎಂಬುದು ನೈತಿಕತೆಯ ಪ್ರಶ್ನೆ, ಆದರೆ ಅದಕ್ಕೆ ಸುವರ್ಣಸೂತ್ರ ಎಂಬುದಿಲ್ಲ. 'ನೈತಿಕ' ಪ್ರಶ್ನೆಗಳಿಗೆ ಎರಡು ಬಗೆಯ ಸೂತ್ರೀಕರಣವಿದೆ, ಈ ವಿಶೇಷಣವನ್ನು ಸೇರಿಸಿದ ಯಾವುದಕ್ಕಾದರೂ ಇದು ಅನ್ವಯಿಸುತ್ತದೆ. ಪ್ರಶ್ನೆಯು

‘ನೈತಿಕ’ವಾದುದು ಎಂದರೆ (೧) ಅದು ಪ್ರಾಚೀನ ಹೀಬ್ರೂಗಳಲ್ಲಿ ಆಸಕ್ತಿಯುಂಟುಮಾಡಿರಬೇಕು, (೨) ಅದರ ಬಗೆಗಿನ ಅಂತಿಮ ನಿರ್ಧಾರ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಅವರಿಗೆ ಸೇರಿರಬೇಕು. ಆದರೆ ‘ನೈತಿಕ’ ಎಂಬ ಸಾಮಾನ್ಯ ವಿಶೇಷಣವನ್ನು ಬಳಸುವುದು ಸಂಪೂರ್ಣವಾಗಿ ಅಸಮರ್ಥನೀಯ ಎಂಬುದು ಸ್ಪಷ್ಟವಾಗಿಯೇ ಇದೆ.

ಆದರೆ ವೈಯಕ್ತಿಕವಾಗಿ ಹೇಳುವುದಾದರೆ, ಕೆಲವು ನಡವಳಿಕೆಗಳ ವಿರುದ್ಧ ತೋರ್ಪಡಿಸುವ, ಆದರೆ ಪರಿಣಾಮಗಳ ಮೇಲೆ ನಿರ್ಧರಿತವಾಗದ, ಹೇಸಿಕೆಯೇ ನೀತಿಯುತವಾದುದು, ನಾನು ಮುಖ್ಯವೆಂದು ಭಾವಿಸುವ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯವಾಗುವುದು ಬಹುಸಂಖ್ಯೆಯ ಮಕ್ಕಳಿಗೆ ವಿಷಾನಿಲ ಊಡುವಿಕೆಯಿಂದ ಮತ್ತು ಅಂತಹುದೇ ಇತರ ಭಯಾನಕ ಕಾರ್ಯಗಳಿಂದ ಎಂದು ಅನೇಕರು ಹೇಳುತ್ತಾರೆಂದು ಕೇಳಿದ್ದೇನೆ. ಆದರೆ ನಾನು ಅಂತಹ ಕೃತ್ಯಗಳಿಗೆ ಈ ಹಂತದಲ್ಲಿ ಮೂಗೊಪ್ಪಿಗೆ ಸೂಚಿಸಲಾರೆ. ಅಂತಹವು ಗುರಿಯನ್ನು ಮುಟ್ಟಲಾರವು, ಅಥವಾ ಹಾಗಾದರೂ, ಅದರ ಪ್ರಾಸಂಗಿಕ ಪರಿಣಾಮಗಳು ಪ್ರಜಾಪ್ರಭುತ್ವವು ತರಬಹುದಾದ ಒಳಿತುಗಳನ್ನು ತುಳಿದುಹಾಕುತ್ತವೆ ಎಂದು ನನಗೆ ನಾನೇ ಹೇಳಿಕೊಳ್ಳುತ್ತೇನೆ. ಈ ವಾದವು ಅದೆಷ್ಟು ಪ್ರಾಮಾಣಿಕ ಎಂಬ ಬಗ್ಗೆ ನನಗೆ ಸಂದೇಹವಿದೆ: ಬೇರಾವುದಕ್ಕಿಂತಲೂ ಈ ವಿಧಾನವು ಗುರಿ ಮುಟ್ಟಲು ನೆರವಾಗುತ್ತದೆಂದು ಒಪ್ಪುವಂತೆ ವಾದಿಸಿದರೂ ಅದನ್ನು ತಿರಸ್ಕರಿಸಬೇಕೆಂದು ನಾನು ಭಾವಿಸುತ್ತೇನೆ. ಅದಕ್ಕೆ ವಿರುದ್ಧವಾಗಿ, ಒಳ್ಳೆಯದೆಂದು ನಾನು ಭಾವಿಸುವ ಯಾವುದನ್ನೂ ಅಂತಹ ವಿಧಾನಗಳಿಂದ ಸಾಧಿಸಲಾಗದೆಂಬುದು ನನ್ನ ಮನವರಿಕೆ. ಒಟ್ಟಾರೆ, ತಾತ್ವಿಕವಾಗಿ ಹೇಳುವುದಾದರೆ, ಎಲ್ಲ ಕೃತ್ಯಗಳನ್ನೂ ಅವುಗಳ ಪರಿಣಾಮದ ಮೇಲೆ ಅಳೆಯಬೇಕು; ಆದರೆ ಈ ವಿಧಾನದ ಪರಿಣಾಮವನ್ನು ತಿಳಿಯುವುದು ಕಷ್ಟಕರವೂ ಅನಿಶ್ಚಿತವೂ ದೀರ್ಘಕಾಲಿಕವೂ ಆದುದರಿಂದ, ಪರಿಣಾಮಗಳಿಗೆ ಕಾದು ಕೂರದೆ ಕೆಲವು ವಿಧಾನಗಳನ್ನು ಖಂಡಿಸಬೇಕಾದುದು ಅಪೇಕ್ಷಣೀಯ ಎಂಬುದು ನನ್ನ ಭಾವನೆ. ಹೀಗಾಗಿ, ಯಾವುದೇ ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಸಮರ್ಪಕ ವಿಧಾನವೆಂದರೆ, ಕೆಡುಕಿನ ವಿರುದ್ಧ ಒಳಿತು ಪ್ರಾಯಶಃ ಗರಿಷ್ಠ ಮಟ್ಟದ ಸಮತೋಲನವನ್ನು ಸಾಧಿಸುವ ಸಂಭವವಿರುವಂತಹುದು ಎಂದು ಉಪಯುಕ್ತತಾವಾದಿಗಳೊಂದಿಗೆ ನಾನೂ ಪ್ರತಿಪಾದಿಸುತ್ತೇನೆ; ಆದರೆ ಅಂತಹ ವಿಧಾನಗಳನ್ನು ಒಂದು ನೀತಿಸಂಹಿತೆಯೊಡನೆ ಪ್ರಚುರಪಡಿಸಬೇಕು.

ಈ ದೃಷ್ಟಿಕೋನವನ್ನು ಒಪ್ಪಿಕೊಂಡು, ನೀತಿ ಎಂದರೆ ಒಳಿತು–ಕೆಡುಕುಗಳನ್ನು ನಿರ್ವಚಿಸುವುದು ಎಂದು ಹೇಳಬಹುದು; ಆದರೆ

ಸಾಧನಗಳಾಗಿ ಅಲ್ಲ, ತಾವೇ ಗುರಿಗಳಾಗಿ. ಸಂತೋಷವೇ ಒಳಿತು, ನೋವೇ ಕೆಡುಕು ಎಂದು ಉಪಯುಕ್ತತಾವಾದಿಯು ಹೇಳುತ್ತಾನೆ. ಯಾರಾದರೂ ಅದನ್ನು ಒಪ್ಪದಿದ್ದರೆ, ಸಮರ್ಥನೆಗೆ ಅವನು ಮುಂದಿಡುವ ವಾದವಾವುದು?

ಬಾಳಿನ ಗುರಿಯ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳ ಬಗ್ಗೆ ಪರಿಶೀಲಿಸಿರಿ. ಒಬ್ಬನು 'ಸಂತೋಷವೇ ಒಳಿತು' ಎನ್ನಬಹುದು; ಮತ್ತೊಬ್ಬನು 'ಒಳಿತಾದುದೆಂದರೆ ಆರ್ಯನ್‌ರಿಗೆ ಸಂತೋಷಕರವಾದ ಹಾಗೂ ಯೆಹೂದಿಗಳಿಗೆ ನೋವುಂಟುಮಾಡುವಂಥದು' ಎನ್ನಬಹುದು; ಮಗುದೊಬ್ಬನು 'ಒಳಿತೆಂದರೆ ದೇವರ ಗುಣಗಾನ ಮಾಡಿ ಎಲ್ಲ ಕಾಲಕ್ಕೂ ಅವನನ್ನು ಮೆರೆಸುವುದು' ಎನ್ನಬಹುದು. ಈ ಮೂವರೂ ಪ್ರತಿಪಾದಿಸುತ್ತಿರುವುದೇನನ್ನು, ಒಬ್ಬರನ್ನೊಬ್ಬರು ಒಪ್ಪಿಸಲು ಅವರು ಅನುಸರಿಸಬಹುದಾದ ಯಾವ ಯಾವ ಮಾರ್ಗಗಳಿವೆ? ವಿಜ್ಞಾನಿಗಳಂತೆ ಅವರು ವಸ್ತುಸ್ಥಿತಿಗಳನ್ನು ಅವಲಂಬಿಸಲಾರರು: ಯಾವ ವಸ್ತುಸ್ಥಿತಿಯೂ ವಿವಾದಕ್ಕೆ ಸಮಂಜಸವಾಗಲಾರದು. ಅವರಲ್ಲಿನ ವ್ಯತ್ಯಾಸವಿರುವುದು ಬಯಕೆಯ ವಲಯಕ್ಕೆ ಸಂಬಂಧಿಸಿದಂತೆ, ವಸ್ತುಸತ್ಯಗಳ ಬಗೆಗಿನ ಹೇಳಿಗೆಳ ವಲಯಕ್ಕಲ್ಲ. 'ಇದು ಒಳ್ಳೆಯದು' ಎಂದು ಹೇಳಿದಾಗ ಅದರರ್ಥ 'ಇದನ್ನು ಕಂಡರೆ ನನಗಿಷ್ಟ' ಎಂದು ನಾನು ಹೇಳುತ್ತಿರುವುದಿಲ್ಲ; ನಾನು ಯಾವುದನ್ನಾದರೂ ಒಳ್ಳೆಯದು ಎಂದು ಕರೆಯಲು ಕಾರಣವಾಗುವುದು ಒಂದು ನಿರ್ದಿಷ್ಟ ಬಗೆಯ ಇಷ್ಟ. ಈ ಇಷ್ಟವು ಒಂದು ಪ್ರಮಾಣದಲ್ಲಿ ಅವೈಯಕ್ತಿಕವಾಗಿರಬೇಕು; ನನಗೆ ತೃಪ್ತಿ ತರುವ ಬಗೆಯ ಜಗತ್ತಿಗೆ ಅದು ಸಂಬಂಧಪಟ್ಟಿರಬೇಕು. 'ರಾಆಜಪ್ರಭುತ್ವವು ಶ್ರೇಷ್ಠವಾದುದು, ಮತ್ತು ನಾನು ದೊರೆಯಾಗಿರುವುದು ಸಂತೋಷಕರ' ಎಂದು ಒಬ್ಬ ರಾಜನು ಹೇಳಬಹುದು. ಈ ಹೇಳಿಕೆಯ ಮೊದಲ ಭಾಗವು ಸಂದೇಹಾತೀತವಾಗಿ ನೈತಿಕವಾದುದು, ಆದರೆ ರಾಜನಾಗಿರುವುದರಿಂದ ಅವನಿಗಾಗುವ ಸಂತೋಷವು ನೈತಿಕ ಎನ್ನಿಸುವುದು ಒಂದು ಸಮೀಕ್ಷೆ ನಡೆದು ಅವನ ಹೊರತು ಬೇರಾರೂ ಒಳ್ಳೆಯ ರಾಜನಾಗಲು ಸಾಧ್ಯವಿಲ್ಲ ಎಂಬುದು ಸಾಬೀತಾದಾಗ ಮಾತ್ರ.

ಆಂತರಿಕ ಮೌಲ್ಯದ ತೀರ್ಮಾನವನ್ನು ಇಡೀ ಮಾನವ ಜನಾಂಗದ ಇಷ್ಟಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನದ ಮೂಲಕ ಪ್ರತಿಪಾದಿಸಬೇಕೇ ಹೊರತು ಹೇಳಿಕೆಯ ಮೂಲಕ ಅಲ್ಲ, ಎಂದು ಈ ಹಿಂದಿನ ಒಂದು ಸಂದರ್ಭದಲ್ಲಿ *('ರಿಲಿಜನ್ ಅಂಡ್ ಸೈನ್ಸ್' ಕೃತಿಯಲ್ಲಿ)* ನಾನು ಸೂಚಿಸಿದ್ದೇನೆ. 'ದ್ವೇಷವು ಕೆಟ್ಟುದು' ಎಂದು ನಾನು ಹೇಳಿದಾಗ, ನಾನು ವಾಸ್ತವವಾಗಿ ಹೇಳುತ್ತಿರುವುದು, 'ಯಾರೂ ದ್ವೇಷಭಾವನೆಯನ್ನು

ತಾಳದಿರಲಿ' ಎಂಬುದನ್ನು. ನಾನು ಹೇಳಿಕೆಯನ್ನು ನೀಡುತ್ತಿಲ್ಲ; ಒಂದು ಬಗೆಯ ಇಷ್ಟವನ್ನಷ್ಟೇ ವ್ಯಕ್ತಪಡಿಸುತ್ತಿರುವುದು. ಈ ಮಾತನ್ನು ಕೇಳಿದವನು ನನ್ನ ಈ ಇಷ್ಟವನ್ನು ತಿಳಿಯಬಹುದು, ಈ 'ವಸ್ತುಸ್ಥಿತಿ'ಯನ್ನಷ್ಟೆ ಅವನು ಕಾಣಬಹುದು, ಆದರೆ ಅದು ಮನಸ್ಸಿಗೆ ಸಂಬಂಧಿಸಿದ 'ವಸ್ತುಸ್ಥಿತಿ'. ನೈತಿಕತೆಗೆ ವಸ್ತುಸ್ಥಿತಿಗಳೆಂಬುದು ಇರುವುದಿಲ್ಲ.

ಹೊಸ ನೀತಿಗಳನ್ನು ಪ್ರತಿಪಾದಿಸಿದ ವ್ಯಕ್ತಿಗಳಾರೂ ಇತರರಿಗಿಂತ ಹೆಚ್ಚು 'ತಿಳಿದವ'ರಲ್ಲ; ಅವರು ಇದನ್ನು ಇತರರಿಗಿಂತ ಹೆಚ್ಚು ಇಷ್ಟಪಟ್ಟವರು, ಅಥವಾ ಇನ್ನಷ್ಟು ಖಚಿತವಾಗಿ ಹೇಳಬೇಕೆಂದರೆ, ಅವರು ಸಾಧಾರಣ ಜನರಿಗಿಂತ ಹೆಚ್ಚು ಅವೈಯಕ್ತಿಕವೂ ವ್ಯಾಪಕವೂ ಅದ ಇಷ್ಟಗಳನ್ನು ಹೊಂದಿದ್ದವರು ಎಂದರ್ಥ. ಬಹುಪಾಲು ಜನರು ಆಸೆಪಡುವುದು ತಮ್ಮ ಸಂತೋಷವನ್ನು; ಸಾಕಷ್ಟು ಮಂದಿ ತಮ್ಮ ಮಕ್ಕಳ ಸಂತೋಷವನ್ನು ಬಯಸುವವರು; ದೇಶದ ಸಂತೋಷವನ್ನು ಬಯಸುವವರ ಸಂಖ್ಯೆ ಬಹಳವೇನಲ್ಲ; ಕೆಲವರು ಮಾತ್ರ ಇಡೀ ಮಾನವ ಜನಾಂಗದ ಹಿತವನ್ನು ಸಹಜವಾಗಿಯೂ ಗಾಢವಾಗಿಯೂ ಬಯಸುವವರು. ಇಂಥವರು, ಅಂಥ ಭಾವನೆಯು ಬಹಳ ಜನಕ್ಕಿಲ್ಲವೆಂಬುದನ್ನು, ಇದೇ ಸಾರ್ವತ್ರಿಕ ಸೌಖ್ಯಕ್ಕಿರುವ ಅಡ್ಡಿ ಎಂಬುದನ್ನು ಕಂಡುಕೊಂಡು, ತಮ್ಮಂತೆಯೇ ಇತರರೂ ಭಾವಿಸಬೇಕೆಂದು ಆಶಿಸುತ್ತಾರೆ; ಈ ಆಸೆಯನ್ನೇ 'ಸಂತೋಷವು ಒಳ್ಳೆಯದು' ಎಂಬ ಮಾತಿನಲ್ಲಿ ವ್ಯಕ್ತಪಡಿಬಹುದು.

ಬುದ್ಧ ಮತ್ತು ಸ್ಟಾಯಿಕ್[೧]ರಿಂದ ಹಿಡಿದು ಈಚಿನವರೆಗಿನ ಎಲ್ಲ ನೀತಿವಾದಿಗಳೂ ಯಾವುದನ್ನು ಸಾಧ್ಯವಾದರೆ ಎಲ್ಲರೂ ಸಮಾನವಾಗಿ ಸವಿಯಬಹುದೋ ಅಂತಹುದನ್ನು ಒಳ್ಳೆಯದೆಂದು ಪರಿಗಣಿಸಿದರು. ತಾವು ರಾಜಕುಮಾರರ ಅಥವಾ ಯೆಹೂದಿಗಳ ಅಥವಾ ಗ್ರೀಕರ ಪಂಗಡಕ್ಕೆ ಸೇರಿದವರು ಎಂದು ಅವರು ತಿಳಿದುಕೊಂಡಿರಲಿಲ್ಲ; ತಾವು ಮನುಕುಲಕ್ಕೆ ಸೇರಿದವರೆಂದು ಭಾವಿಸಿದ್ದರು. ಅವರ ನೈತಿಕತೆಗೆ ಇಬ್ಬದಿಯಾದ ಆಕರಗಳಿದ್ದವು: ಒಂದೆಡೆ, ತಮ್ಮದೇ ಬದುಕಿನಲ್ಲಿ ಅವರು ಕೆಲವಂಶಗಳಿಗೆ ಬೆಲೆಯಿತ್ತರು; ಮತ್ತೊಂದೆಡೆ, ತಾವು ತಮಗಾಗಿ ಇಷ್ಟಪಟ್ಟುದನ್ನೇ ಅವರು ಇತರರಿಗಾಗಿಯೂ ಇಷ್ಟಪಡುವಂತೆ ಸಹಾನುಭೂತಿಯು ಮಾಡಿತು. ನೀತಿಯಲ್ಲಿ ಸಹಾನುಭೂತಿ ಎಂಬುದು ಸಾರ್ವತ್ರೀಕರಣಗೊಳಿಸುವ ಶಕ್ತಿ; ಅಂದರೆ, ಸಹಾನುಭೂತಿ ಒಂದು ಭಾವನೆಯಾಗಿ, ಸೈದ್ಧಾಂತಿಕ ತತ್ವವಾಗಿ

[೧] ಇಂದ್ರಿಯನಿಗ್ರಹವನ್ನು ಬೋಧಿಸಿದ ಕ್ರಿಪೂ ೩೦೮ ರಲ್ಲಿದ್ದ ಸೀನೋ ಎಂಬ ಗ್ರೀಕ್ ದಾರ್ಶನಿಕನ ಅನುಯಾಯಿಗಳು

ಅಲ್ಲ. ಸಹಾನುಭೂತಿಯು ಸ್ವಲ್ಪಮಟ್ಟಿಗೆ ಸಹಜ ಪ್ರವೃತ್ತಿ: ಒಂದು ಮಗು ಅಳುತ್ತಿದ್ದರೆ ಮಗುದೊಂದೂ ಅಸಂತೋಷಗೊಳ್ಳಬಹುದು. ಅಂತೆಯೇ ಸಹಾನುಭೂತಿಗೆ ಮಿತಿಯೂ ಸಹಜವೇ. ಬೆಕ್ಕಿಗೆ ಇಲಿಯ ಬಗ್ಗೆ ಸಹಾನುಭೂತಿಯಿಲ್ಲ; ರೋಮನ್‌ರಿಗೆ ಆನೆಯ ಹೊರತು ಬೇರಾವ ಪ್ರಾಣಿಯ ಬಗ್ಗೆಯೂ ಸಹಾನುಭೂತಿಯಿರಲಿಲ್ಲ; ನಾಜ಼ಿಗಳಿಗೆ ಯೆಹೂದಿಗಳ ಬಗ್ಗೆ, ಸ್ಟಾಲಿನ್‌ಗೆ ಕುಲಕ್‌ಗಳ ಬಗ್ಗೆ ಸಹಾನುಭೂತಿಯಿರಲಿಲ್ಲ. ಎಲ್ಲಿ ಸಹಾನುಭೂತಿಗೆ ಮಿತಿಯಿರುತ್ತದೆಯೋ ಅಲ್ಲಿ ಅಷ್ಟರಮಟ್ಟಿಗೆ ಒಳಿತಿನ ಕಲ್ಪನೆಯ ಬಗ್ಗೆಯೂ ಮಿತಿಯಿರುತ್ತದೆ: ಒಳಿತನ್ನು ಉದಾತ್ತಚರಿತರು, ಅತಿಮಾನವರು, ಆರ್ಯ಼ರು, ಪ್ರಾಲಿಟೇರಿಯನ್ನರು ಅಥವಾ ಕ್ರಿಸ್ಟೆಡೆಲ್ಫಿಯನ್‌ರು[೧] ಮಾತ್ರ ಅನುಭವಿಸುವಂತಹುದು. ಹೀಗೆ ಇವರದೆಲ್ಲ ಬೆಕ್ಕು–ಇಲಿಗಳ ನೀತಿಯೇ.

ಬೆಕ್ಕು–ಇಲಿ ನೀತಿಯ ಖಂಡನೆಯು, ಸಾಧ್ಯವಾದೆಡೆಯಲ್ಲೆಲ್ಲ, ಆಚರಣೆಯದೇ ಹೊರತು ತಾತ್ವಿಕವಾದುದಲ್ಲ. ಅಂಥ ನೀತಿಯ ಇಬ್ಬರು ಪರಿಣತ ಪ್ರತಿಪಾದಕರು, ಜಗಳಗಂಟ ಹುಡುಗರ ಹಾಗೆ, ‘ನಾನು ಬೆಕ್ಕಾಗುತ್ತೇನೆ, ನೀನು ಇಲಿಯಾಗು’ ಎಂದೇ ಮಾತು ಆರಂಭಿಸುತ್ತಾರೆ. ‘ಇಲ್ಲ, ನೀನು ಬೆಕ್ಕಾಗಲು ಸಾಧ್ಯವಿಲ್ಲ, ನಾನು ಆಗುತ್ತೇನೆ’ ಎಂದು ಇಬ್ಬರೂ ಪ್ರತಿಭಟಿಸುತ್ತಾರೆ. ಹೀಗಾಗಿ, ಬಹುತೇಕ ಸನ್ನಿವೇಶಗಳಲ್ಲಿ ಅವರು ಕಿಲ್ಕೆನಿ ಬೆಕ್ಕು[೨]ಗಳಾಗುತ್ತಾರೆ. ಆದರೆ ಅವರಲ್ಲೊಬ್ಬನು ಪೂರ್ತಿ ಗೆದ್ದರೆ, ಅವನು ತನ್ನದೇ ನೀತಿಯನ್ನು ಸ್ಥಾಪಿಸಬಹುದು; ಆಗ ದೊರೆಯುವುದು ಕಿಪ್ಲಿಂಗ್ ಮತ್ತು ‘*ದ ವೈಟ್ ಮ್ಯಾನ್ಸ್ ಬರ್ಡನ್*’[೩], ಅಥವಾ ನಾರ್ಡಿಕ್ ಜನಾಂಗ, ಅಥವಾ ಅತಹುದೇ ಅಸಮಾನತೆಯ ಮತಸಿದ್ಧಾಂತಗಳು. ಅಂತಹ ಮತಸಿದ್ಧಾಂತಗಳು ಬೆಕ್ಕುಗಳನ್ನು ಮಾತ್ರ ಆಕರ್ಷಿಸುತ್ತವೆ, ಇಲಿಗಳನ್ನಲ್ಲ; ಆ ನೀತಿಯನ್ನು ನಗ್ನ ಅಧಿಕಾರದ ಮೂಲಕ ಇಲಿಯ ಮೇಲೆ ಹೇರಲಾಗುತ್ತದೆ.

ನೈತಿಕತೆಯ ಬಗೆಗಿನ ಚರ್ಚೆಗಳು ಅನೇಕ ವೇಳೆ ನಡೆಯುವುದು ಅವುಗಳ ವಿಧಾನಗಳನ್ನು ಕುರಿತಂತೆ ಅಲ್ಲ, ಉದ್ದೇಶಗಳನ್ನು ಕುರಿತಂತೆ. ಮಿತವಯ್ಯಕಾರಿಯಲ್ಲವೆಂಬ ವಾದ ಹೂಡಿ ಗುಲಾಮಪದ್ಧತಿಯನ್ನು

---

[೧] ತ್ರಿಮೂರ್ತಿತತ್ವವನ್ನು ಒಪ್ಪದೆ, ಕ್ರಿಸ್ತನು ಪುನಃ ಅವತರಿಸುತ್ತಾನೆಂದು ವಾದಿಸುವ ಧಾರ್ಮಿಕ ಪಂಥದವನು

[೨] ಹೋರಾಡಿ ಹೋರಾಡಿ ಕೊನೆಯಲ್ಲಿ ಬಾಲಗಳು ಮಾತ್ರ ಉಳಿದುಕೊಂಡವೆಂದು ಹೇಳಲಾದ ಐರ್ಲಂಡ್‌ನ ಕಿಲ್ಕೆನಿ ನಗರದ ಮಾರ್ಜಾಲದ್ವಯ

[೩] ವಸಾಹತುಗಳ ಜನರನ್ನು ಬಿಳಿಯ ಜನರು ಮಾತ್ರ ಉದ್ಧರಿಸಬಲ್ಲರೆಂಬ ಆಶಯದ ಕಿಪ್ಲಿಂಗ್‌ನ ಈ ಹೆಸರಿನ ಕವನ

ವಿರೋಧಿಸಬಹುದು; ಸ್ವತಂತ್ರ ಸ್ತ್ರೀಯರ ಸಂಭಾಷಣೆಯು ಹೆಚ್ಚು ಸ್ವಾರಸ್ಯಕರವಾದುದೆಂದು ವಾದಿಸಿ ಸ್ತ್ರೀದಮನವನ್ನು ಖಂಡಿಸಬಹುದು; ಕಿರುಕುಳ ನೀಡುವುದರ ಬಗ್ಗೆ ಅದು ಪ್ರೇರಿಸುವ ಧಾರ್ಮಿಕ ನಂಬಿಕೆಗಳು ಸಹಜವಾದುವಲ್ಲವೆಂಬ ವಾದ ಹೂಡಿ (ಅಂದ ಹಾಗೆ, ಇದು ಪೂರ್ತಿ ಸುಳ್ಳು) ವಿಷಾದಿಸಬಹುದು. ಇಂತಹ ವಾದಗಳ ಹಿಂದೆ ಸಾಮಾನ್ಯವಾಗಿ ಉದ್ದೇಶಗಳ ಭಿನ್ನತೆಯಿರುತ್ತದೆ. ಕ್ರಿಶ್ಚಿಯಾನಿಟಿಯ ಬಗೆಗಿನ ನೀಷೆಯ ಟೀಕೆಯಂತೆ, ಕೆಲವು ವೇಳೆ, ಉದ್ದೇಶಗಳ ಭಿನ್ನತೆಯು ಎದ್ದು ಕಾಣುವಂತಹವು. ಕ್ರೈಸ್ತ ನೈತಿಕತೆಯಲ್ಲಿ ಎಲ್ಲ ಮನುಷ್ಯರೂ ಒಂದೇ ಬಗೆಯವರು; ನೀಷೆಯ ಪ್ರಕಾರ, ಬಹುಪಾಲು ಮನುಷ್ಯರು ನಾಯಕನಿಗೆ ಸಾಧನಗಳು ಮಾತ್ರ. ಉದ್ದೇಶಗಳ ಬಗೆಗಿನ ವಾದಗಳನ್ನು, ವೈಜ್ಞಾನಿಕ ವಿವಾದಗಳಂತೆ, ವಸ್ತುಸ್ಥಿತಿಗಳ ಆಧಾರದ ಮೇಲೆ ನಡೆಸಲು ಸಾಧ್ಯವಿಲ್ಲ; ಅವುಗಳನ್ನು ನಡೆಸಬೇಕಾದದ್ದು ಜನರ ಭಾವನೆಗಳನ್ನು ಬದಲಾಯಿಸಲು. ಸಹಾನುಭೂತಿಯನ್ನು ಪ್ರೇರಿಸಲು ಒಬ್ಬ ಕ್ರಿಶ್ಚಿಯನ್ ಪ್ರಯತ್ನಿಸಬಹುದು, ನೀಷೆವಾದಿಯು ಹೆಮ್ಮೆಯನ್ನು ಪ್ರಚೋದಿಸಬಹುದು. ಆರ್ಥಿಕ ಹಾಗೂ ಸೈನ್ಯಬಲಗಳು ಪ್ರಚಾರಕ್ಕೆ ಗಾಢತೆಯನ್ನು ತರಬಹುದು. ಸಂಕ್ಷಿಪ್ತದಲ್ಲಿ, ಸ್ಪರ್ಧೆಯು ಅಧಿಕಾರಕ್ಕಾಗಿ ನಡೆಸುವ ಸಾಧಾರಣ ಸ್ಪರ್ಧೆ, ಅಷ್ಟೆ. ಯಾವುದೇ ಮತಸಿದ್ಧಾಂತವು, ಸಾರ್ವತ್ರಿಕ ಸಮಾನತೆಯನ್ನು ಪ್ರತಿಪಾದಿಸುವಂತಹವು ಕೂಡ, ಒಂದು ಬಣದ ಪ್ರಾಬಲ್ಯಕ್ಕೆ ಸಾಧನವಾಗಬಹುದು. ಸೈನ್ಯಬಲದ ಸಹಾಯದಿಂದ ಪ್ರಜಾಪ್ರಭುತ್ವವನ್ನು ವಿಸ್ತರಿಸಲು ಫ್ರೆಂಚ್ ಕ್ರಾಂತಿಯು ಪ್ರಯತ್ನಿಸಿದಾಗ ಸಂಭವಿಸಿದ್ದು ಇದೇ.

ನೈತಿಕತೆಯ ಬಗೆಗಿನ ಸ್ಪರ್ಧೆಯಲ್ಲಿ, ರಾಜಕಾರಣದಲ್ಲಿಯಂತೆ, ಅಧಿಕಾರವೇ ಸಾಧನ. ಆದರೆ ಹಿಂದೆ ಅತ್ಯಂತ ಪ್ರಭಾವಶಾಲಿಯಾಗಿದ್ದ ನೈತಿಕ ವ್ಯವಸ್ಥೆಗಳಿಗೆ ಅಧಿಕಾರವೇ ಅಂತಿಮ ಗುರಿಯಾಗಿರಲಿಲ್ಲ. ಮನುಷ್ಯರು ಒಬ್ಬರನ್ನೊಬ್ಬರು ದ್ವೇಷಿಸಿದರೂ, ಪರಸ್ಪರ ಶೋಷಿಸಿದರೂ, ಪರಸ್ಪರ ಹಿಂಸಿಸಿದರೂ ಅವರು ಇತ್ತೀಚಿನವರೆಗೂ ವಿಭಿನ್ನ ಜೀವನರೀತಿಯನ್ನು ಬೋಧಿಸಿದವರ ಬಗ್ಗೆ ಭಕ್ತಿಯಿರಿಸಿಕೊಂಡಿರುತ್ತಿದ್ದರು. ಹಿಂದಿನ ಕಾಲದ ಬುಡಕಟ್ಟು ಅಥವಾ ರಾಷ್ಟ್ರೀಯ ಆರಾಧನಾಪಂಥಗಳ ಸ್ಥಾನದಲ್ಲಿ ಸ್ಥಾಪಿತವಾದ ಸಾರ್ವತ್ರಿಕತೆಯ ಗುರಿಯನ್ನು ಪಡೆದ ಮಹಾ ಮತಧರ್ಮಗಳು ಮನುಷ್ಯರನ್ನು ಮನುಷ್ಯರೆಂದು ಪರಿಗಣಿಸಿವೆಯೇ ವಿನಾ ಯೆಹೂದಿಗಳೆಂದಾಗಲೀ ಯೇಹೂದಿಯೇತರರೆಂದಾಗಲೀ, ಸ್ವತಂತ್ರರು ಅಸ್ವತಂತ್ರರು ಎಂದಾಗಲೀ ಅಲ್ಲ. ಅದರ ಸ್ಥಾಪಕರಿಗಿದ್ದುದು ಸಾರ್ವತ್ರಿಕ ಸಹಾನುಭೂತಿ, ಮತ್ತು ಈ ಕಾರಣಕ್ಕಾಗಿ ಅವರು ತಾತ್ಕಾಲಿಕವೂ

ರಾಗದ್ವೇಷಪೂರಿತವೂ ಆದ ದುರುಳರಿಗಿಂತ ಅತ್ಯಂತ ಹೆಚ್ಚಿನ ವಿವೇಕವನ್ನು ಪಡೆದವರೆಂದು ಪರಿಗಣಿತರಾಗಿದ್ದವರು. ಆದರೆ ಪರಿಣಾಮವು ಮಾತ್ರ ಮತಸ್ಥಾಪಕರು ಬಯಸಿದುದಾಗಿರಲಿಲ್ಲ. '*ಆಟೋ-ದ-ಫೇ*[೧]ಯ ಒಂದು ಸಂದರ್ಭದಲ್ಲಿ, ಸಜೀವದಹನವು ನೆರವೇರುವುದನ್ನು ನೋಡುವ ಆಸೆಯಿರಿಸಿಕೊಂಡು ಬಂದಿದ್ದಾಗ, ಮೊದಲು ತಪ್ಪೊಪ್ಪಿಕೊಂಡವನ ಕತ್ತುಹಿಸುಕಿ ಆನಂತರ ಸುಡುವ ಸೌಮ್ಯಗತಿಯನ್ನು ಕಂಡು ಜನರ ಗುಂಪು ಉದ್ರಿಕ್ತಗೊಂಡು ಶಿಕ್ಷೆಗೊಳಗಾದವರ ಮೇಲೆ ಹಲ್ಲೆ ನಡೆಸುವುದನ್ನು ತಪ್ಪಿಸಲು ಪೋಲೀಸರು ಮಧ್ಯಪ್ರವೇಶಿಸಬೇಕಾಯಿತು. ಆದರೂ ಸಾರ್ವತ್ರಿಕ ಸಹಾನೂಭೂತಿಯ ತತ್ವವು ಮೊದಲು ಒಂದು ಪ್ರದೇಶವನ್ನು ಗೆದ್ದು ಆನಂತರ ಮತ್ತೊಂದಕ್ಕೆ ಹಬ್ಬಿತು. ಭಾವನೆಯ ಕ್ಷೇತ್ರದಲ್ಲಿ ಇದು, ಬೌದ್ಧಿಕತೆಯ ಕ್ಷೇತ್ರದಲ್ಲಿ ವ್ಯಕ್ತ್ಯತೀತ ಕುತೂಹಲವು ಹೇಗೋ ಹಾಗೆ; ಮನಸ್ಸಿನ ವಿಕಸನಕ್ಕೆ ಇವೆರಡೂ ಸಮಾನ ಅತ್ಯವಶ್ಯಕ ಅಂಶಗಳು. ಬುಡಕಟ್ಟು ಅಥವಾ ಶ್ರೀಮಂತವರ್ಗದ ನೈತಿಕತೆಯೇನಾದರೂ ಮರಳಿದರೆ ಅದು ಹೆಚ್ಚು ಕಾಲ ಉಳಿಯಲಾರದು ಎಂಬುದು ನನ್ನ ಭಾವನೆ; ಬುದ್ಧನ ಕಾಲದಿಂದ ಇಂದಿನವರೆಗಿನ ಮಾನವನ ಇಡೀ ಇತಿಹಾಸವು ಇದನ್ನೇ ಪೃಥಕ್ಕರಿಸುತ್ತದೆ. ಅಧಿಕಾರಕ್ಕಾಗಿ ಎಂತಹ ಆಳವಾದ ಬಯಕೆಯೇ ಇರಲಿ, ಅಂತರ್ಮುಖೀ ಚಿಂತನೆಯ ಕಾಲದಲ್ಲಿ ಶ್ರೇಷ್ಠವಾದುದೆಂಬ ಭಾವನೆ ಮೂಡುವುದು ಅಧಿಕಾರದ ಬಗ್ಗೆಯಲ್ಲ. ದೈವಾಂಶಸಂಭೂತರೆಂದು ಮಾನವ ಸಮುದಾಯವು ಭಾವಿಸುವ ಚೇತನಗಳು ನಿಜವನ್ನಾಗಿ ಮಾಡಿರುವುದು ಇದನ್ನೇ.

ಪಿತೃಪಾವಿತ್ರ್ಯ, ಪತ್ನೀ ಶರಣ್ಯತೆ, ರಾಜನಿಷ್ಠೆ ಮುಂತಾದ ಪರಂಪರಾಗತ ನೈತಿಕ ನಿಯಮಗಳೆಲ್ಲವೂ ಈಗ ಪೂರ್ತಿಯಾಗಿಯೋ ಭಾಗಶಃವೋ ಕ್ಷಯಿಸಿವೆ. ನೈತಿಕ ನಿಗ್ರಹವಿಲ್ಲದೆ ರಿನೈಸಾನ್ಸ್‌ನಲ್ಲಾದಂತೆಯೋ ಅಥವಾ ರಿಫಾರ್ಮೇಷನ್‌ನಲ್ಲಾದಂತೆ ಕ್ಷೀಣಗೊಂಡದ್ದಕ್ಕಿಂತ ನಿಷ್ಠುರವಾದ ಹೊಸ ನೀತಿಸಂಹಿತೆಯ ಜಾರಿಯಿಂದಲೋ ಅವು ಮತ್ತೆ ಚಾಲತಿಗೆ ಬರಬಹುದು. ಧನಾತ್ಮಕ ನೈತಿಕತೆಯಲ್ಲಿ ದೇಶನಿಷ್ಠೆಯು ಹಿಂದಿಗಿಂತಲೂ ನಮ್ಮ ಕಾಲದಲ್ಲಿ ಬಹು ವ್ಯಾಪಕ ಪಾತ್ರವನ್ನು ವಹಿಸುತ್ತದೆ; ಇದಕ್ಕೆ ಕಾರಣ, ಸಹಜವಾಗಿಯೇ, ಸರ್ಕಾರದ ಅಧಿಕಾರ ಹೆಚ್ಚಾಗಿರುವುದು. ಕುಟುಂಬ ಅಥವಾ ಚರ್ಚ್‌ನಂತಹ ಗುಂಪುಗಳಿಗೆ ಸಂಬಂಧಿಸಿದ ನೈತಿಕತೆಯ ಅಂಶಗಳ ಹಿಡಿತವು ಮೊದಲಿಗಿಂತ ಕಡಿಮೆ; ಆದರೆ ನೀತಿತತ್ವಗಳೋ ನೈತಿಕ

---

[೧] ಸ್ಪೈನ್ ಮತ್ತು ಪೋರ್ಚುಗಲ್‌ಗಳಲ್ಲಿ ರೋಮನ್ ಕ್ಯಾಥೋಲಿಕ್ ಮಠೀಯ ನ್ಯಾಯಸ್ಥಾನ ನೀಡಿದ ಧರ್ಮಭ್ರಷ್ಟರ ಸಾರ್ವಜನಿಕ ದಹನ ಶಿಕ್ಷೆ

ಭಾವನೆಗಳೋ ಮಾನವನ ಮೇಲೆ ಹದಿನೆಂಟನೆಯ ಶತಮಾನ ಅಥವಾ ಮಧ್ಯಯುಗಗಳಲ್ಲಿದುದಕ್ಕಿಂತ ಕಡಿಮೆ ಪ್ರಭಾವವನ್ನು ಹೊಂದಿವೆ ಎಂಬುದಕ್ಕೆ ನನಗೆ ಯಾವ ಆಧಾರವೂ ದೊರೆಯುತ್ತಿಲ್ಲ.

ಒಂದು ತಾತ್ಪರ್ಯಾತ್ಮಕ ವಿಶ್ಲೇಷಣೆಯೊಂದಿಗೆ ಈ ಅಧ್ಯಾಯವನ್ನು ಕೊನೆಗೊಳಿಸೋಣ. ಆದಿಮ ಸಮಾಜಗಳ ನೈತಿಕ ಸಂಹಿತೆಗಳು, ಆಯಾ ಸಮಾಜಗಳಲ್ಲಿ, ಅತಿಮಾನುಷ ಮೂಲದಿಂದ ಬಂದವು ಎಂದೇ ನಂಬಲಾಗುತ್ತದೆ; ಇದಕ್ಕೆ ಯಾವ ಕಾರಣವೂ ಇದ್ದಂತೆ ಗೋಚರಿಸುವುದಿಲ್ಲ, ಆದರೆ ಅವುಗಳ ಗಣನೀಯ ಭಾಗಗಳು ಸದರಿ ಸಮಾಜದ ಉಳಿದಿರುವ ಅಧಿಕಾರದ ಪ್ರತೀಕ ಎಂದು ನಂಬಲು ಅವಕಾಶಗಳಿವೆ: ಅಧಿಕಾರಸ್ಥರಿಗೆ ವಿಧೇಯವಾಗಿರುವುದನ್ನು ದೇವತೆಗಳು ಒಂದು ಕರ್ತವ್ಯದಂತೆ ಭಾವಿಸುತ್ತಾರೆ, ಆದರೆ ಅಧಿಕಾರಸ್ಥರು ದಂಗೆಗೆ ಆಸ್ಪದವಾಗುವಷ್ಟು ನಿರ್ದಯಿಗಳಾಗಬಾರದು. ಪ್ರವಾದಿಗಳು ಹಾಗೂ ಸಂತರ ಪ್ರಭಾವದಿಂದಾಗಿ ಒಂದು ಹೊಸ ನೈತಿಕತೆಯು ಉದಯಿಸುತ್ತದೆ, ಕೆಲವು ವೇಳೆ ಹಳೆಯದರೊಂದಿಗೆ ಸಮಾನಾಂತರವಾಗಿ, ಮತ್ತೆ ಕೆಲವು ವೇಳೆ ಅವುಗಳ ಜಾಗದಲ್ಲಿ. ಕೆಲವು ಅಪವಾದಗಳನ್ನು ಬಿಟ್ಟರೆ, ಪ್ರವಾದಿಗಳೂ ಸಂತರೂ ಅಧಿಕಾರವಲ್ಲದ ಕೆಲವು ಬೆಲೆಬಾಳುವ ಗುಣಗಳನ್ನು – ನಿದರ್ಶನಕ್ಕೆ, ವಿವೇಕ, ನ್ಯಾಯಪರತೆ, ಅಥವಾ ಸಾರ್ವತ್ರಿಕ ಪ್ರೇಮ ಇತ್ಯಾದಿ – ಹೊಂದಿರುತ್ತಾರೆ, ಹಾಗೂ ಇವುಗಳನ್ನು ಹೊಂದುವುದು ವೈಯಕ್ತಿಕ ಯಶಸ್ಸಿಗಿಂತ ಹೆಚ್ಚು ಶ್ರೇಯಸ್ಕರವಾದುದು ಎಂದು ಗಣನೀಯ ಸಂಖ್ಯೆಯ ಜನತೆಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ಪ್ರವಾದಿಗಳೂ ಸಂತರೂ ಬದಲಾಯಿಸಲು ಬಯಸುವ ಸಾಮಾಜಿಕ ವ್ಯವಸ್ಥೆಯ ಕಾರಣದಿಂದ ಸಂಕಷ್ಟಕ್ಕೊಳಗಾದ ಜನರಿಗೆ ಅವರನ್ನು ಬೆಂಬಲಿಸಲು ವೈಯಕ್ತಿಕ ಕಾರಣಗಳಿರುತ್ತವೆ; ಅವರ ಸ್ವಾರ್ಥವು ಅವೈಯಕ್ತಿಕ ನೈತಿಕತೆಯೊಡನೆ ಸೇರಿ ಅದರಿಂದಾಗುವ ಕ್ರಾಂತಿಗೆ ಕಾರಣವಾಗುತ್ತದೆ.

ಸಾಮಾಜಿಕ ಬದುಕಿನಲ್ಲಿ ಬಂಡಾಯಕ್ಕೆ ಯಾವ ಸ್ಥಾನವಿದೆ ಎಂಬುದನ್ನು ಕುರಿತು ಕೆಲವು ನಿರ್ಧಾರಗಳಿಗೆ ನಾವೀಗ ಬರಬಹುದು. ಬಂಡಾಯವು ಎರಡು ಬಗೆಯದು: ಅದು ಕೇವಲ ವೈಯಕ್ತಿಕವಾಗಿರಬಹುದು, ಅಥವಾ, ತಾನು ಮೂಡಿಬಂದ ಸಮುದಾಯವನ್ನು ಬದಲಾಯಿಸುವ ಬಯಕೆಯಿಂದ ಬಂಡಾಯಗಾರನು ಪ್ರೇರಿತವಾಗಿರಬಹುದು. ಎರಡನೆಯ ಬಗೆಯಲ್ಲಿ, ಅವನ ಬಯಕೆಯನ್ನು ಇತರರೂ ತಮ್ಮದಾಗಿಸಿಕೊಳ್ಳಬಹುದು; ಅನೇಕ ಸಂದರ್ಭಗಳಲ್ಲಿ, ಪ್ರಸ್ತುತ

ವ್ಯವಸ್ಥೆಯಿಂದ ಪ್ರಯೋಜನ ಪಡೆಯುತ್ತಿದ್ದ ಸಣ್ಣ ಗುಂಪೊಂದರ ಹೊರತು ಸಮಾಜದ ಎಲ್ಲರೂ ಅದೇ ಬಯಕೆಯನ್ನು ಹೊಂದಿರುತ್ತಾರೆ. ಈ ಬಗೆಯ ಬಂಡಾಯವು ಕ್ರಿಯಾತ್ಮಕವಾದುದು, ಅನಾಯಕತ್ವದ್ದಲ್ಲ; ಆ ಚಳವಳಿಯು ತಾತ್ಕಾಲಿಕವಾಗಿ ಅನಾಯಕತ್ವಕ್ಕೆಡೆಗೊಟ್ಟರೂ, ಕೊನೆಯಲ್ಲಿ ಹೊಸತಾದ ಸ್ಥಿರ ಸಮಾಜವನ್ನು ನಿರ್ಮಿಸುವ ಬಯಕೆ ಅದರದ್ದು. ಆ ನಾಯಕನ ಬಯಕೆಯ ಅವೈಯಕ್ತಿಕ ಸ್ವರೂಪವೇ ಅವನನ್ನು ಅನಾಯಕತ್ವದ ಬಂಡಾಯಗಾರನಿಗಿಂತ ಭಿನ್ನನನ್ನಾಗಿ ಮಾಡುವುದು. ಬಂಡಾಯವು ಸಮರ್ಥನೀಯವ್ರೋ ಅಲ್ಲವೋ ಎಂಬುದು ಸಾರ್ವಜನಿಕರಿಗೆ ತಿಳಿಯುವುದು ಅದು ಸಂಭವಿಸಿದಾಗಲೇ. ಅದು ಸಮರ್ಥನೀಯವೆಂದು ನಿರ್ಣಯವಾದಾಗ, ಹಿಂದಿದ್ದ ಅಧಿಕಾರಸ್ಥರು ತನ್ನ ಹಿತದೃಷ್ಟಿಯಿಂದಲೇ ಬಂಡಾಯಕ್ಕೆ 'ಶತಾಯ ಗತಾಯ' ಎಂಬ ಬಗೆಯ ಪ್ರತಿರೋಧವನ್ನು ಒಡ್ಡದಿರುವ ವಿವೇಕವನ್ನು ತಾಳುತ್ತಾರೆ. ಮನುಕುಲದ ಬಯಕೆಗಳನ್ನು ಪೂರೈಸಿಕೊಳ್ಳಲು ಪ್ರಸ್ತುತ ವಿಧಾನಕ್ಕಿಂತ ಹೆಚ್ಚು ಸಮಂಜಸವಾದ ಒಂದು ಜೀವನಕ್ರಮವನ್ನೋ, ಅಥವಾ ಒಂದು ಸಾಮಾಜಿಕ ಸಂಘಟನೆಯನ್ನೋ ವ್ಯಕ್ತಿಯೊಬ್ಬನು ಕಲ್ಪಿಸಿಕೊಳ್ಳಬಹುದು. ಅವನ ಕಾಣ್ಕೆಯು ಸರಿಯಾದುದಾದರೆ, ತನ್ನ ಸುಧಾರಣಾಕ್ರಮಗಳನ್ನು ಅನುಸರಿಸುವಂತೆ ಜನರನ್ನು ಅವನು ಒಲಿಸಿಕೊಳ್ಳಬಲ್ಲವನಾದರೆ, ಅಂತವನು ಸಮರ್ಥನೀಯನೆನಿಸುತ್ತಾನೆ. ಬಂಡಾಯವಿಲ್ಲದಿದ್ದರೆ, ಮಾನವನ ಬದುಕು ಕೊಳೆಯುತ್ತದೆ, ಅನ್ಯಾಯವು ಕಿತ್ತೊಗೆಯಲಾರದಂತಾಗುತ್ತದೆ. ಹೀಗಾಗಿ ಪ್ರಮಾಣವಾಕ್ಕಿಗೆ ಮಣಿಯದ ವ್ಯಕ್ತಿಗೆ, ಕೆಲವು ಸಂದರ್ಭಗಳಲ್ಲಿ, ನ್ಯಾಯಯುತವಾದ ಕಾರ್ಯವಿರುತ್ತದೆ, ಆದರೆ ಅವನ ಅವಿಧೇಯತೆಗೆ ಕಾರಣ ಅವೈಯಕ್ತಿಕವಾದುದಾಗಿರಬೇಕೇ ಹೊರತು ಸ್ವಂತದ್ದಾಗಿರಬಾರದು. ಆದರೆ ಅದರ ಸ್ವರೂಪದ ಕಾರಣದಿಂದಾಗಿಯೇ ಅದಕ್ಕೆ ನಿರ್ದಿಷ್ಟ ನಿಯಮಗಳನ್ನು ರೂಪಿಸಲು ಸಾಧ್ಯವಾಗದು.

–೦–೦–೦–

ಅಧ್ಯಾಯ ೧೬

ಅಧಿಕಾರ ಸಿದ್ಧಾಂತಗಳು

ಪ್ರಮುಖವಾಗಿ ಅಧಿಕಾರದಾಹದಿಂದಲೇ ಪ್ರೇರಿತವಾದ ಕೆಲವು ಸಿದ್ಧಾಂತಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸುವುದು ನನ್ನ ಉದ್ದೇಶ. ಅವರ ವಿಷಯವೇ ಅಧಿಕಾರವೆಂದು ನಾನು ಹೇಳುತ್ತಿಲ್ಲ, ಅದರೆ ಅದು ಆ ತಾತ್ವಿಕರ ತತ್ವಜಿಜ್ಞಾಸೆಯ ಹಿಂದಿನ ಪ್ರೇರಣೆ ಹಾಗೂ ನೈತಿಕತೆಗಳ ಬಗೆಗಿನ ತೀರ್ಮಾನಗಳಲ್ಲಿ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಕಾರ್ಯಶೀಲವಾಗಿರುವುದು ಎಂಬುದು ನನ್ನ ಅರ್ಥ.

ನಮ್ಮ ನಂಬಿಕೆಗಳು ಅವಲೋಕನ ಹಾಗೂ ಬಯಕೆಗಳು ವಿವಿಧ ಪ್ರಮಾಣಗಳಲ್ಲಿ ಸೇರುವುದರಿಂದಾಗುವ ಪರಿಣಾಮ. ಕೆಲವದರಲ್ಲಿ ಒಂದರ ಪಾತ್ರ ತುಂಬ ಕಡಿಮೆ; ಇತರವುಗಳಲ್ಲಿ, ಮತ್ತೊಂದರದ್ದು. ಆನುಭವಿಕ ಆಧಾರಗಳಿಂದ ಖಚಿತವಾಗಿ ಸಾಬೀತುಮಾಡಬಹುದಾದುದು ತೀರ ಕಡಿಮೆ; ನಮ್ಮ ನಂಬಿಕೆಗಳು ಇವುಗಳನ್ನು ಮೀರಿ ಹೋದಾಗ, ಅವುಗಳ ಉದ್ಭವದಲ್ಲಿ ಬಯಕೆಗಳು ಪಾತ್ರವಹಿಸುತ್ತವೆ. ಮತ್ತೊಂದೆಡೆಯಲ್ಲಿ, ಕೆಲವು ನಂಬಿಕೆಗಳು ಸುಳ್ಳೆಂದು ಸಾಬೀತುಗೊಂಡ ನಂತರವೂ ಬಹುಕಾಲ ಉಳಿಯುತ್ತವೆ; ಪರವಾಗಿ ಅಥವಾ ವಿರುದ್ಧವಾಗಿ ಖಚಿತವಾದ ಯಾವುದೇ ಪುರಾವೆಗಳು ಇಲ್ಲದಿರುವಾಗ ಕೂಡ ಅವು ಹಲವು ಯುಗಗಳುದ್ದಕ್ಕೂ ಉಳಿಯುತ್ತವೆ.

ಸಿದ್ಧಾಂತಗಳು ಬದುಕಿಗಿಂತ ಹೆಚ್ಚು ಏಕೀಕೃತವಾದವು. ಬದುಕಿನಲ್ಲಾದರೆ, ನಮಗೆ ಹಲವು ಬಯಕೆಗಳಿರುತ್ತವೆ, ಆದರೆ ಸಿದ್ಧಾಂತವು ಸಾಮಾನ್ಯವಾಗಿ ಪ್ರಬಲವಾದ ಯಾವುದೋ ಒಂದು ಬಯಕೆಯಿಂದ ಪ್ರೇರಣೆಗೊಂಡಿರುತ್ತದೆ, ಅದೇ ಅದರ ಏಕೀಕೃತತೆಗೆ ಕಾರಣ.

ಜಗತ್ತು ಮತ್ತು ಬದುಕುಗಳು ತೀರ ಅಪೂರ್ಣ
ನಾನು ಜರ್ಮನ್ ಪ್ರಾಧ್ಯಾಪಕರನ್ನು ಅನುಸರಿಸುತ್ತೇನೆ,
ಬದುಕಿನ ಸಂಶ್ಲೇಷಣೆ ಮತ್ತು ಗ್ರಾಹ್ಯವಾಗಿಸುವಿಕೆ
ಹೇಗೆ ಎಂಬುದು ಅವರಿಗೆ ಗೊತ್ತು

ತಾತ್ವಿಕರ ಕಾರ್ಯಗಳಲ್ಲಿ ನಾನಾ ಬಯಕೆಗಳು ತುಂಬಿಕೊಂಡಿವೆ: ತಿಳಿವಿನ ಬಯಕೆ, ಇದಕ್ಕೆ ಭಿನ್ನವಾದ, ಜಗತ್ತನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ ಎಂದು ಸಾಬೀತುಮಾಡುವ ಬಯಕೆ, ಪುಣ್ಯದ ಬಯಕೆ ಮತ್ತು ಇವೆರಡರ ಮಿಶ್ರಣವಾದ ಬಿಡುಗಡೆಯ ಬಯಕೆ. ದೇವರಲ್ಲಿ ಸೇರುವ ಅಥವಾ ಇತರ ಮಾನವರೊಡನೆ ಬೆರೆಯಬೇಕೆಂಬ ಬುಯಕೆ. ಸೌಂದರ್ಯದ ಬಯಕೆ ಇದೆ, ಆನಂದದ ಬಯಕೆ ಹಾಗೂ, ಕೊನೆಯದಾಗಿ, ಅಧಿಕಾರದ ಬಯಕೆ.

ಹಿರಿಯ ಮತಧರ್ಮಗಳ ಗುರಿ ಪುಣ್ಯಾರ್ಜನೆ, ಜೊತೆಗೆ ಸಾಮಾನ್ಯವಾಗಿ ಅದಕ್ಕೂ ಯಾವುದೋ ಮಿಗಿಲಾದದ್ದು. ಕ್ರಿಶ್ಚಿಯಾನಿಟಿ ಮತ್ತು ಬೌದ್ಧ ಧರ್ಮಗಳು ಮುಕ್ತಿಯನ್ನು ಗುರಿಯಾಗಿ ಹೊಂದಿವೆ, ಮತ್ತು ಅವುಗಳ ಗಾಢವಾದ ಆನುಭಾವಿಕ ರೂಪದಲ್ಲಿ, ದೇವರೊಡನೆ ಅಥವಾ ವಿಶ್ವದೊಡನೆ ಐಕ್ಯ. ಅನುಭವಾತ್ಮಕ ಸಿದ್ಧಾಂತಗಳು ಸತ್ಯಾನ್ವೇಷಣೆಯನ್ನು ಮಾಡುತ್ತವೆ, ಡೆಕಾರ್ಟೆಯಿಂದ ಹಿಡಿದು ಕ್ಯಾಂಟ್‌ವರೆಗಿನ ಆದರ್ಶವಾದಿ ಸಿದ್ಧಾಂತಗಳು ನಿಶ್ಚಿತತೆಯನ್ನು ಅನ್ವೇಷಿಸುತ್ತವೆ; ವಾಸ್ತವವಾಗಿ ಎಲ್ಲ ದೊಡ್ಡ ತಾತ್ವಿಕರೂ ಕ್ಯಾಂಟ್‌ವರೆಗೆ (ಅವನನ್ನೂ ಒಳಗೊಂಡಂತೆ) ಆಸಕ್ತರಾಗಿರುವುದು ಮನುಷ್ಯ ಪ್ರಕೃತಿಯಲ್ಲಿನ ಗ್ರಾಹ್ಯವಾದ ಭಾಗದ ಬಯಕೆಗಳನ್ನು ಕುರಿತು. ಬೆಂಥಮ್ ಸಿದ್ಧಾಂತ ಮತ್ತು ಮ್ಯಾಂಚೆಸ್ಟರ್ ಪಂಥವು ಸಂತೋಷವನ್ನು ಗುರಿಯನ್ನಾಗಿಯೂ, ಸಂಪತ್ತನ್ನು ಮುಖ್ಯ ಸಾಧನವನ್ನಾಗಿಯೂ ಪರಿಗಣಿಸುತ್ತವೆ. ಆಧುನಿಕ ಕಾಲದ ಅಧಿಕಾರ ಸಿದ್ಧಾಂತಗಳು ಮುಖ್ಯವಾಗಿ ಹುಟ್ಟಿಕೊಂಡಿರುವುದು 'ಮ್ಯಾಂಚೆಸ್ಟರಿಸ್ಮ್‌'ಗೆ ಪ್ರತಿಕ್ರಿಯಾತ್ಮಕವಾಗಿ, ಹಾಗೂ ಬದುಕಿನ ಉದ್ದೇಶವು ಸಂತೋಷಗಳ ಸರಣಿ ಎಂಬ ದೃಷ್ಟಿಗೆ – ತೀರ ಅಪೂರ್ಣವೆಂದೂ ಅಸಮರ್ಪಕವಾಗಿ ಕ್ರಿಯಾಶೀಲವೆಂದೂ ಇದನ್ನು ಖಂಡಿಸಲಾಗುತ್ತದೆ – ಪ್ರತಿಭಟನೆಯಾಗಿ.

ಮಾನವನ ಬದುಕು ಇಚ್ಛಾಶಕ್ತಿ ಹಾಗೂ ನಿಯಂತ್ರಿಸಲಾಗದ ವಸ್ತುಸ್ಥಿತಿಗಳ ನಡುವಣ ನಿರಂತರ ಸಂಘರ್ಷವಾದ್ದರಿಂದ, ತನ್ನ ಅಧಿಕಾರ ಪ್ರವೃತ್ತಿಯಿಂದ ಪ್ರೇರಿತನಾದ ತಾತ್ವಿಕನು, ತನ್ನದೇ ಇಚ್ಛಾಶಕ್ತಿಯ ಫಲವಾಗಿರದ ವಸ್ತುಸ್ಥಿತಿಗಳ ಪಾತ್ರವನ್ನು ನಗಣ್ಯವಾಗಿಸಲು ಅಥವಾ ಅಲ್ಲಗಳೆಯಲು ಬಯಸುತ್ತಾನೆ. ಈಗ ನನ್ನ ಮನಸ್ಸಿನಲ್ಲಿರುವುದು ನಗ್ನ ಅಧಿಕಾರವನ್ನು ವೈಭವೀಕರಿಸುವ ಮೆಕಿಯವಿಲ್ಲಿ ಮತ್ತು '*ರಿಪಬ್ಲಿಕ್*'ನ ಥ್ರಾಸಿಮ್ಯಾಕಸ್‌ನಂತಹ ಜನರು ಮಾತ್ರವಲ್ಲ; ನನ್ನ ಮನಸ್ಸಿನಲ್ಲಿರುವುದು ತತ್ವಜಿಜ್ಞಾಸೆ ಅಥವಾ ನೈತಿಕತೆಯ ವೇಷದಲ್ಲಿ ತಮ್ಮ ಅಧಿಕಾರಮೋಹವನ್ನು

ಹುದುಗಿಸಿಕೊಂಡ ತತ್ವಗಳನ್ನು ಸೃಷ್ಟಿಸುವ ಜನರು. ಆಧುನಿಕ ಕಾಲದ ಅಂತಹ ಮೊದಲ ಮತ್ತು ಅತ್ಯಂತ ಪರಿಪೂರ್ಣ ತಾತ್ವಿಕನೆಂದರೆ ಫಿಷ್ಟೆ.[೧]

ಫಿಷ್ಟೆಯ ಸಿದ್ಧಾಂತವು ಆರಂಭವಾಗುವುದು ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಏಕೈಕವಾದ ಅಹಂನಿಂದ. ಅಹಂ ಇರುವುದು ಅದು ತನ್ನನ್ನು ಸಮರ್ಥಿಸಿಕೊಳ್ಳುವುದರಿಂದ. ಮಿಕ್ಕ ಯಾವುದೂ ಇಲ್ಲದಿದ್ದರೂ, ಒಂದುದಿನ ಅಹಂನ ಬಾಗಿಲ ಮೇಲೆ ನವಿರಾಗಿ ತಟ್ಟುತ್ತದೆ, ಇದರ ಪರಿಣಾಮವಾಗಿ ಅಹಂ ಅಲ್ಲದ್ದನ್ನು ಅದು ಸಮರ್ಥಿಸುತ್ತದೆ. ಆನಂತರ ಅದು, ರಹಸ್ಯಪ್ರಜ್ಞಾವಾದದ ಮತಧರ್ಮಶಾಸ್ತ್ರಕ್ಕೆ (ಉಟಿಥಙಾಛಿ ಖ್ನಿಜಙಟಙಥಿ) ಭಿನ್ನವಲ್ಲದ, ವಿವಿಧ ಉದ್ಭವಗಳೆಡೆ ಧಾವಿಸುತ್ತದೆ; ಆದರೆ ನಾಸ್ಟಿಕ್ ಪಂಥೀಯರು ಉದ್ಭವವನ್ನು ದೇವರಿಗೆ ಆರೋಪಿಸಿ ತಮ್ಮ ಬಗ್ಗೆ ವಿನೀತ ಭಾವನೆಯನ್ನು ತಾಳಿದರೆ, ಫಿಷ್ಟೆಯು ದೇವರು ಮತ್ತು ಅಹಂನ ನಡುವಣ ವ್ಯತ್ಯಾಸವನ್ನು ಅನವಶ್ಯಕವೆಂದು ತಿಳಿಯುತ್ತಾನೆ. ತತ್ವಜಿಜ್ಞಾಸೆಯನ್ನು ಪೂರೈಸಿದ ನಂತರ ಅಹಂ, ಜರ್ಮನರು ಒಳ್ಳೆಯವರು ಹಾಗೂ ಫ್ರೆಂಚರು ಕೆಟ್ಟವರು, ಹಾಗಾಗಿ ನೆಪೋಲಿಯನ್ನನ ವಿರುದ್ಧ ಹೋರಾಡುವುದು ಜರ್ಮನರ ಕರ್ತವ್ಯ ಎಂದು ಪ್ರತಿಪಾದಿಸಲು ಧಾವಿಸುತ್ತದೆ. ವಾಸ್ತವವಾಗಿ ಜರ್ಮನರು ಹಾಗೂ ಫ್ರೆಂಚರಿಬ್ಬರೂ ಫಿಷ್ಟೆಯ ಉದ್ಭವಗಳು, ಅಷ್ಟೆ; ಆದರೆ ಜರ್ಮನರು ಮಿಗಿಲಾದ ಉದ್ಭವ, ಅಂದರೆ ಅವರು ಏಕೈಕವಾದ ಕೇವಲ ವಾಸ್ತವಕ್ಕೆ ಸನಿಹವಾದವರು, ಅದೇ ಫಿಷ್ಟೆಯ ಅಹಂ. ಅಲೆಗ್ಸಾಂಡರ್ ಮತ್ತು ಆಗಸ್ಟಸ್ ತಾವೇ ದೇವರು ಎಂದು ಪ್ರತಿಪಾದಿಸಿದರು, ಇತರರು ಅದನ್ನೊಪ್ಪುವ ಹಾಗೆ ನಟಿಸುವಂತೆ ಒತ್ತಾಯಿಸಿದರು; ಫಿಷ್ಟೆ, ಸರ್ಕಾರದ ಮೇಲೆ ನಿಯಂತ್ರಣವನ್ನು ಹೊಂದಿರದಿದ್ದರಿಂದ, ತನ್ನ ದೈವಿಕತೆಯನ್ನು ಸಮರ್ಥವಾಗಿ ತೋರಿಸಿಕೊಳ್ಳಲಿಲ್ಲವಾದ ಕಾರಣ, ನಾಸ್ತಿಕತೆಯ ಆರೋಪದ ಮೇಲೆ ತನ್ನ ಕೆಲಸವನ್ನು ಕಳೆದುಕೊಂಡ.

ಫಿಷ್ಟೆಯದರಂತಹ ತತ್ವಜಿಜ್ಞಾಸೆಯು ಸಾಮಾಜಿಕ ಕರ್ತವ್ಯಗಳಿಗೆ ಯಾವ ಸ್ಥಾನವನ್ನೂ ನೀಡುವುದಿಲ್ಲ, ಏಕೆಂದರೆ ಹೊರ ಜಗತ್ತು ತನ್ನ ಕನಸಿನ ಉತ್ಪನ್ನ, ಅದಕ್ಕೆ. ಈ ಸಿದ್ಧಾಂತದ ಜೊತೆಗೆ ಹೋಲಿಸಬಹುದೆನ್ನಿಸುವ ಒಂದೇ ನೈತಿಕತೆಯೆಂದರೆ ಆತ್ಮವಿಕಾಸದ್ದು. ಆದರೆ,

---

[೧] ಜೊಹಾನ್ ಗಾಟ್ಟಿಲೀಬ್ ಫಿಷ್ಟೆ (೧೭೬೨–೧೮೧೪), 'ಜರ್ಮನ್ ಆದರ್ಶವಾದ'ದ ಮೊದಲ ಪ್ರತಿಪಾದಕರಲ್ಲೊಬ್ಬ; ಸ್ವ–ಪ್ರಜ್ಞೆ ಅಥವಾ ಆತ್ಮಜಾಗೃತಿಯ ಬಗ್ಗೆ ವಿಶಿಷ್ಟವೆನಿಸುವ ಚಿಂತನೆಗಳನ್ನು ನಡೆಸಿದವನು. ಇವನನ್ನು ಜರ್ಮನ್ ರಾಷ್ಟ್ರೀಯತಾವಾದದ ಜನಕ ಎಂದು ಪರಿಗಣಿಸಲಾಗಿದೆ.

ಒಬ್ಬ ವ್ಯಕ್ತಿಯು ಅತಾರ್ಕಿಕ ರೀತಿಯಲ್ಲಿ, ಕುಟುಂಬ ಹಾಗೂ ದೇಶಗಳನ್ನು ಸಹಮಾನವರಿಗಿಂತ ತನ್ನ ಅಹಂಗೆ ಹೆಚ್ಚು ಹತ್ತಿರದ ಭಾಗವಾಗಿ, ಆದ್ದರಿಂದ ಹೆಚ್ಚು ಮೌಲಿಕವಾದುದೆಂದು ಪರಿಗಣಿಸಬಹುದು. ಹೀಗೆ ಜನಾಂಗ ಮತ್ತು ರಾಷ್ಟ್ರೀಯತೆಗಳಲ್ಲಿನ ನಂಬಿಕೆಯು ಸ್ವಾತ್ಮೈಕಜ್ಞೇಯತಾವಾದದ[೧] ಸಹಜ ಮಾನಸಿಕ ಪರಿಣಾಮವಾಗುತ್ತದೆ – ಅಧಿಕಾರಮೋಹವು ಈ ಸಿದ್ಧಾಂತವನ್ನು ಪ್ರೇರಿಸುವುದಿಂದಾಗಿ ಹಾಗೂ ಇತರರ ಸಹಾಯದಿಂದ ಮಾತ್ರವೇ ಅಧಿಕಾರವನ್ನು ಪಡೆಯುವುದು ಸಾಧ್ಯವಾದ್ದರಿಂದ ಮತ್ತಷ್ಟು ತೀವ್ರವಾಗಿ.

ಇದನ್ನೆಲ್ಲ 'ಆದರ್ಶವಾದ' ಎನ್ನುತ್ತಾರೆ, ಹೊರ ಜಗತ್ತಿನ ಅಸ್ತಿತ್ವವನ್ನು ಒಪ್ಪಿಕೊಳ್ಳುವ ಸಿದ್ಧಾಂತಕ್ಕಿಂತ ಇದು ನೈತಿಕವಾಗಿ ಉದಾತ್ತವಾದದ್ದು ಎಂದು ಭಾವಿಸಲಾಗುತ್ತದೆ.

ನನ್ನ ಇಚ್ಛಾಶಕ್ತಿಗೆ ಹೊರತಾಗಿ ಅಸ್ತಿತ್ವದಲ್ಲಿರುವುದರ ವಾಸ್ತವವು, ಸಿದ್ಧಾಂತದಲ್ಲಿ, 'ಸತ್ಯ'ದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಬರುತ್ತದೆ. ನನ್ನ ನಂಬಿಕೆಗಳ ಸತ್ಯತೆಯು, ವ್ಯವಹಾರಜ್ಞಾನದ ದೃಷ್ಟಿಯಲ್ಲಿ, ಬಹುಪಾಲು ಸನ್ನಿವೇಶಗಳಲ್ಲಿ ನಾನು ಮಾಡಬಹುದಾದ ಯಾವುದನ್ನೂ ಅವಲಂಬಿಸಿರುವುದಿಲ್ಲ. ನಾಳೆ ನಾನು ಬೆಳಗ್ಗೆ ತಿಂಡಿಯನ್ನು ತಿನ್ನುತ್ತೇನೆಂದು ನಂಬಿಕೊಂಡಿದ್ದು ನನ್ನ ನಂಬಿಕೆಯು ಸತ್ಯವಾದರೆ, ಅದಕ್ಕೆ ಭಾಗಶಃ ಕಾರಣ ನನ್ನ ಇಚ್ಛಾಶಕ್ತಿ ಎಂಬುದು ನಿಜ; ಆದರೆ ಮಾರ್ಚ್ ತಿಂಗಳ ಐಡ್ಸ್‌ನಲ್ಲಿ[೨] ಸೀಸರ್ ಕೊಲೆಯಾದ ಎಂದು ನಾನು ನಂಬುವುದಾದರೆ, ಅದರ ಸತ್ಯತೆಯು ನನ್ನ ನಂಬಿಕೆಗೆ ಸಂಪೂರ್ಣವಾಗಿ ಹೊರತಾಗಿರುತ್ತದೆ. ಅಧಿಕಾರಮೋಹದಿಂದ ಪ್ರೇರಿತವಾದ ಸಿದ್ಧಾಂತಗಳಿಗೆ ಈ ಸನ್ನಿವೇಶವು ಅಪಥ್ಯವೆನಿಸುತ್ತದೆ, ಆದ್ದರಿಂದ ನಂಬಿಕೆಗಳ ಸತ್ಯಾಸತ್ಯತೆಯ ಆಕರವಾಗಿ ವ್ಯವಹಾರಜ್ಞಾನದ ಸತ್ಯದ ಪರಿಕಲ್ಪನೆಯನ್ನು ಅಲ್ಲಗಳೆಯಲು ಅವು ಪ್ರಯತ್ನಿಸುತ್ತವೆ. ಸತ್ಯವು ವಾಸ್ತವದೊಡನೆ ಹೊಂದಿಕೊಳ್ಳಬೇಕಾಗಿಲ್ಲ, ಇಡೀ ನಮ್ಮ ನಂಬಿಕೆಗಳ ವ್ಯವಸ್ಥೆಯ ಪರಸ್ಪರ ಸಮಂಜಸತೆಯೊಡನೆ ಹೊಂದಿಕೊಳ್ಳಬೇಕು ಎಂದು ಹೆಗೆಲಿಯನ್‌ರು ವಾದಿಸುತ್ತಾರೆ. ಒಂದು ಒಳ್ಳೆಯ ಕಾದಂಬರಿಯಲ್ಲಿನ ಘಟನೆಗಳಂತೆ ಸುಸಂಬದ್ಧವಾಗಿದ್ದರೆ ನಿಮ್ಮ ನಂಬಿಕೆಗಳೆಲ್ಲ ಸತ್ಯವೇ, ವಾಸ್ತವವಾಗಿ ಕಾದಂಬರಿಕಾರನ ಸತ್ಯ ಮತ್ತು

---

[೧] Solipcism ಜ್ಞೇಯವಾಗಬಲ್ಲದ್ದು ಅಥವಾ ಅಸ್ತಿತ್ವವುಳ್ಳದ್ದು ತನ್ನ ಆತ್ಮವೊಂದೇ ಎಂಬ ವಾದ

[೨] ಮಾರ್ಚ್, ಮೇ, ಜುಲೈ ಮತ್ತು ಅಕ್ಟೋಬರ್‌ಗಳ ೧೫ನೆಯ ತಾರೀಕು, ಉಳಿದ ತಿಂಗಳುಗಳ ೧೩ನೆಯ ತಾರೀಕು

ಇತಿಹಾಸಕಾರನ ಸತ್ಯಗಳ ನಡುವೆ ವ್ಯತ್ಯಾಸವೇ ಇಲ್ಲ. ಇದರಿಂದ ಸೃಜನಾತ್ಮಕ ಕಲ್ಪನೆಗೆ ಸ್ವಾತಂತ್ರ್ಯ ಪ್ರಾಪ್ತವಾಗುತ್ತದೆ, ಇದೆಯೆನ್ನಲಾಗುವ 'ವಾಸ್ತವ' ಜಗತ್ತಿನ ಬಂಧನಗಳಿಂದ ಇದು ಬಿಡುಗಡೆ ಮಾಡುತ್ತದೆ.

ವ್ಯವಹಾರದೃಷ್ಟಿಯು ತನ್ನ ಕೆಲ ರೂಪಗಳಲ್ಲಿ ಅಧಿಕಾರಸಿದ್ಧಾಂತವೇ ಆಗಿದೆ. ವ್ಯವಹಾರದೃಷ್ಟಿಗೆ ಸಂತೋಷದಾಯಕ ಪರಿಣಾಮವುಳ್ಳ ನಂಬಿಕೆಯು 'ಸತ್ಯ'ವಾಗಿರುತ್ತದೆ. ಮಾನವರು ಈಗ ನಂಬಿಕೆಯ ಪರಿಣಾಮವನ್ನು ಸಂತೋಷದಾಯಕವೋ ಸಂತೋಷಹೀನವೋ ಆಗಿ ಮಾಡಬಹುದು. ಸರ್ವಾಧಿಕಾರಿಯ ಆಳ್ವಿಕೆಯಲ್ಲಿ ಅವನ ಗುಣಶ್ರೇಷ್ಠತೆಯಲ್ಲಿಡುವ ನಂಬಿಕೆಯು ಅಪನಂಬಿಕೆಗಿಂತ ಹೆಚ್ಚು ಸಂತೋಷದಾಯಕ. ಪರಿಣಾಮಕಾರಿ ಪೀಡನೆಯು ಇರುವೆಡೆಗಳಲ್ಲಿ, ಅಧಿಕೃತ ಸಿದ್ಧಾಂತವು ವ್ಯವಹಾದೃಷ್ಟಿಯಿಂದ 'ಸತ್ಯ'ವಾಗಿರುತ್ತದೆ. ಹೀಗಾಗಿ ಅಧಿಕಾರದಲ್ಲಿರುವವರಿಗೆ ವ್ಯವಹಾರಸಿದ್ಧಾಂತವು ಹಾದಿಹೋಕ ಸಿದ್ಧಾಂತವು ನೀಡಬಹುದಾದ್ದಕ್ಕಿಂತ ಹೆಚ್ಚು ತಾತ್ವಿಕ ಸರ್ವಶಕ್ತಿಯನ್ನು ನೀಡುತ್ತದೆ. ಬಹುಪಾಲು ವ್ಯವಹಾರಸಿದ್ಧಾಂತಿಗಳು ತಮ್ಮ ಸಿದ್ಧಾಂತದ ಈ ಪರಿಣಾಮಗಳನ್ನು ಒಪ್ಪಿಕೊಳ್ಳುವರೆಂದು ನಾನು ಹೇಳುತ್ತಿಲ್ಲ; ನಾನು ಸೂಚಿಸುತ್ತಿರುವುದು ಅವುಗಳ ಪರಿಣಾಮಗಳು ಮತ್ತು ವ್ಯವಹಾರಸಿದ್ಧಾಂತಿಯ ಸತ್ಯದ ಬಗೆಗಿನ ಸಾಮಾನ್ಯ ದೃಷ್ಟಿಕೋನದ ಖಂಡನೆಯು ಅಧಿಕಾರಮೋಹದ, ಪ್ರಾಯಶಃ ಇತರ ಮಾನವರ ಮೇಲಿನದಕ್ಕಿಂತ ಅಚೇತನ ಪ್ರಕೃತಿಯ ಮೇಲಿನ ಅಧಿಕಾರದ, ಕಾರಣದಿಂದ ಆಗುವಂಥದು ಎಂಬುದನ್ನು ಮಾತ್ರ.

ಬರ್ಗ್‌ಸನ್‌ನ ಸೃಜನಾತ್ಮಕ ವಿಕಾಸವು ಒಂದು ಅಧಿಕಾರಸಿದ್ಧಾಂತ. ಇದನ್ನು ಬರ್ನಾರ್ಡ್ ಷಾ ಅವರ *'ಬ್ಯಾಕ್ ಟು ಮೆಥುಸೆಲಾ'*ದ ಕೊನೆಯ ಅಂಕದಲ್ಲಿ ಅದ್ಭುತವಾಗಿ ಚಿತ್ರಿಸಲಾಗಿದೆ. ಬೌದ್ಧಿಕತೆಯು ಅತಿ ನಿಷ್ಕ್ರಿಯವೂ ಕೇವಲ ಆಲೋಚನಾಪರವೂ ಆದುದು, ನಾವು ನಿಜವಾಗಿ ಕಾಣುವುದು ಸೇನಾಚರಣೆಯಂತಹ ತೀವ್ರ ಕ್ರಿಯೆಯ ಕಾಲದಲ್ಲಿ, ಆದ್ದರಿಂದ ಅದನ್ನು ತಿರಸ್ಕರಿಸಬೇಕೆಂದು ಬರ್ಗ್‌ಸನ್ ವಾದಿಸುತ್ತಾನೆ. ನೋಡಲು ಸಾಧ್ಯವಾಗುವುದು ಸಂತೋಷದಾಯಕ ಎಂದು ಭಾವಿಸಿದ್ದರಿಂದ ಪ್ರಾಣಿಗಳಿಗೆ ಕಣ್ಣು ಬಂದಿತೆಂಬುದು ಅವನ ನಂಬಿಕೆ; ಅವು ಕುರುಡಾಗಿದ್ದುದರಿಂದ ಅವುಗಳ ಬೌದ್ಧಿಕತೆಯು ನೋಡುವುದರ ಬಗ್ಗೆ ಆಲೋಚಿಸಲು ಶಕ್ತವಾಗಿರಲಿಲ್ಲ, ಆದರೆ ಪ್ರತಿಭಾತ್ಮಕತೆಯಿಂದಾಗಿ ಈ ಪವಾಡವನ್ನು ಮೆರೆಯಲು ಅವಕ್ಕೆ ಸಾಧ್ಯವಾಯಿತು. ಅವನ ಪ್ರಕಾರ, ಎಲ್ಲ ವಿಕಾಸವೂ ಬಯಕೆಯ ಕಾರಣದಿಂದಾದುದು, ಹೀಗಾಗಿ ಬಯಕೆಯು

ಸಾಕಷ್ಟುಮಟ್ಟಿಗೆ ತೀವ್ರವಾಗಿದ್ದರೆ ಸಾಧಿಸಬಹುದಾದುದಕ್ಕೆ ಕೊನೆಯೇ ಇರುವುದಿಲ್ಲ. ಜೀವದ ಸಂರಚನೆಯನ್ನು ಅರ್ಥಮಾಡಿಕೊಳ್ಳುವ ಜೀವರಸಾಯನವಿಜ್ಞಾನಿಗಳ ಪ್ರಯತ್ನಗಳು ವಿಫಲವಾಗಿವೆ, ಏಕೆಂದರೆ ಜೀವವು ಯಾಂತ್ರಿಕವಲ್ಲ, ಅದರ ಬೆಳವಣಿಗೆಯು ಯಾವಾಗಲೂ ನಮ್ಮ ಬೌದ್ಧಿಕತೆಯು ಮುಂದಾಗಿ ಕಲ್ಪಿಸಿಕೊಳ್ಳಲು ಸಾಧ್ಯವಾಗದಂತಹ ರೀತಿಯದು; ಕ್ರಿಯೆಯ ಮೂಲಕ ಮಾತ್ರ ಜೀವವನ್ನು ಅರ್ಥಮಾಡಿಕೊಳ್ಳಬಲ್ಲುದು. ಅಂದರೆ ಅದು ಮಾನವರು ತೀವ್ರ ಭಾವುಕರೂ ಅತಾರ್ಕಿಕರೂ ಆಗಿರಬೇಕೆನ್ನುತ್ತದೆ; ಅದೃಷ್ಟವಶಾತ್, ಬರ್ಗ್‌ಸನ್‌ನ ಸಂತೋಷವುಂಟಾಗುವಂತೆ, ಸಾಮಾನ್ಯವಾಗಿ ಮನುಷ್ಯರು ಹಾಗೆಯೇ ಇದ್ದಾರೆ.

ತಮ್ಮ ತತ್ವಜಿಜ್ಞಾಸೆಯಲ್ಲಿ ಅಧಿಕಾರಪ್ರವೃತ್ತಿಯು ಮೇಲುಗೈಯಾಗಲು ಕೆಲಮಂದಿ ತಾತ್ವಿಕರು ಅವಕಾಶ ನೀಡುವುದಿಲ್ಲ, ಆದರೆ ನೈತಿಕತೆಯಲ್ಲಿ ಪೂರ್ಣ ಅವಕಾಶ ನೀಡುತ್ತಾರೆ. ಇಂಥವರಲ್ಲಿ ನೀಷೆ ಅತ್ಯಂತ ಪ್ರಮುಖ, ಅವನು ಕ್ರಿಶ್ಚಿಯನ್ ನೈತಿಕತೆಯನ್ನು ಗುಲಾಮರದ್ದೆಂದು ತಿರಸ್ಕರಿಸುತ್ತಾನೆ, ಅದರ ಜಾಗದಲ್ಲಿ ವೀರ ಅಳ್ವಿಕೆದಾರರಿಗೆ ಸೂಕ್ತವಾದ ನೈತಿಕತೆಯನ್ನು ತಂದು ಕೂರಿಸುತ್ತಾನೆ. ಆದರೆ ಇದೇನೂ ಸತ್ವಶಃ ಹೊಸದಲ್ಲ. ಅದರ ಕೆಲವಂಶವನ್ನು ಹೆರಾಕ್ಲಿಟೀಸ್‌ನಲ್ಲಿಯೂ ಪ್ಲೇಟೋನಲ್ಲಿಯೂ, ಬಹ್ವಂಶವನ್ನು ರಿನೈಸಾನ್ಸ್‌ನಲ್ಲಿಯೂ ಕಾಣಬಹುದು. ಆದರೆ ನೀಷೆಯಲ್ಲಿ ಹೊಸ ಒಡಂಬಡಿಕೆಯ ಬೋಧನೆಗೆ ಪ್ರಜ್ಞಾಪೂರ್ವಕವಾಗಿ ವಿರುದ್ಧವಾಗಿರುವಂತೆ ಅದನ್ನು ರೂಪಿಸಲಾಗಿದೆ. ಅವನ ದೃಷ್ಟಿಯಲ್ಲಿ, ಮಂದೆಗೆ ತನ್ನದೇ ಆದ ಬೆಲೆಯಿಲ್ಲ, ನಾಯಕನ ಹಿರಿತನಕ್ಕೆ ಅದು ಸಾಧನವಾಗಿ ಮಾತ್ರ ಅದಕ್ಕೆ ಮೌಲ್ಯ. ಅವನ ದೃಷ್ಟಿಯಲ್ಲಿ, ತನ್ನ ಹೆಚ್ಚಿನ ಬೆಳವಣಿಗೆಗೆ ಪೂರಕವಾಗುವುದಾದರೆ ಮಂದೆಗೆ ತೊಂದರೆ ನೀಡಲೂ ನಾಯಕನಿಗೆ ಅಧಿಕಾರವಿದೆ. ವಾಸ್ತವದಲ್ಲಿ, ಅಂಥ ನೈತಿಕತೆಯು ಮಾತ್ರ ಸಮರ್ಥಿಸುವಂತಹ ರೀತಿಯಲ್ಲಿಯೇ ಯಾವಾಗಲೂ ಶ್ರೀಮಂತಪ್ರಭುತ್ವಗಳು ನಡೆದುಕೊಂಡಿರುವುದು; ಆದರೆ ಕ್ರಿಶ್ಚಿಯನ್ ಸಿದ್ಧಾಂತವು ಮಾತ್ರ ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಸಿದ್ಧಾಂತವನ್ನು ಎತ್ತಿ ಹಿಡಿದಿದೆ. ಪ್ರಜಾಪ್ರಭತ್ವವು ತನ್ನ ಬೆಂಬಲಕ್ಕೆ ಕ್ರಿಶ್ಚಿಯನ್ ಬೋಧನೆಯನ್ನು ಬಳಸಿಕೊಳ್ಳಬಹುದು; ಆದರೆ ಶ್ರೀಮಂತಪ್ರಭುತ್ವಕ್ಕೆ ಅತ್ಯಂತ ಸೂಕ್ತವಾದುದೆಂದರೆ ನೀಷೆಯ ನೈತಿಕತೆ. "ದೇವರುಗಳಿದ್ದಿದ್ದರೆ ದೇವರಾಗಿರದಿರುವುದನ್ನು ನಾನು ಹೇಗೆ ಸಹಿಸಿಕೊಳ್ಳಲಿ? *ಆದ್ದರಿಂದ* ದೇವರುಗಳೇ ಇಲ್ಲ" ಎಂದು ನೀಷೆಯ ಝರಾತುಷ್ಟ್ರ ಹೇಳುತ್ತಾನೆ.

ಭೂಮಿಯ ಮೇಲಣ ದೌರ್ಜನ್ಯಕಾರರಿಗೆ ಎಡೆಮಾಡಿಕೊಡಲು ದೇವರುಗಳನ್ನು ಕೆಳಗಿಳಿಸಬೇಕು.

ಅಧಿಕಾರಮೋಹವು ಸಾಮಾನ್ಯ ಮಾನವ ಸ್ವಭಾವದ ಒಂದು ಭಾಗ, ಆದರೆ ಅಧಿಕಾರಸಿದ್ಧಾಂತಗಳು, ಒಂದು ನಿರ್ದಿಷ್ಟ ಅರ್ಥದಲ್ಲಿ, ಅವಿವೇಕ. ಬಾಹ್ಯ ಪ್ರಪಂಚದ, ಅಚೇತನ ರೂಪದ ಹಾಗೂ ಇತರ ಮಾನವಸಮುದಾಯದಿಂದ ಕೂಡಿದ, ಅಸ್ತಿತ್ವವು ಕೆಲವೊಂದು ಬಗೆಯ ಹೆಮ್ಮೆಗೆ ಅವಮಾನ ಮಾಡುವ ದತ್ತಾಂಶ, ಆದರೆ ಅದನ್ನು ಅಲ್ಲಗಳೆಯಬಲ್ಲವನು ಹುಚ್ಚ ಮಾತ್ರ. ತಮ್ಮ ಅಧಿಕಾರಮೋಹದಿಂದಾಗಿ ಜಗತ್ತಿನ ಬಗೆಗಿನ ತನ್ನ ದೃಷ್ಟಿಕೋನವು ಅಕರಾಳ ವಿಕರಾಳವಾಗಲು ಅವಕಾಶವೀಯುವವರನ್ನು ಎಲ್ಲ ಹುಚ್ಚಾಸ್ಪತೆಗಳಲ್ಲಿಯೂ ಕಾಣಬಹುದು; ಅದರಲ್ಲೊಬ್ಬ ನಾನು ಬ್ಯಾಂಕ್ ಆಫ಼್ ಇಂಗ್ಲಂಡ್‌ನ ಗವರ್ನರ್ ಎಂದು ಭಾವಿಸುತ್ತಾನೆ, ಮತ್ತೊಬ್ಬ ತಾನೇ ರಾಜನೆಂದುಕೊಳ್ಳುತ್ತಾನೆ, ಮಗುದೊಬ್ಬ ತಾನು ದೇವರೆಂದೇ ಬಗೆಯುತ್ತಾನೆ. ಇಂಥವೇ ಭ್ರಮೆಗಳನ್ನು ವಿದ್ಯಾವಂತರಾದವರು ಅಸ್ಪಷ್ಟ ಭಾಷೆಯಲ್ಲಿ ಹೇಳಿದರೆ ಅವರಿಗೆ ತತ್ವಶಾಸ್ತ್ರ ಪ್ರಾಧ್ಯಾಪಕ ಹುದ್ದೆಗಳು ದೊರೆಯುತ್ತವೆ; ಭಾವುಕವೂ ನಿರರ್ಗಳವೂ ಆದ ಭಾಷಣಗಳಲ್ಲಿ ಹೇಳಿದರೆ ಅವರು ಸರ್ವಾಧಿಕಾರಿ ಹುದ್ದೆಯನ್ನು ಪಡೆಯುತ್ತಾರೆ. ಅಧಿಕೃತವಾಗಿ *ಪ್ರಮಾಣೀಕೃತರಾದ* ಹುಚ್ಚರ ಬಾಯಿ ಮುಚ್ಚಿಸಲು ಕಾರಣ, ತಮ್ಮ ಟೊಳ್ಳುತನವನ್ನು ಪ್ರಶ್ನೆ ಮಾಡಿದರೆ ಅವರು ಹಿಂಸಾರಭಸಮತಿಗಳಾಗುವ ಪ್ರವೃತ್ತಿಯವರು; *ಪ್ರಮಾಣೀಕೃತರಲ್ಲ*ದವರಿಗೆ ಪ್ರಬಲವಾದ ಸೈನ್ಯಾಧಿಕಾರವನ್ನು ನೀಡಲಾಗುತ್ತದೆ, ಅವರು ತಮ್ಮ ಕೈಗೆ ಸಿಕ್ಕುವ ವಿವೇಕಿಗಳನ್ನೆಲ್ಲ ಹಿಡಿದು ಕೊಂದು ದಾಂಧಲೆ ಮಾಡುತ್ತಾರೆ. ಸಾಹಿತ್ಯ, ತತ್ವಶಾಸ್ತ್ರ ಹಾಗೂ ರಾಜಕಾರಣಗಳಲ್ಲಿ ಹುಚ್ಚಿನ ಯಶಸ್ಸು ನಮ್ಮ ಕಾಲದ ವೈಶಿಷ್ಟ್ಯಗಳಲ್ಲೊಂದು. ಹುಚ್ಚಿನ ಯಶಸ್ವೀ ರೂಪಗಳೆಲ್ಲವೂ ಅಧಿಕಾರ ಪ್ರವೃತ್ತಿಯಿಂದಲೇ ಹೊಮ್ಮುವಂತಹವು.

ಇಂಥ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ಸಾಮಾಜಿಕ ಜೀವನದೊಡನೆ ಅಧಿಕಾರಸಿದ್ಧಾಂತಗಳು ಹೊಂದಿರುವ ಸಂಬಂಧವನ್ನು ಪರಿಗಣಿಸಬೇಕು, ಅದು ನಿರೀಕ್ಷೆಗಿಂತ ತುಂಬ ಸಂಕೀರ್ಣಸ್ವರೂಪದ್ದು.

ಸ್ವಾತ್ಮೈಕಜ್ಞೇಯತಾವಾದದಿಂದ (ಠುಔಟಿಛಿಟಿ) ಆರಂಭಿಸೋಣ. ಎಲ್ಲವೂ ಅಹಂನಿಂದಲೇ ಆರಂಭಗೊಳ್ಳುತ್ತವೆಂದು ಫ಼ಿಷ್ಟೆ ವಾದವನ್ನು ಮುಂದಿಟ್ಟಾಗ ಓದುಗನು, "ಎಲ್ಲವೂ ಜೊಹಾನ್ ಗಾಟ್ಲೀಬ್ ಫ಼ಿಷ್ಟೆಯಿಂದಲೇ ಆರಂಭಗೊಳ್ಲೊತ್ತದೆ! ಎಂಥ ಅಸಂಗತ! ಅಷ್ಟೇಕೆ,

ಇತ್ತೀಚಿನವರೆಗೂ ನಾನು ಅವನ ಹೆಸರನ್ನೇ ಕೇಳಿರಲಿಲ್ಲ; ಅವನು ಹುಟ್ಟುವುದಕ್ಕೆ ಮುಂಚೆ ಪರಿಸ್ಥಿತಿ ಹೇಗಿತ್ತು? ತಾನೇ ಅವನ್ನೆಲ್ಲ ಸೃಷ್ಟಿಸಿದೆನೆಂದು ಅವನು ತಿಳಿಯುವನೋ ಹೇಗೆ? ಎಂಥ ಹಾಸ್ಯಾಸ್ಪ ಕಲ್ಪನೆ!" ಎಂದು ಕೇಳುವುದಿಲ್ಲ. ಮತ್ತೆ ಹೇಳುತ್ತೇನೆ: ಈ ಮಾತನ್ನು *ಓದುಗ* ಹೇಳಲಾರ; ಅವನು ತನ್ನ ಜಾಗದಲ್ಲಿ ಫ್ಲಿಷ್ಟೆಯನ್ನು ಆವಾಹಿಸಿಕೊಳ್ಳುತ್ತಾನೆ, ಆಗ ಆ ವಾದವು ಅಸಮಂಜಸವೆಂದು ಅನ್ನಿಸುವುದಿಲ್ಲ. "ಎಷ್ಟೇ ಆಗಲಿ, ಹಿಂದಿನ ಕಾಲದ ಬಗ್ಗೆ ನನಗೆ ಏನು ತಿಳಿದಿದೆ? ನಾನು ಹುಟ್ಟಿದ ಕಾಲಕ್ಕಿಂತ ಹಿಂದಿನ ಸನ್ನಿವೇಶವೊಂದಕ್ಕೆ ಸಂಬಂಧಿಸಿದುದನ್ನು ವ್ಯಾಖ್ಯಾನಿಸಲು ನನಗಾದ ಕೆಲವು ಅನುಭವಗಳನ್ನು ಬಳಸಿಕೊಂಡೆ. ನಾನು ಹೋಗದೇ ಇರುವ ಸ್ಥಳಗಳ ಬಗ್ಗೆ ನನಗೇನು ತಾನೇ ಗೊತ್ತು? ನಾನು ಅವುಗಳನ್ನು ನೋಡಿರುವುದು ಭೂಪಟದಲ್ಲಿ, ಅವುಗಳ ಬಗ್ಗೆ ಕೇಳಿರಬಹುದು, ಅಥವಾ ಓದಿರಬಹುದು, ಅಷ್ಟೆ. ನನಗೆ ತಿಳಿದಿರುವುದು ನನ್ನ ಅನುಭವಗಳು ಮಾತ್ರ; ಮಿಕ್ಕಾದುದೆಲ್ಲ ಸಂದೇಹಾಸ್ಪದ ಊಹೆಗಳು. ದೇವರ ಜಾಗದಲ್ಲಿ ನನ್ನನ್ನು ನಾನು ಕೂರಿಸಿಕೊಂಡರೆ, ಈ ಜಗತ್ತನ್ನು ಸೃಷ್ಟಿಸಿದವನು ನಾನೇ ಎಂದು ಹೇಳಿಕೊಂಡರೆ, ನನ್ನದು ಸುಳ್ಳು ಭಾವನೆ ಎಂದು ಯಾವ ಆಧಾರವೂ ಸಾಧಿಸಿ ತೋರಿಸಲಾರದು." ಫ್ಲಿಷ್ಟೆ ಹೇಳುವುದು, *'ಇರುವುದು ಫ್ಲಿಷ್ಟೆ ಮಾತ್ರ'* ಎಂದು, ಜಾನ್ ಸ್ಮಿತ್ ಈ ವಾದವನ್ನು ಓದಿ *'ಇರುವುದು ಜಾನ್ ಸ್ಮಿತ್ ಮಾತ್ರ'* ಎಂದು ತೀರ್ಮಾನಿಸುತ್ತಾನೆ, ಫ್ಲಿಷ್ಟೆ ಹೇಳಿದ್ದು ಇದಲ್ಲ ಎಂಬುದು ಅವನ ಗಮನಕ್ಕೆ ಬರುವುದೇ ಇಲ್ಲ.

ಈ ರೀತಿಯಲ್ಲಿ ಸ್ವಾತ್ಮೈಕಜ್ಞೇಯತಾವಾದವು ಒಂದು ಬಗೆಯ ಸಾಮಾಜಿಕ ಬದುಕಿಗೆ ಆಧಾರವಾಗಬಲ್ಲುದು. ತಾನೇ ದೇವರೆಂದು ಭಾವಿಸುವ ಹುಚ್ಚರ ಗುಂಪೊಂದರಲ್ಲಿರುವವರು ಪರಸ್ಪರ ಸೌಜನ್ಯದಿಂದ ಕಾಣುವುದನ್ನು ಕಲಿಯಬಹುದು. ಆದರೆ ಎಲ್ಲಿಯವರೆಗೆ ತನ್ನ ಸರ್ವಶಕ್ತಿಯನ್ನು ಬೇರೊಂದು ದೈವವು ತಡೆಯಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯವರೆಗೆ ಈ ಸೌಜನ್ಯವು ಪ್ರತಿ ದೇವರಲ್ಲೂ ಉಳಿದುಕೊಂಡಿರುತ್ತದೆ. ಶ್ರೀಮಾನ್ ಎ ತಾನೇ ದೇವರೆಂದು ಭಾವಿಸಿದ್ದಾಗ, ಎಲ್ಲಿಯವರೆಗೆ ಇತರರ ಕಾರ್ಯಗಳು ತನ್ನ ಉದ್ದೇಶಗಳಿಗೆ ಪೂರಕವಾಗಿರುವುದೋ ಅಲ್ಲಿಯವರೆಗೆ ಅವರ ಡಾಂಬಿಕತನವನ್ನು ಅವನು ಸಹಿಸಿಕೊಳ್ಳುತ್ತಾನೆ. ಆದರೆ ಶ್ರೀಮಾನ್ ಬಿ ಅವನನ್ನು ಅಡ್ಡಿಪಡಿಸಲು ಪ್ರಯತ್ನಿಸಿದರೆ, ಅವನು ಸರ್ವಶಕ್ತನಲ್ಲವೆಂಬುದನ್ನು ಸಾಧಿಸಲು ಹೊರಟರೆ, ಆಗ ಶ್ರೀಮಾನ್ ಎ ಯ ರೊಚ್ಚಿಗೆ ಕಿಚ್ಚು ತಾಕುತ್ತದೆ, ಶ್ರೀಮಾನ್ ಬಿ ತನಗೆ ಸಹಾಯಕನೋ ಅಥವಾ ಸೈತಾನನೋ ಎಂಬುದು ಅರ್ಥವಾಗತೊಡಗುತ್ತದೆ. ಶ್ರೀಮಾನ್ ಬಿ ಕೂಡ

ಶ್ರೀಮಾನ್ ಎ ಯ ಬಗ್ಗೆ ಅದೇ ಭಾವನೆಯನ್ನು ತಾಳುತ್ತಾನೆ, ಒಬ್ಬೊಬ್ಬರೂ ತಮ್ಮದೇ ಪಕ್ಷವನ್ನು ಸ್ಥಾಪಿಸುತ್ತಾರೆ, ಸಮರ ಆರಂಭವಾಗುತ್ತದೆ – ಕಟುವಾದ, ಕ್ರೂರವಾದ ಮತ್ತು ಹುಚ್ಚು ಮತಧಾರ್ಮಿಕ ಯುದ್ಧ. ಶ್ರೀಮಾನ್ ಎ ಬದಲು ಹಿಟ್ಲರ್, ಶ್ರೀಮಾನ್ ಬಿ ಬದಲು ಸ್ಟಾಲಿನ್ ಇಟ್ಟು ನೋಡಿ, ಆಧುನಿಕ ಜಗತ್ತಿನ ಚಿತ್ರ ಕಾಣುತ್ತದೆ. 'ನಾನು *ವೋಟಾನ್*'[೧] ಎಂದು ಹಿಟ್ಲರ್ ಹೇಳಿದರೆ, 'ನಾನು *ದ್ವಂದ್ವಾತ್ಮಕ ಭೌತವಾದ*'[೨]ಎಂದು ಸ್ಟಾಲಿನ್ ಹೇಳುತ್ತಾನೆ. ಇಬ್ಬರ ಹೇಳಿಕೆಯ ಬೆಂಬಲಕ್ಕೆ ಸೈನ್ಯ, ವಿಮಾನದಳ, ವಿಷಾನಿಲಗಳು ಮತ್ತು ಮುಗ್ಧ ಹಿಂಬಾಲಕರ ರೂಪದಲ್ಲಿ ದೊಡ್ಡ ಸಂಪನ್ಮೂಲವಿರುವುದರಿಂದ ಇಬ್ಬರ ಹುಚ್ಚುತನವನ್ನು ಯಾರೂ ಗಮನಿಸುವುದಿಲ್ಲ.

ಮುಂದೆ, ನೀಷೆಯ ವಿಭೂತಿಪೂಜೆಯನ್ನು ತೆಗೆದುಕೊಳ್ಳಿ, ಅವನಿಗೆ ಅಬ್ಬೇಪಾರಿಗಳನ್ನೂ ದಿಕ್ಕೆಟ್ಟವರನ್ನೂ ಬಲಿಗೊಡಬೇಕು. ಮೆಚ್ಚಿಕೆಯ ಓದುಗನು ತಾನೇ ನಾಯಕನೆಂದು ನಂಬುತ್ತಾನೆ, ನಿರ್ಲಜ್ಜ ವಿಧಾನಗಳಿಂದ ತಂತ್ರಗಳನ್ನನುಸರಿಸಿ ತನಗಿಂತ ಮುಂದಿರುವ ಆ ಇನ್ನೊಬ್ಬ ಲಫಂಗ ಅದೇ ಅಬ್ಬೇಪಾರಿ ಹಾಗೂ ದಿಕ್ಕೆಟ್ಟವರಲ್ಲಿ ಒಬ್ಬನಾಗಿ ಕಾಣುತ್ತಾನೆ. ಹೀಗಾಗಿ ನೀಷೆಯ ಸಿದ್ಧಾಂತ ಅತ್ಯುತ್ತಮವಾದುದಾಗಿ ಕಾಣುತ್ತದೆ. ಆದರೆ ಆ ಇನ್ನೊಬ್ಬನೂ ಅದನ್ನು ಓದಿ ಮೆಚ್ಚಿಕೊಂಡರೆ, ಆಗ ನಾಯಕ ಯಾರು ಎಂದು ನಿರ್ಧರಿಸುವುದು ಹೇಗೆ? ಉತ್ತರ ಸ್ಪಷ್ಟ: ಯುದ್ಧದ ಮೂಲಕ. ಇಬ್ಬರಲ್ಲಿ ಒಬ್ಬನು ಗೆಲವು ಪಡೆದಾಗ, ಅಧಿಕಾರದಲ್ಲಿ ಉಳಿದುಕೊಂಡಿರುವ ಮೂಲಕ ನಾಯಕ ಪಟ್ಟಕ್ಕೆ ತಾನೇ ಅರ್ಹ ಎಂದು ಅವನು ರುಜುವಾತು ಮಾಡುತ್ತಿರಲೇ ಬೇಕಾಗುತ್ತದೆ. ಇದನ್ನು ಮಾಡಲು ಅವನು ಬಲಿಷ್ಠವಾದ ರಹಸ್ಯದಳವನ್ನು ರಚಿಸಬೇಕು; ಕೊಲೆಯಾಗಿಬಿಡಬಹುದೆಂಬ ಆತಂಕದಲ್ಲಿ ಅವನು ಬದುಕಬೇಕು, ಇತರರು ಆಪಾದನೆಗೆ ಗುರಿಯಾಗುವ ಭಯಕ್ಕೊಳಗಾಗಬೇಕು. ಈ ವಿಭೂತಿಪೂಜೆಯು ತಲ್ಲಣಿಸುವ ಅಂಜುಕುಳಿಗಳಿಂದ ಕೂಡಿದ ದೇಶವನ್ನು ನಿರ್ಮಿಸುವುದರಲ್ಲಿ ಕೊನೆಗೊಳ್ಳುತ್ತದೆ.

ಪರಿಣಾಮಗಳು ಸಂತೋಷಕರವಾಗಿದ್ದರೆ ನಂಬಿಕೆಯು ಸತ್ಯ ಎಂಬ ವ್ಯವಹಾರವಾದದಿಂದಲೂ ಇಂಥದೇ ತೊಂದರೆಗಳು ಉದ್ಭವಿಸುತ್ತವೆ. ಸಂತೋಷಕರ, ಯಾರಿಗೆ? ಸ್ಟಾಲಿನ್‌ನಲ್ಲಿನ ನಂಬಿಕೆ ಅವನಿಗೆ

---

[೧] ಜರ್ಮನ್ ಭಾಷೆಯಲ್ಲಿ ಒಂದು ದೇವತೆಯ ಹೆಸರು

[೨] ಜಗತ್ತು ಮೂಲಭೂತವಾಗಿ ಭೌತವಸ್ತುವಿನಿಂದ ಆದುದೆಂದೂ, ಎಲ್ಲ ವಿಕಾಸವೂ ನಡೆಯುವುದು ದ್ವಂದ್ವಾತ್ಮಕವಾಗಿಯೆಂದೂ ಪ್ರತಿಪಾದಿಸುವ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತ

ಸಂತೋಷಕರ, ಆದರೆ ಟ್ರಾಟ್ಸ್‌ಕಿಗೆ ಅಸಂತೋಷಕರ. ಹಿಟ್ಲರ್‌ನಲ್ಲಿನ ನಂಬಿಕೆಯು ನಾಜ಼ಿಗಳಿಗೆ ಸಂತೋಷದಾಯಕ, ಆದರೆ ಅವರು ನಡೆಸುವ ಶ್ರಮಶಿಬಿರಗಳಲ್ಲಿರುವವರಿಗೆ ಅಸಂತೋಷದಾಯಕ. ನಂಬಿಕೆಯು ಸತ್ಯವೆನ್ನಿಸಿಕೊಳ್ಳಲು ಸಂತೋಷಕರ ಪರಿಣಾಮಗಳನ್ನು ಯಾರು ಅನುಭವಿಸಬೇಕು ಎಂಬ ಪ್ರಶ್ನೆಯನ್ನು ನಗ್ನ ಅಧಿಕಾರವು ಮಾತ್ರ ಬಗೆಹರಿಸಬಲ್ಲುದು.

ಅಧಿಕಾರ ಸಿದ್ಧಾಂತಗಳು ಅವುಗಳ ಸಾಮಾಜಿಕ ಪರಿಣಾಮಗಳ ಹಿನ್ನೆಲೆಯಲ್ಲಿ ಸ್ವಯಂತಿರಸ್ಕೃತವಾದವು. ನಾನೇ ದೇವರು ಎಂಬ ನಂಬಿಕೆಯು, ಅದನ್ನು ಬೇರಾರೂ ಹೊಂದಿರದಿದ್ದರೆ, ನನ್ನ ಬಾಯಿ ಮುಚ್ಚಿಸಲು ಕಾರಣವಾಗುತ್ತದೆ: ಇತರರೂ ಅದನ್ನು ಪಡೆದಿದ್ದರೆ, ಅದರಿಂದ ಯುದ್ಧವಾಗಿ ಪ್ರಾಯಶಃ ನಾನು ಬಲಿಯಾಗುತ್ತೇನೆ. ವಿಭೂತಿಪೂಜೆಯು ಹೆಂಬೇಡಿಗಳ ದೇಶವನ್ನು ನಿರ್ಮಿಸುತ್ತದೆ. ವ್ಯವಹಾರವಾದದಲ್ಲಿನ ನಂಬಿಕೆಯು ವ್ಯಾಪಕವಾದುದಾದರೆ, ನಗ್ನ ಬಲಪ್ರಯೋಗದ ಆಡಳಿತಕ್ಕೆ ಎಡೆ ಕೊಡುತ್ತದೆ, ಅದು ಅಸಂತೋಷದಾಯಕ; ಹೀಗಾಗಿ ತನ್ನದೇ ಮಾನದಂಡದಿಂದ ನೋಡಿದರೂ ವ್ಯವಹಾರವಾದಲ್ಲಿನ ನಂಬಿಕೆಯು ತಪ್ಪೆಂಬುದು ಸಾಬೀತಾಗುತ್ತದೆ. ಸಾಮಾಜಿಕ ಜೀವನವು ಸಾಮಾಜಿಕ ಆಶಯಗಳನ್ನು ತೃಪ್ತಿಪಡಿಸಬೇಕಾದರೆ, ಅಧಿಕಾರಮೋಹದಿಂದ ಪ್ರೇರಿತವಾಗಿಲ್ಲದ ಸಿದ್ಧಾಂತವೊಂದನ್ನು ಆಧರಿಸಬೇಕು.

ಅಧ್ಯಾಯ ೧೭

ಅಧಿಕಾರದ ನೈತಿಕತೆ

ಈ ಹಿಂದಿನ ಪುಟಗಳಲ್ಲಿ ನಾವು ವಿಶೇಷವಾಗಿ ಅಧಿಕಾರದ ಕೆಡುಕುಗಳ ಬಗ್ಗೆ ವಿವೇಚಿಸಿದ್ದೆವು; ಅದನ್ನೋದಿದರೆ, ಒಳಿತಿಗಾಗಲೀ ಕೆಡುಕಿಗಾಗಲೀ ವ್ಯಕ್ತಿಯೊಬ್ಬನು ಬೇರೆಯವರ ಮೇಲೆ ಪ್ರಭಾವ ಬೀರುವ ಎಲ್ಲ ಪ್ರಯತ್ನಗಳನ್ನು ಪೂರ್ತಿ ಕೈಬಿಡಬೇಕೆಂದು ತೀರ್ಮಾನಿಸುವುದೇ ಉತ್ಕೃಷ್ಟ ಜೀವನಶೈಲಿಯೆಂದು ಪ್ರೇರಿಸುವ ವಿರಕ್ತ ನಿರ್ಣಯಕ್ಕೆ ಬರುವುದು ಸಹಜ. ಲಾವೋತ್ಸೆಯ ಕಾಲದಿಂದಲೂ, ಈ ವಾದಕ್ಕೆ ವಾಚಾಳಿಗಳೂ ವಿವೇಕಿಗಳೂ ಆದ ಸಮರ್ಥಕರಿದ್ದರು; ಅನೇಕ ಅನುಭಾವಿಗಳೂ, ನಿವೃತ್ತಿಮಾರ್ಗಿಗಳೂ, ವೈಯಕ್ತಿಕ ಶೌಚಕ್ಕೆ ಬೆಲೆನೀಡುವವರೂ ಇದನ್ನು ಒಂದು ಮನಃಸ್ಥಿತಿಯೆಂದು ಪರಿಭಾವಿಸಿದರೇ ವಿನಾ ಒಂದು ಚಟುವಟಿಕೆಯಾಗಿ ಅಲ್ಲ. ಅವರಲ್ಲಿ ಕೆಲವರು ಮಹೋಪಕಾರಿಗಳಿದ್ದರೆಂಬುದನ್ನು ಬಲ್ಲೆನಾದರೂ, ಅವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಅವರು ಹಾಗಿದ್ದುದಕ್ಕೆ ಕಾರಣ, ತಾವು ಅಧಿಕಾರವನ್ನು ತ್ಯಜಿಸಿದ್ದೇವೆಂದು ಭಾವಿಸಿದ್ದರೂ, ವಾಸ್ತವದಲ್ಲಿ ಅವರು ಅದರ ಕೆಲವು ರೂಪಗಳನ್ನು ಮಾತ್ರವೇ ತ್ಯಜಿಸಿದ್ದುದು; ಅದನ್ನು ಪೂರ್ತಿಯಾಗಿ ತ್ಯಜಿಸಿದ್ದಿದ್ದರೆ, ತಮ್ಮ ಸಿದ್ಧಾಂತಗಳನ್ನವರು ಉಪದೇಶಿಸುತ್ತಿರಲಿಲ್ಲ, ಮಹೋಪಕಾರಿಗಳೂ ಆಗುತ್ತಿರಲಿಲ್ಲ. ಅವರು ತ್ಯಜಿಸಿದುದು ಬಲಪ್ರಯೋಗದ ಅಧಿಕಾರವನ್ನು, ಮನವೊಲಿಸುವಿಕೆಯನ್ನಾಧರಿಸಿದ ಅಧಿಕಾರವನ್ನಲ್ಲ.

ಅಧಿಕಾರಮೋಹವೆಂದರೆ, ವ್ಯಾಪಕ ಅರ್ಥದಲ್ಲಿ, ಮಾನವ ಅಥವಾ ಮಾನವೇತರವಾದ ಬಾಹ್ಯ ಜಗತ್ತಿನ ಮೇಲೆ ತನ್ನ ಆಶಯದ ಪ್ರಭಾವವನ್ನು ಬೀರಲು ಸಾಧ್ಯವಾಗುವ ಬಯಕೆ. ಈ ಬಯಕೆಯು ಮಾನವ ಸ್ವಭಾವದ ಒಂದು ಅವಿನಾ ಭಾಗ, ಚೈತನ್ಯಶೀಲ ವ್ಯಕ್ತಿಗಳಲ್ಲಿ ಈ ಬಯಕೆಯು ಹೆಚ್ಚು ಪ್ರಮಾಣದ್ದೂ ಪ್ರಮುಖವಾದುದೂ ಆಗಿರುತ್ತದೆ. ತಕ್ಷಣವೇ ಪೂರೈಸಿಕೊಳ್ಳಲಾಗದ ಯಾವುದೇ ಬಯಕೆಯೂ ಹಾಗೆ ಮಾಡಿಕೊಳ್ಳಲು ಸಾಧ್ಯವಾಗುವ ಆಸೆಯನ್ನುಂಟುಮಾಡುತ್ತದೆ, ಹೀಗಾಗಿ ಅದು ಅಧಿಕಾರಮೋಹದ ಒಂದು ರೂಪವೇ. ಈ ಮಾತು ಅತ್ಯುಚ್ಚ

ಬಯಕೆಗಳಿಗೂ ಅತ್ಯಂತ ಕೀಳು ಬಯಕೆಗಳಿಗೂ ಅನ್ವಯಿಸುವಂಥದು. ನಿಮ್ಮ ನೆರೆಯವರನ್ನು ನೀವು ಇಷ್ಟಪಟ್ಟರೆ ಅವರನ್ನು ಸುಖವಾಗಿರಿಸುವ ಅಧಿಕಾರದ ಬಯಕೆ ನಿಮ್ಮಲ್ಲುಂಟಾಗುತ್ತದೆ. ಆದ್ದರಿಂದ ಎಲ್ಲ ಬಗೆಯ ಅಧಿಕಾರಮೋಹವನ್ನು ಖಂಡಿಸುವುದು ಎಂದರೆ ನೆರೆಯವರನ್ನು ಇಷ್ಟಪಡುವುದನ್ನೇ ಖಂಡಿಸಿದಂತೆಯೇ ಆಗುತ್ತದೆ.

ಆದರೆ ಅಧಿಕಾರವನ್ನು ಒಂದು ಸಾಧನವಾಗಿ ಬಯಸುವುದಕ್ಕೂ ಅದನ್ನೇ ಪರಮಗುರಿಯಾಗಿ ಹೊಂದಿರುವುದಕ್ಕೂ ವ್ಯತ್ಯಾಸವಿದೆ. ಅದನ್ನು ಒಂದು ಸಾಧನವಾಗಿ ಬಯಸುವ ವ್ಯಕ್ತಿಯು ಮೊದಲು ಬೇರೊಂದು ಬಯಕೆಯನ್ನು ಹೊಂದಿರುತ್ತಾನೆ, ಆನಂತರ ಅದನ್ನು ಸಾಧಿಸುವ ಬಯಕೆ ಅವನಲ್ಲುದಿಸುತ್ತದೆ. ಆದರೆ ಅದನ್ನು ಪರಮಗುರಿಯಾಗಿ ಹೊಂದಿರುವ ವ್ಯಕ್ತಿಯು ಅದನ್ನು ಸಾಧ್ಯವಾಗಿಸಿಕೊಳ್ಳಲು ಬೇಕಾದ ಉದ್ದೇಶವನ್ನು ಆಯ್ದುಕೊಳ್ಳುತ್ತಾನೆ. ನಿದರ್ಶನಕ್ಕೆ, ರಾಜಕಾರಣದಲ್ಲಿ ಒಬ್ಬ ವ್ಯಕ್ತಿಯು ಕೆಲವು ಕ್ರಮಗಳನ್ನು ತೆಗೆದುಕೊಳ್ಳಲು ಬಯಸುತ್ತಾನೆ, ಆ ಕಾರಣದಿಂದಾಗಿ ಅವನು ಸಾರ್ವಜನಿಕ ವ್ಯವಹಾರಗಳಲ್ಲಿ ಭಾಗಿಯಾಗುವಂತಾಗುತ್ತದೆ; ಅದೇ ಕೇವಲ ವೈಯಕ್ತಿಕ ಯಶಸ್ಸನ್ನು ಬಯಸುವ ವ್ಯಕ್ತಿಯು ಆ ಉದ್ದೇಶಸಾಧನೆಗೆ ಅತ್ಯಂತ ಸೂಕ್ತವಾದ ಕಾರ್ಯಕ್ರಮವನ್ನು ಆಯ್ದುಕೊಳ್ಳುತ್ತಾನೆ.

ಕಾಡಿನಲ್ಲಿ ಕ್ರಿಸ್ತನ ಮುಂದೆ ನಿಂತ ಮೂರನೆಯ ಆಮಿಷವು ಈ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ. ಪತನಗೊಂಡು ಸೈತಾನನಿಗೆ ಶರಣಾದರೆ ಇಡೀ ಭೂಮಂಡಲವನ್ನೇ ಅವನಿಗೆ ಒಪ್ಪಿಸುವ ಆಮಿಷ ತೋರಿಸಲಾಗುತ್ತದೆ; ಅಂದರೆ ಕೆಲವು ಉದ್ದೇಶಗಳನ್ನು ಸಾಧಿಸಲು ಬೇಕಾದ ಅಧಿಕಾರವನ್ನು ಅವನಿಗೆ ತೋರಿಸಲಾಗಿದೆ, ಆದರೆ ಅವನ ದೃಷ್ಟಿಯಲ್ಲಿರುವವರದನ್ನಲ್ಲ. ಪ್ರತಿ ಆಧುನಿಕ ವ್ಯಕ್ತಿಯೂ ಎದುರಿಸುವ ಆಮಿಷ ಇದೇ, ಕೆಲವೊಮ್ಮೆ ಢಾಳಾಗಿ, ಮತ್ತೆ ಕೆಲವೊಮ್ಮೆ ಸೂಕ್ಷ್ಮವಾಗಿ. ಅವನು ಸೋಷಿಯಲಿಸ್ಟ್ ಆಗಿದ್ದರೂ ಕನ್ಸರ್ವೇಟಿವ್ ಪತ್ರಿಕೆಯೊಂದರಲ್ಲಿ ಹುದ್ದೆಯನ್ನು ಒಪ್ಪಿಕೊಳ್ಳಬಹುದು; ಇದು ಸುಮಾರು ಢಾಳಾದ ರೂಪದ್ದು ಎನ್ನಬಹುದು. ಸೋಷಿಯಲಿಸಂನ ಸಾಧನೆಗಳ ಬಗ್ಗೆ ಅವನು ಶಾಂತಿಯುತವಾಗಿ ಖೇದವನ್ನು ವ್ಯಕ್ತಪಡಿಸಿ ಕಮ್ಯುನಿಸ್ಟ್ ಆಗಬಹುದು, ಆದರೆ ಅದು ಈ ಮೂಲಕ ತನ್ನ ಉದ್ದೇಶಸಾಧನೆ ಮಾಡಿಕೊಳ್ಳುವ ಆಸೆಯಿಂದಲ್ಲ, ಏನನ್ನಾದರೂ ಸಾಧಿಸಬಹುದು ಎಂಬ ಕಾರಣಕ್ಕೆ. ತಾನು ಇಷ್ಟಪಡುವ ಆದರೆ ಸಾಧಿಸಲಾರದ ಗುರಿಯನ್ನು ಪ್ರತಿಪಾದಿಸುವುದು ತಾನು ಸಾಧಿಸಬಹುದಾದ ಆದರೆ ಇಷ್ಟಪಡದ ಗುರಿಯನ್ನು ಪ್ರತಿಪಾದಿಸುವುದಕ್ಕಿಂತ ಹೆಚ್ಚು

ವ್ಯರ್ಥವೆಂದು ಅವನು ಭಾವಿಸುತ್ತಾನೆ. ಆದರೆ ವೈಯಕ್ತಿಕವಲ್ಲದ ಅವನ ಗುರಿಗಳು ಪ್ರಬಲವಾದವೂ ನಿರ್ದಿಷ್ಟವೂ ಆಗಿದ್ದರೆ, ಅವು ಸಾಧಿತವಾಗುವವರೆಗೆ ಅವನ ಅಧಿಕಾರಮೋಹವು ತೃಪ್ತಿಗೊಳ್ಳುವುದಿಲ್ಲ, ಮತ್ತು ಯಶಸ್ಸನ್ನು ಪಡೆಯುವುದಕ್ಕಾಗಿಯೇ ತನ್ನ ಗುರಿಗಳನ್ನು ಬಲಾಯಿಸುವುದು ಅವನಿಗೆ ಪಕ್ಷಗೇಡಿತನದ ಕಾರ್ಯವಾಗಿ ಕಾಣಿಸುತ್ತದೆ, ಅದನ್ನು ಸೈತಾನನನ್ನು ಪೂಜಿಸುವುದಕ್ಕೆ ಹೋಲಿಸಬಹುದು.

ಅಧಿಕಾರಮೋಹವು ಜನಹಿತಕಾರಿಯಾಗಬೇಕಾದರೆ ಅದು ಅಧಿಕಾರವಲ್ಲದ ಬೇರೊಂದು ಗುರಿಯನ್ನು ಹೊಂದಿರಬೇಕು. ಅಧಿಕಾರಮೋಹವು ತನ್ನಷ್ಟಕ್ಕೆ ತಾನೇ ಇರಬಾರದು ಎಂಬುದು ನನ್ನ ಅರ್ಥವಲ್ಲ, ಏಕೆಂದರೆ ಕ್ರಿಯಾತ್ಮಕ ಬದುಕಿನಲ್ಲಿ ಈ ಆಸೆಯುಂಟಾಗುವುದು ನಿಶ್ಚಿತ; ಆದರೆ ಮತ್ತೊಂದರ ಬಗೆಗಿನ ಬಯಕೆಯು ಅದನ್ನು ಸಾಧಿಸಲಾರದ ಅಧಿಕಾರದ ಬಗ್ಗೆ ಅತೃಪ್ತಿಯನ್ನುಂಟುಮಾಡುವಷ್ಟು ತೀವ್ರವಾಗಿರಬೇಕು ಎಂಬುದು ನನ್ನ ಅಭಿಪ್ರಾಯ.

ಅಧಿಕಾರವಲ್ಲದೆ ಬೇರೊಂದು ಗುರಿಯಿರುವುದಷ್ಟೇ ಸಾಲದು; ಸಾಧಿತವಾದರೆ ಅದು ಇತರರ ಬಯಕೆಗಳನ್ನೂ ಪೂರೈಸುವಂತಹ ರೂಪದಲ್ಲಿರಬೇಕಾದುದು ಆವಶ್ಯಕ. ನೀವು ಹೊಸತೊಂದನ್ನು ಕಂಡುಹಿಡಿದರೆ, ಒಂದು ಕಲಾಕೃತಿಯನ್ನು ರಚಿಸಿದರೆ, ಶ್ರಮವನ್ನುಳಿಸುವ ಯಂತ್ರವೊಂದನ್ನು ನಿರ್ಮಿಸಿದರೆ, ವೈಮನಸ್ಯದಿಂದ ಕೂಡಿದ ಎರಡು ಬಣಗಳ ಮಧ್ಯೆ ಸಾಮರಸ್ಯ ಮೂಡಿಸಿದರೆ, ಅಂತಹ ಯಶಸ್ಸು ನಿಮ್ಮದನ್ನಲ್ಲದೆ ಇತರರ ಬಯಕೆಯನ್ನೂ ತೃಪ್ತಿಪಡಿಸುತ್ತದೆ. ಅಧಿಕಾರಮೋಹವು ಜನಹಿತಕಾರಿಯಾಗಬೇಕಾದರೆ ಅದು ಈ ಎರಡನೆಯ ಷರತ್ತನ್ನೂ ಪೂರೈಸಬೇಕು; ವಿಶಾಲಾರ್ಥದಲ್ಲಿ ಹೇಳಬೇಕಾದರೆ, ಇತರರ ಬಯಕೆಗಳೊಡನೆ ಹೊಂದಿಕೊಳ್ಳುವ, ಸಾಧಿತವಾದರೆ ಇತರರ ಮೇಲೆಯೂ ಪ್ರಭಾವ ಬೀರುವ, ಗುರಿಯೊಡನೆ ಅದು ತಳಕುಹಾಕೊಕೊಂಡಿರಬೇಕು.

ಮೂರನೆಯ ಷರತ್ತೂ ಇದೆ, ಆದರೆ ಅದರ ಸ್ವರೂಪನಿರ್ಧಾರ ಕಷ್ಟ. ನಿಮ್ಮ ಗುರಿಸಾಧನೆಗಾಗಿ ಬಳಸಿಕೊಳ್ಳುವ ಸಾಧನವು ಗುರಿಯ ಉದಾತ್ತತೆಯನ್ನು ಅಳಿಸಿಹಾಕುವಷ್ಟು ಕೆಟ್ಟ ಪರಿಣಾಮಗಳನ್ನು ಬೀರಬಾರದು. ವ್ಯಕ್ತಿಯು ಮಾಡುವ ಕಾರ್ಯಗಳಿಂದಾಗಿಯೂ ಅವನು ಅನುಭವಿಸುವ ಕಷ್ಟಗಳಿಂದಾಗಿಯೂ ಅವನ ವ್ಯಕ್ತಿತ್ವವು ಸತತವಾಗಿ ಬದಲಾಗುತ್ತಿರುತ್ತದೆ. ಹಿಂಸೆ–ಅನ್ಯಾಯಗಳಿಂದ ಹಿಂಸೆ–ಅನ್ಯಾಯಗಳೇ ಮೂಡುತ್ತವೆ, ಅದರ ಬಲಿಪಶುಗಳಿಗೆ ಹೇಗೋ ಅದನ್ನು ಮಾಡುವವರಿಗೂ. ಸೋಲು

ಪೂರ್ಣವಾದುದಲ್ಲವಾದರೆ ರೊಚ್ಚು-ದ್ವೇಷಗಳನ್ನು ಪ್ರೇರಿಸುತ್ತದೆ, ಅದೇ ಪೂರ್ಣವಾದುದಾದರೆ ಭಾವನಾಶೂನ್ಯತೆ ಮತ್ತು ನಿಷ್ಕ್ರಿಯತೆಗಳನ್ನು ತರುತ್ತದೆ. ಯುದ್ಧದ ಮೂಲೋದ್ದೇಶಗಳು ಎಷ್ಟೇ ಉದಾತ್ತವಾದುದಾಗಿರಲಿ, ಬಲಪ್ರಯೋಗದಿಂದ ಪಡೆದ ಗೆಲವಿನಿಂದ ಸೋತವರ ಬಗ್ಗೆ ಕ್ರೌರ್ಯ ಮತ್ತು ತಿರಸ್ಕಾರಗಳುಂಟಾಗುತ್ತವೆ. ಈ ಎಲ್ಲ ಪರಿಗಣನೆಗಳಿಂದ, ಬಲಪ್ರಯೋಗದಿಂದ ಎಂದೂ ಒಳ್ಳೆಯ ಉದ್ದೇಶವೂ ನೆರವೇರುವುದಿಲ್ಲ ಎಂಬುದನ್ನು ಸಾಧಿಸಿ ತೋರಿಸುವುದಿಲ್ಲವಾದರೂ, ಬಲಪ್ರಯೋಗವು ಅಪಾಯಕಾರಿಯೆಂಬುದನ್ನೂ ಅದರ ಅತಿರೇಕದಿಂದ ಸಂಘರ್ಷ ಕೊನೆಗೊಳ್ಳುವ ಮೊದಲೇ ಒಳ್ಳೆಯ ಉದ್ದೇಶಗಳು ಕಣ್ಮರೆಯಾಗುತ್ತವೆಂಬುದನ್ನೂ ನಿಶ್ಚಿತವಾಗಿ ತೋರಿಸುತ್ತದೆ.

ಅಲ್ಪ ಪ್ರಮಾಣದ ಬಲಪ್ರಯೋಗವಿಲ್ಲದೆ ಯಾವುದೇ ನಾಗರಿಕ ಸಮಾಜವು ಉಳಿಯಲಾರದು, ಯಾಕೆಂದರೆ ಅಂಕೆಯಿಲ್ಲದಿದ್ದರೆ ಅಲ್ಲಿನ ಪಾತಕಿಗಳೂ ಸಮಾಜಘಾತಕ ವ್ಯಕ್ತಿಗಳೂ ಸೇರಿ ಸಮಾಜವನ್ನು ಅನಾಯಕತ್ವ-ಅನಾಗರಿಕತೆಗಳಿಗೆ ದೂಡಿಬಿಡುತ್ತಾರೆ. ಬಲಪ್ರಯೋಗವು ಅನಿವಾರ್ಯವಾಗಿರುವೆಡೆಗಳಲ್ಲಿ ಅದನ್ನು ಸಮಾಜವು ಒಪ್ಪಿಕೊಂಡ ಅಪರಾಧ ಕಾನೂನುಗಳಿಗನುಗುಣವಾಗಿ ಸೂಕ್ತ ಪ್ರಾಧಿಕಾರವು ಮಾತ್ರ ಪ್ರಯೋಗಿಸಬೇಕು. ಈ ಸಂದರ್ಭದಲ್ಲಿ ಎರಡು ತೊಂದರೆಗಳು ಎದುರಾಗುತ್ತವೆ: ಒಂದು, ಬಲಪ್ರಯೋಗದ ಅತ್ಯಂತ ಪ್ರಮುಖ ಉಪಯೋಗಗಳು ಸಮಾನ ಸರ್ಕಾರವಾಗಲೀ ಸೂಕ್ತ ಕಾನೂನು ಅಥವಾ ಪ್ರಾಧಿಕಾರವಾಗಲೀ ಇರದ ಬೇರೆ ಬೇರೆ ದೇಶಗಳ ನಡುವೆ ಇರಬೇಕು; ಎರಡು, ಅದು ಸರ್ಕಾರದ ಕೈಯಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದರೆ ಸಮಾಜದ ಉಳಿದವರ ಮೇಲೆ ಸ್ವಲ್ಪಮಟ್ಟಿಗೆ ದೌರ್ಜನ್ಯ ನಡೆಸಲು ಕಾರಣವಾಗುತ್ತದೆ. ಈ ಎರಡೂ ತೊಂದರೆಗಳ ಬಗ್ಗೆ ನಾನು ಮುಂದಿನ ಅಧ್ಯಾಯದಲ್ಲಿ ಚರ್ಚಿಸುತ್ತೇನೆ. ಈ ಅಧ್ಯಾಯದಲ್ಲಿ ನನ್ನ ಗಮನವಿರುವುದು ವೈಯಕ್ತಿಕ ನೈತಿಕತೆಯೊಡನೆ ಹೊಂದಿರುವ ಸಂಬಂಧದ ಹಿನ್ನೆಲೆಯಲ್ಲಿ ಅಧಿಕಾರದ ಬಗ್ಗೆ ಪರಿಶೀಲಿಸುವುದು, ಸರ್ಕಾರದ ಜೊತೆಗಿನ ಸಂಬಂಧದ ಹಿನ್ನೆಲೆಯಲ್ಲಲ್ಲ.

ಅಧಿಕಾರಮೋಹವು, ಕಾಮಪ್ರವೃತ್ತಿಯಂತೆಯೇ, ವ್ಯಕ್ತಿಯ ಕಾರ್ಯಗಳನ್ನು ಭಾವಿಸಿಕೊಳ್ಳುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರುವ ತೀವ್ರ ಪ್ರೇರಕಶಕ್ತಿಗಳಾಗಿವೆ. ಹೀಗಾಗಿ, ಅತ್ಯುತ್ತಮ ಪರಿಣಾಮ ಬೀರುವ ನೈತಿಕತೆಯೆಂದರೆ ಸಕಾರಣವಾಗಿ ಸಮರ್ಥಿಸಬಹುದಾದುಕ್ಕಿಂತಲೂ

ಅಧಿಕಾರಮೋಹಕ್ಕೆ ವಿರುದ್ಧವಾಗಿರುವವನದು: ಏಕೆಂದರೆ, ಅಧಿಕಾರವನ್ನು ಪಡೆಯುವ ದಿಸೆಯಲ್ಲಿ ಜನರು ತಮ್ಮದೇ ನಿಯಮಗಳ ವಿರುದ್ಧ ನಡೆದುಕೊಳ್ಳುವುದು ಖಚಿತ, ಅವರ ನಿಯಮಗಳು ತೀರ ನಿಷ್ಠುರವಾಗಿದ್ದರೆ ಕ್ರಿಯೆಗಳು ಸರಿಯಾದುದರ ಕಡೆಗಿರಬಹುದು ಎನ್ನಬಹುದು. ಆದರೆ ನೈತಿಕ ಸಿದ್ಧಾಂತವೊಂದನ್ನು ಪ್ರತಿಪಾದಿಸುವ ವ್ಯಕ್ತಿಯು ತನ್ನ ಮೇಲೆ ಅಂತಹ ವಿಷಯಗಳು ಪ್ರಭಾವ ಬೀರಲು ಅವಕಾಶ ನೀಡಲಾರ, ಹಾಗೇನಾದರೂ ಅವಕಾಶವಿತ್ತರೆ, ಸನ್ನಡತೆಯ ಹಿತದೃಷ್ಟಿಯಿಂದ ಪ್ರಜ್ಞಾಪೂರ್ವಕವಾಗಿಯೇ ಸುಳ್ಳು ಹೇಳಬೇಕಾಗುತ್ತದೆ. ಸತ್ಯವಂತಿಕೆಗಿಂತ ಸ್ವಂತ ಏಳಿಗೆಯನ್ನು ಸಾಧಿಸುವ ಬಯಕೆಯು ಗುರುಗಳು ಹಾಗೂ ಬೋಧಕರಿಗಿರುವ ರೋಗ; ಅದನ್ನು ಸೈದ್ಧಾಂತಿಕವಾಗಿ ಸಮರ್ಥಿಸಿ ಏನು ಹೇಳಿದರೂ, ವಾಸ್ತವದಲ್ಲಿ ಅದು ಸರಿಪಡಿಸಲಾಗದಷ್ಟು ಹಾನಿಕಾರಕವಾದುದು. ಅಧಿಕಾರಮೋಹದಿಂದಾಗಿ ಜನರು ಕೆಟ್ಟದಾಗಿ ವರ್ತಿಸಿದ್ದಾರೆಂಬುದನ್ನು ಮುಂದೆಯೂ ಹಾಗೆಯೇ ವರ್ತಿಸುವರೆಂಬುದನ್ನು ಒಪ್ಪಲೇಬೇಕು; ಆದರೆ ಈ ಕಾರಣದಿಂದ ಜನಹಿತಕಾರಿಯಾದ ಅಥವಾ ಕೊನೆಯಪಕ್ಷ ಕನಿಷ್ಠ ಅಪಾಯಕಾರಿಯಾದ ರೂಪಗಳ ಮತ್ತು ಪರಿಸ್ಥಿತಿಗಳ ಅಧಿಕಾರಮೋಹವು ಅನಪಕ್ಷಣೀಯವೆಂದು ವಾದಿಸುವುದು ಸರಿಯಲ್ಲ.

ವ್ಯಕ್ತಿಯ ಅಧಿಕಾರಮೋಹವು ತಾಳಬಹುದಾದ ರೂಪಗಳು ಅವನ ಮನೋಧರ್ಮವನ್ನು, ಅವಕಾಶಗಳು ಮತ್ತವನ ಕೌಶಲವನ್ನವಲಂಬಿಸಿರುತ್ತದೆ; ಅಲ್ಲದೆ, ಅವನ ಮನೋಭಾವವು ಬಹುತೇಕ ಪರಿಸ್ಥಿತಿಗಳಿಂದ ರೂಪಿತವಾಗಿರುತ್ತದೆ. ಹೀಗಾಗಿ ವ್ಯಕ್ತಿಯ ಅಧಿಕಾರಮೋಹವು ನಿರ್ದಿಷ್ಟ ಮಾರ್ಗಗಳಲ್ಲಿ ಸಾಗುವಂತೆ ಮಾಡುವುದು ಎಂದರೆ ಅವನಿಗೆ ಸಮರ್ಪಕ ಪರಿಸ್ಥಿತಿಗಳು, ಅವಕಾಶಗಳು ಸೂಕ್ತ ರೀತಿಯ ಕೌಶಲಗಳನ್ನು ಒದಗಿಸುವುದು ಎಂದರ್ಥ. ಇದರಿಂದ ಹುಟ್ಟುಗುಣವನ್ನು ಹೊರಗಿರಿಸುತ್ತದೆ, ಅದನ್ನು ಚಿಕಿತ್ಸೆಗೊಳಪಡಿಸಿ ಉತ್ತಮಪಡಿಸುವುದು ಸಂತತಿವಿಜ್ಞಾನಕ್ಕೆ ಸಂಬಂಧಿಸಿದ ವಿಷಯ; ಪ್ರಯೋಜನಕಾರಿಯಾದ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲು ಈ ಮೇಲಿನ ಮಾರ್ಗವು ವಿಫಲವೆನ್ನಿಸುವುದು ಪ್ರಾಯಶಃ ಕೇವಲ ಕಡಿಮೆ ಸಂಖ್ಯೆಯ ಜನರಲ್ಲಿ ಮಾತ್ರ.

ಮೊದಲಿಗೆ ಮನೋಧರ್ಮದ ಮೇಲೆ ಪ್ರಭಾವ ಬೀರುವ ಪರಿಸ್ಥಿತಿಗಳ ಕುರಿತು: ಕ್ರೌರ್ಯಪ್ರವೃತ್ತಿಯ ಮೂಲದಲ್ಲಿ ಸಾಮಾನ್ಯವಾಗಿ ದುರದೃಷ್ಟಕರ ಬಾಲ್ಯವೋ, ಪದೇ ಪದೇ ನರಳಿಕೆ ಮತ್ತು ಸಾವುಗಳನ್ನು

ನೋಡುವ ಹಾಗೂ ಹೊಂದುವ ಅಂತರ್ಯುದ್ಧದಂತಹ ಅನುಭವಗಳೋ ಇರುತ್ತವೆ; ಕೌಮಾರ್ಯ ಹಾಗೂ ಪೂರ್ವಯೌವನದಲ್ಲಿ ಕಸುವನ್ನು ಅಭಿವ್ಯಕ್ತಿಸಲು ತಕ್ಕ ಅವಕಾಶಗಳಿಲ್ಲದಾಗಲೂ ಇದೇ ಪರಿಣಾಮವುಂಟಾಗುತ್ತದೆ. ತಮ್ಮ ಬಾಲ್ಯದಲ್ಲಿ ವಿವೇಕಯುತವಾದ ಆರಂಭಿಕ ಶಿಕ್ಷಣವನ್ನು ಹೊಂದಿದ್ದರೆ ಮತ್ತು ಜೀವನೋಪಾಯವನ್ನು ಕಂಡುಕೊಳ್ಳಲು ಕಷ್ಟವಾಗಿರದಿದ್ದರೆ ವ್ಯಕ್ತಿಗಳು ಕ್ರೂರಿಗಳಾಗುವುದು ಕಡಿಮೆ ಎಂಬುದು ನನ್ನ ಭಾವನೆ. ಈ ಪರಿಸ್ಥಿತಿಗಳಿದ್ದಲ್ಲಿ, ಬಹುಪಾಲು ಜನರ ಅಧಿಕಾರಮೋಹವು ಸಾಧ್ಯವಾದರೆ ಜನಹಿತಕಾರಿಯಾದ, ಅಥವಾ ಕನಿಷ್ಠ ಪಕ್ಷ, ಮಾರಕವಲ್ಲದ ರೂಪವನ್ನು ಪಡೆಯಲು ಇಚ್ಛಿಸುತ್ತದೆ.

ಅವಕಾಶದ ಪ್ರಶ್ನೆಗೆ ಧನಾತ್ಮಕ ಹಾಗೂ ಋಣಾತ್ಮಕ ಎರಡು ಮಗ್ಗುಲುಗಳೂ ಇವೆ: ದರೋಡೆಕೋರ, ದಗಲುಬಾಜಿ ಅಥವಾ ಸರ್ವಾಧಿಕಾರಿಯಾಗುವ ಅವಕಾಶಗಳಿಲ್ಲದಿರುವುದು, ಅಂತೆಯೇ ಕಡಿಮೆ ವಿನಾಶಕಾರಕ ಉಪಜೀವನಕ್ಕೆ ಅವಕಾಶಗಳಿರುವುದು ಮುಖ್ಯ. ಕಾನೂನುಬದ್ಧ ದಗಲಬಾಜಿತನವನ್ನು ನಿರೋಧಿಸಬಲ್ಲ ಬಲಿಷ್ಠ ಸರ್ಕಾರ ಹಾಗೂ ಸಾಧ್ಯವಾದಷ್ಟು ಮಂದಿ ಯುವಜನತೆಗೆ ಆಕರ್ಷಕ ಜೀವನೋಪಾಯಗಳು ಸಿಕ್ಕುವ ಅವಕಾಶವಿರುವ ವಿವೇಕಯುತ ಅರ್ಥವ್ಯವಸ್ಥೆಗಳಿರಬೇಕು. ಬಡವಾಗುತ್ತಿರುವ ದೇಶಕ್ಕಿಂತ ಸಂಪದ್ಭರಿತವಾಗುತ್ತಿರುವ ದೇಶದಲ್ಲಿ ಇದು ಹೆಚ್ಚು ಸುಲಭ. ಒಂದು ಸಮುದಾಯದ ನೈತಿಕಮಟ್ಟವನ್ನು ಉತ್ತಮಪಡಿಸಲು ಸಂಪತ್ತು ಬೆಳೆಯುವುದಕ್ಕಿಂತ ಮಿಗಿಲಾದ ಕ್ರಮವಿಲ್ಲ, ಹಾಗೆಯೇ ಅದನ್ನು ಹಾಳುಗೆಡವಲು ಸಂಪತ್ತು ಕುಗ್ಗುವ ಪರಿಸ್ಥಿತಿಗಿಂತ ಕೆಟ್ಟುದಿಲ್ಲ. ರೈನ್‌ನಿಂದ ಪೆಸಿಫಿಕ್‌ವರೆಗೆ ಕಾಣುವ ಈಗಿನ ಜನರ ಒರಟು ಮನೋಭಾವಕ್ಕೆ ಕಾರಣ ಬಹಳ ಜನರು ತಮ್ಮ ತಾಯ್ತಂದೆಯರಿಗಿಂತ ಬಡವರಾಗಿರುವ ಪರಿಸ್ಥಿತಿ.

ಅಧಿಕಾರಮೋಹವು ತಾಳುವ ರೂಪಗಳನ್ನು ನಿರ್ಧರಿಸುವ ಕೌಶಲವು ಬಹು ದೊಡ್ಡದು. ವಿಶಾಲಾರ್ಥದಲ್ಲಿ ಹೇಳುವುದಾದರೆ, ಆಧುನಿಕ ಯುದ್ಧದ ಕೆಲವು ಬಗೆಗಳನ್ನು ಹೊರತುಪಡಿಸಿದರೆ, ವಿನಾಶಕ್ಕೆ ಕೌಶಲದ ಅಗತ್ಯವಿಲ್ಲ, ನಿರ್ಮಾಣಕ್ಕೇ ಅದು ಬೇಕಾಗುವುದು, ಶ್ರೇಷ್ಠ ಬಗೆಯದಕ್ಕೆ ಅಪಾರ ಪ್ರಮಾಣದಲ್ಲಿ. ಕಷ್ಟಕರ ಕೌಶಲಗಳನ್ನು ಕರಗತ ಮಾಡಿಕೊಂಡವರಲ್ಲಿ ಬಹಳ ಮಂದಿ ಅದನ್ನು ಬಳಸುವುದರಲ್ಲಿ ಆನಂದವನ್ನು ಕಾಣುತ್ತಾರೆ, ಅಲ್ಲದೆ ಸುಲಭ ಕಾರ್ಯಗಳಿಗೂ ಅದನ್ನು ಬಳಸುವುದನ್ನು ಇಚ್ಛಿಸುತ್ತಾರೆ; ಏಕೆಂದರೆ ಕಷ್ಟಕರ ಕೌಶಲವು, ಮಿಕ್ಕೆಲ್ಲದರಲ್ಲಿ

ಸಮಾನಾಂಶಗಳಿದ್ದಲ್ಲಿ, ಅಧಿಕಾರಮೋಹಕ್ಕೆ ಹೆಚ್ಚು ತೃಪ್ತಿ ನೀಡುವಂತಿರುತ್ತದೆ. ವಿಮಾನದಿಂದ ಬಾಂಬ್ ಎಸೆಯುವುದನ್ನು ಕಲಿತವನು ಶಾಂತಿಕಾಲದಲ್ಲಿ ದೊರೆಯಬಹುದಾದ ಸಪ್ಪೆ ಕೆಲಸಕ್ಕಿಂತ ಇದನ್ನೇ ಇಷ್ಟಪಡುತ್ತಾನೆ; ಆದರೆ, ನಿದರ್ಶನಕ್ಕೆ, ಕಾಮಾಲೆ ಜ್ವರದ ವಿರುದ್ಧ ಹೋರಾಡಲು ಕಲಿತವನು ಯುದ್ಧಕಾಲದಲ್ಲಿ ಸೈನ್ಯದ ವೈದ್ಯನಾಗಿ ಕೆಲಸಮಾಡುವುದಕ್ಕಿಂತ ಅದನ್ನೇ ಹೆಚ್ಚು ಇಷ್ಟಪಡುತ್ತಾನೆ. ಆಧುನಿಕ ಯುದ್ಧಗಳಿಗೆ ಅಪಾರ ಕೌಶಲವು ಆವಶ್ಯಕ, ಇದರಿಂದ ವಿವಿಧ ಬಗೆಯ ಪರಿಣತರಿಗೆ ಅದನ್ನು ಹೆಚ್ಚು ಆಕರ್ಷಕವಾಗಿ ಮಾಡಲು ಸಹಾಯಕ. ಯುದ್ಧ ಹಾಗೂ ಶಾಂತಿಕಾಲಗಳೆರಡರಲ್ಲಿಯೂ ಗಣನೀಯ ಪ್ರಮಾಣದ ವೈಜ್ಞಾನಿಕ ಕೌಶಲದ ಆವಶ್ಯಕತೆಯಿರುತ್ತದೆ; ಮುಂದಿನ ಯುದ್ಧದಲ್ಲಿ ತನ್ನ ಅನ್ವೇಷಣೆ ಅಥವಾ ಆವಿಷ್ಕಾರಗಳನ್ನು ಹೆಚ್ಚು ವಿನಾಕಾರಕ ಬಗೆಯಲ್ಲಿ ಬಳಸಿಕೊಳ್ಳುವುದಿಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳುವ ಯಾವ ವಿಧಾನವೂ ಶಾಂತಿಪ್ರೇಮಿ ವಿಜ್ಞಾನಿಗೆ ಇರುವುದಿಲ್ಲ. ಆದರೂ, ಒಟ್ಟಾರೆ ಹೇಳುವುದಾದರೆ, ಶಾಂತಿಕಾಲದಲ್ಲಿ ಹಾಗೂ ಯುದ್ಧಕಾಲದಲ್ಲಿ ಹೆಚ್ಚು ಪ್ರಸ್ತುತವೆನಿಸುವ ಕೌಶಲಗಳಲ್ಲಿ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸವು ಇರುವವರೆಗೂ, ಮೊದಲನೆಯ ಬಗೆಯವನ ಅಧಿಕಾರಮೋಹವು ಅವನನ್ನು ಶಾಂತಿಗಾಗಿ ತನ್ನ ಕೌಶಲವನ್ನು ಬಳಸಿಕೊಳ್ಳುವಂತೆ ಮಾಡಿದರೆ, ಎರಡನೆಯ ಬಗೆಯವನು ಎರಡನೆಯದನ್ನು ಇಷ್ಟಪಡುವಂತೆ ಮಾಡುತ್ತದೆ. ಈ ರೀತಿಗಳಲ್ಲಿ, ಅಧಿಕಾರಮೋಹವು ಯಾವ ರೂಪವನ್ನು ತಳೆಯುತ್ತೆಂಬುದನ್ನು ನಿರ್ಧರಿಸುವಲ್ಲಿ ತಾಂತ್ರಿಕ ತರಬೇತಿಯು ಪ್ರಮುಖ ಪಾತ್ರ ವಹಿಸುತ್ತದೆ.

ಮನವೊಲಿಸುವಿಕೆ ಮತ್ತು ಬಲಪ್ರಯೋಗಗಳು ವಿಭಿನ್ನ ಎನ್ನುವುದು ಪೂರ್ತಿ ಸತ್ಯವೇನಲ್ಲ. ಮನವೊಲಿಸುವಿಕೆಯ ಅನೇಕ ಬಗೆಗಳು – ಎಲ್ಲರೂ ಒಪ್ಪುವಂತಹವು ಕೂಡ – ವಾಸ್ತವವಾಗಿ ಒಂದು ಬಗೆಯ ಬಲಪ್ರಯೋಗವೇ. ನಾವು ನಮ್ಮ ಮಕ್ಕಳಿಗೆ ಏನು ಮಾಡುತ್ತೇವೆಂಬುದರ ಬಗ್ಗೆ ಆಲೋಚಿಸಿ. "ಕೆಲವರು ಭೂಮಿ ಗುಂಡಗಿದೆಯೆಂದು ಭಾವಿಸುತ್ತಾರೆ, ಕೆಲವರು ಚಪ್ಪಟೆ ಎನ್ನುತ್ತಾರೆ; ನೀನು ದೊಡ್ಡವನಾದ ಮೇಲೆ, ಇಷ್ಟವಾದರೆ ನೀನು ಆಧಾರಗಳನ್ನು ಪರೀಕ್ಷಿಸಿ ನಿನ್ನದೇ ತೀರ್ಮಾನಕ್ಕೆ ಬರಬಹುದು" ಎಂದೇನೂ ನಾವು ಹೇಳುವುದಿಲ್ಲ. ಅದರ ಬದಲು, "ಭೂಮಿ ಗುಂಡಗಿದೆ" ಎಂದೇ ಹೇಳುತ್ತೇವೆ. ನಮ್ಮ ಮಕ್ಕಳು ಆಧಾರಗಳನ್ನು ಪರಿಶೀಲಿಸಬಲ್ಲಷ್ಟು ದೊಡ್ಡವರಾಗುವ ಹೊತ್ತಿಗೆ, ನಮ್ಮ ಪ್ರಚಾರವು ಅವರ ಮನಸ್ಸನ್ನು ಮುಚ್ಚಿಬಿಟ್ಟಿರುತ್ತದೆ, ಹೀಗಾಗಿ 'ಚಪ್ಪಟೆ ಭೂಮಿ ಸಂಘ'ದ ಮನವೊಲಿಕೆಯ ವಾದವು ಯಾವ ಪರಿಣಾಮವನ್ನೂ ಬೀರಲಾರವು. "ಮೂಗಿನಲ್ಲಿ ಬೆರಳು

ಹಾಕಿಕೊಳ್ಳಬೇಡ" "ಬಟಾಣಿ ಕಾಳುಗಳನ್ನು ಚಾಕುವಿನ ಸಹಾಯದಿಂದ ತಿನ್ನಬೇಡ" ಎನ್ನುವಂತಹ ಬಹು ಮುಖ್ಯವೆಂದು ನಾವು ಭಾವಿಸುವ ನೀತಿ ಪರಿಕಲ್ಪನೆಗಳಿಗೂ ಈ ಮಾತು ಅನ್ವಯಿಸುತ್ತದೆ. ಬಟಾಣಿ ಕಾಳುಗಳನ್ನು ಚಾಕುವಿನ ಸಹಾಯದಿಂದ ತಿನ್ನುವುದರಲ್ಲಿ ಏನಾದರೂ ಅನುಕೂಲಗಳಿರಬಹುದು, ಅದು ನನಗೆ ತಿಳಿಯದು, ಆದರೆ ಬಾಲ್ಯದ ಮನವೊಲಿಕೆಯ ಮಾಂತ್ರಿಕ ಪರಿಣಾಮವು ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವುದರಿಂದ ನನ್ನನ್ನು ದೂರವಿರಿಸಿದೆ.

ಅಧಿಕಾರದ ಕೆಲವು ಬಗೆಗಳು ನ್ಯಾಯಯುತವಾದವು ಮಿಕ್ಕ ಕೆಲವು ನ್ಯಾಯಬಾಹಿರವಾದವು ಎಂದು ವ್ಯತ್ಯಾಸ ಮಾಡುವುದು ಅಧಿಕಾರ ನೈತಿಕತೆಯ ವ್ಯಾಪ್ತಿಯಲ್ಲಿ ಬರಲಾರದು. ಈಗ ತಾನೇ ನೋಡಿದಂತೆ, ಕೆಲವು ಸಂದರ್ಭಗಳಲ್ಲಿ ಮನವೊಲಿಕೆಯ ಯಾವುದೋ ಒಂದು ವಿಧಾನವೂ ಸತ್ವತಃ ಬಲಪ್ರಯೋಗವೇ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕೆಲವು ಸನ್ನಿವೇಶಗಳಲ್ಲಿ ದೈಹಿಕ ಹಿಂಸೆಯು, ಕೊಲ್ಲುವುದು ಕೂಡ, ಆವಶ್ಯಕ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ರೈಲಿನ ಮೇಲೆ ಗುಂಡು ಹಾರಿಸುವವರಲ್ಲಿ ಗೈ ಫ್ಲಾಕ್ಸ್[೧] ಸೇರಿದ್ದ ಅವನನ್ನು ಗುಂಡಿಟ್ಟು ಕೊಲ್ಲುವ ಮೂಲಕ ಮಾತ್ರ ಆಗುತ್ತಿದ್ದ ವಿನಾಶವನ್ನು ತಪ್ಪಿಸಬಹುದಾಗಿತ್ತು ಎಂದು ಭಾವಿಸಿಕೊಳ್ಳಿ; ಆಗ ಅವನನ್ನು ಗುಂಡಿಟ್ಟು ಹೊಡೆಯುವುದು ಸರಿಯಾಗುತ್ತಿತ್ತು ಎಂದು ಬಹುಮಂದಿ ಶಾಂತಿಪ್ರಿಯರು ಕೂಡ ಒಪ್ಪಿಕೊಳ್ಳುತ್ತಾರೆ. ಈ ಪ್ರಶ್ನೆಯನ್ನು ಕೇವಲ ಅಮೂರ್ತವಾದ ಸಾಮಾನ್ಯ ತತ್ವಗಳಿಂದ ಎದುರಿಸುವುದು, ಅಂದರೆ ಒಬ್ಬನ ಕೃತ್ಯಗಳನ್ನು ಹೊಗಳುತ್ತ ಮತ್ತೊಬ್ಬನದನ್ನು ತೆಗಳುವುದು, ನಿರರ್ಥಕವಾದುದು; ಅಧಿಕಾರ ಚಲಾಯಿಸುವುದನ್ನು ಅದರ ಪರಿಣಾಮಗಳ ಮೇಲೆ ನಾವು ಅಳೆಯಬೇಕು, ಹೀಗಾಗಿ ನಾವು ಯಾವ ಪರಿಣಾಮಗಳನ್ನು ನಿರೀಕ್ಷಿಸುತ್ತೇವೆ ಎಂಬುದನ್ನು ಮೊದಲು ನಿರ್ಧರಿಸಿಕೊಳ್ಳಬೇಕು.

ಒಳ್ಳೆಯದು ಕೆಟ್ಟುದು ಎಂಬುದು ಮೂಲತಃ ವ್ಯಕ್ತಿಗೆ ಸಂಬಂಧಿಸಿದ ವಿಷಯವೇ ಹೊರತು ಸಮುದಾಯಕ್ಕಲ್ಲ ಎಂಬುದು ನನ್ನ ಭಾವನೆ. ಸಂಸ್ಥಾರೂಪವನ್ನು ಬೆಂಬಲಿಸಲು ಬಳಸಬಹುದಾದ ಕೆಲವು ಸಿದ್ಧಾಂತಗಳು – ಉದಾಹರಣೆಗೆ, ಹೆಗೆಲ್‌ನ ಸಿದ್ಧಾಂತ – ಸಮುದಾಯಗಳಿಗೇ

---

[೧] ಗೈಡೋ ಫ್ಲಾಕ್ಸ್ ಎಂದೂ ಕರೆಯಲಾಗುತ್ತಿದ್ದ ಇವನು (೧೫೭೦–೧೬೦೬) 'ಇಂಗ್ಲಿಷ್ ರೋಮನ್ ಕ್ಯಾಥಲಿಕ್ಸ್' ಎಂಬ ಪಂಗಡಕ್ಕೆ ಸೇರಿದವನು. ೧೬೦೬ ರ ನವೆಂಬರ್ ೫ ರಂದು ಅವನು ಇಂಗ್ಲಂಡ್‌ನ ಮೊದಲನೆಯ ಜೇಮ್ಸ್ ದೊರೆಯನ್ನು ಕೊಲ್ಲಲು 'ಗನ್‌ಪೌಡರ್ ಪ್ಲಾಟ್' ಎಂಬ ಸಂಚಿನಲ್ಲಿ ಭಾಗಿಯಾಗಿದ್ದ.

ಗುಣಗಳನ್ನು ಆರೋಪಿಸುತ್ತವೆ, ಹೀಗಾಗಿ ಪ್ರಜೆಗಳು ಕ್ಷುಲ್ಲಕರಾಗಿದ್ದರೂ ದೇಶವೊಂದು ಒಳ್ಳೆಯದೆನ್ನಿಸಬಹುದು. ಇಂತಹ ಸಿದ್ಧಾಂತಗಳು ಅಧಿಕಾರಸ್ಥರ ಸವಲತ್ತುಗಳನ್ನು ಸಮರ್ಥಿಸುವ ಹಾಗೂ ನಮ್ಮ *ರಾಜಕಾರಣವು* ಹೇಗೇ ಇರಲಿ ಅಪ್ರಜಾಸತ್ತಾತ್ಮಕ *ನೈತಿಕತೆಯ* ಪರವಾದ ಯಾವುದೇ ಸಮಂಜಸ ವಾದವಿರಲಾರದು ಎಂದು ಪ್ರತಿಪಾದಿಸುವ ತಂತ್ರಗಳು ಎಂದು ನನಗನ್ನಿಸುತ್ತದೆ. ಅಪ್ರಜಾಸತ್ತಾತ್ಮಕ ನೈತಿಕತೆ ಎಂದರೆ ಮಾನವ ಸಂಕುಲದ ಒಂದು ಪಂಗಡವನ್ನು ಬೇರ್ಪಡಿಸಿ 'ಇವರು ಒಳ್ಳೆಯದನ್ನು ಅನುಭವಿಸಬೇಕು, ಮಿಕ್ಕವೆಲ್ಲ ಅವರಿಗೆ ಸಹಾಯಕ, ಅಷ್ಟೆ' ಎಂದು ಹೇಳುವಂಥದು. ಎಂತಹ ಸಂದರ್ಭದಲ್ಲಿಯೂ ಅಂಥ ನೈತಿಕತೆಯನ್ನು ನಾವು ತಿರಸ್ಕರಿಸಬೇಕು, ಆದರೆ ಅದು, ಹಿಂದಿನ ಅಧ್ಯಾಯದಲ್ಲಿ ಗಮನಿಸಿರುವಂತೆ, ಸ್ವಯಂತಿರಸ್ಕೃತಗೊಳ್ಳುವ ಅನನುಕೂಲತೆಯನ್ನು ಪಡೆದಿರುತ್ತದೆ, ಏಕೆಂದರೆ ವಾಸ್ತವದಲ್ಲಿ ಶ್ರೀಮಂತಪ್ರಭುತ್ವದ ಸಿದ್ಧಾಂತಿಗಳು ತಮಗಾಗಿ ಸೃಷ್ಟಿಸಿದ ಬಗೆಯ ಜೀವನವನ್ನು ಅತಿಮಾನವರು ನಡೆಸಲಾರರು.

ಕೆಲವು ಬಗೆಯ ಬಯಕೆಯ ವಸ್ತುಗಳು ತಾರ್ಕಿಕವಾಗಿ ಎಲ್ಲರೂ ಅನುಭವಿಸಬಹುದಾದವು, ಮತ್ತೆ ಕೆಲವು ತಮ್ಮ ಸ್ವರೂಪದ ಕಾರಣದಿಂದಾಗಿ ಸಮುದಾಯದ ಕೆಲವರಿಗೆ ಮಾತ್ರ ಸೀಮಿತವಾದವು. ಎಲ್ಲರೂ – ಸ್ವಲ್ಪಮಟ್ಟಿಗಿನ ವೈಚಾರಿಕ ಸಹಕಾರದಿಂದ – ತಕ್ಕಮಟ್ಟಿಗೆ ಸುಸ್ಥಿತಿಯನ್ನು ಹೊಂದಬಹುದು, ಆದರೆ ತಮ್ಮ ನೆರೆಯವರಿಗಿಂತ ಹೆಚ್ಚು ಒಳ್ಳೆಯ ಸ್ಥಿತಿಯನ್ನು ಎಲ್ಲರೂ ಹೊಂದಲಾರರು. ಎಲ್ಲರೂ ಸ್ವಲ್ಪಮಟ್ಟಿಗಿನ ಸ್ವಯಂಮಾರ್ಗದರ್ಶನವನ್ನು ಅನುಭವಿಸಬಹುದು, ಆದರೆ ಎಲ್ಲರೂ ಇತರರಿಗೆ ಸರ್ವಾಧಿಕಾರಿಗಳಾಗಲು ಸಾಧ್ಯವಿಲ್ಲ. ಪ್ರಾಯಶಃ ಕೆಲ ಸಮಯದ ನಂತರ ಎಲ್ಲರೂ ತಕ್ಕಮಟ್ಟಿಗೆ ಬುದ್ಧಿವಂತರಾಗಿರುವ ಮನುಸಂಕುಲವಿರಬಹುದು, ಆದರೆ ಎಲ್ಲರೂ ಅಸಾಧಾರಣ ಬುದ್ಧಿವಂತಿಕೆಗೆ ನೀಡುವ ಪ್ರಶಸ್ತಿಗಳಿಗೆ ಭಾಜನರಾಗಲಾರರು. ಹೀಗೇ.

ಸಾರ್ವತ್ರಿಕವಾಗಬಹುದಾದ ಒಳ್ಳೆಯ ವಿಷಯಗಳ – ತಕ್ಕಮಟ್ಟಿಗಿನ ಐಹಿಕ ಸೌಲಭ್ಯಗಳು, ಆರೋಗ್ಯ, ಬುದ್ಧಿವಂತಿಕೆ ಮತ್ತು ಮಿಕ್ಕವರಿಗಿಂತ ಮೇಲೆನ್ನುವ ಭಾವನೆಯನ್ನೊಳಗೊಳ್ಳದ ಎಲ್ಲ ಬಗೆಯ ಸೌಖ್ಯ – ಇಂತಹವುಗಳ, ಬಗ್ಗೆ ಸಾಮಾಜಿಕ ಸಹಕಾರ ಸಾಧ್ಯ. ಆದರೆ ಸ್ಪರ್ಧೆಯೊಂದರಲ್ಲಿನ ಗೆಲವನ್ನು ಒಳಗೊಳ್ಳುವಂತಹ ಸಂತೋಷ ರೂಪಗಳ ಬಗ್ಗೆ ಸಾರ್ವತ್ರಿಕತೆಯಿರಲಾರದು. ಮೊದಲ ಬಗೆಯ ಸಂತೋಷವು

ಸ್ನೇಹಪರತೆಯಿಂದ ಹಾಗೂ ಎರಡನೆಯ ಬಗೆಯವು (ಜೊತೆಗಿನ ಅಸಂತೋಷವನ್ನೊಳಗೊಂಡಂತೆ) ಸ್ನೇಹರಾಹಿತ್ಯದಿಂದ ಹೆಚ್ಚಾಗುತ್ತದೆ. ಸ್ನೇಹರಾಹಿತ್ಯವು ಸಂತೋಷದ ವೈಚಾರಿಕ ಅನ್ವೇಷಣೆಯನ್ನು ಸಂಪೂರ್ಣವಾಗಿ ಮುಚ್ಚಿಬಿಡುತ್ತದೆ; ಪ್ರಸ್ತುತದಲ್ಲಿ ಅದು ದೇಶಗಳ ನಡುವಣ ಆರ್ಥಿಕ ಸಂಬಂಧಗಳನ್ನು ಅವಲಂಬಿಸಿದೆ. ಸ್ನೇಹಪರತೆಯು ವ್ಯಾಪಕವಾಗಿರುವ ಒಂದು ಸಮಾಜದಲ್ಲಿ ವಿವಿಧ ವ್ಯಕ್ತಿಗಳ ಅಥವಾ ಗುಂಪುಗಳ ಹಿತಾಸಕ್ತಿಯ ನಡುವೆ ಘರ್ಷಣೆಯಿರುವುದಿಲ್ಲ; ಈಗ ಕಾಡುತ್ತಿರುವ ಘರ್ಷಣೆಗಳು ಸ್ನೇಹರಾಹಿತ್ಯದಿಂದ ಆದವು, ಅಲ್ಲದೆ ಅವುಗಳಿಂದಾಗಿ ತೀವ್ರಗೊಳ್ಳುವಂತಹವು. ಇಂಗ್ಲಂಡ್ ಮತ್ತು ಸ್ಕಾಟ್‌ಲಂಡ್‌ಗಳು ಶತಮಾನಗಟ್ಟಲೆ ಕಾದಾಡಿವೆ; ಕೊನೆಗೆ, ಆನುವಂಶಿಕತೆಯ ಆಕಸ್ಮಿಕದಿಂದಾಗಿ ಅವೆರಡೂ ಒಬ್ಬನೇ ರಾಜನನ್ನು ಹೊಂದುವಂತಾಗಿ ಘರ್ಷಣೆ ನಿಲ್ಲುವಂತಾಯಿತು. ಈ ಪರಿಣಾಮದಿಂದ ಎಲ್ಲರಿಗೂ ಸಂತೋಷವಾಯಿತು, ಯುದ್ಧಗಳ ಗೆಲುವು ತರುವುದಕ್ಕಿಂತ ಹೆಚ್ಚಿನ ಸಂತೋಷವನ್ನು ತನ್ನ ತಮಾಷೆಯಿಂದ ಹೊಂದುತ್ತಿದ್ದ ಡಾ. ಜಾನ್ಸನ್‌ಗೆ ಕೂಡ.

ಈಗ ನಾವು ಯುದ್ಧದ ನೈತಿಕತೆಯ ಬಗ್ಗೆ ಕೆಲವು ತೀರ್ಮಾನಗಳನ್ನು ಕೈಗೊಳ್ಳಹುದು. ಅಧಿಕಾರವನ್ನು ಪಡೆದವರೆಲ್ಲರ (ನಮಗೆಲ್ಲರಿಗೂ ಸ್ವಲ್ಪಮಟ್ಟಿಗೆ ಇದೆ) ಪರಮ ಗುರಿಯೆಂದರೆ ಸಾಮಾಜಿಕ – ಒಂದನ್ನು ಬಿಟ್ಟು ಮತ್ತೊಂದರದ್ದಲ್ಲ – ಇಡೀ ಮಾನವಕುಲದ್ದು, ಸಹಕಾರವನ್ನು ಸಾಧಿಸುವುದಾಗಬೇಕು. ಈ ಗುರಿಯ ಸಾಧನೆಗೆ ಈಗಿರುವ ಮುಖ್ಯ ಅಡ್ಡಿಯೆಂದರೆ ಪರಸ್ಪರ ಸ್ನೇಹರಾಹಿತ್ಯ ಹಾಗೂ ಮೇಲುತನವನ್ನು ಪಡೆಯುವ ಬಯಕೆ. ಇಂತಹ ಭಾವನೆಗಳನ್ನು ಮತಧರ್ಮ ಮತ್ತು ನೈತಿಕತೆಗಳು ನೇರವಾಗಿ ಕಡಿಮೆ ಮಾಡಬಹುದು, ಅಥವಾ ದೇಶಗಳ ನಡುವೆ ಅಧಿಕಾರಕ್ಕಾಗಿ ಇರುವ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಗಳನ್ನು ಮತ್ತು ಇವಕ್ಕೆ ಸಂಬಂಧಿಸಿದ ಭಾರಿ ರಾಷ್ಟ್ರೀಯ ಉದ್ದಿಮೆಗಳ ನಡುವಣ ಸ್ಪರ್ಧೆಯನ್ನು ಇಲ್ಲವಾಗಿಸುವ ಮೂಲಕ ಪರೋಕ್ಷವಾಗಿ. ಈ ಎರಡೂ ಕ್ರಮಗಳೂ ಆವಶ್ಯಕ: ಅವು ಪರ್ಯಾಯಗಳಲ್ಲ, ಪರಸ್ಪರ ಪೂರಕವಾದವು.

ಮಹಾಯುದ್ಧ ಮತ್ತದರ ಸರ್ವಾಧಿಕಾರಗಳೆಂಬ ಪರಿಣಾಮಗಳು ಸೈನಿಕ ಹಾಗೂ ಸರ್ಕಾರದ ಬಲಪ್ರಯೋಗಾವಕಾಶಗಳನ್ನು ಬಿಟ್ಟು ಇತರ ಅಧಿಕಾರ ರೂಪಗಳ ಮಹತ್ವವನ್ನು ಕೆಲವರು ಕಡಿಮೆಯಾಗಿ ಭಾವಿಸುವಂತೆ

ಮಾಡಿವೆ. ಆದರೆ ಇದು ದೂರದರ್ಶಿತ್ವವಿಲ್ಲದ ಹಾಗೂ ಅನೈತಿಹಾಸಿಕವಾದ ದೃಷ್ಟಿಕೋನ. ಮಿಕ್ಕೆಲ್ಲರಿಗಿಂತ ಹೆಚ್ಚು ಅಧಿಕಾರವನ್ನು ಪಡೆದಿದ್ದ ನಾಲ್ವರನ್ನು ಆಯ್ಕೆ ಮಾಡುವ ಪ್ರಸಂಗ ಬಂದರೆ ನಾನು ಹೆಸರಿಸುವುದು ಬುದ್ಧ ಮತ್ತು ಕ್ರಿಸ್ತ ಹಾಗೂ ಪೈಥಾಗೊರಾಸ್ ಮತ್ತು ಗೆಲಿಲಿಯೋ ಅವರನ್ನು. ಪ್ರಚಾರವು ಭಾರಿ ಯಶಸ್ಸನ್ನು ತರುವರೆಗೂ ಇವರಲ್ಲಿನ ಯಾರಿಗೂ ಸರ್ಕಾರದ ಬೆಂಬಲವಿರಲಿಲ್ಲ. ತಮ್ಮ ಜೀವಿತಾವಧಿಯಲ್ಲೇ ಇವರಾರೂ ಹೆಚ್ಚು ಯಶಸ್ಸನ್ನು ಕಾಣಲಿಲ್ಲ. ಅಧಿಕಾರವೇ ಆದ್ಯತೆಯ ಗುರಿಯಾಗಿದ್ದರೆ ಈ ನಾಲ್ವರಲ್ಲಿ ಯಾರೂ ಮಾನವ ಜೀವನದ ಮೇಲೆ ತಾನು ಮಾಡಿದಷ್ಟು ಪ್ರಭಾವವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇವರಾರೂ ಇತರರನ್ನು ಗುಲಾಮರನ್ನಾಗಿಸಿಕೊಳ್ಳುವ ಬಗೆಯ ಅಧಿಕಾರಕ್ಕಾಗಿ ಹಾತೊರೆಯಲಿಲ್ಲ, ಆದರೆ ಬಯಸಿದ್ದು ಜನರನ್ನು ಮುಕ್ತರಾಗಿಸುವ ಬಗೆಯದಕ್ಕೆ. ಇವರಲ್ಲಿ ಮೊದಲಿನ ಇಬ್ಬರು ಕಾರ್ಪಣ್ಯಗಳಿಗೆ ಕಾರಣವಾಗುವ ಬಯಕೆಗಳನ್ನು ಗೆಲ್ಲುವ, ಆನಂತರ ಗುಲಾಮತನ ಮತ್ತು ಪರಾಧೀನತೆಗಳನ್ನು ನಾಶಪಡಿಸುವ ಮಾರ್ಗವನ್ನು ತೋರಿಸಿ ಹೀಗೆ ಮಾಡಿದರು; ಉಳಿದಿಬ್ಬರು ಪ್ರಾಕೃತಿಕ ಶಕ್ತಿಗಳ ಮೇಲೆ ಹಿಡಿತವನ್ನು ಸಾಧಿಸುವ ಮಾರ್ಗವನ್ನು ಸೂಚಿಸಿ ಈ ಕೆಲಸ ಮಾಡಿದರು. ಆತ್ಯಂತಿಕವಾಗಿ ಹಿಂಸೆಯ ಮೂಲಕ ಜನರನ್ನು ಆಳುವುದು ಸಾಧ್ಯವಿಲ್ಲ, ಹೀಗೆ ಮಾಡಲು ಸಾಧ್ಯವಾಗುವುದು ಸಂತೋಷ, ಆಂತರಿಕ ಹಾಗೂ ಬಾಹ್ಯ ಶಾಂತಿ, ನಮ್ಮದಲ್ಲದ ಆಯ್ಕೆಯ ಬದುಕನ್ನು ಸಾಗಿಸಬೇಕಾದ ಈ ಜಗತ್ತಿನ ಬಗೆಗಿನ ಅರಿವು ಎಂಬ ಮಾನವರ ಸಾಮಾನ್ಯ ಬಯಕೆಗಳತ್ತ ಗಮನ ಹರಿಸುವವರ ವಿವೇಕದಿಂದ.

–೦–೦–೦–

ಅಧ್ಯಾಯ ೧೮

ಅಧಿಕಾರ ಪಳಗಿಸುವಿಕೆ

"ಥಾಯ್ ಪರ್ವತದ ಬದಿಯಲ್ಲಿ ಒಮ್ಮೆ ಕನ್‌ಫ್ಯೂಷಿಯಸ್ ಹಾದುಹೋಗುತ್ತಿರುವಾಗ, ಒಂದು ಸಮಾಧಿಯ ಬಳಿ ಕೂತು ಜೋರಾಗಿ ಅಳುತ್ತಿರುವ ಹೆಂಗಸೊಬ್ಬಳನ್ನು ಕಂಡ. ಗುರು ವೇಗವಾಗಿ ಸಾಗಿ ಅವಳ ಬಳಿ ಬಂದು, ತ್ಸೆ–ಲು ಅನ್ನು ಅವಳ ಬಗ್ಗೆ ವಿಚಾರಿಸಲು ಹೇಳಿದ. 'ನೀನು ಅಳುವ ರೀತಿಯನ್ನು ನೋಡಿದರೆ ಪದೇ ಪದೇ ದುಃಖಕ್ಕೆ ಸಿಲುಕಿದವರದಳಂತೆ ಕಾಣುತ್ತದೆ' ಎಂದ. 'ಹೌದು. ನನ್ನ ಗಂಡ ಸತ್ತುಹೋದ, ಈಗ ನನ್ನ ಮಗನೂ ಅದೇ ರೀತಿಯಲ್ಲಿ ಸತ್ತಿದ್ದಾನೆ' ಎಂದು ಅವಳೆಂದಳು. ಆಗ ಗುರು ಹೇಳಿದ: 'ನೀನು ಈ ಜಾಗವನ್ನು ಬಿಟ್ಟೇಕೆ ಹೋಗಬಾರದು?' ಅಗ ಅವಳಿತ್ತ ಉತ್ತರ: 'ದಮನಮಾಡುವ ಯಾವ ಸರ್ಕಾರವೂ ಇಲ್ಲಿಲ್ಲ, ಅದಕ್ಕೆ.' ಆಗ ಗುರು ಹೇಳಿದ: 'ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ, ದಮನಕಾರಿ ಸರ್ಕಾರವು ಹುಲಿಗಳಿಗಿಂತ ಹೆಚ್ಚು ಭಯಂಕರವಾದುದು.'"

ಪ್ರಸ್ತುತ ಅಧ್ಯಾಯದ ವಿಷಯವೆಂದರೆ ಸರ್ಕಾರವು ಹುಲಿಗಿಂತ *ಕಡಿಮೆ* ಭಯಂಕರವಾಗುವಂತೆ ನೋಡಿಕೊಳ್ಳುವುದು ಹೇಗೆ ಎಂಬುದು.

ಈ ಮೇಲಿನ ಉದ್ಧೃತವು ತಿಳಿಸುವಂತೆ, ಅಧಿಕಾರವನ್ನು ಪಳಗಿಸುವ ಸಮಸ್ಯೆಯು ಪುರಾತನವಾದುದು. ತಾವೋಯಿಸ್ಟ್‌ರಿಗೆ ಅದು ಅಪರಿಹಾರ್ಯವಾಗಿ ತೋರಿತು, ಅದಕ್ಕಾಗಿ ಅವರು ಅನಾಯಕತ್ವವನ್ನು ಬೋಧಿಸಿದರು; ಅಧಿಕಾರಸ್ಥರು ಸಂತರಾಗಿ ಸಂಯಮಸ್ವಭಾವ ಹಾಗೂ ಪರಹಿತ ಬುದ್ಧಿಯನ್ನು ಹೊಂದುವಂತೆ ಮಾಡಬಲ್ಲ ನೈತಿಕತೆ ಹಾಗೂ ಸರ್ಕಾರದ ಶಿಕ್ಷಣದಲ್ಲಿ ಕನ್‌ಫ್ಯೂಷಿಯನ್ನರು ನಂಬಿಕೆಯಿರಿಸಿಕೊಂಡಿದ್ದರು. ಅದೇ ಕಾಲದಲ್ಲಿ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವ, ಸ್ವಲ್ಪಜನಾಧಿಪತ್ಯ ಮತ್ತು ದೌರ್ಜನ್ಯಗಳು ಪರಸ್ಪರ ಮೇಲಾಟದಲ್ಲಿ ತೊಡಗಿದ್ದವು. ಪ್ರಜಾಪ್ರಭುತ್ವವು ಅಧಿಕಾರದ ದುರುಪಯೋಗವನ್ನು ತಡೆಯುವುದಾಗಿತ್ತು, ಆದರೇ ಯಾವನೋ ಒಬ್ಬ ನಾಯಕನ ತಾತ್ಕಾಲಿಕ ಜನಪ್ರಿಯತೆಗೆ ಬಲಿಯಾಗಿ ಅದು ಸೋಲುತ್ತಿತ್ತು. ಕನ್‌ಫ್ಯೂಷಿಯಸ್‌ನಂತೆಯೇ ಪ್ಲೇಟೋ ಕೂಡ ವಿವೇಕವನ್ನು ನೀಡುವ ಶಿಕ್ಷಣವನ್ನು ಪಡೆದವರು ರಚಿಸುವ ಸರ್ಕಾರದ ರಚನೆ ಇದಕ್ಕೆ

ಪರಿಹಾರವೆಂದು ಭಾವಿಸಿದ. ಈ ಭಿಪ್ರಾಯವನ್ನು ಶ್ರೀ ಮತ್ತು ಶ್ರೀಮತಿ ಸಿಡ್ನಿ ವೆಬ್ ಪುನರುಜ್ಜೀವಿಸಿದ್ದಾರೆ, ಅಧಿಕಾರವು 'ನಾಯಕತ್ವ ವೃತ್ತಿ'ಯ ಜನರಿಗಷ್ಟೇ ಸೀಮಿತವಾಗಿರುವ ಸ್ವಲ್ಪಜಾಧಿಪತ್ಯವನ್ನು ಅವರು ಇಷ್ಟಪಡುವವರು. ಪ್ಲೇಟೋ ಮತ್ತು ವೆಬ್ ಅವರ ನಡುವಣ ಕಾಲಮಾನದಲ್ಲಿ ಪ್ರಪಂಚವು ನಿರಂಕುಶಾಧಿಕಾರ, ಮತಧರ್ಮಾಧಿಕಾರ, ಆನುವಂಶೀಯ ರಾಜಪ್ರಭುತ್ವ, ಸ್ವಲ್ಪಜನಾಧಿಪತ್ಯ, ಪ್ರಜಾಪ್ರಭುತ್ವ ಮತ್ತು ಸಂತರ ಆಳ್ವಿಕೆ ಇವುಗಳ ರುಚಿ ನೋಡಿದೆ. ಇವುಗಳಲ್ಲಿ ಕೊನೆಯದು, ಕ್ರಾಮ್‌ವೆಲ್‌ನ ಪ್ರಯೋಗ ವಿಫಲಗೊಂಡ ಮೇಲೆ, ನಮ್ಮ ಕಾಲದಲ್ಲಿ ಲೆನಿನ್ ಮತ್ತು ಹಿಟ್ಲರ್‌ಗಳಿಂದ ಮತ್ತೆ ಜೀವ ಪಡೆದಿದೆ. ಇವೆಲ್ಲವೂ ನಮ್ಮ ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಎಂಬುದನ್ನು ಸೂಚಿಸುತ್ತವೆ.

ಇತಿಹಾಸ ಅಥವಾ ಮಾನವ ಸ್ವಭಾವವನ್ನು ಅಧ್ಯಯನ ಮಾಡಿದ ಯಾರಾದರೂ ಪ್ರಜಾಪ್ರಭುತ್ವವು ಪರಿಪೂರ್ಣ ಪರಿಹಾರವಲ್ಲದಿದ್ದರೂ, ಪರಿಹಾರದ ಒಂದು ಅವಿನಾ ಭಾಗವಾಗಿ ಕಾಣದಿರದು. ಕೇವಲ ರಾಜಕೀಯ ಪರಿಸ್ಥಿತಿಗಳಿಗೆ ಸೀಮಿತಗೊಳಿಸಿಕೊಂಡರೆ ನಮಗೆ ಪರಿಪೂರ್ಣ ಪರಿಹಾರವು ಸಿಕ್ಕಲಾರದು; ಆರ್ಥಿಕತೆ, ಪ್ರಚಾರ, ಪರಿಸ್ಥಿತಿ ಮತ್ತು ಶಿಕ್ಷಣಗಳಿಂದ ಪ್ರಭಾವಿತವಾಗುವ ಮನೋಧರ್ಮ ಇವುಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಹೀಗಾಗಿ ನಮ್ಮ ವಿಷಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳುತ್ತೇವೆ: (೧) ರಾಜಕೀಯ ಪರಿಸ್ಥಿತಿಗಳು, (೨) ಆರ್ಥಿಕ ಪರಿಸ್ಥಿತಿಗಳು, (೩) ಪ್ರಚಾರದ ಪರಿಸ್ಥಿತಿಗಳು ಮತ್ತು (೪) ಮನೋಧರ್ಮ ಮತ್ತು ಶೈಕ್ಷಣಿಕ ಪರಿಸ್ಥಿತಿಗಳು. ಇವುಗಳನ್ನು ಇದೇ ಕ್ರಮದಲ್ಲಿ ಚರ್ಚಿಸೋಣ.

೧

ಪ್ರಜಾಪ್ರಭುತ್ವದ ಗುಣಗಳು ಋಣಾತ್ಮಕವಾದವು: ಅದೇನೂ ಒಳ್ಳೆಯ ಸರ್ಕಾರವನ್ನು ನಿಖರಪಡಿಸುವುದಿಲ್ಲ, ಆದರೆ ಕೆಲವು ಕೆಡುಕುಗಳನ್ನು ನಿವಾರಿಸುತ್ತದೆ. ಸ್ತ್ರೀಯರು ರಾಜಕೀಯ ವಿಚಾರಗಳಲ್ಲಿ ಪಾಲುಗೊಳ್ಳಲು ತೊಡಗುವವರೆಗೂ, ಮದುವೆಯಾದ ಸ್ತ್ರೀಯರಿಗೆ ತಮ್ಮ ಆಸ್ತಿಯ ಮೇಲೆ, ಅಷ್ಟೇಕೆ ತಮ್ಮ ಸ್ವಂತ ಸಂಪಾದನೆಯ ಮೇಲೆಯೂ, ಯಾವುದೇ ಹಿಡಿತವಿರಲಿಲ್ಲ; ಮನೆಗೆಲಸದ ಹೆಂಗಸು ತನ್ನ ಸಂಪಾದನೆಯನ್ನು ಮಕ್ಕಳ ಪಾಲನೆಗೆ ಬಳಸಿಕೊಳ್ಳುವುದನ್ನು ಅವಳ ಕುಡುಕ ಗಂಡ ಅವಕಾಶ ಕೊಡದಿದ್ದರೆ, ಅವಳಿಗೆ ಬೇರೆ ದಾರಿಯೇ ಇರಲಿಲ್ಲ. ಹದಿನೆಂಟನೆಯ ಮತ್ತು ಹತ್ತೊಂಬತ್ತನೆ ಶತಮಾನದ ಪೂರ್ವಾರ್ಧದಲ್ಲಿನ ಸ್ವಲ್ಪಜನಾಧಿಪತ್ಯದ ಪಾರ್ಲಿಮೆಂಟ್ ತನ್ನ ಶಾಸನಾಧಿಕಾರವನ್ನು ಹಳ್ಳಿಯ

ಮತ್ತು ಪಟ್ಟಣಗಳ ಶ್ರಮಜೀವಿಗಳ ಪರಿಸ್ಥಿತಿಯನ್ನು ಕುಗ್ಗಿಸುವುದರ ಮೂಲಕ ಹಣವಂತರ ಸಿರಿ ಹೆಚ್ಚಿಸಲು ಬಳಸಿಕೊಂಡಿತು. ಕಾರ್ಮಿಕಸಂಘಟನೆಗಳನ್ನು ಅಸಾಧ್ಯಗೊಳಿಸುವ ಕಾನೂನು ಜಾರಿಗೊಳಿಸುವುದನ್ನು ತಪ್ಪಿಸಲು ಪ್ರಜಾಪ್ರಭುತ್ವದಿಂದಷ್ಟೇ ಸಾಧ್ಯವಾಗಿರುವುದು. ಪ್ರಜಾಪ್ರಭುತ್ವವಿಲ್ಲದಿದ್ದರೆ, ಪಶ್ಚಿಮ ಅಮೆರಿಕ, ಆಸ್ಟ್ರೇಲಿಯ ಮತ್ತು ನ್ಯೂಜ಼ೀಲಂಡ್‌ಗಳಲ್ಲಿ ಕೆಲವೇ ಮಂದಿ ಶ್ರೀಮಂತ ಬಿಳಿಯ ಜನರಿಂದ ಆಳಲ್ಪಡುವ ಅರೆಗುಲಾಮಿ ಹಳದಿ ಬಣ್ಣದ ಜನರು ತುಂಬಿರುತ್ತಿದ್ದರು. ಗುಲಾಮತನ ಮತ್ತು ಜೀತಪದ್ಧತಿಗಳ ಕೆಡುಕುಗಳು ಸರ್ವವಿದಿತ; ಎಲ್ಲೆಲ್ಲಿ ಅಲ್ಪಸಂಖ್ಯೆಯ ಜನರು ಸುಭದ್ರವಾದ ರಾಜಕೀಯ ಅಧಿಕಾರವನ್ನು ಪಡೆದಿರುತ್ತಾರೆಯೋ, ಅಲ್ಲೆಲ್ಲ ಬಹುಸಂಖ್ಯಾತರು, ಬೇಗಲೋ ನಿಧಾನವಾಗಿಯೋ, ಗುಲಾಮತನಕ್ಕೋ ಜೀತಪದ್ಧತಿಗೋ ಬಲಿಯಾಗುವ ಸಾಧ್ಯತೆಯಿರುತ್ತದೆ. ನಿರೀಕ್ಷಣೆಯಂತೆಯೇ, ಅಲ್ಪಸಂಖ್ಯಾತರು ಬಹುಸಂಖ್ಯಾತರ ಹಿತರಕ್ಷಣೆ ಮಾಡುತ್ತಾರೆಂದು ನಂಬಲು ಸಾಧ್ಯವಿಲ್ಲ ಎಂಬುದನ್ನು ಇತಿಹಾಸ ಉದ್ದಕ್ಕೂ ತೋರಿಸಿದೆ.

‘ಒಳ್ಳೆಯ’ ಜನರಿಂದ ಕೂಡಿದ್ದರೆ ಸ್ವಲ್ಪಜನಾಧಿಪತ್ಯವು ಅಪೇಕ್ಷಣೀಯವೆಂದು ಭಾವಿಸುವ ಪ್ರವೃತ್ತಿಯು ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ರೋಮನ್ ಸಾಮ್ರಾಜ್ಯವು ಕಾನ್‌ಸ್ಟಾಂಟೈನ್ ಬರುವವರೆಗೂ ‘ಕೆಟ್ಟ’ದಾಗಿತ್ತು, ಆಮೇಲೆ ಅದು ‘ಒಳ್ಳೆಯ’ದಾಯಿತು. ‘ಅರಸುಗಳು’ (ಃಹಙ ಜಿ ಏಚಿಗ) ನಲ್ಲಿ ಪ್ರಭುವಿನ ದೃಷ್ಟಿಯಲ್ಲಿ ಸರಿಯಾದುದನ್ನು ಮಾಡುವ ಹಾಗೂ ಕೆಡುಕನ್ನು ಮಾಡುವ ಜನರಿದ್ದರು. ಮಕ್ಕಳಿಗೆ ಹೇಳಿಕೊಡುವ ಇಂಗ್ಲಂಡ್ ಚರಿತ್ರೆಯಲ್ಲಿ ‘ಒಳ್ಳೆಯ’ ಹಾಗೂ ‘ಕೆಟ್ಟ’ ರಾಜರುಗಳಿದ್ದಾರೆ. ಯೆಹೂದ್ಯರ ಸ್ವಲ್ಪಜನಾಧಿಪತ್ಯ ‘ಕೆಟ್ಟು’ದು, ಆದರೆ ನಾಜ಼ಿಗಳದು ‘ಒಳ್ಳೆಯ’ದು. ಜ಼ಾರ್ ಶ್ರೀಮಂತವರ್ಗದ ಸ್ವಲ್ಪಜನಾಧಿಪತ್ಯವು ‘ಕೆಟ್ಟು’ದು, ಆದರೆ ಕಮ್ಯುನಿಸ್ಟ್ ಪಕ್ಷದ್ದು ‘ಒಳ್ಳೆಯ’ದು.

ಈ ಮನೋಭಾವವು ಪ್ರಬುದ್ಧ ಜನರಿಗೆ ತಕ್ಕುದಲ್ಲ. ಮಗುವು ವಿಧೇಯವಾಗಿದ್ದರೆ ‘ಒಳ್ಳೆಯ’ದು, ಇಲ್ಲದಿದ್ದರೆ ‘ಹಟಮಾರಿ.’ ಅದು ಬೆಳೆದು ಒಬ್ಬ ರಾಜಕೀಯ ನಾಯಕನಾದರೆ, ಮನಸ್ಸಿನಲ್ಲಿ ಬಾಲವಾಡಿಯ ಕಲ್ಪನೆಗಳೇ ಉಳಿದು, ಆಜ್ಞಾಪಾಲಕರನ್ನು ‘ಒಳ್ಳೆಯ’ವರು ಎಂದೂ, ಆಜ್ಞೆಗಳನ್ನು ಧಿಕ್ಕರಿಸುವವರನ್ನು ‘ಕೆಟ್ಟ’ವರೆಂದೂ ಅವನು ವರ್ಣಿಸುತ್ತಾನೆ. ಇದರ ಪರಿಣಾಮವಾಗಿ ನಮ್ಮ ಪಕ್ಷದಲ್ಲಿರುವವರೆಲ್ಲ ‘ಒಳ್ಳೆಯ’ವರು, ವಿರೋಧ ಪಕ್ಷದಲ್ಲಿರುವವರು ‘ಕೆಟ್ಟ’ವರು. ‘ಒಳ್ಳೆಯ’ ಸರ್ಕಾರವೆಂದರೆ ನಮ್ಮ ಗುಂಪಿನವರು ರಚಿಸಿದುದು, ಮತ್ತೊಂದರದು ‘ಕೆಟ್ಟ’ ಸರ್ಕಾರ.

ಮಾಂಟೇಗ್‌ರು 'ಒಳ್ಳೆಯ'ವರು, ಕಾಪ್ಯುಲೆಟ್‌ರು 'ಕೆಟ್ಟ'ವರು, ಅಥವಾ ಇದಕ್ಕೆ ವಿರುದ್ಧವಾದುದು.

ಗಂಭೀರವಾಗಿ ತೆಗದುಕೊಂಡರೆ, ಇಂಥ ದೃಷ್ಟಿಕೋನವು ಸಾಮಾಜಿಕ ಬದುಕನ್ನು ದುಸ್ಸಾಧ್ಯವಾಗಿಸುತ್ತದೆ. ಬಲಪ್ರಯೋಗವು ಮಾತ್ರ ಯಾವ ಗುಂಪು 'ಒಳ್ಳೆಯ'ದು, ಯಾವುದು 'ಕೆಟ್ಟ'ದ್ದು ಎಂದು ನೀರ್ಧರಿಸಬಲ್ಲದು. ಇಂಥ ನಿರ್ಧಾರವನ್ನು ಮಾಡಿದಾಗ, ಯಾವ ಕ್ಷಣದಲ್ಲಿ ಬೇಕಾದರೂ ಅದನ್ನು ದಂಗೆಯ ಮೂಲಕ ಬುಡಮೇಲು ಮಾಡಬಹುದು. ಯಾವ ಗುಂಪು ಅಧಿಕಾರವನ್ನು ಪಡೆದರೂ, ಮತ್ತೊಂದರ ಹಿತವನ್ನು ಪರಿಗಣಿಸಬೇಕಾಗುತ್ತದೆ, ಅದೂ ಎಲ್ಲಿಯವರೆಗೆ ದಂಗೆಯ ಭಯವನ್ನು ಎದುರಿಸುತ್ತದೆಯೋ ಅಲ್ಲಿಯವರೆಗೆ ಮಾತ್ರ. ಸಾಮಾಜಿಕ ಬದುಕು ದೌರ್ಜನ್ಯಕ್ಕಿಂತ ಉತ್ತಮವಾಗಿರಬೇಕಾದರೆ, ಸ್ವಲ್ಪಮಟ್ಟಿಗಿನ ನಿಷ್ಪಕ್ಷಪಾತವನ್ನು ನಿರೀಕ್ಷಿಸುತ್ತದೆ. ಆದರೆ ಕೆಲವು ವಿಷಯಗಳ ಬಗ್ಗೆ ಸಾಮೂಹಿಕ ಕ್ರಿಯೆಯು ಆವಶ್ಯವಾದುದರಿಂದ, ಅಂತಹ ವಿಷಯಗಳ ಬಗೆಗಿನ ನಿಷ್ಪಕ್ಷಪಾತದ ಏಕೈಕ ರೂಪವೆಂದರೆ ಬಹುಸಂಖ್ಯಾತ ಆಡಳಿತ.

ಆವಶ್ಯಕವಾದರೂ, ಪ್ರಜಾಪ್ರಭುತ್ವವು ಅಧಿಕಾರವನ್ನು ಪಳಗಿಸಬಲ್ಲ ಏಕೈಕ ರಾಜಕೀಯ ಸನ್ನಿವೇಶವೇನಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸುವುದು ಸಾಧ್ಯ. ೧೮೮೫ ಮತ್ತು ೧೯೨೨ ರ ನಡುವಣ ಅವಧಿಯಲ್ಲಿ ಯುನೈಟೆಡ್ ಕಿಂಗ್‌ಡಮ್‌ನ ಸರ್ಕಾರವು (ಮಹಿಳೆಯರನ್ನು ಹೊರತುಪಡಿಸಿದಂತೆ) ಪ್ರಜಾಸತ್ತಾತ್ಮಕವಾಗಿತ್ತು, ಆದರೆ ಅದು ಐರ್ಲಂಡ್‌ನ ದಮನಕ್ರಿಯೆಯನ್ನು ನಿಲ್ಲಿಸಲಿಲ್ಲ. ರಾಷ್ಟ್ರೀಯ ಮಾತ್ರವಲ್ಲ, ಮತಧಾರ್ಮಿಕ ಅಥವಾ ರಾಜಕೀಯ ಅಲ್ಪಸಂಖ್ಯಾತರನ್ನೂ ದೌರ್ಜನ್ಯಕ್ಕೀಡು ಮಾಡಬಹುದು. ಸುವ್ಯವಸ್ಥಿತ ಸರ್ಕಾರಕ್ಕೆ ಸಾಧ್ಯವಾಗುವಷ್ಟರಮಟ್ಟಿಗೆ ಅಲ್ಪಸಂಖ್ಯಾತರ ಸುರಕ್ಷಿತತೆಗೆ ಅಧಿಕಾರದ ಪಳಗಿಸುವಿಕೆ ಆವಶ್ಯಕ.

ಇದಕ್ಕೆ ಬೇಕಾದುದೆಂದರೆ, ಯಾವ ವಿಷಯಗಳಲ್ಲಿ ಇಡೀ ಸಮುದಾಯವು ಒಂದಾಗಿರಬೇಕು, ಯಾವುದರಲ್ಲಿ ಸಮರೂಪತೆ ಆವಶ್ಯಕವಲ್ಲ ಎಂಬುದು ತೀರ್ಮಾನವಾಗಬೇಕು. ಸಾಮೂಹಿಕ ನಿರ್ಧಾರ ಆವಶ್ಯಕವಾದ ಸ್ಪಷ್ಟ ಸನ್ನಿವೇಶಗಳೆಂದರೆ ಯಾವುವು ಮೂಲತಃ ಭೌಗೋಳಿಕಸ್ವರೂಪದವೋ ಅಂತಹವು. ರಸ್ತೆಗಳು, ರೈಲ್ವೆ, ಚರಂಡಿಗಳು, ಅನಿಲ ಕೊಳವೆಗಳು, ಈ ಮುಂತಾದವು. ನಿದರ್ಶನಕ್ಕೆ, ಪ್ಲೇಗ್ ಅಥವಾ ರೇಬೀಸ್‌ಗಳ ಬಗ್ಗೆ ತೆಗೆದುಕೊಳ್ಳಬೇಕಾದ ಆರೋಗ್ಯ ಮುನ್ನೆಚ್ಚರಿಕೆಗಳು

ಭೌಗೋಳಿಕವಾದವು: ಸೋಂಕು ಇತರರನ್ನೂ ತಗುಲಬಹುದಾದ್ದರಿಂದ ತಾವು ಸೋಂಕಿನ ವಿರುದ್ಧ ಯಾವುದೇ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಕ್ರಿಶ್ಚಿಯನ್ ವಿಜ್ಞಾನಿಗಳು ಹೇಳುವುದು ಸರಿಯಲ್ಲ. ಆಂತರಿಕವಾಗಿರದಿದ್ದರೆ, ಯುದ್ಧವೆಂಬುದು ಒಂದು ಭೌಗೋಳಿಕ ಸಂಗತಿ, ಆಗಲೂ ಸಹ ಒಂದು ಭಾಗದಲ್ಲಿ ಒಂದು ಗುಂಪು ಪ್ರಬಲವಾಗಿದ್ದರೆ, ಮತ್ತೊಂದರಲ್ಲಿ ಮತ್ತೊಂದು ಪ್ರಬಲವಾಗಿರಬಹುದು.

ಎಲ್ಲೆಲ್ಲಿ ಅಲ್ಪಸಂಖ್ಯಾತರು ಭೌಗೋಳಿಕ ನೆಲೆಯಲ್ಲಿ ಸಾಂದ್ರವಾಗಿರುತ್ತಾರೋ, ೧೯೨೨ ಕ್ಕಿಂತ ಮುಂಚೆ ಐರಿಶ್ ಜನರಿದ್ದಂತೆ, ಅಲ್ಲಿ ಬಹುಭಾಗದ ಸಮಸ್ಯೆಗಳನ್ನು ಅಧಿಕಾರ ವಿಕೇಂದ್ರೀಕರಣದ ಮೂಲಕ ಬಗೆಹರಿಸಬಹುದು. ಆದರೆ ಅಲ್ಪಸಂಖ್ಯಾತರ್ಗವು ಪ್ರದೇಶದ ಎಲ್ಲೆಡೆ ಹಂಚಿಹೋಗಿದ್ದರೆ, ಈ ವಿಧಾನವನ್ನು ಬಹುತೇಕ ಅನುಸರಿಸಲಾಗದು. ಕ್ರಿಶ್ಚಿಯನ್ ಮತ್ತು ಮಹಮಡನ್ ಜನರು ಅಕ್ಕಪಕ್ಕದಲ್ಲಿ ನೆಲೆಸಿದ್ದರೆ, ಅವರಿಗೆ ಭಿನ್ನವಾದ ವಿವಾಹ ಕಾನೂನುಗಳಿರಬೇಕಾದದ್ದು ಸರಿಯೆ, ಆದರೆ ಮತಧಾರ್ಮಿಕ ಸಂಬಂಧವಿರದ ವಿಷಯಗಳಲ್ಲಿ ಅವರೆಲ್ಲ ಒಂದೇ ಕಾನೂನಿಗೆ ಒಳಪಡಬೇಕು. ದೇಶವೊಂದರಲ್ಲಿ ಧಾರ್ಮಿಕ ಸಮರೂಪತೆಯು ಆವಶ್ಯವಲ್ಲ ಎಂಬ ಅಂಶವನ್ನು, ಪ್ರಾಟೆಸ್ಟಂಟರೂ ಕ್ಯಾಥೋಲಿಕ್‌ರೂ ಒಂದೇ ಸರ್ಕಾರದಡಿಯಲ್ಲಿ ಜೀವಿಸಬಹುದೆಂಬುದನ್ನು, ಕ್ರಮೇಣ ಅರ್ಥಮಾಡಿಕೊಳ್ಳಲಾಗುತ್ತಿದೆ. ಆದರೆ ರಿಫ಼ರ್ಮೇಷನ್ ನಂತರದ ಮೊದಲ ೧೩೦ ವರ್ಷಗಳಲ್ಲಿ ಈ ಪರಿಸ್ಥಿತಿಯಿರಲಿಲ್ಲ.

ವ್ಯವಸ್ಥೆಯೊಂದಕ್ಕೆ ಸೂಕ್ತವಾದ ಸ್ವಾತಂತ್ರ್ಯ ಪ್ರಮಾಣದ ಪ್ರಶ್ನೆಯನ್ನು ಶೂನ್ಯದಲ್ಲಿ ನಿರ್ಣಯಿಸಲಾಗುವುದಿಲ್ಲ. ಶೂನ್ಯದಲ್ಲಿ ಹೇಳಬಹುದಾದ ಒಂದೇ ವಿಷಯವೆಂದರೆ, ಸಾಮೂಹಿಕ ನಿರ್ಧಾರಕ್ಕೆ ತಾಂತ್ರಿಕ ಕಾರಣವಿಲ್ಲದಿದ್ದರೆ, ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಸಂಬಂಧಿಸಿದ ಪ್ರಬಲ ಕಾರಣವಿರಬೇಕು. ಎಲಿಜ಼ಬೆತ್ ಆಳ್ವಿಕೆಯಲ್ಲಿ ರೋಮನ್ ಕ್ಯಾಥೋಲಿಕ್‌ರು ಆಕೆಯನ್ನು ಸಿಂಹಾಸನದಿಂದ ಇಳಿಸಲು ಬಯಸಿದಾಗ, ಸರ್ಕಾರವು ಅವರ ಆಸೆಗೆ ಗಮನ ಕೊಡದಿದ್ದುದು ಆಶ್ಚರ್ಯಕರವೇನಲ್ಲ. ಹಾಗೆಯೇ ಸ್ಪೈನ್ ವಿರುದ್ಧ ಪ್ರಾಟೆಸ್ಟಂಟ್‌ರು ದಂಗೆಯೆದ್ದಿದ್ದ ಕೆಳದೇಶಗಳಲ್ಲಿ (ಲುಕ್ಸೆಂಬರ್ಗ್ ಮತ್ತು ಬೆಲ್ಜಿಯಂ), ಅವರಿಗೆ ಸ್ಪೈನ್ ಜನರು ಹಿಂಸೆ ನೀಡುವರೆಂಬುದನ್ನು ನಿರೀಕ್ಷಿಸಬಹುದಿತ್ತು. ಆದರೆ ಈಗ ಧಾರ್ಮಿಕ ಪ್ರಶ್ನೆಗಳಿಗೆ ಅಷ್ಟು ರಾಜಕೀಯ ಪ್ರಾಧಾನ್ಯವಿಲ್ಲ. ತೀರ ಆಳಕ್ಕೆ ಹೋಗದಿದ್ದರೆ, ರಾಜಕೀಯ ಭಿನ್ನಾಭಿಪ್ರಾಯಗಳು ಪೀಡನೆಗೆ ಕಾರಣವಾಗಲಾರವು. ಕನ್ಸರ್ವೇಟಿವ್‌ಗಳು ಲಿಬರಲ್‌ಗಳು ಮತ್ತು ಲೇಬರ್

ಪಕ್ಷದವರು ಜೊತೆಯಲ್ಲಿ ಶಾಂತಿಯಿಂದ ಬಾಳಬಹುದು, ಏಕೆಂದರೆ ಅವರಾರಿಗೂ ಸಂವಿಧಾನವನ್ನು ಬಲಪ್ರಯೋಗದ ಮೂಲಕ ಬದಲಾಯಿಸುವ ಇಚ್ಛೆಯಿಲ್ಲ. ಆದರೆ ಫ್ಯಾಸಿಸ್ಟ್‌ರೂ ಕಮ್ಯುನಿಸ್ಟ್‌ರೂ ಕೂಡಿ ಬಾಳುವುದು ಕಷ್ಟ. ಪ್ರಜಾಪ್ರಭುತ್ವವಿರುವೆಡೆಗಳಲ್ಲಿ ಬಲಪ್ರಯೋಗದಿಂದ ಅಲ್ಪಸಂಖ್ಯಾತ ಜನರು ಅಧಿಕಾರ ಹಿಡಿಯುವ ಅಥವಾ ಅದಕ್ಕೆ ಪ್ರಚೋದಿಸುವ ಪ್ರಯತ್ನಗಳನ್ನು, ಕಾನೂನುಬದ್ಧ ಬಹುಸಂಖ್ಯಾತ ಜನರು ಶಾಂತಿಯಂದ ಬಾಳುವ ಹಕ್ಕು ಪಡೆದಿರುವರೆಂಬ ಕಾರಣದ ಮೇಲೆ, ಸೂಕ್ತ ರೀತಿಯಲ್ಲಿ ನಿಷೇಧಿಸಬಹುದು. ಆದರೆ ಕಾನೂನು ಮುರಿಯುವ ಪ್ರಚೋದನೆಯಿಲ್ಲದ ಪ್ರಚಾರಗಳ ಬಗ್ಗೆ ಸಹಿಷ್ಣುತೆಯಿರಬೇಕು, ಅಂತೆಯೇ ಕಾನೂನು ಸಹ ತಾಂತ್ರಿಕ ಸಾಮರ್ಥ್ಯ ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು ಸಾಕಾಗುವ ಸಹಿಷ್ಣುತೆಯನ್ನು ಪಡೆದಿರಬೇಕು. ಮುಂದೆ ಮನಃಸ್ಥಿತಿಯ ಬಗ್ಗೆ ಮಾತಾಡುವಾಗ ಈ ವಿಷಯದ ಮೇಲೆ ಹೆಚ್ಚಿನ ಚರ್ಚೆಯನ್ನು ಮುಂದುವರೆಸುತ್ತೇನೆ.

ಅಧಿಕಾರವನ್ನು ಪಳಗಿಸುವ ದೃಷ್ಟಿಯಿಂದ, ಸೂಕ್ತ ಆಡಳಿತ ಯಂತ್ರದ ಗಾತ್ರ ಎಷ್ಟಿರಬೇಕು ಎಂಬ ಬಗ್ಗೆ ಬಹಳ ಕಠಿಣ ಪ್ರಶ್ನೆಗಳು ಉದ್ಭವಿಸುತ್ತವೆ. ಆಧುನಿಕ ಕಾಲದ ದೊಡ್ಡ ದೇಶಗಳಲ್ಲಿ, ಅಲ್ಲಿ ಪ್ರಜಾಪ್ರಭುತ್ವವಿದ್ದರೂ, ಸಾಮಾನ್ಯ ಪ್ರಜೆಗೆ ಅಧಿಕಾರದ ಪ್ರಜ್ಞೆ ಇರುವುದು ಬಹು ಕಡಿಮೆ; ಯಾವುವು ಚುನಾವಣೆಯ ವಿಷಯಗಳಾಗಬೇಕು ಎಂಬ ಬಗ್ಗೆ ಅವನು ನಿರ್ಧರಿಸಲಾರ, ಅವು ಸಾಮಾನ್ಯವಾಗಿ ಅವನ ದಿನಿತ್ಯದ ಬದುಕಿನಿಂದ ದೂರವಾದ ಮತ್ತು ಅವನ ಅನುಭವವನ್ನು ಮೀರಿದವಾಗಿದ್ದು, ಒಟ್ಟಾರೆಯಾಗಿ ತಾನು ಚಲಾಯಿಸುವ ಮತವು ನಗಣ್ಯವೆನ್ನುವ ಭಾವನೆಯುಂಟಾಗುತ್ತದೆ. ಹಿಂದಿನ ಕಾಲದ ಪಟ್ಟಣ ಪ್ರಜಾಪ್ರಭುತ್ವಗಳಲ್ಲಿ ಈ ದೋಷ ತೀರ ಸಣ್ಣದು; ಈಗ ಸ್ಥಳೀಯ ಸಂಸ್ಥೆಗಳಲ್ಲಿ ಹಾಗಿದೆ. ಜನರು ರಾಷ್ಟ್ರೀಯವಾದವಕ್ಕಿಂತ ಸ್ಥಳೀಯ ಪ್ರಶ್ನೆಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದರೆಂದು ಹೇಳಬಹುದೇ ಎಂದರೆ ಇದು ಸರಿಯಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಚುನಾವಣಾ ಕ್ಷೇತ್ರವು ವಿಶಾಲವಾಗಿದ್ದಷ್ಟೂ ಚುನಾವಣೆಯಲ್ಲಿ ಮತ ಚಲಾಯಿಸುವ ಪ್ರಮಾಣ ಹೆಚ್ಚುತ್ತದೆ. ಇದಕ್ಕೆ ಒಂದು ಕಾರಣ ಮುಖ್ಯ ಚುನಾವಣೆಗಳಲ್ಲಿ ಪ್ರಚಾರಕ್ಕಾಗಿ ವೆಚ್ಚಮಾಡುವ ಹೆಚ್ಚು ಹಣ, ಮತ್ತೊಂದು ಕಾರಣ, ಚುನಾವಣಾ ವಿಷಯಗಳೂ ತುಂಬ ಅಸಕ್ತಿಯನ್ನು ಕೆರಳಿಸುವಂತಿರುತ್ತವೆ. ಅತ್ಯಂತ ಆಸಕ್ತಿದಾಯಕ ವಿಷಯಗಳೆಂದರೆ ಯುದ್ಧ ಮತ್ತು ಶತ್ರುಗಳ ಜೊತೆಗಿನ ಸಂಬಂಧಕ್ಕೆ ಸಂಬಂಧಪಟ್ಟವು. ೧೯೧೦ ನೇ ಇಸವಿಯ ಜನವರಿಯಲ್ಲಿ ಒಬ್ಬ ಹಳ್ಳಿಯವನು ಹೇಳಿದ ಮಾತು ನನಗೆ

ನೆನಪಿಗೆ ಬರುತ್ತಿದೆ: ತಾನು ಕನ್ಸರ್ವೇಟಿವ್‌ಗೆ (ಅದು ಅವನ ಆರ್ಥಿಕ ಆಸಕ್ತಿಗಳಿಗೆ ವಿರುದ್ಧವಾದುದು) ಮತ ಹಾಕುವೆನೆಂದೂ, ಅದಕ್ಕೆ ಕಾರಣ ಲಿಬರಲ್‌ಗಳೇನಾದರೂ ಗೆದ್ದರೆ ಒಂದು ವಾರದಲ್ಲಿಯೇ ಜರ್ಮನ್‌ರು ದೇಶದೊಳಕ್ಕೆ ನುಗ್ಗುವರೆಂದು ತನಗೆ ಮನವರಿಕೆ ಮಾಡಿಕೊಡಲಾಗಿದೆ ಎಂಬುದು. ವಿಷಯಗಳ ಬಗ್ಗೆ ಸ್ವಲ್ಪ ಅರಿವಿದ್ದಿರಬಹುದಾದರೂ ಅವನೆಂದಾದರೂ ಪ್ಯಾರಿಶ್ ಕೌನ್ಸಿಲ್ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದ ಎಂದು ಭಾವಿಸುವ ಹಾಗಿಲ್ಲ; ಯಾಕೆಂದರೆ ಆ ವಿಷಯಗಳು ಜನರ ಭಾವೋದ್ರೇಕವನ್ನು ಕೆರಳಿಸುವ ಅಥವಾ ತಾನು ಅವಲಂಬಿಸಿರುವ ಐತಿಹ್ಯಗಳು ಅವನ ಕುತೂಹಲವನ್ನು ಕೆರಳಿಸದೇ ಹೋದುದು.

ಹೀಗಾಗಿ ಇಲ್ಲಿ ಒಂದು ಸಂದಿಗ್ಧತೆಯಿದೆ: ಜನಸಂಖ್ಯೆಯು ಸಣ್ಣದಾಗಿರುವಾಗ, ತನಗೆ ರಾಜಕೀಯ ಅಧಿಕಾರದಲ್ಲಿ ಒಂದಷ್ಟು ಪಾಲಿದೆ ಎಂಬ ಭಾವನೆಯನ್ನು ವ್ಯಕ್ತಿಯಲ್ಲಿ ಪ್ರಜಾಪ್ರಭುತ್ವವು ಮೂಡಿಸುತ್ತದೆ, ದೊಡ್ಡದಾಗಿರುವಾಗಲಲ್ಲ; ಮತ್ತೊಂದೆಡೆ, ಜನಸಂಖ್ಯೆಯು ಹೆಚ್ಚಿರುವಾಗ ವಿಷಯವು ಮುಖ್ಯವೆಂಬ ಭಾವನೆಯನ್ನು ಅವನಲ್ಲಿ ಮೂಡಿಸುತ್ತದೆ, ಸಣ್ಣದಾಗಿರುವಾಗಲಲ್ಲ.

ಚುನಾವಣಾ ಕ್ಷೇತ್ರವು ಭೌಗೋಳಿಕವಾದುದಾಗಿರದೆ ವೃತ್ತಿಪರರಾದ ಮತದಾರರನ್ನು ಹೊಂದಿರುವಾಗ ಈ ಕಷ್ಟವು ಸ್ವಲ್ಪ ಕಡಿಮೆಯಾಗುತ್ತದೆ, ಆಗ ನಿಜವಾದ ಪ್ರಜಾಪ್ರಭುತ್ವವು ಕಾರ್ಯಸಾಧ್ಯ; ಇದಕ್ಕೆ ಉದಾಹರಣೆಯೆಂದರೆ, ಕಾರ್ಮಿಕ ಸಂಘಗಳು. ಧೋರಣೆಗೆ ಸಂಬಂಧಿಸಿದ ಜಟಿಲತೆಯನ್ನು ಪ್ರತಿ ಘಟಕವೂ ಚರ್ಚಿಸಬಹುದು; ಯಾಕೆಂದರೆ ಸದಸ್ಯರಿಗೆ ಸಮಾನ ಆಸಕ್ತಿ ಹಾಗೂ ಅನುಭವಗಳಿರುತ್ತವೆ, ಇದರಿಂದಾಗಿ ಚರ್ಚೆಯು ಫಲಪ್ರದವಾಗುತ್ತದೆ, ಹೀಗಾಗಿ ಇಡೀ ಸಂಘದ ಧೋರಣೆಯು ಬಹುಪಾಲು ಸದಸ್ಯರು ಪಾಲುಗೊಂಡು ತೀರ್ಮಾನಿಸಿದುದೆಂಬ ಭಾವನೆಯುಂಟಾಗುತ್ತದೆ.

ಈ ವಿಧಾನಕ್ಕೆ ಮಿತಿಗಳಿರುವುದು ಸ್ಪಷ್ಟವಾಗಿಯೇ ಇದೆ. ಕೆಲವು ಪ್ರಶ್ನೆಗಳು ಮೂಲತಃ ಭೌಗೋಳಿಕವೇ ಆಗಿರುವುದರಿಂದ ಭೌಗೋಳಿಕ ಕ್ಷೇತ್ರಗಳಿರುವುದು ಅನಿವಾರ್ಯ. ಸಾರ್ವಜನಿಕ ಸಂಸ್ಥೆಗಳು ನಮ್ಮ ಜೀವನವನ್ನು ಅನೇಕ ಬಗೆಯಲ್ಲಿ ಪ್ರಭಾವಿಸುತ್ತವೆ, ರಾಜಕಾರಣಿಯಲ್ಲದ ವ್ಯಕ್ತಿಯು ತನಗೆ ಸಂಬಂಧಿಸಿದ ಬಹುಪಾಲು ರಾಷ್ಟ್ರೀಯ ಅಥವಾ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲಾರ. ಪ್ರಾಯಶಃ ಅತ್ಯುತ್ತಮ ವಿಧಾನವೆಂದರೆ, ಕೆಲವು ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಚುನಾಯಿತನಾಗುವ ಕಾರ್ಮಿಕ ಸಂಘದ ಪದಾಧಿಕಾರಿಯ ವಿಧಾನವನ್ನು ವಿಸ್ತರಿಸುವುದು. ಈಗ ಅಂತಹ

ಯಾವ ಪ್ರತಿನಿಧಿಯೂ ಇಲ್ಲ. ಪ್ರಜಾಪ್ರಭುತ್ವವು ಮನಃಪೂರ್ವಕವಾಗಿಯೂ ರಾಜಕೀಯವಾಗಿಯೂ ಉಳಿಯಬೇಕಾದರೆ ವಿವಿಧ ಹಿತಾಸಕ್ತಿಗಳನ್ನು ಕಾಪಾಡುವ ಸಂಘಟನೆಗಳು, ತಮ್ಮ ಕ್ಷೇತ್ರಗಳ ಮತಸಂಖ್ಯೆ ಹಾಗೂ ಉತ್ಸಾಹಗಳನ್ನು ರಾಜಕೀಯ ಸವಲತ್ತುಗಳ ಮೂಲಕ ಸಮರ್ಥಿಸುವ ಪ್ರಾತಿನಿಧ್ಯಗಳು ಆವಶ್ಯಕ. ಈ ಪ್ರತಿನಿಧಿಗಳು ಪಾರ್ಲಿಮೆಂಟ್‌ನ ಸ್ಥಾನದಲ್ಲಿರಬೇಕೆಂದು ನಾನು ವಾದಿಸುತ್ತಿಲ್ಲ, ಅವುಗಳ ಮೂಲಕ ಅವು ಪ್ರತಿನಿಧಿಸುವ ವಿವಿಧ ಹಿತಾಸಕ್ತಿಗಳ ಬಗ್ಗೆ ಪಾರ್ಲಿಮೆಂಟ್‌ಗೆ ಮನವರಿಕೆ ಮಾಡಿಕೊಡಬೇಕು ಎಂದಷ್ಟೇ ಹೇಳುತ್ತಿರುವುದು.

ಸ್ಥಳೀಯ ಹಿತಗಳೂ ಭಾವನೆಗಳೂ ಒಕ್ಕೂಟಕ್ಕೆ ಸಂಬಂಧಪಟ್ಟವಕ್ಕಿಂತ ಹೆಚ್ಚು ಪ್ರಬಲವಾಗಿರುವಾಗ, ಒಕ್ಕೂಟ ವ್ಯವಸ್ಥೆಯು ಹೆಚ್ಚು ಅಪೇಕ್ಷಣೀಯ. ಎಂದಾದರೂ ಅಂತಾರಾಷ್ಟ್ರೀಯ ಸರ್ಕಾರವು ಸ್ಥಾಪಿತವಾದರೆ, ಅದು ಸಹಜವಾಗಿಯೇ ರಾಷ್ಟ್ರೀಯ ಸರ್ಕಾರಗಳಿಂದಾದ ನಿರ್ದಿಷ್ಟ ಅಧಿಕಾರವ್ಯಾಪ್ತಿಯನ್ನು ಪಡೆದ ಒಕ್ಕೂಟವಾಗಿರಬೇಕಾಗುತ್ತದೆ. ಕೆಲವು ಉದ್ದೇಶಗಳಿಗಾಗಿ ಈಗಾಗಲೇ ಅಂತಾರಾಷ್ಟ್ರೀಯ ಪ್ರಾಧಿಕಾರಗಳಿವೆ, ಉದಾಹರಣೆಗೆ ಅಂಚೆವೆಚ್ಚ, ಆದರೆ ರಾಷ್ಟ್ರೀಯ ಹಿತಗಳಷ್ಟು ಜನರನ್ನು ಆಕರ್ಷಿಸದ ಉದ್ದೇಶಗಳಿವೆ. ಈ ಪರಿಸ್ಥಿತಿಯು ಇಲ್ಲದೆಡೆಗಳಲ್ಲಿ, ಒಕ್ಕೂಟ ಸರ್ಕಾರವು ವಿವಿಧ ಘಟಕಗಳ ಸರ್ಕಾರಗಳ ಅಧಿಕಾರಕ್ಷೇತ್ರಗಳನ್ನು ಆಕ್ರಮಿಸುವ ಸಂಭವಗಳಿರುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಸಂವಿಧಾನವು ಜಾರಿಗೆ ಬಂದಾಗಿನಿಂದಲೂ ಒಕ್ಕೂಟ ಸರ್ಕಾರವು ರಾಜ್ಯಗಳ ಕೆಲವು ಅಧಿಕಾರವನ್ನು ಕಸಿದುಕೊಂಡಿದೆ. ೧೮೭೧ ರಿಂದ ೧೯೧೮ ರವರೆಗೂ ಇದೇ ಪರಿಸ್ಥಿತಿಯು ಜರ್ಮನಿಯಲ್ಲಿಯೂ ಇತ್ತು. ಅಂತಾರಾಷ್ಟ್ರೀಯ ಒಕ್ಕೂಟ ಸರ್ಕಾರವು ಸಹ, ಪ್ರತ್ಯೇಕತೆಗೆ ಸಂಬಂಧಿಸಿದ ಅಂತಃಕಲಹವನ್ನು ತೀರ್ಮಾನಿಸಬೇಕಾದಾಗ, ಅದು ಸಫಲಗೊಂಡರೆ, ವಿವಿಧ ರಾಷ್ಟ್ರೀಯ ಸರ್ಕಾರಗಳಿಗಿಂತ ಅಪಾರ ಪ್ರಮಾಣದ ಪ್ರಾಬಲ್ಯವನ್ನು ಪಡೆಯುತ್ತದೆ. ಹೀಗೆ ಒಕ್ಕೂಟ ವ್ಯವಸ್ಥೆಯ ಸಾಮರ್ಥ್ಯವು ಒಂದು ವಿಧಾನವಾಗಿ ನಿರ್ದಿಷ್ಟವಾದ ಅನೇಕ ಮಿತಿಗಳನ್ನು ಹೊಂದಿರುತ್ತದೆ; ಆದರೆ ಈ ಮಿತಿಗಳಲ್ಲಿಯೇ ಅದು ಅಪೇಕ್ಷಣಿಯವೂ ಮುಖ್ಯವೂ ಆದುದು.

ವಿಶಾಲ ಪ್ರದೇಶಗಳ ಸರ್ಕಾರಗಳು ಆಧುನಿಕ ಯುಗದಲ್ಲಿ ಅನಿವಾರ್ಯ ಎಂದು ತೋರುತ್ತದೆ; ಹಾಗೆ ನೋಡದರೆ, ಕೆಲವು ಅತ್ಯಂತ ಪ್ರಮುಖ ಉದ್ದೇಶಗಳಿಗೆ, ವಿಶೇಷವಾಗಿ ಯುದ್ಧ–ಶಾಂತಿಗಳಿಗೆ ಸಂಬಂಧಿಸಿದವು, ಇಡೀ ಜಗತ್ತೇ ಸರಿಯಾದ ಏಕಕ್ಷೇತ್ರ. ವಿಶಾಲ ಪ್ರದೇಶಗಳ

ಮಾನಸಿಕ ಅನನುಕೂಲಗಳನ್ನು – ಅದರಲ್ಲೂ ತಾನು ತೀರ ಕೆಲಸಕ್ಕೆ ಬಾರದವನು ಎಂಬ ಮತದಾರನ ಅನಿಸಿಕೆ ಹಾಗೂ ಬಹುತೇಕ ಸಮಸ್ಯೆಗಳ ಬಗ್ಗೆ ಅರಿವೇ ಇಲ್ಲದಿರುವುದು – ಒಪ್ಪಿಕೊಳ್ಳಲೇಬೇಕು. ಅದನ್ನು ಮೇಲೆ ಸೂಚಿಸಿದ, ವಿವಿಧ ಹಿತಾಸಕ್ತಿಗಳ ಸಂಘಟನೆಗಳು ಮತ್ತು ಅಧಿಕಾರ ವಿಕೇಂದ್ರೀಕರಣಗಳಂತಹ ಕೆಲವು ವಿಧಾನಗಳ ಮೂಲಕ ಕನಿಷ್ಠಗೊಳಿಸಬೇಕು. ಹೆಚ್ಚಾದ ಸಾಮಾಜಿಕ ಸಂಘಟನೆಯ ಸನ್ನಿವೇಶದಲ್ಲಿ ಸ್ವಲ್ಪಮಟ್ಟಿಗೆ ವ್ಯಕ್ತಿ ನಿರ್ಬಂಧ ಅನಿವಾರ್ಯ. ಆದರೆ ಯುದ್ಧಭಯವನ್ನು ನಿವಾರಿಸಿಕೊಂಡರೆ, ಜನರು ತಿಳಿದುಕೊಳ್ಳಬೇಕಾದ ಹಾಗೂ ಪರಿಣಾಮಕಾರೀ ಧ್ವನಿ ಹೊಂದಿರಬೇಕಾದ ಸ್ಥಳೀಯ ಸಮಸ್ಯೆಗಳು ಈಗಿಗಿಂತಲೂ ಹೆಚ್ಚು ಮುಖ್ಯವಾಗುತ್ತವೆ. ಏಕೆಂದರೆ, ಮಿಕ್ಕ ಯಾವುದಕ್ಕಿಂತಲೂ ಯುದ್ಧಭಯವೇ ಜನರ ಗಮನವನ್ನು ದೂರದೇಶಗಳ ಮತ್ತು ಸರ್ಕಾರದ ಬಾಹ್ಯ ಚಟುವಟಿಕೆಗಳ ಕಡೆಗೆ ಬಲವಂತವಾಗಿ ಸೆಳೆಯುವಂತೆ ಮಾಡುವುದು.

ಪ್ರಜಾಪ್ರಭುತ್ವವಿರುವೆಡೆಗಳಲ್ಲಿ ವ್ಯಕ್ತಿಗಳನ್ನೂ ಅಲ್ಪಸಂಖ್ಯಾತರನ್ನೂ ದೌರ್ಜನ್ಯದಿಂದ ಸಂರಕ್ಷಿಸುವ ಆವಶ್ಯಕತೆ ಇನ್ನೂ ಇದೆ. ಇದಕ್ಕೆ ಎರಡು ಕಾರಣಗಳು: ದೌರ್ಜನ್ಯವು ತನ್ನಲ್ಲಿ ತಾನೇ ಅನಪೇಕ್ಷಣೀಯ, ಮತ್ತು ಇದರಿಂದ ಶಾಂತಿ ಸುವ್ಯವಸ್ಥೆಯು ಕೆಡುವ ಸಂಭವವಿರುತ್ತದೆ. ಮಾಂಟೆಸ್ಕ್ಯೂ ಪ್ರತಿಪಾದಿಸುವ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ಅಧಿಕಾರ ವಿಂಗಡಣೆ, ಸಾಂಪ್ರದಾಯಿಕ ಬ್ರಿಟಿಷ್ ನಂಬಿಕೆಗಳ ಇತಿಮಿತಿಗಳು, ಬೆಂಥಮ್‌ನ ರಾಜಕೀಯ ಸಿದ್ಧಾಂತಗಳು, ಮತ್ತು ಇಡೀ ಹತ್ತೊಂಬತ್ತನೆಯ ಶತಮಾನದ ಉದಾರತೆಗಳೆಲ್ಲವೂ ಅಧಿಕಾರದ ಬೇಕಾಬಿಟ್ಟಿ ಬಳಕೆಯನ್ನು ತಡೆಯಲು ರೂಪಿತವಾಗಿವೆ. ಆದರೆ ಈ ವಿಧಾನಗಳು ದಕ್ಷತೆಯ ಜೊತೆ ಹೊಂದಿಕೊಳ್ಳಲಾರವು ಎಂದು ಪರಿಗಣಿತವಾಗಿದೆ. ಯುದ್ಧ ಕಚೇರಿ ಮತ್ತು ಅಶ್ವದಳವನ್ನು ಬೇರ್ಪಡಿಸಿರುವುದು ಸೈನ್ಯ ಸರ್ವಾಧಿಕಾರವನ್ನು ತಡೆಯಲು ಎಂಬುದು ನಿರ್ವಿವಾದ, ಆದರೆ ಅದರಿಂದ ಕ್ರಿಮಿಯನ್ ಯುದ್ಧದಲ್ಲಿ ವಿಪರೀತ ಪರಿಣಾಮಗಳಾದವು. ಹಿಂದೆ, ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವೆ ಭಿನ್ನಾಭಿಪ್ರಾಯ ಮೂಡಿದಾಗ ಅದರಿಂದ ಭಾರಿ ಕಗ್ಗಂಟು ನಿರ್ಮಿತವಾಗುತ್ತಿತ್ತು; ಆದರೆ ಈಗ ಇಂಗ್ಲಂಡ್‌ನಲ್ಲಿ ಇವೆರಡು ಅಧಿಕಾರಗಳ ಇಂಗಿತ–ಉದ್ದೇಶಗಳನ್ನೂ ಸಚಿವಸಂಪುಟದಲ್ಲಿ ಒಗ್ಗೂಡಿಸಿರುವುದರಿಂದ ದಕ್ಷತೆ ಹೆಚ್ಚಿದೆ. ಅಧಿಕಾರ ದುರುಪಯೋಗವನ್ನು ತಡೆಗಟ್ಟಲು ಹದಿನೆಂಟು ಹತ್ತೊಂತ್ತನೆಯ ಶತಮಾನಗಳಲ್ಲಿ ಅನುಸರಿಸುತ್ತಿದ್ದ ವಿಧಾನಗಳು ಮತ್ತು ಈಗ ಬಳಕೆಯಲ್ಲಿರುವ ಅಂಥವೇ ಹೊಸ ವಿಧಾನಗಳು ಪರಿಣಾಮಕಾರಿಯಾಗಿಲ್ಲ. ನಾನಾ ಬಗೆಯ ಸ್ವಾತಂತ್ರ್ಯವನ್ನು ರಕ್ಷಿಸಲು ಮತ್ತು

ತಮ್ಮ ಮಿತಿಯನ್ನು ಮೀರುವ ಅಧಿಕಾರಿಗಳು, ಪೋಲೀಸರು, ಮ್ಯಾಜಿಸ್ಟ್ರೇಟ್‌ಗಳು ಮತ್ತು ನ್ಯಾಯಮೂರ್ತಿಗಳ ಮೇಲಿನ ಟೀಕೆಗಳನ್ನು ಬೇಗ ಗಮನಿಸುವಂತೆ ಮಾಡಲು ಸಂಘಟನೆಗಳ ಆವಶ್ಯಕತೆಯಿದೆ. ಅಲ್ಲದೆ ಮುಖ್ಯ ಸಾರ್ವಜನಿಕ ಸೇವಾ ವಿಭಾಗಗಳಲ್ಲಿ ಸ್ವಲ್ಪಮಟ್ಟಿಗಿನ ಅಧಿಕಾರ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗಿದೆ. ಉದಾಹರಣೆಗೆ, ಪೋಲೀಸ್ ಮತ್ತು ವಿಮಾನ ದಳಗಳ ಬಗೆಗಿನ ಸಾಮಾನ್ಯ ಅಭಿಪ್ರಾಯವು ಮಿಕ್ಕೆಲ್ಲ ಕಡೆಯದಕ್ಕಿಂತ ಹೆಚ್ಚು ಪ್ರತಿಕೂಲಕರವಾಗಿರುವುದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು.

ಪ್ರಜಾಪ್ರಭುತ್ವದಲ್ಲಿ, ನಿರ್ದಿಷ್ಟ ಆಡಳಿತಾತ್ಮಕ ಕಾರ್ಯಗಳನ್ನು ಪಡೆದಿರಬೇಕೆಂದು ಉದ್ದೇಶಿಸಲಾದ ವ್ಯಕ್ತಿಗಳೂ ಸಂಘಟನೆಗಳೂ, ಪ್ರತಿರೋಧವೊಡ್ಡದಿದ್ದರೆ, ಅನಪೇಕ್ಷಣೀಯ ಸ್ವತಂತ್ರಾಧಿಕಾರವನ್ನು ಹೊಂದುವ ಸಂಭವವಿರುತ್ತದೆ. ಪೋಲೀಸ್‌ರ ವಿಚಾರದಲ್ಲಿ ಇದು ಹೆಚ್ಚು ನಿಜ. ಪೋಲೀಸ್‌ರನ್ನು ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆಗೊಳಪಡಿಸದ್ದರಿಂದ ಅಮೆರಿಕದಲ್ಲಿ ಆದ ಕೆಡುಕುಗಳು ಜೆರೋಮ್ ಹಾಪ್‌ಕಿನ್ಸ್‌ರ *'ಅವರ್ ಲಾಲೆಸ್ ಪೊಲೀಸ್'* ಕೃತಿಯಲ್ಲಿ ಶಕ್ತಿಶಾಲಿ ರೀತಿಯಲ್ಲಿ ವರ್ಣಿತವಾಗಿವೆ. ಅದರ ತಾತ್ಪರ್ಯವೆಂದರೆ, ಒಬ್ಬ ಪೋಲೀಸ್ ಅಧಿಕಾರಿ ಆರೋಪಿಯಿಂದ ಬಲವಂತವಾಗಿ ತಪ್ಪೊಪ್ಪಿಗೆಯನ್ನು ಪಡೆದ, ಕೋರ್ಟ್ ಅದನ್ನು ಅಪರಾಧದ ಸಾಕ್ಷ್ಯಾಧಾರವೆಂದು ಒಪ್ಪಿಕೊಂಡಿತು, ಆಗ ಶಿಕ್ಷೆ ವಿಧಿಸಲು ನೆರವಾಗುವ ಕ್ರಮಗಳನ್ನು ಕೈಗೊಂಡನೆಂದು ಆ ಪೋಲೀಸ್ ಅಧಿಕಾರಿಗೆ ಬಡ್ತಿ ನೀಡಲಾಯಿತು, ಇದರಿಂದ್ರಾರೋಪಿಯು ತಪ್ಪನ್ನು ಒಪ್ಪಿಕೊಳ್ಳುವವರೆಗೂ ಅಧಿಕಾರಿಗಳು ಹಿಂಸೆ ನೀಡುವುದು ಅನುಕೂಲಕರವೆನ್ನಿಸಿತು. ಈ ಕೆಡುಕು ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ದೇಶಗಳಲ್ಲಿಯೂ ಇದೆ. ಇಂಡಿಯದಲ್ಲಂತೂ ಇದು ವ್ಯಾಪಕವಾಗಿದೆ. ತನಿಖಾದಳವು ಹಿಂಸೆ ನೀಡಲು ಕಾರಣ ತಪ್ಪೊಪ್ಪಿಗೆಯನ್ನು ಪಡೆಯಬೇಕೆಂಬ ಬಯಕೆಯೇ. ಪ್ರಾಚೀನ ಚೀನದಲ್ಲಿ, ಸಂದೇಹಕ್ಕೊಳಗಾಗುವವರನ್ನು ಹಿಂಸೆಗೊಳಪಡಿಸುವುದು ಸಾಮಾನ್ಯವಾಗಿತ್ತು, ಏಕೆಂದರೆ ಯಾವುದೇ ಆರೋಪಿಗೆ ಸ್ವಂತ ತಪ್ಪೊಪ್ಪಿಗೆಯ ಹೊರತು ಶಿಕ್ಷೆ ನೀಡಬಾರದೆಂದು ಒಬ್ಬ ಮಾನವತಾವಾದಿ ಸಮ್ರಾಟನು ತೀರ್ಪು ನೀಡಿದ್ದ. ಪೋಲೀಸರ ಅಧಿಕಾರದ ಪಳಗಿಸುವಿಕೆಗೆ ಅತ್ಯಗತ್ಯವಾದುದೆಂದರೆ, ಎಂಥ ಪರಿಸ್ಥಿತಿಯಲ್ಲಿಯೂ ತಪ್ಪೊಪ್ಪಿಗೆಯನ್ನು ಸಾಕ್ಷ್ಯಾಧಾರವೆಂದು ಒಪ್ಪದಿರುವುದು.

ಈ ಸುಧಾರಣೆಯು ಆವಶ್ಯಕವಾದರೂ, ಇದಿಷ್ಟೇ ಏತಕ್ಕೂ ಸಾಲದು. ಎಲ್ಲ ದೇಶಗಳ ಪೋಲೀಸ್ ವ್ಯವಸ್ಥೆಯೂ ಒಬ್ಬ ಆರೋಪಿಯ

ವಿರುದ್ಧ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದು ಸಾರ್ವಜನಿಕ ಹಿತಾಸಕ್ತಿಯಿಂದ ಎಂಬ ಹಾಗೂ ಅವನ ಪರವಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಣೆಯು ಅವನ ವೈಯಕ್ತಿಕ ವಿಷಯವೆಂಬ ಭಾವನೆಯನ್ನಾಧರಿಸಿದೆ. ನಿರಪರಾಧಿಯನ್ನು ಖುಲಾಸೆಗೊಳಿಸುವುದು ಅಪರಾಧಿಗೆ ಶಿಕ್ಷೆ ವಿಧಿಸುವುದಕ್ಕಿಂತ ಮುಖ್ಯವೆಂದು ವಾದಿಸಲಾಗುತ್ತದೆ, ಆದರೆ ಎಲ್ಲ ಕಡೆಯೂ ಅಪರಾಧಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸುವುದು ಪೋಲೀಸರ ಕರ್ತವ್ಯವಾಗಿರುವಂತೆ ನಿರಪರಾಧಿತನಕ್ಕಲ್ಲ. ನಿಮ್ಮ ಮೇಲೆ ಅನ್ಯಾಯವಾಗಿ ಕೊಲೆಯ ಆರೋಪವೊಂದನ್ನು ಹೊರಿಸಲಾಗಿದೆ, ಹಾಗೂ ನೀವು ಅಪರಾಧಿಯೆಂದು ಮೇಲುನೋಟಕ್ಕೆ ಭಾಸವಾಗುತ್ತಿದೆ ಎಂದು ಭಾವಿಸಿಕೊಳ್ಳಿ. ಆಗ ಸರ್ಕಾರ ತನ್ನೆಲ್ಲ ಸಂಪನ್ಮೂಲಗಳನ್ನೂ ನಿಮ್ಮ ವಿರುದ್ಧದ ಸಾಧ್ಯವಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು ನಿಯೋಜಿಸುತ್ತದೆ, ನಿಮ್ಮ ವಿರುದ್ಧ ಆರೋಪವು ನಿಜವೆಂದು ಜ್ಯೂರಿಗಳ ಮನಸ್ಸಿನಲ್ಲಿ ಮೂಡಿಸಲು ಅತ್ಯಂತ ಮೇಧಾವಿ ವಕೀಲರನ್ನು ನೇಮಿಸಿಕೊಳ್ಳುತ್ತದೆ, ಏತನ್ಮಧ್ಯೆ ನೀವು ನಿಮ್ಮ ಮುಗ್ಧತೆಯ ಪರವಾದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು ಕೂಡಿಟ್ಟ ಹಣವನ್ನೆಲ್ಲ ವ್ಯಯಮಾಡಬೇಕು, ನಿಮ್ಮ ಸಹಾಯಕ್ಕೆ ಯಾವುದೇ ಸಾರ್ವಜನಿಕ ಸಂಸ್ಥೆ ಮುಂದೆ ಬರುವುದಿಲ್ಲ. ಬಡವರೆಂದು ಬೇಡಿಕೊಂಡರೆ ನಿಮಗೆ ವಕೀಲರ ನೆರವನ್ನು ಒದಗಿಸಬಹುದು, ಆದರೆ ಪ್ರಾಯಶಃ ಅವರು ಪಬ್ಲಿಕ್ ಪ್ರಾಸಿಕ್ಯೂಟರ್ ಅಷ್ಟು ಮೇಧಾವಿಗಳಾಗಿರಲಿಕ್ಕಿಲ್ಲ. ನೀವೇನಾದರೂ ಖುಲಾಸೆಗೊಂಡರೆ, ಸಿನೆಮಾಗಳ ಅಥವಾ ಭಾನುವಾರದ ಪತ್ರಿಕೆಗಳ ಮೂಲಕ ದಿವಾಳಿತನವನ್ನು ನಿವಾರಿಸಿಕೊಳ್ಳಬೇಕು, ಅಷ್ಟೆ. ಆದರೆ ನಿಮ್ಮನ್ನು ಅನ್ಯಾಯವಾಗಿ ಆಪರಾಧಿಯೆಂದು ಸಾಬೀತುಗೊಳಿಸುವ ಸಾಧ್ಯತೆಯೇ ಹೆಚ್ಚು.

ಕಾನೂನುಬದ್ಧ ನಾಗರಿಕರನ್ನು ಪೋಲೀಸರ ಅನ್ಯಾಯದ ಶಿಕ್ಷೆಯಿಂದ ಪಾರು ಮಾಡಬೇಕಾದರೆ, ಎರಡು ಬಗೆಯ ಪೋಲೀಸ್ ದಳಗಳೂ ಎರಡು ಬಗೆಯ ಸ್ಕಾಟ್‌ಲಂಡ್ ಯಾರ್ಡ್‌ಗಳೂ ಇರಬೇಕಾಗುತ್ತದೆ, ಒಂದು ಅಪರಾಧವನ್ನು ಸಾಬೀತುಗೊಳಿಸಲು, ಇನ್ನೊಂದು ನಿರಪರಾಧಿತ್ವವನ್ನು ತೋರಿಸಲು. ಪಬ್ಲಿಕ್ ಪ್ರಾಸಿಕ್ಯೂಟರ್ ಜೊತೆಗೆ, ಅಷ್ಟೇ ಮೇಧಾವಿತನದ ಪಬ್ಲಿಕ್ ಡಿಫ಼ೆಂಡರ್ ಕೂಡ ಇರಬೇಕಾಗುತ್ತದೆ. ನಿರಪರಾಧಿಯ ಬಿಡುಗಡೆಯು ಅಪರಾಧಿಗೆ ಶಿಕ್ಷೆ ಕೊಡಿಸುವುದರಷ್ಟೇ ಸಾರ್ವಜನಿಕ ಹಿತದ ಕಾರ್ಯವೆಂದು ಒಪ್ಪಿಕೊಂಡರೆ ಇದು ಆಗಬೇಕು. ಮೇಲಾಗಿ, ಒಂದು ಬಗೆಯ ಅಪರಾಧಗಳಿಗೆ ಸಂಬಂಧಿಸಿದ ಸನ್ನಿವೇಶಗಳಲ್ಲಿ, ಅಂದರೆ ತಮ್ಮ 'ಕರ್ತವ್ಯ' ನಿರ್ವಹಣೆಯಲ್ಲಿ

ಕ್ರಮ ಜರುಗಿಸುವ ಪೋಲೀಸ್ ನಡೆಸುವ ಅಪರಾಧಗಳ ವಿರುದ್ಧ ಪ್ರತಿವಾದಿಯಾಗುವ ಪೋಲೀಸ್ ದಳವು ಮತ್ತೊಂದರಲ್ಲಿ ಕ್ರಮ ಜರುಗಿಸುವ (ಪ್ರಾಸಿಕ್ಯೂಟಿಂಗ್) ದಳವಾಗಬೇಕು. ಈ ಕ್ರಮಗಳಿಂದ ಹೊರತು, ನನಗೆ ತಿಳಿದ ಮಟ್ಟಿಗೆ, ಬೇರೆ ಕ್ರಮಗಳಿಂದ ಈಗಿನ ಪೋಲೀಸ್ ದೌರ್ಜನ್ಯವನ್ನು ನಿವಾರಿಸಲು ಸಾಧ್ಯವಿಲ್ಲ.

೨

ಸ್ವೇಚ್ಛಾಧಿಕಾರ ಪ್ರಯೋಗವನ್ನು ಕನಿಷ್ಠಗೊಳಿಸಲು ಆವಶ್ಯಕವಾದ ಆರ್ಥಿಕ ಪರಿಸ್ಥಿತಿಗಳ ಕಡೆಗೆ ನಾನೀಗ ಗಮನ ಹರಿಸುತ್ತೇನೆ. ಈ ವಿಷಯವು ಅತ್ಯಂತ ಪ್ರಮುಖವಾದುದು, ತನ್ನಷ್ಟಕ್ಕೆ ತಾನೇ ಹಾಗೂ ಅದಕ್ಕೆ ಸಂಬಂಧಿಸಿದ ಆಲೋಚನೆಗಳಲ್ಲಿ ಸಾಕಷ್ಟು ಗೊಂದಲಗಳಿವೆ ಎಂಬ ಕಾರಣದಿಂದ.

ರಾಜಕೀಯ ಪ್ರಜಾಪ್ರಭುತ್ವವು ನಮ್ಮ ಸಮಸ್ಯೆಗಳ ಒಂದು ಭಾಗಕ್ಕೆ ಪರಿಹಾರ ಒದಗಿಸುತ್ತದೆ, ಆದರೆ ಎಲ್ಲಕ್ಕೂ ಅಲ್ಲ. ಆರ್ಥಿಕ ಅಧಿಕಾರವು ರಾಜಪ್ರಭುತ್ವ ಅಥವಾ ಸ್ವಲ್ಪಜನಾಧಿಪತ್ಯದ ವಶದಲ್ಲಿದ್ದಾಗ ರಾಜಕೀಯದಿಂದ ಮಾತ್ರವೇ ನಿಜವಾದ ಅಧಿಕಾರದ ಸಮಾನತೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಹೇಳಿದ. ಅದರಿಂದ ಆರ್ಥಿಕ ಅಧಿಕಾರವು ದೇಶದ ವಶದಲ್ಲಿಬೇಕು ಹಾಗೂ ದೇಶವು ಪ್ರಜಾಸತ್ತಾತ್ಮಕವಾಗಿರಬೇಕೆಂಬ ವಾದವು ಮೂಡಿಬಂತು. ಈಗ ಮಾರ್ಕ್ಸ್‌ವಾದಿಗಳೆಂದು ಹೇಳಿಕೊಳ್ಳುತ್ತಿರುವವರು ಮೇಲಿನ ಸಿದ್ಧಾಂತದ ಅರ್ಧಭಾಗವನ್ನು ಮಾತ್ರ ನಿಜವಾಗಿಸಿದ್ದಾರೆ, ಆದರೆ ದೇಶವು ಪ್ರಜಾಸತ್ತಾತ್ಮಕವಾಗಿರಬೇಕೆಂಬುದನ್ನು ಮಾತ್ರ ಗಾಳಿಗೆ ತೂರಿದ್ದಾರೆ. ಹೀಗಾಗಿ ಅವರು ರಾಜಕೀಯ ಹಾಗೂ ಆರ್ಥಿಕ ಅಧಿಕಾರಗಳೆರಡನ್ನೂ ಸ್ವಲ್ಪಜನಾಧಿಪತ್ಯದ ಕೈಗೆ ಒಪ್ಪಿಸಿದ್ದಾರೆ, ಇದರ ಪರಿಣಾಮವಾಗಿ ಅದು ಹೆಚ್ಚು ಬಲಿಷ್ಠವಾಗಿ ಹಿಂದಿನ ಯಾವುದೇ ಸ್ವಲ್ಪಜನಾಧಿಪತ್ಯಕ್ಕಿಂತ ಮಿಗಿಲಾದ ದೌರ್ಜನ್ಯವನ್ನೆಸಗಲು ಸಜ್ಜಾಗಿಸಿದ್ದಾರೆ.

ಹಳೆಯ ಮಾದರಿಯ ಪ್ರಜಾಪ್ರಭುತ್ವ ಹಾಗೂ ಹೊಸ ಮಾದರಿಯ ಮಾರ್ಕ್ಸಿಸಂಗಳು ಅಧಿಕಾರವನ್ನು ಪಳಗಿಸುವ ಗುರಿಯನ್ನು ಹೊಂದಿದ್ದವು. ಮೊದಲನೆಯದು ವಿಫಲವಾಗಲು ಕಾರಣ ಅದು ರಾಜಕೀಯವಾಗಿದ್ದದ್ದು, ಎರಡನೆಯದು ಕೇವಲ ಆರ್ಥಿಕವಾಗಿದ್ದುದರಿಂದ. ಇವೆರಡರ ಸೇರುವಿಕೆಯಿಲ್ಲದಿದ್ದರೆ ಪರಿಹಾರದ ಹತ್ತಿರಕ್ಕೆ ಸುಳಿಯುವುದೂ ಅಸಾಧ್ಯವಾಗುತ್ತದೆ.

ಭೂಮಿ ಮತ್ತು ಭಾರಿ ಕೈಗಾರಿಕೋದ್ಯಮಗಳ ಒಡೆತನವು ದೇಶದ ಕೈಯಲ್ಲಿರಬೇಕೆಂಬ ವಾದವು ಭಾಗಶಃ ತಾಂತ್ರಿಕವಾದುದು, ಭಾಗಶಃ ರಾಜಕೀಯವಾದುದು. ಫ಼ೇಬಿಯನ್ ಸೊಸೈಟಿ, ಮತ್ತು ಟೆನಿಸ್ಸಿ ವ್ಯಾಲಿ ಅಥಾರಿಟಿ ವಿಷಯಗಳಿಗೆ ಸಂಬಂಧಿಸಿದಂತೆ ಸ್ವಲ್ಪಮಟ್ಟಿಗೆ ಅಮೆರಿಕದಲ್ಲಿ ಹೊರತು ತಾಂತ್ರಿಕ ವಾದಕ್ಕೆ ಹೆಚ್ಚಿನ ಬೆಂಬಲವಿಲ್ಲ. ಆದರೂ ಅವು ತುಂಬ ಬಲಿಷ್ಠವಾಗಿವೆ, ಅದೂ ವಿಶೇಷವಾಗಿ, ವಿದ್ಯುತ್ ಮತ್ತು ನೀರಿನ ಅಧಿಕಾರದ ವಿಷಯದಲ್ಲಿ; ಇದರಿಂದ ಸಂಪ್ರದಾಯವಾದಿ ಸರ್ಕಾರಗಳು ಕೂಡ ತಾಂತ್ರಿಕ ದೃಷ್ಟಿಕೋನದಿಂದ ನೋಡಿದರೆ ಸಮಾಜವಾದಿ ಎನ್ನಿಸುವ ಕ್ರಮಗಳನ್ನು ಕೈಗೊಳ್ಳುವಂತಾಗಿದೆ. ಆಧುನಿಕ ತಂತ್ರದ ಪರಿಣಾಮವಾಗಿ ಸಂಘಟನೆಗಳು ಬೆಳೆಯುವ ಮತ್ತು ಒಗ್ಗೂಡಿ ತಮ್ಮ ವ್ಯಾಪ್ತಿಯನ್ನು ಹಿಗ್ಗಲಿಸಿಕೊಳ್ಳುವ ಸಾಧ್ಯತೆಯುಂಟಾಗಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ; ಇದರ ಅನಿವಾರ್ಯ ಪರಿಣಾಮವೆಂದರೆ ರಾಜಕೀಯವು ಹೆಚ್ಚು ಹೆಚ್ಚಾಗಿ ಆರ್ಥಿಕ ಕಾರ್ಯಗಳನ್ನು ವಹಿಸಿಕೊಳ್ಳಬೇಕು, ಅಥವಾ ಸರ್ಕಾರವನ್ನೂ ಮೀರುವ ಅಥವಾ ಅದನ್ನು ಹಿಡಿತದಲ್ಲಿಟ್ಟುಕೊಳ್ಳಬಲ್ಲಷ್ಟು ಬಲಿಷ್ಠವಾದ ದೊಡ್ಡ ಖಾಸಗಿ ಉದ್ಯಮಗಳಿಗೆ ಅಧಿಕಾರವನ್ನು ಭಾಗಶಃ ವಹಿಸಿಕೊಡಬೇಕಾದ ಪರಿಸ್ಥಿತಿಯುಂಟಾಗಿದೆ. ಅಂತಹ ಉದ್ಯಮಗಳ ಮೇಲೆ ಸರ್ಕಾರವು ಹಿಡಿತ ಸಾಧಿಸದಿದ್ದರೆ, ತಾನು ಅವುಗಳ ಕೈಗೊಂಬೆಯಾಗಬೇಕಾಗುತ್ತದೆ, ಆಗ ಅವೇ ನಿಜವಾದ ಸರ್ಕಾರವಾಗುತ್ತದೆ. ಅಂತೂ, ಆಧುನಿಕ ತಂತ್ರಗಾರಿಕೆಯಿರುವ ಕಡೆಗಳಲ್ಲಿ, ಯಾವುದೋ ರೀತಿಯಲ್ಲಿ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳು ಒಂದುಗೂಡುತ್ತವೆ. ಒಗ್ಗೂಡುವಿಕೆಯ ಕಡೆಗಿನ ಈ ಚಲನೆಗೆ ಒಂದು ಬಗೆಯ ಅದಮ್ಯ ವ್ಯಕ್ತ್ಯತೀತ ಲಕ್ಷಣವಿದೆ, ಇದಕ್ಕೆ ಅಭಿವೃದ್ಧಿಯೇ ಕಾರಣ ಎಂದು ಮಾರ್ಕ್ಸ್ ಹೇಳುತ್ತಾನೆ.

ಸಮಾಜವಾದವು ಒಂದು ರಾಜಕೀಯ ಆಂದೋಲನವಾಗಿ ಕೈಗಾರಿಕಾ ಕಾರ್ಮಿಕರ ಹಿತಗಳನ್ನು ಕಾಪಾಡುವ ಗುರಿಯನ್ನು ಹೊಂದಿದೆ; ಅದರ ತಾಂತ್ರಿಕ ಅನುಕೂಲಗಳನ್ನು ಹೆಚ್ಚಾಗಿ ಹಿನ್ನೆಲೆಯಲ್ಲಿಯೇ ಉಳಿಸಲಾಗಿದೆ. ಖಾಸಗಿ ಬಂಡವಾಳಗಾರನ ಆರ್ಥಿಕ ಬಲವು ಕಾರ್ಮಿಕನನ್ನು ದಮನ ಮಾಡಲು ಸಹಾಯಕ ಎಂಬ ನಂಬಿಕೆಯಿದೆ; ಹಿಂದಿನ ಕಾಲದ ಕುಶಲಕರ್ಮಿಯಂತೆ ಕಾರ್ಮಿಕನು ತನ್ನ ಉತ್ಪಾದನಾ ಘಟಕವನ್ನು ಹೊಂದಿರಲು ಸಾಧ್ಯವಿಲ್ಲ, ಹಾಗಾಗಿ ಅವನನ್ನು ಪಾರುಮಾಡಬಲ್ಲ ಏಕೈಕ ವಿಧಾನವೆಂದರೆ ಇಡೀ ಕಾರ್ಮಿಕ ಸಮುದಾಯವೇ ಅದರ ಒಡೆತನವನ್ನು ಹೊಂದುವಂತಾಗುವುದು. ಖಾಸಗಿ ಬಂಡವಾಳಗಾರರ ಒಡೆತನವನ್ನು ತಪ್ಪಿಸಿದರೆ, ದೇಶವೇ ಇಡೀ ಕಾರ್ಮಿಕ

ಸಮುದಾಯದಿಂದ ಕೂಡಿರುವಂತಾಗುತ್ತದೆ, ಅಲ್ಲದೆ, ಅದರ ಪರಿಣಾಮವಾಗಿ ಭೂಮಿ ಮತ್ತು ಬಂಡವಾಳಗಳ ಒಡೆತನವನ್ನು ದೇಶವೇ ಹೊಂದಿದ್ದು ಆರ್ಥಿಕ ಅಧಿಕಾರದ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದು, ಅನ್ಯಥಾ ಅಲ್ಲ ಎಂದು ವಾದಿಸಲಾಗುತ್ತದೆ. ಇದು ಅಧಿಕಾರವನ್ನು ಪಳಗಿಸುವ ಕುರಿತು ಒಂದು ಪ್ರಸ್ತಾವನೆ, ಹೀಗಾಗಿ ಅದು ನಮ್ಮ ಈಗಿನ ಚರ್ಚೆಯ ಪರಿಧಿಯಲ್ಲಿಯೇ ಬರುತ್ತದೆ.

ಈ ವಾದದ ಬಗ್ಗೆ ಪರಿಶೀಲಿಸುವ ಮುನ್ನ, ಸೂಕ್ತ ರಕ್ಷಣೆ ಮತ್ತು ವಿಸ್ತರಣೆಗಳನ್ನೊದಗಿಸಿದರೆ, ಅದು ಸಮಂಜಸವೆಂದು ಪರಿಗಣಿಸುವುದಾಗಿ ನಿಸ್ಸಂದಿಗ್ಧತೆಯಿಂದ ಹೇಳಬಯಸುತ್ತೇನೆ. ಅದಕ್ಕೆ ವ್ಯತಿರಿಕ್ತವಾಗಿ, ಸೂಕ್ತ ರಕ್ಷಣೆ ಮತ್ತು ವಿಸ್ತರಣೆಗಳನ್ನೊದಗಿಸದಿದ್ದರೆ ಅದನ್ನು ಬಹು ಅಪಾಯಕಾರಿಯೆಂದೂ, ಆರ್ಥಿಕ ದೌರ್ಜನ್ಯದಿಂದ ಬಿಡುಗಡೆ ಹೊಂದಲು ಬಯಸುವವರನ್ನು ತಮಗೆ ಅರಿವಿಲ್ಲದಂತೆಯೇ ಆರ್ಥಿಕವೂ ರಾಜಕೀಯವೂ ಆದ ಮತ್ತು ಮುಂಚಿನದಕ್ಕಿಂತ ಹೆಚ್ಚು ತೀವ್ರವೂ ಭಯಂಕರವೂ ಆದ ಹೊಸ ಬಗೆಯ ದೌರ್ಜನ್ಯವಿರುವ ವ್ಯವಸ್ಥೆಯನ್ನು ನಿರ್ಮಿಸುವಂತಹ ತಪ್ಪುದಾರಿಗೆಳೆಯುವಂತಹುದೆಂದೂ ಭಾವಿಸುತ್ತೇನೆ.

ಮೊದಲನೆಯದಾಗಿ, 'ಒಡೆತನ' ಮತ್ತು 'ಹತೋಟಿ'ಗಳು ಒಂದೇ ಅಲ್ಲ. ನಿದರ್ಶನಕ್ಕೆ, ರೈಲ್ವೆಯು ಸರ್ಕಾರದ ಒಡೆತನದಲ್ಲಿದೆ ಎಂದು ಭಾವಿಸೋಣ. ಮತ್ತು ಸರ್ಕಾರವೆಂದರೆ ಇಡೀ ಪ್ರಜಾಸಮುದಾಯ ಎಂದು ತಿಳಿಯೋಣ; ಅಷ್ಟಕ್ಕೇ ಇದರಿಂದ ಸಾಮಾನ್ಯ ಪ್ರಜೆಗೆ ರೈಲ್ವೆಯ ಮೇಲೆ ಏನಾದರೂ ಅಧಿಕಾರವಿರಬಹುದೆಂದು ತಿಳಿಯಲಾಗದು. ಒಂದು ಕ್ಷಣ, ಮೆ. ಬರ್ಲ್ ಮತ್ತು ಮೀನ್ಸ್ ಅವರು ಅಮೆರಿಕದ ಭಾರಿ ಉದ್ಯಮಗಳ ಒಡೆತನ ಮತ್ತು ಹತೋಟಿಗಳ ಬಗ್ಗೆ ಏನು ಹೇಳುವರೆಂಬುದನ್ನು ಪರಿಶೀಲಿಸೋಣ. ಅಂತಹ ಬಹುಪಾಲು ಸಂಸ್ಥೆಗಳಲ್ಲಿ, ಎಲ್ಲ ಡೈರೆಕ್ಟರುಗಳೂ ಸಾಮಾನ್ಯವಾಗಿ ಶೇಕಡ ಒಂದೋ ಎರಡೋ ಭಾಗದಷ್ಟು ಸ್ಟಾಕ್‌ಗಳನ್ನು ಮಾತ್ರ ಹೊಂದಿರುತ್ತಾರೆ, ಆದರೂ ವಸ್ತುತಃ ಸಂಪೂರ್ಣ ಹತೋಟಿಯನ್ನು ಪಡೆದಿರುತ್ತಾರೆ ಎಂಬುದು ಅವರ ವಿಶ್ಲೇಷಣೆ:

"ಬೋರ್ಡ್ ಚುನಾವಣೆಗಳಲ್ಲಿ ಸ್ಟಾಕ್‌ದಾರರಿಗೆ ಸಾಮಾನ್ಯವಾಗಿ ಮೂರು ಆಯ್ಕೆಗಳಿರುತ್ತವೆ: ಅವರು ಓಟು ಮಾಡದೆ ಇರಬಹುದು, ವಾರ್ಷಿಕ ಸಭೆಗೆ ಸ್ವತಃ ಹಾಜರಾಗಿ ಖುದ್ದು ಓಟು ಮಾಡಬಹುದು ಅಥವಾ ಕಂಪೆನಿಯ ವ್ಯವಸ್ಥಾಪಕವರ್ಗದ ಪ್ರಾಕ್ಸಿ ಸಮಿತಿಯು ಆಯ್ಕೆ ಮಾಡಿದ ನಿರ್ದಿಷ್ಟ ವ್ಯಕ್ತಿಗೆ ತನ್ನ ಓಟನ್ನು ವರ್ಗಾಯಿಸುವ ಪ್ರಾಕ್ಸಿಗೆ

ಸಹಿಮಾಡಬಹುದು. ಸಭೆಗೆ ಹೋಗಿ ಅವನು ನೀಡುವ ವೈಯಕ್ತಿಕ ಓಟಿಗೆ ಯಾವುದೇ ಅಥವಾ ಹೆಚ್ಚಿನ ಬೆಲೆಯಿಲ್ಲ; ತನ್ನ ಬಳಿ ಭಾರಿ ಸಂಖ್ಯೆಯ ಸ್ಟಾಕ್‌ಗಳಿಲ್ಲದಿದ್ದರೆ ವಸ್ತುತಃ ಓಟು ಮಾಡದಿರುವುದಕ್ಕೆ ಅಥವಾ ಯಾರ ಮೇಲೆ ತನಗೆ ಹತೋಟಿಯೇ ಇಲ್ಲವೋ ಮತ್ತು ಯಾರ ಆಯ್ಕೆಯಲ್ಲಿ ತನ್ನ ಪಾತ್ರವಿರಲಿಲ್ಲವೋ ಅವನಿಗೆ ತನ್ನ ಓಟನ್ನು ಒಪ್ಪಿಸಿಬಿಡುವುದಕ್ಕೆ ಸಮಾನ. *ಎರಡೂ ಸಂದರ್ಭಗಳಲ್ಲಿ ಅವನು ಯಾವುದೇ ಪ್ರಮಾಣದ ಹತೋಟಿಯನ್ನು ಸಾಧಿಸಲಾರ. ನಿಜವಾದ ಹತೋಟಿಯಿರುವುದು ಪ್ರಾಕ್ಸಿ ಸಮಿತಿಯನ್ನು ಆಯ್ಕೆಮಾಡುವವರ ಕೈಯಲ್ಲಿ.... ಪ್ರಾಕ್ಸಿ ಸಮಿತಿಯನ್ನು ಆಯ್ಕೆಮಾಡುವವರು ಪ್ರಸ್ತುತ ವ್ಯವಸ್ಥಾಪಕವರ್ಗದವರೇ ಆಗಿರುವುದರಿಂದ ಅವರು ತಮ್ಮ ಉತ್ತರಾಧಿಕಾರಿಗಳು ಯಾರಾಗಬೇಕೆಂದು ನಿರ್ಧರಿಸಬಲ್ಲರು.'*[೧]

ಮೇಲಿನ ಉದ್ಧೃತ ಭಾಗದಲ್ಲಿ ವರ್ಣಿಸಿರುವ ಅಸಹಾಯಕ ವ್ಯಕ್ತಿಗಳು ಸಾಮಾನ್ಯರಲ್ಲ, ಬಂಡವಾಳದಾರರೇ ಎಂಬುದನ್ನು ಗಮನಿಸಬೇಕು. ಅವರೆಲ್ಲ ಸದರಿ ಕಂಪೆನಿಯ ಅಂಶತಃ ಮಾಲೀಕರು, ಅಂದರೆ ಅವರಿಗೆ, ಕಾನೂನುರೀತ್ಯಾ ಹಕ್ಕುಗಳಿವೆ, ಅದರಿಂದ ಅದೃಷ್ಟವಿದ್ದರೆ, ಅವರಿಗೆ ಸ್ವಲ್ಪ ಹಣವನ್ನೂ ತರಬಹುದು; ಆದರೆ ಹತೋಟಿಯಿರದ ಕಾರಣದಿಂದಾಗಿ ಆದಾಯವು ತೀರ ಕ್ಷುಲ್ಲಕ ಪ್ರಮಾಣದ್ದು. ನಾನು ೧೮೯೬ ರಲ್ಲಿ ಮೊದಲ ಬಾರಿಗೆ ಅಮೆರಿಕವನ್ನು ಸಂದರ್ಶಿಸಿದಾಗ, ದಿವಾಳಿ ಎದ್ದ ರೈಲೆಗಳ ಸಂಖ್ಯೆಯ ಅಪಾರತೆ ನನ್ನನ್ನು ಮೂಕನನ್ನಾಗಿಸಿತ್ತು; ವಿಚಾರಿಸಿದಾಗ ತಿಳಿದದ್ದು, ಈ ಪರಿಸ್ಥಿತಿಯು ಡೈರೆಕ್ಟರುಗಳ ಅದಕ್ಷತೆಯ ಕಾರಣದಿಂದ ಆಗಿರದೆ ಜಾಣ್ಮೆಯ ಕೊರತೆಯಿಂದಾದುದು ಎಂಬ ಅಂಶ; ಸಾಮಾನ್ಯ ಷೇರುದಾರರು ಹೂಡಿದ್ದ ಹಣವನ್ನು ಡೈರೆಕ್ಟರುಗಳ ಹೆಚ್ಚು ಹಿತಾಸಕ್ತಿಗಳಿದ್ದ ಬೇರೊಂದು ಕಂಪೆನಿಗೆ ಒಂದಲ್ಲ ಒಂದು ವಿಧಾನದಿಂದ ವರ್ಗಾಯಿಸಲಾಗಿತ್ತು ಎಂಬ ವಿಚಾರ. ಇದೊಂದು ಒರಟು ವಿಧಾನ, ಈಗೀಗ ಸಾಮಾನ್ಯವಾಗಿ ಇಂಥದನ್ನು ತುಂಬ ನವಿರಾದ ರೀತಿಯಲ್ಲಿ ನಿಭಾಯಿಸಲಾಗುತ್ತದೆ, ಆದರೆ ತತ್ವವು ಅದೇ. ಯಾವುದೇ ದೊಡ್ಡ ಉದ್ಯಮದಲ್ಲಿ ಅಧಿಕಾರವನ್ನು ಮಾಲೀಕತ್ವಕ್ಕಿಂತ ಕಡಿಮೆ ಪ್ರಮಾಣದಲ್ಲಿ ವಿಕೇಂದ್ರೀಕರಿಸುವುದು ಪರಿಪಾಟ. ಇದರೊಡನೆ ದೊರೆಯುವ ಸವಲತ್ತುಗಳು ಮೇಲು ನೋಟಕ್ಕೆ ರಾಜಕೀಯ ಸ್ವರೂಪದ್ದೆಂದು ತೋರಿದರೂ, ಅನಿರ್ಬಂಧಿತ ಪ್ರಮಾಣದ ಸಂಪತ್ತನ್ನು ದೊರಕಿಸುವ

[೧] ಹಿಂದೆ ಉಕ್ತವಾದ ಪುಸ್ತಕ: ಪು, ೮೬-೭

ಸಂಪನ್ಮೂಲಗಳನ್ನಾಗಿ ಮಾಡಿಕೊಳ್ಳಬಹುದು. ಮುಗ್ಧರಾದ ಹಣಹೂಡಿಕೆದಾರರನ್ನು ನವಿರಾದ ರೀತಿಯಲ್ಲಿಯೂ ಕಾನೂನುರೀತ್ಯವೂ ಕೊಳ್ಳೆ ಕೊಡೆಯಬಹುದು; ಅದಕ್ಕಿರುವ ಏಕೈಕ ಪರಿಮಿತಿಯೆಂದರೆ ತನ್ನ ಉಳಿತಾಯವನ್ನು ಸ್ಟಾಕ್‌ಗಳಲ್ಲಿ ತೊಡಗಿಸುವ ಕಹಿ ಅನುಭವಕ್ಕೆ ಒಳಗಾಗಬಾರದೆಂಬುದು.

ಸರ್ಕಾರವೇ ಒಂದು ಉದ್ಯಮದ ಸ್ಥಾನವನ್ನು ಪಡೆದಾಗ ಪರಿಸ್ಥಿತಿಯು ಇದಕ್ಕಿಂತ ಯಾವುದೇ ರೀತಿಯಲ್ಲಿ ಸತ್ವತಃ ಭಿನ್ನವಾಗುವುದಿಲ್ಲ; ಹಾಗೆ ನೋಡಿದರೆ, ಸಾಮಾನ್ಯ ಷೇರುದಾರನ ಅಸಹಾಯಕತೆಗೆ ಉದ್ಯಮದ ಗಾತ್ರ ಕಾರಣವಾಗುವುದರಿಂದ, ಸರ್ಕಾರದ ಎದುರಲ್ಲಿ ಸಾಮಾನ್ಯ ಷೇರುದಾರರು ಮತ್ತಷ್ಟು ಅಸಹಾಯಕನಾಗುತ್ತಾರೆ. ಯುದ್ಧನೌಕೆಯೊಂದು ಸಾರ್ವಜನಿಕ ಆಸ್ತಿ ತಾನೇ, ಅದರಿಂದ ಅದರ ಮೇಲೆ ನೀವೇನಾದರೂ ಮಾಲೀಕತ್ವದ ಹಕ್ಕನ್ನು ಚಲಾಯಿಸ ಹೋದರೆ, ನಿಮಗೆ ಸೂಕ್ತವಾದ ಜಾಗವನ್ನು ತೋರಿಸಲಾಗುತ್ತದೆ. ನಿಮಗೆ ಒಂದು ಪರಿಹಾರೋಪಾಯವಿದೆ ಎಂಬುದು ನಿಜ: ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ, ನೌಕಾದಳಕ್ಕೆ ಕಡಿಮೆ ಹಣವಿನಿಯೋಗವನ್ನು ಪ್ರತಿಪಾದಿಸುವ ಅಭ್ಯರ್ಥಿಗೆ, ಅಂಥವನು ಯಾರಾದರೂ ಇದ್ದರೆ, ಮತ ಹಾಕಬಹುದು; ಅಥವಾ ಹಡಗನ್ನು ನೋಡ ಹೋದವರೊಂದಿಗೆ ನಾವಿಕರು ಹೆಚ್ಚು ಸೌಜನ್ಯದಿಂದ ನಡೆದುಕೊಳ್ಳಬೇಕೆಂದು ಪತ್ರಿಕೆಗಳಿಗೆ ಬರೆಯಬಹುದು. ಇದಕ್ಕಿಂತ ಹೆಚ್ಚಿದೇನನ್ನೂ ನೀವು ಮಾಡಲಾರಿರಿ.

ಆದರೆ ಯುದ್ಧನೌಕೆಯು ಬಂಡವಾಳಶಾಹಿ ದೇಶಕ್ಕೆ ಸೇರಿದ್ದು, ಅದೇನಾದರೂ ಕಾರ್ಮಿಕರ ದೇಶಕ್ಕೆ ಸೇರಿದ್ದರೆ ಪರಿಸ್ಥಿತಿ ಬೇರೆಯದಾಗಿರುತ್ತಿತ್ತು ಎಂದು ಹೇಳಲಾಗುತ್ತದೆ. ಆದರೆ ಈ ದೃಷ್ಟಿಕೋನವು, ಆರ್ಥಿಕ ಅಧಿಕಾರವು ಈಗ ಒಡೆತನಕ್ಕೆ ಸಂಬಂಧಿಸಿರದ ವಿಷಯವಾಗಿರದೆ ಸರ್ಕಾರಕ್ಕೆ ಸಂಬಂಧಿಸಿದ್ದು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದ್ದನ್ನು ತೋರಿಸುತ್ತದೆ. ಸಂಯುಕ್ತ ಸಂಸ್ಥಾನಗಳ ಉಕ್ಕು ಕಾರ್ಪೋರೇಷನ್ ಅನ್ನು ಅಮೆರಿಕ ಸರ್ಕಾರವು ವಶಕ್ಕೆ ತೆಗೆದುಕೊಂಡಿತು ಎಂದುಕೊಳ್ಳಿ, ಆಗಲೂ ಅದರ ನಿರ್ವಹಣೆಗೆ ಜನ ಬೇಕು; ಅವರು ಅದನ್ನೀಗ ನಿರ್ವಹಿಸುತ್ತಿರುವವರಾಗಿರಬಹುದು ಅಥವಾ ಅವರಿಗಿರುವ ಸಾಮರ್ಥ್ಯ ಹಾಗೂ ಮನೋಭಾವವನ್ನೇ ಹೊಂದಿದ ಬೇರೆಯವರಾಗಬಹುದು. ಷೇರುದಾರರ ಬಗ್ಗೆ ಈಗ ಅವರಿಗಿರುವ ಮನೋದೃಷ್ಟಿಯನ್ನೇ ಆಗ ಪ್ರಜೆಗಳ ಬಗ್ಗೆ ಹೊಂದಿರುತ್ತಾರೆ. ಅವರು ಸರ್ಕಾರಕ್ಕೆ ಅಧೀನರಾಗಿರುತ್ತಾರೆಂಬುದು ನಿಜ, ಆದರೆ ಅದು

ಪ್ರಜಾಸತ್ತಾತ್ಮಕವೂ ಜನಾಭಿಪ್ರಾಯಕ್ಕೆ ಜವಾಬ್ದಾರಿಯುತವೂ ಆಗಿರದ ಪಕ್ಷದಲ್ಲಿ, ಅವರದ್ದು ನೌಕರರು ಹೊಂದಿರುವ ದೃಷ್ಟಿಕೋನವೇ ಆಗುತ್ತದೆ.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಪ್ರಮಾಣಾಧಿಕಾರದ ಫಲವಾಗಿ ಮಾರ್ಕ್ಸಿಸ್ಟ್‌ರು ಕಳೆದ ಶತಮಾನದ ನಲವತ್ತರ ಶತಕದ ಅನೇಕ ಆಲೋಚನಾವಿಧಾನಗಳನ್ನು ಉಳಿಸಿಕೊಂಡು, ಈಗಲೂ ವ್ಯವಹಾರವು ಕೇವಲ ವ್ಯಕ್ತಿ ಬಂಡವಾಳದಾರರಿಗೆ ಸಂಬಂಧಿಸಿರುವ ರೀತಿಯಲ್ಲಿಯೇ ಪರಿಭಾವಿಸುತ್ತಾರೆಯೇ ವಿನಾ, ಒಡೆತನ ಮತ್ತು ಹತೋಟಿಗಳ ಬೇರ್ಪಡಿಸುವಿಕೆಯಿಂದ ಕಲಿಯಬಹುದಾದ ಪಾಟಗಳನ್ನು ಇನ್ನೂ ಕಲಿತೇ ಇಲ್ಲ. ಮುಖ್ಯನಾದವನು ಆರ್ಥಿಕ ಅಧಿಕಾರದ ಮೇಲೆ ಹತೋಟಿಯನ್ನು ಪಡೆದವನೇ ಹೊರತು ನಾಮಮಾತ್ರ ಒಡೆತನದಲ್ಲಿ ಒಂದಂಶವನ್ನು ಹೊಂದಿದವನಲ್ಲ. ಪ್ರಧಾನ ಮಂತ್ರಿ ನಂ. ೧೦, ಡೌನಿಂಗ್ ಸ್ಟ್ರೀಟ್[೧]ನ ಒಡೆತನವನ್ನು ಹೊಂದಿಲ್ಲ, ಬಿಷಪ್‌ರು ತಮ್ಮ ಅರಮನೆಗಳ ಒಡೆತನ ಹೊಂದಿಲ್ಲ; ಆದರೆ ಈ ಕಾರಣದಿಂದ ಮನೆಯ ವಿಷಯದಲ್ಲಿ ಅವರು ಸಾಮಾನ್ಯ ಕಾರ್ಮಿಕನಿಗಿಂತ ಉತ್ತಮ ಸ್ಥಿತಿಯಲ್ಲಿಲ್ಲ ಎಂದು ನಟಿಸುವುದು ಅಸಂಗತವಾಗುತ್ತದೆ. ಪ್ರಜಾಪ್ರಭುತ್ವವಿರದ ಯಾವುದೇ ಬಗೆಯ ಸಮಾಜವಾದದಲ್ಲಿ ಆರ್ಥಿಕ ಅಧಿಕಾರವನ್ನು ಹೊಂದಿರುವವರು, ಯಾವುದರ ಮೇಲೂ 'ಒಡೆತನ'ವನ್ನು ಹೊಂದದೆಯೇ, ಅರಮನೆಯಂತಹ ಅಧಿಕೃತ ನಿವಾಸಗಳನ್ನು ಹೊಂದಿರುತ್ತಾರೆ, ಅತ್ಯುತ್ತಮ ಕಾರ್‌ಗಳನ್ನು ಬಳಸುತ್ತಾರೆ, ರಾಜಕುಮಾರರಿಗೆ ಹೊಂದುವ ಮನರಂಜನಾ ಭತ್ಯೆಯನ್ನು ಪಡೆಯುತ್ತಾರೆ, ಸಾರ್ವಜನಿಕ ಹಣದಿಂದ ಹಾಲಿಡೇ ರಿಸಾರ್ಟ್‌ಗಳಲ್ಲಿ ವಿಶ್ರಾಂತಿ ಪಡೆಯುತ್ತಾರೆ, ಇತ್ಯಾದಿ ಇತ್ಯಾದಿ. ಹೀಗಾಗಿ ಹತೋಟಿಯಿಟ್ಟುಕೊಂಡಿರುವವರ ಬಗ್ಗೆಗಿಂತ ಸಾಮಾನ್ಯ ಕಾರ್ಮಿಕನ ಬಗ್ಗೆ ಅವರೇಕೆ ಹೆಚ್ಚು ಕಾಳಜಿ ಹೊಂದಿರಬೇಕು? ಸಾಮಾನ್ಯ ಕಾರ್ಮಿಕನಿಗೆ ಅವರನ್ನು ಅವರ ಸ್ಥಾನಗಳಿಂದ ಕಿತ್ತು ಬಿಸುಡುವ ಅಧಿಕಾರವನ್ನು ಹೊಂದಿರದಿದ್ದರೆ ಕಾಳಜಿ ಏಕಿರಬೇಕು ಎಂಬುದಕ್ಕೆ ಕಾರಣಗಳೇ ಇಲ್ಲ. ಮೇಲಾಗಿ ಈಗಿನ ದೊಡ್ಡ ಉದ್ಯಮಗಳಲ್ಲಿನ ಸಣ್ಣ ಹೂಡಿಕೆದಾರರು ಅಧೀನವಾಗಿರಬೇಕಾದ ಪರಿಸ್ಥಿತಿಯು ಅಧಿಕಾರಿಗಳಿಗೆ ಪ್ರಜಾಪ್ರಭುತ್ವಕ್ಕಿಂತ, ಆ 'ಪ್ರಜಾಪ್ರಭುತ್ವ'ವು ಬಂಡವಾಳಗಾರರಿಂದಲೇ ಕೂಡಿದ್ದರೂ, ಮಿಗಿಲಾದ ಪ್ರಾಬಲ್ಯ ಹೊಂದುವುದು ಎಷ್ಟು ಸುಲಭ ಎಂಬುದನ್ನು ತೋರಿಸುತ್ತದೆ.

---

[೧] ಇಂಗ್ಲಂಡ್ ಪ್ರಧಾನ ಮಂತ್ರಿಗಳ ಅಧಿಕೃತ ನಿವಾಸ

ಆರ್ಥಿಕ ಉದ್ಯಮಗಳ ಮೇಲಿನ ಸರ್ಕಾರೀ ಒಡೆತನ ಮತ್ತು ಹತೋಟಿಗಳಿಂದ ಸಾಮಾನ್ಯ ನಾಗರಿಕನಿಗೆ ಸ್ವಲ್ಪವಾದರೂ ಪ್ರಯೋಜನವಾಗಬೇಕಾದರೆ ಪ್ರಜಾಪ್ರಭುತ್ವವು ಆವಶ್ಯಕ ಮಾತ್ರವಲ್ಲ, ಅದು ಪರಿಣಾಮಕಾರಿಯಾದುದೂ ಆಗಿರಬೇಕು, ಆದರೆ ಅದನ್ನು ಈಗಿಗಿಂತ ಉತ್ತಮ ಸ್ಥಿತಿಯಲ್ಲಿ ಹೊಂದಬೇಕಾದರೆ ಹೆಚ್ಚು ಕಷ್ಟಕರವಾಗುತ್ತದೆ, ಏಕೆಂದರೆ ಅಧಿಕಾರಿ ವರ್ಗವು, ಜಾಗರೂಕತೆಯಿಂದ ಮೇಲುಸ್ತುವಾರಿ ಮಾಡದಿದ್ದರೆ, ಈಗ ಸರ್ಕಾರ ಹೊಂದಿರುವ ಅಧಿಕಾರ ಹಾಗೂ ಕೈಗಾರಿಕೆ ಮತ್ತು ಹಣಕಾಸುಗಳ ಮೇಲೆ ಹತೋಟಿ ಹೊಂದಿರುವ ಜನರ ಅಧಿಕಾರವೆರಡೂ ಒಂದುಗೂಡಿ, ಸರ್ಕಾರದ ವಿರುದ್ಧ ಹೋರಾಡಲು ಸಂಪನ್ಮೂಲವನ್ನು, ಸಭಾಂಗಣಗಳು, ಪತ್ರಿಕೆಗಳು ಮತ್ತಿತರ ಎಲ್ಲ ಪ್ರಚಾರ ಸಾಧನಗಳ ಒಡೆತನ ಹೊಂದಿರುವ ಸರ್ಕಾರವೇ ನೀಡಬೇಕಾಗುತ್ತದೆ.

ಹೀಗಾಗಿ, ಅಧಿಕಾರದ ಪಳಗಿಸುವಿಕೆಗೆ ಎಲ್ಲ ದೊಡ್ಡ ಉದ್ಯಮಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಸಾರ್ವಜನಿಕ ಒಡೆತನ ಮತ್ತು ಹತೋಟಿಗಳು *ಆವಶ್ಯಕ* ಪರಿಸ್ಥಿತಿಯಾಗುತ್ತದೆ, ಅದಷ್ಟೇ ಸಾಕಾಗದು. ಅದಕ್ಕೆ ಹೆಚ್ಚು ಸುಭದ್ರವಾದ, ಅಧಿಕಾರಶಾಹಿಯ ದೌರ್ಜನ್ಯದಿಂದ ಸಂರಕ್ಷಿತವಾದ, ಯಾವುದೇ ಕಾಲದಲ್ಲಿದ್ದ ಕೇವಲ ರಾಜಕೀಯ ಪ್ರಜಾಪ್ರಭುತ್ವಕ್ಕಿಂತ ಹೆಚ್ಚು ಪ್ರಚಾರ ಸ್ವಾತಂತ್ರ್ಯಕ್ಕೆ ಅವಕಾಶವಿರುವ ಪ್ರಜಾಪ್ರಭುತ್ವವು ಪೂರಕವಾಗಿರಬೇಕು.

ಪ್ರಜಾಪ್ರಭುತ್ವದಿಂದ ದೂರಸರಿದ ಸರ್ಕಾರದ ಸೋಷಿಯಲಿಸಂನ ಅಪಾಯಗಳು ಎಂಥವೆಂಬುದನ್ನು ಸೋವಿಯತ್ ಒಕ್ಕೂಟದಲ್ಲಿನ ಘಟನಾ ಪರಂಪರೆಯು ಚಿತ್ರಿಸುತ್ತವೆ. ರಷ್ಯ ಬಗ್ಗೆ ಧಾರ್ಮಿಕನಿಷ್ಠೆಯನ್ನು ಹೊಂದಿದ ಕೆಲವು ಜನರಿದ್ದಾರೆ; ಆ ದೇಶದಲ್ಲಿನ ಎಲ್ಲವೂ ಸರಿಯಲ್ಲ ಎಂಬ ಬಗೆಗಿನ ಪುರಾವೆಗಳನ್ನು ಪರಿಶೀಲಿಸುವುದೂ ಅವರಿಗೆ ಬೇಕಿಲ್ಲ. ಆದರೆ ಈ ವಿಷಯದಲ್ಲಿ ಮುಕ್ತ ಮನಸ್ಸಿನಿಂದ ಕೂಡಿದ ರಷ್ಯದ ಹಿಂದಿನ ಬೆಂಬಲಿಗರು ನೀಡುವ ಪುರಾವೆಗಳು ಈ ಬಗ್ಗೆ ಹೆಚ್ಚು ಹೆಚ್ಚು ಮನವರಿಕೆ ಮಾಡಿಕೊಡುತ್ತಿವೆ. ಹಿಂದಿನ ಆಧ್ಯಾಯದಲ್ಲಿ ನಾವು ವಿವೇಚಿಸಿದ ಇತಿಹಾಸದ ಪುರಾವೆಗಳು ಮತ್ತು ಮನಃಸ್ಥಿತಿಗೆ ಸಂಬಂಧಿಸಿದ ವಾದಗಳು ಬೇಜವಾಬ್ದಾರಿ ಅಧಿಕಾರವು ಜನಹಿತಕಾರಿಯಾಗಬಲ್ಲದು ಎಂಬ ತೀರ್ಮಾನಕ್ಕೆ ಬರುವುದು ಎಷ್ಟು ಆತುರದ್ದು ಎಂಬುದನ್ನು ತೋರಿಸಿವೆ. ಅಧಿಕಾರಕ್ಕೆ ಸಂಬಂಧಿಸಿದಂತೆ ವಾಸ್ತವವಾಗಿ ಸಂಭವಿಸುವುದೆಲ್ಲವನ್ನೂ ಯೂಜೀನ್ ಲಯೋನ್ಸ್ ಅವರ ಕೆಳಗಿನ ಮಾತುಗಳು ಹಿಡಿದಿಟ್ಟಿವೆ:

"ಮೇಲುತುದಿಯ ನಿರಂಕುಶಪ್ರಭುತ್ವ ಎಂದರೆ ದೇಶದಲ್ಲಿನ ನೂರಾರು ಸಾವಿರಾರು, ಅಷ್ಟೇಕೆ ಲಕ್ಷಾಂತರ, ಸಣ್ಣ ದೊಡ್ಡ ನಿರಂಕುಶರು ದೇಶದಲ್ಲಿನ ಎಲ್ಲ ಬಗೆಯ ಬದುಕು-ಅಭಿವ್ಯಕ್ತಿಗಳನ್ನು, ಕೆಲಸ-ಸಂತೋಷಗಳನ್ನು, ಬಹುಮಾನಗಳು-ಶಿಕ್ಷೆಗಳನ್ನು ಏಕಸ್ವಾಮ್ಯದಲ್ಲಿ ತಂದುಕೊಳ್ಳುವುದನ್ನು ಸೂಚಿಸುತ್ತದೆ. ಕೇಂದ್ರೀಕೃತ ನಿರಂಕುಶಪ್ರಭುತ್ವವು ಅಧಿಕಾರನಿಯೋಗದ ಮಾನವ ಯಂತ್ರದ ಮುಖಾಂತರ ನಡೆಯಬೇಕಾಗುತ್ತದೆ, ಅದೆಂದರೆ ಶ್ರೇಣೀಕೃತ ಪಿರಮಿಡ್ ಮಾದರಿಯ ನೌಕರಶಾಹಿ, ಪ್ರತಿಯೊಂದು ಸ್ತರವೂ ಮೇಲುಸ್ತರಕ್ಕೆ ಅಧೀನವಾಗಿ ಹಾಗೂ ಕೆಳಸ್ತರವನ್ನು ಅಧೀನಗೊಳಿಸಿಕೊಂಡ ವ್ಯವಸ್ಥೆ. ನಿಜವಾದ ಪ್ರಜಾಸತ್ತಾತ್ಮಕ ನಿಯಂತ್ರಕಗಳಿಲ್ಲದಿದ್ದರೆ, ಅಭಿಷಿಕ್ತ ಸಮ್ರಾಟನನ್ನು ಕೂಡ ಒಳಗೊಳ್ಳುವ ಬಿಗಿಯಾದ ಕಾನೂನುಕ್ರಮಗಳಿಲ್ಲದಿದ್ದರೆ, ಅಧಿಕಾರ ಯಂತ್ರವು ದಮನಕಾರಿ ಸಾಧನವಾಗುತ್ತದೆ. ಏಕೈಕ ಉದ್ಯೋಗದಾತ, ಅಂದರೆ ಸರ್ಕಾರ, ಇರುವೆಡೆಯಲ್ಲಿ ದೀನತೆಯೇ ಆರ್ಥಿಕ ಬದುಕಿನ ಮೊದಲ ವಿಧಿಯಾಗುತ್ತದೆ. ಎಲ್ಲಿ ಅದೇ ನೌಕರವರ್ಗವು ರಹಸ್ಯ ಬಂಧನ ಹಾಗೂ ಶಿಕ್ಷೆಗಳು, ನಾಗರಿಕ ಹಕ್ಕು ನಿರಾಕರಣೆ, ನೌಕರಿ ಮತ್ತು ವಜಾ, ಪಡಿತರ ವಿತರಣೆ ಮತ್ತು ನಿವಾಸ ನೀಡಿಕೆಗಳನ್ನು ನಿರ್ಧರಿಸುವ ಕತ್ತಿಯನ್ನು ಝಳಪಿಸುತ್ತದೆಯೋ ಅಲ್ಲಿ ಹೆಡ್ಡರು ಅಥವಾ ಹುತಾತ್ಮರಾಗುವ ವಿಕೃತ ಬಯಕೆಯುಳ್ಳವರು ಮಾತ್ರ ಅವರಿಗೆ ಡೊಗ್ಗು ಸಲಾಮು ಹೊಡೆಯುತ್ತಾರೆ."[೧]

ಒಂದೇ ಸಂಸ್ಥೆಯಲ್ಲಿನ ಅಧಿಕಾರಕೇಂದ್ರೀಕರಣವು – ಅದೇ ಸರ್ಕಾರ – ಅತಿರೇಕ ನಿರಂಕುಶಪ್ರಭುತ್ವದ ಕೆಡುಕುಗಳನ್ನು ಉಂಟುಮಾಡಬಾರದಿದ್ದರೆ, ಆ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಅಧಿಕಾರವನ್ನು ಆದಷ್ಟೂ ವಿಕೇಂದ್ರೀಕರಣಗೊಳಿಸಬೇಕಾದದ್ದು ಹಾಗೂ ಅಧೀನ ಗುಂಪುಗಳು ಹೆಚ್ಚಿನ ಸ್ವಾಯತ್ತತೆಯನ್ನು ಹೊಂದಿರಬೇಕಾದದ್ದು ಆವಶ್ಯಕ. ಪ್ರಜಾಪ್ರಭುತ್ವ, ಅಧಿಕಾರ ವಿಕೇಂದ್ರೀಕರಣ, ಕಾನೂನುಬಾಹಿರ ಶಿಕ್ಷೆಯಿಂದ ರಕ್ಷಣೆ, ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳ ಕೂಡಿಕೆಗಳಿಲ್ಲದಿದ್ದರೆ ಪ್ರಭುತ್ವವು ಹೊಸ ಬಗೆಯ ಭೀಕರ ದೌರ್ಜನ್ಯಸಾಧನವಾಗುತ್ತದೆ. ರಷ್ಯದಲ್ಲಿ, ಸಾಮೂಹಿಕ ಕೃಷಿಕ್ಷೇತ್ರದಲ್ಲಿ ರೈತನೊಬ್ಬನು ತಾನೇ ಬೆಳೆದ ದವಸದಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಂಡರೆ ಮರಣ ದಂಡನೆಗೊಳಗಾಗಬಹುದು. ಈ ಕಾನೂನನ್ನು ಜಾರಿಗೊಳಿಸಿದ್ದು, ಬರಗಾಲ ಬಂದರೂ ಸರ್ಕಾರವು ಅದರ ನಿವಾರಣೆಗೆ

---

೧ *'ಅಸೈನ್‌ಮೆಂಟ್ ಇನ್ ಯುಟೋಪಿಯ',* ಪು.೧೯೫

ಉದ್ದೇಶಪೂರ್ವಕವಾಗಿ ಕ್ರಮ ಕೈಗೊಳ್ಳದೆ ಲಕ್ಷಾಂತರ ಮಂದಿ ರೈತರು ಹಸಿವು ಮತ್ತು ರೋಗಗಳಿಂದಾಗಿ ಸಾಯುವ ಸ್ಥಿತಿಯಲ್ಲಿದ್ದಾಗ.[೧]

೩

ಈಗ ನಾನು ಬರುವುದು ಅಧಿಕಾರ ಪಳಗಿಸುವಿಕೆಗೆ ಬೇಕಾದ ಪ್ರಚಾರ ಪರಿಸ್ಥಿತಿಗಳ ಬಗೆಗಿನ ಚರ್ಚೆಗೆ. ಕುಂದುಕೊರತೆಗಳ ಪ್ರಚಾರಕ್ಕೆ ಸ್ವಾತಂತ್ರ್ಯವಿರಬೇಕಾದುದು ಸುಸ್ಪಷ್ಟ; ಕಾನೂನುಭಂಗಕ್ಕೆ ಪ್ರೇರಣೆ ನೀಡುವಂತಹುದಾಗಿರದಿದ್ದರೆ ಪ್ರತಿಭಟನೆಗೆ ಅವಕಾಶವಿರಬೇಕು; ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಅಥವಾ ಮೀರುವ ಅಧಿಕಾರಿಗಳನ್ನು ಕಿತ್ತೊಗೆಯಬೇಕು. ಪ್ರಸ್ತುತ ಸರ್ಕಾರವು ಬೆದರಿಕೆ, ಮತದಾರರ ಸುಳ್ಳು ದಾಖಲೆ ಅಥವಾ ಅಂತಹ ಬೇರಾವುದೇ ಮಾರ್ಗಗಳಿಂದ ತನ್ನ ಸ್ಥಾನವನ್ನು ಸ್ಥಿರಪಡಿಸಿಕೊಳ್ಳುವ ಸ್ಥಿತಿಯಲ್ಲಿರಬಾರದು. ಪ್ರಮುಖ ವ್ಯಕ್ತಿಗಳ ವಿರುದ್ಧದ ಸಕಾರಣ ಟೀಕೆಗೆ ಅಧಿಕೃತ ಅಥವಾ ಅನಧಿಕೃತ ದಂಡನೆಯಿರಬಾರದು. ಇವುಗಳಲ್ಲಿ ಹೆಚ್ಚಿನವನ್ನು ಪ್ರಜಾಪ್ರಭುತ್ವ ದೇಶಗಳಲ್ಲಿನ ಪಕ್ಷರಚಿತ ಸರ್ಕಾರಗಳು ನೀಡಿವೆ, ಇದರಿಂದಾಗಿ ಅಧಿಕಾರದಲ್ಲಿರುವ ರಾಜಕಾರಣಿಗಳು ದೇಶದ ಸುಮಾರು ಅರ್ಧ ಸಂಖ್ಯೆಯ ಜನಗಳ ಟೀಕೆಗೆ ಗುರಿಯಾಗಬೇಕಾಗುತ್ತದೆ. ಅನ್ಯಥಾ ಕೈಗೊಳ್ಳಬಹುದಾಗಿದ್ದ ಅನೇಕ ಅಪರಾಧಗಳನ್ನು ಮಾಡಲು ಅವರಿಗೆ ಅಸಾಧ್ಯವೆನಿಸುತ್ತದೆ.

ಇವೆಲ್ಲವೂ ಬಂಡವಾಶಾಹಿಯಲ್ಲಿಗಿಂತ ಆರ್ಥಿಕ ಏಕಸ್ವಾಮ್ಯವನ್ನು ಹೊಂದಿದ ಸರ್ಕಾರವಿರುವೆಡೆ ಬಹಳ ಮುಖ್ಯ, ಏಕೆಂದರೆ ಅಲ್ಲಿ ಸರ್ಕಾರದ ಅಧಿಕಾರವು ವ್ಯಾಪಕವಾಗಿ ಹೆಚ್ಚಿರುತ್ತದೆ. ಒಂದು ನಿರ್ದಿಷ್ಟ ನಿದರ್ಶನವನ್ನು ತಗೆದುಕೊಳ್ಳೋಣ: ಅದೆಂದರೆ ಸಾರ್ವಜನಿಕ ಸೇವೆಯಲ್ಲಿರುವ ಮಹಿಳೆಯರು. ಈಗ ಅವರ ಪ್ರಮುಖ ಕೊರತೆಯೆಂದರೆ, ಗಂಡಸರಿಗಿಂತ ಅವರ ವೇತನವು ಕಡಿಮೆಯಿರುವುದು; ತಮ್ಮ ಕೊರತೆಯನ್ನು ಹೇಳಿಕೊಳ್ಳುವ ಸಂವಿಧಾನಾತ್ಮಕ ಅವಕಾಶಗಳು ಅವರಿಗಿವೆ, ಆದರೆ ಹೀಗೆ ಮಾಡಿದರೆಂದು ಅವರಿಗೆ ದಂಡ ವಿಧಿಸುವುದು ಕ್ಷೇಮಕರವಲ್ಲ. ಸಮಾಜವಾದವನ್ನು ಅಳವಡಿಸಿಕೊಂಡಾಕ್ಷಣ ಈ ಅಸಮಾನತೆಯು ನಿಸ್ಸಂದೇಹವಾಗಿ ನಿವಾರಣೆಗೊಳ್ಳುತ್ತದೆ ಎಂದು ನಿರ್ಧರಿಸಲು ಕಾರಣಗಳಿಲ್ಲ, ಆದರೆ ಅಂಥವಕ್ಕೆ ಸ್ವಾತಂತ್ರ್ಯ ನೀಡುವ ಸ್ಪಷ್ಟ ಆದೇಶವಿರದ ಹೊರತು, ಅದಕ್ಕಾಗಿ ಪ್ರತಿಭಟಿಸುವ ಅವಕಾಶ ಮಾತ್ರ ಖಂಡಿತ ಕಣ್ಮರೆಯಾಗುತ್ತದೆ. ಪತ್ರಿಕೆಗಳು

---

[೧] ಅದೇ, ಪು. ೪೯೨

ಮತ್ತು ಮುದ್ರಣಾಲಯಗಳೆಲ್ಲವೂ ಸರ್ಕಾರದ ವಶದಲ್ಲಿರುತ್ತವೆ, ಹಾಗಾಗಿ ಅವು ಸರ್ಕಾರದ ಆದೇಶವಿರುವ ವಿಷಯಗಳನ್ನು ಮಾತ್ರ ಮುದ್ರಿಸುತ್ತವೆ. ತನ್ನ ಧೋರಣೆಗಳ ವಿರುದ್ಧದ ಟೀಕೆಗಳನ್ನು ಸರ್ಕಾರ ಮುದ್ರಿಸುವುದೆಂದು ನಿಸ್ಸಂಶಯವಾಗಿ ನಂಬಬಹುದೇ? ಇಲ್ಲದಿದ್ದರೆ, ಯಾವುದೇ ರಾಜಕೀಯ ಪ್ರತಿಭಟನೆಯು ಮುದ್ರಿತ ರೂಪದಲ್ಲಿರುವುದು ಸಾಧ್ಯವೇ ಆಗುವುದಿಲ್ಲ. ಸಾರ್ವಜನಿಕ ಸಭೆಗಳಿಗೂ ಇಷ್ಟೇ ಕಷ್ಟವಿರುತ್ತದೆ, ಏಕೆಂದರೆ ಸಭಾಂಗಣಗಳೆಲ್ಲ ಸರ್ಕಾರದವು ತಾನೇ? ಹೀಗಾಗಿ, ರಾಜಕೀಯ ಸ್ವಾತಂತ್ರ್ಯವನ್ನು ರಕ್ಷಿಸಲು ನಿಶ್ಚಿತ ಅವಕಾಶಗಳನ್ನೊದಗಿಸದಿದ್ದರೆ, ಕುಂದುಕೊರತೆಗಳ ಅಭಿವ್ಯಕ್ತಿಗೆ ಯಾವುದೇ ವಿಧಾನಗಳಿರುವುದಿಲ್ಲ, ಒಮ್ಮೆ ಚುನಾಯಿತವಾದ ಸರ್ಕಾರವು ಹಿಟ್ಲರ್‌ನಂತೆ ಸರ್ವಶಕ್ತವಾಗಿಬಿಟ್ಟು, ಅವಧಿ ಮುಗಿದಾಗ ತನ್ನ ಮರುಚುನಾವಣೆಗೆ ಸುಲಭವಾಗಿ ಏರ್ಪಾಟು ಮಾಡಿಕೊಳ್ಳಬಹುದು. ಪ್ರಜಾಪ್ರಭುತ್ವವು ಒಂದು ವಿಧಾನವಾಗಿ ಉಳಿಯಬಹುದೇ ಹೊರತು, ವಸ್ತುತಃ ರೋಮನ್ ಸಾಮ್ರಾಜ್ಯದಡಿಯಲ್ಲಿದ್ದ ಜನಪ್ರಿಯ ಸರ್ಕಾರಗಳ ರೀತಿಗಿಂತ ಭಿನ್ನವಾಗಿಯಲ್ಲ.

ಬೇಜವಾಬ್ದಾರಿ ಅಧಿಕಾರವು, ಅದನ್ನು ಸಮಾಜವಾದಿ ಅಥವಾ ಕಮ್ಯುನಿಸ್ಟ್ ಎಂದು ಕರೆಯುವಷ್ಟರಿಂದಲೇ, ಹಿಂದಿನ ಸ್ವೇಚ್ಛಾಧಿಕಾರದ ಕೆಟ್ಟ ಗುಣಗಳಿಂದ ಪವಾಡಸದೃಶವಾಗಿ ಮುಕ್ತಗೊಳ್ಳುತ್ತದೆಂದು ನಿರೀಕ್ಷಿವುದು, ಕೆಟ್ಟ ರಾಜನನ್ನು ಒಳ್ಳೆಯ ರಾಜನು ಓಡಿಸಿಬಿಡುವನೆಂಬಷ್ಟೇ ಬಾಲಿಶ ತಿಳಿವಳಿಕೆ. ಒಬ್ಬ ರಾಜನನ್ನು ನಂಬುವುದು, ಅವನು 'ಒಳ್ಳೆಯವ'ನೆಂಬ ಕಾರಣಕ್ಕಾಗಿ ಆಗಬಾರದು, ಅವನು 'ಕೆಟ್ಟವ'ನಾಗುವುದರಿಂದ ಅವನಿಗೇ ಕೆಡುಕು ಎನ್ನುವುದರಿಂದಾಗಬೇಕು. ಹೀಗಾಗಬೇಕಾದರೆ ಅಧಿಕಾರವನ್ನು ನಿರುಪದ್ರವಿಯಾಗಿ ಮಾಡಬೇಕು; ಆದರೆ 'ಒಳ್ಳೆಯ'ವರೆಂದು ಭಾವಿಸಲಾದ ಜನರನ್ನು ಬೇಜವಾಬ್ದಾರಿಗಳನ್ನಾಗಿ ಪರಿವರ್ತಿಸುವುದರಿಂದ ಅಧಿಕಾರವನ್ನು ನಿರುಪದ್ರವಕಾರಿಯಾಗಿ ಮಾಡಲು ಸಾಧ್ಯವಿಲ್ಲ.

ಸರ್ಕಾರದ ಸಂಸ್ಥೆಯಾದ ಬಿಬಿಸಿಯು ಪ್ರಚಾರಸ್ವಾತಂತ್ರ್ಯ ಮತ್ತು ಸರ್ಕಾರಿ ಸ್ವಾಮ್ಯಗಳನ್ನು ಒಗ್ಗೂಡಿಸಿ ಏನನ್ನು ಸಾಧಿಸಬಹುದೆಂಬುದಕ್ಕೆ ಒಳ್ಳೆಯ ಉದಾಹರಣೆ. ಆದರೆ ಸಾರ್ವತ್ರಿಕ ಮುಷ್ಕರದಂತಹ ಸಂದರ್ಭಗಳಲ್ಲಿ ಅದು ನಿಷ್ಪಕ್ಷಪಾತವಾಗಿರುವುದಿಲ್ಲ ಎಂಬುದನ್ನು ಮಾತ್ರ ಒಪ್ಪಿಕೊಳ್ಳಬೇಕು; ಆದರೆ ಸಾಮಾನ್ಯ ಪರಿಸ್ಥಿತಿಗಳಲ್ಲಿ ಅದು ವಿವಿಧ ದೃಷ್ಟಿಕೋನಗಳನ್ನು ಬಿಂಬಿಸುತ್ತದೆ, ಅದೂ ಸರಿಸುಮಾರು ಅವುಗಳ ಪ್ರಮಾಣಕ್ಕನುಗುಣವಾಗಿ. ಸಮಾಜವಾದಿ ದೇಶಗಳಲ್ಲಿಯೂ, ಸಭೆಗಳಿಗೆ ಸಭಾಂಗಣಗಳನ್ನು ದೊರಕಿಸುವ ಹಾಗೂ ವಿವಾದಾತ್ಮಕ ಸಾಹಿತ್ಯದ

ಮುದ್ರಣಕ್ಕೆ ಸೌಲಭ್ಯ ಒದಗಿಸುವ ವಿಷಯಗಳಲ್ಲಿ, ಅಂತಹುದೇ ನಿಷ್ಪಕ್ಷಪಾತ ವ್ಯವಸ್ಥೆಗಳನ್ನು ನಿರ್ಮಿಸಬೇಕು. ವಿವಿಧ ದೃಷ್ಟಿಕೋನಗಳುಳ್ಳ ಅನೇಕ ಪತ್ರಿಕೆಗಳನ್ನು ಪ್ರಕಟಿಸುವುದರ ಬದಲು, ವಿವಿಧ ಪಕ್ಷಗಳ ದೃಷ್ಟಿಕೋನಗಳ ಪ್ರಕಟಣೆಗೆ ಬೇರೆ ಬೇರೆ ಪುಟಗಳನ್ನು ಮೀಸಲಿರಿಸುವ ಒಂದೇ ಪತ್ರಿಕೆಯಿರುವುದು ಅಪೇಕ್ಷಣೀಯವೆಂದು ತೋರಬಹುದು. ಇದರಿಂದ ಓದುಗರು ಎಲ್ಲ ಅಭಿಪ್ರಾಯಗಳನ್ನು ತಿಳಿಯುವ ಅವಕಾಶವಿರುತ್ತದೆ, ಮತ್ತು ತಾವು ಒಪ್ಪದ ಅಭಿಪ್ರಾಯಗಳನ್ನು ಪ್ರಕಟಿಸುವ ಪತ್ರಿಕೆಗಳನ್ನು ನೋಡದಿರುವವರಿಗಿಂತ ಕಡಿಮೆ ಏಕಪಕ್ಷೀಯತೆಯನ್ನು ಹೊಂದುವಂತಾಗುತ್ತದೆ.

ಸಮರೂಪತೆಯು ಅನವಶ್ಯಕವಾಗಿರುವ, ಅಷ್ಟೇಕೆ ಅಪೇಕ್ಷಣಿಯವೂ ಆಗಿರದ ಕಲೆ ಮತ್ತು ವಿಜ್ಞಾನಗಳಂತಹ ಮತ್ತು (ಸಾರ್ವಜನಿಕ ಶಾಂತಿ ಅವಕಾಶ ನೀಡುವಷ್ಟು ಪ್ರಮಾಣದಲ್ಲಿ) ಪಕ್ಷ ರಾಜಕೀಯಗಳಂತಹ ಕೆಲವು ವಲಯಗಳಿವೆ. ಇವು ಸ್ಪರ್ಧೆ ನಡೆಯಬೇಕಾದ ನ್ಯಾಯಯುತ ಕ್ಷೇತ್ರಗಳು, ಇಂತಹ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳ ಬಗ್ಗೆ ಕೋಪ ತಾಳದೆ ಸಹಿಷ್ಣುತೆಯಿಂದಿರುವ ಮನೋಭಾವವು ಸಾರ್ಜನಿಕರಿಗಿರಬೇಕಾದುದು ಮುಖ್ಯ. ಪ್ರಜಾಪ್ರಭುತ್ವವು ಯಶಸ್ವಿಯಾಗಲು ಮತ್ತು ಸ್ಥಿರವಾಗಿರಲು ಗಾಢದ್ವೇಷ ಅಥವಾ ಹಿಂಸೆಯ ಅತಿಪ್ರೀತಿ ಎರಡೂ ಇಲ್ಲದ ಸಹಿಷ್ಣು ಮನೋಭಾವವಿರಬೇಕು. ಇದು ನಮ್ಮನ್ನು ಅಧಿಕಾರ ಪಳಗಿಸುವಿಕೆಗೆ ಆವಶ್ಯಕವಾದ ಮಾನಸಿಕ ಪರಿಸ್ಥಿತಿಗಳ ಚರ್ಚೆಯತ್ತ ಕೊಂಡೊಯ್ಯುತ್ತದೆ.

೪

ಅಧಿಕಾರ ಪಳಗಿಸುವಿಕೆಗೆ ಬೇಕಾದ ಮಾನಸಿಕ ಪರಿಸ್ಥಿತಿಗಳು ಕೆಲವು ವಿಧಗಳಲ್ಲಿ ಬಹು ಕಷ್ಟಕರವಾದವು. ಅಧಿಕಾರ ಮನೋಭಾವಕ್ಕೆ ಸಂಬಂಧಿಸಿದಂತೆ ಭಯ, ಕ್ರೋಧ ಮತ್ತು ಎಲ್ಲ ಬಗೆಯ ತೀವ್ರ ಸಮೂಹಸನ್ನಿಗಳು ಜನರು ನಾಯಕನನ್ನು ಕುರುಡಾಗಿ ಅನುಸರಿಸುವಂತೆ ಮಾಡುತ್ತವೆ ಎಂಬುದನ್ನು ನೋಡಿದ್ದೆವು, ಆ ನಾಯಕನಾದರೋ ಅವರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ನಿರಂಕುಶನಾಗುತ್ತಾನೆ. ಹೀಗಾಗಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ ಸಮೂಹಸನ್ನಿಯ ಸನ್ನಿವೇಶಗಳನ್ನು ಸೃಷ್ಟಿಸದಿರುವುದೂ, ಜನರು ಈ ಬಗೆಯ ಮನೋಭಾವಕ್ಕೆ ತುತ್ತಾಗದಿರುವಂತೆ ಶಿಕ್ಷಣ ನೀಡುವುದೂ ಮುಖ್ಯ. ಆವೇಶದ ಸಿದ್ಧಾಂತ ಪ್ರತಿಪಾದನೆ ಇರುವೆಡೆಗಳಲ್ಲಿ, ಭಿನ್ನಾಭಿಪ್ರಾಯದ ಸಂದರ್ಭಗಳು ಶಾಂತಿಭಂಗಕ್ಕೆ ಕಾರಣವಾಗಬಹುದು. ಹುಡುಗನೊಬ್ಬನ ಅಭಿಪ್ರಾಯಗಳು

ಯಾವುದಾದರೂ ಬಗೆಯಲ್ಲಿ ವಿಚಿತ್ರವೆನ್ನಿಸಿದರೆ, ಶಾಲಾಬಾಲಕರು ಅವನನ್ನು ಹಿಂಸಿಸಬಹುದು, ಎಷ್ಟೋ ಮಂದಿ ದೊಡ್ಡವರೂ ಶಾಲಾಬಾಲಕರ ಮನೋವಯಸ್ಸನ್ನು ಮೀರಿ ಬೆಳೆದಿರುವುದಿಲ್ಲ. ಸಂದೇಹದಿಂದ ಲೇಪಿತವಾದ ವ್ಯಾಪಕ ಉದಾರ ಭಾವನೆಯು ಸಾಮಾಜಿಕ ಸಹಕಾರವನ್ನು ಸುಲಭಗೊಳಿಸುತ್ತದೆ, ಅದಕ್ಕನುಗುಣವಾಗಿ ಸ್ವಾತಂತ್ರ್ಯವೂ ಹೆಚ್ಚು ಸಾಧ್ಯವಾಗುತ್ತದೆ.

ನಾಝಿಗಳಿಗಿದ್ದಂತಹ ಸಂಪ್ರದಾಯ ಪುನರುಜ್ಜೀವಕ ಮನೋಭಾವವು ಶಕ್ತಿಯ ಮತ್ತು ಮೇಲುನೋಟದ ಸ್ವಾರ್ಥಹೀನತೆಯ ಮೂಲಕ ಜನರಲ್ಲಿ ಮೆಚ್ಚಿಕೆಯನ್ನುಂಟುಮಾಡುತ್ತದೆ. ನೋವು, ಅಷ್ಟೇಕೆ ಸಾವಿನ ಬಗ್ಗೆಯೂ ಅಲಕ್ಷ್ಯವನ್ನು ತಾಳುವಂತೆ ಮಾಡುವ ಸಮೂಹಸನ್ನಿಯು ಇತಿಹಾಸದಲ್ಲಿ ಅಪರೂಪವೇನಲ್ಲ. ಅದು ಇರುವೆಡೆಗಳಲ್ಲಿ ಸ್ವಾತಂತ್ರ್ಯ ಇರಲಾರದು. ಆವೇಶಗಾರರನ್ನು ಬಲಪ್ರಯೋಗದಿಂದ ಮಾತ್ರ ತಡೆಯಬಹುದು, ಮತ್ತು ಹಾಗೆ ತಡೆಯದಿದ್ದರೆ ಅವರೇ ಇತರರ ಮೇಲೆ ಬಲಪ್ರಯೋಗ ಮಾಡುತ್ತಾರೆ. ೧೯೨೦ ರಲ್ಲಿ ನಾನು ಭೇಟಿ ಮಾಡಿದ ಬೋಲ್ಷೆವಿಕ್ ಒಬ್ಬನ ನೆನಪಾಗುತ್ತಿದೆ; ಅವನು ಕೋಣೆಯಲ್ಲಿ ಶತಪಥ ಹಾಕುತ್ತ ಆವೇಶದಿಂದ ಪೂರ್ಣ ಸತ್ಯವನ್ನು ನುಡಿಯುತ್ತಿದ್ದ: "ನಾವು ಅವರನ್ನು ಕೊಂದು ಹಾಕದಿದ್ದರೆ, ಅವರೇ ನಮ್ಮನ್ನು ಕೊಂದುಬಿಡುತ್ತಾರೆ." ಇಂಥ ಮನೋಭಾವವು ಒಂದೆಡೆಯಲ್ಲಿದ್ದರೆ, ಮತ್ತೊಂದೆಡೆಯಲ್ಲಿಯೂ ಅದನ್ನೇ ಬಡಿದೆಬ್ಬಿಸುತ್ತದೆ; ಅದರ ಪರಿಣಾಮವಾಗಿ '*ಕೊನೆಯ ಹನಿ ರಕ್ತವಿರುವ ತನಕ*'ದ ಹೋರಾಟ ಉಂಟಾಗುತ್ತದೆ, ಆಗ ಮಿಕ್ಕೆಲ್ಲವೂ ಗೆಲವಿಗೆ ಅಧೀನವಾಗುತ್ತದೆ. ಈ ಹೋರಾಟದಲ್ಲಿ, ಸೈನಿಕ ಕಾರಣಗಳಿಂದಾಗಿ ಸರ್ಕಾರವು ನಿರ್ದಯಿ ಅಧಿಕಾರವನ್ನು ಬಳಸಿಕೊಳ್ಳುತ್ತದೆ; ಕೊನೆಯಲ್ಲಿ, ಗೆಲವು ಸಿಕ್ಕರೆ, ಮೊದಲು ಶತ್ರುಶೇಷವನ್ನು ಒರೆಸಿಹಾಕಲು ಆ ಅಧಿಕಾರವನ್ನು ಪ್ರಯೋಗಿಸಿ, ಆನಂತರ ತನ್ನ ಬೆಂಬಲಿಗರ ಮೇಲೆಯೇ ನಿರಂಕುಶಾಧಿಕಾರವನ್ನು ಮುಂದುವರೆಸಲು ಬಳಸಿಕೊಳ್ಳುತ್ತದೆ. ಫಲಿತಾಂಶವು ಮಾತ್ರ ಉತ್ಸಾಹಿಗಳು ಯಾವ ಕಾರಣಕ್ಕಾಗಿ ಹೋರಾಡಿದರೋ ಅದಕ್ಕಿಂತ ಬೇರೆಯೇ ಆಗಿರುತ್ತದೆ. ಉತ್ಸಾಹವು ಕೆಲವು ಕಾರ್ಯಗಳನ್ನು ಸಾಧಿಸಬಹುದಾದರೂ, ತಾನು ಬಯಸಿದ ಫಲಿತಾಂಶವನ್ನು ಪಡೆಯುವುದು ಅಸಾಧ್ಯ. ಸಾಮೂಹಿಕ ಉತ್ಸಾಹವನ್ನು ಮೆಚ್ಚುವುದು ಬೇಕಾಬಿಟ್ಟಿತನ ಮತ್ತು ಬೇಜವಾಬ್ದಾರಿತನ, ಏಕೆಂದರೆ ಅದರ ಪರಿಣಾಮವು ಕ್ರೌರ್ಯ, ಯುದ್ಧ, ಸಾವು ಮತ್ತು ಗುಲಾಮತನಗಳು ಮಾತ್ರ.

ದೌರ್ಜನ್ಯದ ಪ್ರಮುಖ ಪ್ರೇರಕವೆಂದರೆ ಯುದ್ಧ, ಅಲ್ಲದೆ ಸಾಧ್ಯವಾದಷ್ಟೂ ಬೇಜವಾಬ್ದಾರಿ ಅಧಿಕಾರವನ್ನು ತಡೆಯುವ ವ್ಯವಸ್ಥೆಯೊಂದನ್ನು ಸ್ಥಾಪಿಸಲು ಅದು ಅಡ್ಡಿ. ಹೀಗಾಗಿ ಯುದ್ಧನಿವಾರಣೆಯು ನಮ್ಮ ಸಮಸ್ಯೆಯ ಒಂದು ಮುಖ್ಯ, ಅಷ್ಟೇಕೆ ಅತ್ಯಂತ ಮುಖ್ಯ ಅಂಶ. ಜಗತ್ತು ಒಮ್ಮೆ ಯುದ್ಧಭಯದಿಂದ ಮುಕ್ತಿ ಪಡೆದರೆ, ಸರ್ಕಾರ ಹಾಗೂ ಆರ್ಥಿಕ ವ್ಯವಸ್ಥೆಗಳು ಯಾವ ರೀತಿಯವಾಗಿದ್ದರೂ, ಆಳುವವರ ಕ್ರೌರ್ಯವನ್ನು ತಡೆಯುವ ವಿಧಾನಗಳು ಕಾಲಕ್ರಮೇಣ ರೂಪುಗೊಳ್ಳುತ್ತವೆ. ಮತ್ತೊಂದೆಡೆ, ಎಲ್ಲ ಯುದ್ಧವೂ, ಅದರಲ್ಲೂ ಆಧುನಿಕ ಯುದ್ಧವು, ಭೀರುಗಳು ತಮ್ಮ ನಾಯಕನಿಗೆ ಹಂಬಲಿಸುವಂತೆ ಮತ್ತು ಸಮಾಜದ ದಿಟ್ಟ ಚೇತನಗಳು ಮೂಲೆಗುಂಪಾಗುವಂತೆ ಮಾಡುವ ಸರ್ವಾಧಿಕಾರವನ್ನು ನಿರ್ಮಿಸುತ್ತದೆ.

ಯುದ್ಧದ ಅಪಾಯವು ಒಂದು ವಿಶಿಷ್ಟ ಬಗೆಯ ಸಾಮೂಹಿಕ ಮನೋಭಾವವನ್ನು ಸೃಷ್ಟಿಸುತ್ತದೆ; ಮತ್ತು ಅಸ್ತಿತ್ವದಲ್ಲಿರುವೆಡೆ ಅದು ಯುದ್ಧದ ಅಪಾಯವನ್ನು ಮತ್ತು ನಿರಂಕುಶತೆಯನ್ನು ಹೆಚ್ಚಿಸುತ್ತದೆ. ಹೀಗಾಗಿ ನಾವು ನೀಡುವ ಶಿಕ್ಷಣವು ಕನಿಷ್ಠ ಸಮೂಹಸನ್ನಿಯ ಸಮಾಜಗಳನ್ನು ನಿರ್ಮಿಸುವಂತೆಯೂ, ಅತ್ಯಂತ ಯಶಸ್ವೀ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳುವಂತೆಯೂ ರೂಪುಗೊಳ್ಳುವ ಬಗ್ಗೆ ನಾವು ಚಿಂತಿಸಬೇಕು.

ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ, ಹೊರನೋಟಕ್ಕೆ ಪರಸ್ಪರ ವಿರುದ್ಧವೆಂಬಂತೆ ಕಾಣಬಹುದಾದ ಎರಡು ಗುಣಗಳು ವ್ಯಾಪಕವಾಗಬೇಕು. ಒಂದೆಡೆ, ಜನರಲ್ಲಿ ಒಂದು ಮಟ್ಟದ ಆತ್ಮಾವಲಂವನೆ ಇರಬೇಕು ಹಾಗೂ ತಮ್ಮ ತೀರ್ಮಾನವನ್ನು ಬೆಂಬಲಿಸುವ ತಕ್ಕಮಟ್ಟಿಗಿನ ಆಸೆಯಿರಬೇಕು; ರಾಜಕೀಯ ಪ್ರಚಾರಗಳು ವಿರುದ್ಧ ದಿಕ್ಕಿನವಾಗಿರಬೇಕು, ಅದರಲ್ಲಿ ಹೆಚ್ಚಿನ ಜನರು ಭಾಗವಹಿಸಬೇಕು. ಮತ್ತೊಂದೆಡೆ, ಜನರು ತಮ್ಮ ಆಸೆಗೆ ವಿರುದ್ಧವಾಗಿದ್ದರೂ ಬಹುಮತದ ನಿರ್ಧಾರಕ್ಕೆ ಮಣಿಯುವ ಮನೋಭಾವ ಹೊಂದಿರಬೇಕು. ಇವೆರಡೂ ಪರಿಸ್ಥಿತಿಗಳೂ ಇಲ್ಲದೇ ಹೋಗಬಹುದು: ಜನರು ತೀರ ವಿನೀತರಾಗಿರಬಹುದು, ಸರ್ವಾಧಿಕಾರಿಯಾಗಿಬಿಡುವ ಮಟ್ಟಕ್ಕೆ ತಮ್ಮ ನಾಯಕನನ್ನು ಬೆಂಬಲಿಸಬಹುದು; ಅಥವಾ ದೇಶವು ಅನಾಯಕತ್ವಕ್ಕೆ ಒಳಗಾಗುವಷ್ಟು ಮಟ್ಟಿಗೆ ಪಕ್ಷಗಳು ಕಪಿಮುಷ್ಟಿಯವಾಗಿರಬಹುದು.

ಈ ವಿಷಯದಲ್ಲಿ ಶಿಕ್ಷಣವು ಹೇಗೆ ಸಹಕಾರಿಯಾಗುತ್ತದೆಂಬುದನ್ನು ಎರಡು ಮಗ್ಗುಲುಗಳಲ್ಲಿ ಪರಿಶೀಲಿಸಬಹುದು: ಒಂದು, ವ್ಯಕ್ತಿತ್ವ ಮತ್ತು

ಭಾವನೆಗಳ ರೂಪಣೆ; ಎರಡು, ತರಬೇತಿ. ಮೊದಲನೆಯದರಿಂದ ನಮ್ಮ ಚರ್ಚೆಯನ್ನು ಆರಂಭಿಸೋಣ.

ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಜನರು ದ್ವೇಷ ಮತ್ತು ವಿನಾಶಕಾರಕತೆಗಳಿಂದ ಆದಷ್ಟೂ ದೂರವಿರಬೇಕು, ಹಾಗೆಯೇ ಭಯ ಮತ್ತು ಗುಲಾಮ ಮನೋಭಾವದಿಂದಲೂ. ಈ ಭಾವನೆಗಳು ರಾಜಕೀಯ ಅಥವಾ ಆರ್ಥಿಕ ಪರಿಸ್ಥಿತಿಗಳಿಂದ ಉಂಟಾಗಬಹುದು, ಆದರೆ ನನ್ನ ಗಮನವಿರುವುದು ಅವುಗಳಿಗೆ ತುತ್ತಾಗದಂತೆ ಜನರನ್ನು ದೂರವಿರಿಸುವುದರಲ್ಲಿ ಶಿಕ್ಷಣವು ಯಾವ ಪಾತ್ರವನ್ನು ವಹಿಸಬಲ್ಲುದು ಎಂಬ ಬಗ್ಗೆ.

ಕೆಲವು ತಂದೆತಾಯಿಯರೂ ಶಾಲೆಗಳೂ ಮೊದಲಿಗೇ ಮಕ್ಕಳನ್ನು ಪೂರ್ಣ ವಿಧೇಯರಾಗಿಸುವ ದಿಸೆಯಲ್ಲಿ ಪ್ರಯತ್ನಶೀಲರಾಗುತ್ತಾರೆ, ಆದರೆ ಇದು ಗುಲಾಮನನ್ನು ಇಲ್ಲವೇ ಬಂಡುಕೋರನನ್ನು ಸೃಷ್ಟಿಸುವುದು ಖಂಡಿತ; ಆದರೆ ಪ್ರಜಾಪ್ರಭುತ್ವಕ್ಕೆ ಬೇಕಾಗಿರುವುದು ಇವೆರಡೂ ಅಲ್ಲ. ತೀರ ಶಿಸ್ತುಬದ್ಧ ಶಿಕ್ಷಣ ಪರಿಣಾಮಗಳ ಬಗ್ಗೆ ನಾನು ತಳೆದಿರುವ ದೃಷ್ಟಿಯನ್ನು ಯೂರೋಪ್‌ನ ಎಲ್ಲ ಸರ್ವಾಧಿಕಾರಿಗಳೂ ತಳೆದಿದ್ದಾರೆ. ಯುದ್ಧಾನಂತರ, ಹೆಚ್ಚು ಕಡಿಮೆ ಯೂರೋಪ್‌ನ ಎಲ್ಲ ದೇಶಗಳಲ್ಲಿಯೂ ಅನೇಕ ಮುಕ್ತ ಶಾಲೆಗಳು ಅಸ್ತಿತ್ವದಲ್ಲಿದ್ದವು; ಅವುಗಳಲ್ಲಿ ಅತಿ ಶಿಸ್ತೂ ಇರಲಿಲ್ಲ, ಉಪಾಧ್ಯಾಯರ ಬಗ್ಗೆ ಅತಿ ಎನಿಸುವ ಗೌರವವನ್ನೂ ತಾಳಬೇಕಾಗಿರಲಿಲ್ಲ; ಆದರೆ ಸೈನಿಕ ನಿರಂಕುಶಪ್ರಭುತ್ವಗಳು ಒಂದೊಂದಾಗಿ, ಸೋವಿಯತ್ ಗಣರಾಜ್ಯದ ಸಮೇತ, ಶಾಲೆಗಳಲ್ಲಿನ ಎಲ್ಲ ಮುಕ್ತತೆಯನ್ನು ನಾಶಗೊಳಿಸಿ, ಹಳೆಯ ಕಾಲದ ಕವಾಯತು ಮತ್ತು ಉಪಾಧ್ಯಾಯರನ್ನು ಡ್ಯೂಸ್‌ನ ಕಿರು ಫ್ಯೂರರ್[೧]ಗಳಂತೆ ಕಾಣುವ ಪರಿಪಾಟಕ್ಕೆ ಮರಳಿವೆ. ಶಾಲೆಗಳಲ್ಲಿನ ಸ್ವಲ್ಪಮಟ್ಟಿಗಿನ ಮುಕ್ತತೆಯು ಪ್ರಜಾಪ್ರಭುತ್ವಕ್ಕೆ ಸೂಕ್ತ ತರಬೇತಿಯನ್ನು ಒದಗಿಸುತ್ತದೆಂಬ ಮತ್ತು ಶಾಲೆಗಳ ನಿರಂಕುಶತೆಯು ದೇಶದ ನಿರಂಕುಶಪ್ರಭುತ್ವಕ್ಕೆ ಸಹಜ ಹಿನ್ನಲೆ ಎಂಬ ಭಾವನೆ ಎಲ್ಲ ಸರ್ವಾಧಿಕಾರಿಗಳಲ್ಲಿರುವಂತೆ ಕಾಣುತ್ತದೆ.

ಪ್ರಜಾಪ್ರಭುತ್ವದಲ್ಲಿ ಯಾರೊಬ್ಬರೂ ಗುಲಾಮರಾಗಿರಬೇಕಾಗಿಯೂ ಇಲ್ಲ, ಬಂಡುಕೋರನಾಗಿರಬೇಕಾಗಿಯೂ ಇಲ್ಲ, ಆದರೆ ಒಬ್ಬ ನಾಗರಿಕನಾಗಿರಬೇಕು, ಅಂದರೆ ಪ್ರತಿ ವ್ಯಕ್ತಿಯು ತಾನೂ ಸ್ವಲ್ಪಮಟ್ಟಿಗೆ

---

[೧] ನಾಜ಼ಿ ಜರ್ಮನಿಯ ಸರ್ವಾಧಿಕಾರಿಯಾಗಿ ಹಿಟ್ಲರ್ ತಾಳಿದ ಬಿರುದು

ಸರ್ಕಾರದ ಮನೋಭಾವವನ್ನು ಹೊಂದಿದ್ದು, ಇತರರೂ ಹಾಗೆಯೇ ಹೊಂದಲು ಅವಕಾಶ ನೀಡುವವನಾಗಿರಬೇಕು. ಪ್ರಜಾಪ್ರಭುತ್ವ ಇಲ್ಲದೆಡೆಯಲ್ಲಿ ಸರ್ಕಾರದ್ದು ಅವಲಂಬಿತರ ಬಗೆಗಿನ ಯಜಮಾನಪ್ರವೃತ್ತಿಯಾಗಿರುತ್ತದೆ; ಅದೇ ಪ್ರಜಾಪ್ರಭುತ್ವವಿರುವೆಡೆಯಲ್ಲಿ ಅಲ್ಲಿರುವುದು ಸಮಾನ ಭಾಗಿತ್ವ, ಅದರಲ್ಲಿ ತನ್ನ ಅಭಿಪ್ರಾಯವನ್ನು ಒಂದು ಹಂತದವರೆಗೆ ಮಾತ್ರ ಸಮರ್ಥಿಸಿಕೊಳ್ಳುವ ಪ್ರವೃತ್ತಿಯಿರುತ್ತದೆ, ಅದಕ್ಕಿಂತ ಹೆಚ್ಚಿನದಲ್ಲ.

ಇದು ಪ್ರಜಾಪ್ರಭುತ್ವವಾದಿಗಳು ಎದುರಿಸುವ ತೊಂದರೆಯ ಮೂಲಕ್ಕೆ ತಂದು ನಿಲ್ಲಿಸುತ್ತದೆ, ಅದೆಂದರೆ 'ತತ್ವ.' ಬಹಳ ಮಂದಿ ತತ್ವ, ಸ್ವಾರ್ಥತ್ಯಾಗ, ಉದ್ದೇಶವೊಂದರ ಕುರಿತು ವೀರನಿಷ್ಠೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ; ಇವುಗಳನ್ನು ಸಂದೇಹದಿಂದ ಪರೀಕ್ಷಿಸಬೇಕು. ಕಿಂಚಿತ್ ಮನೋವಿಶ್ಲೇಷಣೆ ಮಾಡಿದರೆ, ಆಕರ್ಷಕ ಹೆಸರುಗಳನ್ನು ಪಡೆದ ಇವು ಎಷ್ಟೋ ಬೇರೆ ಬೇರೆಯೇ ಆಗಿರುತ್ತವೆ, ಹೆಮ್ಮೆ, ಅಥವಾ ದ್ವೇಷ, ಅಥವಾ ಪ್ರತೀಕಾರ ಮನೋಭಾವ ಮುಂತಾದ ಆದರ್ಶೀಕರಣ, ಸಾಮಾಜೀಕರಣ ಹಾಗೂ ವ್ಯಕ್ತೀಕರಣಗೊಂಡು ಉದಾತ್ತ ಆದರ್ಶಗಳೆನಿಸಿರುತ್ತವೆ. ತನ್ನ ದೇಶಕ್ಕಾಗಿ ಹೋರಾಡಬಯಸುವ, ಅಷ್ಟೇಕೆ ಹಾತೊರೆಯುವ, ವೀರ ದೇಶಪ್ರೇಮಿಗೆ ಕೊಲ್ಲುವುದರಲ್ಲಿ ಒಂದು ಬಗೆಯ ಆನಂದವಿರಬಹುದೆಂಬ ಸಂದೇಹ ಉಂಟಾಗಬಹುದು. ಪ್ರೀತಿಕರುಣೆಗಳಿಂದಾಗಿ ತಮ್ಮ ಬಾಲ್ಯವನ್ನು ಸಂತಸದಿಂದ ಕಳೆದ ಹಾಗೂ ಬೆಳೆದ ಮೇಲೆ ಜಗತ್ತಿನ ಸ್ನೇಹಪರತೆಯನ್ನು ಅನುಭವಿಸಿದ ವ್ಯಕ್ತಿಗಳು ದೇಶಪ್ರೇಮ, ವರ್ಗಸಂಘರ್ಷ ಮುಂತಾದ ದೊಡ್ಡ ಪ್ರಮಾಣದಲ್ಲಿ ಜನರನ್ನು ಕೊಲ್ಲುವ ಕಾರ್ಯದಲ್ಲಿ ಭಾಗಿಯಾಗುವಂತಹ ಆದರ್ಶವನ್ನು ಹೊಂದಲಾರರು. ಬಾಲ್ಯದ ಅಸಂತೋಷವೇ ಕ್ರೂರ ಸ್ವರೂಪದ ಆದರ್ಶಗಳು ಹೆಚ್ಚಾಗಲು ಕಾರಣ, ಹಾಗಾಗಿ ಪ್ರಾಥಮಿಕ ಶಿಕ್ಷಣವು ಅಪೇಕ್ಷಣೀಯ ಭಾವನಾತ್ಮಕ ಸನ್ನಿವೇಶದಲ್ಲಿ ನಡೆದರೆ ಇದು ಕಡಿಮೆಯಾಗುತ್ತದೆಂಬುದು ನನ್ನ ಅನ್ನಿಸಿಕೆ. ಅಂಧಾಭಿಮಾನಮ ಒಂದು ದೋಷ, ಅದು ಸ್ವಲ್ಪಮಟ್ಟಿಗೆ ಭಾವನಾತ್ಮಕವಾದುದಾದರೆ, ಸ್ವಲ್ಪಮಟ್ಟಿಗೆ ಬೌದ್ಧಿಕವಾದುದು; ಅದನ್ನೆದುರಿಸಲು ಬೇಕಾದುದು ಜನರನ್ನು ಮೆದುವಾಗಿಸುವ ಸಂತೋಷ ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಬೌದ್ಧಿಕತೆ.

ಪ್ರಜಾಪ್ರಭುತ್ವವು ಯಶಸ್ವಿಯಾಗಲು ಆವಶ್ಯಕವಾದ ಮಾನಸಿಕ ಹದವು ವಾಸ್ತವ ಬದುಕಿನಲ್ಲಿಯೇ ಅಡಗಿದೆ, ವೈಜ್ಞಾನಿಕ ಮನೋಭಾವವು ಹೇಗೆ ಬೌದ್ಧಿಕ ಬದುಕಿನಲ್ಲಿದೆಯೋ ಹಾಗೆ; ಅದು ಸಂದೇಹ ಮತ್ತು

ಸಿದ್ಧಾಂತನಿಷ್ಠೆಗಳ ನಡುವಣ ತಾಣ. ಸತ್ಯವು ಪೂರ್ತಿ ಕೈಗೆ ನಿಲುಕುವಂಥದೂ ಅಲ್ಲ, ಹಿಡಿತದಿಂದ ಪೂರ್ತಿ ದೂರವಾದುದೂ ಅಲ್ಲ; ಅದನ್ನು ಒಂದು ಹಂತದವರೆಗೆ ಕೈವಶಮಾಡಿಕೊಳ್ಳಬಹುದು, ಅದೂ ಕಷ್ಟಪಟ್ಟು, ಎಂಬುದು ಅದರ ನಿಲವು.

ಆಧುನಿಕ ಯುಗದಲ್ಲಿನ ನಿರಂಕುಶಪ್ರಭುತ್ವವು ಸದಾ ಒಂದು ಸೂತ್ರಕ್ಕೆ ಬದ್ಧವಾದುದು: ಹಿಟ್ಲರ್, ಮುಸೋಲಿನಿ ಅಥವಾ ಸ್ಟಾಲಿನ್‌ರದು. ಎಲ್ಲಿ ನಿರಂಕುಶಪ್ರಭುತ್ವವಿದೆಯೋ ಅಲ್ಲೆಲ್ಲ, ಸ್ವಂತವಾಗಿ ಆಲೋಚಿಸುವ ಶಕ್ತಿಬರುವ ಮುನ್ನವೇ ಯುವಜನತೆಯ ಮನಸ್ಸುಗಳಲ್ಲಿ ಕೆಲವು ನಂಬಿಕೆಗಳನ್ನು ಬಿತ್ತಲಾಗುತ್ತದೆ, ತಾವು ಕಲಿತ ಪಾಟಗಳ ಮಾಂತ್ರಿಕ ಪ್ರಭಾವದಿಂದ ಮುಂದೆ ಅವರೆಂದೂ ಬಿಡಿಸಕೊಳ್ಳಲಾಗದ ಹಾಗೆ ಅವುಗಳನ್ನು ನಿರಂತರವಾಗಿ ಹಾಗೂ ಆಳವಾಗಿ ಕಲಿಸಲಾಗುತ್ತದೆ. ನಂಬಿಕೆಗಳನ್ನು ಬಿತ್ತುವುದು ಸಕಾರಣವಾಗಿ ವಿವರಿಸಿ ಅಲ್ಲ, ಗಿಳಿಪಾಟ ಮಾಡಿಸಿ, ಸಮೂಹಸನ್ನಿ ಹಾಗೂ ಸಮೂಹ ಸಲಹೆಗಳಿಂದ. ಈ ರೀತಿಯಲ್ಲಿ ಎರಡು ವಿರುದ್ಧ ನಂಬಿಕೆಗಳನ್ನು ಬಿತ್ತಿದರೆ, ಅವು ಚರ್ಚೆ ಮಾಡುವ ಪಕ್ಷಗಳನ್ನಲ್ಲ, ಹೋರಾಡುವ ಎರಡು ಸೈನ್ಯಗಳನ್ನು ಸೃಷ್ಟಿಸುತ್ತವೆ. ಒಂದೊಂದು ವಶೀಕೃತ ಮನಃಪ್ರೇರಣೆಯೂ ತನ್ನ ಪಕ್ಷದ ಗೆಲವಿನಲ್ಲಿಯೇ ಅತ್ಯಂತ ಪವಿತ್ರವಾದುದು ಅಡಕವಾಗಿದೆ, ಎದುರು ಪಕ್ಷವು ಘೋರತನವೆಲ್ಲದರ ಆಗರ ಎಂದು ಭಾವಿಸುತ್ತದೆ. ಅಂತಹ ಅಂಧಾಭಿಮಾನಿ ಪಂಗಡಗಳು ಪಾರ್ಲಿಮೆಂಟ್‌ನಲ್ಲಿ ಸೇರಿ 'ಯಾರಿಗೆ ಬಹುಮತವಿದೆಯೋ ನೋಡೋಣ' ಎಂದು ಹೇಳಲಾರವು; ತನ್ನದು ಮಾತ್ರವೇ ಪವಿತ್ರ ಉದ್ದೇಶದ ಪಕ್ಷ ಎಂಬ ಭಾವನೆ ಇಬ್ಬರಲ್ಲೂ ಇರುವುದರಿಂದ ಅಂಥ ಮಾತು ತೀರ ನೀರಸವೆನ್ನಿಸುತ್ತದೆ. ಸರ್ವಾಧಿಕಾರವನ್ನು ನಿವಾರಿಸಲು ಇಂಥ ಸಿದ್ಧಾಂತಶಾಠ್ಯನ್ನು ದೂರ ಮಾಡಬೇಕು, ಹಾಗೆ ಮಾಡುವ ವಿಧಾನಗಳು ಶಿಕ್ಷಣದ ಅನಿವಾರ್ಯ ಭಾಗವಾಗಬೇಕು.

ನನಗೇನಾದರೂ ಶಿಕ್ಷಣದ ಮೇಲೆ ಹತೋಟಿಯಿದ್ದಿದ್ದರೆ, ಮಕ್ಕಳು ಎಲ್ಲ ಪ್ರಸ್ತುತ ವಿಷಯಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳುಳ್ಳ, ಬಿಬಿಸಿಯಲ್ಲಿ ವಾದ ಮಂಡಿಸುವವರ, ಆವೇಶಪೂರಿತ ವಾದಗಳಿಗೆ ಕಿವಿಯೊಡ್ಡುವಂತೆ ಮಾಡುತ್ತಿದ್ದೆ. ಆನಂತರ ಉಪಾಧ್ಯಾಯರು ಆ ವಾದಗಳನ್ನು ಸಂಕ್ಷಿಪ್ತವಾಗಿ ನಿರೂಪಿಸುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕು, ವಾಚಾಳಿತನವು ಗಟ್ಟಿ ವಿಚಾರಕ್ಕೆ ಸದಾ ವಿರುದ್ಧ ಪ್ರಮಾಣದಲ್ಲಿರುತ್ತದೆ ಎಂಬ ಅಂಶವನ್ನು

ನವಿರಾಗಿ ಸೂಚಿಸಬೇಕು. ವಾಚಾಳಿತನದ ಭರದಲ್ಲಿ ಕೊಚ್ಚಿಹೋಗದಿರುವುದು ಪ್ರಜಾಪ್ರಭುತ್ವದಲ್ಲಿನ ನಾಗರಿಕರ ಒಂದು ಅತ್ಯಂತ ಪ್ರಮುಖವಾದ ಗುಣ.

ಆಧುನಿಕ ಪ್ರಚಾರಕರು ಜನರಲ್ಲಿ ಅವೈಚಾರಿಕ ನಂಬಿಕೆಗಳನ್ನು ಬಿತ್ತುವ ತಂತ್ರವನ್ನು ಜಾಹೀರಾತುದಾರರಿಂದ ಕಲಿತಿದ್ದಾರೆ. ಶಿಕ್ಷಣವು ಜನರ ಸಹಜ ಭೋಳೆತನ ಹಾಗೂ ಸಹಜ ಅಪನಂಬಿಕೆಗಳು ಪರಸ್ಪರ ಪ್ರತಿಕ್ರಿಯಿಸುವ ರೀತಿಯಲ್ಲಿ ರೂಪಿತವಾಗಬೇಕು: ಅಂದರೆ ಆವೇಶಪೂರಿತವಾಗಿ ಹೇಳಿದ್ದನ್ನು ವಿಚಾರವಿಲ್ಲದೆ ನಂಬುವ ಪ್ರವೃತ್ತಿ ಹಾಗೂ ತುಂಬ ವೈಚಾರಿಕತೆಯಿಂದ ಕೂಡಿದ್ದರೂ ಆವೇಶವಿಲ್ಲದ ಮಾತನ್ನು ನಂಬದಿರುವುದು. ಶಿಶುವಿಹಾರಗಳಲ್ಲಿ ಮಕ್ಕಳ ಮುಂದೆ ಎರಡು ಬಗೆಯ ಸಿಹಿತಿಂಡಿಗಳನ್ನು ಇರಿಸಿ ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿರೆಂದು ಹೇಳುವ ಮೂಲಕ ನಾನಿದನ್ನು ಆರಂಭಿಸುತ್ತಿದ್ದೆ: ಒಂದು, ಅದನ್ನು ತಯಾರಿಸಲು ಹಾಕಿರುವ ಪದಾರ್ಥಗಳ ಬಗ್ಗೆ ನಿರ್ಭಾವುಕ ಹೇಳಿಕೆಯಿರುವ ಒಳ್ಳೆಯ ಸಿಹಿತಿಂಡಿ; ಮತ್ತೊಂದು, ಅತ್ಯುತ್ತಮ ಜಾಹೀರಾತುದಾರರಿಂದ ಪ್ರಶಂಸಿಸಲಾದ ಕೆಟ್ಟ ಸಿಹಿತಿಂಡಿ. ಆಮೇಲೆ ಪ್ರವಾಸ ಹೋಗಲು ಎರಡು ಸ್ಥಳಗಳನ್ನು ಸೂಚಿಸಿ ಒಂದನ್ನು ಆಯಲು ಹೇಳುತ್ತಿದ್ದೆ: ಭೂಪಟಸಮೇತ ಮಾರ್ಗವನ್ನು ವಿವರಿಸಿದ ಒಂದು ಒಳ್ಳೆಯ ಜಾಗ ಹಾಗೂ ಕಣ್ಣಿಗೆ ರಾಚುವ ಪೋಸ್ಟರ್‌ಗಳು ಸೂಚಿಸುವ ಮತ್ತೊಂದು ಜಾಗ.

ಇತಿಹಾಸವನ್ನು ಇದೇ ಮನೋವೃತ್ತಿಯಿಂದಲೇ ಬೋಧಿಸಬೇಕು. ಬಹಳ ವಿವೇಕಯುತವಾಗಿರುವಂತೆ ಕಾಣುವ ಮಾತುಗಳಿಂದ, ಆದರೆ ಇವತ್ತು ಯಾರೂ ಒಪ್ಪಿಕೊಳ್ಳದ, ವಿಷಯಗಳನ್ನು ಅನೇಕ ಮಂದಿ ವಾಗ್ಮಿಗಳೂ ಲೇಖಕರೂ ಹಿಂದೆ ಸಮರ್ಥಿಸಿದ್ದಾರೆ: ಮಾಟದ ಸತ್ಯಾಸತ್ಯತೆ, ಗುಲಾಮಪದ್ಧತಿಯ ಉಪಯುಕ್ತತೆ ಮುಂತಾದವು. ಆ ಪ್ರಖ್ಯಾತ ವಾಗ್ಮಿಗಳ ಮಾತನ್ನು ವಿದ್ಯಾರ್ಥಿಗಳಿಗೆ ಕೇಳಿಸಿ, ಅವರ ಭಾಷೆಯ ಆಲಂಕಾರಿಕತೆ ಮತ್ತು ವಾದದ ಪೊಳ್ಳುತನಗಳ ಅರಿವನ್ನುಂಟುಮಾಡುತ್ತಿದ್ದೆ. ಕ್ರಮೇಣ ಇಂದಿನ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ತಮ್ಮ ಇತಿಹಾಸವನ್ನು ಮೆಲುಕು ಹಾಕುವ ಬಗೆಯಲ್ಲಿ, ಅವರ ಮುಂದೆ ಸ್ಪೈನ್ ಬಗ್ಗೆ (ಅಥವಾ ಆಗ ಯಾವುದು ತುಂಬ ವಿವಾದಾಸ್ಪದವೋ ಅದರ ಬಗ್ಗೆ) ಬರೆದ ಮಾತುಗಳನ್ನು ಓದುತ್ತಿದ್ದೆ, ಮೊದಲು 'ಡೈಲಿ ಮೇಲ್'ನಲ್ಲಿ ಬರೆದಿರುವುದು, ನಂತರ 'ಡೈಲಿ ವರ್ಕರ್'ನಲ್ಲಿರುವುದು; ಕೊನೆಗೆ ನಿಜವಾಗಿ ಏನು ನಡೆದಿರಬಹುದೆಂಬುದನ್ನು ಊಹಿಸಲು ಹೇಳುತ್ತಿದ್ದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿನ ನಾಗರಿಕನಿಗೆ ಪತ್ತೆ ಹಚ್ಚುವ, ಪತ್ರಿಕೆಗಳನ್ನು ಓದಿ, ಏನು ನಡೆಯಿತೆಂಬುದನ್ನು ತಿಳಿಯುವ ಕೌಶಲಕ್ಕಿಂತ ಹೆಚ್ಚು ಮುಖ್ಯವಾದುದು ಬೇರಾವುದೂ ಇರಲಾರದು. ಈ

ಉದ್ದೇಶಕ್ಕಾಗಿ, ಮಹಾಯುದ್ಧ ಕಾಲದ ಸಂದಿಗ್ಧ ಸಂದರ್ಭಗಳ ಪತ್ರಿಕೆಗಳ ವರದಿ ಮತ್ತು ಆನಂತರದ ಅಧಿಕೃತ ಇತಿಹಾಸಗಳನ್ನು ಹೋಲಿಸುವುದು ತುಂಬ ಉಪಯುಕ್ತ. ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾದ ಯುದ್ಧೋತ್ಸಾಹದ ಹುಚ್ಚು ನಂಬಲಸಾಧ್ಯವೆಂದು ನಿಮಗನ್ನಿಸಿದರೆ, ಅವೆಲ್ಲವೂ, ಸಮತೋಲನದ ಹಾಗೂ ಎಚ್ಚರಿಕೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳಲು ಸಹಕಾರಿಯಾಗದಿದ್ದರೆ, ಸರ್ಕಾರದ ಪ್ರಚೋದನೆ ಮತ್ತು ರಕ್ತಪಿಪಾಸೆಗಳು ಮಾರನೆಯ ದಿನದ ಹೊತ್ತಿಗೆ ಮತ್ತೆ ಅಂತಹುದೇ ಹುಚ್ಚನ್ನು ಉಂಟುಮಾಡಬಹುದೆಂಬುದನ್ನು ಮನಗಾಣಬೇಕು.

ಆದರೆ ಭಾವನಾತ್ಮಕ ಮನೋಭಾವದ ಬರೀ ಋಣಾತ್ಮಕತೆಯ ಬಗ್ಗೆ ಮಾತ್ರ ಉಪದೇಶ ನೀಡಲು ನಾನು ಬಯಸುವುದಿಲ್ಲ; ಎಲ್ಲ ಗಾಢವಾದ ಭಾವನೆಗಳನ್ನು ವಿನಾಶಕಾರಕ ವಿಶ್ಲೇಷಣೆಗೆ ಒಳಪಡಿಸಬೇಕೆಂದು ಸೂಚಿಸುತ್ತಿಲ್ಲ. ನಾನು ಈ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಿರುವುದು ಸಾಮೂಹಿಕ ಆವೇಶದ ಹಿಂದಿರುವ ಭಾವನೆಗಳ ಬಗ್ಗೆ ಮಾತ್ರ, ಏಕೆಂದರೆ ಯುದ್ಧ ಮತ್ತು ಸರ್ವಾಧಿಕಾರಗಳನ್ನು ಸುಲಭವಾಗಿಸುವುದು ಈ ಸಾಮೂಹಿಕ ಆವೇಶವೇ. ಆದರೆ ವಿವೇಕವು *ಕೇವಲ* ಬೌದ್ಧಿಕವಲ್ಲ: ಬೌದ್ಧಿಕತೆಯು ದಾರಿದೀಪವಾಗಬಹುದು, ದಿಕ್ಸೂಚಿಯಾಗಬಹುದು, ಆದರೆ ಅದು ಕ್ರಿಯಾಶೀಲತೆಗೆ ಆವಶ್ಯಕವಾದ ಚಾಲಕಶಕ್ತಿಯನ್ನು ಬಡಿದೆಬ್ಬಿಸಲಾರದು. ಭಾವನೆಗಳಿಂದ ಮಾತ್ರ ಈ ಚಾಲಕಶಕ್ತಿ ಹೊಮ್ಮಬಹುದು. ಅಪೇಕ್ಷಣೀಯ ಸಾಮಾಜಿಕ ಪರಿಣಾಮಗಳನ್ನುಂಟುಮಾಡಬಲ್ಲ ಭಾವನೆಗಳು ದ್ವೇಷ, ಕ್ರೋಧ ಮತ್ತು ಭಯಗಳಷ್ಟು ಸುಲಭವಾಗಿ ಸ್ಫುರಿಸಲಾರವು. ಅವುಗಳ ಸ್ಫುರಣೆಯು ಬಾಲ್ಯದ ಅನುಭವಗಳನ್ನು ಆಧರಿಸುತ್ತದೆ; ಅಷ್ಟರಮಟ್ಟಿಗೇ ಆರ್ಥಿಕ ಪರಿಸ್ಥಿತಿಗಳನ್ನು ಕೂಡ. ಉತ್ತಮ ಭಾವನೆಗಳನ್ನು ಪೋಷಿಸಲು ಹಾಗೂ ಮಾನವ ಬದುಕಿಗೆ ಮೌಲ್ಯವುಂಟುಮಾಡುವುದು ಯಾವುದು ಎಂಬ ಅರಿವುಂಟಾಗಲು ಸಾಧಾರಣ ಶಿಕ್ಷಣಕ್ರಮದಲ್ಲಿ ಏನನ್ನಾದರೂ ಮಾಡಬಹುದು.

ಇದು ಹಿಂದೆ ಮತಧರ್ಮಗಳ ಒಂದು ಉದ್ದೇಶವಾಗಿತ್ತು. ಚರ್ಚ್‌ಗಳಿಗೆ ಬೇರೆ ಉದ್ದೇಶಗಳೂ ಇದ್ದವು, ಆದರೆ ಅವುಗಳ ಮತಸಿದ್ಧಾಂತಗಳು ತೊಡಕನ್ನುಂಟುಮಾಡಿದವು. ಸಾಂಪ್ರದಾಯಿಕ ಮತಧರ್ಮದ ಅನುಸರಣೆ ಯಾರಿಗೆ ಅಸಾಧ್ಯವೋ ಅಂಥವರಿಗೆ ಬೇರೆ ಮಾರ್ಗಗಳಿವೆ. ಕೆಲವರು ತಮಗೆ ಬೇಕಾದ್ದನ್ನು ಸಂಗೀತದಲ್ಲಿ ಕಂಡುಕೊಳ್ಳಬಹುದು, ಕೆಲವರು ಕಾವ್ಯದಲ್ಲಿ. ಮತ್ತೆ ಕೆಲವರಿಗೆ ಇದನ್ನು ಖಗೋಳವಿಜ್ಞಾನವು ನೀಡಬಹುದು. ನಕ್ಷತ್ರಗಡಣದ ಪ್ರಾಚೀನತೆ ಮತ್ತು

ವೈಶಾಲ್ಯಗಳ ಬಗ್ಗೆ ಚಿಂತಿಸಿದರೆ, ಈ ಕ್ಷುದ್ರ ಗ್ರಹದ ಮೇಲಣ ವಿವಾದಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತವೆ, ಮತ್ತು ಅವುಗಳ ಒಗಚು ಹಾಸ್ಯಾಸ್ಪದವಾಗಿ ಕಾಣುತ್ತದೆ. ಈ ಋಣಾತ್ಮಕ ಭಾವನೆಯಿಂದ ಮುಕ್ತಗೊಂಡಾಗ, ಸಂಗೀತ ಅಥವಾ ಕಾವ್ಯದ ಮೂಲಕ, ಇತಿಹಾಸ ಅಥವಾ ವಿಜ್ಞಾನದ ಮೂಲಕ, ಚೆಲುವು ಅಥವಾ ನೋವಿನ ಮೂಲಕ ನಿಜವಾಗಿ ಬೆಲೆಬಾಳುವ ಸಂಗತಿಯು ಯುದ್ಧರಂಗದಲ್ಲಿಯೋ ರಾಜಕೀಯ ಸಂಘರ್ಷದಲ್ಲಿಯೋ ಬಾಹ್ಯ ಒತ್ತಡಗಳು ಹೇರಿದ ಗುರಿಯೆಡೆಗೆ ಸಾಗುವ ವ್ಯಕ್ತಿಗಳಲ್ಲಿಯೋ ಇರದೆ ಮಾನವ ಬದುಕಿನಲ್ಲಿ ಬಿಡಿಬಿಡಿಯಾಗಿರುತ್ತವೆ ಎಂಬುದನ್ನು ಹೆಚ್ಚು ಸ್ಫುಟವಾಗಿ ಅರಿತುಕೊಳ್ಳುತ್ತೇವೆ. ಸಮುದಾಯದಲ್ಲಿನ ಸಂಘಟಿತ ಬದುಕು ಆವಶ್ಯಕವಾದುದು, ಆದರೆ ಅದು ಒಂದು ವ್ಯವಸ್ಥೆಯಾಗಿ ಮುಖ್ಯವೇ ಹೊರತು ತನಗೆ ತಾನೇ ಬೆಲೆಬಾಳುವಂತಹುದಲ್ಲ. ಮಾನವ ಬದುಕಿನಲ್ಲಿ ಅತ್ಯಮೌಲ್ಯವಾದುದೆಂದರೆ ಎಲ್ಲ ಧಾರ್ಮಿಕ ಗುರುಗಳೂ ಉಪದೇಶಿಸಿರುವುದನ್ನು ಹೋಲುವಂತಹವೇ. ಸುವ್ಯವಸ್ಥಿತ ದೇಶದಲ್ಲಿ ನಂಬಿಕೆಯಿರಿಸಿಕೊಂಡವರು ನಮ್ಮ ಅತುನ್ನತ ಕಾರ್ಯಗಳು ಸಾಮೂಹಿಕವೆಂದು ಪ್ರತಿಪಾದಿಸಿದರೂ, ನಾನು ಹೇಳುವುದು ನಾವೆಲ್ಲ ನಮ್ಮ ಅತ್ಯುನ್ನತಿಯನ್ನು ಬೇರೆ ಬೇರೆ ಮಾರ್ಗಗಳ ಮೂಲಕ ತಲುಪುತ್ತೇವೆ, ಹಾಗೂ ಜನಸಮುದಾಯದ ಭಾವನಾತ್ಮಕ ಏಕತೆಯನ್ನು ಕೆಳಸ್ತರದಲ್ಲಿ ಮಾತ್ರವೇ ಸಾಧಿಸಬಹುದು ಎಂದು.

ಇದೇ ಉದಾರ ಮನೋದೃಷ್ಟಿಗೂ ಸರ್ವಾಧಿಕಾರಿ ದೇಶದ ದೃಷ್ಟಿಗೂ ಇರುವ ಮೂಲಭೂತ ವ್ಯತ್ಯಾಸ, ಮೊದಲನೆಯದು ದೇಶದ ಕಲ್ಯಾಣವು ಆತ್ಯಂತಿಕವಾಗಿ ಎಲ್ಲ ವ್ಯಕ್ತಿಗಳ ಕಲ್ಯಾಣದಲ್ಲಿ ಅಡಕವಾಗಿದೆಯೆಂದು ಪ್ರತಿಪಾದಿಸಿದರೆ, ಎರಡನೆಯದರ ದೃಷ್ಟಿಯಲ್ಲಿ ದೇಶವೇ ಪರಮ ಮತ್ತು ವ್ಯಕ್ತಿಗಳು ಅದರ ಅನನ್ಯ ಭಾಗಗಳು, ವ್ಯಷ್ಟಿ ಕಲ್ಯಾಣವು ಅಮೂರ್ತ ಸಮಷ್ಟಿಗೆ, ಅಂದರೆ ಆಳುವವರ ಹಿತಕ್ಕೆ ಆನುಷಂಗಿಕವಾಗಿರಬೇಕು ಎಂಬುದು. ಪ್ರಾಚೀನ ರೋಮ್‌ನಲ್ಲಿ ಒಂದು ಬಗೆಯ ದೇಶಪೂಜೆಯ ಪರಿಕಲ್ಪನೆಯಿತ್ತು, ಆದರೆ ಕ್ರಿಶ್ಚಿಯನ್ ಮತವು ಸಮ್ರಾಟರ ಜೊತೆ ಹೋರಾಡಿ ಕೊನೆಗೆ ಗೆದ್ದಿತು. ಉದಾರವಾದವು, ವ್ಯಕ್ತಿಪ್ರಾಮುಖ್ಯವನ್ನು ಎತ್ತಿ ಹಿಡಿಯುವುದರ ಮೂಲಕ, ಕ್ರಿಶ್ಚಿಯನ್ ಸಂಪ್ರದಾಯವನ್ನೇ ಮುಂದುವರಿಸುತ್ತಿದೆ; ಅದರ ವಿರೋಧಿಗಳು ಕೆಲವು ಕ್ರಿಶ್ಚಿಯನ್‌ಪೂರ್ವ ಸಿದ್ಧಾಂತಗಳನ್ನು ಪುನರುಜ್ಜೀವಿಸುತ್ತಿದ್ದಾರೆ. ಮೊದಲಿನಿಂದಲೂ, ದೇಶಪೂಜಕರು ಶಿಕ್ಷಣವನ್ನು ಯಶಸ್ಸಿನ ಕೀಲಿಕೈ ಎಂದು ಭಾವಿಸಿದ್ದಾರೆ. ಇದಕ್ಕೆ ನಿದರ್ಶನ, ಶಿಕ್ಷಣವನ್ನು ವಿಸ್ತಾರವಾಗಿ

ಪ್ರಸ್ತಾಪಿಸಿರುವ ಫ್ಲಿಷ್ಟೆಯ *'ಅಡ್ರೆಸ್ ಟು ಜರ್ಮನ್ ನೇಷನ್'* ಎಂಬ ಗ್ರಂಥ. ಫ್ಲಿಷ್ಟೆಯ ಮನೋಗತವೇನು ಎಂಬುದು ಕೆಳಗಿನ ವಾಕ್ಯಗಳಲ್ಲಿ ಬಿಂಬಿತವಾಗಿದೆ:

"ಯಾರಾದರೂ, 'ಸರಿಯಾದುದು ಯಾವುದು ಎಂದು ವಿದ್ಯಾರ್ಥಿಗೆ ತಿಳಿಸಿ ಅದನ್ನು ಅನುಸರಿಸಲು ಬಲವಾಗಿ ಪ್ರತಿಪಾದಿಸುವುದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವುದೇಕೆ; ಅದಕ್ಕನುಗುಣವಾಗಿ ನಡೆದುಕೊಳ್ಳುತ್ತಾನೆಯೇ ಎಂಬುದು ಅವನಿಗೆ ಸೇರಿದ ವಿಷಯ, ಹಾಗೆ ಮಾಡದಿದ್ದರೆ, ಅದು ಅವನ ತಪ್ಪು; ಅವನಿಗೆ ತನ್ನದೇ ಆಲೋಚನೆಯಿದೆ, ಅದನ್ನು ಯಾವ ಶಿಕ್ಷಣವೂ ಕಸಿದುಕೊಳ್ಳಲಾರದು' ಎಂದು ಹೇಳಿದರೆ ಅದಕ್ಕೆ, ನನ್ನ ಕಲ್ಪನೆಯ ಶಿಕ್ಷಣವನ್ನು ಹೆಚ್ಚು ಖಚಿತವಾಗಿ ಲಕ್ಷಣೀಕರಿಸಲು, ನಾನು ನೀಡುವ ಉತ್ತರ: ವಿದ್ಯಾರ್ಥಿಯ ಆಲೋಚನಾಶಕ್ತಿಯನ್ನು ಈ ರೀತಿ ಗುರುತಿಸಿ ಅದನ್ನು ಅವಲಂಬಿಸುವುದು ಇಲ್ಲಿಯವರೆಗೆ ಶಿಕ್ಷಣದಲ್ಲಿದ್ದ ಮೊದಲನೆಯ ದೋಷ ಮತ್ತು ಅದರ ವಿಶಿಷ್ಟ ದೌರ್ಬಲ್ಯ ಮತ್ತು ಟೊಳ್ಳುತನದ ಪ್ರತೀಕ. ಅತ್ಯಂತ ಪ್ರಬಲವಾಗಿ ಕಾರ್ಯಶೀಲವಾದ ನಂತರವೂ ಸಂಕಲ್ಪಶಕ್ತಿಯು ಮುಕ್ತವಾಗಿ ಉಳಿಯಬಹುದು, ಅಂದರೆ ಸಂಕಲ್ಪಶಕ್ತಿಯು ಒಳ್ಳೆಯದು ಕೆಟ್ಟುದರ ನಡುವೆ ಡೋಲಾಯಮಾನದಿಂದ ಕೂಡಿದೆ ಎಂಬುದನ್ನು ಒಪ್ಪಿಕೊಂಡರೆ, ಶಿಕ್ಷಣವು ಸಂಕಲ್ಪಶಕ್ತಿಯನ್ನು ರೂಪಿಸಲು ಸಾಧ್ಯವಿಲ್ಲ ಅಥವಾ ಇಷ್ಟವಿಲ್ಲ ಎಂಬುದನ್ನು ಒಪ್ಪಿಕೊಂಡಂತೆಯೇ; ಏಕೆಂದರೆ ಸಂಕಲ್ಪಶಕ್ತಿಯ ಬೇರಿರುವುದು ಮಾನವನಲ್ಲಿ, ಮಾನವನಲ್ಲಿ ಮಾತ್ರ; ಅದು ಅದನ್ನು ತಾಳಬಲ್ಲದು ಎಂಬುದು ಸಂಪೂರ್ಣ ಅಸಾಧ್ಯ. ಇದಕ್ಕೆ ವ್ಯತಿರಿಕ್ತವಾಗಿ, ಹೊಸ ಶಿಕ್ಷಣವು ತಾನು ವ್ಯವಹರಿಸುವ ವಲಯದಲ್ಲಿ ಸಂಕಲ್ಪಶಕ್ತಿಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವ ಗುರಿಯನ್ನು ಹೊಂದಬೇಕು."

'ಒಳ್ಳೆಯ' ಜನರನ್ನು ನಿರ್ಮಾಣ ಮಾಡುವ ಅವನ ಆಸೆಯು ಅವರು ತಮಗೆ ತಾವೇ 'ಕೆಟ್ಟ'ವರಿಗಿಂತ ಉತ್ತಮರಾಗಿರುವರೆಂಬ ಕಾರಣದಿಂದಲ್ಲ, 'ಅಂತಹವರಿಂದ (ಒಳ್ಳೆಯವರಲ್ಲಿ) ಮಾತ್ರವೇ ಜರ್ಮನ್ ದೇಶ ಉಳಿಯಬಲ್ಲುದು, ಆದರೆ ಕೆಟ್ಟವರ ಮೂಲಕ ಅದು ಅನಿವಾರ್ಯವಾಗಿ ವಿದೇಶಗಳೊಡನೆ ಜೊತೆಗೂಡಬೇಕಾಗುತ್ತದೆ' ಎಂಬುದು.

ಇದೆಲ್ಲವೂ ಉದಾರವಾದೀ ಶಿಕ್ಷಕನು ಸಾಧಿಸಬೇಕೆಂದಿರುವುದಕ್ಕೆ ತದ್ವಿರುದ್ಧವಾದುದು. 'ಸಂಕಲ್ಪಶಕ್ತಿಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವ' ಗುರಿಯಿಂದ ದೂರವಾದ, ವ್ಯಕ್ತಿ ವಿವೇಚನೆಯನ್ನು ಗಟ್ಟಿಗೊಳಿಸುವ ಗುರಿ

ಅವನದು; ಜ್ಞಾನಸಂಪಾದನೆಯ ಮಾರ್ಗದಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ಮನೋಭಾವವನ್ನು ಸಾಧ್ಯವಾದ ಮಟ್ಟಿಗೂ ಅವನು ಬಿತ್ತುತ್ತಾನೆ; ನಂಬಿಕೆಗಳು ತಾತ್ಕಾಲಿಕವಾದವೂ ಆಧಾರಗಳಿಂದ ಪುಷ್ಟಿಗೊಳ್ಳುವವೂ ಆಗುವಂತೆ ಮಾಡಲು ಪ್ರಯತ್ನಿಸುತ್ತಾನೆ; ವಿದ್ಯಾರ್ಥಿಗಳ ಮುಂದೆ ತಾನು ಸರ್ವಜ್ಞನೆಂಬಂತೆ ನಟಿಸುವುದಿಲ್ಲ, ಹಾಗೂ ಯಾವುದೋ ಪರಮ ಗುರಿಯನ್ನು ಸಾಧಿಸಲು ಹೊರಟವನೆಂದು ತೋರಿಸಿಕೊಳ್ಳುತ್ತ ಅಧಿಕಾರಮೋಹಕ್ಕೆ ಶರಣಾಗುವುದಿಲ್ಲ. ಶಿಕ್ಷಕನ ದೊಡ್ಡ ಶತ್ರುವೆಂದರೆ ರಾಜಕಾರಣಿಗಳಿಗಿರುವಂತೆ ಅಧಿಕಾರಮೋಹ; ಶಿಕ್ಷಣ ಕ್ಷೇತ್ರದಲ್ಲಿ ನಂಬಲರ್ಹ ವ್ಯಕ್ತಿಯೆಂದರೆ ತನ್ನ ವಿದ್ಯಾರ್ಥಿಗಳನ್ನು ಅವರಿಗಾಗಿಯೇ ಪ್ರೀತಿಸುವವನು, ಅವರು ಮುಂದೆ ಸೈನಿಕರೋ ಅಥವಾ ಉದ್ದೇಶವೊಂದರ ಪ್ರಚಾರಕರೋ ಆಗಬಹುದೆಂಬ ಕಾರಣಕ್ಕಲ್ಲ. ಫ಼ಿಷ್ಟೆ ಮತ್ತು ಅವನ ಆದರ್ಶವನ್ನು ಹೊತ್ತ ಅನುಯಾಯಿಗಳು ಮಕ್ಕಳನ್ನು ನೋಡಿದಾಗ, 'ನಾನು ಕೈಯಾಡಿಸಬಹುದಾದ ಸರಕು ಇಲ್ಲಿದೆ, ನನ್ನ ಉದ್ದೇಶ ಸಾಧನೆಗೆ ಯಂತ್ರದಂತೆ ದುಡಿಯಬಲ್ಲ ರೀತಿಯಲ್ಲಿ ಇವರನ್ನು ಸಿದ್ಧಪಡಿಸಬಹುದು; ತಕ್ಷಣಕ್ಕೆ ಅವರ ಜೀವನಸಂತೋಷ, ಸ್ವಯಂಪ್ರೇರಣೆ, ಆಟದ ಆಸೆ, ಸಹಜಸ್ಫುರಣೆಯ ಗುರಿಗಾಗಿ ಜೀವಿಸುವ, ಹೊರಗಿನಿಂದ ಹೇರದೆ ಒಳಗಿನಿಂದ ಮೂಡಿದ, ಗುರಿ ಇವುಗಳು ಅಡ್ಡಿಗಳಾಗಬಹುದು; ಆದರೆ, ನನ್ನ ಕೈಕೆಳಗೆ ಕೆಲವು ವರ್ಷಗಳಕಾಲ ಕಲಿತರೆ ಇವೆಲ್ಲ ಸಾಯುತ್ತವೆ; ಕಲ್ಪಕತೆ, ಪ್ರತಿಭೆ, ಕಲೆ ಮತ್ತು ಆಲೋಚನಾಶಕ್ತಿಗಳನ್ನೆಲ್ಲ ವಿಧೇಯತೆಯು ತುಳಿದುಹಾಕುತ್ತದೆ; ಆನಂದದ ಸಾವು ಅಂಧಾಭಿಮಾನವನ್ನು ಹುಟ್ಟಿಸಿರುತ್ತದೆ; ಕೊನೆಯಲ್ಲಿ ಈ ಮಾನವ ವ್ಯಕ್ತಿಗಳು ಗಣಿಯಿಂದ ತೆಗೆದ ಕಲ್ಲು ಬಂಡೆಗಳಂತೆಯೋ ಕಲ್ಲಿದ್ದಲಿನಂತೆಯೋ ಜಡವಾಗಿ ಆಗಿಬಿಡುತ್ತಾರೆ. ನಾನು ಮುನ್ನಡೆಸುವ ಹೋರಾಟದಲ್ಲಿ ಅವರಲ್ಲಿ ಕೆಲವರು ಸಾಯುತ್ತಾರೆ, ಕೆಲವರು ಉಳಿದು ಕೊಳ್ಳುತ್ತಾರೆ; ಸಾಯುವವರು ವೀರರೆನಿಸಿಕೊಳ್ಳುತ್ತಾರೆ, ಬದುಕುಳಿದವರು ನನ್ನ ಗುಲಾಮರಾಗುತ್ತಾರೆ, ಅದೂ ನನ್ನ ಶಾಲೆಗಳು ಆಳವಾಗಿ ಬಿತ್ತಿರುವ ಮಾನಸಿಕ ಗುಲಾಮತನದಿಂದಾಗಿ' ಎಂದು ಆಲೋಚಿಸುತ್ತಾನೆ. ಇವೆಲ್ಲವೂ ಮಕ್ಕಳ ಬಗ್ಗೆ ಸಹಜ ವಾತ್ಸಲ್ಯವುಳ್ಳವರಿಗೆ ಭಯಂಕರವಾಗಿ ಕಾಣುತ್ತದೆ; ಸಾಧ್ಯವಾದಷ್ಟೂ ಮೋಟರ್ ಕಾರಿಗೆ ಸಿಕ್ಕುವುದನ್ನು ತಪ್ಪಿಸಿಕೊಳ್ಳುವುದನ್ನು ನಾವವರಿಗೆ ಕಲಿಸುವಂತೆ, ಅವರು ಅಂಧಾಭಿಮಾನಿಗಳಿಂದ ನಾಶವಾಗುವುದನ್ನು ತಪ್ಪಿಸಬೇಕು; ಈ ಉದ್ದೇಶಕ್ಕಾಗಿ ಅವರಲ್ಲಿ ಸ್ವತಂತ್ರ ಮನೋವೃತ್ತಿಯನ್ನೂ, ಸ್ವಲ್ಪಮಟ್ಟಿಗಿನ ಸಂದೇಹ ಆದರೆ ಸಂಪೂರ್ಣ ವೈಜ್ಞಾನಿಕ, ಆರೋಗ್ಯವಂತ ಮಕ್ಕಳಲ್ಲಿ ಸಹಜವಾಗಿರುವ ಜೀವನಸಂತೋಷವನ್ನು ಉಳಿದುಕೊಳ್ಳುವಂತೆ ನಾವು ಪ್ರಯತ್ನಿಸಬೇಕು.

ಉದಾರವಾದಿ ಶಿಕ್ಷಣದ ಕೆಲಸ ಇದೇ: ಹತೋಟ ಸಾಧಿಸುವುದರ ಹೊರತಾಗಿ ಇತರ ವಿಷಯಗಳ ಮೌಲ್ಯದ ಅರಿವು ಮಾಡಿಕೊಡುವುದು, ಮುಕ್ತ ಸಮಾಜವೊಂದರ ವಿವೇಕಯುತ ನಾಗರಿಕರನ್ನು ರೂಪಿಸುವುದು, ಮತ್ತು ನಾಗರಿಕತನದೊಂದಿಗೆ ವ್ಯಕ್ತಿಯ ಕ್ರಿಯಾಶೀಲತೆಯಲ್ಲಿನ ಸ್ವತಂತ್ರ ಪ್ರವೃತ್ತಿಯನ್ನು ಬೆಸೆಯುವುದು, ಆ ಮೂಲಕ ಅವುಗಳು ಸಾಧ್ಯ ಎಂದು ಈಗಾಗಲೇ ಕೆಲವರು ತೋರಿಸಿರುವಂತೆ ಮಾನವ ಬದುಕಿಗೆ ಕಾಂತಿಯನ್ನು ತರುವಂತೆ ಅವರನ್ನು ಸಜ್ಜುಗೊಳಿಸುವುದು.

–೦–೦–೦–

ಅಧಿಕಾರ ಮೀಮಾಂಸೆ ೩೦೬